ಧಾರವಾಡ ಜಿಲ್ಲೆಯ ಶಾಸನಗಳು ಮತ್ತು ದೇವಾಲಯಗಳು

(ಪ್ರಾಚೀನ, ಮಧ್ಯಕಾಲೀನ)

(ಪಿಎಚ್.ಡಿ. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಾದರಪಡಿಸಿದ ಮಹಾಪ್ರಬಂಧ)

ಸಂಶೋಧಕರು

ಸುರೇಶ ಕರಿಬಸಪ್ಪ ಹಾನಗಲ್ಲ

ಮಾರ್ಗದರ್ಶಕರು

ಡಾ. ಕೆ.ಜಿ. ಭಟ್‌ಸೂರಿ

ಸಹ ಪ್ರಾಧ್ಯಾಪಕರು

ಸಮಾಜ ವಿಜ್ಞಾನಗಳ ನಿಕಾಯ

ಶಾಸನಶಾಸ್ತ್ರ ವಿಭಾಗ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ ೫೮೩ ೨೭೬

೨೦೧೫

ಧಾರವಾಡ ಜಿಲ್ಲೆಯ ಶಾಸನಗಳು ಮತ್ತು ದೇವಾಲಯಗಳು

(ಪ್ರಾಚೀನ, ಮಧ್ಯಕಾಲೀನ)

(ಪಿಎಚ್.ಡಿ. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಾದರಪಡಿಸಿದ ಮಹಾಪ್ರಬಂಧ)

ಸಂಶೋಧಕರು

ಸುರೇಶ ಕರಿಬಸಪ್ಪ ಹಾನಗಲ್ಲ

ಮಾರ್ಗದರ್ಶಕರು

ಡಾ. ಕೆ.ಜಿ. ಭಟ್‌ಸೂರಿ

ಸಹ ಪ್ರಾಧ್ಯಾಪಕರು

ಸಮಾಜ ವಿಜ್ಞಾನಗಳ ನಿಕಾಯ

ಶಾಸನಶಾಸ್ತ್ರ ವಿಭಾಗ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ ೫೮೩ ೨೭೬

೨೦೧೫

628

ಪ್ರಮಾಣ ಪತ್ರ

"ಧಾರವಾಡ ಜಿಲ್ಲೆಯ ಶಾಸನಗಳು ಮತ್ತು ದೇವಾಲಯಗಳು" ಕುರಿತಾದ ಕ್ಷೇತ್ರಕಾರ್ಯಾವಲಂಬಿತ ಪಿಎಚ್.ಡಿ. ಸಂಶೋಧನ ಮಹಾಪ್ರಬಂಧವನ್ನು ಶ್ರೀ **ಸುರೇಶ ಕರಿಬಸಪ್ಪ ಹಾನಗಲ್ಲ** ಇವರು ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ್ದಾರೆ. ಇದು ಇಡಿಯಾಗಿ ಇಲ್ಲವೇ ಬಿಡಿಯಾಗಿ ಈ ಮೊದಲು ಎಲ್ಲಿಯೂ ಪ್ರಕಟಿತವಾಗಿಲ್ಲವೆಂದು ಹಾಗೂ ಯಾವುದೇ ವಿಶ್ವವಿದ್ಯಾಲಯದ ಯಾವುದೇ ಪದವಿಗಾಗಿ ಇವರಿಂದ ಸಲ್ಲಿಸಿಲ್ಲವೆಂದು ಪ್ರಮಾಣೀಕರಿಸಲಾಗಿದೆ.

ಸ್ಥಳ: ವಿದ್ಯಾರಣ್ಯ

ದಿನಾಂಕ: 8-10-2015

ಡಾ. ಕೆ.ಜಿ. ಭಟ್‌ಸೂರಿ
(ಮಾರ್ಗದರ್ಶಕರು)
ಸಹ ಪ್ರಾಧ್ಯಾಪಕರು
ಶಾಸನಶಾಸ್ತ್ರ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ

ಘೋಷಣಾ ಪ್ರಮಾಣ ಪತ್ರ

"ಧಾರವಾಡ ಜಿಲ್ಲೆಯ ಶಾಸನಗಳು ಮತ್ತು ದೇವಾಲಯಗಳು" ಕುರಿತಾದ ಕ್ಷೇತ್ರಕಾರ್ಯಾವಲಂಬಿತ ಪಿಎಚ್.ಡಿ. ಸಂಶೋಧನ ಮಹಾಪ್ರಬಂಧವನ್ನು ನಾನು ಡಾ.ಕೆ.ಜಿ.ಭಟ್‌ಸೂರಿ, ಸಹ ಪ್ರಾಧ್ಯಾಪಕರು ಶಾಸನಶಾಸ್ತ್ರ ವಿಭಾಗ ಕನ್ನಡ ವಿಶ್ವವಿದ್ಯಾಲಯ, ಹಂಪಿ. ಅವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ್ದೇನೆ. ಈ ಮಹಾಪ್ರಬಂಧವು ಇದಕ್ಕೂ ಮೊದಲು ಯಾವುದೇ ಪದವಿಗಾಗಿ ಎಲ್ಲಿಯೂ ಸಾದರಪಡಿಸಿಲ್ಲವೆಂದು ಹಾಗೂ ಈ ಮೊದಲು ಯಾವುದೇ ವಿಶ್ವವಿದ್ಯಾಲಯಕ್ಕೆ ಸಲ್ಲಿಸಲ್ಪಟ್ಟಿಲ್ಲವೆಂದು ಮತ್ತು ಇಡಿಯಾಗಿ ಇಲ್ಲವೇ ಬಿಡಿಯಾಗಿ ಪ್ರಕಟವಾಗಿಲ್ಲವೆಂದು ಪ್ರಮಾಣಿಕರಿಸಿದ್ದೇನೆ.

ಸ್ಥಳ: ವಿದ್ಯಾರಣ್ಯ

ದಿನಾಂಕ : 8/10/15

S. Hanagal

ಸುರೇಶ ಕರಿಬಸಪ್ಪ ಹಾನಗಲ್ಲ
(ಸಂಶೋಧನಾ ವಿದ್ಯಾರ್ಥಿ)
ಶಾಸನಶಾಸ್ತ್ರ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ

೩.೫. ನಿಷಿಧಿಗಲ್ಲುಗಳು

೩.೬. ಗೋಸಾಸಗಲ್ಲುಗಳು

೩.೭. ಇತರೆ ಶಾಸನಗಳು

ಅಧ್ಯಾಯ ನಾಲ್ಕು

ಶಾಸನ ಶಿಲ್ಪಗಳ ವೈವಿಧ್ಯತೆ ೧೮೪-೨೧೦

೪.೧. ಪೀಠಿಕೆ

೪.೨. ದಾನಶಾಸನ ಶಿಲ್ಪಗಳು

೪.೨.೧. ಶೈವ ದಾನಶಾಸನ ಶಿಲ್ಪಗಳು

೪.೨.೨. ವೈಷ್ಣವ ದಾನಶಾಸನ ಶಿಲ್ಪಗಳು

೪.೨.೩. ಜೈನ ದಾನಶಾಸನ ಶಿಲ್ಪಗಳು

೪.೩. ವೀರಗಲ್ಲು ಶಿಲ್ಪಗಳು

೪.೩.೧. ವ್ಯಕ್ತಿ-ವ್ಯಕ್ತಿಗಳ ಹೋರಾಟ ಶಿಲ್ಪಗಳು

೪.೩.೨. ವ್ಯಕ್ತಿ-ಪ್ರಾಣಿಗಳ ಹೋರಾಟ ಶಿಲ್ಪಗಳು

೪.೪. ಮಹಾಸತಿ ಶಿಲ್ಪಗಳು

೪.೫. ಗೋಸಾಸ ಶಿಲ್ಪಗಳು

೪.೬. ನಿಷಿಧಿ ಶಿಲ್ಪಗಳು

ಅಧ್ಯಾಯ ಐದು

ಶಾಸನೋಕ್ತ ದೇವಾಲಯಗಳು ೨೧೧-೨೪೯

೫.೧. ಪೀಠಿಕೆ

೫.೨. ಶೈವ ದೇವಾಲಯಗಳು

೫.೩. ವೈಷ್ಣವ ದೇವಾಲಯಗಳು

೫.೪. ಜೈನ ಬಸದಿಗಳು

೫.೫. ಶಾಕ್ತ ದೇವಾಲಯಗಳು

ಅಧ್ಯಾಯ ಆರು

ಮೂರ್ತಿಶಿಲ್ಪಗಳು ೨೫೦-೩೦೭

೬.೧. ಪೀಠಿಕೆ

೬.೧.೨. ಶಿಲ್ಪಗಳಲ್ಲಿ ಆಸನಗಳು

೬.೧.೩. ಶಿಲ್ಪಗಳಲ್ಲಿ ಆಭರಣಗಳು

೬.೧.೪. ಶಿಲ್ಪಗಳಲ್ಲಿ ಆಯುಧಗಳು

೬.೧.೫. ಲಾಂಛನಗಳು

೬.೨. ಬೌದ್ಧ ಮೂರ್ತಿಶಿಲ್ಪ

೬.೩. ಶೈವ ಶಿಲ್ಪಗಳು

೬.೩.೧. ಶಿವಲಿಂಗಗಳು

೬.೩.೨. ನಂದಿ ಶಿಲ್ಪಗಳು

೬.೩.೩. ಭೈರವ ಶಿಲ್ಪಗಳು

೬.೩.೪. ಕಾರ್ತಿಕೇಯ ಶಿಲ್ಪಗಳು

೬.೩.೫. ವೀರಭದ್ರನ ಶಿಲ್ಪಗಳು

೬.೩.೬. ಗಾಣಪತ್ಯ ಶಿಲ್ಪಗಳು

೬.೪. ಶಾಕ್ತ ಶಿಲ್ಪಗಳು

೬.೪.೧. ಪೀಠಿಕೆ

೬.೪.೨. ಮಹಿಷಾಸುರಮರ್ಧಿನಿ

೬.೪.೩. ಗಜಲಕ್ಷ್ಮಿ

೬.೪.೪. ಸಪ್ತಮಾತೃಕೆಯರು

೬.೪.೫. ಸರಸ್ವತಿ

೬.೫. ವೈಷ್ಣವ ಶಿಲ್ಪಗಳು

೬.೬. ಜೈನ ಶಿಲ್ಪಗಳು

ಅಧ್ಯಾಯ ಏಳು

ಸಮಾರೋಪ ೩೦೮–೩೧೭

ಅನುಬಂಧಗಳು ೩೧೮–೪೨೫

೧. ಗ್ರಂಥಸೂಚಿ

೨. ನಕ್ಷೆಗಳು

೩. ಶಾಸನೋಕ್ತ ಉಲ್ಲೇಖಿತವಾದ ಸ್ಥಳನಾಮಗಳು, ಪಂಡಿತ/ಜೀಯ/ಆಚಾರ್ಯ/ ದೇವ, ಕೆರೆಗಳು, ಮಠಗಳು, ಕೋಟೆಗಳು, ವರ್ತಕ ಸಂಘಗಳ ಪಟ್ಟಿ

೪. ಶಾಸನೋಕ್ತ ದೇವಾಲಯಗಳ ಪಟ್ಟಿ

೫. ಶಾಸನೋಕ್ತ ದೇವಾಲಯಗಳ ತಲನಕ್ಷೆಗಳು

೬. ಅಪ್ರಕಟಿತ ಶಾಸನಗಳು

೭. ಛಾಯಾಚಿತ್ರಗಳು

ಅಧ್ಯಾಯ ಒಂದು

ಅಧ್ಯಯನದ ಉದ್ದೇಶ, ವ್ಯಾಪ್ತಿ, ವಿಧಾನ ಮತ್ತು ಸ್ವರೂಪ

೧.೧. ಪ್ರಸ್ತಾವನೆ

ಭಾರತೀಯ ಸಂಸ್ಕೃತಿಯ ಇತಿಹಾಸವನ್ನು ವಸ್ತುನಿಷ್ಠವಾಗಿ ಪುನರ್‌ರಚಿಸುವಲ್ಲಿ ಕರ್ನಾಟಕದ ಕೊಡುಗೆ ಬಹಳ ಮಹತ್ವದ್ದಾಗಿದೆ. ಕರ್ನಾಟಕವನ್ನು ಕಾವೇರಿಯಿಂದ ಮಾ ಗೋದಾವರಿವರಮಿರ್ದ ನಾಡು[೧] ಎಂದು ಕರೆಯಲಾಗಿದೆ. ಇತಿಹಾಸದ ಕುರುಹುಗಳು ಕರ್ನಾಟಕದಾದ್ಯಂತ ಹರಡಿದ್ದು, ಇವುಗಳು ಹಲವಾರು ಶತಮಾನಗಳಲ್ಲಿ ಮಾನವನು ನಡೆದು ಬಂದ ಸಂಸ್ಕೃತಿಯನ್ನು ಪ್ರತಿಬಿಂಬಿಸುತ್ತವೆ. ಅಂದರೆ ಅವುಗಳ ರಾಜಕೀಯ, ಸಾಮಾಜಿಕ, ಧಾರ್ಮಿಕ, ಸಾಹಿತ್ಯಿಕ ಕ್ಷೇತ್ರದಲ್ಲಿನ ಸಮಗ್ರ ಮಾಹಿತಿಯನ್ನು ನೀಡುತ್ತದೆ. ಈ ನಿಟ್ಟಿನಲ್ಲಿ ಕರ್ನಾಟಕದ ಕೊಡುಗೆ ಅತಿ ಮಹತ್ವದ್ದು. ಪ್ರಸ್ತುತ ಅಧ್ಯಯನವನ್ನು ಧಾರವಾಡ ಜಿಲ್ಲೆಗೆ ಸೀಮಿತ ಮಾಡಿಕೊಂಡು ಶಾಸನಗಳನ್ನು ಮತ್ತು ದೇವಾಲಯಗಳ ಅಧ್ಯಯನವನ್ನು ಮಾಡುವುದಾಗಿದೆ.

ಧಾರವಾಡ ಬಯಲು ಸೀಮೆ ಮತ್ತು ಮಲೆನಾಡು ಪ್ರದೇಶಗಳಿಂದ ಕೂಡಿದೆ. ಹೀಗೆ ಈ ಸೀಮೆಯ ನಡುವೆ ಸಾಗುತ್ತಿದ್ದ ವ್ಯಾಪಾರಿ ಸರಕುಗಳ ಸುಂಕ ಸಂಗ್ರಹಕ್ಕೆ 'ದ್ವಾರ' ದಂತಿದ್ದ ಪ್ರಮುಖ ಪಟ್ಟಣವಾಗಿದ್ದಿತು. ಈ ಎರಡೂ ಸ್ಥಳಗಳ ನಡುವೆ ಇರುವ ಪ್ರದೇಶವೇ 'ದ್ವಾರವಾಡ' ಎನ್ನಲಾಗಿದೆ. ಸಂಸ್ಕೃತ ಭಾಷೆಯ ಹಿನ್ನೆಲೆಯಲ್ಲಿ ಇದಕ್ಕೆ ದ್ವಾರ-ವಾಡ/ವನ ಎಂದು ಹೆಸರು ಬಂದಿತು. ಇದೇ ಮುಂದೆ ದಾರವಾಡ ಎಂದು ಪರಿವರ್ತಿತವಾಗಿರಬೇಕು. 'ಧಾರ' ಎಂಬುದು ಒಂದು ಜನಾಂಗ ವಾಚಿಕ ಪದ 'ವಾಡ' ಎಂಬುದು ಜನರಿರುವ ಸ್ಥಳ ಎಂದೂ, ಮುಂದೆ ಇದೇ 'ದಾರ' ಎಂಬ ಜನಾಂಗದವರು ವಾಸಿಸುತ್ತಿದ್ದ ಸ್ಥಳವೇ ಧಾರವಾಡ ವಾಗಿರುವ ಸಾಧ್ಯ ಇದೆ.

ಧಾರವಾಡದ[೨] ದುರ್ಗಾದೇವಿ ಗುಡಿಯಲ್ಲಿರುವ ೧೨ನೇ ಶತಮಾನದ ಆರನೇ ವಿಕ್ರಮಾದಿತ್ಯನ ತ್ರಿಭುವನಮಲ್ಲನ ಶಾಸನ, ನರೇಂದ್ರದ[೩] ಸೋಮೇಶ್ವರ ದೇವಾಲಯದಲ್ಲಿರುವ ಎರಡು ಶಾಸನದಲ್ಲಿ ಮನಗುಂಡಿ[೪] ಮತ್ತು ಹೊಂಬಳದಲ್ಲಿ[೫] ದೊರೆತ ಶಾಸನದಲ್ಲಿ 'ದಾರವಾಡ' ಎಂಬ ಹೆಸರು ಸ್ಪಷ್ಟವಾಗಿ ಉಲ್ಲೇಖವಾಗಿದೆ. ಜೊತೆಗೆ ಕಟ್ನೂರಿನ[೬] ಶಾಸನದಲ್ಲಿ 'ದಾರವಾಡ ಕಂಪಣ' ಎಂದು ಉಲ್ಲೇಖಿಸಿದೆ. ತದ ನಂತರ ಬ್ರಟೀಷರ ಕಾಲದಲ್ಲಿ 'ಧಾರವಾಡ' ಎಂಬ ಹೆಸರು ಪ್ರಸಿದ್ಧಿಗೆ ಬಂದಿತು. ಕವಿರಾಜಮಾರ್ಗಕಾರ ಹೇಳುವ ತಿರುಳ್‌ಗನ್ನಡದ ನಾಡಿನಲ್ಲಿರುವ ನಗರ ಇದು. ಪ್ರಾಚೀನ ಬೆಳ್ವಲ ೩೦೦, ಪುಲಗೇರಿ ೩೦೦ ವಿಸ್ತಾರವನ್ನು ನೆಲಗೊಂಡಿರುವ ಪ್ರದೇಶ ಇದಾಗಿದೆ. ಇದೊಂದು ಸಾಂಸ್ಕೃತಿಕ ನಗರವೂ ಹೌದು. ಪುರಾತತ್ವ ಅವಿಭಾಜ್ಯ ಅಂಗವಾಗಿರುವ, ಇತಿಹಾಸ ಸಂಶೋಧನೆ ಮತ್ತು ಇತಿಹಾಸ ಗ್ರಂಥ ರಚನೆಗೆ ಭದ್ರವಾದ ಅಡಿಪಾಯವನ್ನು ಒದಗಿಸಿದೆ ಈ ಸೀಮೆ.

ಒಂದು ಪ್ರದೇಶದ ಇತಿಹಾಸವನ್ನು ವಸ್ತುನಿಷ್ಠವಾಗಿ ರಚಿಸುವಾಗ ಶೋಧನೆ, ಅನ್ವೇಷಣೆ, ಸಂಗ್ರಹಣೆ, ವಿಶ್ಲೇಷಣೆ ಮತ್ತು ಪ್ರಕಟಣೆಗಳು ಗ್ರಾಮಗಳಿಂದಲೇ ಆರಂಭವಾಗಬೇಕು, ಆಗ ಆ ಪ್ರಾಂತ್ಯದ ರಾಜಕೀಯ, ಸಾಮಾಜಿಕ, ಧಾರ್ಮಿಕ, ಕಲೆ–ವಾಸ್ತುಶಿಲ್ಪ, ಸಂಪ್ರದಾಯಗಳು ಹೆಚ್ಚಿನ ಪ್ರಾಮುಖ್ಯತೆಯನ್ನು ಪಡೆದುಕೊಳ್ಳುತ್ತವೆ. ಈ ನಾಡಿನಲ್ಲಿ ಅನೇಕ ರಾಜಮನೆತನಗಳು ಆಳಿ ಅಳಿದಿವೆ. ರಾಷ್ಟ್ರದ ರಾಜ್ಯದ ಹೊರತಾಗಿ ಸ್ಥಳೀಯ ಇತಿಹಾಸ ತಿಳಿಯುವುದು ಅವಶ್ಯಕ. ಈ ಹಿನ್ನೆಲೆಯಲ್ಲಿ ಧಾರವಾಡ ಜಿಲ್ಲೆಯನ್ನು ಸೀಮಿತ ಮಾಡಿಕೊಂಡು ಅಲ್ಲಿನ ಪುರಾತತ್ವ ಅವಶೇಷಗಳಾದ ಶಾಸನಗಳು ಮತ್ತು ದೇವಾಲಯಗಳನ್ನು ವಸ್ತುನಿಷ್ಠವಾಗಿ ಅಧ್ಯಯನ ಮಾಡಿದ ಪ್ರಯತ್ನವೇ ಇದಾಗಿದೆ.

೧.೨. ಮೂಲ ಆಕರಗಳು

ಒಂದು ಪ್ರದೇಶದ ಸಂಸ್ಕೃತಿ ಮತ್ತು ಇತಿಹಾಸವನ್ನು ವಸ್ತುನಿಷ್ಠವಾಗಿ ಪುನರ್‌ರಚಿಸುವಲ್ಲಿ ಪುರಾತತ್ವ ಆಕರಗಳು ಮತ್ತು ಪ್ರಕಟಿತ ಕೃತಿಗಳು ಪೂರಕ ಅಂಶಗಳಾಗಿವೆ. ಪ್ರತಿಯೊಂದು ಗ್ರಾಮದಲ್ಲಿ ದೊರೆಯುವ ದೇವಾಲಯಗಳು, ಶಾಸನಗಳು, ಮೂರ್ತಿಶಿಲ್ಪಗಳನ್ನು ಇಲ್ಲಿನ ಅಧ್ಯಯನಕ್ಕೆ ಪೂರಕ ಮಾಹಿತಿಗಳನ್ನಾಗಿ ಬಳಸಿಕೊಳ್ಳಲಾಗಿದೆ.

೧.೨.೧. ಶಾಸನಗಳು

ಶಾಸನಗಳು ಭಾರತೀಯ ಸಂಸ್ಕೃತಿಯ ವಿವಿಧ ಮುಖಗಳನ್ನು ವಸ್ತುನಿಷ್ಠವಾಗಿ ಪರಿಚಯಿಸುವ ದಾಖಲಾತಿಗಳಾಗಿವೆ. ಪ್ರಸ್ತುತ ಧಾರವಾಡ ಜಿಲ್ಲೆಯಲ್ಲಿ ಕನ್ನಡ, ನಾಗರಿ ಲಿಪಿಯ ಶಾಸನಗಳು ಲಭ್ಯವಾಗಿದ್ದು, ಈ ಎಲ್ಲಾ ಶಾಸನಗಳನ್ನು ವಸ್ತುನಿಷ್ಠವಾಗಿ ಬಳಸಿಕೊಂಡು ಇಲ್ಲಿನ ರಾಜಕೀಯ, ಸಾಮಾಜಿಕ, ಆರ್ಥಿಕ ವಿಚಾರಗಳ ಮೇಲೆ ಬೆಳಕನ್ನು ಚೆಲ್ಲಿವೆ.

೧.೨.೨. ಸಾಹಿತ್ಯಿಕ ಕೃತಿಗಳು

ಪ್ರಾಚೀನ ಕೃತಿಗಳು ನಮ್ಮ ಸಂಸ್ಕೃತಿಯ ವಿವಿಧ ಮಗ್ಗಲುಗಳನ್ನು ಮೈಗೂಡಿಸಿಕೊಂಡು ರಚಿತವಾಗಿವೆ. ಪ್ರಸ್ತುತ ಧಾರವಾಡ ಜಿಲ್ಲೆಯ ರಾಜಕೀಯ, ಸಾಮಾಜಿಕ, ಧಾರ್ಮಿಕ, ಒಟ್ಟಾರೆ ಸಂಸ್ಕೃತಿಯನ್ನು ಚರ್ಚಿಸುವಾಗ ಪರೋಕ್ಷವಾಗಿ ಕೌಟಿಲ್ಯನ ಅರ್ಥಶಾಸ್ತ್ರ, ಪಂಪನ ಆದಿಪುರಾಣ, ರನ್ನನ ಅಜಿತಪುರಾಣ, ಚಾವುಂಡರಾಯನ ಚಾವುಂಡರಾಯ ಪುರಾಣ, ಜನ್ನನ ಯಶೋಧರ ಚರಿತ, ಮೂರನೇ ಸೊಮೇಶ್ವರನ ಮಾನಸೊಲ್ಲಾಸ, ಬಸವಣ್ಣನವರ ವಚನಗಳು, ಹಾಗೂ ಸರ್ವಜ್ಞನ ತ್ರಿಪದಿಗಳು ಈ ಪ್ರದೇಶದ ಮೇಲೆ ಬೆಳಕನ್ನು ಚೆಲ್ಲಿವೆ.

೧.೨.೩. ಸ್ಮಾರಕಗಳು

ಒಂದು ನಾಡಿನ ಸಾಂಸ್ಕೃತಿಕ ಕೃತಿಗಳೆಂದರೆ ಸ್ಮಾರಕಗಳು. ಇವುಗಳು ನಾಡಿನ ಅಮೂಲ್ಯ ಸಂಪತ್ತಾಗಿವೆ. ಸಾಹಿತ್ತಿಕ ಕೃತಿಗಳಿಂದ ತಿಳಿಯದೇ ಇರುವ ಮಹತ್ವದ ವಿಷಯಗಳನ್ನು ಸ್ಮಾರಕಗಳು ತಿಳಿಸುತ್ತವೆ. ಈ ದೃಷ್ಟಿಯಿಂದ ನಮ್ಮ ಸಂಸ್ಕೃತಿಯನ್ನು ಪರಿಚಯಿಸುವ ಸ್ಮಾರಕಗಳು ಸಂಸ್ಕೃತಿಯ ಜ್ಞಾನ ನಿಧಿಯಾಗಿವೆ. ಇವುಗಳು ಸಮಕಾಲೀನ ಕಲೆ, ಕಲಾ ಕೌಶಲ್ಯ ಜೊತೆಗೆ ಸಾಮಾಜಿಕ,

ಧಾರ್ಮಿಕ, ಆರ್ಥಿಕ ವ್ಯವಸ್ಥೆ ಮತ್ತು ಸಂಸ್ಕೃತಿಯ ವಿವಿಧ ಮುಖಗಳನ್ನು ಪರಿಚಯಿಸುತ್ತವೆ. ಪ್ರಸ್ತುತ ಈ ಜಿಲ್ಲೆಯಲ್ಲಿ ಶಾಸನ ಉಲ್ಲೇಖಿತ ೯೩ ದೇವಾಲಯಗಳು ಕಂಡು ಬಂದಿವೆ. ಅವುಗಳಲ್ಲಿ ೬೮ ಶೈವ, ೫ ವೈಷ್ಣವ ದೇವಾಲಯಗಳು ಮತ್ತು ೨೨ ಬಸದಿಗಳಿವೆ. ಹಾಗೂ ಮೂರು ಶಾಕ್ತ ದೇವಾಲಯಗಳನ್ನು ಉಲ್ಲೇಖಿಸಲಾಗಿದೆ. ಇವುಗಳನ್ನೆಲ್ಲಾ ಒಂದೆಡೆ ಕಲೆ ಹಾಕಿ ಸಮಕಾಲೀನ ವಾಸ್ತು, ವಿನ್ಯಾಸ, ಶೈಲಿ ಮತ್ತು ಲಕ್ಷಣಗಳನ್ನು ವಿಶ್ಲೇಷಿಸಲಾಗಿದೆ. ಒಟ್ಟಾರೆ ಇವುಗಳೆಲ್ಲವೂ ಧಾರ್ಮಿಕ ವಾಸ್ತು ರಚನೆಯ ಅಧ್ಯಯನಕ್ಕೆ ಮೂಲ ಆಕರಗಳಾಗಿವೆ.

೧.೨.೪. ಶಿಲ್ಪಗಳು

ಶಿಲ್ಪಗಳು ಪ್ರಾಚೀನ ಕಾಲದಿಂದಲೂ ಮನುಷ್ಯನ ಅಭಿವ್ಯಕ್ತಿಯ ಮಾಧ್ಯಮವಾಗಿ ಬೆಳೆದಾಗ್ಯೂ ಕ್ರಮೇಣ ಆಚಾರ-ವಿಚಾರಗಳು, ಧಾರ್ಮಿಕ ಸ್ಥಿತಿ-ಗತಿಗಳು, ಪ್ರತಿಮಾ ಲಕ್ಷಣಗಳು ಆಯುಧೋಪಕರಣಗಳು, ವಸ್ತ್ರಾಭರಣಗಳು, ಆಸನಗಳು, ನಂಬುಗೆ-ಸಂಪ್ರದಾಯಗಳು ಅವುಗಳ ಕಲಾ ನೈಪುಣ್ಯತೆ ಇನ್ನೂ ಮುಂತಾದವುಗಳು ಈ ಅಧ್ಯಯನಕ್ಕೆ ಮುಖ್ಯ ಆಕರಗಳಾಗಿವೆ. ಧಾರವಾಡ ಜಿಲ್ಲೆಯ ವಿವಿಧ ಆಕರಗಳ ಶಿವಲಿಂಗಗಳು ಮತ್ತು ಅವನ ಪರಿವಾರದ ದೇವ-ದೇವತೆಯರ ಶಿಲ್ಪಗಳು ಹೆಚ್ಚಾಗಿ ಕಂಡುಬರುತ್ತವೆ. ವೈಷ್ಣವ ಸಂಪ್ರದಾಯದ ವಿಷ್ಣುವಿನ ೨೪ ರೂಪಗಳು ಜೊತೆಗೆ ಜೈನ ಸಂಪ್ರದಾಯದ ೨೪ ಜೈನ ತೀರ್ಥಂಕರರ ಶಿಲ್ಪಗಳು ಹೆಚ್ಚಾಗಿ ಬೆಳಕಿಗೆ ಬಂದಿವೆ. ಸೌರ, ಗಣಪತ್ಯ, ಶಾಕ್ತ ಮತ್ತು ಹನುಮಂತನ ಶಿಲ್ಪಗಳೂ ಕಂಡುಬಂದಿವೆ. ಈ ಎಲ್ಲಾ ಮೂರ್ತಿಶಿಲ್ಪಗಳು ಸಮಕಾಲೀನ ಧಾರ್ಮಿಕ, ಸಾಮಾಜಿಕ ಆಚಾರ-ವಿಚಾರಗಳ ಜೊತೆಗೆ ಆ ಪ್ರದೇಶದ ಶಿಲ್ಪಗಳ ಬೆಳವಣಿಗೆ ಮತ್ತು ಮೂರ್ತಿಶಿಲ್ಪಗಳ ಲಕ್ಷಣಗಳ ಅಧ್ಯಯನಕ್ಕೆ ಪ್ರಮುಖ ಆಕರಗಳಾಗಿವೆ.

೧.೩. ಪೂರ್ವಾಧ್ಯಯನಗಳ ಸಮೀಕ್ಷೆ

ಒಂದು ಪ್ರದೇಶದ ಇತಿಹಾಸವನ್ನು ಮತ್ತು ಸಂಸ್ಕೃತಿಯನ್ನು ತಿಳಿಯಬೇಕಾದರೆ ಆ ಪ್ರದೇಶದಲ್ಲಿ ನಡೆದಿರುವ ಪೂರ್ವ ಅಧ್ಯಯನಗಳ ಸಮೀಕ್ಷೆ ನಡೆಸುವುದು ಅಗತ್ಯ. ಪೂರ್ವಾಧ್ಯಯನಗಳನ್ನು ಪೂರಕವಾಗಿಟ್ಟುಕೊಂಡೇ ಅವುಗಳ ಆಧಾರದಲ್ಲಿ ಕ್ಷೇತ್ರಕಾರ್ಯ ಇತಿಹಾಸ ಪುನರ್‍ರಚಿಸಲು ಸಾಧ್ಯ. ಈ ಹಿನ್ನೆಲೆಯಲ್ಲಿ ಧಾರವಾಡ ಜಿಲ್ಲೆಗೆ ಸೀಮಿತವಾಗಿರುವ, ಈಗಾಗಲೇ ಪ್ರಕಟವಾಗಿರುವ ಸಂಶೋಧನಾ ಕೃತಿಗಳು, ಪ್ರಬಂಧಗಳನ್ನು ಮತ್ತು ಸಂಶೋಧನಾ ಲೇಖನಗಳ ಸಾರಗಳನ್ನು ಇಲ್ಲಿ ಸೇರಿಹಿಡಿಯಲಾಗಿದೆ.

೧.೩.೧. ಸಂಶೋಧನಾ ಕೃತಿಗಳು

ವೆಂಕಟರಂಗೋ ಕಟ್ಟಿ.,(ಸಂ), ರವರ 'ಧಾರವಾಡ, ಬೆಳಗಾವಿ, ಬಿಜಾಪುರ, ಕಾನಡಾ' ಗ್ಯಾಜಿಟೇಯರ್ ಕೃತಿಯಲ್ಲಿ ಧಾರವಾಡ ಜಿಲ್ಲೆಯಲ್ಲಿ ಬರುವ ಹುಬ್ಬಳ್ಳಿ, ನವಲಗುಂದ, ಕುಂದಗೋಳ, ಕಲಘಟಗಿ ಸ್ಥಳಗಳ ಬಗ್ಗೆ ಅಲ್ಲಿನ ಕಲೆ, ವಾಸ್ತುಶಿಲ್ಪ, ರಾಜಕೀಯ ಇತಿಹಾಸವನ್ನು ಸಂಕ್ಷಿಪ್ತವಾಗಿ ಹೇಳಲಾಗಿದೆ.[೭] ಧಾರವಾಡ ಜಿಲ್ಲೆಗೆ ಸಂಬಂಧಿಸಿದ ಶಾಸನಗಳು ಎನ್ಯೂಲ್ ರಿಪೋರ್ಟ್ಸ್ ಆಫ್ ಸೌತ್ ಇಂಡಿಯನ್ ಎಪಿಗ್ರಫಿ ವಾರ್ಷಿಕ ವರದಿಗಳಲ್ಲಿ(೧೯೨೫-೨೬, ೧೯೩೮-೩೯, ೧೯೫೦-೫೨,

೧೯೬೪-೬೫) ವರದಿಯಾಗಿವೆ.[೮] ಕಲಬುರ್ಗಿ ಎಂ.ಎಂ.(ಸಂ), 'ಧಾರವಾಡ ತಾಲೂಕಿನ ಶಾಸನಸೂಚಿ' ಕೃತಿಯಲ್ಲಿ ೭೪ ಶಾಸನಗಳ ಪಠ್ಯ ಮತ್ತು ಶಾಸನಗಳ ಸಂಕ್ಷಿಪ್ತವಾದ ಸಾರಾಂಶಗಳನ್ನು ನೀಡಲಾಗಿದೆ.[೯] ಕಲಬುರ್ಗಿ ಎಂ.ಎಂ.(ಸಂ), 'ಧಾರವಾಡ ಜಿಲ್ಲಾ ಶಾಸನಸೂಚಿ' ಕೃತಿಯಲ್ಲಿ ಒಟ್ಟು ೧೨೭ ಗ್ರಾಮಗಳಲ್ಲಿ ೩೭೫ ಶಾಸನಗ ಸಂಕ್ಷಿಪ್ತ ಸಾರಾಂಶಗಳನ್ನು ಒಂದೆಡೆ ಕಲೆ ಹಾಕಲಾಗಿದೆ.[೧೦] ಪಾಟೀಲ್ ಎಂ.ಬಿ. ಅವರ 'ಹುಬ್ಬಳ್ಳಿ ತಾಲೂಕಿನ ದರ್ಶನ' ಭೂ ಭೌಗೋಳಿಕ ಪರಿಸರ ಮತ್ತು ಕೆಲವು ಗ್ರಾಮಗಳ ಸಂಕ್ಷಿಪ್ತ ಮಾಹಿತಿಯನ್ನೊಳಗೊಂಡಿದೆ.[೧೧] 'ಕರ್ನಾಟಕ ರಾಜ್ಯ ಗ್ಯಾಜಿಟೀಯರ್ ಭಾಗ-ಮೂರು'ರಲ್ಲಿ ಅಣ್ಣಿಗೇರಿ, ಕಲಘಟಗಿ, ನವಲಗುಂದ, ಹಳಿಯಾಳ, ಹುಬ್ಬಳ್ಳಿ ಪ್ರದೇಶಗಳಲ್ಲಿ ಬರುವ ದೇವಾಲಯಗಳ ವಾಸ್ತುಶಿಲ್ಪ, ಮೂರ್ತಿಶಿಲ್ಪಗಳ ಬಗ್ಗೆ ಸಂಕ್ಷಿಪ್ತ ಮಾಹಿತಿಯನ್ನು ನೀಡಲಾಗಿದೆ.[೧೨]

ಸೂರ್ಯನಾಥ ಕಾಮತ್ ರವರು ಸಂಪಾದಿಸಿದ 'ಕರ್ನಾಟಕ ರಾಜ್ಯ ಗ್ಯಾಜಿಟಿಯರ್' ಧಾರವಾಡ ಜಿಲ್ಲೆ ಕೃತಿಯು ಧಾರವಾಡ ಜಿಲ್ಲೆಯ ರಾಜಕೀಯ, ಸಾಮಾಜಿಕ, ಶೈಕ್ಷಣಿಕ ಮತ್ತು ಕೆಲವು ಐತಿಹಾಸಿಕ ಗ್ರಾಮಗಳ ಸಂಕ್ಷಿಪ್ತವಾದ ವಿವರಣೆ ಇದೆ.[೧೩] ಶಿವತಾರಕ್ ಕೆ.ಬಿ. ಅವರು 'ಕರ್ನಾಟಕದ ಪುರಾತತ್ವ ನೆಲೆಗಳು' ಕೃತಿಯಲ್ಲಿ ವಿವಿಧ ಶಿಲಾಯುಗದ ಸಂಸ್ಕೃತಿಗೆ ಸಂಬಂಧಿಸಿದ ಮಾನವನ ವಸತಿ ನೆಲೆಗಳನ್ನು, ಧಾರವಾಡ ಜಿಲ್ಲೆಗೆ ಸಂಬಂಧಿಸಿದ ಮಾಹಿತಿಗಳನ್ನು ಸಂಕ್ಷಿಪ್ತವಾಗಿ ಕಲೆ ಹಾಕಿದ್ದಾರೆ.[೧೪] ಚನ್ನಕ್ಕ ಪಾವಟೆ ಅವರು 'ಶಾಸನ ಸಂಜೀವಿನಿ' ಕೃತಿಯಲ್ಲಿ ಧಾರವಾಡ, ನರೇಂದ್ರ, ಅಮ್ಮಿನಭಾವಿ ಪ್ರದೇಶಗಳ ಕುರಿತು ಶಾಸನಗಳ ಬಗ್ಗೆ ಮಾಹಿತಿಯನ್ನು ಕಲೆ ಹಾಕಿದ್ದಾರೆ.[೧೫] ಮಹದೇವ ಸಿ. ರವರು 'ಕರ್ನಾಟಕ ದೇವಾಲಯ ಕೋಶ' ಧಾರವಾಡ ಜಿಲ್ಲೆ ಕೃತಿ ೩೧೭ ದೇವಾಲಯಗಳ ಸಂಕ್ಷಿಪ್ತ ವಾಸ್ತು ವಿವರಣೆಗಳನ್ನೊಳಗೊಂಡಿದೆ.[೧೬] ಹಳ್ಳಿಕೇರಿ ಎಫ್.ಟಿ ರವರು 'ನಮ್ಮೂರ ನಾವಳ್ಳಿ' ಎಂಬ ಸಂಪಾದಿತ ಕೃತಿಯಲ್ಲಿ ನಾವಳ್ಳಿ ಗ್ರಾಮದ ಪ್ರಾಚೀನ ಇತಿಹಾಸ, ಪ್ರಕಟಿತ ಶಾಸನಗಳು, ಶಿಲ್ಪ, ದೇವಾಲಯಗಳ ಬಗ್ಗೆ ಮಾಹಿತಿಯನ್ನು ನೀಡಿದ್ದಾರೆ.[೧೭]

ಕಟಗೇರಿ ನ.ಹ.ರವರ 'ಗತಕಾಲದ ಧಾರವಾಡ' ಕೃತಿಯಲ್ಲಿ ಪ್ರಾಚೀನ ಕಾಲದಲ್ಲಿನ ಧಾರವಾಡದ ಚಿತ್ರಣವನ್ನು ಅಲ್ಲಿನ ರಾಜಕೀಯ, ಸಾಮಾಜಿಕ, ಧಾರ್ಮಿಕ, ಶೈಕ್ಷಣಿಕ, ಸ್ಮಾರಕಗಳ ಬಗ್ಗೆ ಸಂಕ್ಷಿಪ್ತ ಪರಿಚಯವನ್ನು ನೀಡಿದ್ದಾರೆ.[೧೮] ಅಪ್ಪಣ್ಣ ಎನ್.ಹಂಜೆ. ರವರ 'ಧಾರವಾಡ ಪರಿಸರದಲ್ಲಿ ಜೈನಧರ್ಮ' ಕೃತಿಯಲ್ಲಿ ಧಾರವಾಡ ಪರಿಸರದಲ್ಲಿನ ಜೈನಧರ್ಮದ ಹಿನ್ನೆಲೆ, ಅಲ್ಲಿನ ರಾಜಕೀಯ, ಸಾಮಾಜಿಕ, ಸಾಹಿತ್ಯಿಕ ವಿಶ್ಲೇಷಣೆಗಳನ್ನು ಮತ್ತು ಮುನಿಗಳು, ಜಿನಾಲಯಗಳು, ಶಿಲ್ಪಗಳು ಮತ್ತು ಸ್ಮಾರಕಗಳ ಸಂಕ್ಷಿಪ್ತ ಮಾಹಿತಿ ಇದೆ.[೧೯] 'ಕರ್ನಾಟಕ ಜಿಲ್ಲಾ ಅಂಕಿ-ಅಂಶಗಳ ನೋಟ ೨೦೦೯-೨೦೧೧' ಕೃತಿಯಲ್ಲಿ ಧಾರವಾಡ ಜಿಲ್ಲೆಯ ಭೌಗೋಳಿಕ ಪರಿಚಯ, ಹವಾಮಾನ, ಕೃಷಿ, ನೀರಾವರಿ, ಪಶುಸಂಗೋಪನೆ, ಕೈಗಾರಿಕೆ, ಸಾರಿಗೆ, ವಸತಿ, ಮಳೆ ಒಟ್ಟಾರೆ ಜಿಲ್ಲೆಯ ಮಾಹಿತಿ ಇದೆ.[೨೦] ಷಡಕ್ಷರಯ್ಯ ರು.ಮ. ಮತ್ತು ಜಯಮ್ಮ.ಬಿ.ರವರ 'ಧಾರವಾಡ ಜಿಲ್ಲೆಯ ಐತಿಹಾಸಿಕ ಸ್ಮಾರಕಗಳು ಮತ್ತು ಶಿಲ್ಪಗಳು' ಕೃತಿಯಲ್ಲಿ ಧಾರವಾಡ ಜಿಲ್ಲೆಯ ರಾಜಕೀಯ ಹಿನ್ನೆಲೆ, ಐತಿಹಾಸಿಕ ಸ್ಮಾರಕಗಳು, ಮೂರ್ತಿಶಿಲ್ಪ, ಸ್ಮಾರಕಶಿಲ್ಪಗಳ ಬಗ್ಗೆ ಸಂಕ್ಷಿಪ್ತ ಮಾಹಿತಿ ಇದೆ.[೨೧]

ಹೆನ್ರಿಕರಿಝಿನ್ಸ್ ರವರ, 'ದ ಚಾಲುಕ್ಯಾ ಆರ್ಕಿಟೆಕ್ಚರ್ ಆಫ್ ದಿ ಕೆನರಾ ಡಿಸ್ಟ್ರಿಕ್' ಕೃತಿಯಲ್ಲಿ ಕುಂದಗೋಳದ ಶಂಭುಲಿಂಗೇಶ್ವರ, ಉಣಕಲ್‌ನ ಚಂದ್ರಮೌಳೇಶ್ವರ, ಹುಬ್ಬಳ್ಳಿಯ ಭವಾನಿಶಂಕರ ದೇವಾಲಯಗಳ ಬಗ್ಗೆ ಸಂಕ್ಷಿಪ್ತ ಮಾಹಿತಿಯನ್ನು ವಿವರಿಸಿದ್ದಾರೆ.[೨೨] ಢಾಕೆ. ಎಂ.ಎ. ಅವರ 'ಎನ್‌ಸೈಕ್ಲೋಪಿಡಿಯಾ ಆಫ್ ಇಂಡಿಯನ್ ಟೆಂಪಲ್ ಆರ್ಕಿಟೆಕ್ಚರ್' ಕೃತಿಯಲ್ಲಿ ತಂಬೂರು, ಅಣ್ಣಿಗೇರಿ, ಕುಂದಗೋಳ, ಕಮಡೊಳ್ಳಿ ಗ್ರಾಮಗಳಲ್ಲಿರುವ ದೇವಾಲಯಗಳ ಮಾಹಿತಿಯನ್ನು ನೀಡಿದ್ದಾರೆ.[೨೩] ಗೆರಾಲ್ಡ ಫಾಕಿಮಾ ರವರು, 'ದ ಚಾಲುಕ್ಯಾ ಆರ್ಕಿಟೆಕ್ಚರ್' ಕೃತಿಯಲ್ಲಿ ಅಮರಗೋಳ, ಅಣ್ಣಿಗೇರಿ, ಹುಬ್ಬಳ್ಳಿ, ಕಾಮಧೇನು, ಕಮಡೊಳ್ಳಿ, ಕುಂದಗೋಳ, ಸಂಶಿ, ತಂಬೂರು, ಉಣಕಲ್ ಸ್ಥಳಗಳಲ್ಲಿರುವ ದೇವಾಲಯಗಳ ವಾಸ್ತು ವಿನ್ಯಾಸವನ್ನು ಸಂಕ್ಷಿಪ್ತವಾಗಿ ವಿವರಿಸಿದ್ದಾರೆ.[೨೪]

೧.೩.೨. ಸಂಶೋಧನಾ ಪ್ರಬಂಧಗಳು

ಎಂ.ಫಿಲ್. ಪ್ರಬಂಧಗಳು

ನಾಗಭೂಷಣಮೂರ್ತಿ ಎ.ಸಿ. ಅವರ 'ಧಾರವಾಡ ಜಿಲ್ಲೆಯ ದೇಶಿಕತೆಗಳು ಒಂದು ಸಾಂಸ್ಕೃತಿಕ ಅಧ್ಯಯನ' ಎಂಬ ಪ್ರಬಂಧದಲ್ಲಿ ದೇಶಿಕತೆಗಳ ಅರ್ಥ, ಅದರ ಪರಂಪರೆ, ಕುಂದಗೋಳ, ಅಣ್ಣಿಗೇರಿ, ಅಮ್ಮಿನಭಾವಿ ಇತರೆ ಸ್ಥಳಗಳ ಅಲ್ಲಿನ ರಾಜಕೀಯ, ಸಾಮಾಜಿಕ, ಶೈಕ್ಷಣಿಕ, ಧಾರ್ಮಿಕ ಸ್ಥಿತಿಗತಿಗಳನ್ನು ಜೊತೆಗೆ ಛಾಯಾಚಿತ್ರಗಳನ್ನು ನೀಡಲಾಗಿದೆ.[೨೫] ಪಾಟೀಲ್ ಚ.ನಿಂಗನಗೌಡರ ರವರು. 'ಉಣಕಲ್ ಶ್ರೀ ಜಗದ್ಗುರು ಸಿದ್ದೇಶ್ವರರು:ಒಂದು ಅಧ್ಯಯನ' ದಲ್ಲಿ ಶ್ರೀ ಸಿದ್ದೇಶ್ವರರ ಜೀವನ ಚರಿತ್ರೆ, ಗುರೂಪದೇಶ, ಲೋಕಪರ್ಯಟನೆ, ಅವರು ರಚಿಸಿದ ಸಾಹಿತ್ಯಿಕ ಕೃತಿಗಳು, ನಂಬಿಕೆ, ಸಂಪ್ರದಾಯ, ಐತಿಹ್ಯಗಳ ಕುರಿತಾಗಿದೆ.[೨೬] ಕು. ಶಶಿಕಾಂತ ಕೆ.ಬಸರಿಕಟ್ಟಿ ರವರ 'ಕಲಘಟಗಿ ಕಲೆ' ಪ್ರಬಂಧದಲ್ಲಿ ಕಲಘಟಗಿ ಕಲೆಯ ಐತಿಹಾಸಿಕ ಹಿನ್ನೆಲೆ, ಕಲೆ ಸಿದ್ದತಾ ಪರಿಕರಗಳ ಮತ್ತು ರಚನಾ ವಿಧಿ-ವಿಧಾನಗಳ ಬಗ್ಗೆ ಕಲಾಕೃತಿಗಳ ತಂತ್ರ, ಶೈಲಿ, ಪ್ರಭಾವ ಪ್ರೇರಣೆ ಹಾಗೂ ಕಲಘಟಗಿಯ ಕಲಾವಿದರ ಪ್ರಸ್ತುತ ಸ್ಥಿತಿಗತಿಗಳ ಕುರಿತಾಗಿದೆ.[೨೭] ಕು. ಸಾವಿತ್ರಿಬಾಯಿ ನಿಂ.ಓಲೇಕಾರ ರವರು 'ಕನ್ನಡ ಸಂಶೋಧನಾ ಸಂಸ್ಥೆಯ ವಸ್ತು ಸಂಗ್ರಹಾಲಯದ ಅಧ್ಯಯನ' ಪ್ರಬಂಧದಲ್ಲಿ ವಸ್ತು ಸಂಗ್ರಹಾಲಯದ ಬೆಳವಣಿಗೆ, ಅಲ್ಲಿರುವ ತಾಮ್ರ ಮತ್ತು ನಿಷಿಧಿಶಾಸನಗಳು, ಶೈವ, ವೈಷ್ಣವ. ಜೈನ, ಶಾಕ್ತ, ವೀರಶೈವ ಶಿಲ್ಪಗಳ ಬಗ್ಗೆ ಮತ್ತು ಹಸ್ತಪ್ರತಿಗಳ ಬಗ್ಗೆ ಸಂಕ್ಷಿಪ್ತವಾಗಿ ವಿವರಿಸಿದ್ದಾರೆ.[೨೮]

ಚಂದ್ರಶೇಖರ್ ರವರು 'ಕುಂದಗೋಳ ತಾಲೂಕಿನ ಶಾಸನಗಳು ಮತ್ತು ದೇವಾಲಯಗಳು' ಪ್ರಬಂಧದಲ್ಲಿ ಕುಂದಗೋಳ ಪ್ರದೇಶದ ಪದನಿಷ್ಪತ್ತಿ, ಭೂ ಭೌಗೋಳಿಕ ಪರಿಸರ, ಅಲ್ಲಿನ ರಾಜಕೀಯ, ಸಾಮಾಜಿಕ, ಧಾರ್ಮಿಕ, ಶೈಕ್ಷಣಿಕ ಜೊತೆಗೆ ದೇವಾಲಯಗಳು, ಶಾಸನಗಳು ಮತ್ತು ಮೂರ್ತಿಶಿಲ್ಪಗಳ ಕುರಿತು ಸಂಕ್ಷಿಪ್ತವಾಗಿ ಚರ್ಚಿಸಿದ್ದಾರೆ.[೨೯] ಶ್ರೀ ಯಲ್ಲಣ್ಣ ಕೆ. 'ನವಲಗುಂದ ತಾಲೂಕಿನ ಶಾಸನಗಳು ಮತ್ತು ದೇವಾಲಯಗಳು' ಪ್ರಬಂಧದಲ್ಲಿ ಪ್ರಕಟಿತ ಶಾಸನಗಳನ್ನು ಪೂರಕವಾಗಿಟ್ಟುಕೊಂಡು ನವಲಗುಂದ ಪ್ರದೇಶದ ರಾಜಕೀಯ, ಸಾಮಾಜಿಕ, ಧಾರ್ಮಿಕ ಮತ್ತು ಶಾಸನಗಳ ವೈವಿಧ್ಯತೆ, ಮೂರ್ತಿಶಿಲ್ಪಗಳ ಮಾಹಿತಿ ನೀಡಿದ್ದಾರೆ.[೩೦] ಮಂಗಲಾ ಎಂ.ಗೌಡ ರವರ

‘ಅಮ್ಮಿನಬಾವಿ ಪರಿಸರದ ಸಾಂಸ್ಕೃತಿಕ ಅಧ್ಯಯನ’ ಪ್ರಬಂಧದಲ್ಲಿ ಅಮ್ಮಿನಬಾವಿ ಪ್ರದೇಶದ ಐತಿಹಾಸಿಕ ಹಿನ್ನೆಲೆ, ಅಲ್ಲಿನ ದೇವಾಲಯಗಳು ಮತ್ತು ಮೂರ್ತಿಶಿಲ್ಪ, ನಂಬಿಕೆಗಳ ಕುರಿತಾಗಿ ಚರ್ಚಿಸಿದ್ದಾರೆ.[೨೧] ಶ್ರೀ. ಸುರೇಶ ಕರಿಬಸಪ್ಪ ಹಾನಗಲ್ಲ ರವರು ‘ಹುಬ್ಬಳ್ಳಿ ತಾಲೂಕಿನ ಶಾಸನಗಳು ಮತ್ತು ದೇವಾಲಯಗಳು’ ಪ್ರಬಂಧದಲ್ಲಿ ಪ್ರಕಟಿತ ಮತ್ತು ವರದಿಯಾದ ಶಾಸನಗಳನ್ನು ಪೂರಕವಾಗಿಟ್ಟುಕೊಂಡು ಹುಬ್ಬಳ್ಳಿ ಪ್ರದೇಶದ ರಾಜಕೀಯ, ಸಾಮಾಜಿಕ, ಆರ್ಥಿಕ, ಧಾರ್ಮಿಕ ವಿಷಯಗಳನ್ನು, ಶಾಸನಗಳ ವೈವಿಧ್ಯತೆ, ಕೆಲವು ಪ್ರಮುಖ ದೇವಾಲಯಗಳನ್ನು ಮತ್ತು ಮೂರ್ತಿಶಿಲ್ಪಗಳ ಸಂಕ್ಷಿಪ್ತ ಮಾಹಿತಿಯನ್ನು ನೀಡಿದ್ದಾರೆ.[೨೨]

ಶ್ರೀ ರಮೇಶ ಮೊರಬ ರವರು ‘ಧಾರವಾಡ ಜಿಲ್ಲೆಯ ಚರ್ಚುಗಳು:ಒಂದು ಸಾಂಸ್ಕೃತಿಕ ಅಧ್ಯಯನ’ ಪ್ರಬಂಧದಲ್ಲಿ ಧಾರವಾಡ ಜಿಲ್ಲೆಯ ಐತಿಹಾಸಿಕ ಹಿನ್ನೆಲೆ, ಮಿಶನರಿಗಳು, ಪ್ರಮುಖ ಚರ್ಚಗಳು ಅವುಗಳ ಕಾರ್ಯ ಚಟುವಟಿಕೆಗಳು ಮತ್ತು ಚರ್ಚುಗಳ ವಾಸ್ತು ಶಿಲ್ಪದ ಬಗ್ಗೆ ಮಾಹಿತಿಯನ್ನು ನೀಡಿದ್ದಾರೆ.[೨೩] ಕುಮಾರಿ, ಶಕುಂತಲಾ ನಾಯಕ ರವರು ‘ಕುಂದಗೋಳ ತಾಲೂಕಿನ ಪುರಾತತ್ವ’ ಪ್ರಬಂಧದಲ್ಲಿ ಕುಂದಗೋಳ ಪದದ ಪದ ನಿಷ್ಪತ್ತಿ, ಅಲ್ಲಿನ ಭೌಗೋಳಿಕ ಪರಿಸರ, ದೇವಾಲಯಗಳು, ಶಾಸನಗಳು ಮತ್ತು ಮೂರ್ತಿಶಿಲ್ಪಗಳ ಬಗ್ಗೆ ಮಾಹಿತಿಯನ್ನು ಕಲೆಹಾಕಿದ್ದಾರೆ.[೨೪]

ಪಿಎಚ್.ಡಿ ಮಹಾಪ್ರಬಂಧಗಳು

ಗುರುವ ಆರ್.ಎನ್. ರವರು ‘ದ ಕದಂಬಾಸ್ ಆಫ್ ಗೋವಾ ಇನ್‌ಸ್ಕ್ರಿಪ್‌ಶನ್ಸ್’ ಎಂಬ ಮಹಾ ಪ್ರಬಂಧದಲ್ಲಿ ಗೋವಾ ಕದಂಬರ ರಾಜಕೀಯ, ಸಾಮಾಜಿಕ, ಅದರಲ್ಲೂ ಧಾರವಾಡ ಜಿಲ್ಲೆಯ ಐದು ತಾಲೂಕಿಗೆ ಸಂಬಂಧಿಸಿದ ಶಾಸನಗಳ ಬಗ್ಗೆ ಮಾಹಿತಿ ಇದೆ.[೨೫] ಜೋಶಿ ಆರ್.ಆರ್ ರವರ ‘ಎ ಕಲ್ಚರಲ್ ಹಿಸ್ಟರಿ ಆಫ್ ಧಾರವಾಡ ರೀಜನ್’ ಪ್ರಬಂಧದಲ್ಲಿ ಧಾರವಾಡ ಜಿಲ್ಲೆಯ ಸಾಂಸ್ಕೃತಿಕ ಇತಿಹಾಸದ ಸಂಕ್ಷಿಪ್ತವಾದ ಮಾಹಿತಿ ಇದೆ.[೨೬] ಅಜಿತ್ ಪ್ರಸಾದ್ ರವರ ‘ಜೈನಿಸಮ್ ಇನ್ ಧಾರವಾಡ ರೀಜನ್’ ಪ್ರಬಂಧದಲ್ಲಿ ಧಾರವಾಡ ಜಿಲ್ಲೆಯ ಜೈನಧರ್ಮದ ಪ್ರಾಚೀನ ರಾಜಾಶ್ರಯ, ಜಿಲ್ಲೆಯ ಸಾಹಿತ್ಯ, ಧರ್ಮ, ಕಲೆ ಮತ್ತು ವಾಸ್ತುಗಳ ಬಗ್ಗೆ ಜಿಲ್ಲೆಯ ಸುಮಾರು ೧೯ ಕೇಂದ್ರಗಳ ಅಧ್ಯಯನವನ್ನು ಮಾಡಿದ್ದಾರೆ.[೨೭] ಮಹಾಂತಪ್ಪ ಸಿ.ಹಡಪದ ರವರ ‘ಮೂಜಗಂ:ಜೀವನ ಮತ್ತು ಸಾಧನೆ’ ಪ್ರಬಂಧದಲ್ಲಿ, ಕರ್ನಾಟಕದ ಮಠಗಳ ಪಾತ್ರ, ಹುಬ್ಬಳ್ಳಿ ಸ್ಥಳದ ಪರಿಚಯ, ರೂಪ ನಿಷ್ಪತ್ತಿ, ಭೌಗೋಳಿಕ ವಿಸ್ತಾರ, ಐತಿಹಾಸಿಕ, ಸಾಂಸ್ಕೃತಿಕ ಪರಿಚಯ, ಶಿಕ್ಷಣ, ಧಾರ್ಮಿಕ, ಆರ್ಥಿಕ, ವೈದ್ಯಕೀಯ ಇತರೇ ಕ್ಷೇತ್ರಗಳಲ್ಲಿ ಅವರು ಮಾಡಿದ ಕಾರ್ಯಗಳ ಬಗ್ಗೆ ವಿವರಿಸಿದ್ದಾರೆ.[೨೮]

ನಾಗಭೂಷಣಮೂರ್ತಿ ಎ.ಸಿ. ರವರ ‘ಧಾರವಾಡ ವೀರಶೈವ ದೇಶಿಗತಿಗಳು:ಒಂದು ಸಾಂಸ್ಕೃತಿಕ ಅಧ್ಯಯನ’ ಪ್ರಬಂಧದಲ್ಲಿ ದೇಶಿಗತಿಗಳ ಇತಿಹಾಸ ಮತ್ತು ಆಡಳಿತ ಪದ್ದತಿ, ಕಾರ್ಯವೈಖರಿಗಳ ಬಗ್ಗೆ, ಅಣ್ಣಿಗೇರಿ, ಕುಂದಗೋಳ ಪ್ರದೇಶಗಳ ದೇಶಿಗತಿಗಳು ಮತ್ತು ಸಾಂಸ್ಕೃತಿಕವಾಗಿ ವೀರಶೈವ ಸಮಾಜಕ್ಕೆ ದೇಶಿಗತಿಗಳ ಕೊಡುಗೆಗಳ ಬಗ್ಗೆ ವಿವರಿಸಿದ್ದಾರೆ.[೨೯] ಮೂಲಗಿ ಆರ್.ಬಿ. ರವರು ‘ಧಾರವಾಡ ಜಿಲ್ಲೆಯ ಜನಪದ ಹಾಡುಗಳು’ ಮಹಾಪ್ರಬಂಧದಲ್ಲಿ ಧಾರವಾಡ ಜಿಲ್ಲೆಯ

ಪರಿಚಯ, ಪದನಿಷ್ಪತ್ತಿ, ಇತಿಹಾಸ, ಭಾಷೆ, ಜನಪದ ಧರ್ಮ ಸಂಸ್ಕೃತಿಯಲ್ಲಿ ಜನನ, ಮದುವೆ, ಗರ್ಭಧಾರಣೆ, ಸಾವು, ಒಕ್ಕಲುತನ, ಬಿತ್ತುವ, ಮಳೆಯ, ಹಬ್ಬ, ಹುಣ್ಣಿಮೆ, ಹರಕೆ ಇನ್ನೂ ಮುಂತಾದ ಸಂಪ್ರದಾಯಗಳ ಹಿನ್ನೆಲೆಯನ್ನು ಜನಪದ ಹಾಡುಗಳ ಮೂಲಕ ಪರಿಚಯಿಸಿದ್ದಾರೆ.[೪೦] ಶ್ರೀಮತಿ ಜಯಮ್ಮ ಬಿ. ರವರು 'ಧಾರವಾಡ ಜಿಲ್ಲೆಯ ಪುರಾತತ್ವ' ಮಹಾಪ್ರಬಂಧದಲ್ಲಿ ಜಿಲ್ಲೆಯ ಪ್ರಾಗೈತಿಹಾಸಿಕ ಮತ್ತು ಇತಿಹಾಸದ ಆರಂಭಕಾಲದ ಪುರಾತತ್ವ ನೆಲೆಗಳು, ರಾಜಕೀಯ ಇತಿಹಾಸ, ಸಾಂಸ್ಕೃತಿಕ ಇತಿಹಾಸ, ದೇವಾಲಯಗಳು, ಮೂರ್ತಿಶಿಲ್ಪ, ಸ್ಮಾರಕಗಳು ಮತ್ತು ವಾಸ್ತು ಶಿಲ್ಪಗಳ ಬಗ್ಗೆ ವಿಮರ್ಶಾತ್ಮಕವಾಗಿ ವಿವರಿಸಿದ್ದಾರೆ.[೪೧]

ಸೋಮಶೇಖರ ಚ.ಎಲಿಗಾರ ರವರ 'ಧಾರವಾಡ ಜಿಲ್ಲೆ:ಒಂದು ಸಾಂಸ್ಕೃತಿಕ ಅಧ್ಯಯನ'(ಏಕೀಕರಣ ಪೂರ್ವ) ಪ್ರಬಂಧದಲ್ಲಿ ಧಾರವಾಡ ಪದ ನಿಷ್ಪತ್ತಿ, ಅಲ್ಲಿನ ರಾಜಕೀಯ, ಧಾರ್ಮಿಕ, ಸಾಹಿತ್ಯಿಕ, ವಾಸ್ತು–ಶಿಲ್ಪ, ಸಂಸ್ಕೃತಿಗೆ ಸಂಬಂಧಿಸಿದಂತೆ ದೇವಾಲಯಗಳ ಬಗ್ಗೆ ವಿವರಣೆ ನೀಡಿದ್ದಾರೆ.[೪೨] ಅಶೋಕ ಹುಗ್ಗಣ್ಣನವರರವರ 'ಕುಂದಗೋಳ ಪರಿಸರದ ಹಿಂದೂಸ್ತಾನಿ ಸಂಗೀತಗಾರರು' ಪ್ರಬಂಧದಲ್ಲಿ ಸಂಗೀತದ ಹುಟ್ಟು, ಬೆಳವಣಿಗೆ, ದೇವಾಲಯಗಳು, ಮೂರ್ತಿಶಿಲ್ಪ, ಸಂಸ್ಕೃತಿ, ಹಿಂದುಸ್ತಾನಿ ಸಂಗೀತಕ್ಕೆ ಪ್ರಮುಖ ವ್ಯಕ್ತಿಗಳು ಕೊಟ್ಟಂತಹ ಕೊಡುಗೆ, ಪರಂಪರೆಯನ್ನು ಚರ್ಚಿಸಿದ್ದಾರೆ.[೪೩] ವಾರಿಜಾ ಆರ್.ಬೋಳಾರ್ ರವರ 'ಟೆಂಪಲ್ಸ್ ಆಫ್ ಕರ್ನಾಟಕ' ಮಹಾ ಪ್ರಬಂಧದಲ್ಲಿ ಧಾರವಾಡ ಜಿಲ್ಲೆಗೆ ಸಂಬಂಧಿಸಿದಂತೆ ಶಾಸನೋಕ್ತ ಶೈವ, ವೈಷ್ಣವ, ಶಾಕ್ತ ಇನ್ನೂ ಮುಂತಾದ ದೇವಾಲಯಗಳ ಬಗ್ಗೆ ಮಾಹಿತಿಯನ್ನು ನೀಡಿದ್ದಾರೆ.[೪೪] ಮಹೇಶ ಫ.ಗಾಜಪ್ಪನವರ 'ಧಾರವಾಡ ಜಿಲ್ಲೆಯ ತತ್ವಪದ ಸಾಹಿತ್ಯ' ಪ್ರಬಂಧದಲ್ಲಿ ಧಾರವಾಡ ಹೆಸರಿನ ಮೂಲ, ಜಿಲ್ಲೆಯ ಭೌಗೋಳಿಕ ನೋಟ, ಪೌರಾಣಿಕ ಹಿನ್ನೆಲೆ, ಜನ ಮತ್ತು ಭಾಷೆ, ಧರ್ಮ, ಸಾಹಿತ್ಯಿಕ ಸಂಸ್ಕೃತಿ, ಜೊತೆಗೆ ಧಾರವಾಡ ಜಿಲ್ಲೆಯ ತತ್ವಪದಗಳಲ್ಲಿ ಪೌರಾಣಿಕ ಮತ್ತು ಐತಿಹಾಸಿಕ ವ್ಯಕ್ತಿಗಳನ್ನು ಕುರಿತು ವಿವರಿಸಿದ್ದಾರೆ.[೪೫] ಶಾಂತವ್ವ ಕ.ಪೂಜಾರ್ ರವರು 'ಹುಬ್ಬಳ್ಳಿ ಒಂದು ಸಾಂಸ್ಕೃತಿಕ ಅಧ್ಯಯನ' ಪ್ರಬಂಧದಲ್ಲಿ ಹುಬ್ಬಳ್ಳಿ ಪದದ ನಿಷ್ಪತ್ತಿ, ಸ್ಥಳನಾಮ ಹಾಗೆಯೇ ರಾಜಕೀಯ, ಸಾಮಾಜಿಕ, ಧಾರ್ಮಿಕ ಸ್ಥಿತಿಗತಿಗಳ ಬಗ್ಗೆ, ವ್ಯಾಪಾರ ಕೇಂದ್ರವಾಗಿ ಹುಬ್ಬಳ್ಳಿ ಪ್ರದೇಶ ಹಾಗೂ ಪ್ರಮುಖ ಮಠಗಳ ಬಗ್ಗೆ ಮಾಹಿತಿಯನ್ನು ನೀಡಿದ್ದಾರೆ.[೪೬]

ಸ್ನಾತಕೋತ್ತರ ಪದವಿಯ ಸಂಪ್ರಬಂಧಗಳು

ಮುಳಗುಂದ ಕೆ.ಎಚ್ ರವರು 'ಅಣ್ಣಿಗೇರಿ ಅಮೃತೇಶ್ವರ ದೇವಾಲಯ:ಒಂದು ಅಧ್ಯಯನ' ದಲ್ಲಿ ಅಣ್ಣಿಗೇರಿಯ ಐತಿಹಾಸಿಕ ಹಿನ್ನೆಲೆ, ಅಮೃತೇಶ್ವರ ದೇವಾಲಯದ ವಾಸ್ತುಶಿಲ್ಪ ವಿವರಣೆ, ಮೂರ್ತಿಶಿಲ್ಪ ಮತ್ತು ಶಾಸನಗಳಲ್ಲಿ ಅಮೃತೇಶ್ವರ ದೇವಾಲಯದ ಮಾಹಿತಿಯನ್ನು ನೀಡಲಾಗಿದೆ.[೪೭] ಕೃಷ್ಣಾಜಿ ಗು.ನಾಡಗೀರ್ ರವರು 'ಧಾರವಾಡ ತಾಲೂಕಿನ ಮಧ್ಯಭಾಗದ ಶಿಲ್ಪಕಲಾ ಇತಿಹಾಸ ಸಮೀಕ್ಷೆ' ಎಂಬ ಪತ್ರಿಕೆಯಲ್ಲಿ ಧಾರವಾಡ ಜಿಲ್ಲೆಯ ರಾಜಕೀಯ, ಸಾಮಾಜಿಕ, ಧಾರ್ಮಿಕ ಮತ್ತು ೧೦ ಗ್ರಾಮಗಳಲ್ಲಿ ಕಂಡು ಬರುವ ದೇವಾಲಯ ವಾಸ್ತು ಮತ್ತು ಮೂರ್ತಿಶಿಲ್ಪಗಳ ಬಗ್ಗೆ ಸಂಕ್ಷಿಪ್ತ

ಮಾಹಿತಿಯನ್ನು ನೀಡಿದ್ದಾರೆ.[೪೮] ಶಿವಪ್ಪ ಚನ್ನಬಸಪ್ಪ ಶಾನವಾಡರವರು 'ಕುಂದಗೋಳ ತಾಲೂಕಿನ ಈಶಾನ್ಯ ವಲಯದ ಪುರಾತತ್ವ ಒಂದು ಸಮೀಕ್ಷೆ' ಪತ್ರಿಕೆಯಲ್ಲಿ ಪುರಾತತ್ವ ಅವಶೇಷಗಳಲ್ಲಿನ ದೇವಾಲಯಗಳ ವಾಸ್ತು-ಕಲೆ, ಮೂರ್ತಿಶಿಲ್ಪಕಲೆಯ ಬಗ್ಗೆ ಮಾಹಿತಿ ಕಲೆ ಹಾಕಿದ್ದಾರೆ.[೪೯]

ಶರಣಗೌಡ ತ.ಬಿರಾದಾರ ರವರು 'ಉಣಕಲ್ ಪ್ರದೇಶದ ಶಿಲ್ಪಕಲೆ:ಒಂದು ಸಮೀಕ್ಷೆ'ಯಲ್ಲಿ ಧಾರವಾಡ ಜಿಲ್ಲೆಯ ರಾಜಕೀಯ, ಸಾಮಾಜಿಕ, ಆರ್ಥಿಕ, ವಾಸ್ತುಶಿಲ್ಪ ಕಲೆ, ಮೂರ್ತಿಶಿಲ್ಪಗಳ ಉಗಮ ಲಕ್ಷಣಗಳ ಬಗ್ಗೆ ತಿಳಿಸಿದ್ದಾರೆ.[೫೦] ಪೂರ್ಣಿಮಾ ವಿ.ನಾಗಾವಿ ರವರು 'ಕುಂದಗೋಳ ಸುತ್ತಮುತ್ತಲಿನ ಪ್ರದೇಶದ ವಾಸ್ತುಶಿಲ್ಪ' ಕಲಾ ವ್ಯಾಸಂಗದಲ್ಲಿ ಕುಂದಗೋಳ ಪ್ರದೇಶದ ರಾಜಕೀಯ ಇತಿಹಾಸ ಜೊತೆಗೆ ೧೦ ಗ್ರಾಮಗಳ ಕ್ಷೇತ್ರ ಕಾರ್ಯದ ಬಗ್ಗೆ ಅಲ್ಲಿನ ದೇವಾಲಯ, ಮೂರ್ತಿಶಿಲ್ಪ ಮತ್ತು ಶಾಸನಗಳ ಬಗ್ಗೆ ಚರ್ಚಿಸಿದ್ದಾರೆ.[೫೧] ವೀರಯ್ಯ ಕ.ಇಂಡಿ ರವರು 'ಧಾರವಾಡ ತಾಲೂಕಿನ ಹದಿನೈದು ಗ್ರಾಮಗಳ ವಾಸ್ತುಶಿಲ್ಪಕಲೆ:ಒಂದು ಅಧ್ಯಯನ' ದಲ್ಲಿ ಧಾರವಾಡ ಜಿಲ್ಲೆಯ ಸಾಂಸ್ಕೃತಿಕ ಇತಿಹಾಸ ೨೫ ಗ್ರಾಮಗಳ ದೇವಾಲಯ ವಾಸ್ತು-ಮೂರ್ತಿಶಿಲ್ಪಕಲೆಗಳ ಬಗ್ಗೆ ಮಾಹಿತಿ ನೀಡಿದ್ದಾರೆ.[೫೨] ಸುರೇಶ ಸಂ.ಮೇಟಿ ರವರು 'ನವಲಗುಂದ ತಾಲೂಕಿನ ಆಯ್ದ ೧೫ ಹಳ್ಳಿಗಳ ಪುರಾತತ್ವ ಅನ್ವೇಷಣೆ' ಸಂಪ್ರಬಂಧದಲ್ಲಿ ನವಲಗುಂದದ ಭೂ ಭೌಗೋಳಿಕ ಪರಿಸರ, ಸಾಂಸ್ಕೃತಿಕ ಇತಿಹಾಸ ಮತ್ತು ತಾಲೂಕಿನ ವಾಸ್ತುಶಿಲ್ಪ-ಕಲೆಯ ಮಾಹಿತಿಯನ್ನು ನೀಡಿದ್ದಾರೆ.[೫೩]

ಪ್ರಕಾಶ ಎನ್. ಹೊಸಮನಿ ರವರು 'ಕುಂದಗೋಳ ತಾಲೂಕಿನ ಹದಿನೈದು ಗ್ರಾಮಗಳ ದೇವಾಲಯಗಳು ಮತ್ತು ಮೂರ್ತಿಶಿಲ್ಪಗಳು' ಪ್ರಬಂಧದಲ್ಲಿ ಕುಂದಗೋಳ ತಾಲೂಕಿನ ಭೌಗೋಳಿಕ ಹಿನ್ನೆಲೆಯೊಂದಿಗೆ ಆ ಪ್ರದೇಶದಲ್ಲಿ ದೊರೆಯುವ ದೇವಾಲಯಗಳ ವಾಸ್ತು ಮತ್ತು ಮೂರ್ತಿಶಿಲ್ಪಗಳ ಬಗ್ಗೆ ಸಂಕ್ಷಿಪ್ತವಾಗಿ ಚರ್ಚಿಸಿದ್ದಾರೆ.[೫೪] ಸಾವಿತ್ರಿ ಪಾಟೀಲರವರು 'ಧಾರವಾಡ ಪ್ರದೇಶದ ಹನ್ನೆರಡು ಗ್ರಾಮಗಳ ದೇವಾಲಯಗಳು ಮತ್ತು ಶಿಲ್ಪಗಳ ಸಮೀಕ್ಷೆ' ಪ್ರಬಂಧದಲ್ಲಿ ಧಾರವಾಡ ಪ್ರದೇಶದ ಸುಮಾರು ಹನ್ನೆರಡು ಸ್ಥಳಗಳ ಸ್ಥಳೀಯ ಚರಿತ್ರೆಯೊಂದಿಗೆ ಅಲ್ಲಿರುವ ಪ್ರಮುಖ ದೇವಾಲಯಗಳ ವಾಸ್ತುವಿನ ಜೊತೆಗೆ ಶಿಲ್ಪಗಳ ಪ್ರತಿಮಾ ಲಕ್ಷಣಗಳನ್ನು ವಿವರಿಸಿದ್ದಾರೆ.[೫೫] ಪಾಂಡುರಂಗ ಕೇ.ಕೋಕಾಟರವರು 'ಕುಂದಗೋಳ ತಾಲೂಕಿನ ಶಾಸನಗಳು ಒಂದು ಅಧ್ಯಯನ' ದಲ್ಲಿ ಕುಂದಗೋಳ ತಾಲೂಕಿನ ಸ್ಥಳೀಯ ಚರಿತ್ರೆಯ ಜೊತೆಗೆ ಈಗಾಗಲೇ ಪ್ರಕಟಿತ ಮಾಹಿತಿಯನ್ನು ಒಂದೆಡೆ ಕಲೆಹಾಕಿ ಪ್ರತಿಯೊಂದು ಹಳ್ಳಿಗಳಲ್ಲಿ ದೊರೆತ ಶಾಸನಗಳ ಪಠ್ಯ ಮತ್ತು ಅವುಗಳ ಸಾರಾಂಶವನ್ನು ಸಂಕ್ಷಿಪ್ತವಾಗಿ ಒಂದೆಡೆ ಕಲೆಹಾಕಿದ್ದಾರೆ.[೫೬] ಶ್ರೀಶೈಲ ಬಬಲಾದರವರು 'ಅಣ್ಣಿಗೇರಿ ಅಮೃತೇಶ್ವರ ದೇವಾಲಯದ ಕಲೆ ಮತ್ತು ವಾಸ್ತುಶಿಲ್ಪಕಲೆ ಒಂದು ಅಧ್ಯಯನ' ದಲ್ಲಿ ಅಣ್ಣಿಗೇರಿ ಪ್ರದೇಶದಲ್ಲಿ ದೊರೆತ ಶಾಸನಗಳ ಹಿನ್ನೆಲೆಯೊಂದಿಗೆ ಅಲ್ಲಿನ ರಾಜಕೀಯ, ಸಾಮಾಜಿಕ, ಧಾರ್ಮಿಕ ವಿಷಯದ ಜೊತೆಗೆ ಅಮೃತೇಶ್ವರ ದೇವಾಲಯದ ವಾಸ್ತುವನ್ನು ಮತ್ತು ಅಲ್ಲಿರುವ ಪ್ರತಿಯೊಂದು ಶಿಲ್ಪಗಳ ಪ್ರತಿಮಾಲಕ್ಷಣಗಳನ್ನು ಛಾಯಾಚಿತ್ರಗಳೊಂದಿಗೆ ಒಂದೆಡೆ ಸೆರೆಹಿಡಿದಿದ್ದಾರೆ.[೫೭]

ಫಕ್ಕೀರಪ್ಪ ಪೀರಪ್ಪ ಬಾಲನಾಯ್ಕರವರು 'ಕಮಡೊಳ್ಳಿ ಆದಿದೇವ ಶ್ರೀರಾಮೇಶ್ವರ ಪುರಾತನ ದೇವಸ್ಥಾನದ ಅಧ್ಯಯನ' ದಲ್ಲಿ ಕುಂದಗೋಳ ತಾಲೂಕಿನ ಐತಿಹಾಸಿಕ ಹಿನ್ನೆಲೆಯ ಜೊತೆಗೆ ಕಮಡೊಳ್ಳಿಯಲ್ಲಿ ದೊರೆತ ಶಾಸನಗಳನ್ನು ಮತ್ತು ಅಲ್ಲಿನ ಐತಿಹ್ಯ ಜೊತೆಗೆ ರಾಮೇಶ್ವರ ದೇವಾಲಯದ ವಾಸ್ತುವನ್ನು ಮತ್ತು ಅಲ್ಲಿರುವ ಪ್ರತಿಯೊಂದು ಶಿಲ್ಪಗಳ ಪ್ರತಿಮಾ ಲಕ್ಷಣಗಳನ್ನು, ಛಾಯಾಚಿತ್ರದೊಂದಿಗೆ ಸೆರೆಹಿಡಿದಿದ್ದಾರೆ.[೫೮] ಪ್ರಭಾಕರ ವೈ ರವರು 'ಹುಬ್ಬಳ್ಳಿ ತಾಲೂಕಿನ ಅಮರಗೋಳ ಬನಶಂಕರಿ ದೇವಾಲಯ ಒಂದು ವರದಿ' ಯಲ್ಲಿ ಅಮರಗೋಳ ಬನಶಂಕರಿ ದೇವಾಲಯದ ಊರ್ಧ್ವಮುಖ ಮತ್ತು ತಿರ್ಯನ್ಮುಖದ ಪರಿಚಯಿಸಿದ್ದು, ಅಲ್ಲಿರುವ ಮೂರ್ತಿಶಿಲ್ಪಗಳ ಕುರಿತು ಮಾಹಿತಿ ನೀಡಿದ್ದಾರೆ.[೫೯] ವೀರಭದ್ರ ಆ.ಮಿರಾಶಿ ರವರು 'ಅಣ್ಣಿಗೇರಿಯ ಅಮೃತೇಶ್ವರ ದೇವಾಲಯದ ಒಂದು ಅಧ್ಯಯನ' ದಲ್ಲಿ ಅಣ್ಣಿಗೇರಿಯ ಐತಿಹಾಸಿಕ ಹಿನ್ನೆಲೆಯೊಂದಿಗೆ ಈ ದೇವಾಲಯದ ವಾಸ್ತು ವಿನ್ಯಾಸದ ಜೊತೆಗೆ ಅಲ್ಲಿರುವ ಮೂರ್ತಿಶಿಲ್ಪಗಳ ಪ್ರತಿಮಾ ಲಕ್ಷಣಗಳನ್ನು ಚರ್ಚಿಸಿದ್ದಾರಲ್ಲದೇ, ಅಗತ್ಯವಿರುವ ಛಾಯಾಚಿತ್ರಗಳನ್ನು ಸಂಗ್ರಹಿಸಿದ್ದಾರೆ.[೬೦] ಆಕಾಶದೇವ ದೊಡ್ಡಮನಿ ರವರು 'ಅಮ್ಮಿನಬಾವಿಯ ಪಂಚಗ್ರಹ ಹಿರೇಮಠ ಮತ್ತು ಜೈನ ಬಸದಿಯ ಒಂದು ಸಮೀಕ್ಷೆ'ಯಲ್ಲಿ ಅಮ್ಮಿನಬಾವಿಯ ಐತಿಹಾಸಿಕ ಮತ್ತು ಭೌಗೋಳಿಕ ಹಿನ್ನೆಲೆಯೊಂದಿಗೆ ಅಲ್ಲಿರುವ ಪಂಚಗ್ರಹ ಹಿರೇಮಠದ ಪರಂಪರೆಯನ್ನು ಮತ್ತು ಅಲ್ಲಿರುವ ಜೈನ ಬಸದಿಯ ವಾಸ್ತು ಮತ್ತು ಮೂರ್ತಿಶಿಲ್ಪಗಳ ಬಗ್ಗೆ ಸಂಕ್ಷಿಪ್ತವಾಗಿ ವಿವರಿಸಿದ್ದಾರೆ.[೬೧] ಬಸವರಾಜ ದೇ.ತಳವಾರ ರವರು 'ಧಾರವಾಡ ತಾಲೂಕಿನ ಹತ್ತು ಹಳ್ಳಿಗಳ ಸಮೀಕ್ಷೆ' ಕಿರು ಪ್ರಬಂಧದಲ್ಲಿ ಧಾರವಾಡ ಪ್ರದೇಶದ ಭೌಗೋಳಿಕ ಹಿನ್ನೆಲೆಯೊಂದಿಗೆ ಅಲ್ಲಿರುವ ದೇವಾಲಯಗಳ ಮತ್ತು ಮೂರ್ತಿಶಿಲ್ಪಗಳ ಪ್ರತಿಮಾ ಲಕ್ಷಣಗಳ ಬಗ್ಗೆ ಸಂಕ್ಷಿಪ್ತವಾಗಿ ಮಾಹಿತಿ ನೀಡಿದ್ದಾರೆ.[೬೨]

ಶಿವಕುಮಾರಯ್ಯ ಎಸ್.ಶಾಂತಾಪೂರಮಠ ರವರು 'ಉಪನಿರ್ದೇಶಕರ ಕಛೇರಿ ಪ್ರಾಚ್ಯವಸ್ತು ಸಂಗ್ರಹಾಲಯ ಧಾರವಾಡ ಮತ್ತು ಸುತ್ತಮುತ್ತಲಿನ ಪ್ರೇಕ್ಷಣೀಯ ಸ್ಥಳಗಳ ಪರಿಚಯ' ಪ್ರಬಂಧದಲ್ಲಿ ಧಾರವಾಡ ಜಿಲ್ಲೆಗೆ ಸಂಬಂಧಿಸಿದ ಶಾಸನಗಳು, ಮೂರ್ತಿಶಿಲ್ಪಗಳು ಮತ್ತು ದೇವಾಲಯಗಳ ಪ್ರಮುಖ ಭಾಗಗಳನ್ನು ಒಂದೆಡೆ ಸೆರೆ ಹಿಡಿದಿದ್ದು, ಅವುಗಳ ದಾಖಲೆಗಳೊಂದಿಗೆ ಛಾಯಾಚಿತ್ರಗಳನ್ನು ನಿಡಿದ್ದಾರೆ.[೬೩] ವೀಣಾ ತಿಪ್ಪಣ್ಣನವರ ರವರು 'ನವಲಗುಂದ ಪ್ರದೇಶದ ಶಿಲ್ಪಕಲೆ ಒಂದು ವ್ಯಾಸಂಗ' ಸಂಪ್ರಬಂಧದಲ್ಲಿ ನವಲಗುಂದ ಪ್ರದೇಶದ ಭೌಗೋಳಿಕ ಹಿನ್ನೆಲೆಯೊಂದಿಗೆ, ಶಾಸನಗಳನ್ನು ಆಧರಿಸಿ ಅಲ್ಲಿನ ರಾಜಕೀಯ, ಸಾಮಾಜಿಕ, ಧಾರ್ಮಿಕ, ಶೈಕ್ಷಣಿಕ ಸ್ಥಿತಿಗತಿಗಳನ್ನು ಮತ್ತು ಆ ಪ್ರದೇಶಗಳಲ್ಲಿರುವ ದೇವಾಲಯ ಮತ್ತು ಮೂರ್ತಿಶಿಲ್ಪಗಳ ಪ್ರತಿಮಾ ಲಕ್ಷಣಗಳನ್ನು ಸಂಕ್ಷಿಪ್ತವಾಗಿ ವಿವರಿಸಿದ್ದಾರೆ.[೬೪]

೧.೩.೩. ಸಂಶೋಧನಾ ಲೇಖನಗಳು

ಜೋಶಿ ಆರ್.ಆರ್. ರವರು 'ಧಾರವಾಡದ ವಿದ್ಯಾಗಿರಿಯಲ್ಲೊಂದು ಮೈಲಾರ ದೇಗುಲ:ಒಂದು ಅಧ್ಯಯನ', ಲೇಖನದಲ್ಲಿ ಮೈಲಾರ ದೇವಾಲಯದ ವಿವಿಧ ಹೆಸರುಗಳು, ಪ್ರಮುಖ ಸ್ಥಳಗಳು ಮತ್ತು ಸಂಪ್ರದಾಯಗಳನ್ನು ಜೊತೆಗೆ ದೇವಾಲಯದ ವಾಸ್ತು ಮತ್ತು ಮೂರ್ತಿಶಿಲ್ಪ, ಶಾಸನಗಳ

ಮಾಹಿತಿಯನ್ನು ನೀಡಿದ್ದಾರೆ.[೬೫] ಜೋಶಿ ಎಸ್.ಕೆ ರವರು 'ಕಲಘಟಗಿ ಪ್ರದೇಶದ ಪುರಾತತ್ವ ಹಾಗೂ ಇತಿಹಾಸ' ಲೇಖನದಲ್ಲಿ ಕಲಘಟಗಿ ಪ್ರದೇಶದ ಸಂಕ್ಷಿಪ್ತ ಇತಿಹಾಸ ಜೊತೆಗೆ ಕಲಘಟಗಿ, ತಂಬೂರು, ಕಂದಲಿ, ಕಾಮಧೇನು, ಮಿಶ್ರಿಕೋಟೆ, ಸಂಗಮೇಶ್ವರ, ಗಂಜೀಗಟ್ಟಿ, ಹುನಸಿಕಟ್ಟಿ ಇನ್ನೂ ಮುಂತಾದ ಗ್ರಾಮಗಳಲ್ಲಿ ದೊರೆಯುವ ಶಾಸನಗಳು, ದೇವಾಲಯಗಳ ಮತ್ತು ಮೂರ್ತಿಶಿಲ್ಪಗಳ ಕುರಿತು ವಿವರಿಸಿದ್ದಾರೆ.[೬೬] ಚಲವಾದಿ ಎಸ್.ಜಿ. ರವರು 'ಮಾದನಬಾವಿ ಗ್ರಾಮದಲ್ಲಿ ಸುಂದರ ಶಿಲ್ಪ ಹಾಗೂ ಸುತ್ತಮುತ್ತಲಿನ ಪ್ರಾಚ್ಯಾವಶೇಷಗಳು' ಲೇಖನದಲ್ಲಿ ೧೩ನೇ ಶತಮಾನದ ಒಬ್ಬ ಅಧಿಕಾರಿಯ ಶಿಲ್ಪವೆಂದು ಗುರುತಿಸಿದ್ದು, ಇದನ್ನು ಶಿಷ್ಠ ಶಿಲೆಯಿಂದ ತಯಾರಿಸಿದ್ದಲ್ಲದೇ ಇದರ ಪ್ರತಿಮಾ ಲಕ್ಷಣ ಜೊತೆಗೆ ಸುತ್ತಮುತ್ತಲಿನ ಭಗ್ನಗೊಂಡಿರುವ ಮೂರ್ತಿಶಿಲ್ಪಗಳ ಬಗ್ಗೆ ಚರ್ಚಿಸಿದ್ದಾರೆ.[೬೭] ವಿರುಪಾಕ್ಷಗೌಡ ಪಾಟೀಲ್ ರವರು 'ಧಾರವಾಡ ತಾಲೂಕಿನ ಶಾಸನೋಕ್ತ ಸ್ಥಳನಾಮಗಳು' ಲೇಖನದಲ್ಲಿ ಪಾಮರ ನಿಷ್ಪತ್ತಿ, ಪಂಡಿತ ನಿಷ್ಪತ್ತಿ ಹಾಗೂ ನಿಜ ನಿಷ್ಪತ್ತಿಯ ಜೊತೆಗೆ ನಿಸರ್ಗವಾಚಿ ಸ್ಥಳನಾಮಗಳಲ್ಲಿ ನರೇಂದ್ರ, ನಿಗದಿ, ಮನಗುಂಡಿ, ಗರಗ, ಬಾವಿಹಾಳ, ನುಗ್ಗಿಕೇರಿ, ದೇವರ ಹುಬ್ಬಳ್ಳಿ, ನೀರಸಾಗರ ಇನ್ನೂ ಮುಂತಾದ ಸ್ಥಳಗಳ ಪದ ನಿಷ್ಪತ್ತಿ ಕುರಿತು ಚರ್ಚಿಸಿದ್ದಾರೆ. ಸಾಂಸ್ಕೃತಿಕವಾಚಿ ಸ್ಥಳನಾಮಗಳಲ್ಲಿ ಅಮ್ಮಿನಬಾವಿ, ಸಿದ್ದಾಪೂರ, ಧಾರವಾಡ, ಅಳ್ನಾವರ, ಕನಕೂರ, ಸತ್ತೂರು, ಕೌಲಗೇರಿ, ಹೆಬ್ಬಳ್ಳಿ ಸ್ಥಳಗಳನ್ನು ಕುರಿತು ಶಾಸನುಲ್ಲೇಖವಾಗಿ ಚರ್ಚಿಸಿದ್ದಾರೆ.[೬೮]

ಸಾವಂತ ಎಂ.ವೈ.ರವರ 'ಹುಬ್ಬಳ್ಳಿ: ಮರಾಠಾ ಕಾಲದಲ್ಲಿಯ ಒಂದು ವ್ಯಾಪಾರ ಕೇಂದ್ರ' ಲೇಖನದಲ್ಲಿ ಪುಣೆಯ ಪತ್ರಾಗಾರದಲ್ಲಿರುವ ಮೋಡಿ ದಾಖಲೆಗಳಿಂದ ಪ್ರಮುಖ ಪೇಟೆಗಳು, ದಿನಬಳಕೆ ಮತ್ತು ಸಾಂಬಾರ ಪದಾರ್ಥಗಳ ಬಗ್ಗೆ, ಪ್ರಮುಖ ಸ್ಥಳಗಳು ಜೊತೆಗೆ ಅದರ ಮೇಲಿನ ವಿವಿಧ ರೀತಿಯ ತೆರಿಗೆಗಳು, ತೂಕ ಮತ್ತು ಮಾಪನಗಳ ವಿವರಣೆಯನ್ನು ನೀಡಿದ್ದಾರೆ.[೬೯] ನಾಡಕರ್ಣಿ. ಜಿ.ಪಿ.ರವರ 'ಹೆಮ್ಮೆಯನಗರ ಹುಬ್ಬಳ್ಳಿ' ಲೇಖನದಲ್ಲಿ ಕರ್ಕಿಯವರು ಬರೆದ ಹಚ್ಚೇವು ಕನ್ನಡದ ದೀಪ ಕವನದೊಂದಿಗೆ ಪ್ರಾರಂಭಿಸಿ, ಇಲ್ಲಿನ ಪ್ರಮುಖ ವಿದ್ವಾಂಸರನ್ನು, ಪತ್ರಿಕೋದ್ಯಮ, ಸಾಹಿತ್ಯ ರಚನೆಗೆ ಕೊಡಮಾಡಿದ ಹಲವಾರು ಕವಿ. ಲೇಖಕರನ್ನು ಮತ್ತು ಅವರ ಕೃತಿಗಳನ್ನು ಚರ್ಚಿಸಿದ್ದಾರೆ. ಹಾಗೆಯೇ ಹುಬ್ಬಳ್ಳಿಯ ಪ್ರಾಚೀನತೆ ಪದನಿಷ್ಪತ್ತಿ ಮತ್ತು ಇಲ್ಲಿನ ಪ್ರಮುಖ ದೇವಾಲಯ, ಚರ್ಚ್ ಮತ್ತು ಮಸೀದಿಗಳ ಬಗ್ಗೆ ಉಲ್ಲೇಖಿಸಿದ್ದಾರೆ.[೭೦] ಸುಂದರ ಅ. ರವರು 'ಧಾರವಾಡ ನಗರ:ಸಾಂಸ್ಕೃತಿಕ ಪರಂಪರೆ' ಲೇಖನದಲ್ಲಿ ಧಾರವಾಡ ಇತಿಹಾಸ ಅದರ ಪದನಿಷ್ಪತ್ತಿ, ಪ್ರಾಚೀನ ದೇವಾಲಯಗಳಾದ ದುರ್ಗಾ ದೇವಾಲಯ, ಕಲಘಟಗಿಯ ಸೋಮೇಶ್ವರ, ಅಮರಗೋಳದ ಬನಶಂಕರಿ ದೇವಾಲಯದ ಬಗ್ಗೆ, ಅಲ್ಲಿರುವ ಅಗ್ರಹಾರಗಳು, ವೀರಗಲ್ಲುಗಳು ಮತ್ತು ಕೋಟೆಗಳ ಸಂಕ್ಷಿಪ್ತ ಮಾಹಿತಿಯನ್ನು ನೀಡಿದ್ದಾರೆ.[೭೧] ಶ್ರೀನಿವಾಸ ಪಾಡಿಗಾರ ರವರು 'ಪ್ರಾಚೀನ ಇತಿಹಾಸ ಮತ್ತು ಸಂಸ್ಕೃತಿ' ಲೇಖನದಲ್ಲಿ ಧಾರವಾಡ ಜಿಲ್ಲೆಗೆ ಒಳಪಡುವ ಹದಿನಾರು ತಾಲೂಕುಗಳನ್ನು ಒಳಗೊಂಡು ಅಲ್ಲಿನ ಇತಿಹಾಸ ಪೂರ್ವಕಾಲದಲ್ಲಿನ ಪ್ರಮುಖ ಸ್ಥಳಗಳು, ಉಪಕರಣಗಳ ಬಗ್ಗೆ ಮತ್ತು ಇತಿಹಾಸ ಕಾಲದ ಮೌರ್ಯ, ಶಾತವಾಹನ, ಕದಂಬ, ಬಾದಾಮಿ ಚಲುಕ್ಯರು,

ರಾಷ್ಟ್ರಕೂಟರು, ಕಲ್ಯಾಣ ಚಾಲುಕ್ಯ, ಕಲಚೂರಿಗಳು, ಹೊಯ್ಸಳರು, ಇತರೆ ರಾಜಮನೆತನಗಳ ದೇವಾಲಯ ಮತ್ತು ವಾಸ್ತುಶಿಲ್ಪಕ್ಕೆ ನೀಡಿದ ಕೊಡುಗೆಯನ್ನು ಚರ್ಚಿಸಿದ್ದಾರೆ.[೨೨]

ರಘುನಾಥಭಟ್ ಎಚ್.ಆರ್. ರವರು 'ವಾಸ್ತು ಶಿಲ್ಪ ಕಲಾವೈಶಿಷ್ಟ್ಯ' ಲೇಖನದಲ್ಲಿ ಈ ಪ್ರದೇಶದಲ್ಲಿನ ಏಕಕೂಟ, ದ್ವಿಕೂಟ ಮತ್ತು ತ್ರಿಕೂಟ ದೇವಾಲಯಗಳ ಬಗ್ಗೆ ಬೌದ್ಧಮೂರ್ತಿಶಿಲ್ಪ, ಶೈವ, ವೈಷ್ಣವ, ಜೈನ, ಶಾಕ್ತಮೂರ್ತಿ ಶಿಲ್ಪಗಳ ಬಗ್ಗೆ ವಿವರಿಸಿದ್ದಲ್ಲದೇ, ನಾಗರ, ದ್ರಾವಿಡ, ವೇಸರ, ಕದಂಬನಾಗರ ಶೈಲಿಗಳ ಬಗ್ಗೆ ಚರ್ಚಿಸಿದ್ದಾರೆ.[೨೩] ಶಾಂತಕುಮಾರಿ ಎಸ್.ಎಲ್ ರವರು 'ತಂಬೂರು ಶಾಸನ' ಲೇಖನದಲ್ಲಿ ನಂದಿಕಟ್ಟಿ ಸಾಹೇಬ್ ಎನ್ನುವವರ ಹೊಲದಲ್ಲಿ ೬೨ ಸಾಲಿನಿಂದ ಕೂಡಿದ ಶಾಸನವಿದ್ದು, ತೃಟಿತವಾಗಿದ್ದಲ್ಲದೇ ಮಲ್ಲಪ್ಪ ದಂಡನಾಯಕ ಆಳ್ವಿಕೆಯ ಬಗ್ಗೆ, ಮತ್ತು ಅಧಿಕಾರಿಯ ಕುರಿತು, ಧಾರವಾಡ ಹೆಸರು, ಒಂದುಮಠ ಮತ್ತು ಗುರುಪರಂಪರೆಯನ್ನು ಕುರಿತಾಗಿ ವಿವರಿಸಿದ್ದಾರೆ.[೨೪]ಸಂಗಮೇಶ್ವರ ಹಂಡಿಗೆ ರವರು 'ನವಿಲುಗುಂದ–ಒಂದು ಸಾಂಸ್ಕೃತಿಕ ನೋಟ' ದಲ್ಲಿ ಶಾಸನುಲ್ಲೇಖಿತ ನವಿಲುಗುಂದದ ಪದನಿಷ್ಪತ್ತಿ ಮತ್ತು ಐತಿಹಾಸಿಕ ಹಿನ್ನೆಲೆಯನ್ನು ಅದರಲ್ಲಿ ದೇವಾಲಯ, ಮಠಗಳ ಕುರಿತು ವಿವರಿಸಿದ್ದಾರೆ.[೨೫] ಹಳ್ಳಿಕೇರಿ ಎಫ್.ಟಿ ರವರು 'ನವಲಗುಂದ ತಾಲೂಕಿನ ಶಾಸನಗಳು' ಲೇಖನದಲ್ಲಿ ನವಲಗುಂದ ಸ್ಥಳದ ಪದನಿಷ್ಪತ್ತಿ ಜೊತೆಗೆ ೨೨ ಗ್ರಾಮಗಳಲ್ಲಿ ೭೧ ಶಾಸನಗಳನ್ನು ಆಧಾರವಾಗಿಟ್ಟುಕೊಂಡು ಅಲ್ಲಿನ ರಾಜಕೀಯ, ಸಾಮಾಜಿಕ, ಧಾರ್ಮಿಕ, ಶೈಕ್ಷಣಿಕ ವಿಚಾರಗಳ ಬಗ್ಗೆ, ಎಂಟು ಸ್ಥಳಗಳ ಶಾಸನಗಳಾಧಾರಿತ ಗ್ರಾಮಗಳ ಬಗ್ಗೆ ಚರ್ಚಿಸಿದ್ದಾರೆ.[೨೬]

ಷಡಕ್ಷರಯ್ಯ ಆರ್.ಎಂ ಅವರು 'ನವಲಗುಂದ ತಾಲೂಕಿನ ದೇವಾಲಯ ಶಿಲ್ಪಗಳ ವೈವಿಧ್ಯ' ಲೇಖನದಲ್ಲಿ ಸುಮಾರು ೧೭ ಗ್ರಾಮಗಳಲ್ಲಿ ದೊರೆತ ಪ್ರಮುಖ ದೇವಾಲಯಗಳು, ಮಠಗಳು, ಬಸದಿಗಳು ಮತ್ತು ಮೂರ್ತಿಶಿಲ್ಪಗಳು ಹಾಗೂ ಶಾಸನಗಳ ಸಂಕ್ಷಿಪ್ತ ಮಾಹಿತಿಯನ್ನು ನೀಡಿದ್ದಾರೆ.[೨೭] ನಾಗನೂರು ಎ.ವ್ಹಿ. ಮತ್ತು ಹಂಜೆ ಅಪ್ಪಣ್ಣ ಎನ್ ಅವರ 'ಅದರಗುಂಚಿ ದೊಡ್ಡಪ್ಪನ ಒಂದು ತೀರ್ಥಂಕರ ಶಿಲ್ಪ ಮತ್ತು ಶಾಸನ' ದಲ್ಲಿ ದೊಡ್ಡಪ್ಪನ ಬಗ್ಗೆ ಸ್ಥಳೀಯ ಚರಿತ್ರೆ, ಜಾನಪದ ಗೀತೆಯೊಂದಿಗೆ ಐತಿಹ್ಯ ಮತ್ತು ಎರಡು ಸಾಲಿನ ಶಾಸನವಿದೆ. ಇವು ಕನ್ನಡ ಲಿಪಿ ಮತ್ತು ಸಂಸ್ಕೃತ ಭಾಷೆಯಲ್ಲಿದ್ದು, ಮೈಳಾಪಗಣ ಮತ್ತು ಜಿನಸೇನ ಮುನಿಯ ಉಲ್ಲೇಖಗಳನ್ನು ವಿವರಿಸಿದ್ದಾರೆ.[೨೮] ಶಿರಗುಪ್ಪಿಯ ಕೃಷ್ಣದೇವರಾಯನ ಶಾಸನ' ಲೇಖನದಲ್ಲಿ ಕೃಷ್ಣದೇವರಾಯನ ಆಳ್ವಿಕೆಯ ಸಂದರ್ಭದಲ್ಲಿದ್ದ ತಿಮ್ಮಪ್ಪ ನಾಯಕನ ಅಧಿಕಾರಿ ತಿರುಮಲ್ಲಪ್ಪನ ಪುಣ್ಯಾರ್ಥವಾಗಿ ಆತನ ಅಳಿಯ ದೇವಾಲಯವನ್ನು ಕಟ್ಟಿಸಿದ ಬಗ್ಗೆ ಚರ್ಚಿಸಿದ್ದಾರೆ.[೨೯] ಅದೇ ರೀತಿ 'ಅಣ್ಣಿಗೇರಿಯ ಎರಡು ಜೈನಶಿಲಾ ಫಲಕ ಶಾಸನಗಳು' ಲೇಖನದಲ್ಲಿ ಮೂರ್ತಿಯ ಪಾದಪೀಠದಲ್ಲಿ ಮೂರು ಸಾಲಿನ ಶಾಸನವಿದೆ. ಈ ತೀರ್ಥಂಕರನ ಮೂರ್ತಿಶಿಲ್ಪಗಳ ಪ್ರತಿಮಾ ಲಕ್ಷಣಗಳನ್ನು ಸಂಕ್ಷಿಪ್ತವಾಗಿ ವಿವರಿಸಿದ್ದಾರೆ.[೩೦] ಗುರುವ ಆರ್.ಎನ್ ರವರು 'ಗೋವೆಯ ಕದಂಬ ಜಯಕೇಶಿ ಪೆರ್ಮಾಡಿದೇವನ ಕ್ರಿ.ಶ. ೧೧೨೫, ೧೧೪೫ ಮತ್ತು ೧೧೪೭ರಲ್ಲಿನ ಚಾಲುಕ್ಯ ಚಕ್ರವರ್ತಿ ೬ನೇ ವಿಕ್ರಮಾದಿತ್ಯನ ಆಳ್ವಿಕೆ, ವಂಶಾವಳಿ, ತಿಥಿಗಳು, ಭೌಗೋಳಿಕ ಉಲ್ಲೇಖಗಳು, ತೂಕ, ಅಳತೆ ಜೊತೆಗೆ ಸಾಹಿತ್ಯಿಕ ಅಂಶಗಳ ಬಗ್ಗೆ ವಿವರಿಸಿದ್ದಾರೆ.[೩೧]

ಗುರುವ ಆರ್.ಎನ್ ರವರು 'ತಂಬೂರ ಶಾಸನಗಳು' ಲೇಖನದಲ್ಲಿ ಗೋವೆ ಕದಂಬ ಮನೆತನದ ಜಯಕೇಶಿಯ ಕ್ರಿ.ಶ.೧೧೪೬ರ ಶಾಸನದಲ್ಲಿ ಗೋವೆ ಕದಂಬರ ವಂಶಾವಳಿ, ಜಯಕೇಶಿಯ ಆಳ್ವಿಕೆ, ಮಾದಿರಾಜನ ಪ್ರಶಸ್ತಿ ಹಾಗೂ ವರ್ಣನೆಯನ್ನು ಸಂಕ್ಷಿಪ್ತವಾಗಿ ವಿವರಿಸಿದ್ದಾರೆ.[೮೨] ಹನುಮಾಕ್ಷಿ ಗೋಗಿ ರವರು 'ಅಣ್ಣಿಗೇರಿಯಲ್ಲಿ ದೊರೆತ ಹೊಸ ಶಾಸನಗಳು' ಲೇಖನದಲ್ಲಿ ಒಟ್ಟು ಆರು ಶಾಸನಗಳನ್ನು ಗುರುತಿಸಿದ್ದು, ಒಂದು ಹುಚ್ಚಪ್ಪಯ್ಯನ ಮಠದ ಪಕ್ಕದಲ್ಲಿ, ಬಸವಣ್ಣ ದೇವರಗುಡಿ ಮುಂದೆ, ತೋಂಟದಾರ್ಯಮಠದ ಕಂಬದಲ್ಲಿ ಎರಡು, ಅಮೃತೇಶ್ವರ ಗುಡಿಯ ಪ್ರಾಕಾರ ಮತ್ತು ವೀರಭದ್ರ ದೇವಾಲಯದ ಕಂಬದಲ್ಲಿ ದೊರೆತಿದ್ದು, ಇವುಗಳಲ್ಲಿನ ರಾಜಮನೆತನಗಳು, ಅವರುಗಳ ವಂಶಾವಳಿ, ದೇವಾಲಯ ಕಟ್ಟಿಸಿದ ಉಲ್ಲೇಖ ಮತ್ತು ಅನೇಕ ದಾನದತ್ತಿಗಳ ಬಗ್ಗೆ ವಿವರಿಸಿದ್ದಾರೆ.[೮೩] ಶ್ರೀನಿವಾಸ ಪಾಡಿಗಾರ ರವರು 'ಇನ್ಸ್‌ಕ್ರೈಬಡ್ ಜೈನ ಇಮೇಜಸ್ ಫ್ರಾಮ್ ಮುತ್ತಗಿ ಡಿಸ್ಟ್ರಿಕ್ಟ್ ಧಾರವಾಡ' ಇನ್‌ಸ್ಕ್ರೈಬ್ಡ, ಲೇಖನದಲ್ಲಿ ೨೩ನೇ ತೀರ್ಥಂಕರ ಪಾರ್ಶ್ವನಾಥ ಮತ್ತು ೨೨ನೇ ತೀರ್ಥಂಕರ ನೇಮಿನಾಥನ ಪಾದಪೀಠದಲ್ಲಿರುವ ಎರಡು ಶಾಸನಗಳನ್ನು ಮತ್ತು ಮೂರ್ತಿಶಿಲ್ಪಗಳ ಪ್ರತಿಮಾ ಲಕ್ಷಣಗಳ ವಿವರಿಸಿದ್ದಾರೆ.[೮೪] ಚಂದ್ರಶೇಖರ ಹೆಚ್ ರವರು 'ಅಣ್ಣಿಗೇರಿಯ ಪುರದವೀರಭದ್ರ ದೇವಾಲಯದ ವಾಸ್ತು ಮತ್ತು ಮೂರ್ತಿಶಿಲ್ಪವನ್ನು ಜೊತೆಗೆ ದೇವಾಲಯದ ತಲನಕ್ಷೆಯೊಂದಿಗೆ ಛಾಯಾಚಿತ್ರಗಳನ್ನು ವಿವರಿಸಿದ್ದಾರೆ.[೮೫] ಷಡಕ್ಷರಯ್ಯ ರು.ಮ, ಜಯಮ್ಮ ಬಿ. ರವರು 'ಕಲಘಟಗಿ ಪ್ರದೇಶದಲ್ಲಿ ವಿಜಯನಗರ ಮತ್ತು ವಿಜಯನಗರೋತ್ತರ ಕಾಲದ ಶಿಲ್ಪಗಳು' ಎಂಬುದರಲ್ಲಿ ಧಾರ್ಮಿಕ ಶಿಲ್ಪಗಳಾದ ಶಿವ, ವೀರಭದ್ರನ ಶಿಲ್ಪಗಳನ್ನು ದುಮ್ಮವಾಡ, ಗಂಜೀಗಟ್ಟಿ, ಜಿ.ಬಸವನಕೊಪ್ಪ ಗ್ರಾಮದಲ್ಲಿ ಮತ್ತು ಕೂಡಲಗಿಯ ಗ್ರಾಮದಲ್ಲಿ ವೈಷ್ಣವಶಿಲ್ಪವನ್ನು ಜೊತೆಗೆ ಲೌಕಿಕ ಶಿಲ್ಪಗಳಾದ ಮೂರು ವೀರಗಲ್ಲು, ಎರಡು ವೀರಸತಿಗಲ್ಲು ಮತ್ತು ಐದು ಮಹಾಸತಿ ಶಿಲ್ಪಗಳನ್ನು ಬೇಗೂರು, ಹಿರೇಹೊನ್ನಳ್ಳಿ, ಮಸಳೀಕಟ್ಟಿ, ಸೋಮನಕೊಪ್ಪ, ದ್ಯಾವನಕೊಂಡ ಗ್ರಾಮಗಳಲ್ಲಿ ದೊರೆಯುವ ಸ್ಮಾರಕಗಳ ಲಕ್ಷಣಗಳನ್ನು ವಿವರಿಸಿದ್ದಾರೆ.[೮೬] ಶ್ರೀನಿವಾಸ ಪಾಡಿಗಾರ, ಮತ್ತು ಅಪ್ಪಣ್ಣ ಎನ್.ಹಂಜೆ ರವರು 'ಧಾರವಾಡದ ಜೈನ ಶಿಲಾಪೀಠ ಶಾಸನ' ಲೇಖನದಲ್ಲಿ, ಬೇಲೂರ ಗ್ರಾಮದಲ್ಲಿರುವ ಈ ಶಾಸನದಲ್ಲಿ ಹೇಮವತಿ ಕಂತಿ ಎಂಬುವಳು ಚಂದ್ರನಾಥ ತೀರ್ಥಂಕರರನ ಶಿಲ್ಪವನ್ನು ಪ್ರತಿಷ್ಠಾಪಿಸಿದುದರ ಬಗ್ಗೆ ವಿಷಯವನ್ನು ಚರ್ಚಿಸಿದ್ದಾರೆ.[೮೭]

ಜಯಮ್ಮ ಬಿ. ರವರು 'ಧಾರವಾಡ ಜಿಲ್ಲೆಯ ಗಜಲಕ್ಷ್ಮಿ ಶಿಲ್ಪಗಳು' ಲೇಖನದಲ್ಲಿ ಒಟ್ಟು ಐದು ತಾಲೂಕಿನ ಸುಮಾರು ೨೫-೩೦ ಸ್ಮಾರಕಶಿಲ್ಪಗಳ ಬಗ್ಗೆ ಚರ್ಚಿಸಿದ್ದು, ಅದರಲ್ಲಿ ಮೂರು ರೀತಿಯ ವಿಭಿನ್ನ ಗಜಲಕ್ಷ್ಮಿ ಮೂರ್ತಿಶಿಲ್ಪಗಳ ಬಗ್ಗೆ ಚರ್ಚಿಸಿದ್ದಾರೆ.[೮೮] ಷಡಕ್ಷರಯ್ಯ ರು.ಮ ರವರು 'ಧಾರವಾಡ ಜಿಲ್ಲೆಯಲ್ಲಿ ದೊರೆತ ರಾಷ್ಟ್ರಕೂಟರ ಕಾಲದ ಶಿಲ್ಪ-ದೇವಾಲಯಗಳು' ಲೇಖನದಲ್ಲಿ ಗುಡಗೇರಿಯಲ್ಲಿನ ಗೋಸಾಸ ಕಂಬಗಳ ಕುರಿತು ವಿವರಿಸಿದ್ದಾರೆ.[೮೯] ಮಲ್ಲಿಗವಾಡ ಕೆ.ಸಿ. ರವರು 'ಮುತ್ತಗಿಯ ಪ್ರಾಚ್ಯಾವಶೇಷಗಳು' ಲೇಖನದಲ್ಲಿ ಶ್ರೀರಾಮಲಿಂಗೇಶ್ವರ, ಕಲ್ಮೇಶ್ವರ ದೇವಾಲಯ ಮತ್ತು ಗಣಪತಿ, ಸಪ್ತಮಾತೃಕೆ, ಜೈನ ತೀರ್ಥಂಕರರಾದ ನೇಮಿನಾಥ, ಪಾರ್ಶ್ವನಾಥ ಶಿಲ್ಪಗಳನ್ನು

ಚರ್ಚಿಸಿದ್ದಾರೆ.[೯೦] ಜಯಮ್ಮ ಬಿ. ರವರು 'ಹುಬ್ಬಳ್ಳಿ ಮತ್ತು ಕುಂದಗೋಳ ತಾಲೂಕುಗಳ ಅಪರೂಪದ ಗಜಲಕ್ಷ್ಮಿ ಶಿಲ್ಪಗಳು' ಎನ್ನುವುದರಲ್ಲಿ ಗಜಲಕ್ಷ್ಮಿ ಪದದ ಬಗ್ಗೆ ಹಾಗೂ ಕೋಳಿವಾಡ, ಛಬ್ಬಿ, ಶಿರೂರು ಪ್ರದೇಶಗಳಲ್ಲಿನ ಶಿಲ್ಪಗಳನ್ನು ಚರ್ಚಿಸಿದ್ದಾರೆ.[೯೧] ಷಡಕ್ಷರಯ್ಯ ರು.ಮ ರವರು 'ಧಾರವಾಡ ಜಿಲ್ಲೆಯಲ್ಲಿ ಕಂಡು ಬಂದ ಹೆಚ್ಚಿನ ದೇವಾಲಯಗಳು, ಶಿಲ್ಪಗಳು, ಶಾಸನಗಳು' ಲೇಖನದಲ್ಲಿ ಧಾರವಾಡ ತಾಲೂಕಿನಲ್ಲಿ ದೊರೆತ ನರೇಂದ್ರ ಶಿಲಾಶಾಸನ ಮತ್ತು ಇಂಗಳಗಿ ಹೊಸ ಶಾಸನಗಳ ವಿವರಣೆಯನ್ನು ನೀಡಿದ್ದಾರೆ.[೯೨]

ಮಲ್ಲಿಗವಾಡ ಕೆ.ಸಿ. ರವರು 'ಅಪರೂಪದ ಶ್ರೀಕಲ್ಮೇಶ್ವರ ದೇವಾಲಯ(ಕಾಮಧೇನು)' ಲೇಖನದಲ್ಲಿ ಕಲ್ಮೇಶ್ವರ ದೇವಾಲಯದ ಶಿವಲಿಂಗ, ಗಣೇಶ, ಸಪ್ತಮಾತೃಕೆ, ಮಹಿಷಮರ್ಧಿನಿ ಇತರೆ ಶಿಲ್ಪಗಳ ಸಂಕ್ಷಿಪ್ತ ಮಾಹಿತಿಯನ್ನು ನೀಡಿದ್ದಾರೆ.[೯೩] ಮಲ್ಲಿಗವಾಡ ಕೆ.ಸಿ.ರವರು 'ಉಮಚಗಿ ಗ್ರಾಮದ ಪ್ರಾಚ್ಯಾವಶೇಷಗಳು' ಲೇಖನದಲ್ಲಿ ಶ್ರೀ ನಾರಾಯಣ ದೇವರಗುಡಿಯ ಪ್ರಾಚೀನತೆಯನ್ನು, ನಾಲ್ಕು ವೀರ ಮಹಾಸತಿ ದುರ್ಗಾ ದೇವಾಲಯದ ಬಗ್ಗೆ ಚರ್ಚಿಸಿದ್ದಾರೆ.[೯೪] ವಿದ್ಯಾ ಎಸ್.ಹಡಗಲಿ ರವರು 'ಹುಬ್ಬಳ್ಳಿ ಗೋಕುಲದಲ್ಲಿ ಕಂಡು ಬಂದ ಶಾಸನವುಳ್ಳ ವೀರಗಲ್ಲು' ಲೇಖನದಲ್ಲಿ ಉಣಕಲ್ ಗ್ರಾಮದ ಜೊತೆಗೆ ಶಿಲ್ಪದ ಬಗ್ಗೆ ಚರ್ಚಿಸಿದ್ದಾರೆ.[೯೫]

ಮಲ್ಲಿಗವಾಡ ಕೆ.ಸಿ ರವರು 'ರೊಟ್ಟಿಗವಾಡ ಕಲಾ ನೈಪುಣ್ಯತೆಯ ಶ್ರೀಕಲ್ಮೇಶ್ವರ ದೇವಾಲಯ' ಎಂಬುದರಲ್ಲಿ ಕಲ್ಮೇಶ್ವರ ದೇವಾಲಯದ ಐತಿಹ್ಯಗಳೊಂದಿಗೆ ಗಜಲಕ್ಷ್ಮಿ ವಿಗ್ರಹ, ಕಾಮಧೇನು ವಿಗ್ರಹ, ದುರ್ಗಾ, ನಾಗರೇಖ, ಶ್ರೀಮಾರುತಿ, ನಂದಿ, ವೀರಭದ್ರ, ಗಣೇಶ ಇತರೆ ಮೂರ್ತಿಶಿಲ್ಪಗಳ ಬಗ್ಗೆ ಸಂಕ್ಷಿಪ್ತ ಮಾಹಿತಿಯನ್ನು ನೀಡಿದ್ದಾರೆ.[೯೬] ಶ್ರೀನಿವಾಸ ಪಾಡಿಗಾರ ಮತ್ತು ಅಪ್ಪಣ್ಣ ಎನ್.ಹಂಜೆ ರವರು 'ಮನಗುಂಡಿ ಗ್ರಾಮದಲ್ಲಿ ದೊರೆತ ಗೋವೆ ಕದಂಬ ಮನೆತನದ ಇಮ್ಮಡಿ ಚಟ್ಟಯ್ಯದೇವ, ಶಾಸನದಲ್ಲಿ ಒಂದನೆಯ ಜಯಕೇಶಿ ಮತ್ತು ಮುಮ್ಮಡಿ ಗೂವಲದೇವ ಅರಸರನ್ನು ಪ್ರಶಸ್ತಿ ಮತ್ತು ಅವರ ಸಾಧನೆಗಳನ್ನು ಪರಿಚಯಿಸಿದ್ದಾರೆ.[೯೭] ಶ್ರೀನಿವಾಸ ಪಾಡಿಗಾರ ಮತ್ತು ಅಪ್ಪಣ್ಣ ಎನ್.ಹಂಜೆ ರವರು 'ಪಡೆಸೂರ ತೀರ್ಥಂಕರ ಶಿಲ್ಪಗಳು ಮತ್ತು ಶಾಸನ' ದಲ್ಲಿ ಶಾಂತಿನಾಥ ತೀರ್ಥಂಕರನ ಶಿಲ್ಪದ ಪ್ರತಿಮಾ ಲಕ್ಷಣಗಳನ್ನು ಮತ್ತು ಐದು ಸಾಲುಗಳ ಕನ್ನಡ ಲಿಪಿ ಮತ್ತು ಭಾಷೆಯಲ್ಲಿರುವ ಶಾಸನವನ್ನು ಚರ್ಚಿಸಿದ್ದಾರೆ.[೯೮]

ಶ್ರೀನಿವಾಸ ಪಾಡಿಗಾರ, ಅಪ್ಪಣ್ಣ ಎನ್.ಹಂಜೆ ರವರು 'ತಡಕೋಡದ ಮೂರು ಜೈನ ಪಾದಪೀಠ ಶಾಸನಗಳು' ಲೇಖನದಲ್ಲಿ ಗರ್ಭಗೃಹದ ಪಾರ್ಶ್ವನಾಥ ತೀರ್ಥಂಕರ, ಆದಿನಾಥ ತೀರ್ಥಂಕರ, ಜಿನಾಲಯದ ಆವರಣದಲ್ಲಿನ ಪಾರ್ಶ್ವನಾಥ ತೀರ್ಥಂಕರರ ಪಾದ ಪೀಠದ ಮೇಲಿನ ಶಾಸನಗಳು ಅವುಗಳ ಪಾಠ, ಸಾರಾಂಶ ಮತ್ತು ಮಹತ್ವವನ್ನು ವಿವರಿಸಿದ್ದಾರೆ.[೯೯] ಅಪ್ಪಣ್ಣ ಎನ್.ಹಂಜೆ ರವರು 'ಬುಡರಸಿಂಗಿಯ ಚೌವ್ವೀಸ್ ತೀರ್ಥಂಕರರ ಶಿಲ್ಪ ಮತ್ತು ಶಾಸನ' ದಲ್ಲಿ ಆದಿನಾಥನ ತೀರ್ಥಂಕರನ ಶಿಲ್ಪ ಜೊತೆಗೆ ಶಿಲ್ಪದ ಪ್ರತಿಮಾ ಲಕ್ಷಣ ಮತ್ತು ಅದರ ಪಾದಪೀಠದ ಮೇಲಿನ ಶಾಸನದ ಪಾಠ ಮಹತ್ವವನ್ನು ಚರ್ಚಿಸಿದ್ದಾರೆ.[೧೦೦] ಶ್ರೀನಿವಾಸ ಪಾಡಿಗಾರ ಮತ್ತು ಅಪ್ಪಣ್ಣ

ಎನ್.ಹಂಜೆ ರವರು 'ಧಾರವಾಡ ನಗರದ ಹೊಸಯಲ್ಲಾಪೂರದಲ್ಲಿರುವ ಒಂದು ಜೈನ ಶಾಸನ' ನದಲ್ಲಿ ೧೨ನೇ ಶತಮಾನದ ಕನ್ನಡ ಅಕ್ಷರಗಳಿದ್ದು, ಈ ಕನ್ನಡಶಾಸನ ಭಾಗದಲ್ಲಿ ೧೩ ಸಾಲುಗಳ ಜೊತೆಗೆ ಶಾಪಾಷಯಗಳನ್ನೊಳಗೊಂಡಿದ್ದು, ಅದರ ಬಗೆಗಿನ ವಿಷಯವನ್ನು ಚರ್ಚಿಸಿದ್ದಾರೆ.[೧೦೧] ಷಡಕ್ಷರಯ್ಯ ರು.ಮ ಮತ್ತು ಜಯಮ್ಮ ಬಿ. ರವರು 'ಕೆಲವು ಹೊಸ ದೇವಾಲಯಗಳು, ವೀರಗಲ್ಲು-ಶಾಸನಗಳು ಮತ್ತು ಪ್ರಾಚೀನ ಜನವಸತಿ ನಿವೇಶನಗಳು(ಹಳೇ ಧಾರವಾಡ)' ಲೇಖನದಲ್ಲಿ ಕಲಘಟಗಿ ತಾಲೂಕಿನ ತಂಬೂರು ಗ್ರಾಮದಲ್ಲಿನ ದೇವಾಲಯಗಳು, ಶಾಸನೋಕ್ತ ವೀರಗಲ್ಲುಗಳು, ಅವುಗಳ ವೈವಿಧ್ಯತೆಗಳನ್ನು ಸಂಕ್ಷಿಪ್ತವಾಗಿ ಚರ್ಚಿಸಿದ್ದಾರೆ.[೧೦೨]

ಅಪ್ಪಣ್ಣ ಎನ್.ಹಂಜೆ ರವರು 'ನವಲಗುಂದ ಪರಿಸರದ ಜೈನ ಮುನಿಗಳು' ಲೇಖನದಲ್ಲಿ ೨೪ ಮುನಿಗಳ ಸಂಕ್ಷಿಪ್ತ ಮಾಹಿತಿಯನ್ನು ಜೊತೆಗೆ ರಾಜಾಶ್ರಯವನ್ನು ಕೊಟ್ಟಿರುವ ಅಂಶವನ್ನು, ಮೂರ್ತಿ ಪ್ರತಿಷ್ಠಾಪನೆ ಮತ್ತು ದಾನ ದತ್ತಿಗಳನ್ನು ನೀಡಿದುದರ ಬಗ್ಗೆ ಶಾಸನಾಧಾರಿತವಾಗಿ ಚರ್ಚಿಸಿದ್ದಾರೆ.[೧೦೩] ಶ್ರೀನಿವಾಸ ಪಾಡಿಗಾರ ಮತ್ತು ಅಪ್ಪಣ್ಣ ಎನ್.ಹಂಜೆ ರವರು 'ಮನಗುಂಡಿಯ ಜೈನ ಶಾಸನಶಿಲೆ ಪತ್ತೆ' ಇದರಲ್ಲಿ ಜೈನ ಮೂರ್ತಿಶಿಲ್ಪದ ಪ್ರತಿಮಾ ಲಕ್ಷಣದ ಜೊತೆಗೆ ಶಾಸನದಲ್ಲಿ ಸ್ಥಳೀಯ ಆಡಳಿತ, ಸ್ಥಳನಾಮ, ಜೈನಮುನಿ ಸಮುದಾಯ ಸಂಘ ಮತ್ತು ಪರಂಪರೆ, ಅಗ್ರಹಾರವಾಗಿದ್ದುದನ್ನು ಸಾಹಿತ್ಯದ ದೃಷ್ಟಿಯಿಂದ ಚರ್ಚಿಸಿದ್ದಾರೆ.[೧೦೪] ಅಪ್ಪಣ್ಣ ಎನ್.ಹಂಜೆ ರವರು 'ಅಣ್ಣಿಗೇರಿಯ ಸುಮತಿನಾಥ ತೀರ್ಥಂಕರ ಶಿಲ್ಪ ಮತ್ತು ಪಾದಪೀಠ ಶಾಸನ' ದಲ್ಲಿ ಯಾಪನೀಯ ಸಂಘದ ವಿವಿಧ ಅನ್ವಯ ಪರಂಪರೆಗಳಲ್ಲಿ ನವಿಲ್ಗುಂದಾನ್ವಯ ಪ್ರಧಾನತೆಯನ್ನು ಮತ್ತು ಮುನಿಗಳು, ಭಟ್ಟಾರಕರು ನವಲಗುಂದ ಪರಿಸರದಲ್ಲಿ ಧರ್ಮ ಪ್ರಸಾರ, ಬಸದಿ ನಿರ್ಮಾಣದ ವಿಷಯವನ್ನು ಕುರಿತಾಗಿ ಸಂಕ್ಷಿಪ್ತವಾಗಿ ವಿವರಿಸಿದ್ದಾರೆ.[೧೦೫]

ಅಪ್ಪಣ್ಣ ಎನ್.ಹಂಜೆ ರವರು 'ಧಾರವಾಡ ತಾಲೂಕಿನ ಜೈನ ನೆಲೆಗಳು:ಒಂದು ಪರಿಚಯ' ಲೇಖನದಲ್ಲಿ ಈ ತಾಲೂಕಿನ ಅಮ್ಮಿನಭಾವಿ ಇತರೇ ಪ್ರದೇಶಗಳಲ್ಲಿ ಕಂಡುಬರುವ ಜೈನ ಮೂರ್ತಿಶಿಲ್ಪಗಳು ಮತ್ತು ಅವುಗಳ ಪ್ರತಿಮಾಲಕ್ಷಣಗಳನ್ನು, ಜಿನಾಲಯಗಳು, ಮುನಿಗಳ ಬಗ್ಗೆ ವಿವರಿಸಿದ್ದಾರೆ.[೧೦೬] ಹಾಗೆಯೇ 'ಕುಂದಗೋಳ ತಾಲೂಕಿನ ಜೈನಾವಶೇಷಗಳು' ಲೇಖನದಲ್ಲಿ ಕಮಡೊಳ್ಳಿ, ಗುಡಗೇರಿ, ಕುಯಿಬಾಳ, ಭೂ ಕೊಪ್ಪ, ಮಳಲಿ, ಯರಗುಪ್ಪಿ ಸುಮಾರು ೧೦ ಗ್ರಾಮಗಳಲ್ಲಿ ದೊರೆತ ಜೈನಮೂರ್ತಿಶಿಲ್ಪ, ಯಕ್ಷ-ಯಕ್ಷಿಣಿಯರು ಮುಂತಾದವುಗಳ ಪ್ರತಿಮಾಲಕ್ಷಣಗಳನ್ನು ಜೊತೆಗೆ ಶಾಸನಗಳ ಮಾಹಿತಿಯನ್ನು ನೀಡಿದ್ದಾರೆ.[೧೦೭] ಶ್ರೀನಿವಾಸ ಪಾಡಿಗಾರ, ಅಪ್ಪಣ್ಣ ಎನ್.ಹಂಜೆ ರವರು 'ಪಡೆಸೂರು ತೀರ್ಥಂಕರ ಶಿಲ್ಪಗಳು ಮತ್ತು ಪಾದಪೀಠ ಶಾಸನ' ದಲ್ಲಿ ಶಾಂತಿನಾಥ ಮೂರ್ತಿಶಿಲ್ಪದ ಪ್ರತಿಮಾ ಲಕ್ಷಣಗಳನ್ನು ಮತ್ತು ಅದರ ಪಾದಪೀಠದ ಮೇಲಿನ ಐದು ಸಾಲಿನ ಕನ್ನಡ ಲಿಪಿ ಮತ್ತು ಭಾಷೆಯಲ್ಲಿರುವ ಮಾಹಿತಿಯನ್ನು ಚರ್ಚಿಸಿದ್ದಾರೆ.[೧೦೮]

ರಘುನಾಥಭಟ್ ಹೆಚ್.ಆರ್ ರವರು 'ಹುಬ್ಬಳ್ಳಿಯಲ್ಲೊಂದು ಶಿಲಾಶಾಸನ ಶೋಧನೆ' ಲೇಖನದಲ್ಲಿ ಶಾಸನವು ಶೈವ ಶಿಲಾ ಶಾಸನವಾಗಿದ್ದು, ಈ ಶಾಸನದಲ್ಲಿ ಹುಬ್ಬಳ್ಳಿ ಪದದ ನಿಷ್ಪತ್ತಿ,

ಚಂದ್ರನಾಥ ನಾರಾಯಣ, ಈಶ್ವರ, ಭಗವತಿ, ಶಾಂತೇರಿ ಗ್ರಾಮದೇವರ ದೇವಾಲಯಗಳ ಬಗ್ಗೆ, ಹುಬ್ಬಳ್ಳಿ ಕರ್ನಾಟಕದಲ್ಲೆ ಪ್ರಸಿದ್ಧ ವ್ಯಾಪಾರ ಕೇಂದ್ರವಾಗಿತ್ತೆಂಬುದರ ಬಗ್ಗೆ ವಿವರಿದ್ದಾರೆ.[೧೦೯] ಜೋಶಿ ಎಸ್.ಕೆ ರವರು 'ಕಾಲರಿಂಗಣದಲ್ಲಿ ಕುಣಿವ ಪ್ರಾಚ್ಯ ಧಾರವಾಡ ಪರಿಸರ' ದಲ್ಲಿ ಧಾರವಾಡ ಪದ ನಿಷ್ಪತ್ತಿ, ಪ್ರಮುಖ ಪುರಾತತ್ವ ತಜ್ಞರುಗಳು, ಇಲ್ಲಿನ ಶಿಲೆ, ಪ್ರಾಗ್ಯೈತಿಹಾಸಿಕ ಪರಿಸರ, ಪೌರಾಣಿಕ ಸಂಬಂಧಗಳು, ಶಿಲ್ಪಕಲಾ ತಾಣಗಳು, ವಾಸ್ತುಶಿಲ್ಪ, ಕೋಟೆಗಳ ಬಗ್ಗೆ ಜೊತೆಗೆ ಅವುಗಳ ವೈಶಿಷ್ಟ್ಯತೆಗಳನ್ನು ಚರ್ಚಿಸಿದ್ದಾರೆ.[೧೧೦]

೧.೪. ಅಧ್ಯಯನದ ಉದ್ದೇಶ

ಈ ಮೇಲೆ ತಿಳಿಸಿದ ಕೃತಿಗಳು, ಪ್ರಬಂಧಗಳು ಹಾಗೂ ಇತರೆ ಲೇಖನಗಳು ಧಾರವಾಡ ಜಿಲ್ಲೆಗೆ ಸಂಬಂಧಿಸಿದರೂ ಇತಿಹಾಸ ಪೂರ್ವ ಕಾಲದಿಂದ ಎಲ್ಲ ಹಂತಗಳಲ್ಲೂ ಕುರುಹುಗಳನ್ನು ಒಳಗೊಂಡಿರುವ ನಾಡು ಕನ್ನಡನಾಡು. ಅದರಲ್ಲೂ ಕರ್ನಾಟಕದ ಇತಿಹಾಸವನ್ನು ಪುನರ್ ರಚಿಸುವಲ್ಲಿ ಪುರಾತತ್ವ ಅವಶೇಷಗಳ ಪಾತ್ರ ಬಹುಮುಖ್ಯ. ಹೀಗಾಗಿ ಪ್ರಸ್ತುತ ಅಧ್ಯಯನ ಈ ಎಲ್ಲಾ ಪ್ರಕಟಿತ ಕೃತಿ, ಲೇಖನ ಮತ್ತು ಪ್ರಬಂಧಗಳನ್ನು ಅವಶ್ಯಕತೆಗೆ ಅನುಗುಣವಾಗಿ ಬಳಸಿಕೊಂಡು, ಇದರ ಜೊತೆಗೆ ಧಾರವಾಡ ಜಿಲ್ಲೆಯ ಪ್ರತಿಯೊಂದು ಗ್ರಾಮದಲ್ಲಿ ಕ್ಷೇತ್ರಕಾರ್ಯವನ್ನು ಕೈಗೊಂಡು, ಧಾರವಾಡ ಜಿಲ್ಲೆಯ ಶಾಸನಗಳು ಮತ್ತು ದೇವಾಲಯಗಳ ಅಧ್ಯಯನವನ್ನು ವಸ್ತುನಿಷ್ಠವಾಗಿ ಪುನರ್‌ರಚಿಸುವುದೇ ಈ ಸಂಶೋಧನ ಅಧ್ಯಯನದ ಮುಖ್ಯ ಉದ್ದೇಶವಾಗಿದೆ.

೧.೫. ಅಧ್ಯಯನದ ವ್ಯಾಪ್ತಿ

ಪ್ರಸ್ತುತ ಸಂಶೋಧನಾ ಅಧ್ಯಯನ ವ್ಯಾಪ್ತಿಯನ್ನು ಧಾರವಾಡ ಜಿಲ್ಲೆಯ ಪ್ರಾಚೀನ, ಮಧ್ಯಕಾಲೀನ ದವರೆಗೆ ಸೀಮಿತ ಮಾಡಿಕೊಂಡು ಪ್ರತಿಯೊಂದು ಗ್ರಾಮಗಳಿಗೆ ಕ್ಷೇತ್ರಕಾರ್ಯವನ್ನು ಕೈಗೊಂಡು, ಈ ಸಂದರ್ಭದಲ್ಲಿ ಶಾಸನಗಳು, ದೇವಾಲಯ, ಶಿಲ್ಪ, ಸ್ಮಾರಕಗಲ್ಲುಗಳನ್ನು ಗುರುತಿಸಲಾಯಿತು. ಪ್ರತಿಯೊಂದು ವಿಷಯಕ್ಕೂ ತನ್ನದೇ ಆದ ಹಿನ್ನೆಲೆ ಹಾಗೂ ವ್ಯವಸ್ಥಿತವಾಗಿ ಬೆಳೆದು ಬಂದ ಪ್ರಾಚೀನತೆ ಇರುತ್ತದೆ. ಹೀಗಾಗಿ ಇವುಗಳ ಸುತ್ತ ಬಿಚ್ಚಿಕೊಳ್ಳುವ ಘಟನೆಗಳನ್ನು ದಾಖಲೆಯ ಹಿನ್ನೆಲೆಯಲ್ಲಿ ಚರ್ಚಿಸಬೇಕಾಗುತ್ತದೆ. ಕಾರಣ ಧಾರವಾಡ ಜಿಲ್ಲೆಯ ಐತಿಹ್ಯದೊಂದಿಗೆ ಶಾಸನಗಳು ಮತ್ತು ದೇವಾಲಯಗಳ ಮಾಹಿತಿಯನ್ನು ಒಂದೆಡೆ ಸೆರೆ ಹಿಡಿದಿಡುವ ಪ್ರಯತ್ನ ಮಾಡಲಾಗಿದೆ.

೧.೬. ಅಧ್ಯಯನದ ವಿಧಾನ ಮತ್ತು ಸ್ವರೂಪ

ಪ್ರಾರಂಭದಲ್ಲಿ ಧಾರವಾಡ ಜಿಲ್ಲೆಗೆ ಸಂಬಂಧಿಸಿದ ಇತಿಹಾಸ, ಶಾಸನ ಮತ್ತು ದೇವಾಲಯ ಮೊದಲಾದವುಗಳ ಕುರಿತು ಈಗಾಗಲೇ ಪ್ರಕಟಿತವಾಗಿರುವ ಕೃತಿ, ಪ್ರಬಂಧ ಮತ್ತು ಲೇಖನಗಳನ್ನು ಪರಿಶೀಲಿಸಿ ಅದರೊಟ್ಟಿಗೆ ಅಕಾರಾದಿಯಲ್ಲಿ ಆಕರ ಗ್ರಂಥಗಳ ಪಟ್ಟಿಯನ್ನು ತಯಾರಿಸಿಕೊಳ್ಳಲಾಯಿತು. ತರುವಾಯ ಈ ಜಿಲ್ಲೆಯ ಗ್ರಾಮಗಳಲ್ಲಿ ಕ್ಷೇತ್ರಕಾರ್ಯ ಕೈಗೊಂಡು ಶಾಸನಗಳು, ದೇವಾಲಯಗಳು, ಶಿಲ್ಪ-ಸ್ಮಾರಕಗಳ ವಿವರಣೆಯನ್ನು ದಾಖಲಿಸಿ ಆ ಸಂದರ್ಭದಲ್ಲಿ ಪ್ರಕಟಿತ ಶಾಸನಗಳನ್ನು ಗುರುತಿಸಿ,

ಕಾಲಾನುಕ್ರಮದಲ್ಲಿ ಹೊಂದಿಸಿ ಅವು ಒದಗಿಸುವ ಮಾಹಿತಿಯನ್ನು ಅಧ್ಯಯನಮಾಡಿ, ಆಯಾ ವಿಷಯಗಳನ್ನು ಪ್ರತ್ಯೇಕವಾದ ಪಟ್ಟಿಕೆಗಳಲ್ಲಿ ದಾಖಲಿಸಿಕೊಂಡು ಸಂದರ್ಭಾನುಸಾರವಾಗಿ ಬಳಸಿಕೊಳ್ಳಲಾಗಿದೆ. ಕ್ಷೇತ್ರಕಾರ್ಯದ ಸಂದರ್ಭದಲ್ಲಿ ಕಂಡುಬಂದ ಶಾಸನೋಕ್ತ ದೇವಾಲಯಗಳ ವಾಸ್ತು ರಚನೆಯನ್ನು ಅಧ್ಯಯನಮಾಡಿ, ಅವುಗಳ ವಿನ್ಯಾಸ ಮತ್ತು ಮಾದರಿಗಳನ್ನು ಗುರುತಿಸಿ, ಅವುಗಳ ಗುಣಲಕ್ಷಣಗಳನ್ನು ಕಂಡುಕೊಳ್ಳಲಾಗಿದೆ. ವಾಸ್ತು-ವಿವರಣೆಗಳನ್ನು ಚರ್ಚಿಸುವಾಗ ಮೊದಲು ತಿರ್ಯನ್ಮುಖ ವಾಸ್ತು ರಚನೆಯನ್ನು(ಗರ್ಭಗೃಹದಿಂದ-ಮುಖಮಂಟಪದ ಒಳಭಾಗ) ನಂತರದ ಊರ್ಧ್ವಮುಖ ವಾಸ್ತು ರಚನೆಯನ್ನು (ಅಧಿಷ್ಠಾನದಿಂದ-ಕಳಸದವರೆಗಿನ ಹೊರಭಾಗ) ಪರಿಶೀಲಿಸಿ, ದೇವಾಲಯದಲ್ಲಿರುವ ವಾಸ್ತು ಲಕ್ಷಣಗಳನ್ನು ಪರಿಶೀಲಿಸಲಾಗಿದೆ. ಜೊತೆಗೆ ದೇವಾಲಯಗಳ ಪರಿಸರದಲ್ಲಿ ಕಂಡು ಬರುವ ಶಿಲ್ಪಗಳನ್ನು ಪ್ರತಿಮಾ ಲಕ್ಷಣಗಳ ಹಿನ್ನೆಲೆಯಲ್ಲಿ ವಿಶ್ಲೇಷಿಸಲಾಗಿದೆ. ಸ್ಮಾರಕಗಲ್ಲುಗಳ ಕುರಿತು ಚರ್ಚಿಸುವಾಗ ಅವುಗಳ ಮೇಲಿರುವ ಶಾಸನ ಹಾಗೂ ಉಬ್ಬು ಶಿಲ್ಪಗಳನ್ನು ಗಣನೆಗೆ ತೆಗೆದುಕೊಂಡು ವಿಂಗಡಿಸಲಾಗಿದೆ. ವಿಷಯ ನಿರೂಪಣೆಯ ಸಂದರ್ಭದಲ್ಲಿ ಅವಶ್ಯಕವೆನಿಸಿದ ನಕ್ಷೆಗಳು, ರೇಖಾಚಿತ್ರಗಳು, ತಳ ವಿನ್ಯಾಸಗಳನ್ನು ಬಳಸಿಕೊಳ್ಳಲಾಗಿದೆ.

ಅಧ್ಯಯನದ ಸ್ವರೂಪ

ಅಧ್ಯಯನದ ವಿಧಾನದಲ್ಲಿ ಗಮನಿಸಿದಂತೆ ವಿಷಯಗಳ ಆಧಾರದಲ್ಲಿ ಪ್ರಸ್ತುತ ಅಧ್ಯಯನವನ್ನು ಏಳು ಅಧ್ಯಾಯಗಳಾಗಿ ವಿಂಗಡಿಸಲಾಗಿದೆ.

ಮೊದಲನೆಯ ಅಧ್ಯಾಯ ಅಧ್ಯಯನದ ಉದ್ದೇಶ, ವ್ಯಾಪ್ತಿ, ಮತ್ತು ವಿಧಾನವನ್ನು ಒಳಗೊಂಡಿದೆ. ಈ ಅಧ್ಯಾಯದಲ್ಲಿ ಅಧ್ಯಯನದ ಅವಶ್ಯಕತೆ, ಉದ್ದೇಶ, ವ್ಯಾಪ್ತಿ ಮತ್ತು ಮೂಲ ಆಕರಗಳು ಹಾಗೂ ಪೂರ್ವಾಧ್ಯಯನಗಳ ಸಮೀಕ್ಷೆ, ಯಾವ ರೀತಿಯಲ್ಲಿ ಉಪಯುಕ್ತವಾಗಿದೆ ಮತ್ತು ಸ್ವರೂಪವನ್ನು ಚರ್ಚಿಸಲಾಗಿದೆ.

ಎರಡನೆಯ ಅಧ್ಯಾಯ ಭೂ ಭೌಗೋಳಿಕ ಹಾಗೂ ಐತಿಹಾಸಿಕ ಹಿನ್ನೆಲೆಯಲ್ಲಿ ಸ್ಥಳೀಯ ಶಾಸನಗಳನ್ನು ಆಧಾರವಾಗಿಟ್ಟು ಕೊಂಡು ಜಿಲ್ಲೆಯ ಐದು ತಾಲೂಕುಗಳ ಸುತ್ತಮುತ್ತಲಿನ ರಾಜಕೀಯ ಚರಿತ್ರೆ, ಸಾಮಾಜಿಕ ಸ್ಥಿತಿಗತಿಗಳು, ಸಮಾಜದ ವರ್ಣಾಶ್ರಮ, ಧರ್ಮ-ಜಾತಿ, ಸ್ತ್ರೀಯರ ಸ್ಥಾನಮಾನ, ದೇವದಾಸಿ ಪದ್ಧತಿ, ರಕ್ಷಣಾಪದ್ಧತಿ, ಸಾಮಾಜಿಕ ಕಾರ್ಯಗಳು, ಅರವಟ್ಟಿಗೆ, ಛತ್ರಗಳು, ಆರ್ಥಿಕ ಸ್ಥಿತಿಗಳಲ್ಲಿ ಬೆಳೆ, ಕೆರೆ-ಕಟ್ಟೆಗಳು, ತೂಕ-ಅಳತೆಪದ್ಧತಿ, ಆಡಳಿತ ವ್ಯವಸ್ಥೆ, ರಾಜ್ಯದ ಆಡಳಿತ, ರಾಜ, ಮಂತ್ರಿಗಳು ಮತ್ತು ಇತರೆ ಅಧಿಕಾರಿಗಳು ಸಾಮಂತ ಅರಸರುಗಳ ಪಾತ್ರವನ್ನು ಅಧ್ಯಾಯದಲ್ಲಿ ಅಳವಡಿಸಲಾಗಿದೆ.

ಮೂರನೆಯ ಅಧ್ಯಾಯ ಶಾಸನಗಳ ವೈವಿಧ್ಯತೆ, ಶಾಸನದ ಅರ್ಥ, ಸ್ವರೂಪ, ಹಾಗೆಯೇ ಶಾಸನ ವೈವಿಧ್ಯತೆಯಲ್ಲಿ ದಾನ ಶಾಸನಗಳು, ವೀರಗಲ್ಲುಗಳು, ಮಹಾಸತಿಗಲ್ಲು, ನಿಷಿಧಿಗಲ್ಲು, ಗೋಸಾಸಗಲ್ಲು ಇತರೆ ಶಾಸನಗಳನ್ನು ಕಾರ್ಡುಗಳ ಮೂಲಕ ವಿಭಾಗಿಸಿಕೊಂಡು, ಟಿಪ್ಪಣಿ ಮಾಡಿಕೊಂಡು ಅವುಗಳಲ್ಲಿರುವ ವಿಷಯವನ್ನು ಅಧ್ಯಾಯದಲ್ಲಿ ಚರ್ಚಿಸಲಾಗಿದೆ.

ನಾಲ್ಕನೆಯ ಅಧ್ಯಾಯ ಶಾಸನಶಿಲ್ಪ ವೈವಿಧ್ಯತೆ, ಶಾಸನಶಿಲ್ಪಗಳ ಅರ್ಥ, ಅವುಗಳಲ್ಲಿ ಶೈವ ಶಾಸನಶಿಲ್ಪ, ವೈಷ್ಣವ, ವೀರಗಲ್ಲು ಶಾಸನಶಿಲ್ಪ ಮತ್ತು ಗೋಸಾಸ ಶಿಲ್ಪಗಳನ್ನಾಗಿ ವಿಭಾಗಿಸಿಕೊಂಡು ಅವುಗಳಲ್ಲಿರುವ ವಿಷಯಗಳನ್ನು ಕಾಲಾನುಕ್ರಮವಾಗಿ ಚರ್ಚಿಸಲಾಗಿದೆ.

ಐದನೆಯ ಅಧ್ಯಾಯ ಶಾಸನೋಕ್ತ ದೇವಾಲಯಗಳು ಅಧ್ಯಾಯದಲ್ಲಿ ದೇವಾಲಯಗಳ ನಿರ್ಮಾಣ, ಪ್ರಾರಂಭ, ಬೆಳವಣಿಗೆ, ಪ್ರಬೇಧಗಳ ಕುರಿತಾಗಿದೆ. ಧಾರವಾಡ ಜಿಲ್ಲೆಗೆ ಒಳಪಡುವ ಶಾಸನೋಕ್ತ ಶೈವ, ವೈಷ್ಣವ ಮತ್ತು ಜೈನ, ಶಾಕ್ತ ದೇವಾಲಯಗಳೆಂದು ವಿಭಾಗಿಸಿ ಅವುಗಳ ತಿರ್ಯನ್ಮುಖ ಹಾಗೂ ಊರ್ಧ್ವಮುಖ ವಾಸ್ತು ರಚನೆಯನ್ನು ಅವುಗಳಲ್ಲಿರುವ ವಿವಿಧ ಉಪಾಂಗಗಳ ವಾಸ್ತು ಲಕ್ಷಣಗಳನ್ನು ಈ ಅಧ್ಯಾಯದಲ್ಲಿ ಗುರುತಿಸಲಾಗಿದೆ.

ಆರನೆಯ ಅಧ್ಯಾಯ ಮೂರ್ತಿಶಿಲ್ಪ ಈ ಅಧ್ಯಾಯದ ಹಿನ್ನೆಲೆಯಲ್ಲಿ ಭಾರತೀಯ ಮತ್ತು ಕನ್ನಡನಾಡಿನ ಸಂದರ್ಭಗಳಲ್ಲಿ ಶಿಲ್ಪಗಳ ಉಗಮ ಹಾಗೂ ವಿಕಾಸದ ಪರಿಚಯದೊಂದಿಗೆ ಧಾರವಾಡ ಜಿಲ್ಲೆಯಲ್ಲಿ ಕಂಡುಬರುವ ಬೌದ್ಧ, ಶೈವ, ವೈಷ್ಣವ, ಜೈನ ಮೊದಲಾದ ಧರ್ಮಗಳಲ್ಲಿನ ಶಿಲ್ಪಗಳ ಪ್ರತಿಮಾ ಲಕ್ಷಣಗಳ ವೈಶಿಷ್ಠ್ಯತೆಯನ್ನು ಹೇಳಲಾಗಿದೆ.

ಏಳನೆಯ ಅಧ್ಯಾಯ ಸಮಾರೋಪವಾಗಿದ್ದು, ಒಟ್ಟು ಅಧ್ಯಯನದಿಂದ ಕಂಡುಕೊಂಡ ಅಧ್ಯಾಯಗಳಲ್ಲಿ ಕಂಡು ಬರುವ ಮಹತ್ವದ ಅಂಶಗಳನ್ನು ಸೆರೆಹಿಡಿಯಲಾಗಿದೆ. ಪ್ರಬಂಧದ ಕೊನೆಯಲ್ಲಿ ಅನುಬಂಧವಿದೆ. ಈ ಅನುಬಂಧದಲ್ಲಿ ಧಾರವಾಡ ಜಿಲ್ಲೆಯ ನಕ್ಷೆ, ಆಕರ ಗ್ರಂಥಗಳು, ಶಾಸನೋಕ್ತ ಕೆಲವು ಮಹತ್ವದ ಅಂಶಗಳು, ದೇವಾಲಯಗಳ ತಲವಿನ್ಯಾಸಗಳು, ಕಾಲಾನುಕ್ರಮದಲ್ಲಿ ದೇವಾಲಯಗಳ ಪಟ್ಟಿಯನ್ನು, ಅಪ್ರಕಟಿತ ಶಾಸನಗಳು ಹಾಗೂ ಛಾಯಾಚಿತ್ರಗಳನ್ನು ನೀಡಲಾಗಿದೆ.

ಒಟ್ಟಾರೆ ಈ ಅಧ್ಯಾಯದಲ್ಲಿ ಈ ವರೆಗೆ ನಡೆದ ಸಂಶೋಧನಾ ಕೃತಿಗಳನ್ನು, ಸಂಶೋಧನಾ ಪ್ರಬಂಧಗಳನ್ನು ಅಂದರೆ ಪಿಎಚ್.ಡಿ ಮಹಾಪ್ರಬಂಧಗಳು, ಎಂಫಿಲ್, ಸಂಪ್ರಬಂಧ, ಸ್ನಾತಕೋತ್ತರ ಪದವಿಯ ಸಂಪ್ರಬಂಧ, ಸಂಶೋಧನಾ ಲೇಖನಗಳ ಆಕರವಾಗಿ ಬಳಸಿದ್ದನ್ನು ಈ ಅಧ್ಯಾಯದಲ್ಲಿ ಹೆಸರಿಸಲಾಗಿದೆ. ಇದರ ಜೊತೆಗೆ ಜಿಲ್ಲೆಯ ಸ್ಮಾರಕಗಳು, ಶಿಲ್ಪಗಳು, ಶಾಸನಗಳು ಆಕರಗಳಾಗಿದ್ದವೆಂಬುದನ್ನು ಹೇಳಲಾಗಿದೆ. ಈ ಆಕರಗಳಿಗೆ ಸಾಹಿತ್ಯಿಕ ಕೃತಿಗಳೂ ಕೂಡಾ ಬಳಸಲಾಗಿದೆ. ಪ್ರಕಟಿತ ಮತ್ತು ಅಪ್ರಕಟಿತ ಆಕರಗಳ ಜೊತೆಗೆ ಕ್ಷೇತ್ರಕಾರ್ಯವನ್ನು ಮಾಡಿದ್ದನ್ನ ಅಧ್ಯಾಯನದ ವ್ಯಾಪ್ತಿ, ಅಧ್ಯಯನದ ವಿಧಾನವನ್ನು ಒಂದೆಡೆ ಸೆರೆಹಿಡಿಯಲಾಗಿದೆ. ಮೊದಲ ಅಧ್ಯಾಯದಲ್ಲಿ ಕಂಡುಕೊಂಡ ಆಕರಗಳ ಆಧಾರದಲ್ಲಿ ಮುಂದಿನ ಅಧ್ಯಾಯಗಳ ಅಧ್ಯಯನಕ್ಕೆ ಪುಷ್ಟಿಸಿಕ್ಕಂತಾಗಿದೆ.

ಟಿಪ್ಪಣಿಗಳು

೧. ಶಾಮರಾವ್ ತ.ಸು., ಕನ್ನಡ ಸಾಹಿತ್ಯ ಚರಿತ್ರೆ, ೨೦೧೦, ಪು. ೭

೨. ಕಲಬುರ್ಗಿ ಎಂ.ಎಂ.(ಸಂ), ಧಾರವಾಡ ಜಿಲ್ಲೆಯ ಶಾಸನಸೂಚಿ, ೧೯೭೫, ಪು.೧, ಶಾ.ಸಂ. ೬

೩. ಇ.ಐ. ೧೩, ಶಾ.ಸಂ. ೨೮

೪. ಸುಂದರ ಅ., ಧಾರವಾಡನಗರ:ಸಂಸ್ಕೃತಿಕ ಪರಂಪರೆ, ಹಚ್ಚೇವು ಕನ್ನಡ ದೀಪ. ೧೯೯೦. ಪು. ೧೯-೨೦

೫. ಸುಂದರ ಅ., ಪೂರ್ವೋಕ್ತ, ಪು. ೨೦

೬ ಅದೇ., ಪು. ೨೧

೭ ವೆಂಕಟರಂಗೋಕಟ್ಟಿ., ಧಾರವಾಡ, ಬೆಳಗಾವಿ, ವಿಜಾಪುರ, ಕಾನಡಾ, ಮುಂಬಯಿ ಗ್ಯಾಜಿಟಯರ್, ೧೮೯೩, ಮುಂಬಯಿ ಇಲಾಖೆ ಸೇರಿದ ಕರ್ನಾಟಕದ ಭಾಗದ್ದು.

೮. ಎನ್ಯುವಲ್ ರಿಪೋರ್ಟ ಆಫ್ ಸೌತ್ ಇಂಡಿಯನ್ ಎಫಿಗ್ರಫಿ., ೧೯೨೫-೨೬, ೧೯೩೮-೩೯, ೧೯೫೦-೫೧, ೧೯೫೦-೫೨, ನವದೆಹಲಿ.

೯. ಕಲಬುರ್ಗಿ ಎಂ.ಎಂ.(ಸಂ)., ಧಾರವಾಡ ತಾಲೂಕಿನ ಶಾಸನಸೂಚಿ, ೧೯೭೫, ಧಾರವಾಡ.

೧೦. ಕಲಬುರ್ಗಿ ಎಂ.ಎಂ.(ಸಂ)., ಧಾರವಾಡ ಜಿಲ್ಲಾ ಶಾಸನಸೂಚಿ, ೧೯೭೬, ಧಾರವಾಡ.

೧೧. ಪಾಟೀಲ್ ಎಂ.ಬಿ., ಹುಬ್ಬಳ್ಳಿ ತಾಲೂಕಿನ ದರ್ಶನ, ೧೯೮೬, ಬೆಂಗಳೂರು.

೧೨. ಕರ್ನಾಟಕ ರಾಜ್ಯ ಗ್ಯಾಜಿಟಿಯರ್', ಭಾಗ-೩, ೧೯೮೬, ಬೆಂಗಳೂರು.

೧೩. ಸೂರ್ಯನಾಥ ಕಾಮತ್ (ಸಂ)., ಕರ್ನಾಟಕ ರಾಜ್ಯ ಗ್ಯಾಜೆಟಿಯರ್: ಧಾರವಾಡ ಜಿಲ್ಲೆ, ೧೯೯೫, ಬೆಂಗಳೂರು.

೧೪. ಶಿವತಾರಕರ ಕೆ.ಬಿ., ಕರ್ನಾಟಕ ಪುರಾತತ್ವ ನೆಲೆಗಳು, ೨೦೦೧, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೧೫. ಚನ್ನಕ್ಕ ಪಾವಟೆ., ಶಾಸನ ಸಂಜೀವಿನಿ, ೨೦೦೩, ಧಾರವಾಡ.

೧೬. ಮಹದೇವ ಸಿ., ಕರ್ನಾಟಕ ದೇವಾಲಯ ಕೋಶ: ಧಾರವಾಡ ಜಿಲ್ಲೆ, ೨೦೦೬, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೧೭. ಹಳ್ಳಿಕೇರಿ ಎಫ್.ಟಿ.(ಸಂ), ನಮ್ಮೂರು ನಾವಳ್ಳಿ, ೨೦೦೭, ಧಾರವಾಡ ಜಿಲ್ಲೆ.

೧೮. ಕಟಗೇರಿ ನ.ಹ., ಗತಕಾಲದ ಧಾರವಾಡ, ೨೦೦೮, ಧಾರವಾಡ.

೧೯. ಅಪ್ಪಣ್ಣ ಎನ್.ಹಂಜೆ., ಧಾರವಾಡ ಪರಿಸರದಲ್ಲಿ ಜೈನಧರ್ಮ, ೨೦೦೮, ಬೆಂಗಳೂರು-೪೩.

೨೦. ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿಗಳ ಕಛೇರಿ ಜಿಲ್ಲಾ ಪಂಚಾಯತ್, ೨೦೦೯-೨೦೧೦, ಧಾರವಾಡ.

೨೧. ಷಡಕ್ಷರಯ್ಯ ರು.ಮ. ಮತ್ತು ಜಯಮ್ಮ.ಬಿ., ಧಾರವಾಡ ಜಿಲ್ಲೆಯ ಐತಿಹಾಸಿಕ ಸ್ಮಾರಕಗಳು ಮತ್ತು ಶಿಲ್ಪಗಳು, ೨೦೦೯, ಜಿಲ್ಲಾಡಳಿತ ಧಾರವಾಡ.

೨೨. ಹೆನ್ರಿಕಝಿನ್ಸ್., ದ ಚಾಲುಕ್ಯ ಆರ್ಕಿಟೆಕ್ಚರ್ ಆಫ್ ದ ಕೆನರಿಯಸ್ ಡಿಸ್ಟಿಕ್, ೧೯೩೬, ಕಲಕತ್ತಾ.

೨೩. ಡಾಕೆ. ಎಂ.ಎ., ಎನ್ ಸೈಕ್ಲೋಪಿಡಿಯಾ ಆಫ್ ಇಂಡಿಯನ್ ಟೆಂಪಲ್ ಆರ್ಕಿಟೆಕ್ಚರ್, ೧೯೯೬, ನ್ಯೂಡೆಲ್ಲಿ.

೨೪. ಗೆರಾಲ್ಡ ಫಾಕ್ಷಿಮಾ., ದ ಚಾಲುಕ್ಯ ಆರ್ಕಿಟೆಕ್ಚರ್, ೨೦೦೩. ಮಾನ್ಸಿನ್‌ರಾಮ.

೨೫. ನಾಗಭೂಷಣಮೂರ್ತಿ ಎ.ಸಿ., ಧಾರವಾಡ ಜಿಲ್ಲೆಯ ದೇಶಿಗತ್ತಿಗಳು ಒಂದು ಸಾಂಸ್ಕೃತಿಕ ಅಧ್ಯಯನ, (ಅಪ್ರಕಟಿತ ಎಂ.ಫಿಲ್ ಪ್ರಬಂಧ) ೧೯೯೪, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

೨೬. ನಿಂಗನಗೌಡ ಚ.ಪಾಟೀಲ್., ಉಣಕಲ್ ಶ್ರೀ ಸದ್ಗುರು ಸಿದ್ದೇಶ್ವರರು:ಒಂದು ಅಧ್ಯಯನ, (ಎಂ.ಫಿಲ್ ಪ್ರಬಂಧ) ೧೯೯೫, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

೨೭. ಶಶಿಕಾಂತ ಕೆ.ಬಸರಿಕಟ್ಟಿ., ಕಲಘಟಗಿ ಕಲೆ, (ಅಪ್ರಕಟಿತ ಎಂ.ಫಿಲ್ ಪ್ರಬಂಧ) ೨೦೦೭, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೨೮. ಸಾವಿತ್ರಿಬಾಯಿ ನಿಂ.ಓಲೇಕಾರ., ಕನ್ನಡ ಸಂಶೋಧನ ಸಂಸ್ಥೆಯ ವಸ್ತು ಸಂಗ್ರಹಾಲಯದ ಅಧ್ಯಯನ, (ಅಪ್ರಕಟಿತ ಎಂ.ಫಿಲ್ ಪ್ರಬಂಧ) ೨೦೦೮, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

೨೯. ಚಂದ್ರಶೇಖರ., ಕುಂದಗೋಳ ತಾಲೂಕಿನ ಶಾಸನಗಳು ಮತ್ತು ದೇವಾಲಯಗಳು, (ಅಪ್ರಕಟಿತ ಎಂ.ಫಿಲ್ ಪ್ರಬಂಧ) ೨೦೦೮, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೩೦. ಯಲ್ಲಣ್ಣ ಕೆ., ನವಲಗುಂದ ತಾಲೂಕಿನ ಶಾಸನಗಳು ಮತ್ತು ದೇವಾಲಯಗಳು, (ಅಪ್ರಕಟಿತ ಎಂ.ಫಿಲ್ ಪ್ರಬಂಧ), ೨೦೦೮, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೩೧. ಮಂಗಲಾ ಎಂ.ಗೌಡ., ಅಮ್ಮಿನಭಾವಿ ಪರಿಸರದ ಸಾಂಸ್ಕೃತಿಕ ಅಧ್ಯಯನ, (ಅಪ್ರಕಟಿತ ಎಂ.ಫಿಲ್ ಪ್ರಬಂಧ), ೨೦೦೯, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೩೨. ಸುರೇಶ ಕರಿಬಸಪ್ಪ ಹಾನಗಲ್ಲ., ಹುಬ್ಬಳ್ಳಿ ತಾಲೂಕಿನ ಶಾಸನಗಳು ಮತ್ತು ದೇವಾಲಯಗಳು, (ಅಪ್ರಕಟಿತ ಎಂ.ಫಿಲ್ ಪ್ರಬಂಧ) ೨೦೧೦, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೩೩. ರಮೇಶ ಮಾ.ಮೊರಬ., ಧಾರವಾಡ ಜಿಲ್ಲೆಯ ಚರ್ಚಗಳ ಸಾಂಸ್ಕೃತಿಕ ಅಧ್ಯಯನ, (ಅಪ್ರಕಟಿತ ಎಂ.ಫಿಲ್ ಪ್ರಬಂಧ) ೨೦೧೦, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೩೪. ಶಕುಂತಲಾ ನಾಯಕ., ಕುಂದಗೋಳ ತಾಲೂಕಿನ ಪುರಾತತ್ವ, (ಅಪ್ರಕಟಿತ ಎಂ.ಫಿಲ್ ಪ್ರಬಂಧ) ೨೦೧೧, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

೩೫. ಗುರುವ ಆರ್.ಎನ್., ದ ಕದಂಬಾಸ್ ಆಫ್ ಗೋವಾ ಇನ್‌ಸ್ಕ್ರಿಪ್‌ಷನ್ಸ್, (ಅಪ್ರಕಟಿತ ಪಿಎಚ್.ಡಿ ಪ್ರಬಂಧ) ೧೯೬೯, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

೩೬. ಜೋಶಿ ಆರ್.ಆರ್., ಎ ಕಲ್ಚರಲ್ ಹಿಸ್ಟರಿ ಆಫ್ ಧಾರವಾಡ ರೀಜನ್, (ಅಪ್ರಕಟಿತ ಪಿಎಚ್.ಡಿ ಪ್ರಬಂಧ) ೧೯೯೩, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

೩೭. ಅಜಿತ್ ಪ್ರಸಾದ., ಜೈನಿಜಮ್ ಇನ್ ಧಾರವಾಡ ಎ ಕಲ್ಚರಲ್ ಸ್ಟಡಿ, (ಅಪ್ರಕಟಿತ ಪಿಎಚ್.ಡಿ ಪ್ರಬಂಧ) ೧೯೯೬, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

೩೮. ಮಹಾಂತಪ್ಪ ಸಿ.ಹಡಪದ., ಡಾ.ಮೂಜಗಂ:ಜೀವನ ಮತ್ತು ಸಾಧನೆ, (ಅಪ್ರಕಟಿತ ಪಿಎಚ್.ಡಿ ಪ್ರಬಂಧ), ೧೯೯೭, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

೩೯. ನಾಗಭೂಷಣಮೂರ್ತಿ ಸಿ., ಧಾರವಾಡ ಜಿಲ್ಲೆಯ ಜನಪದ ಸಂಪ್ರದಾಯಗಳು, (ಅಪ್ರಕಟಿತ ಪಿಎಚ್.ಡಿ ಪ್ರಬಂಧ) ೧೯೯೯, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

೪೦. ಮೂಲಗಿ ಆರ್.ಬಿ., ಧಾರವಾಡ ಜಿಲ್ಲೆಯ ಜನಪದ ಸಂಪ್ರದಾಯಗಳು, (ಅಪ್ರಕಟಿತ ಪಿಎಚ್.ಡಿ ಪ್ರಬಂಧ) ೨೦೦೪, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

೪೧. ಜಯಮ್ಮ ಬಿ., ಧಾರವಾಡ ಜಿಲ್ಲೆಯ ಪುರಾತತ್ವ, (ಅಪ್ರಕಟಿತ ಪಿಎಚ್.ಡಿ ಪ್ರಬಂಧ) ೨೦೦೬, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

೪೨. ಸೋಮಶೇಖರ ಚ.ಎಲಿಗಾರ., ಧಾರವಾಡ ಜಿಲ್ಲೆ:ಒಂದು ಸಾಂಸ್ಕೃತಿಕ ಅಧ್ಯಯನ, (ಅಪ್ರಕಟಿತ ಪಿಎಚ್.ಡಿ ಪ್ರಬಂಧ) ೨೦೦೬, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

೪೩. ಅಶೋಕ ಹುಗ್ಗಣ್ಣವರ., ಕುಂದಗೋಳ ಪರಿಸರದ ಹಿಂದೂಸ್ತಾನಿ ಸಂಗೀತಗಾರರು, (ಅಪ್ರಕಟಿತ ಪಿಎಚ್.ಡಿ ಪ್ರಬಂಧ), ೨೦೦೬, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೪೪. ವಾರಿಜಾ ಆರ್.ಬೋಳಾರ್., ಟೆಂಪಲ್ಸ್ ಆಫ್ ಕರ್ನಾಟಕ, (ಅಪ್ರಕಟಿತ ಪಿಎಚ್.ಡಿ ಪ್ರಬಂಧ) ೨೦೦೭, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

೪೫. ಮಹೇಶ ಫ.ಗಾಜಪ್ಪನವರ., ಧಾರವಾಡ ಜಿಲ್ಲೆಯ ತತ್ವಪದ ಸಾಹಿತ್ಯ, (ಅಪ್ರಕಟಿತ ಪಿಎಚ್.ಡಿ ಪ್ರಬಂಧ) ೨೦೦೭, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

೪೬. ಶಾಂತವ್ವ ಕ.ಪೂಜಾರ., ಹುಬ್ಬಳ್ಳಿ ಒಂದು ಸಾಂಸ್ಕೃತಿಕ ಅಧ್ಯಯನ, (ಅಪ್ರಕಟಿತ ಪಿಎಚ್.ಡಿ ಪ್ರಬಂಧ) ೨೦೦೯, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

೪೭. ಮುಳಗುಂದ ಕೆ.ಎಚ್., ಅಣ್ಣಿಗೇರಿ ಅಮೃತೇಶ್ವರ ದೇವಾಲಯ:ಒಂದು ಅಧ್ಯಯನ' ಎಂ.ಎ(ಅಂತಿಮ), ೧೯೯೧-೯೨, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

೪೮. ಕೃಷ್ಣಾಜಿ ಗು.ನಾಡಗೀರ., ಧಾರವಾಡ ತಾಲೂಕಿನ ಮಧ್ಯಭಾಗದ ಶಿಲ್ಪಕಲಾ ಇತಿಹಾಸ ಸಮೀಕ್ಷೆ, ಎಂ.ಎ(ಅಂತಿಮ), ೧೯೯೪-೯೫, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

೪೯. ಶಿವಪ್ಪ ಚನ್ನಬಸಪ್ಪ ಶಾನವಾಡ., ಕುಂದಗೋಳ ತಾಲೂಕಿನ ಈಶಾನ್ಯವಲಯದ ಪುರಾತತ್ವ ಒಂದು ಸಮೀಕ್ಷೆ, ಎಂ.ಎ(ಅಂತಿಮ), ೧೯೯೫, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

೫೦. ಶರಣಗೌಡ ತ.ಬಿರಾದಾರ., ಉಣಕಲ್ ಪ್ರದೇಶದ ಶಿಲ್ಪಕಲೆ:ಒಂದು ಸಮೀಕ್ಷೆ, ಎಂ.ಎ (ಅಂತಿಮ), ೧೯೯೮, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

೫೧. ಪೂರ್ಣಿಮಾ ವಿ.ನಾಗಾವಿ., ಕುಂದಗೋಳ ಸುತ್ತಮುತ್ತಲಿನ ಪ್ರದೇಶದ ವಾಸ್ತು ಕಲಾವ್ಯಾಸಂಗ, ಎಂ.ಎ(ಅಂತಿಮ), ೨೦೦೧-೦೨, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

೫೨. ವೀರಯ್ಯ ಕ.ಇಂಡಿ., ಧಾರವಾಡ ತಾಲೂಕಿನ ಹದಿನೈದು ಗ್ರಾಮಗಳ ವಾಸ್ತುಶಿಲ್ಪಕಲೆ:ಒಂದು ಅಧ್ಯಯನ, ಎಂ.ಎ(ಅಂತಿಮ), ೨೦೦೧-೦೨, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

೫೩. ಸುರೇಶ ಸಂ.ಮೇಟಿ., ನವಲಗುಂದ ತಾಲೂಕಿನ ಆಯ್ದ ಹದಿನೈದು ಹಳ್ಳಿಗಳ ಪುರಾತತ್ವ ಅನ್ವೇಷಣೆ, ಎಂ.ಎ(ಅಂತಿಮ), ೨೦೦೧-೦೩, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

೫೪. ಪ್ರಕಾಶ ಎನ್.ಹೊಸಮನಿ., ಕುಂದಗೋಳ ತಾಲೂಕಿನ ಹದಿನೈದು ಗ್ರಾಮಗಳ ಮೂರ್ತಿಶಿಲ್ಪ ಮತ್ತು ದೇವಾಲಯಗಳು, ಎಂ.ಎ(ಅಂತಿಮ), ೨೦೦೧-೨೦೦೨, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

೫೫. ಸಾವಿತ್ರಿ ಪಾಟೀಲ., ಧಾರವಾಡ ಪ್ರದೇಶದ ಹನ್ನೆರಡು ಗ್ರಾಮಗಳ ದೇವಾಲಯ ಮತ್ತು ಶಿಲ್ಪಗಳ ಸಮೀಕ್ಷೆ, ಎಂ.ಎ(ಅಂತಿಮ), ೨೦೦೧-೨೦೦೨, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

೫೬. ಪಾಂಡುರಂಗ ಕೇ.ಕೋಕಾಟ., ಕುಂದಗೋಳ ತಾಲೂಕಿನ ಶಾಸನಗಳು ಒಂದು ಅಧ್ಯಯನ, ಎಂ.ಎ(ಅಂತಿಮ), ೧೯೯೩-೯೪, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

೫೭. ಶ್ರೀಶೈಲ ಬಬಲಾದ., ಅಣ್ಣಿಗೇರಿ ಅಮೃತೇಶ್ವರ ದೇವಾಲಯದ ಕಲೆ ಮತ್ತು ವಾಸ್ತುಶಿಲ್ಪ ಕಲೆ ಒಂದು ಅಧ್ಯಯನ, ಎಂ.ಎ(ಅಂತಿಮ), ೨೦೧೧-೧೨, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

೫೮. ಫಕ್ಕೀರಪ್ಪ ಪೀರಪ್ಪ ಬಾಲನಾಯ್ಕ., ಕಮಡೊಳ್ಳಿ ಆದಿದೈವ ಶ್ರೀರಾಮೇಶ್ವರ ಪುರಾತನ ದೇವಸ್ಥಾನದ ಅಧ್ಯಯನ, ಎಂ.ಎ(ಅಂತಿಮ), ೨೦೧೦-೧೧, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

೫೯. ಪ್ರಭಾಕರ ವೈ., ಹುಬ್ಬಳ್ಳಿ ತಾಲೂಕಿನ ಅಮರಗೋಳ ಬನಶಂಕರಿ ದೇವಾಲಯ ಒಂದು ವರದಿ, ಎಂ.ಎ(ಅಂತಿಮ), ೨೦೧೦-೧೧, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

೬೦. ವೀರಭದ್ರ ಆ.ಮಿರಾಶಿ., ಅಣ್ಣಿಗೇರಿಯ ಪುರದೇಶ್ವರ ದೇವಾಲಯ ಒಂದು ಅಧ್ಯಯನ, ಎಂ.ಎ(ಅಂತಿಮ), ೨೦೧೦-೧೧, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

೬೧. ಆಕಾಶದೇವ ದೊಡಮನಿ., ಅಮ್ಮಿನಬಾವಿ ಪಂಚಗೃಹ ಹಿರೇಮಠ ಮತ್ತು ಜೈನ ಬಸದಿಯ ಒಂದು ಸಮೀಕ್ಷೆ, ಎಂ.ಎ(ಅಂತಿಮ), ೨೦೧೦-೧೧, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

೬೨. ಬಸವರಾಜ ದೇ.ತಳವಾರ., ಧಾರವಾಡ ತಾಲೂಕಿನ ಹತ್ತು ಹಳ್ಳಿಗಳ ಸಮೀಕ್ಷೆ, ಎಂ.ಎ(ಅಂತಿಮ), ೨೦೧೦-೧೧, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

೬೩. ಶಿವಕುಮಾರಯ್ಯ ಎಸ್.ಶಾಂತಾಪೂರಮಠ., ಉಪನಿರ್ದೇಶಕರ ಕಛೇರಿ ಪ್ರಾಚ್ಯವಸ್ತು ಸಂಗ್ರಹಾಲಯ, ಧಾರವಾಡ ಮತ್ತು ಸುತ್ತಮುತ್ತಲಿನ ಪ್ರೇಕ್ಷಣೀಯ ಸ್ಥಳಗಳ ಪರಿಚಯ, ಎಂ.ಎ(ಅಂತಿಮ), ೨೦೦೯-೧೦, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

೬೪. ವೀಣಾ ತಿಪ್ಪಣ್ಣಾ.ವಿ., ನವಲಗುಂದ ಪ್ರದೇಶದ ಶಿಲ್ಪಕಲೆ ಒಂದು ವ್ಯಾಸಂಗ, ಎಂ.ಎ(ಅಂತಿಮ), ೧೯೯೯-೨೦೦೦, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

೬೫. ಜೋಶಿ ಆರ್.ಆರ್., ಧಾರವಾಡದ ವಿದ್ಯಾಗಿರಿಯಲ್ಲೊಂದು ಮೈಲಾರ ದೇಗುಲ:ಒಂದು ಅಧ್ಯಯನ, ಇತಿಹಾಸ ದರ್ಶನ, ಸಂ. ೩, ೧೯೮೮, ಪು. ೧೩೧-೧೩೪.

೬೬. ಜೋಶಿ ಎಸ್.ಕೆ., ಕಲಘಟಗಿ ಪ್ರದೇಶದ ಪುರಾತತ್ವ ಹಾಗೂ ಇತಿಹಾಸ, ಇತಿಹಾಸ ದರ್ಶನ, ಸಂ. ೨೭, ೨೦೧೨, ಪು. ೪೫-೪೭.

೬೭. ಚಲವಾದಿ ಎಸ್.ಜಿ., ಮಾದನಬಾವಿ ಗ್ರಾಮದಲ್ಲಿ ದೊರೆತ ಸುಂದರ ಶಿಲ್ಪ ಹಾಗೂ ಸುತ್ತಮುತ್ತಲಿನ ಪ್ರಾಚ್ಯಾವಶೇಷಗಳು, ಇತಿಹಾಸ ದರ್ಶನ, ಸಂ. ೨೭, ೨೦೧೨, ಪು. ೫೦-೫೧.

೬೮. ವಿರುಪಾಕ್ಷಗೌಡ ಪಾಟೀಲ., ಧಾರವಾಡ ತಾಲೂಕಿನ ಶಾಸನೋಕ್ತ ಸ್ಥಳನಾಮಗಳು, ಇತಿಹಾಸ ದರ್ಶನ, ಸಂ. ೨೮, ೨೦೧೩, ಪು. ೩೫೬-೩೫೯.

೬೯. ಸಾವಂತ್ ಎಂ.ವೈ., ಹುಬ್ಬಳ್ಳಿ ಮರಾಠ ಕಾಲದಲ್ಲಿಯ ಒಂದು ವ್ಯಾಪಾರ ಕೇಂದ್ರ, ಇತಿಹಾಸ ದರ್ಶನ, ಸಂ. ೮, ೧೯೯೩, ಪು. ೧೬೯-೧೭೩.

೭೦. ನಾಡಕರ್ಣಿ ಜಿ.ಪಿ., ಹೆಮ್ಮೆಯ ನಗರ ಹುಬ್ಬಳ್ಳಿ, ಗುರುಲಿಂಗ ಕಾಪಡೆ(ಸಂ), ಹಚ್ಚೇವು ಕನ್ನಡದ ದೀಪ, ೧೯೯೦, ಪು. ೧೪-೧೯.
೭೧. ಸುಂದರ ಅ., ಧಾರವಾಡ ನಗರ:ಸಾಂಸ್ಕೃತಿಕ ಪರಂಪರೆ, ೧೯೯೦, ಪು. ೧೯-೨೧.
೭೨. ಶ್ರೀನಿವಾಸ ಪಾಡಿಗಾರ., ಪ್ರಾಚೀನ ಇತಿಹಾಸ ಮತ್ತು ಸಂಸ್ಕೃತಿ, ೧೯೯೦, ಪು. ೨೨-೨೬.
೭೩. ರಘುನಾಥಭಟ್ ಎಚ್.ಎಸ್., ಧಾರವಾಡದ ವಾಸ್ತು ಶಿಲ್ಪಕಲಾ ವೈಶಿಷ್ಟ್ಯ, ೧೯೯೦, ಪು.೨೨-೨೬.
೭೪. ಶಾಂತಕುಮಾರಿ ಎಸ್.ಎಲ್., ತಂಬೂರ ಶಾಸನ, ಇತಿಹಾಸ ದರ್ಶನ, ೧೯೯೦, ಪು. ೨೨-೨೬.
೭೫. ಸಂಗಮೇಶ ಹಂಗಡಿ., ನವಲಗುಂದ ಒಂದು ಸಾಂಸ್ಕೃತಿಕ ನೋಟ, ೧೯೯೮, ಪು. ೧-೬.
೭೬. ಹಳ್ಳಿಕೇರಿ ಎಫ್.ಟಿ., ನವಲಗುಂದ ತಾಲೂಕಿನ ಶಾಸನಗಳು, ೧೯೯೮, ಪು. ೯-೧೦.
೭೭. ಷಡಕ್ಷರಯ್ಯ ಆರ್.ಎಂ., ನವಲಗುಂದ ತಾಲೂಕಿನ ದೇವಾಲಯಗಳ ಶಿಲ್ಪಗಳ ವೈವಿದ್ಯತೆ, ೧೯೯೮, ಪು. ೧೧-೨೫.
೭೮. ನಾಗನೂರು ಎ.ಫ಼ಿ., ಅದರಗುಂಚಿ ದೊಡ್ಡಪ್ಪನ(ತೀರ್ಥಂಕರ) ಶಿಲ್ಪ ಮತ್ತು ಶಾಸನ, ಕನ್ನಡ ಸಾಹಿತ್ಯ ಪರಿಷತ್ಪತ್ರಿಕೆ, ಸಂ. ೮೪/೨ ಏಪ್ರಿಲ್-ಜೂನ್, ೨೦೦೬, ಪು. ೧೭-೨೦.
೭೯. ಅಪ್ಪಣ್ಣ ಎನ್.ಹಂಜೆ., ಶಿರಗುಪ್ಪಿಯ ಕೃಷ್ಣದೇವರಾಯನ ಶಾಸನ, ಕನ್ನಡ ಸಾಹಿತ್ಯ ಪರಿಷತ್ಪತ್ರಿಕೆ, ಸಂ. ೮೪/೨ ಏಪ್ರಿಲ್-ಜೂನ್, ೨೦೦೬, ಪು. ೧೫-೧೬.
೮೦. ಅಪ್ಪಣ್ಣ ಎನ್.ಹಂಜೆ., ಅಣ್ಣಿಗೇರಿಯ ಎರಡು ಜಿನ ಶಿಲಾಫಲಕ, ಕನ್ನಡ ಸಾಹಿತ್ಯ ಪರಿಷತ್ಪತ್ರಿಕೆ, ಸಂ. ೮೩/೩ ಏಪ್ರಿಲ್-ಜೂನ್, ೨೦೦೬, ಪು. ೫೭-೬೦.
೮೧. ಗುರುವ ಆರ್.ಎನ್., ತಂಬೂರ ಶಾಸನಗಳು(ಗೋವೆಯ ಕದಂಬ ಜಯಕೇಶಿ ಪೆರ್ಮಾಡಿದೇವನ ಕ್ರಿ.ಶ. ೧೧೨೫, ೧೧೫೫ ಮತ್ತು ೧೧೮೯ರ ಶಾಸನ), ಸಾಧನೆ, ಸಂ, ೩/೧, ೧೯೭೫, ಪು. ೯೦-೧೦೬.
೮೨. ಗುರುವ ಆರ್.ಎನ್., ತಂಬೂರ ಶಾಸನಗಳು(ಗೋವೆಯ ಕದಂಬ ಜಯಕೇಶಿ ಪೆರ್ಮಾಡಿದೇವನ ಕ್ರಿ.ಶ. ೧೧೨೫, ೧೧೫೫ ಮತ್ತು ೧೧೪೬), ಸಾಧನೆ, ಸಂ, ೪/೧. ೧೯೭೫, ಪು. ೬೪-೮೧.
೮೩. ಹನುಮಾಕ್ಷಿ ಗೋಗಿ., ಅಣ್ಣಿಗೇರಿಯಲ್ಲಿ ದೊರೆತ ಹೊಸ ಶಾಸನಗಳು, ಅನು ಶಾಸನ, ಸಂ. ೨೦೦೨, ಪು. ೧೮೯-೧೮೨.
೮೪. ಶ್ರೀನಿವಾಸ ಪಾಡಿಗಾರ., ಇನ್ಸಕ್ರೈಬ್ಡ ಜೈನ ಇಮೇಜಸ ಪ್ರಮ್ ಮುತ್ತಗಿ ಡಿಸ್ಟಿಕ್ ಧಾರವಾಡ, ಜನರಲ್ ಆಫ್ ದಿ ಕರ್ನಾಟಕ ಯುನಿವರ್ಸಿಟಿ ಸೋಸೆಲ್ ಸೈನ್ಸಸ್, ಸಂ. ೨೩, ೧೯೮೨, ಪು. ೫೨-೬೧.
೮೫. ಚಂದ್ರಶೇಖರ ಹೆಚ್., ಅಣ್ಣಿಗೇರಿಯ ಪುರದ ವೀರಭದ್ರ ದೇವಾಲಯ:ಮೂಲತಹಃ ಶಿವ ದೇವಾಲಯ, ಇತಿಹಾಸ ದರ್ಶನ, ಸಂ, ೨೮, ೨೦೧೩, ಪು. ೪೪೪-೪೪೭.
೮೬. ಷಡಕ್ಷರಯ್ಯ ರು.ಮ., ಕಲಘಟಗಿ ಪ್ರದೇಶದಲ್ಲಿ ವಿಜಯನಗರ ಮತ್ತು ವಿಜಯನಗರೋತ್ತರ ಕಾಲದ ಶಿಲ್ಪಗಳು ಇತ್ಯಾದಿ, ಇತಿಹಾಸ ದರ್ಶನ, ಸಂ, ೯. ೨೦೦೩, ಪು. ೯೫-೧೦೯.

೮೭. ಶ್ರೀನಿವಾಸ ಪಾಡಿಗಾರ, ಅಪ್ಪಣ್ಣ ಎನ್.ಹಂಜೆ., ಧಾರವಾಡ ಜೈನಶಿಲಾಪೀಠ ಶಾಸನ, ಸಂ, ೧. ಸಂ. ೧, ಜೈನ ಅಧ್ಯಯನ ಸಂಸ್ಥೆ, ಶ್ರವಣಬೆಳಗೋಳ, ಜೂನ್ ೨೦೦೮, ಪು. ೬-೭.

೮೮. ಜಯಮ್ಮ ಬಿ., ಧಾರವಾಡ ಜಿಲ್ಲೆಯ ಗಜಲಕ್ಷ್ಮಿ ಶಿಲ್ಪಗಳು, ಇತಿಹಾಸ ದರ್ಶನ, ಸಂ, ೨೩. ೨೦೦೮, ಪು. ೧೯೯-೨೦೦.

೮೯. ಷಡಕ್ಷರಯ್ಯ ರು.ಮ., ಧಾರವಾಡ ಜಿಲ್ಲೆಯಲ್ಲಿ ದೊರೆತ ರಾಷ್ಟ್ರಕೂಟರ ಕಾಲದ ಶಿಲ್ಪ-ದೇವಾಲಯಗಳು, ಇತಿಹಾಸ ದರ್ಶನ, ಸಂ, ೯. ೧೯೯೪, ಪು. ೮೧.

೯೦. ಮಲ್ಲಿಗವಾಡ ಕೆ.ಸಿ., ಮುತ್ತಗಿಯ ಪ್ರಾಚ್ಯಾವಶೇಷಗಳು, ಇತಿಹಾಸ ದರ್ಶನ, ಸಂ, ೨೦. ೨೦೦೫, ಪು. ೪೦-೪೪.

೯೧. ಜಯಮ್ಮ ಬಿ., ಹುಬ್ಬಳ್ಳಿ ಮತ್ತು ಕುಂದಗೋಳ ತಾಲೂಕುಗಳ ಅಪರೂಪದ ಗಜಲಕ್ಷ್ಮಿಶಿಲ್ಪ, ಇತಿಹಾಸ ದರ್ಶನ, ಸಂ, ೨೦. ೨೦೦೫, ಪು. ೬೮-೭೦.

೯೨. ಷಡಕ್ಷರಯ್ಯ ರು.ಮ., ಧಾರವಾಡ ಜಿಲ್ಲೆಯಲ್ಲಿ ಕಂಡು ಬಂದ ಹೆಚ್ಚಿನ ದೇವಾಲಯ ಶಿಲ್ಪಗಳು ಶಾಸನಗಳು, ಇತಿಹಾಸ ದರ್ಶನ, ಸಂ, ೧೩. ೧೯೯೮, ಪು. ೬೨-೭೩.

೯೩. ಮಲ್ಲಿಗವಾಡ ಕೆ.ಸಿ., ಅಪೂರ್ವಶಿಲ್ಪಕಲೆಯ ಶ್ರೀಕಲ್ಮೇಶ್ವರ ದೇವಾಲಯ(ಕಾಮಧೇನು), ಇತಿಹಾಸ ದರ್ಶನ, ಸಂ, ೧೩. ೧೯೯೮, ಪು. ೧೦೩-೧೦೭.

೯೪. ಮಲ್ಲಿಗವಾಡ ಕೆ.ಸಿ., ಉಮಚಗಿ ಗ್ರಾಮದ ಪ್ರಾಚ್ಯಾವಶೇಷಗಳು, ಇತಿಹಾಸ ದರ್ಶನ, ಸಂ, ೧೬. ೨೦೦೧, ಪು. ೧೧೮-೧೨೧.

೯೫. ವಿದ್ಯಾ ಎಸ್.ಹಡಗಲಿ., ಹುಬ್ಬಳ್ಳಿಯ ಗೋಕುಲದಲ್ಲಿ ಕಂಡುಬಂದ ಶಾಸನವುಳ್ಳ ವೀರಗಲ್ಲು, ಇತಿಹಾಸ ದರ್ಶನ, ಸಂ, ೧೬. ಬೆಂಗಳೂರ, ೨೦೦೧, ಪು. ೨೨-೨೩.

೯೬. ಮಲ್ಲಿಗವಾಡ ಕೆ.ಸಿ., ರೊಟ್ಟಿಗವಾಡದ ಕಲಾ ನೈಪುಣ್ಯತೆಯ ಶ್ರೀಕಲ್ಮೇಶ್ವರ ದೇವಾಲಯ, ಇತಿಹಾಸ ದರ್ಶನ, ಸಂ, ೧೪. ೧೯೯೯, ಪು. ೧೪೪-೧೪೬.

೯೭. ಶ್ರೀನಿವಾಸ ಪಾಡಿಗಾರ, ಅಪ್ಪಣ್ಣ ಎನ್.ಹಂಜೆ., ಮನಗುಂಡಿ ಗ್ರಾಮದಲ್ಲಿ ದೊರೆತ ಗೋವೆ ಕದಂಬ ಮನೆತನದ ಮುಮ್ಮಡಿ ಗೊವಲದೇವನ ಶಾಸನ, ಶಾಸನ ಅಧ್ಯಯನ, ಸಂ, ೩. ಸಂ. ೨, ೨೦೦೬, ಪು. ೧-೮.

೯೮. ಶ್ರೀನಿವಾಸ ಪಾಡಿಗಾರ, ಅಪ್ಪಣ್ಣ ಎನ್.ಹಂಜೆ., ಪಡೆಸೂರು ತೀರ್ಥಂಕರ ಶಿಲ್ಪಗಳು ಮತ್ತು ಶಾಸನ, ಶಾಸನ ಅಧ್ಯಯನ, ಸಂ, ೪. ಸಂ. ೨, ೨೦೦೭, ಪು. ೧೨೪-೧೨೮.

೯೯. ಶ್ರೀನಿವಾಸ ಪಾಡಿಗಾರ, ಅಪ್ಪಣ್ಣ ಎನ್.ಹಂಜೆ., ತಡಕೋಡದ ಮೂರು ಜೈನ ಪಾದಪೀಠ ಶಾಸನಗಳು, ಶಾಸನ ಅಧ್ಯಯನ, ಸಂ, ೩. ಸಂ. ೧, ೨೦೦೬, ಪು. ೧೬-೧೮.

೧೦೦. ಅಪ್ಪಣ್ಣ ಎನ್.ಹಂಜೆ., ಬುಡರಸಿಂಗಿಯ ಚೌವ್ವೀಸ್ ತೀರ್ಥಂಕರರಶಿಲ್ಪ ಮತ್ತು ಶಾಸನ, ಶಾಸನ ಅಧ್ಯಯನ, ಸಂ, ೩. ಸಂ. ೧, ೨೦೦೬, ಪು. ೧೯-೨೧.

೧೦೧. ಶ್ರೀನಿವಾಸ ಪಾಡಿಗಾರ, ಅಪ್ಪಣ್ಣ ಎನ್.ಹಂಜೆ., ಧಾರವಾಡನಗರದ ಹೊಸ ಯಲ್ಲಾಪುರದಲ್ಲಿರುವ ಒಂದು ಜೈನಶಾಸನ, ಶಾಸನ ಅಧ್ಯಯನ, ಸಂ, ೨. ಸಂ. ೧, ೨೦೦೫, ಪು. ೮-೧೦.

೧೦೨. ಷಡಕ್ಷರಯ್ಯ ರು.ಮ. ಮತ್ತು ಜಯಮ್ಮ ಬಿ., ಕೆಲವು ಹೊಸ ದೇವಾಲಯಗಳು, ವೀರಗಲ್ಲು-ಶಾಸನಗಳು ಮತ್ತು ಜನವಸತಿ ನಿವೇಶನಗಳು (ಹಳೇ ಧಾರವಾಡ ಜಿಲ್ಲೆ), ಇತಿಹಾಸ ದರ್ಶನ, ಸಂ. ೯, ೨೦೦೪, ಪು. ೭೭-೮೫.

೧೦೩. ಅಪ್ಪಣ್ಣ ಎನ್.ಹಂಜೆ., ನವಲಗುಂದ ಪರಿಸರದ ಜೈನ ಮುನಿಗಳು, ಶೋಧ(ಸಂ) ಬಿ.ಯಶೋವರ್ಮ, ೨೦೧೦, ಪು. ೫೩-೬೨.

೧೦೪. ಶ್ರೀನಿವಾಸ ಪಾಡಿಗಾರ, ಅಪ್ಪಣ್ಣ ಎನ್.ಹಂಜೆ., ಮನಗುಂಡಿಯಲ್ಲಿ ಜೈನಶಾಸನ ಶಿಲೆ ಪತ್ತೆ, ಸಂಯುಕ್ತ ಕರ್ನಾಟಕ ದಿನ ಪತ್ರಿಕೆ ಮಹಾನಗರಿ ಪುರವಣಿ, ೨೦೦೫, ಪು. ೧.

೧೦೫. ಅಪ್ಪಣ್ಣ ಎನ್.ಹಂಜೆ., ಅಣ್ಣಿಗೇರಿಯ ಸುಮತಿನಾಥ ತೀರ್ಥಂಕರನ ಶಿಲ್ಪ ಮತ್ತು ಪಾದ ಪೀಠಶಾಸನ, ಸ್ಟಡೀಸ್ ಇನ್ ಕರ್ನಾಟಕ ಹಿಸ್ಟ್ರಿ ಆಂಡ್ ಕಲ್ಚರಲ್ ಪ್ರೊಸಿಡಿಂಗ್ಸ ವಾಲ್ಯೂಮ್ ೫೩, ಪು. ೧೧೪-೧೧೫.

೧೦೬. ಅಪ್ಪಣ್ಣ ಎನ್.ಹಂಜೆ., ಧಾರವಾಡ ತಾಲೂಕಿನ ಜೈನ ನೆಲೆಗಳು:ಒಂದು ಪರಿಚಯ, ಕರ್ನಾಟಕ ಲೋಚನ ಷಣ್ಮಾಷಿಕ ಪತ್ರಿಕೆ, ಸಂ. ೨೦, ಪು. ೧-೧೧.

೧೦೭. ಅಪ್ಪಣ್ಣ ಎನ್.ಹಂಜೆ., ಕುಂದಗೋಳ ತಾಲೂಕಿನ ಜೈನಾವಶೇಷಗಳು, 'ಮುಕ್ಕೊಡೆ'(ಸಂ), ಸಿ.ಎಸ್. ವಾಸುದೇವನ್, ೨೦೧೧, ಪು. ೫೫-೬೩.

೧೦೮. ಶ್ರೀನಿವಾಸ ಪಾಡಿಗಾರ, ಅಪ್ಪಣ್ಣ ಎನ್.ಹಂಜೆ., ಪಡೇಸೂರ ತೀರ್ಥಂಕರ ಶಿಲ್ಪಗಳು ಮತ್ತು ಪಾದಪೀಠ ಶಾಸನ, ಅರವಟಿಗೆ, ಸಂ. ೨, ಸಂ. ೧, ಜೈನ ಅಧ್ಯಯನ ಸಂಸ್ಥೆ ಶ್ರವಣಬೆಳಗೊಳ, ೨೦೦೯, ಪು. ೩೨-೩೬.

೧೦೯. ರಘುನಾಥಭಟ್ ಹೆಚ್.ಆರ್., ಹುಬ್ಬಳ್ಳಿಯಲ್ಲೊಂದು ಶಿಲಾಶಾಸನ ಶೋಧನೆ, ಇತಿಹಾಸ ದರ್ಶನ, ಸಂ. ೧೨, ೧೯೯೭, ಪು. ೨೪೨.

೧೧೦. ಜೋಶಿ ಎಸ್.ಕೆ., ಕಾಲರಿಂಗಣದಲ್ಲಿ ಕುಣಿವ ಪ್ರಾಚ್ಯ ಧಾರವಾಡದ ಪರಿಸರ, ಇತಿಹಾಸ ದರ್ಶನ, ಸಂ. ೧೨, ೧೯೯೭, ಪು. ೧-೫.

❑❑❑

ಅಧ್ಯಾಯ ಎರಡು

ಭೂ ಭೌಗೋಳಿಕ ಹಾಗೂ ಐತಿಹಾಸಿಕ ಹಿನ್ನಲೆ

೨.೧ ಪ್ರಸ್ತಾವನೆ

ಕರ್ನಾಟಕ ಇತಿಹಾಸವನ್ನು ಪುನರ್‍ರಚನೆಯಲ್ಲಿ ಧಾರವಾಡ ಜಿಲ್ಲೆಯು ಮಹತ್ವದ ಸ್ಥಾನವನ್ನು ಪಡೆದುಕೊಂಡಿದೆ. ಈ ಪ್ರದೇಶದಲ್ಲಿ ಅನೇಕ ರಾಜವಂಶಗಳು ಅಂದರೆ ಬಾದಾಮಿ ಚಲುಕ್ಯರ ಕಾಲದಿಂದ ಹಿಡಿದು ರಾಷ್ಟ್ರಕೂಟ, ಕಲ್ಯಾಣ ಚಾಲುಕ್ಯ, ಕಲಚೂರಿ, ದೇವಗಿರಿಯ ಯಾದವರು, ಹೊಯ್ಸಳ, ವಿಜಯನಗರದ ಅರಸರು ಜೊತೆಗೆ ಮಹಾಮಂಡಳೇಶ್ವರರಾದ ಗೋವಾ ಕದಂಬ ಹಾಗೂ ಹಾನಗಲ್ಲ ಕದಂಬರು ಆಳ್ವಿಕೆಯನ್ನು ನಡೆಸಿದ್ದಾರೆ. ಈ ಎಲ್ಲಾ ಅರಸು ಮನೆತನಗಳು ಧಾರವಾಡ ಜಿಲ್ಲೆಗೆ ಸೀಮಿತವಾಗಿ ನೋಡಿದಾಗ ಜಿಲ್ಲಾದ್ಯಂತ ತಮ್ಮ-ತಮ್ಮ ಆಳ್ವಿಕೆಗೆ ಒಳಪಡಿಸಿಕೊಂಡಿದ್ದ ವಿಷಯವನ್ನು ಶಾಸನಗಳ ಆಕರಗಳಿಂದ ತಿಳಿಯಬಹುದು.

೨.೨. ಭೂ ಭೌಗೋಳಿಕ ಪರಿಸರ

ಪ್ರತಿಯೊಂದು ಪ್ರದೇಶದ ಇತಿಹಾಸ ಮತ್ತು ಅಲ್ಲಿನ ಜನಜೀವನ ತಿಳಿಯುವಲ್ಲಿ ಅಲ್ಲಿನ ಭೌಗೋಳಿಕ ಪರಿಸರ ಮತ್ತು ನೈಸರ್ಗಿಕ ಸಂಪತ್ತು ಅತಿ ಮಹತ್ವವನ್ನು ಪಡೆದಿವೆ. ಪ್ರಾಚೀನ ಕಾಲಘಟ್ಟದಲ್ಲಿ ಭೌಗೋಳಿಕ ಅಂಶಗಳು ಅಲ್ಲಿನ ಜನ ಜೀವನವನ್ನು ನಿರ್ಧರಿಸುವ ಪ್ರಮುಖ ಮುಖ್ಯಾಂಶವಾಗಿತ್ತು, ಜೊತೆಗೆ ಮಾನವನು ಅಲ್ಲಿ ದೊರೆಯುವ ಸಂಪನ್ಮೂಲಗಳನ್ನು ಅವಲಂಬಿಸಿದ್ದ ಅಂಶವನ್ನು ಮನಗಾಣಬಹುದಾಗಿದೆ. ನೈಸರ್ಗಿಕ ಸಂಪನ್ಮೂಲಗಳಾದ ನದಿಗಳು, ಪರ್ವತಗಳು, ಮರಳುಗಾಡು, ತೀರ ಪ್ರದೇಶ, ಪ್ರಸ್ಥಭೂಮಿ ಇವು ಅಲ್ಲಿನ ಉಡುಗೆ-ತೊಡುಗೆ, ಕಸುಬು, ಆಚಾರ-ವಿಚಾರ ಮತ್ತು ಧಾರ್ಮಿಕ ಸ್ವಭಾವ ಇವುಗಳನ್ನು ರೂಪಿಸಿಕೊಳ್ಳುವಲ್ಲಿ ಮಹತ್ವದ ಪಾತ್ರ ವಹಿಸಿವೆ. ಒಟ್ಟಾರೆ ಈ ಭೌಗೋಳಿಕ ಸನ್ನಿವೇಶಗಳು ಇತಿಹಾಸದೊಂದಿಗೆ ಅತಿ ಹೆಚ್ಚು ನಿಕಟ ಸಂಬಂಧವನ್ನು ಹೊಂದಿವೆ ಎಂಬ ಅಂಶ ನಮಗೆ ಮನದಟ್ಟಾಗುತ್ತದೆ. ಹೀಗಾಗಿ ಇತಿಹಾಸವನ್ನು ಪುನರ್‌ರಚಿಸುವಲ್ಲಿ ಭೌಗೋಳಿಕ ಅಂಶಗಳ ಪಾತ್ರ ಬಹುಮುಖ್ಯ. ಈ ದೃಷ್ಟಿಯಿಂದ ಪ್ರಸ್ತುತ ಧಾರವಾಡ ಜಿಲ್ಲೆಯ ಪ್ರಾಕೃತಿಕ ಹಿನ್ನೆಲೆಯನ್ನು ಸಂಕ್ಷಿಪ್ತವಾಗಿ ನೋಡಲಾಗಿದೆ.

೨.೨.೧. ವಿಸ್ತೀರ್ಣ ಮತ್ತು ಮೇರೆಗಳು

ಧಾರವಾಡ ಜಿಲ್ಲೆಯ ಒಟ್ಟು ವಿಸ್ತೀರ್ಣ ೪೨೬೩ ಚ.ಕಿ.ಮೀಗಳಷ್ಟಿದ್ದು, ರಾಜ್ಯದ ವಿಸ್ತೀರ್ಣದ ಶೇ.೨.೨೨% ರಷ್ಟಿದೆ. ಭೂ ಭೌಗೋಳಿಕವಾಗಿ ಇದರ ವ್ಯಾಪ್ತಿ ೧೫° ೧೫' ರಿಂದ ೧೫° ೩೫' ಉತ್ತರ ಅಕ್ಷಾಂಶದಿಂದ ಕೂಡಿದ್ದು, ೭೫° ೦೦' ರಿಂದ ೭೫° ೨೦' ಪೂರ್ವ ರೇಖಾಂಶದ ಮಧ್ಯದಲ್ಲಿದೆ. ಈ ಜಿಲ್ಲೆಯ ಮೇರೆಗಳು ಜಿಲ್ಲೆಯ ಉತ್ತರಕ್ಕೆ ಬೆಳಗಾವಿ ಜಿಲ್ಲೆ, ದಕ್ಷಿಣಕ್ಕೆ ಹಾವೇರಿ ಜಿಲ್ಲೆ, ಪೂರ್ವಕ್ಕೆ ಗದಗ ಜಿಲ್ಲೆ ಮತ್ತು ಪಶ್ಚಿಮಕ್ಕೆ ಉತ್ತರ ಕನ್ನಡ ಜಿಲ್ಲೆಗಳಿವೆ.

೨.೨.೨. ಜನಸಂಖ್ಯೆ

೨೦೦೯-೨೦೧೦ರ ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿಗಳ ಕಛೇರಿ ಧಾರವಾಡ ಅಂಕಿ-ಅಂಶಗಳ ಪ್ರಕಾರ, ಈ ಜಿಲ್ಲೆಯ ಜನಸಂಖ್ಯಾ ಪ್ರಮಾಣ ಗ್ರಾಮೀಣ ಪ್ರದೇಶದಲ್ಲಿ ೭೯೭.೪೩೦ ಮತ್ತು ನಗರ ಪ್ರದೇಶದಲ್ಲಿ ೧.೦೪೯.೫೬೩ ಇದ್ದು, ಒಟ್ಟು ೧.೮೪೬.೯೯೩ ಇರುತ್ತದೆ. ಈ ಜಿಲ್ಲೆಯಲ್ಲಿ ಒಟ್ಟು ೩೭೯ ಗ್ರಾಮಗಳಿವೆ. ಅದೇ ವರದಿಯ ಪ್ರಕಾರ ಜನಸಾಂದ್ರತೆ ಪ್ರತಿ ಚದುರ ಕಿ.ಮೀಗೆ ೧೫.೧೧ ರಷ್ಟು ಕಂಡುಬರುತ್ತದೆ. ಆಡಳಿತದ ದೃಷ್ಟಿಯಿಂದ ಈ ಜಿಲ್ಲೆಯನ್ನು ಐದು ತಾಲೂಕುಗಳಾಗಿ ವಿಭಾಗಿಸಲಾಗಿದೆ. ಇವುಗಳಲ್ಲಿ ೧೨೭ ಗ್ರಾಮ ಪಂಚಾಯತಿಗಳಿವೆ. ಮತ್ತು ೧೪ ಹೋಬಳಿಗಳಾಗಿ ವಿಂಗಡಿಸಲಾಗಿದ್ದು, ಧಾರವಾಡ ಹೋಬಳಿಯಲ್ಲಿ ೧೧೮, ಹುಬ್ಬಳ್ಳಿ ಹೋಬಳಿಗಳಲ್ಲಿ ೫೮, ನವಲಗುಂದ ಹೋಬಳಿಗಳಲ್ಲಿ ೫೮, ಕುಂದಗೋಳ ಹೋಬಳಿಗಳಲ್ಲಿ ೫೮, ಕಲಘಟಗಿ ಹೋಬಳಿಗಳಲ್ಲಿ ೮೭ ಗ್ರಾಮಗಳನ್ನು ಅಳವಡಿಸಲಾಗಿದೆ.

೨.೨.೩. ಬೆಟ್ಟ-ಕಾಡು

ಈ ಜಿಲ್ಲೆಯಲ್ಲಿ ಒಟ್ಟಾರೆ ೩೫೨೩೫ ಹೆಕ್ಟೇರ್ ಅರಣ್ಯ ಪ್ರದೇಶವಿದ್ದು, ತೇಗ, ಹೊನ್ನೆ, ಬಿಳಿಮತ್ತಿ ಹಾಗೂ ಕರಿಮತ್ತಿ ಮುಂತಾದ ಬೆಲೆಬಾಳುವ ಗಿಡ, ಮರಗಳಿಂದ ಆವೃತ್ತವಾಗಿ ಜಿಲ್ಲೆಯ ಸಂಪತ್ತನ್ನು ಹೆಚ್ಚಿಸಿದೆ.

೨.೨.೪. ಖನಿಜಸಂಪತ್ತು

ಜಿಲ್ಲೆಯಲ್ಲಿ ಸದಾ ಕಟ್ಟಡದ ಕಲ್ಲುಗಳು ಮತ್ತು ಇಟ್ಟಿಗೆಗೆ ಬೇಕಾದ ಮಣ್ಣು ಮಾತ್ರ ದೊರೆಯುತ್ತದೆ. ಆದರೆ ಖನಿಜ ನಿಕ್ಷೇಪ ಕಾಣುವುದಿಲ್ಲ.

೨.೨.೫. ಮಣ್ಣು ಮತ್ತು ಬೆಳೆಗಳು

ಈ ಜಿಲ್ಲೆಯ ಮಣ್ಣು ಎಲ್ಲಾ ಪ್ರಕಾರದ ವಿಭಜಿತ ಮಿಶ್ರಣದಿಂದ ಕೂಡಿಕೊಂಡಿದೆ. ಪ್ರಧಾನವಾಗಿ ಧಾರವಾಡ ತಾಲೂಕಿನಲ್ಲಿ ಎರೆ ಭೂಮಿ ಇದ್ದು, ಕಣಿವೆ ಕೊಳ್ಳಗಳಲ್ಲಿ ಕೆಂಪು ಭೂಮಿ ಕಂಡು ಬರುತ್ತದೆ. ಹಾಗೆಯೇ ಹುಬ್ಬಳ್ಳಿ ತಾಲೂಕಿನ ಉತ್ತರ ಮತ್ತು ಪಶ್ಚಿಮ ಭಾಗಗಳಲ್ಲಿ ಕಪ್ಪು ಭೂಮಿ ಇದ್ದರೂ ಅಧಿಕ ಪ್ರಮಾಣದಲ್ಲಿ ಕೆಂಪು ಭೂಮಿಯೇ ಪ್ರಧಾನವಾಗಿದೆ. ಅದೇ ರೀತಿ ಕಲಘಟಗಿ ತಾಲೂಕಿನ ಎಲ್ಲಾ ಪ್ರದೇಶದಲ್ಲೂ ಕೆಂಪು ಭೂಮಿ ಕಂಡು ಬಂದರೆ, ಕೆಲವು ಪ್ರದೇಶದಲ್ಲಿ ಗರಸಿನ

ಭೂಮಿ ಇದೆ. ಮತ್ತು ನವಲಗುಂದ ತಾಲೂಕಿನಲ್ಲಿ ಕೆಂಪು ಭೂಮಿಯ ಪ್ರದೇಶಕ್ಕಿಂತ ಕಪ್ಪು ಭೂಮಿ ಪ್ರದೇಶವೇ ಅಧಿಕವಾಗಿದೆ. ಜಿಲ್ಲೆಯ ಪಶ್ಚಿಮ ಭಾಗದಲ್ಲಿ ಅನೇಕ ಬೆಟ್ಟ, ಗುಡ್ಡಗಳಿದ್ದು, ಪ್ರಮುಖವಾಗಿ ಬುಡ್ಡನಗುಡ್ಡದ ಸಾಲು ದಕ್ಷಿಣೋತ್ತರವಾಗಿ ಬಯಲು ನಾಡಿನ ವ್ಯಾಪ್ತಿಗೆ ಒಳಪಟ್ಟಿದ್ದು, ಕಡಿಮೆ ಸಸ್ಯವರ್ಗವಿದ್ದು, ವಿರಳ ಮಳೆ ಆಗುತ್ತದೆ. ಒಟ್ಟಾರೆ ಮಳೆಯ ಪ್ರಮಾಳ ಮತ್ತು ಪ್ರಾಕೃತಿಕ ಲಕ್ಷಣದ ಆಧಾರದ ಮೇಲೆ ಧಾರವಾಡ, ಕಲಘಟಗಿ ತಾಲೂಕು ಮಲೆನಾಡು ಎಂತಲೂ,

ಧಾರವಾಡ ತಾಲೂಕು ಅರೆ ಮಲೆನಾಡು ಎಂತಲೂ, ಹುಬ್ಬಳ್ಳಿ, ಕುಂದಗೋಳ, ನವಲಗುಂದ ತಾಲೂಕುಗಳು ಬಯಲು ಪ್ರದೇಶಗಳಾಗಿದ್ದು. ಭೌಗೋಳಿಕವಾಗಿ ವಿಭಾಗಿಸಬಹುದು. ಈ ಭೂಮಿಯ ಮಣ್ಣು ಕಪ್ಪು ಮತ್ತು ಮರಳು ಮಿಶ್ರಿತ ಕೆಂಪು ಮಣ್ಣಿನದಾಗಿದ್ದು ಫಲವತ್ತಾಗಿದೆ. ೨೦೦೯-೧೦ರ ವರದಿಯ ಪ್ರಕಾರ ಜಿಲ್ಲೆಯಲ್ಲಿ ಭತ್ತ ೨೬.೯೫೮ ಹೆಕ್ಟೇರ್, ಜೋಳ ೪೩.೬೫೮ ಹೆಕ್ಟೇರ್, ಗೋಧಿ ೩೮.೦೮೮, ಮುಸಕಿನಜೋಳ ೫೧.೮೬೨, ಕಡಲೆ ೬೦.೪೫೯, ತೊಗರಿ ೨೫೭೩, ಎಣ್ಣೆಕಾಳುಗಳು ೯೧.೫೬೩, ಹತ್ತಿ ೮೩೪೬೧ ಹೆಕ್ಟೇರ್‌ಗಳಷ್ಟು ಇರುವುದನ್ನು ಈ ಮೇಲಿನ ಅಂಕಿ-ಅಂಶಗಳಿಂದ ತಿಳಿದುಕೊಳ್ಳಬಹುದಾಗಿದೆ.

೨.೨.೬. ಹವಾಮಾನ ಮತ್ತು ಮಳೆ

ಈ ಜಿಲ್ಲೆಯ ಹವಾಮಾನ ಸಾಮಾನ್ಯವಾಗಿ ಹಿತಕರ ಮತ್ತು ಆರೋಗ್ಯಕರವಾಗಿದೆ. ಫೆಬ್ರವರಿ-ಮೇ ಅಂತ್ಯದವರೆಗೆ ಬೇಸಿಗೆಕಾಲ, ಜೂನ್-ಸೆಪ್ಟಂಬರ್‌ವರೆಗೆ ನೈರುತ್ಯ ಮುಂಗಾರು ಮಳೆಗಾಲ ,ಆಗ ಹವಾಮಾನ ತಂಪಾಗಿರುತ್ತದೆ. ಅಕ್ಟೋಬರ್-ನವಂಬರ್ ತಿಂಗಳುಗಳಲ್ಲಿ ಈಶ್ಯಾನ್ಯ ಮಾರುತಗಳಿಂದಾಗಿ ಮಳೆಯಾಗುತ್ತದೆ. ಡಿಸೆಂಬರ್-ಫೆಬ್ರವರಿ ಮಧ್ಯದವರೆಗೆ ಚಳಿಗಾಲವಿರುತ್ತದೆ. ಏಪ್ರಿಲ್-ಮೇ ತಿಂಗಳುಗಳಲ್ಲಿ ಗರಿಷ್ಠ ಉಷ್ಣತೆ ೩೮ ಡಿಗ್ರಿಸೆಲ್ಸಿಯಸ್, ಡಿಸೆಂಬರ್-ಜನವರಿ ತಿಂಗಳುಗಳಲ್ಲಿ ಕನಿಷ್ಠ ಉಷ್ಣತೆ ೧೬ಡಿಗ್ರಿಸೆಲ್ಸಿಯಸ್ ಇರುತ್ತದೆ. ಜಿಲ್ಲೆಯ ಮಳೆ ಅನಿಯಮಿತ ಹಾಗೂ ಅನಿಶ್ಚಿತತೆಯಿಂದ ಕೂಡಿದ್ದು, ವಾಡಿಕೆ ಪ್ರಕಾರ ಜಿಲ್ಲೆಯ ಅತಿಹೆಚ್ಚು ಮಳೆಯು ಕಲಘಟಗಿ ತಾಲೂಕಿನಲ್ಲಿ ೯೭೮ ಮೀ.ಮೀ. ಮಳೆಯಾದರೆ, ನವಲಗುಂದ ತಾಲೂಕಿನಲ್ಲಿ ಅತೀ ಕಡಿಮೆ ಮಳೆ, ಅಂದರೆ ೬೪೩ ಮೀ.ಮೀ ಆಗಿದೆ. ಒಟ್ಟಾರೆ ಜಿಲ್ಲೆಯ ಮಳೆಯ ಸರಾಸರಿ ಪ್ರಮಾಣ ೭೩೪.೧ ಮೀ.ಮೀ. ರಷ್ಟಾಗಿದೆ.

೨.೨.೭. ಜಲಸಂಪನ್ಮೂಲಗಳು

ಈ ಜಿಲ್ಲೆಯ ಪೂರ್ವ ಮತ್ತು ವಾಯುವ್ಯ ದಕ್ಷಿಣ ಉತ್ತರ ಇಳಿಜಾರಾಗಿದ್ದು, ಬೆಣ್ಣಿಹಳ್ಳಕ್ಕೆ ನೀರೊದಗಿಸುವ ತುಪ್ಪರಿಹಳ್ಳ ಇತರೆ ಹಳ್ಳಕೊಳ್ಳಗಳಿಂದ ಕೂಡಿದೆ. ಮುಂದೆ ಬೆಣ್ಣಿಹಳ್ಳವು ಗದಗ ಜಿಲ್ಲೆಯ ಉತ್ತರದ ಗಡಿಯಲ್ಲಿ ಮಲಪ್ರಭಾ ನದಿಯನ್ನು ಕೂಡಿಕೊಳ್ಳುತ್ತದೆ. ಹಾಗೆಯೇ ಜಿಲ್ಲೆಯ ನೈರುತ್ಯ ಭೂ ಪ್ರದೇಶವು ಉತ್ತರದಿಂದ-ದಕ್ಷಿಣಕ್ಕೆ ಇಳಾಜಾರಾಗಿದ್ದು, ಶಾಲ್ಮಲಾ/ಕಲ್ಲಹಳ್ಳಿ, ಬೇಡ್ತಿಹಳ್ಳಿ ಇನ್ನೂ ಮುಂತಾದ ಸರವುಗಳಿಂದ ಕೂಡಿದ್ದು, ಒಟ್ಟಾರೆ ಈ ಜಿಲ್ಲೆಯು ಪೂರ್ವ ಈಶ್ಯಾನ್ಯ, ಉತ್ತರ ಮತ್ತು ವಾಯುವ್ಯ ಭಾಗವು ಮಲಪ್ರಭಾ ಜಲಾನಯನ ಪ್ರದೇಶವಾದರೆ, ನೈರುತ್ಯ ಅಂದರೆ ಕಲಘಟಗಿ ಗೆ ಹೊಂದಿಕೊಂಡಿರುವ ಹುಬ್ಬಳ್ಳಿ ಮತ್ತು ಧಾರವಾಡ ತಾಲೂಕುಗಳ ದಕ್ಷಿಣದ ಅಂಚು ಪ್ರದೇಶಗಳು ಕಾಳಿ ನದಿಯ ಜಲಾನಯನ ಪ್ರದೇಶಕ್ಕೆ ಒಳಪಟ್ಟಿರುವುದು ಒಂದು ವಿಶಿಷ್ಟ ಸಂಗತಿಯಾಗಿದೆ. ಒಟ್ಟಾರೆ ಈ ಜಿಲ್ಲೆಯ ನೀರು ಪೂರ್ವದ ಬಂಗಾಳಕೊಲ್ಲಿ, ಪಶ್ಚಿಮದ ಅರಬ್ಬಿ ಸಮುದ್ರಗಳಲ್ಲೂ ಹಂಚಿಕೆಯಾಗುತ್ತದೆ.

೨.೩ ರಾಜಕೀಯ ಇತಿಹಾಸ

ಧಾರವಾಡ ಜಿಲ್ಲೆಯಲ್ಲಿ ಅನೇಕ ರಾಜಮನೆತನಗಳು ಆಳಿ-ಅಳಿದ ಕುರುಹುಗಳನ್ನು ಬಿಟ್ಟುಹೋಗಿದ್ದಾರೆ. ಈ ಪುರಾವೆಗಳಲ್ಲಿ ಶಾಸನಗಳು ಪ್ರಮುಖವಾಗಿದ್ದು, ಇವುಗಳನ್ನು ಆಧಾರವಾಗಿಟ್ಟುಕೊಂಡು ಈ ಜಿಲ್ಲೆಯ ಇತಿಹಾಸವನ್ನು ಶಾಸನಗಳ ಹಿನ್ನೆಲೆಯಲ್ಲಿ ಪರಿಚಯಿಸಲಾಗಿದೆ. ಪ್ರಸ್ತುತ ಈ ಜಿಲ್ಲೆಯಲ್ಲಿ ಸುಮಾರು ೩೮೦ಕ್ಕಿಂತಲೂ ಹೆಚ್ಚಿನ ಶಾಸನಗಳು ದೊರೆತಿವೆ. ಇವುಗಳಲ್ಲಿ ಬಾದಾಮಿ ಚಲುಕ್ಯರ ಕಾಲದ ಇಮ್ಮಡಿ ಕೀರ್ತಿವರ್ಮನ ಶಾಸನವೇ ಅತೀ ಪ್ರಾಚೀನ ಶಾಸನವಾಗಿರುವುದು ತಿಳಿಯುತ್ತದೆ.

ಶಾತವಾಹನರು

ಮೌರ್ಯರ ನಂತರ ಶಾತವಾಹನರು ಕರ್ನಾಟಕದಲ್ಲಿ ಆಳ್ವಿಕೆ ಮಾಡಿದರು. ಪ್ರಸ್ತುತ ಈ ಜಿಲ್ಲೆಯಲ್ಲಿ ಅವರ ಯಾವುದೇ ಶಾಸನಗಳು ನಮಗೆ ದೊರಕುವುದಿಲ್ಲ. ಆದರೆ ಈ ಪ್ರದೇಶವನ್ನು ಸುತ್ತುವರಿದ ಪ್ರದೇಶಗಳಲ್ಲಿ ಈ ಕಾಲಘಟ್ಟದ ಅವಶೇಷಗಳು ದೊರೆತಿವೆ. ಅವುಗಳಲ್ಲಿ ಬನವಾಸಿ, ವಡಗಾಂವ, ಮಾಧವಪುರ, ಕೊಣ್ಣೂರು, ಶಿಗ್ಗಾಂವ ಇನ್ನೂ ಮುಂತಾದ ಪ್ರದೇಶಗಳಾಗಿವೆ. ಮುಖ್ಯವಾಗಿ ಈ ಜಿಲ್ಲೆಯ ಪಕ್ಕದಲ್ಲಿನ ಕೊಣ್ಣೂರು ಹತ್ತಿರದ ವಾಸನದಲ್ಲಿ[೧] ಶಾತವಾಹನರ ದೊರೆ ಪುಳಮಾವಿಯ ಶಿಲಾಶಾಸನ ಸಿಕ್ಕಿದೆ. ಇದರ ಹಿನ್ನೆಲೆಯಲ್ಲಿ ಈ ಪ್ರದೇಶದಲ್ಲಿ ಜನವಸತಿ ಇದ್ದಿರುವ ಸಾಧ್ಯತೆಯಿದೆ.

ಬನವಾಸಿ ಕದಂಬರು

ಶಾತವಾಹನ ನಂತರ ಕರ್ನಾಟಕವನ್ನು ಆಳಿದ ರಾಜಮನೆತನ ಬನವಾಸಿ ಕದಂಬರು. ಇವರ ಆಳ್ವಿಕೆಗೆ ಸಂಬಂಧಿಸಿದಂತೆ ಯಾವುದೇ ಶಾಸನಗಳು ದೊರೆಯುವುದಿಲ್ಲ. ಆದರೆ ಇವರ ಕಾಲಘಟ್ಟದ ಅವಶೇಷಗಳು ಈ ಜಿಲ್ಲೆಯನ್ನು ಸುತ್ತುವರೆದಿದ್ದು ಹಲಸಿ, ಬನವಾಸಿ, ದೇವಗಿರಿ ಪ್ರದೇಶಗಳಲ್ಲಿ ಇವರ ಕುರುಹುಗಳು ಸಿಗುತ್ತವೆ. ಆದರೆ ಈ ಜಿಲ್ಲೆಯಲ್ಲಿಯೂ ಜನವಸತಿ ಇದ್ದಿರಬೇಕೆಂದು ಊಹಿಸಬಹುದಾಗಿದೆ.

ಬಾದಾಮಿ ಚಲುಕ್ಯರು

ಬನವಾಸಿ ಕದಂಬರ ನಂತರ ಬಾದಾಮಿಯನ್ನು ರಾಜಧಾನಿಯನ್ನಾಗಿ ಮಾಡಿಕೊಂಡು ಸುಮಾರು ೨೫೦ ವರ್ಷಗಳ ಕಾಲದವರೆಗೆ ಕರ್ನಾಟಕವನ್ನು ಆಳಿದ ಬಲಿಷ್ಠ ರಾಜಮನೆತನ ಇದಾಗಿದೆ. ಪ್ರಸ್ತುತ ಇವರ ಕಾಲಘಟ್ಟಕ್ಕೆ ಸಂಬಂಧಿಸಿದ ಎರಡು ಶಾಸನಗಳು ದೊರಕುತ್ತವೆ. ಅವುಗಳಲ್ಲಿ ಛಬ್ಬಿ[೨] ಮತ್ತು ಅಣ್ಣಿಗೇರಿ[೩] ಈ ಅಣ್ಣಿಗೇರಿ ಶಾಸನವು ಇಮ್ಮಡಿ ಕೀರ್ತಿವರ್ಮನ ಕಾಲಕ್ಕೆ ಸೇರಿದ್ದು, ಇವನ ಆಳ್ವಿಕೆಯ ಕಾಲದಲ್ಲಿ ಕರಿಯಮ್ಮ ಜೇಬುಗಳಗೇರಿಯನ್ನು ಆಳುತ್ತಿದ್ದಾಗ ಚೇದಿಯ(ಜಿನಮಂದಿರ) ನಿರ್ಮಾಣ ಮಾಡಿರುವ ಬಗ್ಗೆ ಶಾಸನ ದಾಖಲಿಸಿದೆ.

ರಾಷ್ಟ್ರಕೂಟರು ಕ್ರಿ.ಶ.(೭೫೭-೯೭೩)

ಬಾದಾಮಿ ಚಲುಕ್ಯರ ನಂತರ ಕರ್ನಾಟಕದ ಸಾರ್ವಭೌಮರಾಗಿ ಸುಮಾರು ೨೨೫ ವರ್ಷಗಳ ಕಾಲದವರೆಗೆ ಆಳ್ವಿಕೆ ಮಾಡಿದ ರಾಜಮನೆತ ಇದಾಗಿದೆ. ಪ್ರಸ್ತುತ ಧಾರವಾಡ ಜಿಲ್ಲೆಗೆ

ಸಂಬಂಧಿಸಿದ ಸುಮಾರು ಹನ್ನೊಂದು ಶಾಸನಗಳು ಲಭಿಸುತ್ತವೆ. ರಾಷ್ಟ್ರಕೂಟರ ಈ ಶಾಸನಗಳಲ್ಲಿ ಕೇವಲ ನಾಲ್ಕು ರಾಜರುಗಳ ಹೆಸರುಗಳು ಮಾತ್ರ ಕಾಣಸಿಗುತ್ತವೆ. ಅವರೆಂದರೆ ಅಮೋಘವರ್ಷ, ನಾಲ್ಕನೆಗೋವಿಂದ, ಮುಮ್ಮಡಿ ಕೃಷ್ಣ ಮತ್ತು ಖೊಟ್ಟಿಗರು ಪ್ರಮುಖರಾಗಿದ್ದಾರೆ. ತಂಬೂರು[೪] ಶಾಸನದಲ್ಲಿ ಕಣ್ಣರ ಮಹಾರಾಜ ಪಲಸಿಗೆ-೧೨೦೦೦ ಆಳುತ್ತಿದ್ದುದಲ್ಲದೇ, ಗುಡಗೇರಿಯ[೫] ಶಾಸನದಲ್ಲಿ ಮಾರಸನ ಬಗ್ಗೆ ಉಲ್ಲೇಖಿತವಾಗಿದೆ. ಬಹುಶಃ ಇವನೇ ಅಮೋಘವರ್ಷನೇ ಇರಬಹುದೆ(?) ಇವನ ಆಳ್ವಿಕೆಯ ಕಾಲಘಟ್ಟದಲ್ಲಿ ದೇವಣ್ಣನೆಂಬ[೬] ಅಧಿಕಾರಿಯು ಬೆಳ್ವಲ-೩೦೦ರನ್ನು ಆಳುತ್ತಿದ್ದನು. ಈತನ ಅಧಿಕಾರದ ಅವಧಿಯಲ್ಲಿ ಮೋರಿಯ ಕಲಿಬಿಟ್ಟಯ್ಯ ಕೆರೆಯನ್ನು ನಿರ್ಮಾಣಮಾಡಿದುದರ ಕುರಿತು ಹುಬ್ಬಳ್ಳಿ[೭] ಶಾಸನ ತಿಳಿಸುತ್ತದೆ.

ಉಣಕಲ್-೩೦ರ ಗಾವುಂಡನ ಬಗ್ಗೆ ಸುಳ್ಳದ[೮] ಶಾಸನ ತಿಳಿಸುತ್ತದೆ. ನಂತರದ ಕಾಲಾವಧಿಯಲ್ಲಿ ರಾಷ್ಟ್ರಕೂಟರ ಮನೆತನದ ಮತ್ತೊಬ್ಬ ಅರಸ ನಾಲ್ವಡಿಗೋವಿಂದನು ದೀಕ್ಷರಿಗೆ ದತ್ತಿ ಬಿಟ್ಟ ಬಗ್ಗೆ ಕಳಸ[೯] ಶಾಸನ ಉಲ್ಲೇಖಿಸುತ್ತದೆ. ಮತ್ತು ಖೊಟ್ಟಿಗನ ಬಗ್ಗೆ ಅಂದರೆ ಗಂಗವಂಶದ ಸತ್ಯವಾಕ್ಯ ಕೊಂಗಣಿವರ್ಮ ಧರ್ಮ ಮಹಾರಾಜನನ್ನು ಉಲ್ಲೇಖಿಸುವ ಶಾಸನ ಕೋಳಿವಾಡದಲ್ಲಿದೆ.[೧೦] ಈ ಮನೆತನಕ್ಕೆ ಸಂಬಂಧಿಸಿದಂತೆ ಸುಮಾರು ಐದು ಸ್ಥಳಗಳಲ್ಲಿ ಶಾಸನಗಳು ದೊರೆತಿದ್ದು, ಈ ಶಾಸನಗಳಲ್ಲಿ ಈ ಮನೆತನಕ್ಕೆ ಸಂಬಂಧಿಸಿದ ಯಾವುದೇ ರಾಜರುಗಳ ಹೆಸರುಗಳು ಉಲ್ಲೇಖಗೊಂಡಿಲ್ಲ. ಪ್ರಸ್ತುತ ಇವರ ಕಾಲದ ಶಾಸನಗಳು ಅಂಬಳ್ಳಿ,[೧೧] ಕಟ್ನೂರು,[೧೨] ಗಬ್ಬೂರು,[೧೩] ಧಾರವಾಡ,[೧೪] ಮಾವಳ್ಳಿ[೧೫] ಗ್ರಾಮಗಳಲ್ಲಿ ಈ ಮನೆತನದ ಶಾಸನಗಳು ದೊರೆತಿವೆ.

ಕಲ್ಯಾಣ ಚಾಲುಕ್ಯರು(ಕ್ರಿ.ಶ. ೯೭೩-೧೧೯೮)

ರಾಷ್ಟ್ರಕೂಟರ ನಂತರ ಅಧಿಕಾರಕ್ಕೆ ಬಂದ ಪ್ರಮುಖ ಅರಸರೆಂದರೆ ಕಲ್ಯಾಣ ಚಾಲುಕ್ಯರು. ಪ್ರಸ್ತುತ ಧಾರವಾಡ ಜಿಲ್ಲೆಯಲ್ಲೇ ಇವರ ಕಾಲಘಟ್ಟಕ್ಕೆ ಸಂಬಂಧಿಸಿದ ಸುಮಾರು ಎಂಭತ್ತಕ್ಕೂ ಹೆಚ್ಚಿನ ಶಾಸನಗಳು ಈ ಪ್ರದೇಶದಲ್ಲಿ ದೊರೆತಿವೆ.

ಇಮ್ಮಡಿ ತೈಲಪನು ಮಾನ್ಯಖೇಟವನ್ನು ರಾಜಧಾನಿಯನ್ನಾಗಿ ಮಾಡಿಕೊಂಡು, ಬೆಳ್ವಲ ದೇಶದ ದಂಡನಾಯಕ ಸೋಬರಸ ಕಾರಣ ಗುರಿಪಟ್ಟಿ ಗ್ರಾಮವನ್ನು ನೀಡಿದ್ದನ್ನು ಅರೆಕುರಹಟ್ಟಿಯ[೧೬] ಶಾಸನ ತಿಳಿಸುತ್ತದೆ. ತೈಲಪನ ನಂತರ ಇವನ ಮಗ ಸತ್ಯಾಶ್ರಯನು ಅಧಿಕಾರಕ್ಕೆ ಬಂದನು. ಇವನಿಗೆ ಗಂಡು ಸಂತಾನ ಇಲ್ಲದೇ ಇರುವುದರಿಂದ ಆತನ ತಮ್ಮನ ಮಕ್ಕಳಾದ ಐದನೇ ವಿಕ್ರಮಾದಿತ್ಯ, ಅಯ್ಯಣ, ಇಮ್ಮಡಿ ಜಯಸಿಂಹ ಅಧಿಕಾರಕ್ಕೆ ಬಂದರು. ಆದರೆ ಇವರ ಆಳ್ವಿಕೆಗೆ ಸಂಬಂಧಿಸಿದ ಶಾಸನಗಳು ನಮಗೆ ಲಭ್ಯವಾಗಿಲ್ಲ. ಇಮ್ಮಡಿ ಜಯಸಿಂಹ ಕ್ರಿ.ಶ. ೧೦೧೫-೧೦೪೪ರ ವರೆಗೆ ಆಳ್ವಿಕೆಮಾಡಿದ್ದು, ಇವನು ವಾನರಸ ಮತ್ತು ಹನ್ನೆರಡು ಗಾವುಂಡರಿಗೆ ತೆರಿಗೆಯನ್ನು ಬಿಟ್ಟ ವಿಷಯ ಬ್ಯಾಹಟ್ಟಿಯ[೧೭] ಶಾಸನದಲ್ಲಿ ತಿಳಿಸಿದರೆ, ಸಬ್ಬಿನಾಡಿನಲ್ಲಿ ಕೆರೆ ಕಟ್ಟಿಸಿ ಅದಕ್ಕೆ ದಾನ ನೀಡಿದ್ದನ್ನು ಬೆಳಗಲಿ[೧೮] ಶಾಸನ ತಿಳಿಸುತ್ತದೆ.

ಜಯಸಿಂಹನಮಗ ಒಂದನೇ ಸೋಮೇಶ್ವರ ಕಲ್ಯಾಣಪುರವನ್ನು ರಾಜಧಾನಿಯನ್ನಾಗಿ ಮಾಡಿಕೊಂಡು ಆಳ್ವಿಕೆಯನ್ನು ಮಾಡುತ್ತಿರಲು, ಇವನು ತನ್ನ ಆಳ್ವಿಕೆಯ ಸಂದರ್ಭದಲ್ಲಿ ಕುಂದಗೋಳ[೧೯] ಬಾಲಚಂದ್ರೇಶ್ವರ ದೇವರಿಗೆ ದಾನದತ್ತಿಗಳನ್ನು ನೀಡಿದ್ದಾನೆ. ಇವನ ಮಹಾಸಾಮಂತ ಇಂದ್ರಕೇಶಿಯು ಕುಯಿಬಾಳ[೨೦] ಜೋಗೇಶ್ವರ ಹಾಗೂ ಬಸದಿಗೆ ಅನೇಕ ದಾನದತ್ತಿಗಳನ್ನು ಕೊಟ್ಟಿದ್ದಾನೆ. ಸೋಮೇಶ್ವರ ಹಿರಿಯಮಗ ಇಮ್ಮಡಿ ಸೋಮೇಶ್ವರನು ಬೆಳ್ವಲ, ಪುಲಿಗೆರೆ ಪ್ರದೇಶಗಳ ಅಡಳಿತಾಧಿಕಾರಿಯಾಗಿದ್ದ ಬಗ್ಗೆ ಗುಡಗೇರಿ[೨೧] ಶಾಸನದಲ್ಲಿದೆ. ದಂಡನಾಯಕ ರುದ್ರಭಟ್ಟನು ಗುಡಗೇರಿಯಲ್ಲಿ[೨೨] ಆಳ್ವಿಕೆ ಮಾಡುತ್ತಿದ್ದನು. ಮಹಾಮಂಡಳೇಶ್ವರನಾದ ಲಕ್ಷ್ಮರಸ ಮಂಟೂರು ರುದ್ರಶಕ್ತಿ ಪಂಡಿತರಿಗೆ ಭೂದಾನದ ಬಗ್ಗೆ ಮಂಟೂರಿನ ಶಾಸನ[೨೩] ತಿಳಿಸುತ್ತದೆ. ಆಚಾರ್ಯ ಸೋಮಕರ್ತಾರ ದೇವರಿಗೆ ನೂಲೆಯ[೨೪] ಹನ್ನೆರಡು ಗಾವುಂಡರು ದತ್ತಿಯನ್ನು ನೀಡಿದರೆ, ಇವರ ಕಾಲಘಟ್ಟದಲ್ಲಿ ಅಣ್ಣಿಗೇರಿ ಹಾಗೂ ಮಾಸವಾಡಿ ವಿಭಾಗವನ್ನು ಮಾಡಿಕೊಂಡಿದ್ದನ್ನು ಅಣ್ಣಿಗೇರಿಯ[೨೫] ಶಾಸನದಲ್ಲಿದೆ.

ಸೋಮೇಶ್ವರನ ನಂತರ ಅಧಿಕಾರಕ್ಕೆ ಬಂದವನು ಆರನೇ ವಿಕ್ರಮಾದಿತ್ಯ. ಇವನಿಗೆ ಸಂಬಂಧಿಸಿದ ಶಾಸನಗಳು ಈ ಪ್ರದೇಶದಲ್ಲಿ ಸುಮಾರು ೩೦ಕ್ಕಿಂತ ಹೆಚ್ಚು ದೊರೆಯುತ್ತವೆ. ಅವುಗಳಲ್ಲಿ ಇವನ ಆಳ್ವಿಕೆಯನ್ನು ಸೂಚಿಸುವ ಪ್ರಥಮ ಶಾಸನ ಅಮ್ಮಿನಭಾವಿಯಲ್ಲಿ[೨೬] ದೊರೆತಿದೆ. ಇವನ ಚಿಕ್ಕ ಸಹೋದರ ವಿಕ್ರಮಾದಿತ್ಯ ಕೋಗಳೆ, ಕುಂದೂರು, ಪುಲಿಗೆರೆ ಹಾಗೂ ಬೆಳ್ವಲ ಪ್ರದೇಶಗಳನ್ನು ಅಳ್ವಿಕೆ ಮಾಡುತ್ತಿದ್ದು, ಕೆರೆಯನ್ನು ಕಟ್ಟಿಸಿ ಅದಕ್ಕೆ ದತ್ತಿನೀಡಿದ ವಿಷಯ ಮೊರಬ[೨೭] ಶಾಸನ ತಿಳಿಸುತ್ತದೆ. ಆರನೇ ವಿಕ್ರಮಾದಿತ್ಯನ ಆಡಳಿತ ಹಾಗೂ ಅವನ ಹೆಂಡತಿ ಮಲಯವತಿ ಮಹಾದೇವಿಯ ಉಲ್ಲೇಖ ಧಾರವಾಡ[೨೮] ಶಾಸನದಲ್ಲಿದೆ. ಇವನ ಕಾಲದಲ್ಲಿ ದಂಡನಾಯಕರಾದ ಸಾಯಿಪಯ್ಯಾಧಿಗಳು ಅಗ್ರಹಾರ ಕಲಿದೇವರಿಗೆ ದತ್ತಿ ನೀಡಿದ್ದನ್ನು ನಾವಳ್ಳಿ[೨೯] ಶಾಸನದಲ್ಲಿದೆ. ಇವಳ ಆಳ್ವಿಕೆಗೆ ಸಂಬಂಧಿಸಿದಂತೆ ಸಿದ್ದಾಪುರ[೩೦] ಹಾಗೂ ನರೇಂದ್ರ[೩೧] ಶಾಸನಗಳು ದಾಖಲಿಸಿವೆ. ವಿಕ್ರಮಾದಿತ್ಯನ ಮಗಳು ಮೈಳಲದೇವಿ ಕೇಶವದೇವರ ಪ್ರತಿಷ್ಠೆ ಮಾಡಿಸಿದ್ದು ಮಮ್ಮಿಗಟ್ಟಿಯಲ್ಲಿ[೩೨] ಶಾಸನದಲ್ಲಿದೆ. ಮತ್ತು ಕುಂದೂರು[೩೩] ಶಾಸನದಲ್ಲಿ ಲಕ್ಷ್ಮಣೇಶ್ವರ ದೇವರಿಗೆ ದತ್ತಿಯನ್ನು ನೀಡುತ್ತಾಳೆ. ವಿಕ್ರಮಾದಿತ್ಯನ ಸಾಮಂತ ಬಮ್ಮದೇವ ಮುಗುಂದ-೩೦ನ್ನು ಅಳ್ವಿಕೆಮಾಡಿತ್ತಿದ್ದು, ಇವನ ಅಜ್ಜ ಮಾರ್ತಾಂಡಯ್ಯರು ಕೆರೆಗೆ ದತ್ತಿಯನ್ನು ಕೊಟ್ಟಿದ್ದನ್ನು ಮುಗುದ[೩೪] ಶಾಸನ ತಿಳಿಸುತ್ತದೆ.

ಆರನೇ ವಿಕ್ರಮಾದಿತ್ಯನ ನಂತರ ಆತನ ಮಕ್ಕಳ ಆಳ್ವಿಕೆಯನ್ನು ಕಾಣುತ್ತೇವೆ. ಈತನಿಗೆ ಮಲ್ಲಿಕಾರ್ಜುನ, ಜಯಕರ್ಣ, ಮುಮ್ಮಡಿ ಸೋಮೇಶ್ವರ ಎಂಬ ಮೂವರು ಮಕ್ಕಳಿದ್ದು, ಇವರಲ್ಲಿ ಮುಮ್ಮಡಿ ಸೊಮೇಶ್ವರ ಅಧಿಕಾರಕ್ಕೆ ಬಂದನು. ಇವನ ಬಗ್ಗೆ ತಿಳಿದುಕೊಳ್ಳಲು ಕೊಪ್ಪದ[೩೫] ಶಾಸನ ತಿಳಿಸುತ್ತದೆ. ಇವನು ಕಲಿದೇವ ಸ್ವಾಮಿಗೆ ಭಣಸಾಲೆಯ ಮಲ್ಲಿಸೆಟ್ಟಿ ದತ್ತಿ ನೀಡಿದ್ದ ಎಂಬ ವಿಷಯ ಕಾಮಧೇನುವಿನ[೩೬] ಶಾಸನದಲ್ಲಿದೆ. ಸೋಮೇಶ್ವರ ಕಾಲದಲ್ಲಿ ಇವನ ಸಾಮಂತ ಬಿಜ್ಜಳನಾಗಿದ್ದು, ಈತನು ಹಾನಗಲ್ಲ ಕೋಟೆಯ ಮೇಲೆ ಯುದ್ಧವನ್ನು ಮಾಡಿ ಜಯಗಳಿಸಿದ್ದನಲ್ಲದೇ ಇವನಿಗೆ ಸಂಬಂಧಿಸಿದ ಎರಡು ಶಾಸನಗಳು ತಂಬೂರಿನಲ್ಲಿ[೩೭] ದೊರೆತಿದೆ.

ಈತನ ಆಳ್ವಿಕೆಯ ನಂತರ ಎರಡನೇಯ ಜಗದೇಕಮಲ್ಲನು ಆಳ್ವಿಕೆಯನ್ನು ಮಾಡಿದ್ದು, ಇವನು ನಾಗೇಶ್ವರ ದೇವರಿಗೆ ದತ್ತಿಗಳನ್ನು ನೀಡಿದ ವಿಷಯ ಗುಡಗೇರಿ[೩೮] ಶಾಸನದಲ್ಲಿದೆ. ಕಂದಾಯ ದಾಖಲೆಗಳ ಅಧಿಕಾರಿ ಮಾಳಸಯ್ಯನು ಕುರಹಟ್ಟಿಯ ಮಾಳೇಶ್ವರ ದೇವಾಲಯ ಮತ್ತು ತಂಬೂರು ಗ್ರಾಮದಲ್ಲಿ ಬೊಪ್ಪನು ಚೌಡೇಶ್ವರಿ ದೇವಾಲಯ ನಿರ್ಮಿಸಿ ಅವುಗಳಿಗೆ ದತ್ತಿಗಳನ್ನು ನೀಡಿದ ವಿಷಯ ತಂಬೂರು[೩೯] ಶಾಸನದಲ್ಲಿದೆ. ಇವನು ಪಟ್ಟಸಾಹಿಣಿ ಸೇನಾಪತಿ ಬರ್ಮಣ್ಣನ ಬಗ್ಗೆ ಅಮ್ಮಿನಬಾವಿ[೪೦] ಶಾಸನದಲ್ಲಿದೆ. ಮಾದಿರಾಜ ಮತ್ತು ಆದಿತ್ಯನಾಯಕರು ಕುಯಿಬಾಳದ[೪೧] ಬಸದಿಗೆ ದಾನ–ದತ್ತಿಗಳನ್ನು ನೀಡಿದ್ದಾರೆ. ಇನ್ನು ಲಕ್ಷ್ಮಿಯಕ್ಕ ಎಂಬುವವಳು ಬೆಲವಂತದಲ್ಲಿ[೪೨] ಹಡವಳೇಶ್ವರ ಬಸದಿಗೆ ದತ್ತಿ ನೀಡಿರುವ ವಿಷಯವಿದೆ.

ಜಗದೇಕಮಲ್ಲನ ನಂತರ ಈತನ ಸಹೋದರ ಮುಮ್ಮಡಿ ತೈಲಪನು ಅಧಿಕಾರವನ್ನು ನಡೆಸಿದನು. ಇವನ ಆಡಳಿತಾವಧಿಯಲ್ಲಿ ಕುರಹಟ್ಟಿಯ ಮುಮ್ಮರಿದಂಡ ಮತ್ತು ಐವತ್ತೊಕ್ಕಲರು ಗವೇಶ್ವರ ದೇವಾಲಯವನ್ನು ನಿರ್ಮಿಸಿದ್ದು, ಮಿಶ್ರಿಕೋಟೆಯ[೪೩] ಶಾಸನದಲ್ಲಿದೆ. ನಾರಾಯಣ ದೇವಾಲಯವನ್ನು ನಿರ್ಮಿಸಿ ಅವುಗಳಿಗೆ ದಾನ–ದತ್ತಿಗಳನ್ನು ನೀಡಿದ ಬಗ್ಗೆ ತಂಬೂರು[೪೪] ಶಾಸನ ತಿಳಿಸುತ್ತದೆ. ಈತನ ನಂತರ ಇವನ ಮಗ ನಾಲ್ಕನೇ ಸೋಮೇಶ್ವರ ಅಣ್ಣಿಗೇರಿಯನ್ನು ರಾಜಧಾನಿಯನ್ನಾಗಿ ಮಾಡಿಕೊಂಡು ಆಳ್ವಿಕೆಯನ್ನು ಮಾಡಲು ಪ್ರಾರಂಭಿಸಿದನು. ಆದರೆ ಇವನ ಆಡಳಿತದ ಸಂದರ್ಭದಲ್ಲಿ ರಾಜಕೀಯವಾಗಿ ಅಸ್ಥಿರತೆ ಕಾಣಲು ಪ್ರಾರಂಭಿಸಿತು. ಈತನ ದಂಡನಾಯಕ ಮಾದಿರಾಜ ಕೇತಗಾವುಂಡನು ಡಿಂಬವಳ್ಳಿಯಲ್ಲಿ ಮೈಳೇಶ್ವರ ದೇವಾಲಯ ನಿರ್ಮಿಸಿದ ವಿಷಯ ಸೋಮನಕೊಪ್ಪದ[೪೫] ಶಾಸನದಲ್ಲಿದ್ದರೆ, ಮತ್ತೊಬ್ಬ ದಂಡನಾಯಕ ವೀರಬೊಮ್ಮರಸ ಅಣ್ಣಿಗೆರೆಯ ಬೊಮ್ಮೇಶ್ವರ ಮಹಾದೇವರಿಗೆ ದಾನ–ದತ್ತಿಗಳನ್ನು ನೀಡಿದ ವಿಷಯ ಹಸರಂಬಿ[೪೬] ಶಾಸನದಲ್ಲಿದೆ. ಮತ್ತೊಬ್ಬ ದಂಡನಾಯಕನಾದ ಬೆಳ್ವಲನಾಡ ಪೆರ್ಗಡೆಯು ಕೇಶವ ಭಟ್ಟಯ್ಯನಿಂದ ಬ್ರಹ್ಮಪುರಿಯ ಬ್ರಾಹ್ಮಣರಿಗೆ ಅನೇಕ ದತ್ತಿಗಳನ್ನು ನೀಡಿರುವ ವಿಷಯ ಅಣ್ಣಿಗೇರಿ[೪೭] ಶಾಸನದಲ್ಲಿದೆ. ಪೂರ್ವದಳ್ಳಿಯ ೨೦೦ ಮಹಾಜನರು ಕೂಡಿ ನವಿಲೂರ ಕುರುಬರು ಸೇಣಿಗರ ಅನುಮತಿಯಂತೆ ಸೇಣಿಗೇಶ್ವರ ದೇವರಿಗೆ ದತ್ತಿಗಳನ್ನು ನೀಡಿದ್ದ ವಿಷಯ ಹಾಳಸೀಗಿಕಟ್ಟಿ[೪೮] ಶಾಸನದಿಂದ ತಿಳಿಯುತ್ತದೆ. ಒಟ್ಟಾರೆ ಇವನ ಕಾಲಘಟ್ಟಕ್ಕೆ ಸೇರಿದ ಸುಮಾರು ನಾಲ್ಕು ಶಾಸನಗಳು ಮನಗುಂಡಿಯಲ್ಲಿ ದೊರೆಯುತ್ತವೆ. ಹೀಗೆ ಇವನ ಆಳ್ವಿಕೆಯ ಸಂದರ್ಭದಲ್ಲಿ ಇವರ ಸಂಬಂಧಿಕರು ಹಾಗೂ ಸಾಮಂತರೆನಿಸಿದ್ದ ಕಳಚೂರಿಯರು ಇವನನ್ನು ಸೋಲಿಸಿದರು. ನಂತರ ಇವರು ಹಲವಾರು ಪ್ರದೇಶಗಳಲ್ಲಿ ಚದುರಿ ಗುಪ್ತವಾಗಿ ಆಡಳಿತವನ್ನು ಮಾಡಲು ಪ್ರಯತ್ನಿಸಿದರು.

ಕಲಚೂರ್ಯರು

ಕಲ್ಯಾಣ ಚಾಲುಕ್ಯರ ಸಾಮಂತರಾಗಿ ಕಲಚೂರ್ಯರು ಆಳ್ವಿಕೆ ಮಾಡಿದರು. ಇವರಲ್ಲಿ ಬಿಜ್ಜಳನೂ ಒಬ್ಬ. ಇವನು ಹಾನಗಲ್ಲ ಕೋಟೆಯನ್ನು ಮುತ್ತಿಗೆ ಹಾಕಿದಾಗ ಕೇತಯನಾಯಕನೊಂದಿಗೆ ಹೋರಾಡಿ ಜಯಶೀಲನಾದ ವಿಷಯ ತಂಬೂರ[೪೯] ಶಾಸನದಲ್ಲಿದೆ. ಈತನ ಆಳ್ವಿಕೆಯ ಸಂದರ್ಭದಲ್ಲಿ

ಶ್ರೀಧರಯ್ಯ ಎಂಬ ದಂಡನಾಯಕ ಅಣ್ಣಿಗೇರಿಯ[೫೦] ಧೋರೇಶ್ವರ ದೇವರಿಗೆ, ಅಮೃತೇಶ್ವರ ದೇವರಿಗೆ[೫೧]ಹಾಗೂ ಚಂಡಿಕಾದೇವಿಗೆ[೫೨] ಅನೇಕ ದತ್ತಿಗಳನ್ನು ನೀಡಿದ ವಿಷಯವಿದೆ. ಈತನ ನಂತರ ಮಗ ಸೋಮೇಶ್ವರ ಅಧಿಕಾರಕ್ಕೆ ಬಂದನು. ಇವನ ದಂಡನಾಯಕ ದುಣ್ಣನಿದೇವನ ಸಮ್ಮುಖದಲ್ಲಿ ನಾಗಗಾವುಂಡನು ನಾಗೇಶ್ವರ ದೇವರಿಗೆ ದತ್ತಿ ನೀಡಿದ ವಿಷಯ ಅಣ್ಣಿಗೇರಿಯ[೫೩] ಶಾಸನದಲ್ಲಿದೆ. ಮತ್ತು ಕಲಚೂರ್ಯರ ಮತ್ತೊಬ್ಬ ಅರಸ ಅಹವಮಲ್ಲನು ಹುಪ್ಪವಳ್ಳಿಯಿಂದ ೧೦೨ ಬ್ರಾಹ್ಮಣರಿಗೆ ಬೆಲ್ಲವೂರ ಗ್ರಾಮವನ್ನು ದತ್ತಿನೀಡಿದ ವಿಷಯ ರಾಯಪುರದ[೫೪] ತಾಮ್ರ ಶಾಸನದಲ್ಲಿದೆ.

ದೇವಗಿರಿ ಯಾದವರು

ದೇವಗಿರಿಯ ಯಾದವರು ರಾಷ್ಟ್ರಕೂಟರ ಮತ್ತು ಕಲ್ಯಾಣ ಚಾಲುಕ್ಯರ ಸಾಮಂತರಾಗಿದ್ದರು. ಇವರು ಬೊಂಬಾಯಿ, ಖಾಂದೇಶ, ನಾಸಿಕ ಮತ್ತು ಅಹಮದ್‌ನಗರ ಪ್ರದೇಶಗಳನ್ನು ಕೇಂದ್ರವಾಗಿಟ್ಟುಕೊಂಡು ೩೦೦ ವರ್ಷಗಳ ವರೆಗೆ ಆಳ್ವಿಕೆಯನ್ನು ನಡೆಸಿದರು. ಇವರ ಮೊದಲ ರಾಜಧಾನಿ ಸಿಂದಿನೇರಿಯಾಗಿದ್ದು, ನಂತರ ದೇವಗಿರಿಯಾಯಿತು. ಈ ವಂಶದ ಮೊದಲ ಅರಸ ಐದನೇ ಬಿಲ್ಲಮ. ಈತನು ಕಲ್ಯಾಣವನ್ನು ಗೆದ್ದು, ಹೊಯ್ಸಳದೊರೆ ವೀರಬಲ್ಲಾಳನಿಂದ ಸೋತನು. ಆದರೆ ತನ್ನ ರಾಜಧಾನಿಯನ್ನು ಸಿಂದಿನೇರದಿಂದ ದೇವಗಿರಿಗೆ ವರ್ಗಾಯಿಸಿದನು. ಈ ಬಿಲ್ಲಮನ ಆಳ್ವಿಕೆಯ ಕಾಲಘಟ್ಟದಲ್ಲಿ ಬಾಚಿದೇವನೆಂಬುವವನು ಮಹಾಮಂಡಳೇಶ್ವರನಾಗಿ ಅಣ್ಣಿಗೇರಿಯ ಅಮೃತೇಶ್ವರ ದೇವಾಲಯಕ್ಕೆ ದತ್ತಿಯನ್ನು ನೀಡಿದ್ದನ್ನು ಅಣ್ಣಿಗೇರಿ[೫೫] ಶಾಸನ ತಿಳಿಸುತ್ತದೆ.

ಈತನ ನಂತರ ಬೈತುಗಿಯಮಗ ಸಿಂಘನು ಅಳ್ವಿಕೆಯನ್ನು ಮಾಡಿದನು. ಇವನನ್ನು ಯಾದವರ ಅರಸರಲ್ಲೇ ಪ್ರಸಿದ್ದ ದೊರೆ ಎಂದು ಕರೆಯಲಾಗಿದೆ. ಇವನು ಕ್ರಿ.ಶ. ೧೨೧೩ರಲ್ಲಿ ಗೋವೆ ಹಾಗೂ ಹಾನಗಲ್ಲ ಕದಂಬರನ್ನು ಸೋಲಿಸಿದನು. ಮುಂದೆ ಪುಲಿಗೆರೆ, ಬೆಳ್ವಲ, ಮಾಸವಾಡಿ, ಗುತ್ತರು, ನಾಗರಖಂಡ ಇನ್ನೂ ಮುಂತಾದ ಪ್ರದೇಶಗಳು ಇವನ ಆಳ್ವಿಕೆಗಳಿಗೆ ಒಳಪಟ್ಟಿದ್ದವು. ಇವನು ತನ್ನ ಆಳ್ವಿಕೆಯ ಸಂದರ್ಭದಲ್ಲಿ ದೇವಾಲಯಗಳಿಗೆ ದಾನದತ್ತಿಗಳನ್ನು ನೀಡಿದನು. ಅವುಗಳಲ್ಲಿ ಗುಡಗೇರಿಯ ಕಾಳೇಶ್ವರ ದೇವರ ನಂದಾದೀವಿಗೆಗೆ ಎಣ್ಣೆಯನ್ನು ನೀಡಿದ್ದನ್ನು ಗುಡಗೇರಿ[೫೬] ಶಾಸನ ದಾಖಲಿಸಿದೆ.

ಇವನ ಆಳ್ವಿಕೆಗೆ ಸಂಬಂಧಿಸಿದ ಶಾಸನಗಳನ್ನು ಪರಿಶೀಲಿಸಿದಾಗ ಧರ್ಮಯ್ಯ, ರುದ್ರಯ್ಯ, ಚಂದ್ರಯ್ಯ, ಮಲ್ಲಯ್ಯ ಎಂಬ ವೀರಶೈವರ ಹೆಸರುಗಳು ಗೋಚರಿಸುತ್ತವೆ. ಇವರು ದೇವಾಲಯಗಳನ್ನು ನಿರ್ಮಿಸಿ ದಾನ-ದತ್ತಿಗಳನ್ನು ನೀಡಿರುವುದು ಶಾಸನಗಳಿಂದ ತಿಳಿಯುತ್ತದೆ. ಅಣ್ಣಿಗೇರಿಯ ಶಾಸನದಲ್ಲಿ ಉಲ್ಲೇಖಿಸಿದಂತೆ ರುದ್ರಯ್ಯ ದುರ್ಗಾದೇವತೆಯ ನಂದಾದೀವಿಗೆಗಾಗಿ ಎಣ್ಣೆಯನ್ನು ನೀಡಿದ್ದನ್ನು ಕುಂದಗೋಳ[೫೭] ಶಾಸನದಲ್ಲಿದೆ. ರುದ್ರಯ್ಯ ಮತ್ತು ಚಂದ್ರಯ್ಯರು ಕೂಡಿ ಧರ್ಮೇಶ್ವರ ದೇವಾಲಯವನ್ನು ನಿರ್ಮಿಸಿದ್ದಾರೆ. ತಳಿಯರ ಮಲ್ಲಯ್ಯ ಎಂಬುವನು ದುರ್ಗಾದೇವತೆಯ ನಂದಾದೀವಿಗೆಗಾಗಿ ಎಣ್ಣೆಯನ್ನು ನೀಡಿದ್ದನ್ನು ಕುಂದಗೋಳ[೫೮] ಶಾಸನ ದಾಖಲಿಸಿದೆ. ಜೊತೆಗೆ ಇವರ ಉಲ್ಲೇಖಗಳು ಹೆಬ್ಬಳ್ಳಿ,[೫೯] ಹುಬ್ಬಳ್ಳಿ,[೬೦] ಕುಂದಗೋಳ,[೬೧] ಕುಯಿಬಾಳ[೬೨] ಶಾಸನಗಳಲ್ಲಿ ದೊರೆಯುತ್ತವೆ.

ಸಿಂಘಣ ನಂತರ ಕನ್ನರದೇವನು ಆಳ್ವಿಕೆಗೆ ಬಂದನು. ಈತನು ಬೆಳಗುತ್ತಿಯ ಸಿಂಧರನ್ನು ಮತ್ತು ಹೊಯ್ಸಳ ಸೋಮೇಶ್ವರನನ್ನು ಸೋಲಿಸಿದನು. ಇವನು ಮಹಾಪ್ರಧಾನನಾಗಿದ್ದು, ಈತನು ಹುಬ್ಬಳ್ಳಿಯ ಬ್ರಾಹ್ಮಣರಿಗೆ ಮತ್ತು ಹೆಬ್ಬಳ್ಳಿಯ ಬ್ರಾಹ್ಮಣರಿಗೆ ಅನೇಕ ದತ್ತಿಗಳನ್ನು ನೀಡಿದ್ದನ್ನು ಹುಬ್ಬಳ್ಳಿ[೬೨] ಹಾಗೂ ಹೆಬ್ಬಳ್ಳಿಯ[೬೩] ಶಾಸನಗಳು ದಾಖಲಿಸುತ್ತವೆ. ಈತನ ಆಳ್ವಿಕೆಯ ನಂತರ ಮಹಾದೇವನು ಅಧಿಕಾರಕ್ಕೆ ಬಂದನು, ಇವನ ಆಳ್ವಿಕೆಯ ಬಗ್ಗೆ ಛಬ್ಬಿಯ[೬೪] ಶಾಸನ ತಿಳಿಸುತ್ತದೆ. ಈತನು ಕಪಿಲಸಿದ್ಧ ಮಲ್ಲಿಕಾರ್ಜುನ ದೇವರ ಅಂಗ-ರಂಗ ಭೋಗಕ್ಕೆ ಕೊಟಬಾಗಿ ಗ್ರಾಮವನ್ನು ದತ್ತಿ ನೀಡಿದ ವಿಷಯ ಕೊಡಬಾಗಿಯ[೬೫] ಶಾಸನದಲ್ಲಿದೆ. ಮಹಾದೇವನ ನಂತರ ರಾಮಚಂದ್ರದೇವನು ಅಧಿಕಾರಕ್ಕೆ ಬಂದಿದ್ದು, ಇವನ ಆಡಳಿತದ ಬಗ್ಗೆ ನೂಲ್ವಿ[೬೬] ಶಾಸನದಲ್ಲಿದೆ. ಇವನು ತನ್ನ ತಾಯಿಯ ಇಚ್ಛೆಯಂತೆ ತಡಕೋಡದಲ್ಲಿ[೬೭] ಬಸದಿಯನ್ನು ನಿರ್ಮಿಸಿ, ಭೂಮಿಯನ್ನು ಪಡೆದು ದಾನ ಮಾಡಿದ್ದನ್ನು ಬೆಳ್ಳಿಗಟ್ಟಿ[೬೮] ಶಾಸನದಲ್ಲಿದೆ.

ಹೊಯ್ಸಳರು

ಕಲ್ಯಾಣ ಚಾಲುಕ್ಯರ ಮಾಂಡಳಿಕರಾಗಿ, ತದನಂತರ ಸ್ವತಂತ್ರ ರಾಜ್ಯವಾಳಿದ ಪ್ರಮುಖ ರಾಜಮನೆತನ ಇದಾಗಿದೆ. ಹೊಯ್ಸಳರ ಆಳ್ವಿಕೆಯು ವೀರಬಲ್ಲಾಳನಿಂದ ಪ್ರಾರಂಭವಾಗಿದ್ದು, ಈತನಿಗೆ ಸಂಬಂಧಿಸಿದ ಸುಮಾರು ಏಳು ಶಾಸನಗಳು ಈ ಪ್ರದೇಶದಲ್ಲಿವೆ. ಇವನ ದಂಡನಾಯಕ ಸಿಂಗಯ್ಯನು ಅಮೃತೇಶ್ವರ ದೇವಾಲಯಕ್ಕೆ ದತ್ತಿ ನೀಡಿದ್ದು ಅಣ್ಣಿಗೇರಿ[೬೯] ಶಾಸನದಲ್ಲಿದೆ. ಮತ್ತೊಬ್ಬ ದಂಡನಾಯಕನಾದ ಬಸವಯ್ಯನು ಇದೇ ದೇವಾಲಯಕ್ಕೆ ದತ್ತಿ ನೀಡಿದ್ದನ್ನು ಮತ್ತು ಹೊಯ್ಸಳರ ವಂಶಾವಳಿಯನ್ನು ಅಣ್ಣಿಗೇರಿ[೭೦] ಶಾಸನ ತಿಳಿಸುತ್ತದೆ. ಇದೇ ಅಮೃತೇಶ್ವರ ದೇವಾಲಯಕ್ಕೆ ಹಾಕಿಸೆಟ್ಟಿಯ ದೇವಯ್ಯ ಎಂಬುವವನು ದತ್ತಿ ನೀಡಿದ ವಿಷಯ ಅಣ್ಣಿಗೇರಿಯ[೭೧] ಶಾಸನದಲ್ಲಿದೆ. ಇವನ ಆಳ್ವಿಕೆಗೆ ಸಂಬಂಧಿಸಿದ ಮೂರು ಶಾಸನಗಳು ಬ್ಯಾಹಟ್ಟಿಯ[೭೨] ಗ್ರಾಮದಲ್ಲಿ ಕಂಡು ಬಂದಿದ್ದು, ಅವು ತೃಟಿತಗೊಂಡಿದೆ. ಹೀಗೆ ವೀರಬಲ್ಲಾಳನಿಗೆ ಸಂಬಂದಿಸಿದ ಶಾಸನಗಳು ಹುಬ್ಬಳ್ಳಿ ಮತ್ತು ನವಲಗುಂದ ತಾಲೂಕಿನಲ್ಲಿ ಮಾತ್ರ ಗೋಚರಿಸಿದ್ದು, ಉಳಿದ ತಾಲೂಕುಗಳಲ್ಲಿ ಈತನಿಗೆ ಸಂಬಂಧಿಸಿದ ಯಾವುದೇ ಶಾಸನಗಳು ಕಂಡು ಬಂದಿಲ್ಲ.

ವಿಜಯನಗರ ಅರಸರು

ಹೊಯ್ಸಳರ ಮಾಂಡಳಿಕರಾಗಿ ನಂತರ ಸ್ವತಂತ್ರ ರಾಜರಾಗಿ ರಾಜ್ಯಭಾರವನ್ನು ಮಾಡಿದರು. ಈ ಸಾಮ್ರಾಜ್ಯವನ್ನು ಸಂಗಮನ ಮಕ್ಕಳಾದ ಹರಿಹರ ಮತ್ತು ಬುಕ್ಕರು ಸ್ಥಾಪಿಸಿದರು. ಈ ಒಂದು ಅರಸು ಮನೆತನದಲ್ಲಿ ನಾಲ್ಕು ವಂಶಗಳು ಆಳ್ವಿಕೆಯನ್ನು ಮಾಡಿದವು. ಅವುಗಳೆಂದರೆ ಸಂಗಮ, ಸಾಳುವ, ತುಳು ಮತ್ತು ಅರವೀಡು. ಈ ಸಂಗಮವಂಶದಲ್ಲಿ ಪ್ರೌಢದೇವರಾಯನೇ ಪ್ರಸಿದ್ಧ ಅರಸನಾಗಿದ್ದನು. ಈತನು ಮಹಾಮಂಡಳೇಶ್ವರ ಸಿಂಗರಾಜನ ಮಗ ವಲ್ಲಭರಾಜ ಮತ್ತು ಯಳಮಧಿರಾಜರು ಕುಂದಾಗಲ್ಲುದಲ್ಲಿ ಹನುಮಂತ ದೇವರ ಪ್ರತಿಷ್ಠೆ ಮಾಡಿಸಿದ್ದನ್ನು ಕುಂದಗೋಳ[೭೩] ಶಾಸನ ದಾಖಲಿಸಿದೆ.

ಪ್ರೌಢದೇವರಾಯನ ಸಹೋದರ ವಿಜಯರಾಜ, ನಂತರ ದೇವರಾಯನ ಮಗ ಮಲ್ಲಿಕಾರ್ಜುನ ಅಧಿಕಾರಕ್ಕೆ ಬಂದನು. ಈತನು ಸಿಂಹಾಸನವನ್ನು ಏರಿದ ಸ್ಮರಣೆಗಾಗಿ ನಂದಿಸ್ಥಂಭವನ್ನು ಪ್ರತಿಷ್ಠಾಪಿಸಿ ನರೇಂದ್ರಪುರ, ಕುಂಭಾಪುರ, ಬಮ್ಮರಸಿಕೊಪ್ಪ ಗ್ರಾಮಗಳನ್ನು ದತ್ತಿ ನೀಡಿದ ಬಗ್ಗೆ ಧಾರವಾಡದ[೨೪] ಶಾಸನ ಉಲ್ಲೇಖಿಸುತ್ತದೆ. ಮಲ್ಲಿಕಾರ್ಜುನನ ನಂತರ ತುಳುವ ವಂಶದ ಪ್ರಸಿದ್ಧ ದೊರೆ ಕೃಷ್ಣದೇವರಾಯನು ಅಧಿಕಾರಕ್ಕೆ ಬಂದನು. ಈತನ ಕಾಲದ ಒಂದು ಶಾಸನದಲ್ಲಿ ಸಮುದ್ರ ಅಗ್ರಹಾರ ಮತ್ತು ಕೆರೆ ಇವನ ಕಾಲದಲ್ಲೇ ರಚಿತವಾಗಿರಬೇಕೆಂದು ಶಿಶುವಿನಹಳ್ಳಿ[೨೫] ಶಾಸನತಿಳಿಸುತ್ತದೆ. ಈತನ ನಂತರ ಅವನ ಮಲಸಹೋದರನಾದ ಅಚ್ಯುತರಾಯ, ಅವನ ಸಹೋದರನ ಪುತ್ರ ಸದಾಶಿವರಾಯನು ಅಧಿಕಾರಕ್ಕೆ ಬಂದನು. ಆದರೆ ಆಡಳಿತದ ಜವಾಬ್ದಾರಿ ಕೃಷ್ಣದೇವರಾಯನ ಅಳಿಯ ರಾಮರಾಯನ ಕೈಯಲ್ಲಿದ್ದಿತು. ಸದಾಶಿವರಾಯನ ಆಡಳಿತಕ್ಕೆ ಸಂಬಂಧಿಸಿದ ಶಾಸನಗಳು ಗುಡಿಸಾಗರ,[೨೬] ಅಮ್ಮಿನಬಾವಿ,[೨೭] ದೇವರಹುಬ್ಬಳ್ಳಿ,[೨೮] ಬೆಳವಟಗಿ[೨೯] ಗ್ರಾಮಗಳಲ್ಲಿ ದೊರೆತಿವೆ.

ಮಹಾಮಂಡಳೇಶ್ವರರು

ಪ್ರಸ್ತುತ ಅಧ್ಯಯನ ಪ್ರದೇಶದಲ್ಲಿ ಗೋವೆ ಕದಂಬರು ಮತ್ತು ಹಾನಗಲ್ಲ ಕದಂಬರು ಕಲ್ಯಾಣದ ಚಾಳುಕ್ಯರು ಮಹಾಮಂಡಳೇಶ್ವರರಾಗಿ ಆಳ್ವಿಕೆ ಮಾಡಿದ್ದನ್ನು ಶಾಸನಗಳು ದೃಢಪಡಿಸುತ್ತವೆ. ಗೋವೆ ಕದಂಬರ ಪ್ರಥಮ ಅರಸ ಒಂದನೆಯ ಷಷ್ಠ. ಈತನ ನಂತರ ನಾಗವರ್ಮ, ಗೂವಲದೇವ ಅವನ ಮಗ ಇಮ್ಮಡಿ ಷಷ್ಠನು ಅಳ್ವಿಕೆ ಮಾಡಿದನು. ಇವನ ಆಡಳಿತಕ್ಕೆ ಸಂಬಂಧಿಸಿದಂತೆ ನರೇಂದ್ರ[೩೦] ಶಾಸನ ತಿಳಿಸುತ್ತದೆ. ಅಲ್ಲದೇ ಇಮ್ಮಡಿ ಷಷ್ಠನು ಧಾನದ ಮುಮ್ಮುರಿ ರಾಜನ ಮಗಳಾದ ಅಕ್ಕಾದೇವಿಯನ್ನು ವಿವಾಹ ಮಾಡಿಕೊಂಡದ್ದನ್ನು ಇದೇ ಶಾಸನ ತಿಳಿಸುತ್ತದೆ. ಮತ್ತು ಕಂದಲಿ[೩೧] ಗ್ರಾಮದಲ್ಲಿ ಬಾದಿಬ್ಬೆ(ಬನಶಂಕರಿ) ಮೂರ್ತಿಯನ್ನು ಸ್ಥಾಪನೆ ಮಾಡಿದ್ದರ ಉಲ್ಲೇಖ ಅದೇ ಗ್ರಾಮದ ಶಾಸನದಲ್ಲಿದೆ.

ಈತನ ನಂತರ ಗೋವಲದೇವನು ಅಧಿಕಾರಕ್ಕೆ ಬಂದನಾದರೂ ಇವನ ಬಗ್ಗೆ ಯಾವುದೇ ಪುರಾವೆಗಳು ದೊರಕುವುದಿಲ್ಲ. ಇವನ ನಂತರ ಸಹೋದರ ಜಯಕೇಶಿ ಆಡಳಿತಕ್ಕೆ ಬಂದನು. ಇವನು ಗೋವೆಯನ್ನು ತಮ್ಮ ಪ್ರಥಮ ರಾಜಧಾನಿಯನ್ನಾಗಿ ಮಾಡಿಕೊಂಡಿದ್ದನ್ನು ಅಮ್ಮಿನಭಾವಿ[೩೨] ಶಾಸನ ತಿಳಿಸುತ್ತದೆ. ಇಮ್ಮಡಿ ಜಯಕೇಶಿಯು ಆರನೇ ವಿಕ್ರಮಾದಿತ್ಯನ ಮಗಳನ್ನು ವಿವಾಹವಾಗಿದ್ದು, ತನ್ನ ಮಾವನ ಜೊತೆಗೂಡಿ ಚೋಳರೊಡನೆ ಹೋರಾಡಿದನಲ್ಲದೇ, ಈತನ ಬಗ್ಗೆ ಶೇಡಂಬಿ[೩೩] ಹಾಗೂ ಸಂಗಮೇಶ್ವರ[೩೪] ಶಾಸನಗಳು ದಾಖಲಿಸುತ್ತವೆ. ಜೊತೆಗೆ ಈತನ ರಾಣಿಯಾದ ಬೊಪ್ಪದೇವಿಯೂ ಸಹ ಆಡಳಿತದಲ್ಲಿ ಭಾಗಿಯಾಗಿದ್ದನ್ನು ನೂಲ್ವಿಯ[೩೫] ಶಾಸನ ತಿಳಿಸುತ್ತದೆ. ಇವರಿಬ್ಬರಿಗೆ ಮುಮ್ಮಡಿಗೋವಲದೇವ ಮತ್ತು ಒಂದನೇ ವಿಜಯಾದಿತ್ಯರೆಂಬ ಪುತ್ರರಿದ್ದು, ಅವರಲ್ಲಿ ಹಿರಿಯಮಗ ಆಡಳಿತಕ್ಕೆ ಬಂದನು. ಈತನ ಆಳ್ವಿಕೆಯ ಬಗ್ಗೆ ಕಲಘಟಗಿ,[೩೬] ತಂಬೂರು[೩೭] ಮತ್ತು ಮುಗುದ[೩೮] ಗ್ರಾಮಗಳಲ್ಲಿ ದೊರೆತ ಶಾಸನಗಳು ತಿಳಿಸುತ್ತವೆ.

ಗೋವೆಯ ಕದಂಬರಲ್ಲಿ ಮತ್ತೊಬ್ಬ ಪ್ರಬಲ ರಾಜನೆಂದರೆ ಇಮ್ಮಡಿ ಜಯಕೇಶಿ. ಈತನು ವಿಜಯಾದಿತ್ಯನ ಮಗನಾಗಿದ್ದು, ಮೈಳಲಮಹಾದೇವಿಯನ್ನು ವಿವಾಹವಾಗಿದ್ದನು. ಇವಳು ಕುರಡಿಕೇರಿಯಲ್ಲಿ ಕುಡಿಯೇಶ್ವರ ದೇವರಿಗೆ ಸುಂಕದಾನವನ್ನು ನೀಡಿದಳು. ಜೊತೆಗೆ ತನ್ನ ಪತಿಯೊಂದಿಗೆ ಅನೇಕ ಯುದ್ದಗಳಲ್ಲಿ ಭಾಗವಹಿಸಿದ್ದಳಲ್ಲದೇ ತಮ್ಮ ಸಾಮ್ರಾಜ್ಯವನ್ನು ಕೊಂಕಣ-೯೦೦, ಪಲಸಿಗೆ-೧೨೦೦೦, ಹೈವೆ-೫೦೦ನ್ನು ಆಳುತಿದ್ದನ್ನು ನರೇಂದ್ರ[೮೯] ಶಾಸನ ತಿಳಿಸುತ್ತದೆ. ಇವರು ಕುಂದೂರನ್ನು[೯೦] ರಾಜಧಾನಿಯನ್ನಾಗಿ ಮಾಡಿಕೊಂಡಿದ್ದಲ್ಲದೇ, ಮಾದನಭಾವಿಯಲ್ಲಿರುವ ಕಲಿದೇವಸ್ವಾಮಿಗೆ ದತ್ತಿ ನೀಡಿದ್ದಾರೆ. ಹೀಗೆ ಇವರ ವಂಶಾವಳಿ, ಆಡಳಿತದ ಬಗ್ಗೆ ಸಿದ್ದಾಪುರ,[೯೧] ಮಿಶ್ರಿಕೋಟೆ,[೯೨] ವೆಂಕಟಾಪುರ,[೯೩] ಸಿಂಗನಹಳ್ಳಿ,[೯೪] ಜಿನ್ನೂರು,[೯೫] ತಂಬೂರು[೯೬] ಶಾಸನಗಳು ದಾಖಲಿಸುತ್ತವೆ.

ಇಮ್ಮಡಿ ಜಯಕೇಶಿಯ ನಂತರ ಈತನ ಮಗ ಪೆರ್ಮಾಡಿದೇವನು ಆಳ್ವಿಕೆಗೆ ಬಂದನು. ಈತನ ಆಳ್ವಿಕೆ, ದೇವಾಲಯಗಳ ನಿರ್ಮಾಣ ಹಾಗೂ ಕೆರೆ-ಕಟ್ಟೆಗಳಿಗೆ ದಾನ-ದತ್ತಿಗಳನ್ನು ನೀಡಿದ ಬಗ್ಗೆ ಕಲಕುಂಡಿ,[೯೭] ಸಿದ್ದಾಪುರ,[೯೮] ಸಿದ್ದನಹಳ್ಳಿ,[೯೯] ಹಾಲಸೀಗಿಗಟ್ಟಿ,[೧೦೦] ಅಮ್ಮಿನಭಾವಿ,[೧೦೧] ಬೊಕ್ಯಾಪುರ,[೧೦೨] ಶೇಡಂಬಿ,[೧೦೩] ಭಟ್ಟಿಕೊಪ್ಪ,[೧೦೪] ಬ್ಯಾಹಟ್ಟಿ,[೧೦೫] ಸೋಮನಕೊಪ್ಪ,[೧೦೬] ಹಸರಂಬಿ,[೧೦೭] ಉಗ್ಗಿನಕೇರಿ,[೧೦೮] ಕಾಮಧೇನು,[೧೦೯] ಮುತ್ತಗಿ,[೧೧೦] ಡಿಂಬವಳ್ಳಿ,[೧೧೧] ನೂಲ್ವಿ[೧೧೨] ಶಾಸನಗಳು ದಾಖಲಿಸುತ್ತವೆ.

ಪೆರ್ಮಾಡಿದೇವನ ನಂತರ ಈತನ ತಮ್ಮನಾದ ಮುಮ್ಮಡಿ ಜಯಕೇಶಿಯು ಅಧಿಕಾರಕ್ಕೆ ಬಂದನು. ಈತನು ಗೋವೆಯನ್ನು ರಾಜಧಾನಿಯನ್ನಾಗಿ ಮಾಡಿಕೊಂಡು, ಪಲಸಿಗೆ-೧೨೦೦, ಕೊಂಕಣ-೯೦೦ ನಾಡುಗಳನ್ನು ಆಳ್ವಿಕೆ ಮಾಡಿದನು. ಈತನ ಸೇನಾಧಿಪತಿಯಾಗಿದ್ದ ಉದಯಾದಿತ್ಯನು ಉಗ್ಗಿನಕೇರಿಯಲ್ಲಿ[೧೧೩] ಮೂಕೇಶ್ವರ ದೇವರಿಗೆ, ಮುತ್ತಗಿಯಲ್ಲಿನ[೧೧೪] ಬ್ರಹ್ಮದೇವರಿಗೆ ಮತ್ತು ಹುಬ್ಬಳ್ಳಿಯ[೧೧೫] ಸೇಣಿಗೇಶ್ವರ ದೇವರಿಗೆ ಅನೇಕ ದಾನ-ದತ್ತಿಗಳನ್ನು ನೀಡಿರುವ ಬಗ್ಗೆ ಆ ಗ್ರಾಮದ ಶಾಸನಗಳು ಮಾಹಿತಿಯನ್ನು ನೀಡುತ್ತವೆ. ಈ ಇಮ್ಮಡಿ ಜಯಕೇಶಿಯ ವಂಶಾವಳಿ ಮತ್ತು ಆಡಳಿತದ ಬಗ್ಗೆ ಗರಗ,[೧೧೬] ದೇವರಹುಬ್ಬಳ್ಳಿ,[೧೧೭] ಮನಗುಂಡಿ,[೧೧೭] ಮುತ್ತಗಿಯ[೧೧೮] ಶಾಸನಗಳು ಉಲ್ಲೇಖಿಸಿವೆ.

ಮುಮ್ಮಡಿ ಜಯಕೇಶಿಗೆ ಇಬ್ಬರು ಮಕ್ಕಳಿದ್ದು, ಮೊದಲನೆಯವನು ವಜ್ರದೇವ, ಎರಡನೆಯವನು ತ್ರಿಭುವನಮಲ್ಲ. ವಜ್ರದೇವನ ಆಳ್ವಿಕೆಯ ಬಗ್ಗೆ ಈಗಾಗಲೇ ಈತನ ತಂದೆಯ ಶಾಸನಗಳಲ್ಲೇ ಉಲ್ಲೇಖಗಳನ್ನು ಕಾಣುತ್ತೇವೆ. ಈತನ ಆಳ್ವಿಕೆ ನಂತರ ತಮ್ಮನಾದ ತ್ರಿಭುವನಮಲ್ಲನು ಅಧಿಕಾರಕ್ಕೆ ಬಂದನು. ಇವನು ನೂಲ್ವಿಯ[೧೧೯] ಅರವತ್ತೊಕ್ಕಲು ದೇವಾಲಯ ಮತ್ತು ಕಟ್ನೂರಿನ[೧೨೦] ಮೂಲಸ್ಥಾನ ದೇವರಿಗೆ ದಾನ-ದತ್ತಿಗಳನ್ನು ಬಿಟ್ಟ ದಾಖಲೆಗಳನ್ನು ಶಾಸನಗಳು ದಾಖಲಿಸಿವೆ. ಜೊತೆಗೆ ಇವನ ಆಳ್ವಿಕೆಗೆ ಸಂಬಂಧಿಸಿದಂತೆ ಅಮ್ಮಿನಭಾವಿಯ[೧೨೧] ಗ್ರಾಮದಲ್ಲಿ ಶಾಸನೋಕ್ತ ವೀರಗಲ್ಲು ದೊರೆತಿದೆ. ತ್ರಿಭುವನಮಲ್ಲನ ನಂತರ ಮಗ ಷಷ್ಠನು ಆಳ್ವಿಕೆಗೆ ಬಂದನಲ್ಲದೇ ಗೋವಾ ಕದಂಬರಲ್ಲೇ ಈತನೇ ಕೊನೆಯವನಾಗಿದ್ದನು. ಇವನ ಆಳ್ವಿಕೆಗೆ ಸಂಬಂಧಿಸಿದಂತೆ ಭಟ್ಟಿಕೊಪ್ಪ[೧೨೨] ಮತ್ತು ಬುಡರಸಿಂಗಿ[೧೨೩] ಗ್ರಾಮದಲ್ಲಿನ ಶಾಸನಗಳು ಮಾಹಿತಿಯನ್ನು ನೀಡುತ್ತವೆ.

ಹಾನಗಲ್ಲ ಕದಂಬರು

ಕಲ್ಯಾಣ ಚಾಲುಕ್ಯರ ಮಹಾಮಂಡಳೇಶ್ವರರಾಗಿ ಕ್ರಿ.ಶ. ೧೧ ರಿಂದ ೧೩ನೇ ಶತಮಾನದ ವರೆಗೆ ಆಳ್ವಿಕೆಯನ್ನು ಮಾಡಿದರು. ಈ ಮನೆತನದ ಮೂಲಪುರುಷ ಚಿತ್ತಯ್ಯ. ಇವನು ಹಾನಗಲ್ಲು ಇದರ ಪ್ರಾಚೀನ ಹೆಸರು, ಪಾನಗಲ್ಲು–೫೦೦ರನ್ನು ರಾಜಧಾನಿಯನ್ನಾಗಿ ಮಾಡಿಕೊಂಡು ಆಳ್ವಿಕೆಯನ್ನು ಮಾಡಿದರು. ಇವರ ಲಾಂಛನ–ಸಿಂಹ, ಧ್ವಜ–ಶಾಖಾಚರೇಂದ್ರ, ಕುಲದೇವತೆ–ಜಯಂತಿ ಮಧುಕೇಶ್ವರ ಈ ವಂಶದ ಮಹಾಮಂಡಳೇಶ್ವರರಲ್ಲಿ ಶಾಂತಿವರ್ಮ ಒಬ್ಬ. ಈತನು ಮುಕ್ಕಲಿನಲ್ಲಿ[೧೨೪] ಬರ್ಮೇಶ್ವರ ದೇವಾಲಯವನ್ನು ನಿರ್ಮಿಸಿ ದತ್ತಿಯನ್ನು ನೀಡಿದನು. ಶಾಂತಿವರ್ಮನ ನಂತರ ತೈಲಪ ಆಳ್ವಿಕೆಗೆ ಬಂದಿದ್ದು, ಈತನು ಕೊಪ್ಪದ[೧೨೫] ಕೇತಿಸೆಟ್ಟಿಯು ಅಸ್ತಿಕಟ್ಟಿ ದೇವರಿಗೆ ಭೂದಾನ ಮಾಡಿದನು. ಇವನ ನಂತರ ಮೊಮ್ಮಗನಾದ ಕಾಮದೇವನು ಆಳ್ವಿಕೆ ಮಾಡಿದ್ದು, ಇವನ ಕಾಲದಲ್ಲಿ ಶಿವಮುದ್ದು ದೇವನ ಶಿಷ್ಯ ಹಾಗೂ ಧವಳೇಶ್ವರ ದೇವಾಲಯದ ಅರ್ಚಕರಾದ ರಾಜಗುರು ಲಕ್ಷ್ಮಿದೇವರಿಗೆ[೧೨೬] ದತ್ತಿ ನೀಡಿರುವ ವಿಷಯ ದಾಖಲಿಸಿದೆ.

ಒಟ್ಟಾರೆ ಇವರ ಆಳ್ವಿಕೆಯು ನವಲಗುಂದ ತಾಲೂಕಿನ ಬೆಳ್ವಲ–೩೦೦ ನಾಡಿನಲ್ಲಿ, ಕುಂದಗೋಳ ತಾಲೂಕಿನ ಪುಲಿಗೆರೆ–೩೦೦ ನಾಡು ಮತ್ತು ಹುಬ್ಬಳ್ಳಿ ತಾಲೂಕಿನ ಕೆಲವು ಹಳ್ಳಿಗಳು–೩೦೦ ನಾಡಿನಲ್ಲಿ ಒಳಗೊಂಡಿರುವ ವಿಷಯವನ್ನು ಈ ಮೇಲಿನ ಶಾಸನಗಳು ಮಾಹಿತಿಯನ್ನು ನೀಡುತ್ತವೆ.

ಆಡಳಿತ ಪದ್ಧತಿ

ವಂಶಪಾರ್ಯಂಪರ್ಯವಾಗಿ ಸಾಮ್ರಾಜ್ಯವನ್ನು ಚಕ್ರವರ್ತಿಗಳು ಆಳುತ್ತಿದ್ದುದ್ದರ ಬಗ್ಗೆ ಅನೇಕ ಶಾಸನಗಳು ತಿಳಿಸುತ್ತವೆ. ಈ ಚಕ್ರವರ್ತಿಗಳು ಆಡಳಿತದ ಸಂದರ್ಭದಲ್ಲಿ ಅನೇಕ ಮಹಾಮಂಡಳೇಶ್ವರರು, ಗಾವುಂಡರು, ಅಧಿಕಾರಿಗಳು, ರಾಣಿಯರು, ಸುಂಕದ ಅಧಿಕಾರಿಗಳು ಮತ್ತು ದಂಡನಾಯಕರು ಇನ್ನೂ ಮುಂತಾದವರು ಚಕ್ರವರ್ತಿಗೆ ಸಹಾಯವನ್ನು ಮಾಡುತ್ತಿದ್ದ ವಿಷಯ ಶಾಸನಗಳಿಂದ ತಿಳಿಯುತ್ತದೆ. ರಾಜ್ಯದ ಅನುಕೂಲಕರ ದೃಷ್ಠಿಯಿಂದ ಅನೇಕ ವಿಭಾಗ, ಉಪವಿಭಾಗಗಳನ್ನಾಗಿ ವಿಂಗಡಿಸಿ, ಅವುಗಳಿಗೆ ಅಧಿಕಾರಿಗಳನ್ನು ನೇಮಿಸುತ್ತಿದ್ದರು. ಈ ಆಡಳಿತ ವಿಭಾಗಗಳನ್ನು ರಾಷ್ಟ್ರ, ಮಂಡಲ, ನಾಡು, ಕಂಪಣ ಹಾಗೂ ವಿಷಯ ಎಂದೂ ವಿಭಾಗಿಸಿಕೊಂಡಿದ್ದರು.

ಪ್ರಸ್ತುತ ಈ ಪ್ರದೇಶದಲ್ಲಿ ಅನೇಕ ರಾಜರುಗಳು ಅಳ್ವಿಕೆ ಮಾಡಿದ್ದು, ಇವರುಗಳು ಪಲಸಿಗೆ–೧೨೦೦೦, ಕೊಂಕಣ–೯೦೦, ಕಾವಡೆದ್ವೀಪ–೧,೨೫,೦೦೦, ಬೆಳ್ವಲ–೩೦೦, ಪುಲಿಗೆರೆ–೩೦೦ ಹಾನಗಲ್ಲು–೫೦೦ ಎಂದು ವಿಭಾಗಗಳನ್ನಾಗಿ ಮಾಡಿ ಆಳ್ವಿಕೆಮಾಡುತ್ತಿದ್ದು, ಶಾಸನಗಳು ದಾಖಲಿಸಿವೆ. ಪ್ರಸ್ತುತ ಈ ಜಿಲ್ಲೆಯಲ್ಲಿ ಕಂಡು ಬರುವ ಶಾಸನುಲ್ಲೇಖಿತ ಆಡಳಿತ ವಿಭಾಗಗಳನ್ನು ಗ್ರಾಮಗಳ ಅಕಾರಾದಿಯಾಗಿ ಅನುಬಂಧದಲ್ಲಿ ನೀಡಲಾಗಿದೆ.

ಸಾಮಾಜಿಕ ಸ್ಥಿತಿಗತಿಗಳು

ಒಂದು ಪ್ರದೇಶದ ಸಂಸ್ಕೃತಿಯನ್ನು ತಿಳಿದುಕೊಳ್ಳಬೇಕಾದರೆ ಆ ಜನರ ಆಚಾರ–ವಿಚಾರ ನಂಬಿಕೆ, ಸಂಪ್ರದಾಯಗಳು ಪ್ರಧಾನ ಪಾತ್ರ ವಹಿಸುತ್ತವೆ. ಅವುಗಳಲ್ಲಿ ವರ್ಣವ್ಯವಸ್ಥೆಯು ಒಂದು.

ಈ ಸಮಾಜದಲ್ಲಿ ಮೇಲು-ಕೀಳು, ಪವಿತ್ರ-ಅಪವಿತ್ರ, ಬಡವ-ಬಲ್ಲಿದ ಭಾವನೆಯೇ ಈ ಜಾತಿವ್ಯವಸ್ಥೆಗೆ ಮೂಲ ಕಾರಣವಾಯಿತು. ಈ ಜಾತಿ ವ್ಯವಸ್ಥೆಯ ಮೂಲ ಬಹು ಪ್ರಾಚೀನತಮವಾಗಿದ್ದು, ಇದರ ಉಲ್ಲೇಖವನ್ನು ನಾವು ಋಗ್ವೇದದ ಕಾಲಘಟ್ಟದವರೆಗೆ ಊಹಿಸಬಹುದಾಗಿದೆ. ಋಗ್ವೇದದ ಪುರುಷಸೂಕ್ತದಲ್ಲಿ ಬ್ರಾಹ್ಮಣ, ಕ್ಷತ್ರಿಯ, ವೈಶ್ಯ ಹಾಗೂ ಶೂದ್ರ ಎಂಬ ನಾಲ್ಕು ಜಾತಿಗಳು ಕಂಡು ಬರುತ್ತವೆ. ಪ್ರಸ್ತುತ ಧಾರವಾಡ ಜಿಲ್ಲೆಯಲ್ಲಿ ದೊರೆಯುವ ಶಾಸನಗಳನ್ನು ಹಿನ್ನಲೆಯಾಗಿಟ್ಟುಕೊಂಡು ಇಲ್ಲಿಯ ಸಾಮಾಜಿಕ, ಆರ್ಥಿಕ ಮತ್ತು ಧಾರ್ಮಿಕ ವಿಷಯಗಳನ್ನು ಚರ್ಚಿಸಲಾಗಿದೆ.

ಬ್ರಾಹ್ಮಣರು

ಸಾಮಾಜಿಕ ವ್ಯವಸ್ಥೆಯಲ್ಲಿ ಬ್ರಾಹ್ಮಣರಿಗೆ ಉನ್ನತಸ್ಥಾನ ಇತ್ತು. ಕಾರಣ ಇವರು ಧರ್ಮಶಾಸ್ತ್ರಗಳ ಅಧ್ಯಯನದಲ್ಲಿ, ಧಾರ್ಮಿಕ ವಿಧಿ-ವಿಧಾನಗಳ ಕಾರ್ಯದಲ್ಲಿ ಅಲ್ಲದೇ ನೀತಿಶಾಸ್ತ್ರ, ಖಗೋಳ, ವೇದಶಾಸ್ತ್ರ ಇನ್ನೂ ಮುಂತಾದ ಕ್ಷೇತ್ರಗಳಲ್ಲಿ ಜೊತೆಗೆ ಸಮಾಜದಲ್ಲಿ ಪ್ರಭುಗಳಾಗಿ, ಊರೊಡೆಯರಾಗಿ, ಕುಲಕರ್ಣಿಗಳಾಗಿ ಇವರು ತಮ್ಮ ಕಲಾನೈಪುಣ್ಯತೆಯಿಂದ ಕಾರ್ಯನಿರ್ವಹಿಸಿದ್ದನ್ನು ಗುಡಗೇರಿ ಶಾಸನ[೧೨೭] ಉಲ್ಲೇಖಿಸುತ್ತದೆ. ವಾಮನಭಟ್ಟೋಪಾದ್ಯಯರು ಕನಕೂರ[೧೨೮] ಊರೊಡೆಯರಾಗಿ ಕಾರ್ಯನಿರ್ವಹಿಸುತ್ತಿದ್ದು, ಇವರಿಗೆ ಗೋವೆ ಕದಂಬರ ಅರಸ ತ್ರಿಭುವನಮಲ್ಲನು ಸೋಮನಾಥ ದೇವರಿಗೆ ಈ ಊರನ್ನು ದತ್ತಿಯನ್ನಾಗಿ ನೀಡಿದ್ದನ್ನು ಉಲ್ಲೇಖಿಸುತ್ತದೆ. ಇವರು ವಾಸಮಾಡುತ್ತಿದ್ದ ಮನೆಗಳ ಬಗ್ಗೆ ತಂಬೂರು ಶಾಸನ[೧೨೯] ಉಲ್ಲೇಖಿಸಿದೆ. ಬ್ರಾಹ್ಮಣರಿಗೆ ಮಹಾದೇವನು ತಮ್ಮ ಮನೆಯನ್ನೇ ನೀಡಿದ್ದನ್ನು ಬೆಟದೂರು ಶಾಸನ ದಾಖಲಿಸುತ್ತದೆ.[೧೩೦] ಊರೊಡೆಯರಾಗಿ ತಮ್ಮದೇ ಸ್ವಂತ ಭೂಮಿಯನ್ನು ಹೊಂದಿದ್ದು, ಅವರೂ ವ್ಯವಸಾಯವನ್ನು ಮಾಡುತ್ತಿದ್ದರೆಂಬುದು ಕಾಮಧೇನು ಶಾಸನದಲ್ಲಿದೆ.[೧೩೧]

ಅದೇ ರೀತಿ ದಾವೋದರ ಭಟ್ಟೋಪಾಧ್ಯಾಯ, ಇತರರು ಸೇರಿಕೊಂಡು ಸಿದ್ಧಾಪುರ,[೧೩೨] ಕುಂದಗೋಳ,[೧೩೩] ಗ್ರಾಮಗಳಲ್ಲಿ ದೇವಾಲಯಗಳನ್ನು ನಿರ್ಮಿಸಿಕೊಟ್ಟಿದ್ದು ತಿಳಿಸುತ್ತದೆ. ಬ್ರಾಹ್ಮಣರಿಗೆ ಅನೇಕ ರೀತಿಯ ದತ್ತಿಗಳನ್ನು ಅನೇಕ ಶಾಸನಗಳು ದಾಖಲಿಸಿದ್ದು, ರಾಯಾಪುರ,[೧೩೪] ಹೆಬ್ಬಳ್ಳಿ,[೧೩೫] ಬ್ಯಾಹಟ್ಟಿ,[೧೩೬] ಅಣ್ಣಿಗೇರಿ,[೧೩೭] ಕೋಳಿವಾಡ ಶಾಸನಗಳಲ್ಲಿವೆ.[೧೩೮] ಇವರ ಸಮುದಾಯದಲ್ಲಿ ಹಲವಾರು ಶಾಖೆಗಳಿದ್ದು, ಭಾರದ್ವಾಜ ಗೋತ್ರದ ಉಲ್ಲೇಖಗಳು ನಮಗೆ ಹೆಬ್ಬಳ್ಳಿ,[೧೩೯] ಬೆಟದೂರು,[೧೪೦] ಕುಂದಗೋಳ[೧೪೧] ಶಾಸನಗಳು ದಾಖಲಿಸಿವೆ. ಹೀಗೆ ಇವರು ಸಮಾಜದ ಊರೊಡೆಯರಾಗಿ ಜೊತೆಗೆ ಭೂಮಿಯನ್ನು ಖರೀದಿಸಿ ಅವುಗಳನ್ನು ಅನೇಕ ದೇವಾಲಯಗಳಿಗೆ ದತ್ತಿಯನ್ನು ನೀಡಿದ್ದುದಲ್ಲದೇ, ಅವುಗಳನ್ನು ಸ್ವೀಕರಿಸುವ ಮತ್ತು ಅವುಗಳನ್ನು ರಕ್ಷಿಸುತಿದ್ದರು ಎಂಬ ವಿಷಯ ಈ ಮೇಲಿನ ಶಾಸನಗಳಿಂದ ತಿಳಿದುಬರುತ್ತದೆ.

ಕ್ಷತ್ರಿಯರು

ಬ್ರಾಹ್ಮಣರ ನಂತರ ಸಮಾಜದಲ್ಲಿ ನಂತರದ ಸ್ಥಾನವನ್ನು ಕ್ಷತ್ರಿಯರು ಪಡೆದುಕೊಂಡಿದ್ದರು. ಇವರು ರಾಜ್ಯದ ಆಡಳಿತದಲ್ಲಿ ಮಹಾಸಾಮಂತರಾಗಿ, ಸರ್ವಾಧಿಕಾರಿ, ದಂಡನಾಯಕರಾಗಿ,

ಯುದ್ಧದಲ್ಲಿ ಹೋರಾಡಿ ಸಾಮ್ರಾಜ್ಯವನ್ನು ವಿಸ್ತರಿಸುವ ಹಾಗೂ ಅದನ್ನು ಕಾಪಾಡುವಲ್ಲಿ ಕ್ಷತ್ರಿಯರ ಪಾತ್ರ ಬಹುಮುಖ್ಯವಾದುದಾಗಿದ್ದಿತು. ಪ್ರಸ್ತುತ ಈ ಅಧ್ಯಯನ ಪ್ರದೇಶದಲ್ಲಿ ಇವರನ್ನು ಉಲ್ಲೇಖಿಸುವ ತಂಬೂರು[೧೪೨] ಶಾಸನ ಬಿಟ್ಟರೆ ಬೇರಾವ ಶಾಸನವೂ ಇಲ್ಲಿಯವರೆಗೆ ದೊರೆತಿಲ್ಲ ಎಂದೇ ಹೇಳಬಹುದಾಗಿದೆ.

ವೈಶ್ಯರು

ವರ್ಗ ವ್ಯವಸ್ಥೆಯಲ್ಲು ಕ್ಷತ್ರಿಯರ ನಂತರ ವೈಶ್ಯರು ನಂತರದ ಸ್ಥಾನವನ್ನು ಪಡೆದುಕೊಂಡರು, ಇವರನ್ನು ವ್ಯಾಪಾರದ ವೃತ್ತಿಯಲ್ಲಿ ಸೆಟ್ಟಿಯರು, ಗಾವುಂಡರು ಸೇರ್ಪಡೆಗೊಳ್ಳುತ್ತಿದ್ದರು. ಇವರ ಮೂಲ ಕಸುಬು ಕೃಷಿ ಮತ್ತು ವ್ಯಾಪಾರವಾಗಿದ್ದಿತು. ಇವರು ಸಮಾಜದಲ್ಲಿ ಸ್ಥಳೀಯ ಅಧಿಕಾರಿಗಳಾಗಿ ಸೇವೆಯನ್ನು ಸಲ್ಲಿಸುತ್ತಿದ್ದು, ಅನೇಕ ಶೈವ, ಜೈನ ದೇವಾಲಯಗಳ ನಿರ್ಮಾಣಕ್ಕೆ, ಮೂರ್ತಿಶಿಲ್ಪ ಪ್ರತಿಷ್ಠಾಪನೆಗೆ ಹಾಗೂ ಬ್ರಾಹ್ಮಣರಿಗೆ, ಪೂಜಾಕಾರ್ಯಗಳಿಗೆ ಅನೇಕ ದಾನದತ್ತಿಗಳನ್ನು ನೀಡಿರುವ ವಿಷಯ ಪ್ರಸ್ತುತ ಈ ಅಧ್ಯಯನ ಪ್ರದೇಶದಲ್ಲಿನ ಮುಕ್ಕಲ್ಲು,[೧೪೩] ಮಲಕನಕೊಪ್ಪ,[೧೪೪] ನಿಗದಿ,[೧೪೫] ಬೆಟದೂರು,[೧೪೬] ಕಾಮಧೇನು,[೧೪೭] ಶಿರೂರು,[೧೪೮] ಅಣ್ಣಿಗೇರಿ,[೧೪೯] ದೇವರ ಹುಬ್ಬಳ್ಳಿ,[೧೫೦] ಬ್ಯಾಹಟ್ಟಿ[೧೫೧] ಶಾಸನಗಳಲ್ಲಿ ದಾಖಲೆಗಳು ದಾಖಲಿಸಿವೆ.

ಶೂದ್ರರು

ವೈಶ್ಯರ ನಂತರದ ಸ್ಥಾನವನ್ನು ಶೂದ್ರರು ಪಡೆದುಕೊಂಡರು. ಬ್ರಾಹ್ಮಣ, ಕ್ಷತ್ರಿಯ, ವೈಶ್ಯರ ಈ ಮೂರು ವರ್ಗಗಳ ಸೇವೆಯನ್ನು ಮಾಡುತ್ತಿದ್ದರೆಂಬುದು ಪ್ರತೀತಿ. ಇವರ ವೃತ್ತಿಯ ಬಗ್ಗೆ ಪ್ರಸ್ತುತ ಈ ಅಧ್ಯಯನ ಪ್ರದೇಶದಲ್ಲಿ ಯಾವುದೇ ಶಾಸನದ ದಾಖಲೆಗಳು ಸಿಗುವುದಿಲ್ಲ.

ಮಹಿಳೆಯರ ಸ್ಥಾನಮಾನಗಳು

ಭಾರತೀಯ ಪರಂಪರೆಯಲ್ಲಿ, ಪ್ರಾಚೀನ ಕಾಲದಿಂದಲೂ ಸ್ತ್ರೀಯರಿಗೆ ಪೂಜ್ಯನೀಯ ಸ್ಥಾನ ಇದೆ. 'ಯತ್ತನಾರ್ಯಸ್ತು ಪೂಜ್ಯತೆ ತತ್ರದೇವತಾ', ಅಂದರೆ ಎಲ್ಲಿ ಸ್ತ್ರೀಯು ಪೂಜೆಗೆ ಒಳಪಡುವಳೋ ಅಲ್ಲಿ ದೇವತೆಯರು ನೆಲೆಸಿರುವರು ಎಂಬ ಮಾತನ್ನು ನಾವು ಇಂದಿಗೂ ಸ್ಮರಿಸಿಕೊಳ್ಳುತ್ತೇವೆ. ಪ್ರಸ್ತುತ ಈ ಅಧ್ಯಯನದ ಹಲವಾರು ಸ್ತ್ರೀಯರು ತಮ್ಮ ರಾಜರುಗಳಿಗೆ ಆಡಳಿತದಲ್ಲಿ ಸಹಕಾರವನ್ನು ನೀಡಿದ್ದಾರೆ. ಅಲ್ಲದೇ ಇವರು ತಮ್ಮದೇ ಆದ ಸ್ವತಂತ್ರ ರಾಜ್ಯಭಾರವನ್ನು ಮಾಡುವ ಜೊತೆಗೆ ಅನೇಕ ದೇವಾಲಯಗಳಿಗೆ ದಾನ-ದತ್ತಿಗಳನ್ನು ನೀಡಿದ್ದು, ನಮಗೆ ಈ ಕೆಳಕಂಡ ಶಾಸನಗಳಿಂದ ತಿಳಿದುಬರುತ್ತದೆ.

ಮುಖ್ಯವಾಗಿ ಬಾವಿಹಾಳದ[೧೫೨] ಶಾಸನದಲ್ಲಿ ಗೋವಕದಂಬರ ಎರಡನೇ ಜಯಕೇಶಿಯ ಮಡದಿ ಮೈಳಲಮಹಾದೇವಿ ಮತ್ತು ಧಾರವಾಡ[೧೫೩] ಶಾಸನದಲ್ಲಿ ಆರನೇ ವಿಕ್ರಮಾದಿತ್ಯನ ಪತ್ನಿ ಮಲಯವತಿಯರು ರಾಜ್ಯಭಾರದಲ್ಲಿ ಭಾಗಿಯಾಗಿದ್ದರು. ಹಾಗೆಯೇ ನೂಲ್ವಿಯ[೧೫೪] ಶಾಸನದಲ್ಲಿ ಗೋವೆ ಕದಂಬ ಅರಸ ಚಟ್ಟಯನ ಮಾಂಡಳಿಕ ಜಯಕೇಶಿ ದೇವರಸನ ಪತ್ನಿ ಬೊಮ್ಮಲದೇವಿಯ ಉಲ್ಲೇಖ, ಅಮ್ಮಿನಬಾವಿಯಲ್ಲಿ[೧೫೫] ಉಣಕಲ್ಲದ ಉತ್ತಮರಾಸಿ ಪಂಡಿತರ ಪತ್ನಿ ಚಂದಿಕಬ್ಬೆಯ

ಹೆಸರು ತಂಬೂರಿನ[೧೫೬] ಶಾಸನದಲ್ಲಿ ಜಯಕೇಶಿ ಜಯದೇವ ತಂಬೂರ ಸಂಸ್ಥಾನದ ಅಧಿಪತಿ ಮಾದಿರಾಜ ಈತನ ತಾಯಿ ಅಯ್ಯಾಂಬಿಕೆಯ ಉಲ್ಲೇಖವಿದೆ.

ಮಹಿಳೆಯರು ದೇವಾಲಯ ಹಾಗೂ ಬಸದಿಗಳನ್ನು ನಿರ್ಮಿಸಿ ಅವುಗಳಿಗೆ ಅನೇಕ ದತ್ತಿಗಳನ್ನು ನೀಡಿದ್ದನ್ನು ಶಾಸನಗಳು ದಾಖಲಿಸಿವೆ. ಮುಖ್ಯವಾಗಿ ಗುಡಗೇರಿಯ[೧೫೭] ಶಾಸನದಲ್ಲಿ ಬಾದಾಮಿ ಚಲುಕ್ಯರ ಅರಸ ವಿಜಯಾದಿತ್ಯನ ಸಹೋದರಿ ಕುಂಕುಮಮಹದೇವಿ ಪುಲಿಗೇರಿಯಲ್ಲಿ ಆನೆಸಜ್ಜೆ ಬಸದಿಯನ್ನು ನಿರ್ಮಿಸಿದ್ದಳು. ಅದೇ ರೀತಿ ತಂಬೂರಿನ[೧೫೮] ಶಾಸನ ಸೇಣಿಗ ಬೊಪ್ಪನ ತಾಯಿ ಮೊರವ್ವೆ ಚೌಡೇಶ್ವರಿ ದೇವಾಲಯವನ್ನು ತನ್ನ ಮಗನ ಸಹಾಯದಿಂದ ನಿರ್ಮಿಸಿದ್ದನ್ನು ದಾಖಲಿಸಿದೆ. ತಂಬೂರಿನ[೧೫೯] ಶಾಸನದಲ್ಲಿ ಗೋವೆಕದಂಬ ಅರಸರ ಮಹಾಮಂಡೇಶ್ವರ ಹಾಕಿಮಲ್ಲಿದೇವ ಈತನ ಮಂತ್ರಿಯರಾದ ಬರ್ಮಚಯ್ಯ ಮತ್ತು ರಾಚಮಲ್ಲ ಇವರಲ್ಲಿ ಬರ್ಮಚಯ್ಯನ ತಾಯಿಮಾಳಿಯಕ್ಕ ಹಾಗೂ ಇವನ ಪತ್ನಿ ಲಚ್ಚಿಕಬ್ಬೆ ಇವರಿಬ್ಬರು ಕೂಡಿ ಜೈನ ಬಸದಿಯನ್ನು ನಿರ್ಮಿಸಿರುವ ದಾಖಲೆಗಳಿವೆ. ಜೊತೆಗೆ ಕುರಡಿಕೇರಿ[೧೬೦] ಶಾಸನದಲ್ಲಿ ಕುಡಿಯೇಶ್ವರ ದೇವರಿಗೆ ಲಚ್ಚಿಕಬ್ಬೆಯು ಎಣ್ಣೆಯನ್ನು ದಾನಮಾಡಿದಳು. ಕೋಳಿವಾಡದ[೧೬೧] ಶಾಸನದಲ್ಲಿ ಮಾಧನ ಜನಾರ್ಧನ ದೇವಾಲಯಕ್ಕೆ ಸೂರಿಮಾಣಿಕೆ ಎಂಬ ಹೆಣ್ಣನ್ನು ವಂಶಪಾರಂಪರ್ಯವಾಗಿ ನೃತ್ಯಗಾರ್ತಿಯಾಗಿ ದೇವಾಲಯಕ್ಕೆ ಬಿಟ್ಟ ವಿಷಯವಿದೆ.

ಅಂದು ಸಮಾಜದಲ್ಲಿ ಸೂಳೆಗಾರಿಕೆ ಪರಂಪರೆ ಇತ್ತು ಎಂಬುದಕ್ಕೆ ತಂಬೂರು[೧೬೨] ಹಾಗೂ ನರೇಂದ್ರ[೧೬೩] ಶಾಸನದಲ್ಲಿ ದಾಖಲಿಸಿದೆ. ಮಹಿಳೆಯರ ಹೆಸರಿನಲ್ಲಿ ಸುಮಾರು ಐದು ದೇವಾಲಯಗಳನ್ನು ಈ ಶಾಸನದಲ್ಲಿ ಉಲ್ಲೇಖಿಸಲಾಗಿದೆ. ಅವುಗಳಲ್ಲಿ ಮೈಳಲೇಶ್ವರ ದೇವಾಲಯ,[೧೬೪] ಚಂಡಿಕಾದೇವಿ,[೧೬೫] ಜ್ವಾಲಮಾಲಿನಿ,[೧೬೬] ದುರ್ಗಾದೇವಿ,[೧೬೭] ಪದ್ಮಾವತಿ ಜಿನಾಲಯ[೧೬೮] ಇವು ಪ್ರಮುಖ ಶಾಕ್ತ ದೇವಾಲಯಗಳ ಹೆಸರುಗಳಾಗಿವೆ.

ಶಾಸನಗಳಲ್ಲಿ ಅತ್ತೆ-ಸೊಸೆಯರ ಉಲ್ಲೇಖಗಳೂ ನಮಗೆ ದೊರೆಯುತ್ತವೆ. ಮುಗುದದಲ್ಲಿ[೧೬೯] ಬರುವ ಚಟ್ಟಿಯಕ್ಕ, ಪೊಲ್ಲಿಯಕ್ಕ, ಗೊಜ್ಜಿಯಕ್ಕ ಎಂಬುವವರು ನಾರ್ಗಾವುಂಡ ಮನೆತನದ ಅತ್ತೆ-ಸೊಸೆಯರು. ಕಾಮಧೇನುವಿನಲ್ಲಿ[೧೭೦] ಕಾಳಿಯಕ್ಕ, ಬಾಚಿಯಕ್ಕ, ಮಾಣಿಕಬ್ಬೆಯರು. ಹುಲಿವರದ ಮಲ್ಲಿಸೆಟ್ಟಿ ಕುಟುಂಬದ ಅತ್ತೆ-ಸೊಸೆಯರಾಗಿದ್ದರು. ಹಾಳಸೀಗಿಗಟ್ಟಿಯಲ್ಲಿ[೧೭೧] ಬಾಗಿಗೌಡಿ ಬಲ್ಲವೆಯರು ಅತ್ತೆ-ಸೊಸೆಯಾಗಿದ್ದರು ಎಂಬ ವಿಷಯವೂ ಬರುತ್ತದೆ. ಜೊತೆಗೆ ಇನ್ನೂ ಅನೇಕ ಸ್ತ್ರೀಯರ ಹೆಸರುಗಳು ದೊರೆತಿದ್ದು, ಮಿಶ್ರಿಕೋಟೆಯ[೧೭೨] ಶಾಸನದಲ್ಲಿ ಊರೊಡೆಯ ಮಲ್ಲರಸನ ತಾಯಿ ಚಿಕ್ಕಣಬ್ಬೆ ಆತನ ತಾಯಿ ಮೊರವ್ವ ಕಾಣುವಳು. ಸೋಮನಕೊಪ್ಪದಲ್ಲಿ[೧೭೩] ಭರಣೀಪುರ-೧೨ನ್ನು ಆಳುತ್ತಿದ್ದ ಸಾಮನ್ತಕಾಳಿಯನ ಹೆಂಡತಿ ಬಾಗಿಯಕ್ಕಳ ಉಲ್ಲೇಖವಿದೆ. ಒಟ್ಟಾರೆ ಈ ಮೇಲಿನ ಶಾಸನಗಳನ್ನು ಗಮನಿಸಿದರೆ ಸ್ತ್ರೀಯರು ಆಡಳಿತದಲ್ಲಿ, ಧಾರ್ಮಿಕ ಕಾರ್ಯದಲ್ಲಿ ತಮ್ಮದೇ ಆದ ಸ್ಥಾನವನ್ನು ಪಡೆದುಕೊಂಡಿದ್ದರು.

ಪಂಡಿತ/ಆಚಾರ್ಯರು

ಪ್ರಸ್ತುತ ಈ ಪ್ರದೇಶದಲ್ಲಿ ಅನೇಕ ರೀತಿಯ ಪಂಡಿತರ ಅಥವಾ ಸ್ಥಾನಾಚಾರ್ಯರರ ಬಗ್ಗೆ ನಲವತ್ತು ಸ್ಥಳಗಳಿಗಿಂತ ಹೆಚ್ಚಾಗಿ ಇದ್ದಿರುವದನ್ನು ಶಾಸನಗಳು ಉಲ್ಲೇಖಿಸುತ್ತವೆ. ಮುಖ್ಯವಾಗಿ ಇವರುಗಳು ದೇವಾಲಯಗಳಿಗೆ ಹೊಂದಿಕೊಂಡಂತೆ ವಾಸಿಸುತ್ತಿದ್ದರು. ಇವರುಗಳು ತಮ್ಮ ಹೆಸರಿನ ಕೊನೆಯಲ್ಲಿ ಪಂಡಿತರು, ಆಚಾರ್ಯರು ಮತ್ತು ಜೀಯರು ಎಂದು ಸಂಭೋಧಿಸಲಾಗುತ್ತಿತ್ತು. ಕೆಲವರು ಶೈವಧರ್ಮದವರು ಮತ್ತು ಕೆಲವರು ಜೈನ ಧರ್ಮಿಯರಿದ್ದರು. ಪ್ರಸ್ತುತ ಈ ಅಧ್ಯಯನದಲ್ಲಿ ಕಂಡು ಬರುವ ಈ ವ್ಯಕ್ತಿಗಳ ಹೆಸರುಗಳನ್ನು ಅನುಬಂಧದಲ್ಲಿ ನೀಡಲಾಗಿದೆ.

ಅಗ್ರಹಾರ

ಅಗ್ರ ಮತ್ತು ಆಹಾರ ಎಂಬೆರಡು ಪದಗಳ ಸಂಯುಕ್ತಪದವೇ ಅಗ್ರಹಾರ ಎಂದು ಹೇಳಲಾಗುತ್ತದೆ. ಅಗ್ರ ಎಂದರೆ ಶ್ರೇಷ್ಠ. ಅದೇ ರೀತಿ ಆಹಾರ ಎಂದರೆ ದೇಶ/ಸ್ಥಳ ಅಥವಾ ಗ್ರಾಮ ಎಂದು ಅರ್ಥೈಯಿಸಬಹುದು. ಬ್ರಾಹ್ಮಣರಿಗೆ ಕೊಟ್ಟಿರುವ ಸ್ಥಳ ಎಂದು ಹೇಳಲಾಗುತ್ತದೆ. ಈ ಅಗ್ರಹಾರಗಳಲ್ಲಿ ಕೆಲವು ಸ್ಥಳಗಳು ಮಹಾಅಗ್ರಹಾರ ಮತ್ತು ಅನಾದಿ ಅಗ್ರಹಾರಗಳೆಂತಲೂ ಕರೆಯುತ್ತೇವೆ. ಮಹಾ ಎಂದರೆ ದೊಡ್ಡದೆಂದು, ಅನಾದಿ ಎಂದರೆ ಪ್ರಾಚೀನ ಎಂಬರ್ಥವನ್ನು ಕಲ್ಪಿಸಲಾಗಿದೆ. ಈ ಅಗ್ರಹಾರದಲ್ಲಿನ ಜನರು ವಿವಿಧ ಶಾಸ್ತ್ರ ಮತ್ತು ಶಸ್ತ್ರಗಳಲ್ಲಿ ಪರಿಣಿತರಾಗಿದ್ದು, ಅಧ್ಯಯನ ಹಾಗೂ ಅಧ್ಯಾಪನವನ್ನು ನಡೆಸುತ್ತಿದ್ದರು.[೧೭೪]

ಪ್ರಸ್ತುತ ಈ ಅಧ್ಯಯನ ಪ್ರದೇಶದಲ್ಲಿ ಎಲಿವಾಳ, ದೇವರಹುಬ್ಬಳ್ಳಿ ಮಹಾಅಗ್ರಹಾರಗಳಾಗಿದ್ದರೆ, ಹುಬ್ಬಳ್ಳಿ ಅನಾದಿ ಅಗ್ರಹಾರವಾಗಿತ್ತೆಂದು ತಿಳಿದು ಬರುತ್ತದೆ. ಪ್ರಸ್ತುತ ಇಲ್ಲಿ ನಲವತ್ತಕ್ಕಿಂತಲೂ ಹೆಚ್ಚಿನ ಅಗ್ರಹಾರಗಳು ಈ ಪ್ರದೇಶದಲ್ಲಿ ಕಂಡು ಬಂದಿದ್ದು, ಅವುಗಳನ್ನು ಅಕಾರಾದಿಯಾಗಿ ಅನುಬಂಧದಲ್ಲಿ ನೀಡಲಾಗಿದೆ.

ಬ್ರಹ್ಮಪುರಿಗಳು

ನಗರ, ಪಟ್ಟಣ ಹಾಗೂ ಗ್ರಾಮಗಳಲ್ಲಿ ಬ್ರಾಹ್ಮಣ ಪಂಡಿತರು ವಾಸಿಸುವ ಸ್ಥಳವನ್ನೇ ಬ್ರಹ್ಮಪುರಿಗಳು ಎಂದು ಕರೆಯಲಾಗುತ್ತಿತ್ತು. ಅಗ್ರಹಾರಗಳು ಊರುಗಳಾದರೆ, ಬ್ರಹ್ಮಪುರಿಗಳು ಪಟ್ಟಣದ ಭಾಗಗಳಾಗಿದ್ದು, ಬ್ರಾಹ್ಮಣರ ವಿದ್ಯಾಕೇಂದ್ರಗಳೂ ಆಗಿದ್ದವು. ಅನೇಕ ಅರಸರುಗಳು ಬ್ರಹ್ಮಪುರಿಗಳನ್ನು ನಿರ್ಮಿಸಿ ಅವುಗಳಿಗೆ ಅನೇಕ ದಾನದತ್ತಿಗಳನ್ನು ಕೊಟ್ಟ ವಿಚಾರಗಳು ಅನೇಕ ಶಾಸನಗಳಿಂದ ತಿಳಿದು ಬರುತ್ತದೆ. ಪ್ರಸ್ತುತ ಈ ಅಧ್ಯಯನ ಪ್ರದೇಶದ ಕೆಲವು ಗ್ರಾಮಗಳು ಅಂದರೆ ಬೆಟದೂರು,[೧೭೫] ಕುರಹಟ್ಟಿ,[೧೭೬] ಹೆಬ್ಬಳ್ಳಿ,[೧೭೭] ಶಿರಗುಪ್ಪಿ[೧೭೮] ಸ್ಥಳಗಳಲ್ಲಿ ಬ್ರಹ್ಮಪುರಿಗಳಾಗಿದ್ದ ಬಗ್ಗೆ ಶಾಸನಗಳಲ್ಲಿ ಮಾಹಿತಿ ಇದೆ.

೨.೪ ಆರ್ಥಿಕ ಸ್ಥಿತಿಗತಿಗಳು

ಒಂದು ಪ್ರದೇಶದ ಅಭಿವೃದ್ದಿಯು ಆ ಪ್ರದೇಶದ ಅರ್ಥವ್ಯವಸ್ಥೆಯ ಮೇಲೆ ಅವಲಂಬಿಸಿರುತ್ತದೆ. ಇದು ಒಂದು ಸಮಾಜದ ಅಭಿವೃದ್ದಿಯ ಬೆನ್ನೆಲುಬು. ಭೂಮಿಯಲ್ಲಿ ಅನೇಕ ನೈಸರ್ಗಿಕ ಖನಿಜ

ಲವಣಾಂಶಗಳು ಹುದುಗಿದ್ದು, ವ್ಯವಸಾಯಕ್ಕೆ ಅನಕೂಲಕರವಾಗಿದೆ. ನೈಸರ್ಗಿಕ ಸಂಪನ್ಮೂಲಗಳು ಹವಾಗುಣ, ಜನರ ಉದ್ಯೋಗ, ವ್ಯಾಪಾರ, ಸಂಘ–ಸಂಸ್ಥೆಗಳು ಆ ಪ್ರದೇಶಗಳ ಅರ್ಥವ್ಯವಸ್ಥೆಯ ಅಧ್ಯಯನಕ್ಕೆ ಪೂರಕವಾದಂತಹ ಮಾಹಿತಿಯನ್ನು ಒದಗಿಸುತ್ತವೆ. ಪ್ರಸ್ತುತ ಈ ಪ್ರದೇಶದಲ್ಲಿ ಆರ್ಥಿಕ ಚಟುವಟಿಕೆಗಳ ಕುರಿತಾಗಿದ್ದು, ಶಾಸಗಳ ಹಿನ್ನೆಲೆಯಿಂದ ಈ ಪ್ರದೇಶದ ವಿವಿಧ ಆರ್ಥಿಕ ಚಟುವಟಿಕೆಗಳನ್ನು ಪರಿಚಯಿಸಲಾಗಿದೆ.

ವ್ಯವಸಾಯ

ಪ್ರಾಚೀನ ಕಾಲದಿಂದಲೂ ಇಂದಿನವರೆಗೂ ವ್ಯವಸಾಯವೇ ಜನರ ಮೂಲ ಜೀವನೋಪಾಯ. ಇದು ಜನರನ್ನು ಸಾಕುವ ಭೂಮಿಯನ್ನು ತಾಯಿಯೆಂದೂ ಬೆಳೆಗಳನ್ನು ಬೆಳೆಯುವ ರೈತರನ್ನು ಭೂದೇವಿ ಮಕ್ಕಳೆಂದೂ ಕರೆಯಲಾಗಿದೆ.[೧೭೯] ವ್ಯವಸಾಯದಲ್ಲಿ 'ದೇವತಾಮಾತೃಕೆ' ಅಂದರೆ ಕೇವಲ ಮಳೆಯನ್ನೇ ಆಧರಿಸಿ ಬೆಳೆಯನ್ನು ತೆಗೆಯುವದಾಗಿದೆ. ಮತ್ತು 'ನದೀಮಾತೃಕೆ' ಅಂದರೆ ನದಿ, ಕೆರೆ ಇತರೆ ಮೂಲಗಳಿಂದ ಆಶ್ರಯಿಸಿ ಬೆಳೆಯನ್ನು ತೆಗೆಯುವದಾಗಿದೆ. ಪ್ರಾಚೀನ ಕಾಲದಿಂದಲೂ ರಾಜಮಹಾರಾಜರು ಭೂಮಿಯನ್ನೇ ದಾನದತ್ತಿಗಳಾಗಿ ನೀಡಿದ್ದುದು ಶಾಸನಗಳಿಂದ ತಿಳಿದು ಬರುತ್ತದೆ.

ಪ್ರಸ್ತುತ ಈ ಪ್ರದೇಶಗಳಲ್ಲಿ ಕಪ್ಪು ಭೂಮಿ ಹೆಚ್ಚಿನಮಟ್ಟಿಗೆ ಕಂಡು ಬರುತ್ತಿದ್ದು, ಫಲವತ್ತತೆಯಿಂದ ಕೂಡಿದ್ದುದಲ್ಲದೇ ಹೆಚ್ಚಿನ ಕಾಲದವರೆಗೆ ಭೂಮಿಯನ್ನು ತೇವಾಂಶಭರಿತವಾಗಿರಿಸುತ್ತದೆ. ಇದು ಒಣಬೇಸಾಯದ ಭೂಮಿಯಾಗಿದೆ. ಕಮ್ಮ ೧೦೦,[೧೮೦] ೨೦೦,[೧೮೧] ೨೦೦,[೧೮೨] ಕಮ್ಮ ೪೪೦,[೧೮೩] ಕಮ್ಮ ೪೨೨,[೧೮೪] ಕಮ್ಮ ೪೫೦,[೧೮೫] ಕಮ್ಮ ೬೦೦,[೧೮೬] ಹಾಗೆಯೇ ಮತ್ತರು ೨,[೧೮೭] ಮತ್ತರು ೩,[೧೮೮] ಮತ್ತರು ೫,[೧೮೯] ಮತ್ತರು ೨೦,[೧೯೦] ಮತ್ತರು ೪೦,[೧೯೧] ಮತ್ತರು ೧೪೨,[೧೯೨] ಮತ್ತರು ೪೪೦,[೧೯೩] ಅದರಲ್ಲಿ ಹಾರುಗೋಲು ಮತ್ತರು ೪,[೧೯೪] ಬಯಲುಕೆರೆಯ ಮತ್ತರು ೨,[೧೯೫] ಗಳೆ ೩೦೦,[೧೯೬] ಮತ್ತರು ೧೫೦,[೧೯೭] ಮತ್ತರು ೨೦೦,[೧೯೮] ಅದರಲ್ಲಿ ಹಿರಿಯಕೋಲು ಮತ್ತರು ಭೂಮಿ,[೧೯೯] ಕಯ್ಯ ೧೫,[೨೦೦] ಕಂಬ ೪೦೦,[೨೦೧] ೩೩ಗೇಣು ಗುಡಿಗಂಬದಳೆಗಳು[೨೦೨] ಮುಂತಾದವುಗಳು ನಮಗೆ ದೊರೆಯುತ್ತದೆ. ಇದರ ಜೊತೆಗೆ ಅಪರೂಪವಾಗಿ ಹರಳುಭೂಮಿ ಇರುವುದು ಬೋಕ್ಯಾಪುರ[೨೦೩] ಶಾಸನದಿಂದ ತಿಳಿದು ಬರುತ್ತದೆ.

ಕೆಲವು ಗ್ರಾಮ ಅಥವಾ ಪಟ್ಟಣಗಳ ಗ್ರಾಮಾಂಕಿತವುಳ್ಳ ಅಳತೆಗೋಲುಗಳಿದ್ದುದನ್ನು ಕೆಲವು ಶಾಸನಗಳು ದಾಖಲಿಸುತ್ತವೆ. ಪ್ರಸ್ತುತ ನವಿಲುಗುಂದದಲ್ಲಿ ನವಿಲ್ಗುಂದ ಕೋಲು,[೨೦೪] ಅಣ್ಣಿಗೇರಿಯಲ್ಲಿ ಅಣ್ಣಿಗೇರಿಯ ಕೋಲು,[೨೦೫] ನರೇಂದ್ರದಲ್ಲಿ ಕುಂದೂರು ಕೋಲ[೨೦೬] ಮತ್ತೆ ಕೆಲವೆಡೆ ಕುಂದೂರುಗಳೆ[೨೦೭] ಉಲ್ಲೇಖಗಳಿವೆ. ಜೊತೆಗೆ ಸಿಂಗನಹಳ್ಳಿ[೨೦೮] ಗೆಳೆಯ ಉಲ್ಲೇಖವೂ ಇದೆ. ಇನ್ನೂ ಮನೆಯ ನಿವೇಶನವನ್ನು ಅಳತೆಮಾಡಲು ಕೈ ಅಗಲ, ನೀಳಹಸ್ತದ ಬಳಕೆಯಿತ್ತು ಎಂಬುದಕ್ಕೆ ನರೇಂದ್ರ[೨೦೯] ಮತ್ತು ಬೊಕ್ಯಾಪುರ[೨೧೦] ಶಾಸನಗಳು ಸ್ಪಷ್ಟಪಡಿಸುತ್ತವೆ.

ನೀರಾವರಿ/ಕೆರೆ–ಕಟ್ಟೆಗಳು

ಪ್ರಾಚೀನ ಕಾಲದಿಂದಲೂ ರಾಜರು, ಶ್ರೀಮಂತರು ಮತ್ತು ಗ್ರಾಮಸಂಸ್ಥೆಗಳು ಕೆರೆ–ಬಾವಿಗಳಿಗೆ ಅನೇಕ ದಾನದತ್ತಿಗಳನ್ನು ನೀಡುತ್ತಿದ್ದರು. ಅಲ್ಲದೇ ಇವುಗಳನ್ನು ನಿರ್ಮಿಸಿದರೆ ಶ್ರೇಯಸ್ಸಾಗುತ್ತದೆಂಬ ನಂಬಿಕೆ ಇತ್ತು. ವ್ಯವಸಾಯಕ್ಕೆ ಪ್ರಮುಖವಾಗಿ ನದಿ, ಬಾವಿ, ಕೆರೆಗಳನ್ನೇ ಅವಲಂಬಿಸಬೇಕಾಗಿದ್ದಿತು.

ಪ್ರಸ್ತುತ ಈ ಅಧ್ಯಯನ ಪ್ರದೇಶದಲ್ಲಿ ಕೆರೆ, ಬಾವಿ, ಗದ್ದೆ ಅನ್ಯತಟಾಕ ಮತ್ತು ಗ್ರಾಮಗಳ ಹೆಸರುಗಳನ್ನೂ ಕರೆಯುವ ಸಂಪ್ರದಾಯವನ್ನು ಇಂದಿಗೂ ಕಾಣುತ್ತೇವೆ. ಅಂತೆಯೇ ಮೇಲಿನ ಉಲ್ಲೇಖಗಳು ಶಾಸನಗಳಲ್ಲಿದ್ದು, ಈ ಪ್ರದೇಶದಲ್ಲಿ ಕಂಡು ಬರುವ ಹೆಸರಿನ ವಿವಿಧತೆಗಳನ್ನು ಅಕಾರಾದಿಯಾಗಿ ಗ್ರಾಮಗಳ ಪಟ್ಟಿಯನ್ನು ಅನುಬಂಧದಲ್ಲಿ ನೀಡಲಾಗಿದೆ.

ಬೆಳೆಗಳು/ತೋಟಗಳು

ಭೂಮಿಯಲ್ಲಿ ನೀರು ನಿಲ್ಲುವಂತೆ ಮಾಡಿ ಅದನ್ನು ಗದ್ದೆಯನ್ನಾಗಿ ಪರಿವರ್ತಿಸಿ ಅದರಲ್ಲಿ ಹಲವಾರು ಬೆಳೆಗಳನ್ನು ಬೆಳೆಯುತ್ತಿದ್ದರು. ಪ್ರಸ್ತುತ ಈ ಅಧ್ಯಯನ ಪ್ರದೇಶದಲ್ಲಿ ಭತ್ತದ ಹೊಲಗಳು ಈ ಕಾಲದಲ್ಲಿದ್ದವೆಂದು ಬಾಡ,[೨೧೧] ದೇವರಹುಬ್ಬಳ್ಳಿಯಲ್ಲಿ[೨೧೨] ದೊರೆತ ಶಾಸನಗಳು ದಾಖಲಿಸಿವೆ. ಇದಲ್ಲದೇ ಕೊಳಗ, ಭತ್ತ ಮತ್ತು ಸುಟ್ಟುಗ ಭತ್ತದ ಉಲ್ಲೇಖಗಳು ಭಟ್ಟಿಕೊಪ್ಪ[೨೧೩] ಮತ್ತು ಕುಯಿಬಾಳ[೨೧೪] ಶಾಸನಗಳು ಇವುಗಳ ಬಗ್ಗೆ ದಾಖಲಿಸುತ್ತವೆ.

ಅವುಗಳಲ್ಲಿ ಎಲೆ, ಬಳ್ಳಿತೋಟ, ಹೂದೋಟ, ಮರಗಳುಳ್ಳ ತೋಟಗಳಿದ್ದ ಬಗ್ಗೆ ಅನೇಕ ಶಾಸನಗಳಲ್ಲಿ ಮಾಹಿತಿ ದೊರೆಯುತ್ತದೆ. ನರೇಂದ್ರದಲ್ಲಿ[೨೧೫] ಎಂಟನೂರು ಬಳ್ಳಿಗಳ ತೋಟಗವೆಂದು, ಸೋಮನಕೊಪ್ಪದಲ್ಲಿ[೨೧೬] ಎಲೆ ಮತ್ತು ಅಡಿಕೆ ತೋಟಗಳಿದ್ದವೆಂದು, ಮನಗುಂಡಿಯಲ್ಲಿ[೨೧೭] ಎಲೆತೋಟವೆಂದು, ಕುಯಿಬಾಳ[೨೧೮] ಗ್ರಾಮದಲ್ಲಿ ದೊರೆತಶಾಸನ ಈ ವಿಷಯವನ್ನು ದಾಖಲಿಸುತ್ತದೆ. ಮರದ ತೋಟಗಳಿದ್ದುದರ ಬಗ್ಗೆ ನರೇಂದ್ರ,[೨೧೯] ಮುತ್ತಗಿ,[೨೨೦] ಮದನಭಾವಿ,[೨೨೧] ತಂಬೂರು,[೨೨೨] ಗ್ರಾಮಗಳಲ್ಲಿ ಎಂಟನೂರುಮರ, ಮನ್ನೂರುಮರದ ತೋಟದ ಬಗ್ಗೆ ಉಲ್ಲೇಖವಿದೆ. ಬಸರಿಮರ,[೨೨೩] ಅರಳಿಮರ,[೨೨೪] ಹುಣಸೇಮರ[೨೨೫] ಬಗ್ಗೆ ಶಾಸನಗಳು ಉಲ್ಲೇಖಿಸುತ್ತವೆ. ಜೊತೆಗೆ ಬೆಟದೂರು,[೨೨೬] ಸೋಮನಕೊಪ್ಪ,[೨೨೭] ನರೇಂದ್ರ[೨೨೮] ಸ್ಥಳಗಳಲ್ಲಿ ಹೂವಿನ ತೋಟ ಪ್ರದೇಶಗಳಾಗಿವೆ. ಒಟ್ಟಾರೆ ಮಲೆನಾಡು, ಅರೆಮಲೆನಾಡು ಭೂ ಪ್ರದೇಶದಿಂದ ಕೂಡಿರುವಂತಹ ಈ ಪ್ರದೇಶದಲ್ಲಿ ಸಾಮಾನ್ಯವಾಗಿ ದ್ವಿದಳಧಾನ್ಯ, ಹತ್ತಿ, ಸಾಸಿವೆ, ಸಜ್ಜೆ, ಗೋದಿ ಇನ್ನೂ ಮುಂತಾದ ಬೆಳೆಗಳನ್ನು ಬೆಳೆಯುತ್ತಾರೆ.

ವರ್ತಕರು ಮತ್ತು ಶ್ರೇಣಿಗಳು

ವರ್ತಕರು ವ್ಯಾಪಾರವನ್ನೇ ವೃತ್ತಿಯನ್ನಾಗಿಸಿಕೊಂಡಿದ್ದರು. ಅವರನ್ನು ಕೇವಲ ವ್ಯಾಪಾರ ವೃತ್ತಿಯನ್ನು ಮಾಡುವ ವಿನಿಮಯ ವರ್ತಕರು ಮತ್ತು ಗೃಹಕೈಗಾರಿಕೆಗಳ ಮೂಲಕ ತಾವೇ ಉತ್ಪಾದಿಸಿದ ವಸ್ತುಗಳನ್ನು ತಾವೇ ಮಾರಾಟ ಮಾಡುವ ಉತ್ಪಾದಕ ವಿನಿಮಯ ವರ್ತಕರೆಂದು

ವಿಭಾಗಿಸಿಬಹುದಾಗಿದೆ. ಈ ವರ್ತಕರಲ್ಲಿ ಕೆಲವು ಸಮುದಾಯದವರು ಮಾತ್ರ ತಮ್ಮ ಸಮುದಾಯದ ಜನರೊಂದಿಗೆ ಸೇರಿಕೊಂಡು ಸಂಘಗಳನ್ನು ಸ್ಥಾಪಿಸಿಕೊಂಡಿದ್ದರು.[೨೨೯]

ಶಾಸನಗಳಲ್ಲಿ ಉಲ್ಲೇಖಿತವಾಗಿರುವ ಸೆಟ್ಟಿಬಣಂಜಿಗ, ಸೆಟ್ಟಿಗುತ್ತ, ನಕರ, ಮುಮ್ಮರಿದಂಡ, ಗಾತ್ರಿಗರು ವಿನಿಮಯ ವರ್ತಕರಾಗಿದ್ದು, ಬಡಗಿ, ಮೂಲಗಾರ ಹನ್ನವಣ್ಣಿಗರು, ಸಂಘಗಳು, ವಿನಿಮಯಸಂಘ, ಅಯ್ಯಾವೊಳೆ ಐನೂರ್ವರು, ತಂಬುಲಿಗ ಸಾಸಿರ್ವರು, ಉತ್ಪಾದಕ ಹಾಗೂ ವಿನಿಮಯ ವರ್ತಕರುಗಳಾಗಿದ್ದರು. ಜೊತೆಗೆ ತೆಲ್ಲಿಗರು, ಕಂಬಾರರು, ಉತ್ಪಾದಕರ ವಿನಿಮಯ ಸಂಘವನ್ನು ಕಾಣುತ್ತೇವೆ. ಅಲ್ಲದೇ ಉಗುರು ಮುನ್ನೂರು ಹಾಗೂ ಅರವತ್ತೊಕ್ಕಲು ಮತ್ತು ಸೀಣಿಗರು ಇತರೆ ಸಂಘಗಳಾಗಿ ವಿಭಾಗಿಸಿಕೊಂಡಿದ್ದರು

ಹೀಗೆ ಈ ಪ್ರದೇಶದಲ್ಲಿ ಶಾಸನೋಕ್ತ ವಿವಿಧ ರೀತಿಯ ವರ್ತಕ ಮತ್ತು ಶ್ರೇಣಿಗಳು ಕಂಡು ಬಂದಿದ್ದು, ಅವುಗಳನ್ನು ಅಕಾರಾದಿಯಾಗಿ ಅನುಬಂಧದಲ್ಲಿ ಪಟ್ಟಿಮಾಡಲಾಗಿದೆ.

ನಾಣ್ಯಗಳು

ಕರ್ನಾಟಕದಲ್ಲಿ ಪ್ರಾಚೀನ, ಮದ್ಯಕಾಲೀನ ಅವಧಿಯಲ್ಲಿ ಅನೇಕ ರೀತಿಯ ನಾಣ್ಯಗಳು ಪ್ರಚಲಿತವಿದ್ದವು. ಮುಖ್ಯವಾಗಿ ಗದ್ಯಾಣ, ಪಣ, ಹಾರ, ಪಾಗ, ಬೇಳೆ, ಕಾಣೆ ಇನ್ನೂ ಮುಂತಾದ ಉಲ್ಲೇಖಗಳು ಶಾಸನಗಳಲ್ಲಿ ಕಾಣಸಿಗುತ್ತವೆ. ನಾಣ್ಯಗಳನ್ನು ಚಿನ್ನ, ಬೆಳ್ಳಿ, ಲೋಹದ ಇತರೆ ವಸ್ತುಗಳಿಂದ ತಯಾರಿಸುತ್ತಿದ್ದರು. ಇವುಗಳನ್ನು ಟಂಕಿಸುವ ಸ್ಥಳಗಳನ್ನು ಕಮ್ಮಟ ಅಚ್ಚಿನ ಟಂಕಶಾಲೆ ಎಂದು ಕರೆಯಲಾಗುತ್ತಿತ್ತು.[೨೩೦]

ಪ್ರಾಚೀನ ಕಾಲಘಟ್ಟದಲ್ಲಿ ವಿವಿಧ ರೀತಿಯ ನಾಣ್ಯಗಳು ಚಲಾವಣೆಯಲ್ಲಿದ್ದವು.

೧	ಗದ್ಯಾಣ	=	೧೦ ಪಣ
೧	ಪಣ	=	೨೦ ವೀಸ
೧	ಪಣ	=	೪ ಹಾಗ
೧	ಹಾಗ	=	೨ ಬೇಳೆ
೧	ಪಣ	=	೬೪ ಕಾಣೆ
೧೧/೨	ತಾರ	=	೧ ಕಾಣೆ

ಪ್ರಸ್ತುತ ಈ ಪ್ರದೇಶದಲ್ಲಿ ರಾಜಮಹಾರಾಜರು, ಮಂತ್ರಿಗಳು, ದಂಡನಾಯಕರು, ಮಾಂಡಳಿಕರು, ಸ್ತ್ರೀಯರು ಅನೇಕ ಧಾರ್ಮಿಕ ಕಾರ್ಯಗಳಿಗಾಗಿ ಈ ನಾಣ್ಯಗಳನ್ನು ದಾನವಾಗಿ ನೀಡಿದ್ದುದರ ಬಗ್ಗೆ ಶಾಸನಗಳು ನಮಗೆ ಮಾಹಿತಿಯನ್ನು ನೀಡುತ್ತವೆ.

ಪ್ರಸ್ತುತ ಈ ಪ್ರದೇಶದಲ್ಲಿ ಮುಕ್ಕಲು,[೨೩೧] ಅಣ್ಣಿಗೇರಿ,[೨೩೨] ಬೆಟದೂರು,[೨೩೩] ನರೇಂದ್ರ,[೨೩೪] ಮದನಬಾವಿ,[೨೩೫] ಕಾಮಧೇನು,[೨೩೬] ಕುರಹಟ್ಟಿ,[೨೩೭] ಮನಗುಂಡಿ[೨೩೮] ಗ್ರಾಮಗಳಲ್ಲಿನ ಶಾಸನಗಳಲ್ಲಿ

ಗದ್ಯಾಣ ಎಂಬ ಪದ ಬಳಕೆಯಾಗಿದ್ದು, ಅದು ವ್ಯತ್ಯಾಸವನ್ನು ಪಡೆದುಕೊಳ್ಳುತ್ತಾ ಹೋಗಿದ್ದನ್ನ ಕಾಣುತ್ತೇವೆ. ಹಾಗೆಯೇ ಪಣ ಹಾಗೂ ಹಾಗದ ಉಲ್ಲೇಖವನ್ನು ಅಣ್ಣಿಗೇರಿ,[೨೩೯] ಸಿದ್ದಾಪುರ,[೨೪೦] ಮತ್ತು ಬೆಟದೂರು,[೨೪೧] ಸಂಶಿ,[೨೪೨] ಮನಗುಂಡಿ,[೨೪೩] ಅರೆಕುರಹಟ್ಟಿ,[೨೪೪] ಮದನಬಾವಿ[೨೪೫] ಗ್ರಾಮಗಳ ಶಾಸನಗಳಲ್ಲಿ ದಾಖಲಾಗಿವೆ. ಮನಗುಂಡಿ[೨೪೬] ಹಾಗೂ ಅಮ್ಮಿನಭಾವಿ[೨೪೭] ಶಾಸನಗಳಲ್ಲಿ ಚಿನ್ನ ಮತ್ತು ಹೊನ್ನಗಳ ಬಗ್ಗೆ ಮಾಹಿತಿ ದೊರಕಿವೆ.

ಧಾರ್ಮಿಕ ವ್ಯವಸ್ಥೆಗಳು

ಸಮಾಜದ ಪ್ರಮುಖ ಅಂಗಗಳಲ್ಲಿ ಧರ್ಮವೂ ಒಂದು. ಪ್ರಪಂಚದಾದ್ಯಂತ ವಿವಿಧ ಕಾಲಗಳಲ್ಲಿ ಹಾಗೂ ದೇಶ ಪರಿಸರಗಳಿಗನುಗುಣವಾಗಿ ಹಲವಾರು ಧರ್ಮಾಚರಣೆಗಳು ಬೆಳೆದು ಬಂದಿವೆ. ಕೆಲವು ಧರ್ಮಗಳು ಕಾರಣಾಂತರಗಳಿಂದ ತಮ್ಮ ಅಸ್ಥಿತ್ವವನ್ನು ಕಳೆದುಕೊಂಡರೆ, ಇನ್ನು ಕೆಲವು ತತ್ವದರ್ಶನ-ಆಚಾರ ವಿಚಾರಗಳಿಂದ ಅಲ್ಲಿನ ಪರಿಸರಕ್ಕೆ ಒಗ್ಗಿಕೊಂಡು ಜೀವಂತವಾಗಿ ಬೆಳವಣಿಗೆಯಾಗುವುದನ್ನು ಕಾಣುತ್ತೇವೆ. ಧರ್ಮ ಎಂಬ ಪದ 'ಧೃ' ಎಂಬ ಧಾತುವಿಗೆ 'ರ್ಮ' ಎಂಬ ಪ್ರತ್ಯೆಯ ಸೇರಿ ಧರ್ಮ ಎಂಬ ಪದವು ರೂಪಗೊಂಡಿದೆ. ಈ ಧರ್ಮದ ಅರ್ಥ ಜಾತಿ-ಪಂಗಡಗಳಿಗೆ ಸೇರಿದ ಆಚಾರ-ವಿಚಾರ ಹಾಗೂ ಭಕ್ತಿ ಔಚಿತ್ಯವೆಂದರ್ಥವಾಗುತ್ತದೆ. ಒಟ್ಟಾರೆಯಾಗಿ ಧರ್ಮವು ಆಯಾ ನಾಡಿನ ಜನರ ಸಾಮಾಜಿಕ, ಆರ್ಥಿಕ ಜೀವನದ ಕಥನವಾಗಿದೆ.[೨೪೮] 'ಧರ್ಮೋರ್ರಕ್ಷಿತ ರಕ್ಷಿತ', ನಾವು ಧರ್ಮವನ್ನು ರಕ್ಷಿಸಿದರೆ ಧರ್ಮವು ನಮ್ಮನ್ನು ರಕ್ಷಿಸುತ್ತದೆ ಎಂದು ಎಲ್ಲಾ ಧರ್ಮಗಳು ಸಾರಿ ಹೇಳುತ್ತಿವೆ.[೨೪೯]

ಪ್ರಸ್ತುತ ಈ ಅಧ್ಯಯನ ಪ್ರದೇಶದಲ್ಲಿ ಕಂಡು ಬರುವ ಶಾಸನಗಳನ್ನು ಆಧಾರವಾಗಿಟ್ಟುಕೊಂಡು ಅಧ್ಯಯನವನ್ನು ಕೈಗೊಂಡಾಗ ಶೈವಧರ್ಮವು ಅತೀ ಪ್ರಾಚೀನತಮವಾಗಿದ್ದು, ನಂತರ ಜೈನ, ವೈಷ್ಣವ, ಬೌದ್ಧ ಹಾಗೂ ಶಾಕ್ತಧರ್ಮಗಳು ಈ ಪ್ರದೇಶದಲ್ಲಿ ಅಸ್ತಿತ್ವವನ್ನು ಪಡೆದುಕೊಂಡಿರುವ ವಿಷಯ ಈ ಶಾಸನಗಳು ಕೊಡುವ ದಾಖಲೆಗಳಿಂದ ತಿಳಿಯುತ್ತದೆ.

ಶೈವಧರ್ಮ

ಭಾರತದಲ್ಲಿ ಅತೀ ಪ್ರಾಚೀನ ಶೈವಧರ್ಮವಾಗಿದೆ. ಇರದ ಪ್ರಾಚೀನತೆಯು ವೇದಗಳ ಕಾಲಕ್ಕಿಂತಲೂ ಹಿಂದಕ್ಕೆ ಹೋಗುತ್ತದೆ. ಕ್ರಿಪೂ, ೩೦೦೦ ವರ್ಷಗಳ ಹಿಂದಿನ ಹರಪ್ಪಾ, ಮಹೊಂಜೋದಾರೋ ಉತ್ಖನನದಲ್ಲಿ ದೊರೆತ ಮುದ್ರಿಕೆಗಳ ಆಧಾರದ ಮೇಲೆ ಈ ಧರ್ಮವು ಪ್ರಾಚೀನತಮ ಧರ್ಮವಾಗಿರುವುದು ತಿಳಿಯುತ್ತದೆ.[೨೫೦] ಸಿಂಧೂ ಸಂಸ್ಕೃತಿಯಲ್ಲಿ ದೊರೆತಂತಹ ಕೊಂಬುಗಳಿರುವ ದೇವತೆಗಳ ಚಿತ್ರಗಳ ಜೊತೆಗೆ ಮುದ್ರಿಕೆಗಳು ದೊರೆತಿವೆ. ಈ ಮುದ್ರಿಕೆಗಳ ಮೇಲಿರುವ ಚಿತ್ರಗಳಲ್ಲಿ ಒಂದನ್ನು ಪಶುಪತಿ ಎಂದು ಗುರುತಿಸಲಾಗಿದೆ.[೨೫೧]

ಪ್ರಸ್ತುತ ಈ ಅಧ್ಯಯನ ಪ್ರದೇಶದಲ್ಲಿ ಅತ್ಯಂತ ಪ್ರಾಚೀನ ಶೈವದೇವಾಲಯ ನರಗುಂದ ಪ್ರದೇಶದ ವಾಸನವಾಗಿದೆ.[೨೫೨] ಹಾಗೆಯೇ ಶ್ರೀನಿವಾಸ ಪಾಡಿಗಾರರವರು ಉಣಕಲ್ಲಿನ

ಈಶ್ವರದೇವಾಲಯದಲ್ಲಿನ ಶಿವಲಿಂಗ ವೃತ್ತಾಕಾರವಾಗಿದ್ದು, ಲಿಂಗದ ಬ್ರಹ್ಮಸೂತ್ರ ಬಾಣಾಕಾರದಲ್ಲಿದ್ದರಿಂದ ಇದು ಕ್ರಿ.ಶ. ೭ನೇ ಶತಮಾನಕ್ಕೆ ಸೇರುತ್ತದೆ ಎಂದು ಅಭಿಪ್ರಾಯ ಪಟ್ಟಿದ್ದಾರೆ.[೨೫೩]

ಕುಂದಗೋಳ ತಾಲೂಕಿನ ಕುಯಿಬಾಳ ಶಾಸನದಲ್ಲಿ ಒಂದನೇ ಸೋಮೇಶ್ವರನ ಮಹಾಸಾಮಂತ ಇಂದ್ರಕೇಸಿ ಅರಸ ದತ್ತಿ ನೀಡಿದ ವಿಷಯ ಇದೆ.[೨೫೪] ಕಲಘಟಗಿ ತಾಲೂಕಿನ ಸಂಗಮೇಶ್ವರ ಗ್ರಾಮದ ಜಯಕೇಶಿ ಶಾಸನದಲ್ಲಿ ಚಟ್ಟಗಾವುಂಡ ಶಿವಾಲಯಕ್ಕೆ ದತ್ತಿ ನೀಡಿದ ವಿಷಯವಿದೆ.[೨೫೫] ಅದೇ ರೀತಿ ಹೂಲೇಶ್ವರ ದೇವಾಲಯಕ್ಕೆ ದತ್ತಿ ನೀಡಿದ ವಿಷಯ ಶೇಡಂಬಿ ಗ್ರಾಮದಲ್ಲಿ ದೊರೆತ ಶಾಸನದಲ್ಲಿದೆ.[೨೫೬]

ಪ್ರಸ್ತುತ ಈ ಅಧ್ಯಯನ ಪ್ರದೇಶದಲ್ಲಿ ಶೈವಧರ್ಮಕ್ಕೆ ಸಂಬಂಧಿಸಿದ ಶಾಸನಗಳು ಅತೀ ಹೆಚ್ಚಿನಮಟ್ಟಿಗೆ ದೊರೆಯುತ್ತವೆ. ಇಲ್ಲಿನ ಅನೇಕ ರಾಜರು, ಸಾಮಂತರು, ದಂಡನಾಯಕರು ಈ ದೇವಾಲಯಗಳಿಗೆ, ಅವುಗಳ ಜೀರ್ಣೋದ್ಧಾರಕ್ಕೆ, ಪಂಡಿತರಿಗೆ, ಧೂಪದೀಪ, ದೇವರ ಪುನಸ್ಕಾರ, ನೈವೇದ್ಯ, ಪ್ರಸಾದ ಇನ್ನೂ ಅನೇಕ ರೀತಿಯ ದಾನಗಳನ್ನು ನೀಡಿದ್ದನ್ನು ಶಾಸನಗಳು ತಿಳಿಸುತ್ತವೆ. ಪ್ರಸ್ತುತ ಶೈವಧರ್ಮಕ್ಕೆ ಸಂಬಂಧಿಸಿದಂತೆ ಶಾಸನೋಕ್ತವಾಗಿ ಸುಮಾರು ೬೮ ದೇವಾಲಯಗಳು ದೊರೆತಿದ್ದು, ಅವುಗಳ ಬಗ್ಗೆ ಅಧ್ಯಾಯ ಮೂರರಲ್ಲಿ ಶೈವ ದಾನಶಾಸನಗಳು ಎಂಬ ಶೀರ್ಷಿಕೆಯಡಿ ಈ ವಿಷಯಗಳ ಕುರಿತು ಚರ್ಚಿಸಲಾಗಿದೆ.

ಮಠಗಳು

ಧಾರ್ಮಿಕ ಮತ್ತು ಸಾಮಾಜಿಕ ಚಟುವಟಿಕೆಗಳನ್ನು ವ್ಯವಸ್ಥಿತವಾಗಿ ನಿರ್ವಹಿಸಲು ಜೊತೆಗೆ ದೇವಾಲಯಗಳ ಆಚಾರ್ಯರು ತಂಗಲು, ದೇವಾಲಯಗಳಿಗೆ ಹೊಂದಿಕೊಂಡಂತೆ ಮಠಗಳಿರುತ್ತಿದ್ದವು. ಅವುಗಳಲ್ಲಿ ಅಧ್ಯಾಪನ ಹಾಗೂ ಅಧ್ಯಯನ ಕ್ರಿಯೆಗಳು ಜರುಗುತ್ತಿದ್ದವು ಜೊತೆಗೆ ಇವುಗಳಿಗೆ ಅನೇಕ ರಾಜರುಗಳು ದಾನದತ್ತಿಗಳನ್ನು ನೀಡಿ ಪ್ರೋತ್ಸಾಹಿಸುತ್ತಿದ್ದ ವಿಷಯ ಅನೇಕ ಶಾಸನಗಳಿಂದ ತಿಳಿದು ಬರುತ್ತದೆ. ಪ್ರಸ್ತುತ ಈ ಅಧ್ಯಯನ ಪ್ರದೇಶದಲ್ಲಿ ಅನೇಕ ಮಠಗಳಿದ್ದು, ಅವುಗಳ ಬಗ್ಗೆ ಅನುಬಂಧದಲ್ಲಿ ಶಾಸನಗಳ ವಿವರಣೆಗಳನ್ನು, ಗ್ರಾಮಗಳ ಅಕಾರಾದಿಯಾಗಿ ನೀಡಲಾಗಿದೆ.

ವೈಷ್ಣವ ಧರ್ಮ

ಕರ್ನಾಟಕದ ಪ್ರಮುಖ ಧರ್ಮಗಳಲ್ಲಿ ವೈಷ್ಣವ ಧರ್ಮವೂ ಒಂದು. ಋಗ್ವೇದ ಸಂಹಿತೆಯಲ್ಲಿ ಪ್ರಪ್ರಥಮವಾಗಿ ವಿಷ್ಣುವಿನ (ವಾಮನ-ತ್ರಿವಿಕ್ರಮ) ಪ್ರಸ್ತಾಪವನ್ನು ಕಾಣುತ್ತೇವೆ.[೨೫೭] ಅಲ್ಲದೇ ವೈದಿಕ ಯುಗದಿಂದ ಇಂದಿನವರೆಗೂ ಭಾರತದಲ್ಲಿ ವಿಷ್ಣುಪಾಸನೆ ಜನಪ್ರಿಯವಾಗಿ ಬೆಳೆದು ಬಂದಿದೆ. ಜೊತೆಗೆ ವಿಷ್ಣುವಿನ ವಿವಿಧ ಹೆಸರುಗಳು, ರೂಪಗಳು ಮತ್ತು ಅವತಾರಗಳ ಬಗ್ಗೆ ಅನೇಕ ಶಾಸನಗಳು ದಾಖಲಿಸುತ್ತವೆ. ಅದರಲ್ಲಿ ನಾನಾಘಾಟ್ ಶಾಸನ ಕ್ರಿಪೂ.ದಲ್ಲಿಯೇ ದಕ್ಷಿಣ ಭಾರತದಲ್ಲೇ ಪ್ರವೇಶಿಸಿದ್ದನ್ನು ಶಾಸನಗಳಿಂದ ತಿಳಿದು ಬರುತ್ತದೆ. ಆದರೆ ಕರ್ನಾಟಕದಲ್ಲಿ ಕ್ರಿ.ಶ. ೭ನೇ ಶತಮಾನದ ಹೊತ್ತಿಗೆ ವೈಷ್ಣವ ಧರ್ಮ ಬೆಳವಣಿಗೆಯಾಯಿತು.

ಪ್ರಸ್ತುತ ಈ ಅಧ್ಯಯನ ಪ್ರದೇಶದಲ್ಲಿ ಶಾಸನೋಕ್ತ ದೇವಾಲಯಗಳು ವಿರಳವಾಗಿದ್ದು, ತಂಬೂರು, ಅಮರಗೋಳ, ಉಣಕಲ್, ಕೋಳಿವಾಡ, ಶಿರಗುಪ್ಪಿ, ದೇವರಹುಬ್ಬಳ್ಳಿ, ಬ್ಯಾಹಟ್ಟಿ, ಸಂಶಿ ಮತ್ತು ಕುರಹಟ್ಟಿ ಗ್ರಾಮಗಳಲ್ಲಿ ದೊರೆತಂತಹ ಶಾಸನಗಳು ನಮಗೆ ಮಾಹಿತಿಯನ್ನು ನೀಡುತ್ತವೆ. ಜೊತೆಗೆ ಅನೇಕ ರಾಜ ಮಹಾರಾಜರು, ಮಾಂಡಳಿಕರು ಇನ್ನೂ ಮುಂತಾದವರು ಅನೇಕ ದಾನದತ್ತಿಗಳನ್ನು ನೀಡಿದ್ದಾರೆ. ಈ ಅಧ್ಯಯನಕ್ಕೆ ಸಂಬಂಧಿಸಿದಂತೆ ಅಧ್ಯಾಯ ಮೂರರಲ್ಲಿ ವೈಷ್ಣವ ಧರ್ಮದ ಶಾಸನಗಳ ಕುರಿತು ಚರ್ಚಿಸಲಾಗಿದೆ.

ಜೈನ ಧರ್ಮ

ಪ್ರಾಚೀನ ಕರ್ನಾಟಕದಲ್ಲಿ ಜೈನಧರ್ಮ ಒಂದು ಪ್ರಬಲವಾದ ಧರ್ಮವಾಗಿತ್ತು. ಈ ಧರ್ಮವು ಭೂತ–ವರ್ತಮಾನ ಮತ್ತು ಭವಿಷ್ಯಗಳೆಂಬ ಮೂರು ನಿರಂತರ ಘಟ್ಟಗಳನ್ನೊಳಗೊಂಡಿದೆ. ಅಂದರೆ ಸುಖ–ದುಖ ಮತ್ತು ದುಖಃ–ಸುಖ ಅವಧಿಗಳಲ್ಲಿ ಕಾಲಾಂತರದಲ್ಲಿ ೨೪ ಜನ ತೀರ್ಥಂಕರು ಜನ್ಮವೆತ್ತಿ ಅವರು ತಮ್ಮ ದಿವ್ಯತ್ವದ ಮೂಲಕ ಕೇವಲಜ್ಞಾನವನ್ನು ಪಡೆದು, ಭವಸಾಗರದಲ್ಲಿ ಮುಳುಗಿ ಧರ್ಮವನ್ನು ಮರೆತು, ಜೀವಾತ್ಮರಿಗೆ ಆತ್ಮ ಕಲ್ಯಾಣದ ಮಾರ್ಗವನ್ನು ಉಪದೇಶಿಸಿ ಸನ್ಮಾರ್ಗದ ದಾರಿ ತೋರಿಸುತ್ತ ಧರ್ಮವನ್ನು ಪುನರುಜ್ಜೀವನವನ್ನು ಕೈಗೊಳ್ಳುತ್ತಿರುತ್ತಾರೆ. ಇಲ್ಲಿಯೂ ಮೋಕ್ಷವನ್ನು ಪಡೆಯಲು ನಂಬಿಕೆ, ಜ್ಞಾನ ಹಾಗೂ ಚಾರಿತ್ರೆ ಈ ತ್ರಿರತ್ನಗಳು ಅವಶ್ಯವಾಗಿದೆ.[೨೫೮]

ಜೈನಧರ್ಮಿಯರು, ಮಹಾವೀರನು ಉಪದೇಶಿಸಿದ ತತ್ವಗಳನ್ನು ದ್ವಾದಶಾಂಗ ಮತ್ತು ಅಂಗಬಾಹ್ಯಶೃತಗಳಲ್ಲಿ ಸಂಗ್ರಹಿಸಿ ಅವು ತಮ್ಮ ಸಿದ್ಧಾಂತಗಳೆಂದು ಪಾಲಿಸಿಕೊಂಡು ಬಂದಿದ್ದಾರೆ.[೨೫೯] ಕ್ರಿ.ಪೂ.೩ನೇ ಶತಮಾನದ ಹೊತ್ತಿಗೆ ಮೌರ್ಯವಂಶದ ಚಕ್ರವರ್ತಿಯಾದ ಚಂದ್ರಗುಪ್ತ ಮತ್ತು ಆತನ ಗುರು ಭದ್ರಬಾಹು ಹನ್ನೆರಡು ಸಾವಿರ ಮುನಿಗಳೊಂದಿಗೆ ಶ್ರವಣಬೆಳಗೋಳದಲ್ಲಿ ಬಂದು ನೆಲೆಸಲು ಅಂದಿನಿಂದ ಕರ್ನಾಟಕದಲ್ಲಿ ಜೈನಧರ್ಮವು ಅನೇಕ ರಾಜಾಶ್ರಯ ಮತ್ತು ಪ್ರೋತ್ಸಾಹದಲ್ಲಿ ಬೆಳೆದುದಲ್ಲದೇ ಇವರುಗಳು ಅನೇಕ ದಾನ–ದತ್ತಿಗಳನ್ನು ಕೊಟ್ಟಿರುವುದು ನಮಗೆ ಶಾಸನಗಳ ಆಧಾರಗಳಿಂದ ತಿಳಿದುಬರುತ್ತದೆ.

ಪ್ರಸ್ತುತ ಅಧ್ಯಯನದ ಪ್ರದೇಶದಲ್ಲಿ ಶಾಸನೋಕ್ತ ಇಪತ್ತೆರಡು ಬಸದಿಗಳ ಬಗ್ಗೆ ಉಲ್ಲೇಖಗಳಿದ್ದು, ಈ ಬಸದಿಗಳಿಗೆ ನೀಡಿದ ಹಲವು ದಾನದತ್ತಿಗಳ ಬಗ್ಗೆ ಅಧ್ಯಾಯ ಮೂರರಲ್ಲಿ ಇವುಗಳ ಬಗ್ಗೆ ಚರ್ಚಿಸಲಾಗಿದೆ. ಜೊತೆಗೆ ಶಾಸನಉಲ್ಲೇಖಿತ ಪಂಡಿತ, ಜೀಯ, ಆಚಾರ್ಯ ಮತ್ತು ದೇವ ಇವರುಗಳ ಬಗ್ಗೆ ಅನುಬಂಧದಲ್ಲಿ ಪಟ್ಟಿಯನ್ನು ಕೊಡಲಾಗಿದೆ.

ಬೌದ್ಧ ಧರ್ಮ

ಕರ್ನಾಟಕದ ಪ್ರಾಚೀನ ಧರ್ಮಗಳಲ್ಲಿ ಬೌದ್ಧಧರ್ಮವು ಒಂದು. ಕರ್ನಾಟಕದಲ್ಲಿ ಈ ಧರ್ಮವು ಅಶೋಕನ ಕಾಲಘಟ್ಟದಲ್ಲಿ ಅಂದರೆ ಅವನು ಬೌದ್ಧಧರ್ಮದ ಪ್ರಸಾರಕ್ಕಾಗಿ ಹಲವಾರು ಶಾಸನಗಳನ್ನು ಹಾಕಿಸುವ ಮತ್ತು ಧರ್ಮಮಹಾಮಾತ್ರರರನ್ನು ನೇಮಿಸಿದ್ದನ್ನು ಈ ಶಾಸನಗಳು ದಾಖಲಿಸುತ್ತವೆ.

ಕರ್ನಾಟಕದಲ್ಲಿ ಬೌದ್ಧಧರ್ಮದ ಕುರುಹುಗಳು ಕ್ರಿ.ಶ. ೧೨ನೇ ಶತಮಾನದಲ್ಲಿ ಕಾಣಸಿಗುತ್ತವೆ. ಚಿತ್ರದುರ್ಗ ಜಿಲ್ಲೆಯ ಸಿದ್ದಾಪುರ, ಜಟಿಂಗರಾಮೇಶ್ವರ, ಬ್ರಹ್ಮಗಿರಿ, ಐಹೊಳೆ, ಬನವಾಸಿ, ಬೆಳ್ಳಿಗಾವೆ, ಸನ್ನತಿ, ರಾಜಘಟ್ಟ, ಕತ್ರಿ ಮತ್ತು ಡಂಬಳಗಳಲ್ಲಿ ಈ ಬೌದ್ಧ ನೆಲೆಗಳು ಕಂಡು ಬರುತ್ತವೆ.[೨೦] ಪ್ರಸ್ತುತ ಈ ಅಧ್ಯಯನ ಪ್ರದೇಶದಲ್ಲಿ ಹುಬ್ಬಳ್ಳಿ ತಾಲೂಕಿನ ಕೋಳಿವಾಡ ಗ್ರಾಮದಲ್ಲಿ ಮಾತ್ರ ಬೌದ್ಧಧರ್ಮದ ಶಾಸನೋಕ್ತ ಮೂರ್ತಿಶಿಲ್ಪ ದೊರೆತಿರುವುದು ಬಹಳ ವಿಶೇಷವಾಗಿದೆ. ಸದ್ಯ ಈ ಮೂರ್ತಿಶಿಲ್ಪವು ಕರ್ನಾಟಕ ವಿಶ್ವವಿದ್ಯಾಲಯದ ಆರ್.ಸಿ. ಹಿರೇಮಠ ಕನ್ನಡ ಅಧ್ಯಯನ ಪೀಠದಲ್ಲಿದೆ. ಈ ಮೂರ್ತಿಶಿಲ್ಪದ ಪ್ರತಿಮಾ ಲಕ್ಷಣಗಳ ಕುರಿತು, ಅಧ್ಯಾಯ ಆರರಲ್ಲಿ ಚರ್ಚಿಸಲಾಗಿದೆ.

ಒಟ್ಟಾರೆ ಈ ಅಧ್ಯಾಯದಲ್ಲಿ ಭೂ ಭೌಗೋಳಿಕ ಪ್ರಭಾವ ಪ್ರಾಕೃತಿಕ ಹಿನ್ನಲೆಯ ದೃಷ್ಟಿಯಿಂದ ಯಾವರೀತಿಯಲ್ಲಿ ಪ್ರಭಾವ ಬೀರಿವೆ ಎಂಬುದನ್ನು ವಿವರಿಸಲಾಗಿದೆ. ಐತಿಹಾಸಿಕ ಹಿನ್ನಲೆಯ ದೃಷ್ಟಿಯಿಂದ ಶಾತವಾಹನರು, ಬನವಾಸಿ ಕದಂಬರು, ಬಾದಾಮಿ ಚಲುಕ್ಯರು, ರಾಷ್ಟ್ರಕೂಟರು, ಕಲ್ಯಾಣ ಚಾಲುಕ್ಯರು, ಕಲಚೂರರು, ದೇವಗಿರಿ ಯಾದವರು ಮತ್ತು ಹೊಯ್ಸಳರು ವಿಜಯನಗರದ ಅರಸರು, ಗೋವಾ ಕದಂಬರು ಹಾಗೂ ಹಾನಗಲ್ಲ ಕದಂಬರು ಮಹಾಮಂಡಳೇಶ್ವರರಾಗಿ ಆಳಿದರು. ಸಾಮಾಜಿಕ ಸ್ಥಿತಿಗತಿಗಳಲ್ಲಿ ಮಹಿಳೆಯರ ಪಾತ್ರ ಮಹತ್ವದ್ದಾಗಿತ್ತು. ಅಗ್ರಹಾರ, ಬ್ರಹ್ಮಪುರಿಗಳಿದ್ದ ಬಗ್ಗೆ ಶಾಸನಗಳು ಸಾಕ್ಷಿಗಳಾಗಿವೆ. ಗದ್ಯಾಣ, ಪಣ, ಹಾರ, ಬೇಳೆ, ನಾಣ್ಯಗಳು ಚಲಾವಣೆಯಲ್ಲಿದ್ದವು. ಶಾಸನಗಳು ಮತ್ತು ಸ್ಮಾರಕಗಳು ಮೂರ್ತಿಶಿಲ್ಪಗಳ ಹಿನ್ನಲೆಯಲ್ಲಿ ಇಲ್ಲಿ ಶೈವಧರ್ಮ, ವೈಷ್ಣವಧರ್ಮ, ಜೈನಧರ್ಮ, ಬೌದ್ಧಧರ್ಮ ಅಸ್ತಿತ್ವದಲ್ಲಿತ್ತೆಂಬುದು ಸ್ಪಷ್ಟಪಡಿಸುತ್ತವೆ. ಐತಿಹಾಸಿಕ ಹಿನ್ನೆಲೆಯನ್ನು ಶಾಸನಗಳ ಆಧಾರದೊಂದಿಗೆ ರಚಿಸಲಾಗಿದೆ.

ಅಡಿಟಿಪ್ಪಣಿಗಳು

೧. ಷೇಕ್ ಅಲಿ.,(ಸಂ), ಕರ್ನಾಟಕ ಚರಿತ್ರೆ, ಸಂ. ೧. ೧೯೯೭, ಪು. ೩೧೪

೨. ಕಲಬುರ್ಗಿ ಎಂ.ಎಂ.(ಸಂ), ಪೂರ್ವೋಕ್ತ, ಪು. ೬. ಶಾ.ಸಂ. ೬೨

೩. ಎಸ್.ಐ.ಐ., ೧೧-i, ಶಾ.ಸಂ. ೫

೪. ಕಲಬುರ್ಗಿ ಎಂ.ಎಂ.(ಸಂ), ಪೂರ್ವೋಕ್ತ, ಪು. ೨೪. ಶಾ.ಸಂ. ೪೦೧

೫. ಎಸ್.ಐ.ಐ., ೨೦, ಶಾ.ಸಂ. ೧೨

೬. ಎಸ್.ಐ.ಐ., ೧೧-i, ಶಾ.ಸಂ. ೧೪

೭. ಕಲಬುರ್ಗಿ ಎಂ.ಎಂ.(ಸಂ), ಪೂರ್ವೋಕ್ತ, ಪು. ೭. ಶಾ.ಸಂ. ೬೨

೮. ಅದೇ., ಪು. ೭. ಶಾ.ಸಂ. ೯೭

೯. ಇ.ಐ. ೧೩, ಶಾ.ಸಂ. ೨೯

೧೦. ಕ.ಐ. ೬, ಶಾ.ಸಂ. ೫

೧೧. ಕಲಬುರ್ಗಿ ಎಂ.ಎಂ.(ಸಂ), ಪೂರ್ವೋಕ್ತ, ಪು. ೧. ಶಾ.ಸಂ. ೮೮

೧೨. ಅದೇ., ಪು. ೪. ಶಾ.ಸಂ. ೪೩

೧೩. ಅದೇ., ಪು. ೫. ಶಾ.ಸಂ. ೨೮

೧೪. ಅದೇ., ಪು. ೨. ಶಾ.ಸಂ. ೩೦

೧೫. ಗುರುವ ಆರ್.ಎನ್., ದಿ ಕದಂಬಾಸ್ ಆಫ್ ಗೋವಾ ಇನ್‌ಸ್ಕ್ರಿಪ್‌ಷನ್ಸ್, (ಅಪ್ರಕಟಿತ ಪಿಎಚ್.ಡಿ ಪ್ರಬಂಧ) ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ೧೯೬೭, ಪು. ೫೧೮

೧೬. ಎಸ್.ಐ.ಐ., ೧೧-i, ಶಾ.ಸಂ. ೪೫

೧೭. ಕಲಬುರ್ಗಿ ಎಂ.ಎಂ.(ಸಂ), ಪೂರ್ವೋಕ್ತ, ಪು. ೫-೬

೧೮. ಅದೇ., ಪು. ೫. ಶಾ.ಸಂ. ೯

೧೯. ಎಸ್.ಐ.ಐ., ೨೦, ಶಾ.ಸಂ. ೨೯

೨೦. ಎಸ್.ಐ.ಐ., ೨೦, ಶಾ.ಸಂ. ೩೨

೨೧. ಎಸ್.ಐ.ಐ., ೨೦, ಶಾ.ಸಂ. ೪೬

೨೨. ಕಲಬುರ್ಗಿ ಎಂ.ಎಂ.(ಸಂ), ಪೂರ್ವೋಕ್ತ, ಪು. ೨೫ ಶಾ.ಸಂ. ೨೪೫

೨೩. ಅದೇ., ಪು. ೬. ಶಾ.ಸಂ. ೨೪೬

೨೪. ಗುರುವ ಆರ್.ಎನ್., ಪೂರ್ವೋಕ್ತ, ಪು. ೫೨೯-೫೩೩

೨೫. ಎಸ್.ಐ.ಐ., ೧೧-i, ಶಾ.ಸಂ. ೧೧೫

೨೬. ಎಸ್.ಐ.ಐ., ೧೧-ii, ಶಾ.ಸಂ. ೧೨೧

೨೭. ಎಸ್.ಐ.ಐ., ೧೧-ii, ಶಾ.ಸಂ. ೧೨೪

೨೮. ಕ.ಐ., ೬, ಶಾ.ಸಂ. ೧೨೧

೨೯. ಎಸ್.ಐ.ಐ., ೧೧-ii, ಶಾ.ಸಂ. ೧೭೧

೩೦. ಎಸ್.ಐ.ಐ., ೧೧-i, ಶಾ.ಸಂ. ೯೪

೩೧. ಇ.ಐ.ಐ., ೧೨, ಶಾ.ಸಂ. ೨೮

೩೨. ಇ.ಐ.ಐ., ೧೭, ಶಾ.ಸಂ. ೧೧೭

೩೩. ಇ.ಐ.., ೨೩, ಶಾ.ಸಂ. ೨೮

೩೪. ಎಸ್.ಐ.ಐ., ೧೧-ii, ಶಾ.ಸಂ. ೧೭೭

೩೫. ಕಲಬುರ್ಗಿ ಎಂ.ಎಂ.(ಸಂ), ಪೂರ್ವೋಕ್ತ, ಪು. ೨೫. ಶಾ.ಸಂ. ೩೮

೩೬. ಎಸ್.ಐ.ಐ., ೨೦, ಶಾ.ಸಂ. ೧೨೪

೩೭. ಗುರುವ ಆರ್.ಎನ್., ಪೂರ್ವೋಕ್ತ, ಪು. ೬೬೮-೬೭೩

೩೮. ಎಸ್.ಐ.ಐ., ೨೦, ಶಾ.ಸಂ. ೧೧೦

೩೯. ಗುರುವ ಆರ್.ಎನ್., ಪೂರ್ವೋಕ್ತ, ಪು. ೬೨೬-೬೩೧

೪೦. ಎಸ್.ಐ.ಐ., ೧೫, ಶಾ.ಸಂ. ೩೧

೪೧. ಎಸ್.ಐ.ಐ., ೨೦, ಶಾ.ಸಂ. ೧೧೮

೪೨. ಗುರುವ ಆರ್.ಎನ್., ಪೂರ್ವೋಕ್ತ, ಪು. ೬೨೧-೬೨೬

೪೩. ಎಸ್.ಐ.ಐ., ೧೫, ಶಾ.ಸಂ. ೪೯

೪೪. ಗುರುವ ಆರ್.ಎನ್., ಪೂರ್ವೋಕ್ತ, ಪು. ೬೩೧-೬೩೪

೪೫. ಅದೇ., ಪು. ೬೮೩-೬೮೫

೪೬. ಎಸ್.ಐ.ಐ., ೧೫, ಶಾ.ಸಂ. ೫೯

೪೭. ಎಸ್.ಐ.ಐ., ೧೫, ಶಾ.ಸಂ. ೭೨

೪೮. ಎಸ್.ಐ.ಐ., ೧೫, ಶಾ.ಸಂ. ೭೨

೪೯. ಎಸ್.ಐ.ಐ., ೧೫, ಶಾ.ಸಂ. ೨೨೩

೫೦. ಗುರುವ ಆರ್.ಎನ್., ಪೂರ್ವೋಕ್ತ, ಪು. ೫೯೨-೫೯೩

೫೧. ಎಸ್.ಐ.ಐ., ೧೫, ಶಾ.ಸಂ. ೯೬

೫೨. ಎಸ್.ಐ.ಐ., ೧೫, ಶಾ.ಸಂ. ೧೦೦

೫೩. ಎಸ್.ಐ.ಐ., ೧೫, ಶಾ.ಸಂ. ೧೦೨

೫೪. ಎಸ್.ಐ.ಐ., ೧೫, ಶಾ.ಸಂ. ೭೨

೫೫. ಗುರುವ ಆರ್.ಎನ್., ಪೂರ್ವೋಕ್ತ, ಪು. ೬೯೨-೬೯೯

೫೬. ಎಸ್.ಐ.ಐ., ೧೫, ಶಾ.ಸಂ. ೧೪೯

೫೭. ಎಸ್.ಐ.ಐ., ೨೦, ಶಾ.ಸಂ. ೧೯೩

೫೮. ಕಲಬುರ್ಗಿ ಎಂ.ಎಂ.(ಸಂ), ಪೂರ್ವೋಕ್ತ, ಪು. ೩೮ ಶಾ.ಸಂ. ೩

೫೯. ಎಸ್.ಐ.ಐ., ೨೦, ಶಾ.ಸಂ. ೧೯೯

೬೦. ಕಲಬುರ್ಗಿ ಎಂ.ಎಂ.(ಸಂ), ಧಾರವಾಡ ತಾಲೂಕಿನ ಶಾಸನಸೂಚಿ, ೧೯೭೬, ಪು. ೧೫೭-೧೫೮. ಶಾ.ಸಂ. ೭೧

೬೧. ಅದೇ., ಪು. ೭. ಶಾ.ಸಂ. ೪೨೭

೬೨. ಎಸ್.ಐ.ಐ., ೨೦, ಶಾ.ಸಂ. ೨೧೩

೬೩. ಎಸ್.ಐ.ಐ., ೨೦, ಶಾ.ಸಂ. ೨೧೪

೬೪. ಎಸ್.ಐ.ಐ., ೧೫, ಶಾ.ಸಂ. ೧೮೭

೬೫. ಕಲಬುರ್ಗಿ ಎಂ.ಎಂ.(ಸಂ), ಪೂರ್ವೋಕ್ತ, ಪು. ೧೫೮-೧೫೯. ಶಾ.ಸಂ. ೭೧

೬೬. ಅದೇ., ಪು. ೫. ಶಾ.ಸಂ. ೨೪

೬೭. ಎಸ್.ಐ.ಐ., ೧೫, ಶಾ.ಸಂ. ೧೯೫

೬೮. ಕಲಬುರ್ಗಿ ಎಂ.ಎಂ.(ಸಂ), ಪೂರ್ವೋಕ್ತ, ಪು. ೫ ಶಾ.ಸಂ. ೪೯

೬೯. ಎಸ್.ಐ.ಐ., ೧೫, ಶಾ.ಸಂ. ೧೯೯

೭೦. ಕಲಬುರ್ಗಿ ಎಂ.ಎಂ.(ಸಂ), ಪೂರ್ವೋಕ್ತ, ಪು. ೩೫ ಶಾ.ಸಂ. ೩

೭೧. ಎಸ್.ಐ.ಐ., ೧೫, ಶಾ.ಸಂ. ೨೧೩

೭೨. ಎಸ್.ಐ.ಐ., ೧೫, ಶಾ.ಸಂ. ೨೧೬

೭೩. ಕಲಬುರ್ಗಿ ಎಂ.ಎಂ.(ಸಂ), ಪೂರ್ವೋಕ್ತ, ಪು. ೩೫ ಶಾ.ಸಂ. ೩

೭೪. ಅದೇ., ಪು. ೬. ಶಾ.ಸಂ. ೭೬

೭೫. ಎಸ್.ಐ.ಐ., ೨೦, ಶಾ.ಸಂ. ೨೩೪

೭೬. ಕಲಬುರ್ಗಿ ಎಂ.ಎಂ.(ಸಂ), ಪೂರ್ವೋಕ್ತ, ಪು. ೪೮–೪೯ ಶಾ.ಸಂ. ೬೮

೭೭. ಎಸ್.ಐ.ಐ., ೧೫, ಶಾ.ಸಂ. ೬೯೭

೭೮. ಎಸ್.ಐ.ಐ., ೧೫, ಶಾ.ಸಂ. ೨೫೭

೭೯. ಎಸ್.ಐ.ಐ., ೧೫, ಶಾ.ಸಂ. ೨೫೭

೮೦. ಎಸ್.ಐ.ಐ., ೧೫, ಶಾ.ಸಂ. ೨೫೭

೮೧. ಎಸ್.ಐ.ಐ., ೧೫, ಶಾ.ಸಂ. ೨೬೦

೮೨. ಎಸ್.ಐ.ಐ., ೧೫, ಶಾ.ಸಂ. ೭೨

೮೩. ಗುರುವ ಆರ್.ಎನ್., ಪೂರ್ವೋಕ್ತ, ಪು. ೫೨೨

೮೪. ಎಸ್.ಐ.ಐ., ೧೧-ii, ಶಾ.ಸಂ. ೧೨೧

೮೫. ಗುರುವ ಆರ್.ಎನ್., ಪೂರ್ವೋಕ್ತ, ಪು. ೫೨೩–೫೨೫

೮೬. ಅದೇ., ಪು. ೫೨೬–೫೨೭

೮೭. ಕಲಬುರ್ಗಿ ಎಂ.ಎಂ.(ಸಂ), ಪೂರ್ವೋಕ್ತ, ಪು. ೫ ಶಾ.ಸಂ. ೫೨

೮೮. ಅದೇ., ಪು. ೨೪. ಶಾ.ಸಂ. ೫೧

೮೯. ಗುರುವ ಆರ್.ಎನ್., ಪೂರ್ವೋಕ್ತ, ಪು. ೫೬೧–೫೬೬

೯೦. ಎಸ್.ಐ.ಐ., ೧೧-ii, ಶಾ.ಸಂ. ೧೭೭

೯೧. ಗುರುವ ಆರ್.ಎನ್., ಪೂರ್ವೋಕ್ತ, ಪು. ೫೭೭–೫೭೮

೯೨. ಇ.ಐ., ೧೩, ಶಾ.ಸಂ. ೨೮

೯೩. ಎಸ್.ಐ.ಐ., ೧೫, ಶಾ.ಸಂ. ೧೬

೯೪. ಎಸ್.ಐ.ಐ., ೧೫, ಶಾ.ಸಂ. ೧೪

೯೫. ಗುರುವ ಆರ್.ಎನ್., ಪೂರ್ವೋಕ್ತ, ಪು. ೫೯೩–೫೯೭

೯೬. ಎಸ್.ಐ.ಐ., ೧೫, ಶಾ.ಸಂ. ೨೨೭

೯೭. ಎಸ್.ಐ.ಐ., ೧೫, ಶಾ.ಸಂ. ೭

೯೮. ಗುರುವ ಆರ್.ಎನ್., ಪೂರ್ವೋಕ್ತ, ಪು. ೫೯೮-೬೦೧

೯೯. ಅದೇ., ಪು. ೬೨೬-೬೩೧

೧೦೦. ಅದೇ., ಪು. ೬೨೧-೬೨೬

೧೦೧. ಎಸ್.ಐ.ಐ., ೧೫, ಶಾ.ಸಂ. ೨೨೯

೧೦೨. ಗುರುವ ಆರ್.ಎನ್., ಪೂರ್ವೋಕ್ತ, ಪು. ೬೩೪-೬೩೭

೧೦೩. ಹಿರೇಮಠ ಬಿ.ಆರ್., ಪಾಟೀಲ್ ಎಸ್.ಪಿ., ಸಾಧನೆ. ಸಂ. ೧೪. ಸಂ. ೧. ಪು.೧೮

೧೦೪. ಎಸ್.ಐ.ಐ., ೧೫, ಶಾ.ಸಂ. ೨೨೮

೧೦೫. ಎಸ್.ಐ.ಐ., ೧೫, ಶಾ.ಸಂ. ೨೩೦

೧೦೬. ಕಲಬುರ್ಗಿ ಎಂ.ಎಂ.(ಸಂ), ಪೂರ್ವೋಕ್ತ, ಪು. ೨೫ ಶಾ.ಸಂ. ೫೨

೧೦೭. ಗುರುವ ಆರ್.ಎನ್., ಪೂರ್ವೋಕ್ತ, ಪು. ೬೫೪-೬೫೭

೧೦೮. ಕಲಬುರ್ಗಿ ಎಂ.ಎಂ.(ಸಂ), ಪೂರ್ವೋಕ್ತ, ಪು. ೨೬ ಶಾ.ಸಂ. ೭೩

೧೦೯. ಗುರುವ ಆರ್.ಎನ್., ಪೂರ್ವೋಕ್ತ., ಪು. ೬೫೮-೬೬೧

೧೧೦. ಅದೇ., ಪು. ೬೬೨-೬೬೫

೧೧೧. ಅದೇ., ಪು. ೬೭೩-೬೭೬

೧೧೨. ಎಸ್.ಐ.ಐ., ೨೦, ಶಾ.ಸಂ. ೨೫೨

೧೧೩. ಗುರುವ ಆರ್.ಎನ್., ಪೂರ್ವೋಕ್ತ, ಪು. ೬೭೬-೬೮೨

೧೧೪. ಅದೇ., ಪು. ೬೮೩-೬೮೫

೧೧೫. ಕಲಬುರ್ಗಿ ಎಂ.ಎಂ.(ಸಂ), ಪೂರ್ವೋಕ್ತ, ಪು. ೨೪ ಶಾ.ಸಂ. ೫೨

೧೧೬. ಗುರುವ ಆರ್.ಎನ್., ಪೂರ್ವೋಕ್ತ, ಪು. ೬೭೩-೬೭೬

೧೧೭. ಅದೇ., ಪು. ೬೭೬-೬೮೨

೧೧೮. ಕೆ.ಐ., ೫, ಶಾ.ಸಂ. ೨೩

೧೧೯. ಕಲಬುರ್ಗಿ ಎಂ.ಎಂ.(ಸಂ), ಪೂರ್ವೋಕ್ತ, ಪು. ೪೪-೪೭ ಶಾ.ಸಂ. ೧೯

೧೨೦. ಎಸ್.ಐ.ಐ., ೧೫, ಶಾ.ಸಂ. ೨೩೨

೧೨೧. ಕೆ.ಐ., ೫, ಶಾ.ಸಂ. ೩೧

೧೨೨. ಗುರುವ ಆರ್.ಎನ್., ಪೂರ್ವೋಕ್ತ, ಪು. ೫೭೯

೧೨೩. ಕಲಬುರ್ಗಿ ಎಂ.ಎಂ.(ಸಂ), ಪೂರ್ವೋಕ್ತ, ಪು. ೪೬-೪೭ ಶಾ.ಸಂ. ೫೪

೧೨೪. ಅದೇ., ಪು. ೧-೫. ಶಾ.ಸಂ. ೪೧

೧೨೫. ಎಸ್.ಐ.ಐ., ೧೫, ಶಾ.ಸಂ. ೨೩೧

೧೨೬. ಕಲಬುರ್ಗಿ ಎಂ.ಎಂ.(ಸಂ), ಪೂರ್ವೋಕ್ತ, ಪು. ೫ ಶಾ.ಸಂ. ೫೨

೧೨೭. ಇ.ಐ., ೩೫, ಶಾ.ಸಂ. ೮

೧೨೮. ಗುರುವ ಆರ್.ಎನ್., ಪೂರ್ವೋಕ್ತ, ಪು. ೬೧೮–೬೨೦

೧೨೯. ಇ.ಐ., ೧೩, ಶಾ.ಸಂ. ೨೫

೧೩೦. ಕಲಬುರ್ಗಿ ಎಂ.ಎಂ.(ಸಂ), ಪೂರ್ವೋಕ್ತ, ಪು. ೩೫ ಶಾ.ಸಂ. ೨೫

೧೩೧. ಎಸ್.ಐ.ಐ., ೨೦, ಶಾ.ಸಂ. ೪೬

೧೩೨. ಎಸ್.ಐ.ಐ., ೧೧-ii, ಶಾ.ಸಂ. ೧೫೪

೧೩೩. ಕಲಬುರ್ಗಿ ಎಂ.ಎಂ.(ಸಂ), ಪೂರ್ವೋಕ್ತ, ಪು. ೨೪ ಶಾ.ಸಂ. ೪೦೨

೧೩೪. ಎಸ್.ಐ.ಐ., ೨೦, ಶಾ.ಸಂ. ೮೨

೧೩೫. ಎಸ್.ಐ.ಐ., ೨೦, ಶಾ.ಸಂ. ೧೦೧

೧೩೬. ಎಸ್.ಐ.ಐ., ೧೫, ಶಾ.ಸಂ. ೨೨೯

೧೩೭. ಎಸ್.ಐ.ಐ., ೨೦, ಶಾ.ಸಂ. ೧೯೯

೧೩೮. ಗುರುವ ಆರ್.ಎನ್., ಪೂರ್ವೋಕ್ತ, ಪು. ೬೯೨–೬೯೯

೧೩೯. ಕಲಬುರ್ಗಿ ಎಂ.ಎಂ.(ಸಂ), ಪೂರ್ವೋಕ್ತ, ಪು. ೧೫೭–೧೫೮ ಶಾ.ಸಂ. ೫೨

೧೪೦. ಅದೇ., ಪು. ೬. ಶಾ.ಸಂ. ೮೦

೧೪೧. ಎಸ್.ಐ.ಐ., ೧೫, ಶಾ.ಸಂ. ೭೨

೧೪೨. ಎಸ್.ಐ.ಐ., ೨೦, ಶಾ.ಸಂ. ೧೯೯

೧೪೩. ಎಸ್.ಐ.ಐ., ೧೫, ಶಾ.ಸಂ. ೧೮೭

೧೪೪. ಕೆ.ಐ., ೫, ಶಾ.ಸಂ. ೧೨೩

೧೪೫. ಎಸ್.ಐ.ಐ., ೨೦, ಶಾ.ಸಂ. ೪೦೪

೧೪೬. ಕಲಬುರ್ಗಿ ಎಂ.ಎಂ.(ಸಂ), ಪೂರ್ವೋಕ್ತ, ಪು. ೨೪ ಶಾ.ಸಂ. ೪೦೨

೧೪೭. ಗುರುವ ಆರ್.ಎನ್., ಪೂರ್ವೋಕ್ತ, ಪು. ೫೩೩–೫೩೯

೧೪೮. ಅದೇ., ಪು. ೫೫೦–೫೫೩

೧೪೯. ಎಸ್.ಐ.ಐ., ೧೧-ii, ಶಾ.ಸಂ. ೧೬೦

೧೫೦. ಎಸ್.ಐ.ಐ., ೨೦, ಶಾ.ಸಂ. ೮೨

೧೫೧. ಎಸ್.ಐ.ಐ., ೨೦, ಶಾ.ಸಂ. ೧೦೧

೧೫೨. ಕಲಬುರ್ಗಿ ಎಂ.ಎಂ.(ಸಂ), ಪೂರ್ವೋಕ್ತ, ಪು. ೩೫ ಶಾ.ಸಂ. ೧೦೧

೧೫೩. ಎಸ್.ಐ.ಐ., ೧೫, ಶಾ.ಸಂ. ೨೧೭

೧೫೪. ಎಸ್.ಐ.ಐ., ೧೫, ಶಾ.ಸಂ. ೨೩೨

೧೫೫. ಕಲಬುರ್ಗಿ ಎಂ.ಎಂ.(ಸಂ), ಪೂರ್ವೋಕ್ತ, ಪು. ೬ ಶಾ.ಸಂ. ೮೧

೧೫೬. ಎಸ್.ಐ.ಐ., ೧೫, ಶಾ.ಸಂ. ೧೬

೧೫೭. ಕೆ.ಐ, ೫, ಶಾ.ಸಂ. ೧೬

೧೫೮. ಗುರುವ ಆರ್.ಎನ್., ಪೂರ್ವೋಕ್ತ, ಪು. ೫೨೯-೫೩೩

೧೫೯. ಎಸ್.ಐ.ಐ., ೧೧-ii, ಶಾ.ಸಂ. ೧೯೧

೧೬೦. ಕಲಬುರ್ಗಿ ಎಂ.ಎಂ.(ಸಂ), ಪೂರ್ವೋಕ್ತ, ಪು. ೨೪ ಶಾ.ಸಂ. ೪೦೨

೧೬೧. ಎಸ್.ಐ.ಐ., ೨೦, ಶಾ.ಸಂ. ೪೬

೧೬೨. ಕಲಬುರ್ಗಿ ಎಂ.ಎಂ.(ಸಂ), ಪೂರ್ವೋಕ್ತ, ಪು. ೩೫ ಶಾ.ಸಂ. ೪೦೫

೧೬೩. ಅದೇ., ಪು. ೨೪. ಶಾ.ಸಂ. ೪೦೨

೧೬೪. ಗುರುವ ಆರ್.ಎನ್., ಪೂರ್ವೋಕ್ತ, ಪು. ೫೭೭-೫೮೦

೧೬೫. ಕೆ.ಐ., ೫, ಶಾ.ಸಂ. ೧೨೩

೧೬೬. ಕಲಬುರ್ಗಿ ಎಂ.ಎಂ.(ಸಂ), ಪೂರ್ವೋಕ್ತ, ಪು. ೨೪ ಶಾ.ಸಂ. ೪೦೨

೧೬೭. ಇ.ಐ., ೧೩, ಶಾ.ಸಂ. ೨೮ಬಿ

೧೬೮. ಗುರುವ ಆರ್.ಎನ್., ಪೂರ್ವೋಕ್ತ, ಪು. ೬೮೩-೬೮೫

೧೬೯. ಎಸ್.ಐ.ಐ., ೧೫, ಶಾ.ಸಂ. ೧೦೨

೧೭೦. ಎಸ್.ಐ.ಐ., ೧೫, ಶಾ.ಸಂ. ೬೩೧

೧೭೧. ಎಸ್.ಐ.ಐ., ೨೦, ಶಾ.ಸಂ. ೧೯೯

೧೭೨. ಕಲಬುರ್ಗಿ ಎಂ.ಎಂ.(ಸಂ), ಪೂರ್ವೋಕ್ತ, ಪು. ೨೪ ಶಾ.ಸಂ. ೪

೧೭೩. ಎಸ್.ಐ.ಐ., ೧೧-ii, ಶಾ.ಸಂ. ೧೭೭

೧೭೪. ಎಸ್.ಐ.ಐ., ೨೦, ಶಾ.ಸಂ. ೧೦೧

೧೭೫. ಹಿರೇಮಠ ಬಿ.ಆರ್ ಮತ್ತು ಪಾಟೀಲ್ ಎಸ್.ಪಿ., ಸಾಧನೆ, ಸಂ. ೧೮. ಸಂ. ೧. ಪು. ೧೬

೧೭೬. ಗುರುವ ಆರ್.ಎನ್., ಪೂರ್ವೋಕ್ತ, ಪು. ೫೬೭-೫೭೬

೧೭೭. ಅದೇ., ಪು. ೬೫೪-೬೫೭

೧೭೮. ಚಿದಾನಂದಮೂರ್ತಿ ಎಂ., ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ, ಸಂ.೧, ೨೦೦೮ ಪು. ೨೦೫-೨೦೯

೧೭೯. ಎಸ್.ಐ.ಐ., ೨೦, ಶಾ.ಸಂ. ೪೦೪

೧೮೦. ಎಸ್.ಐ.ಐ., ೨೦, ಶಾ.ಸಂ. ೪೯

೧೮೧. ಕಲಬುರ್ಗಿ ಎಂ.ಎಂ.(ಸಂ), ಪೂರ್ವೋಕ್ತ, ಪು. ೧೫೭-೧೫೮ ಶಾ.ಸಂ. ೭೨

೧೮೨. ಎಸ್.ಐ.ಐ., ೧೭, ಶಾ.ಸಂ. ೩೯೪

೧೮೩. ಚಿದಾನಂದಮೂರ್ತಿ ಎಂ., ಪೂರ್ವೋಕ್ತ, ಪು. ೪೦೪

೧೮೪. ಇ.ಐ., ೧೩, ಶಾ.ಸಂ. ೧೧೭

೧೮೫. ಗುರುವ ಆರ್.ಎನ್., ಪೂರ್ವೋಕ್ತ, ಪು. ೬೨೪-೬೨೬

೧೮೬. ಅದೇ., ಪು. ೫೫೦-೫೫೩

೧೮೭. ಅದೇ., ಪು. ೬೦೫

೧೮೮. ಎಸ್.ಐ.ಐ., ೨೦, ಶಾ.ಸಂ. ೧೧೨

೧೮೯. ಗುರುವ ಆರ್.ಎನ್., ಪೂರ್ವೋಕ್ತ, ಪು. ೫೫೦-೫೫೩

೧೯೦. ಎಸ್.ಐ.ಐ., ೨೦, ಶಾ.ಸಂ. ೧೧೨

೧೯೧. ಎಸ್.ಐ.ಐ., ೧೫, ಶಾ.ಸಂ. ೯

೧೯೨. ಗುರುವ ಆರ್.ಎನ್., ಪೂರ್ವೋಕ್ತ, ಪು. ೭೨೬

೧೯೩. ಇ.ಐ., ೧೩, ಶಾ.ಸಂ. ೨೮

೧೯೪. ಎಸ್.ಐ.ಐ., ೧೫, ಶಾ.ಸಂ. ೯೬

೧೯೫. ಎಸ್.ಐ.ಐ., ೧೧-ii, ಶಾ.ಸಂ. ೧೨೪

೧೯೬. ಎಸ್.ಐ.ಐ., ೨೦, ಶಾ.ಸಂ. ೧೨೨

೧೯೭. ಎಸ್.ಐ.ಐ., ೧೫, ಶಾ.ಸಂ. ೧೨೨

೧೯೮. ಎಸ್.ಐ.ಐ., ೧೫, ಶಾ.ಸಂ. ೧೯೯

೧೯೯. ಗುರುವ ಆರ್.ಎನ್., ಪೂರ್ವೋಕ್ತ, ಪು. ೫೫೦-೫೫೩

೨೦೦. ಇ.ಐ., ೧೩, ಶಾ.ಸಂ. ೨೮

೨೦೧. ಎಸ್.ಐ.ಐ., ೧೫, ಶಾ.ಸಂ. ೧೨೨

೨೦೨. ಎಸ್.ಐ.ಐ., ೧೫, ಶಾ.ಸಂ. ೨೩೩

೨೦೩. ಎಸ್.ಐ.ಐ., ೧೫, ಶಾ.ಸಂ. ೧೬

೨೦೪. ಗುರುವ ಆರ್.ಎನ್., ಪೂರ್ವೋಕ್ತ, ಪು. ೫೯೩-೫೯೭

೨೦೫. ಎಸ್.ಐ.ಐ., ೧೫, ಶಾ.ಸಂ. ೨೩೨

೨೦೬. ಎಸ್.ಐ.ಐ., ೧೫, ಶಾ.ಸಂ. ೯೬

೨೦೭. ಎಸ್.ಐ.ಐ., ೧೫, ಶಾ.ಸಂ. ೨೩೦

೨೦೮. ಎಸ್.ಐ.ಐ., ೨೦, ಶಾ.ಸಂ. ೨೪೮

೨೦೯. ಎಸ್.ಐ.ಐ., ೧೫, ಶಾ.ಸಂ. ೫೯

೨೧೦. ಇ.ಐ., ೧೩, ಶಾ.ಸಂ.

೨೧೧. ಅದೇ., ಪು. ೩೧೬-೩೨೫

೨೧೨. ಎಸ್.ಐ.ಐ., ೧೫, ಶಾ.ಸಂ. ೭

೨೧೩. ಇ.ಐ., ೧೩, ಶಾ.ಸಂ. ೨೮ಬಿ

೨೧೪. ಎಸ್.ಐ.ಐ., ೧೫, ಶಾ.ಸಂ. ೨೩೦

೨೧೫. ಎಸ್.ಐ.ಐ., ೧೫, ಶಾ.ಸಂ. ೫೫೧

೨೧೬. ಎಸ್.ಐ.ಐ., ೧೫, ಶಾ.ಸಂ. ೨೩೨

೨೧೭. ಗುರುವ ಆರ್.ಎನ್., ಪೂರ್ವೋಕ್ತ, ಪು. ೬೫೪–೬೫೭

೨೧೮. ಎಸ್.ಐ.ಐ., ೨೦, ಶಾ.ಸಂ. ೧೧೮

೨೧೯. ಇ.ಐ., ೧೩, ಶಾ.ಸಂ. ೨೮ಬಿ

೨೨೦. ಗುರುವ ಆರ್.ಎನ್., ಪೂರ್ವೋಕ್ತ, ಪು. ೬೫೮–೬೬೧

೨೨೧. ಎಸ್.ಐ.ಐ., ೧೫, ಶಾ.ಸಂ. ೨೩೩

೨೨೨. ಎಸ್.ಐ.ಐ., ೨೦, ಶಾ.ಸಂ. ೧೧೮

೨೨೩. ಇ.ಐ., ೧೩, ಶಾ.ಸಂ. ೨೮ಬಿ

೨೨೪. ಗುರುವ ಆರ್.ಎನ್., ಪೂರ್ವೋಕ್ತ, ಪು. ೬೭೬–೬೮೨

೨೨೫. ಎಸ್.ಐ.ಐ., ೧೫, ಶಾ.ಸಂ. ೨೩

೨೨೬. ಗುರುವ ಆರ್.ಎನ್., ಪೂರ್ವೋಕ್ತ, ಪು. ೬೩೧–೬೩೪

೨೨೭. ಅದೇ., ಪು. ೬೬೧–೬೬೫

೨೨೮. ಅದೇ., ಪು. ೬೭೩–೬೭೬

೨೨೯. ಕೆ.ಐ., ೬, ಶಾ.ಸಂ. ೩೪

೨೩೦. ಎಸ್.ಐ.ಐ., ೨೦, ಶಾ.ಸಂ. ೮೨

೨೩೧. ಗುರುವ ಆರ್.ಎನ್., ಪೂರ್ವೋಕ್ತ, ಪು. ೬೫೪–೬೫೭

೨೩೨. ಇ.ಐ., ೧೩, ಶಾ.ಸಂ. ೨೮

೨೩೩. ಹಿರೇಮಠ ಬಿ.ಆರ್., ಶಾಸನಗಳಲ್ಲಿ ವರ್ತಕರು, ೧೯೮೬, ಪು. ೧೧–೭೧

೨೩೪. ಚಿದಾನಂದಮೂರ್ತಿ ಎಂ., ಪೂರ್ವೋಕ್ತ, ಪು. ೪೩೨

೨೩೫. ಗುರುವ ಆರ್.ಎನ್., ಪೂರ್ವೋಕ್ತ, ಪು. ೫೩೩–೫೩೯

೨೩೬. ಎಸ್.ಐ.ಐ., ೧೧-ii, ಶಾ.ಸಂ. ೧೪೩

೨೩೭. ಎಸ್.ಐ.ಐ., ೨೦, ಶಾ.ಸಂ. ೮೨

೨೩೮. ಇ.ಐ., ೧೩, ಶಾ.ಸಂ. ೨೮ಬಿ

೨೩೯. ಎಸ್.ಐ.ಐ., ೧೫, ಶಾ.ಸಂ. ೧೬

೨೪೦. ಎಸ್.ಐ.ಐ., ೨೦, ಶಾ.ಸಂ. ೧೦೧

೨೪೧. ಎಸ್.ಐ.ಐ., ೧೫, ಶಾ.ಸಂ. ೯೫

೨೪೨. ಕೆ.ಐ., ೫, ಶಾ.ಸಂ. ೬೮

೨೪೩. ಎಸ್.ಐ.ಐ., ೧೧-ii, ಶಾ.ಸಂ. ೧೪೩

೨೪೪. ಎಸ್.ಐ.ಐ., ೧೧-ii, ಶಾ.ಸಂ. ೧೯೪

೨೪೫. ಎಸ್.ಐ.ಐ., ೨೦, ಶಾ.ಸಂ. ೮೨

೨೪೬. ಎಸ್.ಐ.ಐ., ೨೦, ಶಾ.ಸಂ. ೧೧೨

೨೪೭. ಎಸ್.ಐ.ಐ., ೧೫, ಶಾ.ಸಂ. ೧೩೩

೨೪೮. ಎಸ್.ಐ.ಐ., ೧೫, ಶಾ.ಸಂ. ೪೯

೨೪೯. ಎಸ್.ಐ.ಐ., ೧೫, ಶಾ.ಸಂ. ೯

೨೫೦. ಎಸ್.ಐ.ಐ., ೧೫, ಶಾ.ಸಂ. ೨೩೩

೨೫೧. ಎಸ್.ಐ.ಐ., ೧೫, ಶಾ.ಸಂ. ೩೧

೨೫೨. ಕನ್ನಡ–ಕನ್ನಡ ಕಸ್ತೂರಿ ಕೋಶ, ಪು. ೫೧೦

೨೫೩. ವೆಂಕಟೇಶ ಜೋಯಿಸ್ ಕೆ.ಜಿ., ವಿಜಯನಗರ ಚರಿತ್ರೆಯಲ್ಲಿ ಕೆಳದಿಯ ಅರಸರು, ೧೯೯೬, ಪು. ೬೬

೨೫೪. ಸತೀಶ ಕೆ., ವಿಜಯನಗರ ಕಾಲದ ಶೈವ ದೇವಾಲಯಗಳು, ೨೦೦೪, ಪು. ೫೧

೨೫೫. ಶ್ರೀ. ಜಾನ್ ಮಾರ್ಷಲ್., ಮಹೆಂಜೋದಾರೋ ಆಂಡ್ ಇಂಡಸ್ ಸಿವಿಲ್ಯಾಜೇಷನ್, ಪು. ೫೨–೫೪

೨೫೬. ಸುಂದರ ಅ., ಪೂರ್ವೋಕ್ತ, ಪು. ೩೧೪

೨೫೭. ರಘುನಾಥಭಟ್ ಎಚ್.ಆರ್., ಅರಿವು, ೧೯೯೬, ಪು. ೧೯

೨೫೮. ಎಸ್.ಐ.ಐ., ೨೦, ಶಾ.ಸಂ. ೩೮

೨೫೯. ಕಲಬುರ್ಗಿ ಎಂ.ಎಂ.(ಸಂ), ಪೂರ್ವೋಕ್ತ, ಪು. ೨೬. ಶಾ.ಸಂ. ೫೨

೨೬೦. ಗುರುವ ಆರ್.ಎನ್., ಪೂರ್ವೋಕ್ತ, ಪು. ೫೨೩–೨೨೫

೨೬೧. ಚಿದಾನಂದಮೂರ್ತಿ ಎಂ., ಪೂರ್ವೋಕ್ತ, ಪು. ೧೭೯–೧೮೨

೨೬೨. ಅದೇ., ಪು. ೭೨

೨೬೩. ಶೆಟ್ಟಿ ಎಸ್.ಡಿ., ತುಳುನಾಡಿನ ಜೈನಧರ್ಮ:ಒಂದು ಸಾಂಸ್ಕೃತಿಕ ಅಧ್ಯಯನ, ೨೦೦೨, ಪು.೧೪–೧೬

೨೬೪. ಚಿದಾನಂದಮೂರ್ತಿ ಎಂ., ಪೂರ್ವೋಕ್ತ, ಪು. ೧೨೪

❑❑❑

ಅಧ್ಯಾಯ ಮೂರು

ಶಾಸನಗಳ ವೈವಿಧ್ಯತೆ

೩.೧ ಪೀಠಿಕೆ

ಶಾಸನಗಳು ಪ್ರಾಚೀನ ಕಾಲದ ಅಮೂಲ್ಯ ಸಂಪತ್ತಿನ ಆಗರವಾಗಿದೆ.[೧] ಶಾಸನ ಪದದ ಅರ್ಥ ಆಜ್ಞಾಪಿಸು, ಶಿಕ್ಷಿಸು, ನಿಯಂತ್ರಿಸು, ಎಂದು ಅರ್ಥೈಯಿಸಲಾಗಿದೆ. ಶಾಸನ ಶಬ್ದಕ್ಕೆ ಕಾಯ್ದೆ, ಕಾನೂನು ಎಂಬ ಅರ್ಥ ಪ್ರಚಲಿತದಲ್ಲಿದೆ. ಪ್ರಾಚೀನ ಕಾಲದಲ್ಲಿ ಶಾಸನ ಪದವನ್ನು ಅರಸರ ಆಜ್ಞೆಗಳನ್ನು ತಿಳಿಸುವ ಬರಹಗಳು ಎಂಬರ್ಥದಲ್ಲಿ ಬಳಸಲ್ಪಟ್ಟಿದೆ. ಕಾಲಾನುಕ್ರಮದಲ್ಲಿ ಇದು ವಿಶಾಲಾರ್ಥವನ್ನು ಪಡೆಯಿತು. ಪ್ರಸ್ತುತ ಶಾಸನ ಶಬ್ದಕ್ಕೆ ಸಮಾನಾರ್ಥವಾಗಿ ಆಂಗ್ಲ ಭಾಷೆಯಲ್ಲಿ 'Inscription', ಎಂದಿದ್ದು, ಇದಕ್ಕೆ ಸಂವಾದಿಯಾಗಿ ಲ್ಯಾಟಿನ್ ಪದವಾದ ಇನ್‌ಸ್ಕ್ರೈಬ್ ಎಂಬ ಪದದಿಂದ ರೂಪಗೊಂಡಿದೆ. ವಿಶಾಲಾರ್ಥದ ಹಿನ್ನಲೆಯಲ್ಲಿ ಶಾಶ್ವತವಾದ ವಸ್ತುವಿನ ಮೇಲೆ ಕೊರೆದ ದಾಖಲೆ, ಒಂದು ವ್ಯವಸ್ಥಿತ ದೃಷ್ಠಿಯಲ್ಲಿ ಶಾಸನಗಳನ್ನು ಅಧ್ಯಯನ ಮಾಡುವ ನಿಟ್ಟಿನಲ್ಲಿ ಅವುಗಳನ್ನು ವಿಷಯಾಧಾರಿತವಾಗಿ, ವಸ್ತು ಆಧಾರಿತವಾಗಿ, ನಿರ್ಮಾತೃ ಆಧಾರಿತವಾಗಿ, ಪ್ರಾದೇಶಿಕವಾಗಿ, ಭಾಷಾಧಾರಿತವಾಗಿ, ರಾಜವಂಶಾಧಾರಿತವಾಗಿ ವರ್ಗೀಕರಿಸಲಾಗಿದೆ.[೨]

ಸಾಮಾನ್ಯವಾಗಿ ಶಾಸನದ ರಚನೆಯಲ್ಲಿ ಕೃತಿಕಾರ, ಲಿಪಿಕಾರ, ಮತ್ತು ಶಿಲ್ಪಿ(ಕಲ್ಕುಟಿಗ/ರೂವಾರಿ)ಗಳ ಪಾತ್ರ ಬಹುಮುಖ್ಯವಾದವುಗಳಾಗಿರುತ್ತವೆ. ಕೆಲವು ಸಂದರ್ಭಗಳಲ್ಲಿ ಶಾಸನ ರಚನೆ ಮತ್ತು ಸಿದ್ದತೆಯ ಕ್ರಮದಲ್ಲಿ ಬದಲಾವಣೆಯಗಳನ್ನು ಕಾಣಬಹುದಾದರೂ ಒಂದು ನಿರ್ದಿಷ್ಟ ಚೌಕಟ್ಟನ್ನು ಹಾಕಲಾಯಿತು. ಆದರೆ ದಾನ ಶಾಸನಗಳ ರಚನಾಕ್ರಮದಲ್ಲಿ ಸ್ಥೂಲವಾಗಿ ಪೀಠಿಕೆ, ಪ್ರಕಟಣೆ, ಮತ್ತು ಮುಕ್ತಾಯವನ್ನು ಕಾಣುತ್ತೇವೆ. ಪೀಠಿಕೆಯಲ್ಲಿ ಮಂಗಳವಾಚಕ, ಪ್ರಾರ್ಥನಾ ಶ್ಲೋಕ, ವಂಶಾವಳಿ, ಕೊಡಮಾಡಿದ ದಾನದ ವಿಷಯ, ದಾನಿಯ ಹೆಸರು ದಾನಮಾಡಿದುದರ ಉದ್ದೇಶ ಮತ್ತು ಸಂದರ್ಭ ಅದರ ಎಲ್ಲೆಯನ್ನು ತಿಳಿಸಲಾಗಿರುತ್ತದೆ. ಶಾಸನದ ಮುಕ್ತಾಯದಲ್ಲಿ ಶಾಸನವನ್ನು ಕಂಡರಿಸಿದವರ, ಸಾಕ್ಷಿದಾರರ ಮತ್ತು ಅರಸನ ಒಪ್ಪಿಗೆಯ ರುಜುವಾತು, ಶಾಪಾಷಯಗಳು ಇರುವುದನ್ನು.[೩] ಗುರುತಿಸಬಹುದಾಗಿದೆ, ನಂತರ ಇವುಗಳು ಕಾಲಾನುಕ್ರಮದಲ್ಲಿ ಬದಲಾವಣೆಯಾಗಿರುವುದನ್ನು ಕಾಣುತ್ತೇವೆ.

ಕರ್ನಾಟದಲ್ಲಿ ತಮ್ಮ ತಮ್ಮ ಧರ್ಮಗಳ ದೈವವನ್ನು ಸ್ತುತಿಸುವ ವಿವಿಧ ಪ್ರಕಾರದ ಪದ್ಯಗಳನ್ನು ಶಾಸನದಲ್ಲಿ ಉಲ್ಲೇಖವಿರುವುದನ್ನು ನಾವು ಕಾಣುತ್ತೇವೆ. ಶೈವ ಧರ್ಮದ ಶಾಸನವಾಗಿದ್ದರೆ.

ನವಸ್ತುಂಗ ಶಿರಶ್ಚುಂಬಿ ಚಂದ್ರಚಾಮರ ಚಾರವೇ।
ತ್ರೈಲೋಕ್ಯನಗರಾರಂಭ ಮೂಲಸ್ತಂಭಾಯ ಶಂಭವೇ॥

ಎಂಬ ಶ್ಲೋಕವು ಬಾಣಬಟ್ಟನ ಹರ್ಷಚರಿತದಲ್ಲಿನ ಮಂಗಳ ಪದ್ಯವಾಗಿ ಉಲ್ಲೇಖಿತವಾಗಿದೆ. ಹಾಗೆಯೇ ವೈಷ್ಣವ ಧರ್ಮದ ಶಾಸನದ ಪ್ರಾರಂಭದಲ್ಲಿ

ಜಯತ್ಯಾವಿಷ್ಕೃತಂ ವಿಷ್ಣೋರ್ವ್ವಾರಾಹಂ ಕ್ಷೋಭಿತಾರ್ಣ್ಣವ।
ದಕ್ಷಿಣೋನ್ನತ ದಂಷ್ಟ್ರಾಗ್ರ ವಿಶ್ರಾಂತ ಭುವನಂವಪು॥

ಎಂಬ ವಿಷ್ಣುವಿನ ದಶಾವತಾರದಲ್ಲಿ ಒಂದಾಗಿರುವ ವರಾಹವತಾರವನ್ನು ವರ್ಣಿಸುವ ಪದ್ಯ ಕಂಡು ಬರುತ್ತದೆ. ಹಾಗೆಯೇ ಜೈನ ಪರವಾದ ಅನೇಕ ಶಾಸನಗಳ ಆರಂಭದಲ್ಲಿ

ಶ್ರೀಮತ್ಪರಮಗಂಭೀರಸ್ಯಾದ್ವಾದಾಮೋಘ ಲಾಂಛನಂ।
ಜಿಯಾತ್‌ತ್ರೈಲೋಕ್ಯ ನಾಥಸ್ಯ ಶಾಸನಂ ಜಿನಂ ಶಾಸನಂ॥

ಎಂಬುದು ಕ್ರಿ.ಶ. ೭ನೇ ಶತಮಾನದಲ್ಲಿ ಅಕಳಾಚಾರ್ಯನ ಕೃತಿಯಾದ ಪ್ರಮಾಣ ಸಂಗ್ರಹ ಎಂಬ ಸಂಸ್ಕೃತ ಪದ್ಯದಲ್ಲಿ ಉಲ್ಲೇಖಿತವಾಗಿದೆ. ಕರ್ನಾಟಕ ಪ್ರದೇಶದಲ್ಲಿ ಸಂಪತ್ತಿನ ಆಗರವಾಗಿರುವ ಈ ಶಾಸನಗಳು ಸಮಕಾಲೀನ ರಾಜಕೀಯ, ಸಾಮಾಜಿಕ, ಧಾರ್ಮಿಕ, ಕಲೆ ಮತ್ತು ಸಾಹಿತ್ತಿಕ ಮೊದಲಾದ ಸಂಗತಿಗಳನ್ನು ತಿಳಿಯುವಲ್ಲಿ ಮಹತ್ವದ ಆಕರಗಳಾಗಿ ವೈಶಿಷ್ಟತೆ ಪಡೆದಿವೆ.

ಪ್ರಸ್ತುತ ಶಾಸನಗಳಲ್ಲಿ ವಸ್ತುವೈವಿಧ್ಯತೆ ಗಳಿರುವಂತೆ ವಿಷಯದಲ್ಲೂ ವೈವಿಧ್ಯತೆಗಳಿವೆ. ಈ ಹಿನ್ನೆಲೆಯನ್ನು ಆಧರಿಸಿ ಧಾರವಾಡ ಜಿಲ್ಲೆಗೆ ಸೀಮಿತಮಾಡಿಕೊಂಡು ಇಲ್ಲಿ ದೊರೆತ ಶಾಸನಗಳ ವೈವಿಧ್ಯತೆಯ ಚಿತ್ರಣವನ್ನು ಈ ಕೆಳಗೆ ನೀಡಲಾಗಿದೆ.

೩.೨ ದಾನ ಶಾಸನಗಳು

ಈ ದಾನ ಶಾಸನಗಳನ್ನು ದೇವಾಲಯಗಳಿಗೆ ಸಂಬಂಧಪಟ್ಟಂತೆ ಚರ್ಚಿಸಲಾಗಿದ್ದು, ಅವುಗಳನ್ನು ಶೈವ ದಾನಶಾಸನಗಳು, ವೈಷ್ಣವ ದಾನಶಾಸನಗಳು, ಜೈನ ದಾನಶಾಸನಗಳು, ಶಾಕ್ತ ದಾನ ಶಾಸನಗಳು ಹಾಗೂ ಇತರೇ ದಾನಶಾಸನಗಳೆಂದು ವಿಭಾಗಿಸಿಕೊಂಡು ಅಧ್ಯಯನವನ್ನು ಮಾಡಲಾಗಿದೆ. ಪ್ರಸ್ತುತ ಈ ಪ್ರದೇಶಗಳಲ್ಲಿ ಶೈವ ದೇವಾಲಯಗಳಿಗೆ ಸಂಬಂಧಿಸಿದಂತಹ ದಾನಶಾಸನಗಳೇ ಅತಿ ಹೆಚ್ಚು ದೊರೆಯುತ್ತಿದ್ದು, ಈ ದಾನ ಶಾಸನಗಳು ದೇವಾಲಯಗಳ ಪ್ರತಿಷ್ಠಾಪನೆ, ಜೀರ್ಣೋದ್ದಾರಕ್ಕಾಗಿ, ಅಂಗಭೋಗ, ರಂಗಭೋಗ, ಧೂಪ, ದೀಪ, ನೈವೇದ್ಯಕ್ಕಾಗಿ, ನೃತ್ಯ, ಪಂಡಿತರಿಗೆ, ಹೀಗೆ ಹಲವಾರು ರೀತಿಯ ದಾನಗಳನ್ನು ಕೊಡುತ್ತಿದ್ದುದು ಶಾಸನಗಳಿಂದ ಖಚಿತವಾಗುತ್ತದೆ. ಈ ದಾನಗಳು ಭೂಮಿ, ಹಣ, ನಾಣ್ಯ, ಗ್ರಾಮ, ತೋಟ, ಅಂಗಡಿ, ಸಪ್ತಸಾಗರ, ತೆರಿಗೆ, ಮಠ, ಎಣ್ಣೆ, ಎತ್ತುಗಳು ಇನ್ನೂ ಮುಂತಾದವುಗಳಾಗಿವೆ. ದಾನಗಳನ್ನು ನೀಡುವ ಮೂಲ ಆರ್ಥಿಕವಾಗಿರಬಹುದು, ನಗದುರೂಪದ ಹಣವಾಗಿರಬಹುದು ಅಥವಾ ಅಗತ್ಯವಸ್ತುಗಳ ಪೂರೈಕೆ ಇರಬಹುದು, ಪ್ರಸ್ತುತ ಈ ಅಧ್ಯಯನದಲ್ಲಿ ದಾನಶಾಸನಗಳನ್ನು ಒಟ್ಟಾರೆಯಾಗಿ ಸೆರೆಹಿಡಿದು, ಕಾಲಾನುಕ್ರಮದಲ್ಲಿ ದಾಖಲಿಸಲಾಗಿದೆ.

೩.೨.೧ ಶೈವ ದಾನಶಾಸನಗಳು

೧. ಗ್ರಾಮ : ಧಾರವಾಡ

ತಾಲೂಕು : ಧಾರವಾಡ

ಸ್ಥಳ : ಹೊಂಡದ ವೀರಭದ್ರೇಶ್ವರ ದೇವಾಲಯದ ಹಿಂಭಾಗ

ಕಾಲ : ಕ್ರಿ.ಶ. ೯ನೇ ಶ

ಅಧಿಕವಾಗಿ ತೃಟಿತವಾಗಿರುವ ಈ ಶಾಸನವು ಅಸ್ಪಷ್ಟ ಮಾಹಿತಿಯನ್ನು ನೀಡುತ್ತದೆ. ಶಾಸನದಲ್ಲಿ ಕಾಲದ ಉಲ್ಲೇಖವನ್ನು 'ಕಾಳಾಕ್ರಾನ್ತ ಸಂವತ್ಸರಳಿದೆಂಟುನೂರು....ಕ್ರೋಧಿ ಸಂವತ್ಸರದ ಚೈತ್ರಶುದ್ಧ ಬಿದಿಗೆ ಆದಿತ್ಯವಾರ ಎಂದಿದೆ. ಶಾಸನದಲ್ಲಿ ಪಡೆವಳದೇರಣ್ಣ, ಮಧುವಯ್ಯ, ಕೇಸೀಗಾವುಂಡ ಕೋಟೆಗಾವುಂಡರ ಉಲ್ಲೇಖವಿದ್ದು, ಯಾರೋ ಒಬ್ಬ ವ್ಯಕ್ತಿ ಕುಂದೂರಯ್ನೂರು ಅಗ್ರಹಾರದೊಳಗಿರುವ ನವಿಲೂರಿನೊಳಗಿರುವ ದೇವಾಲಯವನ್ನು ಜೋರ್ಣೋದ್ದಾರ ಮಾಡಿಸಿದ ಉಲ್ಲೇಖವಿದೆ.[೪]

೨. ಗ್ರಾಮ : ಕುರಹಟ್ಟಿ

ತಾಲೂಕು : ನವಲಗುಂದ

ಸ್ಥಳ : ಹನುಮಂತ ದೇವಾಲಯದ ಹತ್ತಿರ

ಕಾಲ : ಕ್ರಿ.ಶ. ೧೦ನೇ ಶ

ಈ ಶಾಸನದಲ್ಲಿ ಕಾಲದ ಉಲ್ಲೇಖವಿರುವುದಿಲ್ಲ. ಲಿಪಿ ದೃಷ್ಟಿಯಿಂದ ೧೦ನೇಯ ಶತಮಾನವೆಂದು ಹೇಳಬಹುದು. ಯಾರೋ ಕಟ್ಟಿಸಿದ ದೇವಾಲಯ(ಬಹುಶಃ ಹನುಮಾನ್)ಕ್ಕೆ ೫೦ ತೋಟಕ್ಕೆಸಿದ್ದಾಯ, ಪೊಂಗದ್ಯಾಣ ಮೊದಲಾದ ತೆರಿಗೆಯನ್ನು ಮನ್ನಾ ಮಾಡಿರುವಂತಹ ವಿಷಯ ಶಾಸನದಲ್ಲಿದೆ.[೫]

೩. ಗ್ರಾಮ : ಹಿರೇಮಾಗೂರು

ತಾಲೂಕು : ಧಾರವಾಡ

ಸ್ಥಳ : ಕಲ್ಮೇಶ್ವರ ದೇವಾಲಯದ ಎದುರಿನ–ಕಂಬ

ಕಾಲ : ಕ್ರಿ.ಶ. ೧೦ನೇ ಶ

ಭೀಮನೆಂಬುವನು ದೇವಾಲಯ ಕಟ್ಟಿಸಿದ ಉಲ್ಲೇಖವಿದೆ.[೬]

೪. ಗ್ರಾಮ : ಕುಂದಗೋಳ

ತಾಲೂಕು : ಕುಂದಗೋಳ

ಸ್ಥಳ : ಬ್ರಹ್ಮದೇವರ ಹೊಲ

ರಾಜವಂಶ : ಕಲ್ಯಾಣ ಚಾಲುಕ್ಯ

ಅರಸ : ೧ ಸೋಮೇಶ್ವರ

ಕಾಲ : ಕ್ರಿ.ಶ. ೧೦೪೪

ಶಾಸನದ ಕಾಲದಲ್ಲಿ 'ಸಕನೃಪಕಾಲಾತೀತ ೯೬೫ನೆಯ ತಾರನ ಸಂವತ್ಸರದ ಚೈತ್ರಸುದ್ದ ಪಂಚಮಿ' ಎಂದು ನೀಡಿದ್ದು, ಇದು ಕ್ರಿ.ಶ. ೧೦೪೪ ಮಾರ್ಚ್೬ ಮಂಗಳವಾರಕ್ಕೆ ಸಮನಾಗುತ್ತದೆ. ಪೃಥ್ವೀವಲ್ಲಭ ಮಹಾರಾಜ ಪರಮೇಶ್ವರ ಪರಮಭಟ್ಟಾರಕ ಶ್ರೀಮತ್ ಅಹವಮಲ್ಲನ ಕಾಲಕ್ಕೆ ಸೇರಿದೆ. ಈ ಶಾಸನದಲ್ಲಿ ಊರೊಡೆಯ ಪ್ರಮುಖ ಮಹಾಜನರು ಬಾಳಚಂದ್ರೇಶ್ವರ ದೇವರಿಗೆ ದಾನವನ್ನು ನೀಡಿರುವ ಉಲ್ಲೇಖವಿದೆ.[೭]

೫. ಗ್ರಾಮ : ಕುಯಿಬಾಳ

ತಾಲೂಕು : ಕುಂದಗೋಳ

ಸ್ಥಳ : ಚಾವಡಿಯ ಹತ್ತಿರ

ರಾಜವಂಶ : ಕಲ್ಯಾಣ ಚಾಲುಕ್ಯ

ಅರಸ : ೧ ಸೋಮೇಶ್ವರ

ಕಾಲ : ಕ್ರಿ.ಶ. ೧೦೪೫

ಶಾಸನದಲ್ಲಿ ಕಾಲವನ್ನು 'ಸಕವರ್ಷ ೯೮೦ನೆಯ ವಿಳಂಬ ಸಂವತ್ಸರದ ಪುಷ್ಯಶುದ್ದ ಆದಿತ್ಯವಾರ ಉತ್ತರಾಯಣ ಸಂಕ್ರಾಂತಿಯಂದು' ಎಂದು ನೀಡಿದ್ದು, ಇದು ಕ್ರಿ.ಶ. ೧೦೫೮ ಡಿಸೆಂಬರ್ ೨೪ಕ್ಕೆ ಸರಿಹೊಂದುತ್ತದೆ. ಶಾಸನವು ಚಾಲುಕ್ಯ ಚಕ್ರವರ್ತಿ ತ್ರೈಲೋಕ್ಯಮಲ್ಲಿದೇವನ ಕಾಲಕ್ಕೆ ಸಂಬಂಧಿಸಿದ್ದು, ಈತನ ಪಾದ ಪದ್ಮೋಪಜೀವಿಯಾದ ಮಹಾಸಾಮಂತ ಇಂದ್ರಕೇಸಿಯರಸನು, ಪುಲಿಗೆರೆ–೩೦೦ನ್ನು ಆಳುತ್ತಿದ್ದನು. ಅನಂತರದಲ್ಲಿ ಶ್ರೀಮತ್‌ತಂತ್ರಪಾಳ ಚಾವುಂಡನಯ್ಯನ ಉಲ್ಲೇಖವಿದ್ದು, ಈತನು ಇಂದ್ರಕೇಸಿ ಸಮ್ಮುಖದಲ್ಲಿ ಪೂರ್ವೋಕ್ತದಿನದಂದು ಲೋಕಾಭರಣ ಪಂಡಿತರ ಕಾಲಂಕಚ್ಚಿ(ಅವರಿಗೆ) ಚಾವಗಾವುಂಡ ಮತ್ತು ಸೋಭನಗಾವುಂಡನ ಹೊಲದಲ್ಲಿ ಹನ್ನೆರಡು ಮ್ಮತ್ತರು ಭೂಮಿಯನ್ನು ಹಾಗೂ ಜೋಗೇಶ್ವರ ದೇವರಿಗೆ ಲೋಕಭರಣ ಪಂಡಿತ ಕಾಲಂಕರ್ಛಿ ಭೂದಾನವನ್ನು ನೀಡಿದ ಉಲ್ಲೇಖವಿದೆ.[೮]

೬. ಗ್ರಾಮ : ಶೇಡಂಬಿ

ತಾಲೂಕು : ಕಲಘಟಗಿ

ಸ್ಥಳ : ಹಾಳಾದ ಊರು

ರಾಜವಂಶ : ಗೋವಾ ಕದಂಬ

ಅರಸ : ಜಯಕೇಶಿ ೧

ಕಾಲ : ಕ್ರಿ.ಶ. ೧೦೬೨

ಹೋಲೇಶ್ವರ ದೇವಾಲಯಕ್ಕೆ ನೀಡಿದ ಭೂದಾನ.[೯]

೭. ಗ್ರಾಮ : ಶೇಡಂಬಿ

ತಾಲೂಕು : ಕಲಘಟಗಿ

ಸ್ಥಳ : ಹಾಳಾದ ಊರು

ರಾಜವಂಶ : ಗೋವಾ ಕದಂಬ

ಅರಸ : ಜಯಕೇಶಿ ೧

ಕಾಲ : ಕ್ರಿ.ಶ. ೧೦೬೨

ಶಾಸನದಲ್ಲಿ 'ಶಕನೃಪ ಕಾಲಾತೀತ ಸಂವತ್ಸರ ಶತಂಗಳ್ ೯೮೪ನೆಯ ಶುಭಕೃತ್ಯ ಸಂವತ್ಸರದ ಪೌಷ್ಯಶುದ್ಧ೫ ಗುರುವಾರ ದಂದುತ್ತರಾಯಾಣ ಸಂಕ್ರಾಂತಿಯಂದು ಕಾಲದ ಮಾಹಿತಿಯಿದ್ದು, ಇದು ಕ್ರಿ.ಶ. ೧೦೬೩ ಡಿಸೆಂಬರ ೧೨ ಗುರುವಾರಗೆ ಸರಿ ಹೊಂದುತ್ತದೆ. ಬನವಾಸಿ ಪುರವರಾಧೀಶ್ವರ ಶ್ರೀಮತ ಜಯಕೇಶಿ ದೇವರು ಆಳುತ್ತಿದ್ದು, ಅವರ ಪಾದ ಪದ್ಮೋಪಜೀವಿಯಾದ ಜಯದೇವಯ್ಯನ ಕುರಿತಾಗಿದೆ. ರಾಜನು ತನ್ನ ರಾಜಧಾನಿಯಾದ ಅನಿಲಾಪುರದೊಳಿದ್ದು, ರಾಜ್ಯವಾಳುತ್ತಿರಲು ಜಯದೇವಯ್ಯನು ಪೂರ್ವೋಕ್ತದಿನದಂದು ತಮ್ಮಿಯೂರಿನ ಸೇಡಂಬಿಯಲ್ಲಿ ಹಿಂದೆ ಒಕ್ಕಲ ಮಗನು ಮಾಡಿಸಿದ ದೇಗುಲಕ್ಕೆ ನೈವೇದ್ಯಕ್ಕೆಂದು, ಕೊಂಗಿಯ ಗುಣಿಗಾನ ಎರಡು ಮತ್ತರು ಗದ್ದೆಯನ್ನು ಬಿಟ್ಟ ಉಲ್ಲೇಖವಿದೆ.[೧೦]

೮. ಗ್ರಾಮ : ಸಂಗಮೇಶ್ವರ

ತಾಲೂಕು : ಕಲಘಟಗಿ

ಸ್ಥಳ : ಕಲ್ಮೇಶ್ವರ ದೇವಾಲಯದ-ತೊಲೆ

ರಾಜವಂಶ : ಗೋವಾ ಕದಂಬ

ಅರಸ : ಜಯಕೇಶಿ ೧

ಕಾಲ : ಕ್ರಿ.ಶ. ೧೦೬೮

ಶಾಸನದಲ್ಲಿ ಕಾಲವನ್ನು 'ಶಕವರ್ಷಂ ೯೯೧ನೆಯ ಕೀಲಕ ಸಂವತ್ಸರದ ಭಾದ್ರಪದ ಚೆಟ್ಟಿ ಮಂಗಳವಾರದ ಉಲ್ಲೇಖವಿದ್ದು, ಇದು ಕ್ರಿ.ಶ. ೧೦೬೮-೬೯ ಅಗಸ್ಟ ೫, ಮಂಗಳವಾರಕ್ಕೆ ಸರಿಹೊಂದುತ್ತದೆ. ಶಾಸನವು ಜಯಕೇಶಿದೇವನಿಗೆ ಸಂಬಂಧಿಸಿದೆ. ಒಂದನೇ ಜಯಕೇಶಿ ಆಳುತ್ತಿರುವಾಗ ಲೆಂಕಚಟ್ಟಿಗಾವುಂಡ ಮತ್ತು ಹಲ್ಲಗಾವುಂಡರು ಗೋನಿಯ ದೇವರ ಶಿಷ್ಯ ಶಾಂತಗಾವುಂಡನು ಶಿವಾಲಯದಲ್ಲಿನ ದೇವರ ನೈವೇದ್ಯಕ್ಕೆಂದು ೨ಮತ್ತರು ಗದ್ದೆಯನ್ನು ಬಿಟ್ಟ ಉಲ್ಲೇಖವಿದೆ.[೧೧]

೯. ಗ್ರಾಮ : ಸಂಗಮೇಶ್ವರ

ತಾಲೂಕು : ಕಲಘಟಗಿ

ಸ್ಥಳ : ಕಲ್ಮೇಶ್ವರ ದೇವಾಲಯದ-ತೊಲೆ

ರಾಜವಂಶ : ಗೋವಾ ಕದಂಬ

ಅರಸ : ಜಯಕೇಶಿ ೧

ಕಾಲ : ಕ್ರಿ.ಶ. ೧೦೬೮

ಶಾಸನವು ಕಾಲವನ್ನು 'ಶಕವರ್ಷ ೯೯೧ನೆಯ ಕೀಲಕ ಸಂವತ್ಸರದ ಸಂಕ್ರಾಂತಿ ಎಂದಷ್ಟೇ ಸೂಚಿಸಿದ್ದು, ಇದು ಶಕವರ್ಷ ೧೦೬೮-೯ಕ್ಕೆ ಸರಿಹೊಂದುತ್ತದೆ. ಬನವಾಸಿ ಪುರವರಾಧೀಶ್ವರನಾದ ಜಯಕೇಶಿ ದೇವನು ಹಲಸಿಗೆ ಪನ್ನಿಚ್ಛಾಸಿರ ಮತ್ತು ಕೊಂಕಣ-೯೦೦ನ್ನು ಅಳುತ್ತಿರುವಾಗ ಆತನ ಲಂಕಚಟ್ಟಿಗಾವುಂಡನು ದೇವಾಲಯಕ್ಕೆ ಪೂರ್ವೋಕ್ತದಿನದಂದು ಬಳ್ಳಿಗಟ್ಟಿನ ಕೆರೆಯ ಕೆಳಗೆ ಗುಣಿಗನ ೨ಮತ್ತರು ಗದ್ದೆ, ಒಂದು ಖಂಡುಗ ಬೆಳೆಯಭೂಮಿ ಬಿಟ್ಟರು.[೧೨]

೧೦. ಗ್ರಾಮ : ಅಮ್ಮಿನಭಾವಿ

ತಾಲೂಕು : ಧಾರವಾಡ

ಸ್ಥಳ : ಜೈನಬಸದಿ-ಮೇಲ್ಛಾವಣಿ

ರಾಜವಂಶ : ಕಲ್ಯಾಣ ಚಾಲುಕ್ಯ

ಅರಸ : ವಿಕ್ರಮಾದಿತ್ಯ ೪

ಕಾಲ : ಕ್ರಿ.ಶ. ೧೦೭೧

ವಿಕ್ರಮಾದಿತ್ಯ ರಾಜನ ಮಾಂಡಳಿಕನಾದ ಜಯಕೇಶಿಯು ಕೊಂಕಣ ೯೦೦ನ್ನು, ಪಲಸಿಯನ್ನು ಕುಂದೂರು-೫೦೦ನ್ನು ಆಳುತ್ತಾ ರಾಜಧಾನಿಯಾದ ಗೋವೆಯಲ್ಲಿ ಸಂತೋಷದಿಂದಿರಲು, ಆ ಸಮಯದಲ್ಲಿ ಅಗ್ರಹಾರ ಅಮ್ಮಿನಬಾವಿ ಊರೊಡೆಯ ಪ್ರಮುಖ ನಾಲ್ಕುನೂರು ಮಹಾರಾಜರ ಸನ್ನಿಧಿಯಲ್ಲಿ ಕುಂದೂರಿನ ಅಮ್ಮನಬಾವಿ ಊರಿನ ಒಡೆಯ ಮತ್ತು ನಾಲ್ಕೂರು ಮಹಾರಾಜರ ಸನ್ನಿಧಿಯಲ್ಲಿ ಆಯ್ಯುವರ್ಮ, ಊರ ದಕ್ಷಿಣಕ್ಕೆ ಕುಂಬೇಶ್ವರ ದೇವಾಲಯವನ್ನು ನಿರ್ಮಿಸಿದನು. ಮಧ್ಯಭಾಗದಲ್ಲಿನ ಸಾಲುಗಳು ಅಪೂರ್ಣವಾಗಿದೆ. ಇದು ಕಂದ ಪದ್ಯಗಳಿಂದ ಕೂಡಿರುವ ರಚನೆಯಾಗಿದೆ.[೧೩]

೧೧. ಗ್ರಾಮ : ನೂಲ್ವಿ

ತಾಲೂಕು : ಹುಬ್ಬಳ್ಳಿ

ಸ್ಥಳ : ಸ.ನಂ.೨೧೭

ರಾಜವಂಶ : ಕಲ್ಯಾಣ ಚಾಲುಕ್ಯ

ಅರಸ : ಸೋಮೇಶ್ವರ ೨

ಕಾಲ : ಕ್ರಿ.ಶ. ೧೦೭೩

ನೂಲೆಯ ಹನ್ನೆರಡುಜನ ಗಾವುಂಡರಿಂದ ಆಹಾರ್ಯ ಸೋಮಕರ್ತಾರ ದೇವರಿಗೆ ದಾನ.[೧೪]

೧೨. ಗ್ರಾಮ : ಮುಕ್ಕಲು

ತಾಲೂಕು : ಕಲಘಟಗಿ

ಸ್ಥಳ : ಕಲೇಶ್ವರ ದೇವಾಲಯದ ಹತ್ತಿರ

ರಾಜವಂಶ : ಕಲ್ಯಾಣ ಚಾಲುಕ್ಯ, ಗೋವಾ ಕದಂಬ, ಹಾನಗಲ್ಲ ಕದಂಬ

ಅರಸ : ವಿಕ್ರಮಾದಿತ್ಯ ೬, ಗುವಲದೇವ ೩, ಶಂತಿವರ್ಮದೇವ

ಕಾಲ : ಕ್ರಿ.ಶ ೧೦೭೯, ೧೦೮೨

'ಶ್ರೀ ಮಚ್ಚಾಳುಕ್ಯ' ವಿಕ್ರಮ ಕಾಲ ೨ನೆಯ ಸಿದ್ಧಾರ್ಥ ಸವತ್ಸರದ ಪೌಷ್ಯಶುಧ ೫ ಆದಿವಾರಂ ಉತ್ತರಾಯಣ ಸಂಕ್ರಾಂತಿ ವ್ಯತೀಪಾತದಂದು' ಎರಡು ಕಾಲದ ಉಲ್ಲೇಖವಿದ್ದು, ಇದು ಕ್ರಿ.ಶ. ೧೦೭೯ ಡಿಸೆಂಬರ್ ೨೪ ಆದಿತ್ಯವಾರಕ್ಕೆ ಸರಿ ಹೊಂದುತ್ತದೆ. ಗೋವಲದೇವನಿಗೆ ಸಂಬಂಧಿಸಿದಮೊದಲ ಶಾಸನವಾಗಿದ್ದು, ಆತನು ಚಾಳುಕ್ಯ ಚಕ್ರವರ್ತಿ ತ್ರಿಭುವನಮಲ್ಲದೇವನ ಮಹಾ ಮಂಡಳೇಶ್ವರನಾಗಿದ್ದನೆಂದು, ಈತನು ಕೊಂಕಣ-೯೦೦ ಮತ್ತು ಪಲಸಿಗೆ ಪನ್ನಿರ್ಚ್ಛಾಸಿರವನ್ನು ಆಳುತಿದ್ದ. ಆತನ ಸಾಮಂತರಸ ಶಾಂತಿವರ್ಮದೇವನು ಹಾನುಂಗಲ್ಲು-೫೦೦ನ್ನು, ಕುಂಟಿಕುಳಿ-೩೦ನ್ನು ಆಳುತ್ತಿರುವಾಗ ಪೆನ್ನಸೋಗೆಯ ಬರ್ಮಗಾವುಂಡನು ಶ್ರೀ ಬಮ್ಮೇಶ್ವರ ಖಂಡಸ್ಫುಟಿತ ಜೀರ್ಣೋದ್ಧಾರಕ್ಕೆಂದು ಒಂದು ಮತ್ತರು ಗದ್ದೆಯನ್ನು ಬಿಟ್ಟ ವಿಷಯ ಶಾಸನಲ್ಲಿದೆ.[೧೫]

೧೩. ಗ್ರಾಮ : ತೆರಸಿಕೊಪ್ಪ

ತಾಲೂಕು : ಕಲಘಟಗಿ

ಸ್ಥಳ : ಹಾಳಾದ ಊರು

ರಾಜವಂಶ : ಕಲ್ಯಾಣ ಚಾಲುಕ್ಯ,

ಅರಸ : ವಿಕ್ರಮಾದಿತ್ಯ ೬,

ಕಾಲ : ಕ್ರಿ.ಶ. ೧೦೮೦

ಚಾಳುಕ್ಯ ಚಕ್ರವರ್ತಿ ತ್ರಿಭುವನಮಲ್ಲನ ರಾಜ್ಯವದಲ್ಲಿ ಗೋವೆಯ ಕದಂಬ ಅರಸ ಮಹಾಮಂಡಳೇಶ್ವರ ಗೂವಲದೇವನು ಕೊಂಕಣ-೯೦೦, ಪಲಸಿಗೆ-೧೨೦೦೦, ಉಣಕಲ್-೩೦ನ್ನು ರಾಜಧಾನಿ ಚಂದ್ರಾಪುರದಿಂದ ಆಳುತಿದ್ದನು. ಮೂಕಗಾವುಂಡನ ಹೆಂಡತಿ, ನನ್ನಯಬ್ಬೆ

ಇವರ ಪುತ್ರ ಮಾಳಗಾವುಂಡ ಇವನ ಪತ್ನಿ ಅರಸಿಕಬ್ಬೆ, ಮಾಳಗಾವುಂಡ ಮಾಳೇಶ್ವರ ಕಲಿದೇವರಸ್ವಾಮಿಯ ನೈವೇದ್ಯಕ್ಕಾಗಿ, ಖಂಡಸ್ಫುಟಿತ ಜೀರ್ಣೋದ್ಧಾರಕ್ಕೆ ಊರಿನ ದಕ್ಷಿಣ ಕೆರೆಯ ಕೆಳಗೆಮೂರು ಮತ್ತರು ಗದ್ದೆಯನ್ನು ಬಿಟ್ಟನು. ಶಾಸನ ಬರೆದವನು ಕಾಟಿಯಣ್ಣ, ಕಲ್ಲುಟಿಗ ಎರೆಯಮ್ಮೊಜ ಎಂದಿದೆ.[೧೬]

೧೪. ಗ್ರಾಮ : ಸಂಗಮೇಶ್ವರ

ತಾಲೂಕು : ಕಲಘಟಗಿ

ಸ್ಥಳ : ಕಲ್ಮೇಶ್ವರ ದೇವಾಲಯ–ತೊಲೆ

ರಾಜವಂಶ : ಗೋವಾ ಕದಂಬ

ಅರಸ : ಗುವಲದೇವ ೩

ಕಾಲ : ಕ್ರಿ.ಶ. ೧೦೮೦

ಶಾಸನದಲ್ಲಿ ಕಾಲವನ್ನು 'ಶಕವರ್ಷ ೧೦೦೪ನೆಯ ದುಂದುಭಿ ಸಂವತ್ಸರದ ಪುಷ್ಯ ಶು. ೫ಆದಿವಾರ ಉತ್ತರಾಯಣ ಸಂಕ್ರಾಂತಿಯೆಂದು' ನೀಡಿದ್ದು, ಇದು ಕ್ರಿ.ಶ. ೧೦೮೩ ಡಿಸೆಂಬರ್ ೨೫, ಆದಿತ್ಯವಾರಕ್ಕೆ ಸರಿಹೊಂದುತ್ತದೆ. ಮಹಾಮಂಡಳೇಶ್ವರ ಗೂವಲದೇವ ಪಲಸಿಗೆ–೧೨೦೦೦, ಕೊಂಕಣ–೯೦೦ನ್ನು ರಾಜಧಾನಿ ಅನಿಲಾಪುರದಿಂದ ಆಳುತ್ತಿರುವಾಗ, ಮಾರಸಿಂಗ ಗಾವುಂಡನ ಮಗ ನಾಗಣಂ, ಸಾಂತಗಾವುಂಡನು ಮಾಡಿಸಿದ ಶಿವಾಲಯಕ್ಕೆ ೫ಗದ್ಯಾಣವನ್ನು ಹಾಗೆಯೇ ಪ್ರತಿ ತಿಂಗಳು ಎಣ್ಣೆಯನ್ನು ಕೊಟ್ಟ ವಿಷಯವಿದೆ.[೧೭]

೧೪. ಗ್ರಾಮ : ತೇಗೂರು

ತಾಲೂಕು : ಧಾರವಾಡ

ಸ್ಥಳ : ಊರ ಚಾವಡಿ

ರಾಜವಂಶ : ಕಲ್ಯಾಣ ಚಾಲುಕ್ಯ

ಅರಸ : ವಿಕ್ರಮಾದಿತ್ಯ ೬

ಕಾಲ : ಕ್ರಿ.ಶ. ೧೦೮೨

ಈ ಶಾಸನದಲ್ಲಿ 'ಚಾಳುಕ್ಯ ವಿಕ್ರಮ ಕಾಲದ ೭ನೆಯ ಸಂವತ್ಸರ ಪುಷ್ಯಸುದ್ಧ ೫ ಆದಿವಾರದಂದು ಉತ್ತರಾಯಣ ಸಂಕ್ರಾಂತಿ' ಎಂದು ಉಲ್ಲೇಖಿಸಿದ್ದು, ಚಾಲುಕ್ಯ ವಿಕ್ರಮಶಕವು ಶಾಲಿವಾಹನ ಶಕ ೯೭ರಲ್ಲಿ ಪ್ರಾರಂಭವಾಯಿತು ಎಂದು ಲೆಕ್ಕ ಹಾಕಿದರೆ ಈ ಶಾಸನವು ಶಾಲಿವಾಹನ ಶಕ ೧೦೦೪ಕ್ಕೆ ಸೇರಿದ್ದು, ಕ್ರಿ.ಶ. ೧೦೮೩ನೆಯ ವರ್ಷಕ್ಕೆ ಸಮವಾಗುತ್ತದೆ. ತ್ರಿಭುವನಮಲ್ಲಿ ದೇವ(೬ನೆಯ ವಿಕ್ರಮಾದಿತ್ಯನು) ರಾಜ್ಯನ್ನಾಳುತ್ತಿರಲು ಆತನ ಪಾದ ಪದ್ಮೋಪಜೀವಿಯೂ, ಬನವಾಸಿ ಪುರವರೇಶ್ವರನೂ, ಕಾದಂಬ ಚೂಡಾಮಣಿಯೂ ಆದ ಮಹಾ ಮಂಡಳೇಶ್ವರ

ಗೋವಲ ದೇವನು ಕೊಂಕಣ-೯೦೦, ಪಲಸಿಗೆ-೧೨೦೦೦ವನ್ನು ನೋಡಿಕೊಳ್ಳುತ್ತಿದ್ದರು. ಪೂರ್ವೋಕ್ತದಿನದಂದು ಸಿಂಗಗಾವುಂಡನ ಮಗನಾದ ಜಯದೇವಗಾವುಂಡನ ತಮ್ಮನಾದ ಮುತ್ತಯ್ಯಮೂಕಗಾವುಂಡನು ಕಲಿದೇವ ಸ್ವಾಮಿಯ ದೇಗುಲದ ಜೀರ್ಣೋದ್ದಾರ, ನಿತ್ಯದ ಗಂಧ, ಧೂಪ, ದೀಪ ಮತ್ತು ನೈವೇದ್ಯಕ್ಕೆಂದು ನಾಲ್ಕುಮತ್ತರು ಭೂಮಿಯನ್ನು ಬಿಟ್ಟ ಉಲ್ಲೇಖ. ಶಾಸನದ ಅಂತಿಮದ ಭಾಗದಲ್ಲಿ ಶಾಪಾಶಯವಿದೆ.[೧೮]

೧೫. ಗ್ರಾಮ : ಬೆಳವಟಗಿ

ತಾಲೂಕು : ನವಲಗುಂದ

ಸ್ಥಳ : ರಾಮಲಿಂಗ ದೇವಾಲಯದ ಎದುರು

ರಾಜವಂಶ : ಕಲ್ಯಾಣ ಚಾಲುಕ್ಯ

ಅರಸ : ವಿಕ್ರಮಾದಿತ್ಯ ೪

ಕಾಲ : ಕ್ರಿ.ಶ. ೧೦೯೩

ಈ ಶಾಸನದಲ್ಲಿ ಕಾಲವನ್ನು ಶ್ರೀಮಚ್ಚಾಳುಕ್ಯ ವಿಕ್ರಮ ಕಾಲದ ೧೮ನೆಯ ಶ್ರೀಮುಖ ಸಂವತ್ಸರದ ಪೌಶ್ಯ ಸುದ್ಧ ೧೧ ಆದಿತ್ಯವಾರ ವ್ಯತಿಪಾತ ಉತ್ತರಾಯಣ ಸಂಕ್ರಮಣ ಎಂದು ನೀಡಿದ್ದು, ಈ ಕಾಲವು ಸರಿಯಾಗಿ ಕೂಡಿಬರುವುದಿಲ್ಲ. ಉತ್ತರಾಯಣ ಸಂಕ್ರಾಂತಿಯು ಡಿಸೆಂಬರ ತಿಂಗಳಿನ ೨೪ನೆಯ ತಾರೀಖಿನಂದು ಬಂದಿರುವುದಿಂದ ಈ ಕಾಲವನ್ನು ಕ್ರಿ.ಶ ೧೦೯೩ನೆಯ ಡಿಸೆಂಬರ ೨೪ ಎಂದು ನಿರ್ಧರಿಸಬಹುದಾಗಿದೆ. ಶಾಸನದ ಪ್ರಾರಂಭದಲ್ಲಿ ಅಸ್ಪಷ್ಟವಾದ ವಿಷಯವಿದೆ. ಈ ಶಾಸನವು ಚಾಳುಕ್ಯ ಚಕ್ರವರ್ತಿ ತ್ರಿಭುವನ ಮಲ್ಲಿದೇವನ ಕಾಲಕ್ಕೆ ಸೇರಿದ್ದು, ಪ್ರಾರಂಭದಲ್ಲಿ ತೈಲಪನಿಂದ ಆರಂಭಿಸಿ ವಂಶಾವಳಿಯಿದ್ದು ,ಅಸ್ಪಷ್ಟವಾಗಿದೆ. ತ್ರಿಭುವನಮಲ್ಲಿದೇವನು ರಾಜ್ಯವನ್ನಾಳುತ್ತಿರಲು ಬೈರುಂಬರ ಮಲ್ಲಿಮಯ್ಯನು ತಾನು ಬೆಳ್ಳಟ್ಟಿಗೆಯಲ್ಲಿ ನಿರ್ಮಿಸಿದ ಬೈರುಂಭೇಶ್ವರ ಮತ್ತು ಸರಸ್ವತಿ ದೇವಾಲಯಗಳಿಗೆ ನತ್ತರು ಭೂಮಿಯನ್ನು ದಾನನೀಡಿದ ಉಲ್ಲೇಖಗಳಿವೆ.[೧೯]

೧೬. ಗ್ರಾಮ : ಸಂಶಿ

ತಾಲೂಕು : ಕುಂದಗೋಳ

ಸ್ಥಳ : ಶಂಕರಲಿಂಗ ದೇವಾಲಯ

ಕಾಲ : ಕ್ರಿ.ಶ. ೧೧ನೇ ಶ

ಶಾಸನದಲ್ಲಿ ಕಾಲವನ್ನು ತಿಳಿಸುವ ಭಾಗ ಸಂಪೂರ್ಣಶಿಥಿಲವಾಗಿದೆ. ಲಿಪಿ ದೃಷ್ಟಿಯಿಂದ ೧೧ನೇಯ ಶತಮಾನವಿರುವ ಸಾಧ್ಯತೆ ಇದೆ. ಶಾಸನದ ಪ್ರಾರಂಭದ ಭಾಗವು ಶಿಥಿಲವಾಗಿದ್ದು, ಪ್ರಾರಂಭದಲ್ಲಿಯೇ ಭೂಮಿಯ ಮಾಹಿತಿಯನ್ನು ನೀಡಿದೆ. ಕದಂಬರ ಹತ್ತಿಮಯ್ಯನು ನಾರಾಯಣ

ದೇವರಿಗೆ ೭೭ ಕಮ್ಮವನ್ನು, ಕದಂಬರ ಮರುಳಯ್ಯನು ಮೂರುಮತ್ತರು ಭೂಮಿಯನ್ನು ದೇವರಿಗೆ ಬಿಟ್ಟ ಉಲ್ಲೇಖವಿದೆ.[೨೦]

೧೭. ಗ್ರಾಮ : ಕಟ್ನೂರು

ತಾಲೂಕು : ಹುಬ್ಬಳ್ಳಿ

ಸ್ಥಳ : ಹಾಳುಗುಡಿ–ನಂದಿಕಂಬ

ರಾಜವಂಶ : ಯಾದವರು

ಅರಸ : ರಾಮಚಂದ್ರ

ಕಾಲ : ಕ್ರಿ.ಶ. ೧೧ನೇ ಶ

ಈ ಶಾಸನವು ಅಪೂರ್ಣವಾಗಿದ್ದು, ಸೊನ್ನಲಿಗೆಯ ಕಪಿಲಸಿದ್ದ ಮಲ್ಲಿಕಾರ್ಜುನನಿಗೆ ಯಾವುದೋ ದಾನವನ್ನು ಬಿಟ್ಟಿರುವ ವಿಷಯವಿದೆ.[೨೧]

೧೮. ಗ್ರಾಮ : ನಾವಳ್ಳಿ

ತಾಲೂಕು : ನವಲಗುಂದ

ಸ್ಥಳ : ಕಲ್ಮೇಶ್ವರ ದೇವಾಲಯದ ಕಾಂಪೌಂಡ

ರಾಜವಂಶ : ಕಲ್ಯಾಣ ಚಾಲುಕ್ಯ

ಕಾಲ : ಕ್ರಿ.ಶ. ೧೧ನೇ ಶ

ಈ ಶಾಸನದಲ್ಲಿ ಕಲ್ಮೇಶ್ವರ ಗುಡಿಯ ಪೂಜಾಕಾರ್ಯಗಳಿಗೆ ಅಲ್ಲಿನ ಆಚಾರ್ಯನೊಬ್ಬನಿಗೆ ದಾನ ನೀಡಿದನೆಂದಿದೆ. ಶಾಸನದ ಮಧ್ಯಭಾಗದಲ್ಲಿ ಅಗ್ರಹಾರ ನಾಪೋರ್ಳೆಯನ್ನು ವರ್ಣಿಸುವ ಭಾಗವಾಗಿದ್ದು, ಈ ಶಾಸನವನ್ನು ರಕ್ಷಿಸಿದವರಿಗೆ ವಾರಣಾಸಿ, ಕುರುಕ್ಷೇತ್ರ, ಪ್ರಯಾಗ ಮೊದಲಾದ ಅರ್ಘ್ಯ ತೀರ್ಥದಲ್ಲಿ ಸಹಸ್ರಗೋವುಗಳನ್ನು ಪಂಚರತ್ನಗಳಲ್ಲಿ ಅಲಂಕಾರಮಾಡಿ ಬ್ರಾಹ್ಮಣರಿಗೆ ಸೂರ್ಯಗ್ರಹಣದಂದು ದಾನ ಮಾಡಿದ ಪುಣ್ಯ ಪ್ರಾಪ್ತವಾಗುತ್ತದೆಂದು ಹೇಳಿದೆ. ಹಾಗೂ ಶಾಸನವನ್ನು ಹಾಳು ಮಾಡಿದರೆ ಬ್ರಾಹ್ಮಣರನ್ನು, ಗೋವುಗಳನ್ನು ಕೊಂದಪಾಪ ಬರುತ್ತದೆಂದು ವಿವರಿಸಲಾಗಿದೆ.[೨೨]

೧೯. ಗ್ರಾಮ : ಕಳಸ

ತಾಲೂಕು : ಕುಂದಗೋಳ

ಸ್ಥಳ : ಶಾಲೆ ಹೊರಗೆ

ರಾಜವಂಶ : ಕಲ್ಯಾಣ ಚಾಲುಕ್ಯ

ಅರಸ : ಜಗದೇಕಮಲ್ಲ ೨

ಕಾಲ : ಕ್ರಿ.ಶ. ೧೧ನೇ ಶ

ತೃಟಿತಗೊಂಡ ಈ ಶಾಸನವು ಗಡಹದ ಯೋಗೇಶ್ವರ ದೇವರಿಗೆ ಇನ್ನೂರ್ವರು ನೀಡಿದ ದಾನಎಂದಿದೆ.[೨೩]

೨೦. ಗ್ರಾಮ : ಧಾರವಾಡ

ತಾಲೂಕು : ಧಾರವಾಡ

ಸ್ಥಳ : ಕನ್ನಡ ಸಂಶೋಧನಾ ಸಂಸ್ಥೆ

ರಾಜವಂಶ : ಕಲ್ಯಾಣ ಚಾಲುಕ್ಯ

ಕಾಲ : ಕ್ರಿ.ಶ. ೧೧ನೇ ಶ

ಶಾಸನದಲ್ಲಿ 'ಶಕನೃಪಕಾಳಾ ನನ್ದನ ಸಂವತ್ಸರದ ಪೌಷ್ಯ ಬಹುಳೇಕಾದಶಿ ಸೋಮವಾರ' ಎಂದು ಉಲ್ಲೇಖಿತವಾಗಿದ್ದು, ಅಸ್ಪಷ್ಟವಾಗಿರುವ ಈ ಶಾಸನದಲ್ಲಿ ನಾಗವರ್ಮ ದೇವಗಾವುಂಡ, ನಾಗದೇವ, ಮೂಕಗಾವುಂಡ ಮೊದಲಾದವರು ಚಂದ್ರೇಶ್ವರ ದೇವರ ಆಚಾರ್ಯರೂ ಶ್ವರ ಪಂಡಿತರೊಬ್ಬರಿಗೆ ಶಿವಾಲಯದ ಕೆರೆಯ ಕೆಳಗಣದಲ್ಲಿರುವ ಭೂಮಿಯನ್ನು ದಾನ ಮಾಡಿದ ಉಲ್ಲೇಖವಿದೆ.[೨೪]

೨೧. ಗ್ರಾಮ : ಕುರಡಿಕೇರಿ

ತಾಲೂಕು : ಹುಬ್ಬಳ್ಳಿ

ಸ್ಥಳ : ಈಶ್ವರ ದೇವಾಲಯ–ದಕ್ಷಿಣಗೋಡೆ

ರಾಜವಂಶ : ಕಲ್ಯಾಣ ಚಾಲುಕ್ಯ

ಅರಸ : ವಿಕ್ರಮಾದಿತ್ಯ ೬

ಕಾಲ : ಕ್ರಿ.ಶ. ೧೧೦೮

ದಂಡನಾಯಕ ಅನಂತಪಾಳದ ಸುಂಕಾಧಿಕಾರಿ ನಾರಣದೇವನಿಂದ ಭೋಜಂಗೇಶ್ವರ ದೇವಾಲಯಕ್ಕೆ ಸುಂಕದಾನ ಮಾಡಿದ ವಿಷಯವನ್ನೊಳಗೊಂಡಿದೆ.[೨೫]

೨೨. ಗ್ರಾಮ : ನಿಗದಿ

ತಾಲೂಕು : ಧಾರವಾಡ

ಸ್ಥಳ : ಕಲ್ಮೇಶ್ವರ ದೇವಾಲಯದ–ಎದುರು

ರಾಜವಂಶ : ಕಲ್ಯಾಣ ಚಾಲುಕ್ಯ

ಅರಸ : ವಿಕ್ರಮಾದಿತ್ಯ ೬

ಕಾಲ : ಕ್ರಿ.ಶ. ೧೧೧೧

ಈ ಶಾಸನದಲ್ಲಿ ಶಕವರ್ಷದ ಉಲ್ಲೇಖವಿಲ್ಲದೆಯೇ ನೇರವಾಗಿ ಮಂದನ ಸಂವತ್ಸರದ ವೈಶಾಖ ಕೃಷ್ಣಪಕ್ಷ ಶಿವರಾತ್ರಿ ಸೋಮವಾರ ವೆಂದಿದ್ದು, ಶಿವರಾತ್ರಿಯು ವೈಶಾಖಮಾಸದ ಮಾಘಮಾಸದಲ್ಲಿ ಬರುವುದಾಗಿದೆ. ನಂದನ ಸಂವತ್ಸರವನ್ನು ಮಧ್ಯಮ ನಂದನ ಸಂವತ್ಸರ ವೆಂದಿರುವುದು ವಿಶೇಷವಾಗಿದೆ. ಶಾಸನದ ಪ್ರಾರಂಭದಲ್ಲಿ ಕ್ರಿಯಾಶಕ್ತಿ ಶಿಷ್ಯತೇಜೋರಾಶಿ ಪಂಡಿತರಿಗೆ ದತ್ತಿ ನೀಡಿದ ಬಗ್ಗೆ ತಿಳಿಸುತ್ತದೆ. ನಂತರ ಮಹಾಮಂಡಳೇಶ್ವರ ಗೂವಲದೇವ ರಾಜಧಾನಿ ಗೋವೆಯಿಂದ ಕೊಂಕಣ ಮಂಡಳವನ್ನು ಆಳುತ್ತಿದ್ದ ಕುರಿತಿದೆ. ನಂತರ ಅರಸ ಚಾಳುಕ್ಯ ಕುಲದ ಪೆರ್ಮಾಡಿದೇವನ ಬಗ್ಗೆ ಉಲ್ಲೇಖವಿದೆ. ಕೊನೆಯಲ್ಲಿ ದತ್ತಿ ವಿಚಾರವಿದೆ. ಮಾರಜವಾಡಿ ನಾಡ ಕಂಪಣ ಮುಗುಂದ ಮೂವತ್ತರ ಬಳಿಯ ಬಾಡ ನಿಗುಂದೆಯ ಡಾಮಿಯ ಸೆಟ್ಟಿಯ ಅಳಿಯ ನನ್ನ ಗಾವುಂಡ ಅಳಿಯ ಚಾವುಂಡಗಾವುಂಡ ನಿಗುಂದೆಯ ಮೂಲಸ್ಥಾನ ದೇವರು ಭಿನ್ನವಾದ ಸಮಯದಲ್ಲಿ ದತ್ತಿಯನ್ನು ನೀಡಿರುವ ವಿಷಯವಿದೆ.[೨೬]

೨೩. ಗ್ರಾಮ : ಅಮ್ಮಿನಭಾವಿ

ತಾಲೂಕು : ಧಾರವಾಡ

ಸ್ಥಳ : ಜೈನ ಬಸದಿ–ಎದುರು

ರಾಜವಂಶ : ಕಲ್ಯಾಣ ಚಾಲುಕ್ಯ

ಅರಸ : ವಿಕ್ರಮಾದಿತ್ಯ ೬

ಕಾಲ : ಕ್ರಿ.ಶ. ೧೧೧೨

ಶಾಸನದಲ್ಲಿ ಕಾಲವನ್ನು'ಚಾಳುಕ್ಯವಿಕ್ರಮಕಾಲದ ೩೭ನೆಯ ನನ್ದನ ಸಂವತ್ಸರ ಭಾದ್ರಪದಮವಾಸೆ ಆದಿವಾರದಂದು' ಎಂದು ಉಲ್ಲೇಖಿತವಾಗಿದ್ದು, ಇದು ಕ್ರಿ.ಶ. ೧೧೧೩ನೆಯ ಸಪ್ಟಂಬರ್ ೨೨, ಆದಿತ್ಯವಾರಕ್ಕೆ ಸರಿ ಹೊಂದುತ್ತದೆ. ಶಾಸನದ ಪ್ರಾರಂಭದ ಭಾಗವು ತೃಟಿತವಾಗಿದೆ.

ಆದಿತ್ಯದೇವರ ಸತ್ರಕ್ಕೆ ಇಂದ್ರಸಿಜೀಯರ ಮಗಳು ಚಂದಿಯಕ್ಕ ಗೊವರೆಗೇರಿಯಲ್ಲಿ ಭೂಮಿ, ಮನೆ, ಗಾಣ ಮತ್ತು ಬವಣೆಗಳನ್ನು ದತ್ತಿ ಬಿಟ್ಟಳು. ಅಲ್ಲದೇ ಇವಳ ತಮ್ಮ ದಸವರ್ಮ ಆತನ ಮಗ ರಾಜಾದಿತ್ಯರು ಸತ್ರಕ್ಕೆ ತಳಿಗೆ–ಶಿನ್ನು ಆಯಬ್ಬೆಯ ಮಗ ಪಂಡಿತರ ಹಂಪಗಾವುಂಡ ತಳಿಗೆ–ಇನ್ನು ಬಿಟ್ಟರು ಮತ್ತೆ ಗೊರವಗೇರಿಯ ದೇವಪುತ್ರರು ಮತ್ತು ಬಾಡಸರೊಕ್ಕಲು ಮುಖ್ಯವಾಗಿ ಅರುವತ್ತೊಕ್ಕಲುಗಳು ಮಲ್ಲಿಕಾರ್ಜುನ ದೇವರ ಸ್ನಾನ ನಿವೇದ್ಯಕ್ಕೆ ದತ್ತಿ ನೀಡಿದ ವಿಷಯ ಇಲ್ಲಿದೆ.[೨೬]

೨೪. ಗ್ರಾಮ : ಧಾರವಾಡ

ತಾಲೂಕು : ಧಾರವಾಡ

ಸ್ಥಳ : ದುರ್ಗಾದೇವಿ ದೇವಾಲಯದ–ಆವರಣ

ರಾಜವಂಶ : ಕಲ್ಯಾಣ ಚಾಲುಕ್ಯ

ಅರಸ : ವಿಕ್ರಮಾದಿತ್ಯ ೬

ಕಾಲ : ಕ್ರಿ.ಶ. ೧೧೧೨

ಈ ಶಾಸನದಲ್ಲಿ 'ಚಾಳುಕ್ಯ ವಿಕ್ರಮವರ್ಷದ ೪೨ನೆಯ ಹೇವಳಂಬಿ ಸಂವತ್ಸರದ ಪುಷ್ಯಮವಾಸೆ ಸೋಮವಾರ ಉತ್ತರಾಯಣ ಸಂಕ್ರಾಂತಿ ಕಾಲದ ಉಲ್ಲೇಖವನ್ನು ಸ್ಪಷ್ಟವಾಗಿ ನೀಡಲಾಗಿದೆ. ಇದು ಕ್ರಿ.ಶ.೧೧೧೬ ಡಿಸೆಂಬರ್ ೨೪, ಸೋಮವಾರಕ್ಕೆ ಸಮನಾಗುತ್ತದೆ. ೬ನೇ ವಿಕ್ರಮಾದಿತ್ಯನನ್ನು ಕುರಿತಾದ ಈ ಶಾಸನವು ೩೯ ಸಾಲುಗಳನ್ನು ಹೊಂದಿದ್ದು ೮ ರಿಂದ ೧೬ನೆಯ ಸಾಲಿನ ತನಕದ ವಿಷಯವು ಅಸ್ಪಷ್ಟವಾಗಿದ್ದರೂ ಉಳಿದಂತಹ ಭಾಗವು ವಿಶೇಷವಾದ ಮಾಹಿತಿಯನ್ನೊದಗಿಸುತ್ತಿದೆ. ವಿಕ್ರಮಾದಿತ್ಯನ ರಾಣಿ ಪಿರಿಯರಸಿ ಪಟ್ಟಮಹಾದೇವಿ ಮಪಯವತಿಯೂ ಅಧಿಕಾರದಲ್ಲಿ ಪಾಲ್ಗೊಂಡಿದ್ದರು. ಈ ಮಲಯವತಿಯ ಆಡಳಿತವರ್ಗಕ್ಕೆ ಸಂಬಂಧಿಸಿದಂತೆ ಪೆರ್ಗಡೆ ಬಾಸ್ಕರ ಇದ್ದನು. ಮತ್ತೊಬ್ಬನು ಭಾನುದೇವನಿದ್ದು, ಬುಹುಷಃ ಇವರ ಆಡಳಿತಕ್ಕೆ ಸೇರಿದವನಿರಬೇಕು. ಈ ಭಾನುದೇವನು ಶ್ರೀ ಧರ್ಮೇಶ್ವರ ದೇವರ ರಂಗಭೋಗಗಳಿಗಾಗಿ ಆಚಾರ್ಯ ಸೋಮೇಶ್ವರ ಪಂಡಿತರ ಕಾಲುಗಳಿಗರ್ಪಿಸಿ ದತ್ತಿ ನೀಡಿದ್ದ ವಿಷಯ ಶಾಸನದಲ್ಲಿದೆ.[೨೮]

೨೫. ಗ್ರಾಮ : ಸಿದ್ದಾಪೂರ

ತಾಲೂಕು : ಧಾರವಾಡ

ಸ್ಥಳ : ಹನುಮಂತ ದೇವಾಲಯದ–ಎದುರು

ಕಾಲ : ಕ್ರಿ.ಶ. ೧೧೨೦

ಶಾಸನದಲ್ಲಿ ಕಾಲವನ್ನು ಪ್ರಾರಂಭದಲ್ಲಿಯೇ'ಶ್ರೀಮತು ಚಾಳುಕ್ಯವಿಕ್ರಮ ಕಾಲದ ೪೫ನೆಯ ಸಾರ್ವ್ವರಿ ಸಂವತ್ಸರದ ಚೈತ್ರ ಚತುರ್ದಶಿ ಸೋಮವಾರವೆಂದಿದ್ದು, ಪಕ್ಷದ ಹೆಸರು ತಿಳಿಸಿಲ್ಲ. ಚೈತ್ರಮಾಸದಲ್ಲಿ ಎರಡು ಚತುರ್ದಶಿ ಬರುವುದರಿಂದ ಇದರ ಮಿತಿ ಕ್ರಿ.ಶ. ೧೧೨೦ ಮಾರ್ಚ ೧೬ ಅಥವಾ ಕ್ರಿ.ಶ. ೧೧೨೦ ಮಾರ್ಚ ೩೦ ಆಗಿರುವ ಸಾಧ್ಯತೆ ಇದೆ. ಪೂರ್ವೋಕ್ತ ದಿನದಂದು ಪೊಸವೊಳಲಿನ ಮೂಲಸ್ಥಾನದ ದೇವರ ಅಂಗರಂಗ ಭೋಗಕ್ಕಾಗಿ ನಾಗರಾಶಿ ಪಂಡಿತರಿಗೆ ವರ್ಷಂಪ್ರತಿ ಆರುವತ್ತೊಕ್ಕಲು ಒಂದು ಪಣಭೂಮಿಯನ್ನು ದತ್ತಿಯನ್ನಾಗಿ ನಾಗರಾಸಿ ಪಂಡಿತರಿಗರ್ಪಿಸಿದರು ಎಂದಿದೆ.[೨೯]

೨೬. ಗ್ರಾಮ : ಅಮರಗೋಳ

ತಾಲೂಕು : ಹುಬ್ಬಳ್ಳಿ

ಸ್ಥಳ : ಬನಶಂಕರಿ ದೇವಾಲಯ

ರಾಜವಂಶ : ಕಲ್ಯಾಣ ಚಾಲುಕ್ಯ

ಅರಸ : ವಿಕ್ರಮಾದಿತ್ಯ ೬

ಕಾಲ : ಕ್ರಿ.ಶ. ೧೧೨೦

ಸೌಧೋರೆ ಜಕ್ಕರಸನು ಪಲಸಿಗೆ ನಾಡಿನ ಉಂಕಲ್ಲಿಕಂಪಣದ ಅಂಬರಗೋಳದಲ್ಲಿ ಕೇಶವ ಭೈರವ ದೇವರ ಪ್ರತಿಷ್ಠಾಪಿಸಿದನು. ದೇವರಸ್ನಾನ, ನೈವೇದ್ಯಕ್ಕಾಗಿ ದೇವರಾಸಿ ಪಂಡಿತರ ಕಾಲುಗಳಿಗರ್ಪಿಸಿ ದತ್ತಿಯನ್ನು ನೀಡಿದನು.[೩೦]

೨೭. ಗ್ರಾಮ : ತಂಬೂರು

ತಾಲೂಕು : ಕಲಘಟಗಿ

ಸ್ಥಳ : ಬಸವಣ್ಣ ದೇವಾಲಯದ ಹೊರಗೆ

ರಾಜವಂಶ : ಕಲ್ಯಾಣ ಚಾಲುಕ್ಯ

ಅರಸ : ವಿಕ್ರಮಾದಿತ್ಯ ೬

ಕಾಲ : ಕ್ರಿ.ಶ. ೧೧೨೦

ತೃಟಿತ, ಅಸ್ಪಷ್ಟ; ಮಹಾಮಂಡಳೇಶ್ವರ ಗುವಲದೇವನಾಳುವಾಗ ಸೇನಗಚಾವುಂಡನಿಂದ ಪಣಿರಾಜ ದೇವಾಲಯ ನಿರ್ಮಾಣ.[೩೧]

೨೮. ಗ್ರಾಮ : ನಾವಳ್ಳಿ

ತಾಲೂಕು : ನವಲಗುಂದ

ಸ್ಥಳ : ಕಲ್ಮೇಶ್ವರ ದೇವಾಲಯದ ಎದುರು

ರಾಜವಂಶ : ಕಲ್ಯಾಣ ಚಾಲುಕ್ಯ

ಅರಸ : ವಿಕ್ರಮಾದಿತ್ಯ ೪

ಕಾಲ : ಕ್ರಿ.ಶ. ೧೧೨೧

ವಿಕ್ರಮಾದಿತ್ಯ ಸಾಮ್ರಾಜ್ಯವನ್ನಾಳುತ್ತಿರುವಾಗ ಈತನ ಆಳ್ವಿಕೆಯಲ್ಲಿ ಬೆಳ್ವಲ-೩೦೦, ಪುಲಿಗೆರೆ-೩೦೦ಗಳೂ ಸೇರಿದ್ದವು. ಆ ಸಮಯದಲ್ಲಿ ದಂಡನಾಯಕ ಸಾಯಿಪಯ್ಯ ಮತ್ತು ಪ್ರಮುಖ

ಕರಣಂಗಳು ಅಗ್ರಹಾರ ನಾಪೋರ್ಳೆಯ ಶ್ರೀಸ್ವಯಂಭೂ ಕಲಿದೇವಸ್ವಾಮಿ ದೇವರ ಅಂಗರಂಗಭೋಗ ದೇವಾಲಯಕ್ಕೆ ಭೂ ದತ್ತಿಯನ್ನು ಬಿಟ್ಟನು. ದಂಡನಾಯಕನು ಬಿಲ್ಲರಸರ ಒತ್ತಾಯದ ಮೇರೆಗೆ ಈ ದೇವಾಲಯಕ್ಕೆ ಬಂದಿದ್ದ ಉಲ್ಲೇಖವಿದೆ.[೨]

೨೯. ಗ್ರಾಮ : ಬೆಟದೂರು

ತಾಲೂಕು : ಕುಂದಗೋಳ

ಸ್ಥಳ : ಕಲ್ಮೇಶ್ವರ ದೇವಾಲಯದ ಎದುರು

ರಾಜವಂಶ : ಗೋವಾ ಕದಂಬ

ಅರಸ : ಜಯಕೇಶಿ ೨

ಕಾಲ : ಕ್ರಿ.ಶ. ೧೧೨೨

ಕಾಲ ೧೦೪೫ನೆಯ ಶುಭಕೃತರ ಬಹುಳ ಅಮವಾಸೆ, ಶುಕ್ರವಾರ ಸೂರ್ಯಗ್ರಹಣ ಪುಣ್ಯದಿನ ಅಂದರೆ ಇದು ಕ್ರಿ.ಶ. ೧೧೨೨ಕ್ಕೆ ಸಮವಾಗುತ್ತದೆ. ಈ ಶಾಸನವು ೬ನೇವಿಕ್ರಮಾದಿತ್ಯನ ಆಳ್ವಿಕೆಗೆ ಸಂಬಂಧಿಸಿದೆ. ಇದರ ಮೊದಲ ಎರಡು ಸಾಲುಗಳು ಅಳಿಸಿವೆ. ಮೂಲಸ್ಥಾನದೇವರಿಗೆ ಮತ್ತು ಅಗ್ರಹಾರಕ್ಕೆ ೧೦೦ ಕಂಬಗದ್ದೆ, ಮನೆ, ಅಂಗಡಿ, ಹೂವಿನ ತೋಟಗಳನ್ನು ಅಗ್ರಹಾರ ಕಿಸುವೆರೆಯ ೬೨ ಮಹಾಜನರು ಚಿಕ್ಕಬ್ಬೆಯ ಮಗ ಚವುಂಡುಗಳು, ಮಹಾದೇವ ಪುಣಂಗಿಯರು, ದೇವಧರಪೈಸಾಸರು, ಬವಸಿಗ ಕಲ್ಲಿಸೆಟ್ಟಿ ಸೇನಬೋವ ಬಲದೇವ ಬೇರೆ ಬೇರೆ ವ್ಯಕ್ತಿಗಳು ದಾನ ನೀಡಿದನ್ನು ಉಲ್ಲೇಖಿಸಿದೆ. ಇವನು ಕದಂಬವಂಶದ ಜಯಕೇಶಿದೇವನಿಗೆ ಸಾಮಂತನಾಗಿದ್ದನೆಂದು ತಿಳಿದು ಬರುತ್ತದೆ. ಈ ಶಾಸನದಲ್ಲಿ ನಾಣ್ಯದ ಮತ್ತು ತೆರಿಗೆಯ ಉಲ್ಲೇಖ ಇದೆ.[೩೩]

೩೦. ಗ್ರಾಮ : ನರೇಂದ್ರ

ತಾಲೂಕು : ಧಾರವಾಡ

ಸ್ಥಳ : ಶಂಕರಲಿಂಗ ದೇವಾಲಯದ–ಭಾವಣಿ

ರಾಜವಂಶ : ಕಲ್ಯಾಣ ಚಾಲುಕ್ಯ

ಅರಸ : ವಿಕ್ರಮಾದಿತ್ಯ ೬

ಕಾಲ : ಕ್ರಿ.ಶ. ೧೧೨೩, ೨೫, ೨೬

ಎಪಿಗ್ರಫಿಯಾ ಇಂಡಿಕಾದಲ್ಲಿ ಪ್ರಸ್ತಾಪಿಸಿರುವಂತೆ ಸಂಶೋಧಕ ಬಾರ್ನೆಟ್‌ರವರು ಈ ಶಾಸನವು ಈ ಗ್ರಾಮದಲ್ಲಿರುವ ಶಂಕರಲಿಂಗ ದೇವಾಲಯದ ಮೇಲ್ಛಾವಣಿಯಲ್ಲಿದೆಯೆಂದು ತಿಳಿಸಿದ್ದರು. ಪ್ರಸ್ತುತ ಈ ಶಾಸನದಲ್ಲಿ ಐದು ಕಾಲಗಳ ಉಲ್ಲೇಖ ಇದೆ.

೧. 'ಸಕವರ್ಷದ ೧೦೪೫ನೆಯ ಶುಭಕೃತ ಸಂವತ್ಸರದ ಆಶಾಢ ಬಹುಳ ೨ ಮಂಗಳವಾರದದ್ದು ದಕ್ಷಿಣಾಯನ ಸಂಕ್ರಾಂತಿ' ಎಂದು ಮೊದಲನೆಯ ಉಲ್ಲೇಖವಾಗಿದ್ದು ಇದು ಕ್ರಿ.ಶ. ೧೧೨೩ ಜೂನ್ ೨೬, ಕುಜವಾರಕ್ಕೆ ಸಮಾನವಾಗುತ್ತದೆ.

೨. 'ವಿಶ್ವಾವಸು' ಸಂವತ್ಸರದ ಅಶ್ವಯಜದಮಾಸ್ಯಯೊಳ್, ವಶಸಂಕ್ರಾಂತಿ' ಎರಡನೆಯ ಕಾಲಮಿತಿಯಿದ್ದು, ಇದು ಕ್ರಿ.ಶ. ೧೧೨೫ ಸೆಪ್ಪಂಬರ್ ೨೬ ಶನಿವಾರಕ್ಕೆ ಸರಿ ಹೊಂದುತ್ತದೆ.

೩. ಮೂರನೆಯ ತೇದಿಯು ಉತ್ತರಾಯಣ ಸಂಕ್ರಮಣದೆವಸಂ' ಎಂದಿದ್ದು, ಇತರ ಮಾಹಿತಿಯನ್ನು ನೀಡಿರದೇ ಇರುವುದರಿಣದ ಹಿಂದಿನ ತೇದಿಯ ಸಂವತ್ಸರವನ್ನು ಗ್ರಾಹ್ಯ ಮಾಡಿಕೊಂಡರೆ ಕ್ರಿ.ಶ. ಡಿಸೆಂಬರ್ ೨೪, ಗುರುವಾರಕ್ಕೆ ಕಾಲ ಸರಿಹೊಂದುತ್ತದೆ.

೪. 'ವಿಶ್ವಾವಸು ಸಂವತ್ಸರದ ಮಾಘ ಪುಣ್ಣಮೆಯನ್ನು ಸೋಮಗ್ರಹಣ' ಎಂಬ ಕಾಲದ ಮೊತಿಯು ನಾಲ್ಕನೇ ಬಾರಿ ಬಂದಿದ್ದು ಇದು ಕ್ರಿ.ಶ. ೧೧೨೬ ಜನೆವರಿ ೧೦ ರವಿವಾರಕ್ಕೆ ಸಮನಾಗುತ್ತದೆ.

೫. ಐದನೆಯ ಬಾರಿಗೆ ಇದೇ ತೇದಿಯು ಪುನರಾವೃತ್ತಿಯಾಗಿದೆ.

ಗೋವೆಯ ಕದಂಬ ಜಯಕೇಶಿದೇವರು ದೇಶವನ್ನಾಳುತ್ತಿರಲು ಅವರ ಪಟ್ಟದ ಮಹಾರಾಣಿಯಾದ ಮೈಳಲ ಮಹಾದೇವಿಯೂ ಕುಂದೂರಿನಲ್ಲಿ ನೆಲೆಸಿದ್ದು ಕೊಂಕಣ–೯೦೦, ಉಣಕಲ್ಲಬ್ಬಿಯೆರಡು ಮೂವತ್ತು(೩೨), ಕೊನ್ತಕುಳಿ–೩೦, ಹಾನಗಲ್ಲು–೫೦೦, ಉತ್ಸಗ್ರಾಮದಲ್ಲಿ ಕಾದರಳ್ಳಿಯೆರಡು ಮೂವತ್ತು (೩೨), ಪೊಳಲಗುದ್ದೆ–೩೦೦, ವೇಳುಗ್ರಾಮ–೩೦. ಹೈವ–೫೦೦ ಮತ್ತು ಕವಡಿ ದ್ವೀಪವನ್ನು ಆಳ್ವಿಕೆ ಮಾಡುತ್ತಿದ್ದಾಗ, ಮಹಾಸಾಮಂತಾಧಿಪತಿ, ಮೈಳಲ ಮಹಾದೇವಿಯ ಮನೆವೆರ್ಗಡೆ, ಶ್ರೀಮದ್ದಂಡನಾಯಕ ಲಕ್ಷ್ಮರಸನ ಕೋರಿಕೆಯ ಮೇರೆಗೆ ಜಯಕೇಶಿದೇವನು ಅರಕೆಯ ಶಂಕರದೇವರಿಗೆ ಕುಂದೂರವಾಡನಾಡಿನಲ್ಲಿ ಮತ್ತು ಮಾನಾಡಿನಲ್ಲಿ ಹುಲ್ಗುಂಡಿಯೊಳಗೆ, ಕುಂದೂರಿನಲ್ಲಿ ಅರೆಕೆಯಲ್ಲಿ ಹಿಂದೆ ಹೇಳಿದ ವಿವಿಧ ಕಾಲಗಳಲ್ಲಿ ಭೂದಾನವನ್ನು ನೀಡಿರುವರು. ಅದೇ ರೀತಿಯಾಗಿ ವಿಶ್ವಾವಸು ಸಂವತ್ಸರದ ಮಾಘ ಪುಣ್ಣಮೆಯೆಂದು ಕಾಶ್ಯಪಗೋತ್ರದ ಪ್ರಯಾಗೆ ಭಟ್ಟರಿಗೆ ಭೂದಾನವನ್ನು ಬಿಟ್ಟಿರುವ ಉಲ್ಲೇಖವು ವಿಸ್ತಾರವಾಗಿ ಉಲ್ಲೇಖವಾಗಿದೆ.[೩೪]

೩೧.	ಗ್ರಾಮ	:	ಸಿಂಗನಹಳ್ಳಿ
	ತಾಲೂಕು	:	ಧಾರವಾಡ
	ಸ್ಥಳ	:	ಕಲ್ಮೇಶ್ವರ ದೇವಾಲಯದ ಎದುರು
	ರಾಜವಂಶ	:	ಗೋವಾ ಕದಂಬ
	ಅರಸ	:	ಜಯಕೇಶಿ ೨
	ಕಾಲ	:	ಕ್ರಿ.ಶ ೧೧೨೩, ೨೪

ಈ ಶಾಸನವು ಅಪೂರ್ಣ, ಅಸ್ಪಷ್ಟವಾಗಿಯೂ ಇರುವುದರಿಂದ ಕಾಲದ ಮಿತಿಯು 'ಸಂವತ್ಸರಂ ೧೦೪೫ನೆಯ ಶೋಭಕೃತ್' ಎಂದಿದೆ. ನಿಖರವಾದ ದಿನಾಂಕದ ಉಲ್ಲೇಖವಿಲ್ಲ ಈ ಸಂವತ್ಸರವು ಕ್ರಿ.ಶ. ೧೧೨೩-೨೪ರ ಅವಧಿಯದ್ದಾಗಿದೆ. ಪ್ರಾಯಷಃ ಇದು ಗೋವೆಯ ಕದಂಬ ಅರಸ ಎರಡನೆಯ ಜಯಕೇಶಿಯ ಆಳ್ವಿಕೆಯ ಕಾಲದ್ದಾಗಿದ್ದಾಗಿದೆ. ಹೋಚಳೇಶ್ವರ ದೇವರ ನಿವೇದ್ಯಕ್ಕೆ, ಚೈತ್ರ ಪವಿತ್ರ ಜೀರ್ಣೋದ್ಧಾರಕ್ಕಾಗಿ ಭೂಮಿ ಮತ್ತು ಮನೆಗಳನ್ನು ದತ್ತಿ ನೀಡಲಾಗಿದೆ ಈ ಶಾಸನವನ್ನು ಬರೆದವನು ಪಿರಿಯರಸಿ ಮೈಳಲ ಮಹಾದೇವಿಯ ಶ್ರೀಕರಣದ ಸಿಂಗಣ..[೩೫]

೩೨. ಗ್ರಾಮ : ತಂಬೂರು

ತಾಲೂಕು : ಕಲಘಟಗಿ

ಸ್ಥಳ : ಬಸವಣ್ಣ ದೇವಾಲಯದ ಆವರಣ

ರಾಜವಂಶ : ಕಲ್ಯಾಣ ಚಾಲುಕ್ಯ

ಅರಸ : ವಿಕ್ರಮಾದಿತ್ಯ ೬

ಕಾಲ : ಕ್ರಿ.ಶ. ೧೧೨೪

ಭಂಡಸಾಲೆಯ ಬರ್ಮಣನಿಂದ ಸತ್ರಕ್ಕೆ ಭೂದಾನ ನೀಡಿರುವ ವಿಷಯವಿದೆ.[೩೬]

೩೩. ಗ್ರಾಮ : ಮಮ್ಮಿಗಟ್ಟಿ

ತಾಲೂಕು : ಧಾರವಾಡ

ಸ್ಥಳ : ಕಲ್ಮೇಶ್ವರ ದೇವಾಲಯ

ರಾಜವಂಶ : ಕಲ್ಯಾಣ ಚಾಲುಕ್ಯ

ಅರಸ : ವಿಕ್ರಮಾದಿತ್ಯ ೬

ಕಾಲ : ಕ್ರಿ.ಶ. ೧೨೨೪

ಶಾಸನದಲ್ಲಿ ಕಾಲವನ್ನು ಶ್ರೀಮಚ್ಚಾಳುಕ್ಯ ವಿಕ್ರಮ ವರ್ಷ ೪೯ನೆಯ ಕ್ರೋಧಿ ಸಂವತ್ಸರದ ಆಷಾಢ ಸುದ್ಧ ೫ ಆದಿತ್ಯವಾರವೆಂದಿದ್ದು, ಇದು ಕ್ರಿ.ಶ. ೧೧೨೪ ಜೂನ್ ೧೫ ಆದಿತ್ಯವಾರಕ್ಕೆ ಸಮನಾಗುತ್ತದೆ. ಆರನೆಯ ವಿಕ್ರಮಾದಿತ್ಯ ಹಾಗೂ ಗೋವೆಯ ಕದಂಬವಂಶದ ಮಹಾಮಂಡಳೇಶ್ವರ ಜಯಕೇಶಿದೇವ ಮತ್ತು ಪಿರಿಯರಸಿ ಮೈಳಲಮಹಾದೇವಿಯರು ರಾಜ್ಯವನ್ನಾಳುತ್ತಿದ್ದಾಗ ಪೂರ್ವೋಕ್ತದಿನದಂದು ಅರಣೆಗೆರೆಯ ಆಗರಿಗ ಮಲ್ಲಿಗಾವುಂಡನ ಮಗ ಉದಯಗಾವುಂಡನು ಕುನ್ನೂರ ಮಹಾಪಟ್ಟಣ ಹದಿನಾರುವರ್ಗ ಗಾವುಂಡನ ಮಗ ಉದಯಗಾವುಂಡರ ಪಂಚಮಠಸ್ಥಾನದ ಸನ್ನಿಧಿಯಲ್ಲಿ ಎರಣಗೆರೆಯ ಹಳ್ಳಿಯ ಅಗರರಿಗೆ ಅಲ್ಲಿಗಾವುಂಡನ ಮಗ ಉದಯ ಗಾವುಂಡನು ಕಲಿದೇವಸ್ವಾಮಿಯ ಸ್ಥಾನಾಚಾರ್ಯರಾದ ವಾಮಶಕ್ತಿ ಪಂಡಿತರಿಗೆ ೧೦೦ತಮ್ಮ ಗದ್ದೆಯನ್ನು,

ತೆಂಕಣದಿಕ್ಕಿಗೆ ಎರಡು ಮನೆಯ ನಿವೇಶನವನ್ನು ಬಿಟ್ಟ ಮತ್ತು ಉದಯಗಾವುಂಡನನ್ನು ಉಲ್ಲೇಖಿಸಲಾಗಿದೆ.[೩೭]

೩೪. ಗ್ರಾಮ : ಬಾವಿಹಾಳ

ತಾಲೂಕು : ಧಾರವಾಡ

ಸ್ಥಳ : ಮಲ್ಲಿಕಾರ್ಜುನ ದೇವಾಲಯದ ಎದುರು

ರಾಜವಂಶ : ಗೋವೆ ಕದಂಬ

ಅರಸ : ಜಯಕೇಶಿ ೨

ಕಾಲ : ಕ್ರಿ.ಶ. ೧೧೨೫

'ಶ್ರೀಮಚ್ಚಾಳುಕ್ಯ ವಿಕ್ರಮವರ್ಷ ೫೦ನೆಯ ವಿಶ್ವಾವಸು ಸಂವತ್ಸರದ ಪುಷ್ಯ ಸು(೧೦) ಸೋಮವಾರ ಉತ್ತರಾಯಣ ಸಂಕ್ರಾಂತಿ ವ್ಯತೀಪಾತ' ಎಂದಿದ್ದು, ಇದು ಕ್ರಿ.ಶ. ೧೧೨೫ ಡಿಸೆಂಬರ್ ೭, ಸೋಮವಾರಕ್ಕೆ ಸಮಾನವಾಗುತ್ತದೆ. ಗೋವೆಯ ಕದಂಬ ವಂಶದ ರಾಜ ಜಯಕೇಶಿದೇವನು ತನ್ನ ಮಡದಿಮೈಳಲ ಮಹಾದೇವಿಯೊಂದಿಗೆ ಪಲಸಿಗೆ ಮತ್ತು ಕೊಂಕಣ-೯೦೦ನ್ನು ಆಳುತ್ತಿರುವಲ್ಲಿ ಕುಂದೂರುನಾಡಾಧಿಕಾರಿಗಳಾದ-ಶ್ರೀನಳಯ 'ಶಿವರಾಜ' ಮಾನವನಿಧಿ' ನಾಗವರ್ಮ' ಆಶ್ರಿತ ಜನ ಕಲ್ಪವನಿಜಂ ಗಂಗಣ್ಣ ಅಭಿಮಾನಧನನಾದ ಶಂಕರಯ್ಯ ನೆಂಬುವವರು ಪೂರ್ವೋಕ್ತದಿನದಂದು ಹಲ್ಗುಂಡಿಯ ಮಾಂಡವ್ಯ ತೀರ್ಥದ ಮಲ್ಲಿಕಾರ್ಜುನ ದೇವರ ಅಂಗಭೋಗ ಇತ್ಯಾದಿಗಳಿಗೆ ಎರಡು ಮತ್ತರು ಭೂಮಿಯನ್ನು ಒಂದು ಮನೆಯನ್ನೂ ನೀಡಿದ ಉಲ್ಲೇಖವಿದೆ. ಅದಲ್ಲದೆ ಫಲ್ಗುಂಡಿಯ ಬೇಂಟೆಯ ರಜ್ಜಗಾವುಂಡ ಮೊದಲಾದ ಆರು ಜನಗಾವುಂಡರು ಒಂದುತೋಟವನ್ನು ದಾನ ನೀಡಿದ ವಿಷಯವೂ ಈ ಶಾಸನದಲ್ಲಿದೆ.[೩೮]

೩೫. ಗ್ರಾಮ : ನರೇಂದ್ರ

ತಾಲೂಕು : ಧಾರವಾಡ

ಸ್ಥಳ : ಮಲ್ಲಿಕಾರ್ಜುನ ದೇವಾಲಯದ

ರಾಜವಂಶ : ಕಲ್ಯಾಣ ಚಾಲುಕ್ಯ

ಅರಸ : ೬ನೇ ವಿಕ್ರಮಾದಿತ್ಯ

ಕಾಲ : ಕ್ರಿ.ಶ. ೧೧೨೫

ಕಾಲವನ್ನು 'ಶಕವರ್ಷಂ ೧೦೪೭ನೆಯ ವಿಶ್ವಾವಸು ಸಂವತ್ಸರದ ಭಾದ್ರಪದ ಬ೧೩ ಶುಕ್ರವಾರ ಮಹಾತಿಥಿಯುಗಾದಿ' ಎಂದು ದಾಖಲಿಸಿದೆ. ಯುಗಾದಿಯನ್ನು ಭಾದ್ರಪದ ಮಾಸದಲ್ಲಿ ತಿಳಿಸಿರುವುದು ವಿಶೇಷವಾಗಿದೆ. ಯುಗಾದಿಯು ಚೈತ್ರಮಾಸ ಅಂದರೆ ಎಪ್ರಿಲ್ ತಿಂಗಳಿನಲ್ಲಿ

ಬರುವುದರಿಂದ ಇಲ್ಲಿನ ಯುಗಾದಿಯನ್ನು ಸಂಕ್ರಾಂತಿಯಂದಿಟ್ಟು ಕೊಂಡರೆ ಕ್ರಿ.ಶ. ೧೧೨೫ ಅಗಸ್ಟ್ ೨೮, ಶುಕ್ರವಾರಕ್ಕೆ ಕಾಲವು ಸಮಾನಾಗುತ್ತದೆ. ಶಾಸನದ ಪ್ರಾರಂಭದಲ್ಲಿ ಕದಂಬ ರಾಜ್ಯದ ಆದಿದೇವನಾದ ಪಶ್ಚಿಮಾಂಭೋಧಿನಾಥನ ಸ್ತುತಿ ಇದೆ. ಪ್ರಾರಂಭದಲ್ಲಿ ಕದಂಬ ವಂಶವನ್ನು ವರ್ಣಿಸಲಾಗಿದ್ದು, ಚಟ್ಟಯದೇವ, ಜಯಕೇಶಿದೇವ, ಪೆರ್ಮಾಡಿದೇವ, ಜಯಕೇಶಿದೇವ-೨, ಆತನ ಮಡದಿ ಮೈಳಲಾದೇವಿ ಉಲ್ಲೇಖವಿದೆ. ವಿಶೇಷವಾಗಿ ಮೈಳಲ ಮಹಾದೇವಿಯ ಮನೆ ವರ್ಗ್ಗಡೆಯಾದ ಸಿಂಗರಸನು ಪೂರ್ವೋಕ್ತ ದಿನದಂದು ಕುಂದೂರಿನಲ್ಲಿರುವ ಭೂಮಿಯನ್ನು ತ್ರಿಭೋಗಾಬ್ಯಂತರ ಸಿದ್ಧಿಯಿಂದ ಕೊಟ್ಟ ವಿಚಾರ ಈ ಶಾಸನದಲ್ಲಿದೆ.[೩೯]

೩೬. ಗ್ರಾಮ : ಕುರುಡಿಕೇರಿ

ತಾಲೂಕು : ಹುಬ್ಬಳ್ಳಿ

ಸ್ಥಳ : ಕೆರೆಯ ಹತ್ತಿರದ ದಿಬ್ಬ

ರಾಜವಂಶ : ಗೋವೆ ಕದಂಬ

ಅರಸ : ಜಯಕೇಶಿ ೨

ಕಾಲ : ಕ್ರಿ.ಶ. ೧೧೨೬

ತೃಟಿತವಾಗಿರುವ ಈ ಶಾಸನದಲ್ಲಿ ಜಯಕೇಶಿದೇವನ ಪಟ್ಟದರಸಿ ಮಹಿಷ ಮೈಳಲದೇವಿಯು ಕುಂದೂರು ನೆಲೆವೀಡನ್ನು ನೋಡಿಕೊಳ್ಳುತ್ತಿದ್ದು, ಅ ಸಮಯದಲ್ಲಿ ರಾಣಿ ಮೈಳಲದೇವಿಯು ಕುಡಿಯೇಶ್ವರ ದೇವರಿಗೆ ದತ್ತಿನೀಡಿದ್ದುದರ ಜೊತೆಗೆ ಅರವತ್ತೊಕ್ಕಲರು ತಮ್ಮ ತೋಟದ ಎಲೆ-ಅಡಿಕೆ ನೀಡಿದರು. ಲಚ್ಚಿಕಬ್ಬೆ ದೇವರ ನಂದಾದೀವಿಗೆಗೆ ಎಣ್ಣೆಯನ್ನು ನೀಡಿದ ವಿಷಯ ತಿಳಿದು ಬರುತ್ತದೆ.[೪೦]

೩೭. ಗ್ರಾಮ : ಅಣ್ಣಿಗೇರಿ

ತಾಲೂಕು : ನವಲಗುಂದ

ಸ್ಥಳ : ಬ್ರಹ್ಮೇಶ್ವರ ದೇವಾಲಯ-ಬಾಗಿಲು ಹಣೆಪಟ್ಟಿ

ರಾಜವಂಶ : ಯಾದವರು

ಅರಸ : ಸಿಂಘಣ

ಕಾಲ : ಕ್ರಿ.ಶ. ೧೨೨೮

ತ್ರುಟಿತ, ರುದ್ರಯ್ಯ ಚಂದ್ರಯ್ಯರಿಂದ ಅಮೃತೇಶ್ವರ ದೇವಾಲಯದಲ್ಲಿನ ಧರ್ಮೇಶ್ವರ ದೇವಾಲಯದಕ್ಕೆ ನೀಡಿದ ದಾನವನ್ನು ದಾಖಲಿಸಿದೆ.[೪೧]

೩೮. ಗ್ರಾಮ : ಕಾಮಧೇನು

ತಾಲೂಕು : ಕಲಘಟಗಿ

ಸ್ಥಳ : ಕಲ್ಮೇಶ್ವರ ದೇವಾಲಯದ–ಎದುರು

ರಾಜವಂಶ : ಕಲ್ಯಾಣ ಚಾಲುಕ್ಯ

ಅರಸ : ಸೋಮೇಶ್ವರ ೩

ಕಾಲ : ಕ್ರಿ.ಶ. ೧೨೨೯

ತೃಟಿತ, ಮಲ್ಲಿಸೆಟ್ಟಿಯಿಂದ ಕಲಿದೇವರಿಗೆ ಯಾವುದೋ ದಾನವನ್ನು ನೀಡಿದ ಮಾಹಿತಿ ಇದೆ.[೪೨]

೩೯. ಗ್ರಾಮ : ಅಸ್ತಿಕಟ್ಟಿ

ತಾಲೂಕು : ಕಲಘಟಗಿ

ಸ್ಥಳ : ಹಾಳಾದ ಊರು

ರಾಜವಂಶ : ಕಲ್ಯಾಣ ಚಾಲುಕ್ಯ, ಹಾನಗಲ್ಲ ಕದಂಬ

ಅರಸ : ಸೋಮೇಶ್ವರ ೩, ತೈಲಪದೇಪ

ಕಾಲ : ಕ್ರಿ.ಶ. ೧೧೨೯

ಅತಿತೃಟಿತ, ಕೊಪ್ಪರ ಕೇಶಿಸೆಟ್ಟಿಯಿಂದ ದೇವರಿಗೆ ಭೂದಾನವನ್ನು ನೀಡಿದ್ದನ್ನು ದಾಖಲಿಸಿದೆ.[೪೩]

೪೦. ಗ್ರಾಮ : ಮದನಬಾವಿ

ತಾಲೂಕು : ಧಾರವಾಡ

ಸ್ಥಳ : ರಾಮಲಿಂಗೇಶ್ವರ ದೇವಾಲಯದ–ಎದುರು

ರಾಜವಂಶ : ಗೋವಾ ಕದಂಬ

ಅರಸ : ಜಯಕೇಶಿ ೨

ಕಾಲ : ಕ್ರಿ.ಶ. ೧೧೩೪–೩೮

ಶಾಸನದಲ್ಲಿ ೨ ಕಾಲಗಳ ಉಲ್ಲೇಖವಿದೆ. ಶಾಸನದ ೨೮ನೆಯ ಸಾಲಿನಲ್ಲಿ' ಚಾಳುಕ್ಯ ವಿಕ್ರಮಕಾಲದ ೫೨ನೆಯ ಕಾಳಯುಕ್ತ ಸಂವತ್ಸರದ ಕಾರ್ತಿಕ ಶು ೧೧ ಸೋಮವಾರವೆಂದು' ಇದು ಕ್ರಿ.ಶ. ೧೧೨೭ ಅಕ್ಟೋಬರ್ ೧೭, ಸೋಮವಾರಕ್ಕೆ ಸಮಾನಾಗುತ್ತದೆ. ಇನ್ನೊಂದು ಕಾಲದ ಮಿತಿಯು ೪೭ನೆ ಸಾಲಿನಲ್ಲಿದ್ದು, ಪ್ರಮಾದಿ ಸಂವತ್ಸರದ ಮಾಘಮವಾಸ್ಯ ಆದಿವಾರ ಸೂರ್ಯಗ್ರಹಣ ಕ್ರಿ.ಶ. ೧೧೩೪ ಜನೆವರಿ ರವಿವಾರಕ್ಕೆ ಸಮನಾಗುತ್ತದೆ.

ಈ ಶಾಸನ ಗೋವೆ ಕದಂಬ ಮನೆತನದ ೨ ಜಯಕೇಶಿಯ ಕಾಲದ್ದಾಗಿದೆ. ಭೂಲೋಕಮಲ್ಲ ೩ನೇ ಸೋಮೇಶ್ವರನು ಈ ಕಾಲದ ಚಕ್ರವರ್ತಿಯಾಗಿರುವ ಸಾಧ್ಯತೆ ಇದ್ದು, ಕದಂಬ ಮಹಾರಾಣಿ ಮೈಳಲದೇವಿ, ಯುವರಾಜ ಪೆರ್ಮಾಡಿದೇವ ಕುಮಾರ ವಿಜಯಾದಿತ್ಯರೊಡನೆ ಬೋಗೂರು ನೆಲೆವೀಡಿನಲ್ಲಿದ್ದ ಎರಡನೆಯ ಜಯಕೇಶಿಯ ಮಂದೂರಕಲ ಕಲಿದೇವಸ್ವಾಮಿಗೆ ೬ಮತ್ತರು ಭೂಮಿಯನ್ನು ದಾನ ನೀಡಿದ್ದು ಇಲ್ಲಿಯ ಎರಡನೇ ದತ್ತಿಯ ವಿಶೇಷವಾಗಿದೆ.[೪೪]

೪೧. ಗ್ರಾಮ : ಸಿದ್ದಾಪುರ

ತಾಲೂಕು : ಧಾರವಾಡ

ಸ್ಥಳ : ಶಿವಮಂಟಪದ–ಎದುರು

ರಾಜವಂಶ : ಗೋವಾ ಕದಂಬ

ಅರಸ : ಜಯಕೇಶಿ ೨

ಕಾಲ : ಕ್ರಿ.ಶ. ೧೧೩೧ನೇ ಶ

ಈ ಶಾಸನದಲ್ಲಿ ೨ತೇದಿಗಳ ಉಲ್ಲೇಖವಿದ್ದು, 'ಶ್ರೀಮಚ್ಚಾಳುಕ್ಯ ಭೂಲೋಕ ಶಖವರುಷ ೧೦೫೬ನೆಯ ಅನಂದ ಸಂವತ್ಸರ ಪೌಷ್ಯದಮವಾಸೆ ಸೂರ್ಯಗ್ರಹಣ ಆದಿತ್ಯವಾರ'ವೆಂದು ಉಲ್ಲೇಖವಿದ್ದು, ಇದು ಕ್ರಿ.ಶ. ೧೧೩೫ ಜನೆವರಿ ೧೩ ಆದಿತ್ಯವಾರಕ್ಕೆ ಸಮನಾಗುತ್ತದೆ. ಇನ್ನೊಂದು ಕಾಲವನ್ನು ಚಾಲುಕ್ಯ ವಿಕ್ರಮಾದಿತ್ಯ ೨೦ನೇಯ ದುಂದುಬಿ ಸಂವತ್ಸರ ಆಷಾಢಸುದ್ಧ ೮ ಸೋಮವಾರವೆಂದಿದ್ದು, ಇದು ಕ್ರಿ.ಶ. ೧೦೮೩ ಜೂನ್ ೬ ಸೋಮವಾರಕ್ಕೆ ಸಮಾನವಾಗುತ್ತದೆ. ಗೋವೆಯ ಕದಂಬ ಅರಸಜಯಕೇಶಿದೇವ ಮತ್ತು ಆತನರಾಣಿ ಮೈಳಲದೇವಿಯರು ನೆಲೆವೀಡಿನಲ್ಲಿ ಆಳುತ್ತಿರುವಾಗ ಪೊಸವೊಳವ(ಸಿದ್ದಾಪುರ) ಮೂಲಸ್ಥಾನದೇವರಿಗೆ, ಹಳ್ಳಿಗಾವುಂಡನು ದೇವದಾಸಿ ಪಂಡಿತರ ಮಗ ನಾಗರಾಸಿ ಪಂಡಿತರ ಕಾಲುಗಳಿಗೆ ನಮಿಸಿ ಮತ್ತು ಈತನ ಪುತ್ರ ಹುಲಿಯಮ್ಮನಸೆಟ್ಟಿ ನಂದಿಮಂಟಪ ಮತ್ತು ನಂದಿ ಮಾಡಿಸಿದ ವಿಷಯವಿದೆ.[೪೫]

೪೨. ಗ್ರಾಮ : ಸಿಂಗನಹಳ್ಳಿ

ತಾಲೂಕು : ಧಾರವಾಡ

ಸ್ಥಳ : ಕಲ್ಮೇಶ್ವರ ದೇವಾಲಯದ–ಎದುರು

ರಾಜವಂಶ : ಗೋವಾ ಕದಂಬ

ಅರಸ : ಜಯಕೇಶಿ ೨

ಕಾಲ : ಕ್ರಿ.ಶ. ೧೧೩೬

ಗೋವೆಯ ಕದಂಬರ ಅರಸ ಜಯಕೇಶಿಯಿಂದ ಸೋಮನಾಥ ದೇವರಿಗೆ ಭೂದಾನವನ್ನು ದಾಖಲಿಸಿದೆ.[೪೬]

೪೩. ಗ್ರಾಮ : ಜಿನ್ನೂರು

ತಾಲೂಕು : ಕಲಘಟಗಿ

ಸ್ಥಳ : ಕೆರೆಯ ಹತ್ತಿರ

ರಾಜವಂಶ : ಗೋವಾ ಕದಂಬ

ಅರಸ : ಜಯಕೇಶಿ ೨

ಕಾಲ : ಕ್ರಿ.ಶ. ೧೧೩೮

ಶಕವರ್ಷ ೧೦೬೦ನೆಯ ಕಾಳಯುಕ್ತ ಸಂವತ್ಸರದ ಅಕ್ಷಯ ತೃತಿಯ ಅಮವಾಸೆ ಆದಿವಾರ ಸೂರ್ಯ್ಯಗ್ರಹಣದಂದು' ಕಾಲವನ್ನು ನೀಡಿದ್ದು, ಇದು ಕ್ರಿ.ಶ. ೧೧೩೮ ಏಪ್ರಿಲ್ ೧೦ಕ್ಕೆ ಸರಿಹೊಂದುತ್ತದೆ.

೧. ಹೆಗ್ಗಡೆ ಬೀಚಣ್ಣನು ಸಾಂತಗಾವುಂಡನ ಪಾದಪೂಜೆ ಮಾಡಿ ಗ್ರಾಮೇಶ್ವರ ದೇವರಿಗೆ ನೈವೇದ್ಯಕ್ಕೆ ಹೊಸಗೆರೆಯ ಹರಿಯ ಗದ್ದೆ ಕಮ್ಮ-೨೦೦ ಹಕ್ಕಲು, ಕಮ್ಮ-೪೦೦ ಬಿಟ್ಟ ಉಲ್ಲೇಖವಿದೆ. ಅದೇ ರೀತಿಯಾಗಿ ಲವಳರ ಬೀಚಗಾವುಂಡ ಗಾವುಂಡ ಗ್ರಾಮೇಶ್ವರ ದೇವರ ನೈವೇದ್ಯಕ್ಕೆ ಯರಕೆರೆಯಮೊದಲೇರಿಯ ಗದ್ದೆ ಕಮ್ಮ-೫೨೫ನ್ನು ಸಂತಗಾವುಂಡ ಸಂಕದಾಸಿ ಪಂಡಿತ ದೇವರ ಪಾದಗಳಿಗರ್ಪಿಸಿ ಬಿಟ್ಟನು. ಕೊಂಡಸಬಲಕಣ ಮುದ್ದಗಾವುಂಡನ ಪಾದ ಪೂಜೆಮಾಡಿ ಗ್ರಾಮೇಶ್ವರ ದೇವರ ನೈವೇದ್ಯಕ್ಕೆ ಹೊದಗೆರೆಯ ಹರಿಯಗದ್ದೆ ಕಮ್ಮ-೧೫೯ನ್ನು ಬಿಟ್ಟನು. ಈ ದತ್ತಿಯ ವಿಷಯದ ನಂತರ ಶಾಸನ ತೃಟಿತವಾಗಿದ್ದು, ನಂತರ ಮೂಲಗಾರ ಬಾಸಂತಿಕಬ್ಬೆ ಸಾಂತಗಾವುಂಡಲ ಪಾದಮೂಜೆಗೆ ಕೊಟ್ಟು ಗ್ರಾಮೇಶ್ವರ ದೇವರ ನೈವೇದ್ಯಕ್ಕೆಂದುಹಿರಿಯ ಕೆರೆಯ ಬಚ್ಚಲ ಕೆಳಗೆ ಬಿಟ್ಟ ಗದ್ದೆ ಕಮ್ಮ ೫ಮತ್ತೆ ತೆಲ್ಲಗರೊಕ್ಕಲು ದೇವರ ಸೊಡರೆಣ್ಣೆಗೆಂದು ಕೊಟ್ಟ ಉಲ್ಲೇಖವಿದೆ.[೪೭]

೪೪. ಗ್ರಾಮ : ಅಣ್ಣಿಗೇರಿ

ತಾಲೂಕು : ನವಲಗುಂದ

ಸ್ಥಳ : ಉಳವಿ ಬಸಪ್ಪನಗುಡಿ-ಎದುರು

ರಾಜವಂಶ : ಕಲ್ಯಾಣ ಚಾಲುಕ್ಯ

ಅರಸ : ಜಗದೇಕಮಲ್ಲ ೨

ಕಾಲ : ಕ್ರಿ.ಶ. ೧೧೫೯

ಶಾಸನದಲ್ಲಿ ಸಿದ್ಧಾರ್ತಿ ಸಂವತ್ಸರದ ಸೋಮವಾರ ಉತ್ತರಾಯಣ ಸಂಕ್ರಾಂತಿಯಂದು ನೀಡಲಾಗಿದ್ದು, ಜಗದೇಕಮಲ್ಲದೇವ ವರ್ಷವೆಂದು ಉಲ್ಲೇಖಿಸಿರುವುದರಿಂದ ಇದು ಕ್ರಿ.ಶ. ೧೧೫೯

ಡಿಸೆಂಬರ್ ೨೫ಕ್ಕೆ ಸರಿಹೊಂದುತ್ತದೆ. ಶಾಸನವು ತ್ರುಟಿತವೂ, ಅಪೂರ್ಣವೂ ಆಗಿದೆ. ಶಾಸನದ ಪ್ರಾರಂಭದಲ್ಲಿ ಪೂರ್ವೋಕ್ತ ಕಾಲ ಉಲ್ಲೇಖಿತವಾಗಿದ್ದು, ಆ ದಿನದಂದು ದಾನವನ್ನು ನೀಡಿದ್ದುದರ ಮಾಹಿತಿಯಿದ್ದಿರುವ ಸಾಧ್ಯತೆ ಇದೆ.[೪೮]

೪೫. ಗ್ರಾಮ : ಗುಡಿಗೇರಿ

ತಾಲೂಕು : ಕುಂದಗೋಳ

ಸ್ಥಳ : ತಾಲೂಕು ಕಛೇರಿಯ ಹತ್ತಿರ

ರಾಜವಂಶ : ಕಲ್ಯಾಣ ಚಾಲುಕ್ಯ

ಅರಸ : ಜಗದೇಕಮಲ್ಲ ೨

ಕಾಲ : ಕ್ರಿ.ಶ. ೧೧೩೯

ಈ ಶಾಸನದ ದಿನ ಸಿದ್ದಾರ್ಥ ಪುಷ್ಯಶುದ್ದ ೫ ಗುರುವಾರ ಎಂದು ಹೇಳಿದೆ. ಇದು ಕ್ರಿ.ಶ. ೧೧೩೯ ಡಿಸೆಂಬರ್ ೨೭, ಬುಧವಾರಕ್ಕೆ ಸಮನಾಗುತ್ತದೆ. ಶಾಸನವು ಸಂಪೂರ್ಣ ತ್ರುಟಿತಗೊಂಡಿದ್ದು, ಪನ್ನಿರ್ವ್ಗಾವುಂಡಗಳು ನಾಗೇಶ್ವರ ದೇವರಿಗೆ ಹತ್ತುನೀಳ, ಹದಿನೈದು ಕೈಮೂವತ್ತೆರಡು ಗೇಣು ಭೂಮಿಯನ್ನು ದಾನ ನೀಡಿದುದರ ಉಲ್ಲೇಖವಿದೆ.[೪೯]

೪೬. ಗ್ರಾಮ : ಕುರಹಟ್ಟಿ

ತಾಲೂಕು : ನವಲಗುಂದ

ಸ್ಥಳ : ಹನುಮಂತ ದೇವಾಲಯದ ಎದುರು

ರಾಜವಂಶ : ಕಲ್ಯಾಣ ಚಾಲುಕ್ಯ

ಅರಸ : ಜಗದೇಕಮಲ್ಲ ೨

ಕಾಲ : ಕ್ರಿ.ಶ. ೧೧೪೨

ಈ ಶಾಸನದಲ್ಲಿ ಕಾಲವನ್ನು.......ಚಾಳುಕ್ಯ'ಪ್ರತಾಪ ಚಕ್ರವರ್ತಿ ಜಗದೇಕಮಲ್ಲ ವರ್ಷದ(೪)ನೆಯ ದುಂದುಬಿ ಸಂವತ್ಸರದ ಫಾಲ್ಗುಣ....ಗ್ರಹಣದಂದು' ಎಂದಷ್ಟೇ ನೀಡಿದ್ದು, ಮಾಸ ಮತ್ತು ತಿಥಿಯ ಉಲ್ಲೇಖವಿಲ್ಲ. ಅದಲ್ಲದೆಯೇ ಗ್ರಹಣವು ದುಂಧುಬಿ ಸಂವತ್ಸರದಲ್ಲಿ ಸಂಭವಿಸದೆ ದುರ್ಮತಿ ಸಂವತ್ಸರದ ಫಾಲ್ಗುಣಮಾಸದಲ್ಲಿ ಚಂದ್ರಗ್ರಹಣವು ಸಂಭವಿಸಿತ್ತು. ಶಾಸನವು ಇಮ್ಮಡಿ ಜಗದೇಕಮಲ್ಲನ ಮಹಾಪ್ರಧಾನ ಕಡಿ ಮಾಳಪಯ್ಯನು ಮಾಳೇಶ್ವರ ದೇವರು ಮತ್ತು ಅದರ ಸಹಚರ ದೇವರುಗಳಾದ ಮಾಧವ, ಶಂಕರ, ಸುಕುಮೇಶ್ವರ ಮತ್ತು ಸೂರ್ಯದೇವರುಗಳಿಗೆ ದತ್ತಿ ನೀಡಿದ್ದಾನೆ. ಶಾಸನವನ್ನು ಬರೆದ ಪೊಂಬೊಳಲವೂರೆಯ ಭಟ್ಟನ ಹೆಸರಿದೆ.[೫೦]

೪೭. ಗ್ರಾಮ : ಹುಣಸಿಕಟ್ಟಿ

ತಾಲೂಕು : ಕಲಘಟಗಿ

ಸ್ಥಳ : ಮಲ್ಲಿಕಾರ್ಜುನ ದೇವಾಲಯದ-ಬಲಗಡೆ

ರಾಜವಂಶ : ಗೋವಾ ಕದಂಬ

ಅರಸ : ಪೆರ್ಮಾಡಿದೇವ

ಕಾಲ : ಕ್ರಿ.ಶ. ೧೧೪೨

ಶಾಸನದಲ್ಲಿ ಕಾಲವನ್ನು 'ಸ್ವಸ್ತಿಶಕವರ್ಷದ ೧೦೬೫ನೆಯ ದುಂದುಭಿ ಸಂವತ್ಸರದ ಪುಷ್ಯಶುದ್ಧ ೧೦ ಗುರುವಾರದಂದು ಉತ್ತರಾಯಣ ಸಂಕ್ರಾಂತಿ ವ್ಯತೀಪಾತದಂದು' ಎಂದು ನೀಡಿದ್ದು, ಇದು ಕ್ರಿ.ಶ. ೧೧೪೨ ಡಿಸೆಂಬರ್ ೨೪ ಗುರುವಾರಕ್ಕೆ ಸಮನಾಗುತ್ತದೆ. ಶಾಸನವು ಚಾಳುಕ್ಯ ಚಕ್ರವರ್ತಿ ಜಗದೇಕಮಲ್ಲನ ಆಳ್ವಿಕೆಗೆ ಸಂಬಂಧಿಸಿದ್ದು, ಆತನ ಪಾದಪದ್ಮೋಪಜೀವಿಯಾದ ಪೆರ್ಮಾಡಿದೇವನು ಆಳುತ್ತಿರುವಾಗ ಆತನ ಪದ್ಮೋಪಜೀವಿಯಾದ ಹುಲಿಗೊಡ ಮುದ್ದಗೌಂಡನು ಮತ್ತು ಹೊಲ್ಲಗಾವುಂಡನು ಪೂರ್ವೋಕ್ತ ದಿನದಂದು ಹೋಲೇಶ್ವರ ದೇವರ ನೈವೇದ್ಯಕ್ಕೆಂದು ಗದ್ದೆಯನ್ನು ಧಾರಾಪೂರ್ವಕವಾಗಿ ದಾನ ಬಿಟ್ಟ ವಿಚಾರವಿದೆ.[೫೧]

೪೮. ಗ್ರಾಮ : ಸಂಶಿ

ತಾಲೂಕು : ಕುಂದಗೋಳ

ಸ್ಥಳ : ಗುರುಬಸಪ್ಪ ಕುಂಬಿಯವರ ಮನೆಯ ಹತ್ತಿರ

ರಾಜವಂಶ : ಕಲ್ಯಾಣ ಚಾಲುಕ್ಯ

ಅರಸ : ೨ನೇ ಜಗದೇಕಮಲ್ಲ

ಕಾಲ : ಕ್ರಿ.ಶ. ೧೧೪೪

ಶಾಸನದಲ್ಲಿ ೩ತೇದಿಗೆಳಿವೆ. ಮೊದಲನೆಯದು 'ಶ್ರೀಮತ್‌ಚ್ಚಾಳುಕ್ಯ ಪ್ರತಾಪ ಜಗದೇಕಮಲ್ಲಿ ಚಕ್ರವರ್ತಿ ಪೌಷ್ಯದಮವಾಸೆ ಸೋಮವಾರ ವ್ಯತೀಪಾತ ಉತ್ತರಾಯಣ ಸಂಕ್ರಮಣ ಸೂರ್ಯೋಗ್ರಹಣ ಎಂದಿದೆ. ಚಾಳುಕ್ಯ ಜಗದೇಕಮಲ್ಲ ಚಕ್ರವರ್ತಿಯ ಆಳ್ವಿಕೆಯ ಕಾಲದಲ್ಲಿ ಸೂರ್ಯಗ್ರಹಣ ನಡೆದಂತಹ ದಿನವನ್ನು ಗಣನೆಗೆ ತೆಗೆದುಕೊಂಡರೆ ಕ್ರಿ.ಶ. ೧೧೪೪ ಡಿಸೆಂಬರ್ ೨೪ಕ್ಕೆ ಸರಿಹೊಂದುತ್ತದೆ. ಇನ್ನೊಂದು ತೇದಿಯು ಆಷಾಢದಮವಾಸೆ ಎಂದು ಉಲ್ಲೇಖವಿದೆ.

ಶಾಸನದಲ್ಲಿ ಮೂರು ಪ್ರಾರ್ಥನಾಶ್ಲೋಕಗಳಿವೆ. ಸಂಶಿ(ಸಂಸಿ) ಅಗ್ರಹಾರದ ದವಳೇಶ್ವರ ದೇವರಿಗೆ ನಾಲ್ಕುನೂರು ಮಹಾಜನರು ಅಂಗಡಿ ಮನೆಗಳನ್ನು ಅಯ್ಯಾವೊಳೆ ಐನೂರ್ವರು ಪುರವರಾಧೀಶ್ವರರು ಕೆಲವು ತೆರಿಗೆಗಳಿಂದ ಬಂದ ಹಣವನ್ನು ತಂಬುಲಿಗೆ ಸಾಸಿರ್ವರು ಸಹ

ಕೂಡಿ ದೇವರ ಕಾರ್ಯಕ್ಕೆ ದತ್ತಿ ನೀಡಿದರು. ದತ್ತಿಯನ್ನು ಕಾಳಾಮುಖ ಆಚಾರ್ಯ ಈಶಾನ್ಯ ಶಕ್ತಿ ಪಂಡಿತರಿಗೆ ಅರ್ಪಿಸಿದ ಉಲ್ಲೇಖವಿದೆ.[೫೨]

೪೯. ಗ್ರಾಮ : ತಂಬೂರು

ತಾಲೂಕು : ಕಲಘಟಗಿ

ಸ್ಥಳ : ಬಸವಣ್ಣ ದೇವಾಲಯ

ರಾಜವಂಶ : ಕಲ್ಯಾಣ ಚಾಲುಕ್ಯ

ಅರಸ : ೨ನೇ ಜಗದೇಕಮಲ್ಲ

ಕಾಲ : ಕ್ರಿ.ಶ. ೧೧೪೬

ಶಾಸನದಲ್ಲಿ ಕಾಲವನ್ನು 'ಶಕವರ್ಷಂ ೧೦೬೬ನೆಯ ರಕ್ತಾಕ್ಷಿ ಸಂವತ್ಸರದ ಪುಷ್ಯದಮವಾಸೆಯ ಸೋಮವಾರ ಉತ್ತರಾಯಣ ಸಂಕ್ರಮಣ ವ್ಯತೀಪಾತಮುಂ' ಎಂದು ನೀಡಿದ್ದು, ಇದು ಕ್ರಿ.ಶ. ೧೧೪೪ ಡಿಸೆಂಬರ್ ೨೫, ಸೋಮವಾರಕ್ಕೆ ಸರಿಹೊಂದುತ್ತದೆ. ಜಗದೇಕಮಲ್ಲನು ರಾಜ್ಯವನ್ನಾಳುತ್ತಿರಲು ಆತನು ಪದ್ಮೋಪಜೀವಿ ಜಯಕೇಶಿ ದೇವನು ತನ್ನ ರಾಜಧಾನಿ ಗೋವೆಯೊಳಿದ್ದು ಕೊಂಕಣ-೯೦೦, ಪಲಸಿಗೆ, ಕವಡಿ ದ್ವೀಪವನ್ನು ಆಳುತಿದ್ದನು. ಆತನ ಸಹೋದರನು ಶ್ರೀತ್ರಿಭುವನ ಮಲ್ಲದೇವನು. ಜಯಕೇಶಿ ಪತ್ನಿಯ ಮೈಳಲದೇವಿಯು ಇವರಿಬ್ಬರ ಪುತ್ರರು ಪೆರ್ಮಾಡಿದೇವ, ವಿಜಯಾದಿತ್ಯ ಮತ್ತು ಮಗಳು ಸಾವಿತ್ರಿಯು, ಈ ಜಯಕೇಶಿದೇವನು ಪಾದಪದ್ಮೋಪ ಜೀವಿಯಾದ ಮಹಾಪ್ರಚಂಡ ದಂಡನಾಯಕ ಮಾದಿರಾಜಯ್ಯನು ಮಾವಳೆನಾಡ ಬಳಿಯ ತಮ್ಮಿಯೂರು, ಪನ್ನಿರ್ಪಳ್ಳಿ, ಹುಲಗೂಡು, ಕಿರುವತ್ತಿ ಕೋಟೆಯನ್ನು ಅನೇಕ ಪ್ರಭುಸ್ವಾಮ್ಯದಿಂದ ಆಳುತ್ತಿರಲು ಪೂರ್ವೋಕ್ತ ದಿನದಂದು ತನ್ನ ಮಗನಾದ ನಾದಸಿಂಗ್ ದೇವನ ಯಶೋಭಿವೃದ್ಧಿಗೆ ಚೌಡೇಶ್ವರ ದೇವರ ಅಂಗಭೋಗ, ರಂಗಭೋಗ ಮತ್ತು ಖಂಡಸ್ಫುಟಿತ ಜೀರ್ಣೋದ್ಧಾರಕ್ಕೆಂದು ನರಕಸಮೂಹ, ಹನ್ನವಣೆಗರು, ತೇಲಿಗರು, ಸೇಣಿಗರು ಕೂಡಾ ಪಾಗವನ್ನು ಕೊಟ್ಟ ವಿಚಾರವಿದೆ.[೫೩]

೫೦. ಗ್ರಾಮ : ಅಮ್ಮಿನಭಾವಿ

ತಾಲೂಕು : ಧಾರವಾಡ

ಸ್ಥಳ : ಜೈನ ಬಸದಿ-ಎದುರು

ರಾಜವಂಶ : ಕಲ್ಯಾಣ ಚಾಲುಕ್ಯ

ಅರಸ : ೨ನೇ ಜಗದೇಕಮಲ್ಲ

ಕಾಲ : ಕ್ರಿ.ಶ. ೧೧೪೬

ಈ ಶಾಸನದಲ್ಲಿ ಕಾಲವನ್ನು 'ಪ್ರತಾಪ ಚಕ್ರವರ್ತಿಜಗದೇಕ ಮಲ್ಲಾಭ್ಯುದಯ ವರ್ಷದ ೮ನೆಯ ಕ್ರೋಧನ ಸಂವತ್ಸರ ಫಾಲ್ಗುಣದಮವಾಸ್ಯೆ ಬ್ಯತೀಪಾತಂ ಕೂಡಿದ ಪುಣ್ಯತಿಥಿಯೊಳ್

ಎಂದು ಉಲ್ಲೇಖವಿದ್ದು, ಇದು ಕ್ರಿ.ಶ. ೧೧೪೬ ಮಾರ್ಚ ೧೪, ಗುರುವಾರಕ್ಕೆ ಸರಿಹೊಂದುತ್ತದೆ. ಜಗದೇಕಮಲ್ಲಿ ದೇವನು ತುಳಾಪುರುಷನಾದ ಸಂದರ್ಭದಲ್ಲಿ ಮಹಾಮಂಡಳೇಶ್ವರ ಸೇನಾಪತಿ.......ಕನ್ನಡಸಂಧಿ ವಿಗ್ರಹಿ, ದಂಡನಾಯಕ ಬಮ್ಮಣಯ್ಯ ಗೋಸಹಸ್ರದಾನ, ಪೃಥ್ವಿದಾನ, ಸಪ್ತಸಾಗರ ಈ ಮೂರುದಾನಗಳನ್ನು ಮಾಡಿದನು. ಅಲ್ಲದೇ ತನ್ನ ಅಧೀನದಲ್ಲಿದ್ದ ಅಗ್ರಹಾರ ಅಮ್ಮಿನಬಾವಿಯನ್ನು ಪುನರ್‌ದತ್ತಿಯನ್ನು ಮಾಡಿ ಅಲ್ಲಿಯೇ ಸ್ವಯಂಭೂ ಮಾಲಸ್ಥಾನ ದೇವರಿಗೆ ದತ್ತಿ ನೀಡಿದನು ಮತ್ತು ಮೂಲಸ್ಥಾನ ದೇವರಿಗೆ ಮಹಾಜನಗಳು ಅಧಿಕಾರಿಗಳು ನರಕರರು ಭೂಮಿ, ಚಿನ್ನ, ಗದ್ಯಾಣ, ಹಣ ಮುಂತಾದವುಗಳನ್ನು ದತ್ತಿನೀಡಿದರು. ಅಲ್ಲದೇ ಇಲ್ಲಿಯ ಅಧಿಕಾರಿ ರುದ್ರದೇವ ಅಮ್ಮಿಬಾವಿಯನ್ನು ಪರಮೇಶ್ವರ ದತ್ತಿಯಾಗಿ ನೀಡಿದ್ದಾನೆ.[೫೪]

೫೧.

ಗ್ರಾಮ	:	ಬೆಲವಂತರ
ತಾಲೂಕು	:	ಕಲಘಟಗಿ
ಸ್ಥಳ	:	ಊರ ಓಣಿಯಲ್ಲಿ
ರಾಜವಂಶ	:	ಕಲ್ಯಾಣ ಚಾಲುಕ್ಯ
ಅರಸ	:	ಜಗದೇಕಮಲ್ಲ ೨
ಕಾಲ	:	ಕ್ರಿ.ಶ. ೧೧೪೯

ಸ್ವಸ್ತಿ ಶಕವರ್ಷಂ ೧೦೭೩ನೆಯ ಶುಕ್ಲಸಂವತ್ಸರದ ಚೈತ್ರಸು ೫ ಸೋಮವಾರ ಸಂಕ್ರಮಣ ವ್ಯತೀಪಾತಮುಂ'ಎಂದು ಕಾಲದ ಉಲ್ಲೇಖವಿದ್ದು, ಇದು ಕ್ರಿ.ಶ. ೧೧೪೯ ಮಾರ್ಚ ೨೮ಕ್ಕೆ ಸರಿಹೊಂದುತ್ತದೆ.

ಶ್ರೀಮತ್ ಜಗದೇಕಮಲ್ಲದೇವನು ಆಳುತ್ತಿರಲು, ಆತನ ಪಾದ ಪದ್ಮೋಪಜೀವಿ ಜಯಕೇಶಿದೇವ, ಅವನ ಮಡದಿ ಮೈಳಲದೇವಿಗೆ ಪೆರ್ಮಾಡಿದೇವ ಮತ್ತು ವಿಜಯಾದಿತ್ಯ ಇಬ್ಬರು ಮಕ್ಕಳಿದ್ದರು. ಇವರಲ್ಲಿ ಪೆರ್ಮಾಡಿದೇವನು ಕೊಂಕಣ-೯೦೦, ಪಲಸಿಗೆ ಪನ್ನಿರ್ಚಾಸಿರವನ್ನು ಕಾವಡಿದ್ವೀಪ ಆಳುತ್ತಿರಲು, ಆತನ ಪಾದಪದ್ಮೋಪಜೀವಿ ಶ್ರೀಮತ್ ದಂಡನಾಯಕ ಮಾದಿರಾಜಯ್ಯನು ತಮ್ಮಿಯೂರು, ಪನ್ನವಳ್ಳಿ, ಮಾವಳ್ಳಿ, ಕೋಟೆ, ಕುರುವತ್ತಿ, ಯಮ್ಮನಬಾವಿ ಮತ್ತು ನೆಲ್ಕುಮದೆಗಳನ್ನು ಆಳುತ್ತಿರಲು ಆತನ ಸಾಮಂತ ಕಗ್ಗನು ನೆಲ್ಕುಂದೆಯನ್ನಾಳುತ್ತಿರಲು ಆತನ ಮಡದಿ ಲಕ್ಷ್ಮೀಯಕ್ಕನ ಹಿರಿಯ ಸಹೋದರನಾದ ಹೆರ್ಗಡೆಕಾಮನು ಹಡವಳೇಶ್ವರ ಶಿವಾಲಯವನ್ನು ಗ್ರಾಮದಲ್ಲಿ ನಿರ್ಮಿಸಿದನು. ಈ ದೇವರ ಅಂಗ, ರಂಗ, ಭೋಗ ನೈವೇದ್ಯಕ್ಕೆಂದು ಖಂಡಸ್ಫುಟಿತ ಜೀರ್ಣೋದ್ದಾರಕ್ಕೆಂದು ಮುಳಗುಂದ ಶ್ರೀ ಸ್ವಯಂಭೂ ದೇವರ ಸ್ಥಾನಾಚಾರ್ಯರಾದ ವಿಕೋಟಿ ಚಕ್ರವರ್ತಿ ವಾಮದೇವ ಪಂಡಿತರ ಶಿಷ್ಯರಾದ ವಿಶ್ವೇಶ್ವರ ಪಂಡಿತರ ಕಾಲಂಕರ್ಚಿ ಭೂದಾನವನ್ನು ಕೊಟ್ಟ ಉಲ್ಲೇಖ ಇದೆ.[೫೫]

೫೨. ಗ್ರಾಮ : ಅರೆಕುರಹಟ್ಟಿ

ತಾಲೂಕು : ನವಲಗುಂದ

ಸ್ಥಳ : ಹನುಮಂತ ದೇವಾಲಯದ ಎದುರು

ರಾಜವಂಶ : ಕಲ್ಯಾಣ ಚಾಲುಕ್ಯ

ಅರಸ : ತೈಲ ೩

ಕಾಲ : ಕ್ರಿ.ಶ. ೧೧೫೪

ತ್ರುಟಿತ, ಮುಮ್ಮುರಿದಂಡು ಮತ್ತು ಹಿರಿಯಕುರಿಹಟ್ಟಿಯ ಐವತ್ತೊಕ್ಕಲುಗಳಿಂದ ಕವಲೇಶ್ವರ ದೇವರಿಗೆ ವಿವಿಧದಾನ ಮಾಡಿದ್ದನ್ನು ಉಲ್ಲೇಖಿಸಿದೆ.[೫೬]

೫೩. ಗ್ರಾಮ : ತಂಬೂರು

ತಾಲೂಕು : ಕಲಘಟಗಿ

ಸ್ಥಳ : ಬಸವಣ್ಣ ದೇವಾಲಯದ

ರಾಜವಂಶ : ಕಲ್ಯಾಣ ಚಾಲುಕ್ಯ

ಅರಸ : ತೈಲ ೩

ಕಾಲ : ಕ್ರಿ.ಶ. ೧೧೫೬

ಶಾಸನದಲ್ಲಿ ಕಾಲವನ್ನು 'ಶಕವರ್ಷಂ ೧೦೭೭ನೆಯ ಧಾತು ಸಂವತ್ಸರದ ಪುಷ್ಯಶುದ್ಧ ಸೋಮವಾರಂ ಸಂಕ್ರಾಂತಿಯಮಾಗೆ' ಎಂದು ನೀಡಲಾಗಿದ್ದು ಇದು ಕ್ರಿ.ಶ.೧೧೫೬ ಡಿಸೆಂಬರ್ ೨೪, ಸೋಮವಾರಕ್ಕೆ ಸರಿಹೊಂದುತ್ತದೆ. ಮಲ್ಲಿದೇವರು ರಾಜ್ಯವನ್ನಾಳುತ್ತಿರಲು ಆತನ ಮಹಾಮಂಡಳೇಶ್ವರನಾದ ಪೆರ್ಮಾಡಿದೇವನು ಕೊಂಕಣ-೯೦೦ ಮತ್ತು ಪಲಸಿಗೆ ಪನ್ನಿರ್ಚಾಸಿರವನ್ನು ಆಳುತ್ತಿರಲು ಆತನ ಪಾದ ಪದ್ಮೋಪಜೀವಿ ತಮ್ಮಿಯೂರ ಒಡೆಯ ಮಲ್ಲಿರಸನು ತಮ್ಮಿಯೂರು, ಹುಲಿಗೋಡು ಮತ್ತು ಮಾವಳ್ಳಿ ಈ ರೀತಿಯಾಗಿ ಹನ್ನೆರಡು ಗ್ರಾಮಗಳನ್ನಾಳುತ್ತಿರಲು, ಚಾವುಂಡೇಶ್ವರ ನಾರಾಯಣ ದೇವರ ಅಂಗರಂಗಭೋಗ, ಸ್ನಾನನೈವೇದ್ಯಕ್ಕೆಂದು ದೇವಾಲಯದಲ್ಲೇ ಇರುವ ಬಾಣಜಿಗರು, ಸೇನಿಗರಾದಿಯಾಗಿ ಎಲ್ಲರೂ ವರೇಶ್ವರನಾಥರ ಕಾಲನ್ನು ತೊಳೆದು ಪೂರ್ವೋಕ್ತ ದಿನದಂದು ಭೂದಾನವನ್ನು ಬಿಟ್ಟ ಉಲ್ಲೇಖವಿದೆ.[೫೭]

೫೪. ಗ್ರಾಮ : ಅಣ್ಣಿಗೇರಿ

ತಾಲೂಕು : ನವಲಗುಂದ

ಸ್ಥಳ : ಹನುಮಂತ ದೇವಾಲಯ

ರಾಜವಂಶ : ಕಲಚೂರಿ

ಅರಸ : ಬಿಜ್ಜಳ

ಕಾಲ : ಕ್ರಿ.ಶ. ೧೧೫೭

ಶಾಸನದಲ್ಲಿ ಕಾಲವನ್ನು ತ್ರಿಭುವನಮಲ್ಲಿ ಬಿಜ್ಜಣದೇವವರ್ಷದ ೨ನೇಯ ಈಶ್ವರ ಸಂವತ್ಸರದ ಪುಷ್ಯಬಹುಳ ೮ಬುಧವಾರ ಉತ್ತರಾಯಣ ಸಂಕ್ರಮಣದನ್ನು ನೀಡಿದ್ದು, ಇದು ಕ್ರಿ.ಶ. ೧೧೫೭, ಡಿಸೆಂಬರ್೨೫ ಬುಧವಾರಕ್ಕೆ ಸಮನಾಗಿರುತ್ತದೆ. ಚಾಳುಕ್ಯ ಚಕ್ರವರ್ತಿ ತ್ರಿಭುವನ ಮಲ್ಲದೇವ ಬಿಜ್ಜಲದೇವ ಕಾಲಕ್ಕೆ ಸೇರಿದ್ದು, ಆತನಪಾದ ಪದ್ಮೋಪಜೀವಿ ಶ್ರೀಧರ ದಂಡಾಧಿಪತಿಯು ಆಳುತ್ತಿರುವನು. ಈ ಸಂದರ್ಭದಲ್ಲಿ ಆತನ ವಂಶಾವಳಿಯ ವರ್ಣನೆಯಿದೆ. ಈತನು ಕೌಂಡಿಲ್ಯ ಗೋತ್ರದವನು ಬಹುಪ್ರಸಿದ್ದನೂ ಆಗಿದ್ದನೆಂದು ತಿಳಿಸುತ್ತಿದೆ. ಈತನು ಪೂರ್ವೋಕ್ತದಿನದಂದು ರಾಜ್ಯಾಧ್ಯಕ್ಷರಾದ ಭೀವಣಯ್ಯನಾಯಕರು, ಬೊಪ್ಪಯ್ಯನಾಯಕರು, ಸೋವಣಯ್ಯನಾಯಕರು ಮತ್ತು ವೇಸುಗಿನಾಯಕರು ಮೊದಲಾದ ಸಮ್ಮುಖದಲ್ಲಿ ದಕ್ಷಿಣ ವಾರಣಾಸಿ ಎಂದು ಕರೆಯಲ್ಪಡುವ ಶ್ರೀ ಧೋರೇಶ್ವರ ದೇವರಿಗೆ ಖಂಡಸ್ಪುಟಿತ ಜೀರ್ಣೋದ್ಧಾರಕ್ಕೆಂದು ೨೦ಮತ್ತರು ಭೂಮಿಯನ್ನು ದಾನ ನೀಡಿರುವ ಉಲ್ಲೇಖವಿದೆ, ಶಾಸನವನ್ನು ಕಂಡರಿಸಿದವನು ಜಿನ್ನೋಜನಪುತ್ರ.[೫೮]

೫೫. ಗ್ರಾಮ : ಸಿದ್ದಾಪುರ

ತಾಲೂಕು : ಧಾರವಾಡ

ಸ್ಥಳ : ಸಿದ್ದೇಶ್ವರ ದೇವಾಲಯ–ಎದುರು

ರಾಜವಂಶ : ಗೋವಾ ಕದಂಬ

ಅರಸ : ಪೆರ್ಮಾಡಿದೇವ

ಕಾಲ : ಕ್ರಿ.ಶ. ೧೧೫೮

ಶಾಸನದಲ್ಲಿ ಕಾಲವನ್ನು 'ಶಕವರ್ಷಂ ೧೦೮೦ನೆಯ ಬಹುಧ್ಯಾನ್ಯ ಸಂವತ್ಸರದ ಆಶಾಡದಮವಾಸ್ಯೆ ಸೋಮವಾರದಂದು ದಕ್ಷಿಣಾಯನ ಸಂಕ್ರಾಂತಿವ್ಯತೀಪಾತ' ಎಂದಿದೆ. ಇದು ಕ್ರಿ.ಶ. ೧೧೫೮ ಜೂನ್ ೩೦, ಸೋಮವಾರಕ್ಕೆ ಸಮನಾಗುತ್ತದೆ. ಶ್ರೀಮನ್ಮಹಾಯುವರಾಜ ಕುಮಾರನಾದ ಶ್ರೀವಿಜಯಾದಿತ್ಯ ದೇವರಸರು ಸಂಪಗಾಡಿಯಲ್ಲಿ ನೆಲೆಸಿದ್ದು, ಪಲಸಿಗೆಯನ್ನು, ಕೊಂಕಣ–೯೦೦ನ್ನು ನೋಡಿಕೊಳ್ಳುತ್ತಿರುವಲ್ಲಿ ಹೊಸವೊಳಲು ಪ್ರಭುಮುಖ್ಯರಾದ ದಾಮೋದರ ಭಟ್ಟೋಪಾಧ್ಯಾಯರು ಮತ್ತು ನಾಲ್ವರು ಪ್ರಭುಮುಖ್ಯರೂ, ಅರುವತ್ತೊಕ್ಕಲು, ತೋಂಟಿಗ ಹೈನೂರ್ವರು ಪೂರ್ವೋಕ್ತ ಕಾಲದಂದು ಕಿತ್ತೂರು–೩೦ರ ಬಳಿಯ ಬಾಡ ಹೊಸವೊಳಲ ಶ್ರೀಪಂಚಲಿಂಗದೇವರ ಅಂಗರಂಗಭೋಗಕ್ಕೂ, ನೈವೇದ್ಯಕ್ಕೂ, ಖಂಡಸ್ಪುಟಿತ ಜೀರ್ಣೋದ್ದಾರಕ್ಕೆಂದು ಭೂದಾನ ಬಿಟ್ಟ ಉಲ್ಲೇಖವಿದೆ.[೫೯]

೫೬. ಗ್ರಾಮ : ಮಡಕಿಹೊನ್ನಳ್ಳಿ
ತಾಲೂಕು : ಕಲಘಟಗಿ
ಸ್ಥಳ : ಕಲ್ಮೇಶ್ವರ ದೇವಾಲಯ-ಆವರಣ
ರಾಜವಂಶ : ಗೋವಾ ಕದಂಬ
ಅರಸ : ಪೆರ್ಮಾಡಿದೇವ
ಕಾಲ : ಕ್ರಿ.ಶ. ೧೧೫೮

ಆದಿತ್ಯಯ್ಯನು, ರುದ್ರಶಕ್ತಿ ಪಂಡಿತರಿಗೆ ನೀಡಿದ ದಾನ ಹಾಗೂ ಉಗುರೇಶ್ವರನಿಗೆ ಉಗುರಮೂನೂರ್ವರಿಂದ ದಾನಮಾಡಿದ್ದನ್ನು ದಾಖಲಿಸಿದೆ.[೬೦]

೫೭. ಗ್ರಾಮ : ಮಿಶ್ರಿಕೋಟೆ
ತಾಲೂಕು : ಕಲಘಟಗಿ
ಸ್ಥಳ : ರಾಮೇಶ್ವರ ದೇವಾಲಯ
ರಾಜವಂಶ : ಗೋವಾ ಕದಂಬ
ಅರಸ : ಪೆರ್ಮಾಡಿದೇವ
ಕಾಲ : ಕ್ರಿ.ಶ. ೧೧೫೮

ಪುಲಿವರದ ಮಹಾಪ್ರಭು ದಂಡನಾಯಕ ಮಲ್ಲರಸ ಹಾಗೂ ಪ್ರಭು ಮಲ್ಲಿದೇವರು ಮಾಜೇಶ್ವರ ದೇವರಿಗೆ ಬಿಟ್ಟದಾನದ ಉಲ್ಲೇಖವಿದೆ.[೬೧]

೫೮. ಗ್ರಾಮ : ಅಣ್ಣಿಗೇರಿ
ತಾಲೂಕು : ನವಲಗುಂದ
ಸ್ಥಳ : ಅಮೃತೇಶ್ವ ಗುಡಿಯ-ಪ್ರಾಕಾರದಲ್ಲಿ
ರಾಜವಂಶ : ಕಲಚೂರಿ
ಅರಸ : ಬಿಜ್ಜಳ
ಕಾಲ : ಕ್ರಿ.ಶ. ೧೧೬೧

ಈ ಶಾಸನದಲ್ಲಿ ಕಾಲವನ್ನು ತ್ರಿಭುವನಮಲ್ಲ ಬಿಜ್ಜಣದೇವರ್ಷದ ೫ನೇಯ(ವಿಷಂ)ಸಂ....ಶುದ್ಧ ೧೪ನೇ(ಸೋಮವಾರ) ದಕ್ಷಿಣಾಯನ ಸಂಕ್ರಮಣ ವ್ಯತಿಪಾತದಂದು ಎಂದಿದೆ. ಮಾಸದ ಉಲ್ಲೇಖವಿರುವುದಿಲ್ಲ ದಕ್ಷಿಣಾಯನ ಸಂಕ್ರಾಂತಿಯನ್ನು ಗಣನೆಗೆ ತೆಗೆದುಕೊಂಡರೆ ಕ್ರಿ.ಶ. ಜೂನ್ ೨೬ ಸೋಮವಾರಕ್ಕೆ ಸರಿ ಹೊಂದಿರುತ್ತದೆ.

ತೃಟಿತವಾಗಿರುವ ಈ ಶಾಸನವು ಕಾವ್ಯಶೈಲಿಯಲ್ಲಿ ರಚಿತವಾಗಿದೆ. ಇದು ಬಿಜ್ಜಳ ರಾಜನ ಕಾಲದ ಶಾಸನವಾಗಿದ್ದು, ಆತನನ್ನು ಮಹಾಮಂಡಳೇಶ್ವರ ಕಾಳಾಂಜರಪುರವರಾಧೀಶ್ವರಂ ಕಳಚುರ್ಯ್ಯಕುಲ ಮಾರ್ತಾಂಡನುರ ಮೊದಲಾಗಿ ಹೊಗಳಲಾಗಿದೆ. ರಾಜೂಗಿಚಮೂಪ ನಾಗಲಾದೇವಿ, ಸಿದ್ದುಗಿದಂಡನಾಥ ಮೊದಲಾದವರ ಹೆಸರು ಕಂಡುಬಂದಿದ್ದು, ವಿಷಯ ಅಸ್ಪಷ್ಟವಾಗಿದೆ. ಅನಂತರ ಹೆರ್ಗ್ಗಡೆ ದಂಡನಾಯಕ ಶ್ರೀಧರಯ್ಯಂಗಳು ಪೂರ್ವೋಕ್ತದಿನದಂದು, ದಕ್ಷಿಣವಾರಣಾಸಿ ದಿವ್ಯತೀರ್ಥ ಅಮೃತೇಶ್ವರ ದೇವರ ರಂಗಪೂಜೆಗಾಗಿ ೧೨ ಮತ್ತರು ಭೂಮಿಯನ್ನು, ಸೋಮಯಾಜಿಯರ ಪುತ್ರ ಮಾಧವದೇವಭಟ್ಟೋಪಾಧ್ಯಾಯರ ಪುತ್ರ ದಾಸಭಟ್ಟೋಪಾಧ್ಯಾಯರ ಪುತ್ರ ದಾಸಭಟ್ಟೋಪಾಧ್ಯಾಯರಿಗೆ ದೇವಾಲಯದಲ್ಲಿ ಪುರಾಣವನ್ನು ಹೇಳುವವರಿಗೆ ಭೂದಾನವನ್ನು ನೀಡಿದ ಉಲ್ಲೇಖವಿದೆ.[೨]

೪೯. ಗ್ರಾಮ : ಹಾಳಸೀಗೆಕಟ್ಟೆ

ತಾಲೂಕು : ಕಲಘಟಗಿ

ಸ್ಥಳ : ಹನುಮಂತ ದೇವಾಲಯದ ಹಾಳುಮಂಟಪ

ರಾಜವಂಶ : ಗೋವಾ ಕದಂಬ

ಅರಸ : ಪೆರ್ಮಾಡಿದೇವ

ಕಾಲ : ಕ್ರಿ.ಶ. ೧೧೬೨

ಅರಸನಿಂದ ಸಿದ್ದೇಶ್ವರ ದೇವರಿಗೆ ಮಾಡಿದ ತೆರಿಗೆದಾನದ ಬಗ್ಗೆ ದಾಖಲಿಸಿದೆ,[೬೩]

೫೦. ಗ್ರಾಮ : ಅಮ್ಮಿನಭಾವಿ

ತಾಲೂಕು : ಧಾರವಾಡ

ಸ್ಥಳ : ಮಲ್ಲಿಕಾರ್ಜುನ ದೇವಾಲಯ

ರಾಜವಂಶ : ಗೋವಾ ಕದಂಬ

ಅರಸ : ಪೆರ್ಮಾಡಿದೇವ

ಕಾಲ : ಕ್ರಿ.ಶ. ೧೧೬೩

ಈ ಶಾಸನದಲ್ಲಿ ಕಾಲದ ಉಲ್ಲೇಖವನ್ನು '೧೭ನೆಯ ಶುಕ್ಲ ಸಂವತ್ಸರದ ಪುಷ್ಯ ಪುಂಣಮೆ ಆದಿವಾರದಂದು ಸೋಮಗ್ರಹಣಮಾಣೆ' ಎಂದು ಕಾಲದ ಉಲ್ಲೇಖ ನೀಡಿದೆ. ಶಿವಚಿತ್ತ ಪೆರ್ಮಾಡಿದೇವನು ಗೋವೆ, ಕೊಂಕಣ, ಪಲಸಿಗೆ ನಾಡನ್ನು ಆಳುತ್ತಿದ್ದನು. ಅಲ್ಲಿ ಅಮ್ಮಯನಬಾಯಿ ನಾನ್ನೂರು ಮಹಾಜನರ ಒಂದು ಅಗ್ರಹಾರವಾಗಿತ್ತು. ಅದರಲ್ಲಿ ಬೆಳವಡಿಗೇರಿಯು ನಾನ್ನೂರು ಜನರಕೇರಿ ಇಲ್ಲಿ ಮಾಡ ಬಪ್ಪನು ಪಾರ್ಶ್ವಗೋಲು ಮತ್ತರು ಭೂಮಿಯನ್ನು ಮಲ್ಲಿಕಾರ್ಜುನ ದೇವರಿಗೆಂದು ದತ್ತಿ ಬಿಟ್ಟನು. ಮತ್ತು ನಾನ್ನೂರು ಬ್ರಾಹ್ಮಣರಿಂದ ಪಡೆದ ಎರಡು ಮತಗಳನ್ನು

ದೇವರ ಚೈತ್ರಪವಿತ್ರ, ಗಣಪೂಜೆಗಾಗಿ, ಈ ದೇವಾಲಯದ ಆಚಾರ್ಯ ವೀರಭದ್ರ ಗುರುಗಳ ಶಿಷ್ಯ ಅಮೃತರಾಣಿ ಪಂಡಿತ ಹಾಗೂ ಬೊಪ್ಪಣ್ಣನ ಉಲ್ಲೇಖವಿದೆ.[೬೪]

೬೧. ಗ್ರಾಮ : ಬೊಕ್ಯಾಪುರ

ತಾಲೂಕು : ಧಾರವಾಡ

ಸ್ಥಳ : ವೀರಭದ್ರ ದೇವಾಲಯ-ಎದುರು

ರಾಜವಂಶ : ಗೋವಾ ಕದಂಬ

ಅರಸ : ಪೆರ್ಮಾಡಿದೇವ

ಕಾಲ : ಕ್ರಿ.ಶ. ೧೧೬೩

ಕಾಲದ ಉಲ್ಲೇಖವನ್ನು 'ಶ್ರೀ ಕಾದಂಬ ಶಿವಚಿತ್ತವೀರ ಪೆರ್ಮಾಡಿದೇವ ವರ್ಷದ ೧೭ನೆಯ ಶುಭಾನು ಸಂವತ್ಸರದ ಪುಷ್ಯಮಾಸ ಶುದ್ಧ ೧೦ ಸೋಮವಾರ ಸಂಕ್ರಮಣವೆಂದು ನೀಡಲಾಗಿದ್ದು, ಇದು ಕ್ರಿ.ಶ. ೧೧೬೩ ಡಿಸೆಂಬರ್ ೯, ಸೋಮವಾರಕ್ಕೆ ಸಮಾನವಾಗುತ್ತದೆ. 'ಚತುರಾಶಿ ನಗರಾಧಿಷ್ಠಿತ ಅಷ್ಟಾದಶಾಶ್ವಮೇಧ ದೀಕ್ಷಾದೀಕ್ಷಿತ ಕುಲ ಪ್ರಸೂತನೂ' ಕೀರ್ತಿಮಾರ್ತಾಂಡನೂ, ಶ್ರೀಮತ್ ಮಹಾಮಂಡಳೇಶ್ವರನೂ ಕೊಂಕಣ ಚಕ್ರವರ್ತಿಯೂ ಆದ ಶ್ರೀಶಿವಚಿತ್ತವೀರ ಪೆರ್ಮಾಡಿದೇವನು ಅಪ್ಪರ ಸಿಂಗೆರೆಯ ಶ್ರೀ ಸ್ವಯಂಭೂ ದೇವರ ನೈವೇದ್ಯಕ್ಕೆಂದು, ಚೈತ್ರ ಪವಿತ್ರಕ್ಕೆಂದು, ಖಂಡಸ್ಫುಟಿತ ಜೀರ್ಣೋದ್ಧಾರಕ್ಕೆಂದು ಜೇರಿಜವಾಡದ ಹೊಲದೊಳಗೆ ತಡಗೋಡ ಹೊಲದ ಸೀಮೆಯಿಂ ಮೂಡಲು, ಹಗರಗೆಯ ಹೊಲಸೀಮೆಂದು ದಕ್ಷಿಣಕ್ಕೆ ನರೇಂದ್ರಪುರದಲ್ಲಿ ಪ್ರಚಲಿತದಲ್ಲಿದ್ದ ಹಿರಿಯ ಕೋಲಿನ ಪ್ರಮಾಣದಲ್ಲಿ ಒಂದು ಮತ್ತರು, ದಕ್ಷಿಣಕ್ಕೆ ಹನ್ನೆರಡು ಮತ್ತರು ಭೂಮಿಯನ್ನು ಮತ್ತು ರಾಜಹಸ್ತ ಪ್ರಮಾಣದಲ್ಲಿ ಕೆಲವು ಭೂಮಿಯನ್ನು ನೀಡಿದ ಉಲ್ಲೇಖವಿದೆ. ಅದಲ್ಲದೇ ಇವನ ಪಾದ ಪದ್ಮೋಪಜೀವಿಯಾದ ಸವಡಿಯ ಕಾವೆ ಸಾಮಂತನೂ ಮತ್ತು ಮಳ್ಳಸಣಗೆಯ ಸಾಮಂತನೂ ತಮ್ಮ ಆಳ್ವಿಕೆಗೊಳಪಟ್ಟ ದುಮ್ಮವಾಡದಲ್ಲಿ ಭತ್ತದ ಗದ್ದೆಯನ್ನೂ ಅದೇರೀತಿಯಾಗಿ ತಡಕೋಡದ ಪನ್ನಿರ್ವರು ಸಂಕ್ರಮಣದಂದು ಕೇರಿಯ ಹುಳಿಲೇಶ್ವರ ಪೂರ್ವದಲ್ಲಿ ೨೧ಕಯ್ಯ ಭೂಮಿಯನ್ನು ದೇವರಿಗೆ ಸಮರ್ಪಿಸಿದ ವಿಷಯವಿದೆ.[೬೫]

೬೨. ಗ್ರಾಮ : ಶೇಡಂಬಿ

ತಾಲೂಕು : ಕಲಘಟಗಿ

ಸ್ಥಳ : ಹಾಳಾದ ಊರು

ರಾಜವಂಶ : ಗೋವಾ ಕದಂಬ

ಅರಸ : ಪೆರ್ಮಾಡಿದೇವ

ಕಾಲ : ಕ್ರಿ.ಶ. ೧೧೬೪

ತ್ರುಟಿತಗೊಂಡಿರುವ ಈ ಶಾಸನದಲ್ಲಿ, ರೇಜೇಶ್ವರ ದೇವಾಲಯಕ್ಕೆ ನೀಡಿದ ಭೂದಾನದ ಉಲ್ಲೇಖವಿದೆ.[೬೬]

೬೩. ಗ್ರಾಮ : ಭಟ್ಟಿಕೊಪ್ಪ

ತಾಲೂಕು : ಕಲಘಟಗಿ

ಸ್ಥಳ : ಹಾಳಾದ ಊರು

ರಾಜವಂಶ : ಗೋವಾ ಕದಂಬ

ಅರಸ : ಪೆರ್ಮಾಡಿದೇವ

ಕಾಲ : ಕ್ರಿ.ಶ. ೧೧೬೫

ಸ್ವಸ್ತಿ ಶಕವರ್ಷ ೧೦೮೭ ಪಾರ್ಥಿವ ಸಂವತ್ಸರ ವೈಶಾಖಶುದ್ಧ ಪಂಚಮಿ ಸೋಮವಾರ ವ್ಯತೀಪಾತ ಸಂಕ್ರಮಣವೆಂದು ಕಾಲದ ಉಲ್ಲೇಖವಿದೆ. ಇದು ಕ್ರಿ.ಶ. ೧೧೬೫ ಏಪ್ರೀಲ್ ೧೯, ಸೋಮವಾರಕ್ಕೆ ಸರಿ ಹೊಂದುತ್ತದೆ. ಮಹಾಮಂಡಳೇಶ್ವರ ಶಿವಚಿತ್ತ ವೀರ ಪೆರ್ಮಾಡಿದೇವನ ಬಗ್ಗೆ ತಿಳಿಸುತ್ತಾ, ಈತನು ಕೊಂಕಣ-೯೦೦, ಪಲಸಿಗೆ ಪನ್ನಿರ್ಚಾಸಿರ, ಕವಡೆ ದ್ವೀಪವನ್ನು ಅಳುತ್ತಿರಲು ಓರೊಡೆಯ ಚಟ್ಟಿಮಯ್ಯನೂ, ಕೇಸಿರಾಜ ಮತ್ತು ವಾಮಯ್ಯ ನಾಯಕರು ಮಾವಳ್ಳಿ-೧೨ನ್ನು ಅಳುತ್ತಿರಲು, ಕರುವಗಾವುಂಡ ಮತ್ತು ಚಂಡ ವೈಯಕಸುತನೂ, ಬಲ್ಲಗಾವುಂಡಿಯ ಪತಿಯೂ ಆದ ಬರ್ಮ್ಮಗಾವುಂಡನು ತನ್ನ ತಂದೆಯ ಹೆಸರಿನಲ್ಲಿ ಕರುವೇಶ್ವರ ದೇವಾಲಯವನ್ನು ಮಾವಳ್ಳಿಯ ಬಳಿಯಿರುವ ಒಳ್ಳೆಯಕೊಳದಲ್ಲಿ ನಿರ್ಮಿಸಿದನು. ಈ ದೇವಾಲಯದ ಅಂಗರಂಗ, ಭೋಗಕ್ಕೆ, ಖಂಡಸ್ಫುಟಿತ ಜೀರ್ಣೋದ್ದಾರಕ್ಕೆಂದು ಮಾವಳಿಯ ಮೂವರೊಡೆಯರಿಗೆ ಪಾದ ಪೂಜೆಯನ್ನು ಮಾಡಿ ಪೂರ್ವೋಕ್ತ ದಿನದಂದು ಭೂದಾನವನ್ನು ಬಿಟ್ಟ ಉಲ್ಲೇಖವಿದೆ.[೬೭]

೬೪. ಗ್ರಾಮ : ಬ್ಯಾಹಟ್ಟಿ

ತಾಲೂಕು : ಹುಬ್ಬಳ್ಳಿ

ಸ್ಥಳ : ಕಲ್ಮೇಶ್ವರ ದೇವಾಲಯ-ಗೋಡೆ

ರಾಜವಂಶ : ಗೋವಾ ಕದಂಬ

ಅರಸ : ಪೆರ್ಮಾಡಿದೇವ

ಕಾಲ : ಕ್ರಿ.ಶ. ೧೧೬೬

ತ್ರುಟಿತ, ಅಸ್ಪಷ್ಟ; ಗ್ರಾಮೇಶ್ವರ ದೇವರಿಗೆ ಬಿಟ್ಟ ಭೂದಾನವನ್ನು ದಾಖಲಿಸಿದೆ.[೬೮]

೬೫. ಗ್ರಾಮ : ಹರಸಂಬಿ

ತಾಲೂಕು : ಕಲಘಟಗಿ

ಸ್ಥಳ : ಊರ ಹೊರಗೆ, ಸೋಮಲಿಂಗ ದೇವಾಲಯ

ರಾಜವಂಶ : ಗೋವಾ ಕದಂಬ

ಅರಸ : ಪೆರ್ಮಾಡಿದೇವ

ಕಾಲ : ಕ್ರಿ.ಶ. ೧೧೭೦

ಈ ಶಾಸನದಲ್ಲಿ ಎರಡು ಕಾಲಗಳಿದ್ದು, ಮೊದಲನೆಯದು 'ಕಾದಂಬ ಶಿವಚಿತ್ತವೀರ ಪೆರ್ಮಾಡಿದೇವ ವರ್ಷದ ೨೩ನೆಯ ವಿಕೃತ ಸಂವತ್ಸರದ ಜೇಷ್ಠ ಶುದ್ಧ ಪಂಚಮಿ ಬೃಹಸ್ಪತಿ ಉತ್ತರಾಯಣ ಸಂಕ್ರಾಂತಿ ವ್ಯತೀಪಾತ ಎಂದು ಇದ್ದು, ಇದು ಕ್ರಿ.ಶ. ೧೧೭೦ ಮೇ ೨೧, ಗುರುವಾರ್ಕಕೆ ಸರಿಹೊಂದುತ್ತದೆ. ಇನ್ನೊಂದು ಕಾಲವನ್ನು 'ಕದಂಬ ಶ್ರೀಶಿವಚಿತ್ತ ವೀರ ಪೆರ್ಮಾಡಿದೇವ ವರ್ಷದ ೨೫ನೆಯ ಖರ ಸಂವತ್ಸರದ ಭಾದ್ರಪದ ಶುದ್ಧ ತದಿಗೆ ಸೋಮವಾರ ಸಂಕ್ರಮಣ ವ್ಯತೀಪಾತವೆಂದಿದ್ದು, ಇದು ಕ್ರಿ.ಶ.೧೧೭೧ ಅಗಸ್ಟ್ ೯, ಸೋಮವಾರಕ್ಕೆ ಸರಿ ಹೊಂದುತ್ತದೆ.

ಚಾಲುಕ್ಯ ಚಕ್ರವರ್ತಿ ಜಗದೇಕಮಲ್ಲನು ರಾಜ್ಯವನ್ನಾಳುತ್ತಿರುವಾಗ, ಆತನ ಪಾದ ಪದ್ಮೋಪಜೀವಿ ಮಹಾಮಂಡಳೇಶ್ವರ ಶಿವಚಿತ್ತ ವೀರ ಪೆರ್ಮಾಡಿದೇವನು ಗೋವೆಯ ರಾಜಧಾನಿಯಲ್ಲಿರಲು ಗ್ರಾಮ ಲೆಕ್ಕಾಧಿಕಾರಿ ಸೋಮಗಾವುಂಡನು ಮೊದಲನೆಯ ದಿನದಂದು ಹಸುರಗೆಯ ಸೋಮೇಶ್ವರ ದೇವರ ಅಂಗ, ರಂಗಭೋಗಕ್ಕೆ ಖಂಡಸ್ಫುಟಿತ ಜೀರ್ಣೋದ್ದಾರಕ್ಕೆ ಬಾಗುಳಗೆರೆಯ ದಿವ್ಯಶಕ್ತಿ ಪಂಡಿತರ ಕಾಲಂಕರ್ಚಿ ಭೂದಾನವನ್ನು ಬಿಟ್ಟ ಉಲ್ಲೇಖವಿದೆ. ಅದೇ ರೀತಿಯಾಗಿ ಇನ್ನೊಂದು ಉಲ್ಲೇಖದ ಕಾಲದಲ್ಲಿ ಸುಂಕದ ಅಧಿಕಾರಿ ಅಕ್ಕಾದೇವಿ ಮತ್ತು ಮದುವಯ್ಯಂಗಳವರು ಹಸರುಗೆಯ ಸೊಮೇಶ್ವರದೇವರ ನಂದಾದೀವಿಗೆಗೆ ದಾನ ಬಿಟ್ಟ ಉಲ್ಲೇಖವಿದೆ.[೯]

೬೬. ಗ್ರಾಮ : ಉಗ್ನಿಕೇರಿ

ತಾಲೂಕು : ಕಲಘಟಗಿ

ಸ್ಥಳ : ಹುನುಮಂತ ದೇವಾಲಯ

ರಾಜವಂಶ : ಕಲ್ಯಾಣ ಚಾಲುಕ್ಯ

ಅರಸ : ಸೊಮೇಶ್ವರ ೩

ಕಾಲ : ಕ್ರಿ.ಶ. ೧೧೭೧

ಸೊಮೇಶ್ವರನ ಮಹಾಮಂಡಳೇಶ್ವರ ಶಿವಚಿತ್ತ ಪೆರ್ಮಾಡಿಯ ತಂದೆ ಜಯಕೇಶಿ ತಾಯಿಮೈಳಲದೇವಿ ತಮ್ಮ ವಿಜಯಾದಿತ್ಯರನ್ನು ಉಲ್ಲೇಖಿಸಿದೆ. ಪಡುವಳದ ಉದಯಾದಿತ್ಯನು

ಶ್ರೀಮೂಕೇಶ್ವರ ದೇವರಿಗೆ ದತ್ತಿಯನ್ನು ಸೋವರಾಸಿ ಪಂಡಿತರ ಪಾದ-ಪದ್ಮಗಳಿಗೆ ಅರ್ಪಿಸಿದನು. ಅಲ್ಲದೇ ಉಗುರಮುನ್ನೂರ್ವರು ಶ್ರೀಮೂಕೇಶ್ವರ ದೇವರಿಗೆ ಹೇರಿಗೆವೀಸವನ್ನು ನಂದಾದೀವಿಗೆಗಾಗಿ ಭೂಮಿಯನ್ನು ಬಿಟ್ಟಿರುವ ಉಲ್ಲೇಖವಿದೆ.[೨೦]

೬೮. ಗ್ರಾಮ : ಕಾಮಧೇನು

ತಾಲೂಕು : ಕಲಘಟಗಿ

ಸ್ಥಳ : ಕಲ್ಮೇಶ್ವರ ದೇವಾಲಯ

ರಾಜವಂಶ : ಗೋವಾ ಕದಂಬ

ಅರಸ : ಪೆರ್ಮಾಡಿದೇವ

ಕಾಲ : ಕ್ರಿ.ಶ. ೧೧೭೧

ಮಹಾಮಂಡಳೇಶ್ವರ ಶ್ರೀಶಿವಚಿತ್ತ ವೀರಪೆರ್ಮಾಡಿದೇವನು ಕೊಂಕಣ-೯೦೦, ಪಲಸಿಗೆ-೧೨೦೦ವನ್ನು, ರಾಜಧಾನಿ ಚಂದ್ರಾಪುರದಿಂದ ಆಳುತ್ತಿದ್ದನು. ಆಗ ಪುಲಿಗೆರೆ ನಾಡಿನ ಸಾಸಲಿನ ಶ್ರೀಸೋಮನಾಥ ದೇವರ ಕಾರ್ಯಕ್ಕಾಗಿ ಕುಮಾರ ಮಲ್ಲಿಯ್ಯನು ದತ್ತಿ ನೀಡಿದನು. ಇಲ್ಲಿ ಪುರೋಹಿತ ಚಾವಯ್ಯನ ಉಲ್ಲೇಖವಿದೆ.[೨೧]

೬೯. ಗ್ರಾಮ : ಅಣ್ಣಿಗೇರಿ

ತಾಲೂಕು : ನವಲಗುಂದ

ಸ್ಥಳ : ಪವಾಡ ಬಸವಣ್ಣನ ಗುಡಿ-ಎದುರು

ರಾಜವಂಶ : ಕಲಚೂರಿ

ಅರಸ : ಸೋವಿದೇವ

ಕಾಲ : ಕ್ರಿ.ಶ. ೧೧೭೩

ಶಾಸನದಲ್ಲಿ ಕಾಲವನ್ನು ಸಕವರ್ಷ ೧೧೯೫ನೇಯ ನಂದನ ಸಂವತ್ಸರ ಪುಶ್ಯಶುದ್ಧ ೫ಸೋಮವಾರ ವೃತ್ತರಾಯಣ ಸಂಕ್ರಾಂತಿ ವ್ಯತೀಪಾತ ಎಂದು ನೀಡಿದ್ದು, ಇದು ಕ್ರಿ.ಶ.೧೧೭೩ ಡಿಸೆಂಬರ್ ೧೦ ಸೋಮವಾರಕ್ಕೆ ಸರಿಹೊಂದುತ್ತದೆ, ದನ್ನುಗಿದೇವ ದಂಡನಾಯಕ ಬೆಳ್ವಲದೇಶವನ್ನು ಆಳುತಿದ್ದನು. ಶೋಭಗಾವುಂಡನ ಪುತ್ರ ಬಮ್ಮಗಾವುಂಡ ಮಹಾಪನಾಯಿಕ ಕರಣಾಧಿಷ್ಠಾಧೀನಾಯಕ ಮೂಕಯ್ಯಗಾವುಂಡರುಗಳ ಉಲ್ಲೇಖವಿದೆ. ದಂಡನಾಯಕ ದನ್ನುಗಿದೇವನು ಮಾಡಿಸಿದ ಶ್ರೀನಾಗೇಶ್ವರ ದೇವಾಲಯದ ಮಹಾಕೂಟ ಪ್ರಸಾದಕ್ಕೆ ಅಂಗಭೋಗ, ರಂಗಭೋಗಕ್ಕೆ ತಪೋಧನರ ಆಹಾರದಾನಕ್ಕೆ, ವಿದ್ಯಾದಾನಕ್ಕೆ ನಾಗಗಾವುಂಡ ತನ್ನ ಗಾವುಂಡ ಹೊಲದಲ್ಲಿ ೪೫೦ ಮತ್ತರು ಭೂಮಿಯನ್ನು ದತ್ತಿ ನೀಡಿದನು.[೨೨]

೭೦. ಗ್ರಾಮ : ಡಿಂಬವಳ್ಳಿ

ತಾಲೂಕು : ಕಲಘಟಗಿ

ಸ್ಥಳ : ಡಿಂಬವಳ್ಳಿ-ಕಂದಳಿದಾರಿಯ ಮೇಲೆ

ರಾಜವಂಶ : ಕಲ್ಯಾಣ ಚಾಲುಕ್ಯ, ಗೋವಾ ಕದಂಬ

ಅರಸ : ೪ನೇ ಸೋಮೇಶ್ವರ, ಪೆರ್ಮಾಡಿದೇವ

ಕಾಲ : ಕ್ರಿ.ಶ. ೧೧೭೪

ಶಾಸನವು ಮಹಾಮಂಡಳೇಶ್ವರ ವೀರಪೆರ್ಮಾಡಿದೇವನು ಕೊಂಕಣ-೯೦೦, ಪಲಸಿಗೆ-೧೨೦೦೦, ಕವಡಿದ್ವೀಪ-೧.೨೫.೦೦೦ವನ್ನು ಆಳುತ್ತಿದ್ದನೆಂದು ತಿಳಿಸಿದೆ. ಅಲ್ಲದೇ ಬಿಂದುಗವಳ್ಳಿಯ ಕೇತಗಾವುಂಡ ಮಾದಿರಾಜ ದಂಡನಾಯಕ, ಪ್ರಭುಸಹಿತ ಮೈಳಲೇಶ್ವರದೇವರಿಗೆ ನೈವೇದ್ಯಕ್ಕೆ, ಜೋರ್ಣೋದ್ಧಾರಕ್ಕೆ, ಚೈತ್ರ ಪವಿತ್ರಕ್ಕೆ ದತ್ತಿಯನ್ನು ವಾಮಶಕ್ತಿಗಳ ಕಾಲುತೊಳೆದು ಧಾರಾಪೂರ್ವಕವಾಗಿ ಬಿಟ್ಟನು. ಪೆರ್ಮಾಡಿದೇವನತಂದೆ ಜಯಕೇಸಿ, ತಾಯಿಮೈಳಲದೇವಿ, ತಮ್ಮವಿಜಯಾದಿತ್ಯನ ಉಲ್ಲೇಖವಿದೆ. ಶಾಸನದಲ್ಲಿ ಬರುವ ಮೈಳಲೇಶ್ವರ ದೇವರು ಬಹುಶಃರಾಣಿಯ ಹೆಸರಿನಲ್ಲಿ ಕಟ್ಟಿಸಿದ ದೇವಾಲಯವಾಗಿದೆ. ಈ ದೇವಾಲಯಕ್ಕೆ ಭೂದಾನ ನೀಡಿದುದರ ಉಲ್ಲೇಖವಿದೆ.[೭೪]

೭೧. ಗ್ರಾಮ : ಅಣ್ಣಿಗೇರಿ

ತಾಲೂಕು : ನವಲಗುಂದ

ಸ್ಥಳ : ಪುರದ ವೀರಪ್ಪನ ಗುಡಿ-ಎದುರು

ರಾಜವಂಶ : ಕಲ್ಯಾಣಿ ಚಾಲುಕ್ಯ

ಅರಸ : ೪ನೇ ಸೋಮೇಶ್ವರ

ಕಾಲ : ಕ್ರಿ.ಶ. ೧೧೮೪

ಈ ಶಾಸನದಲ್ಲಿ ಕಾಲವನ್ನು ಶ್ರೀವೀರಸೋಮೇಶ್ವರ ದೇವವರ್ಷದ ಕ್ರೋಧಿ ಸಂವತ್ಸರದಂದು.....ಅಮವಾಸೆ ಸೂರ್ಯಗ್ರಹಣ ಬ್ಯತೀಪಾತ ಸಂಕ್ರಮಣ ಪುಣ್ಯತಿಥಿಯಲು ಎಂದು ನೀಡಿದ್ದು, ಮಾಸದ ಮಾಹಿತಿಯು ಶಿಥಿಲವಾಗಿದೆ. ಆದರೆ ಕ್ರೋಧಿ ಸಂವತ್ಸರದಲ್ಲಿ ಕಾರ್ತಿಕಮಾಸದಲ್ಲಿ ಸೂರ್ಯಗ್ರಹಣವು ಸಂಭವಿಸಿರುವುದರಿಂದ ಕ್ರಿಶ ೧೧೮೪ ನವೆಂಬರ ೫ ತಾರೀಖು ಸೋಮವಾರಕ್ಕೆ ಸರಿಹೊಂದುತ್ತದೆ. ಆದರೆ ನವಂಬರ್ ತಿಂಗಳಿನ ೫ನೇ ತಾರೀಖಿನ ಸಮಯದಲ್ಲಿ ಸಂಕ್ರಾಂತಿ ಸಂಭವಿಸುವುದಿಲ್ಲ.

ಶಾಸನದ ಪ್ರಾರಂಭದಲ್ಲಿ ಬ್ರಹ್ಮ, ವಿಷ್ಣು, ಮಹೇಶ್ವರರನ್ನು ಸ್ತುತಿಸುವ ಶ್ಲೋಕವಿದೆ. ಇದು ನಡುಗನ್ನಡ ಶೈಲಿಯಲ್ಲಿ ರಚಿತವಾಗಿದ್ದು, ಚಾಲುಕ್ಯರ ವಂಶಾವಳಿ ಇದೆ. ಸಾಮಂತ ಅರಸನಾದ

ವೀರಗೊಗ್ಗಿದೇವನ ವಂಶಾವಳಿಯ ಬಗ್ಗೆ ಮಾಹಿತಿಯಿದೆ. ಇವನು ಜಿನಾನುಯಾಯಿಗಳ ದ್ವೇಷಿಯಾಗಿದ್ದು, ಜಯಿನಾಗಮ ಧೂಮಕೇತು ಎಂದು ಉಲ್ಲೇಖಿತವಾಗಿದೆ. ಆನಂತರ ಪೂರ್ವೋಕ್ತದಿನದಂದು ವಿರ ಬೊಮ್ಮರಸ ದಣ್ಣಾಯಕರು. ರಾಜಧಾನಿ ಅಣ್ಣಿಗೇರಿ ಪಟ್ಟಣದಲ್ಲಿ ನೆಲೆಸಿರುವಾಗ ಗದುಗಿನ ಶ್ರೀತ್ರಿಕೂಟೇಶ್ವರ ದೇವರಿಗೆ ಪುರವನ್ನರ್ಪಿಸುವ ಸಂದರ್ಭದಲ್ಲಿ ಶ್ರೀ ವೀರಭದ್ರೇಶ್ವರ ದೇವರಿಗೆ ಅಂಗರಂಗ ಭೋಗಕ್ಕೆ ಖಂಡಸ್ಫುಟಿತ ಜೀರ್ಣೋದ್ಧಾರಕ್ಕೆ ದೇವಾಲಯದಲ್ಲಿರುವ ಶಿವಾನುಯಾಯಿಗಳಿಗೆ ಅನುಕೂಲವಾಗಲೆಂದು ಸಗರದ ವೀರ ಗೊಗ್ಗಿದೇವರಸರಿಗೆ ೩೦೦(ಮುನ್ನುರು)ಮತ್ತರು ಭೂಮಿಯನ್ನು ದಾನ ನೀಡಿರುವ ಉಲ್ಲೇಖವಿದ್ದು, ಈ ಭೂಮಿಯ ಸೀಮೆಗಳನ್ನೂ ಇಲ್ಲಿ ದಾಖಲಿಸಲಾಗಿದೆ, ಈ ಸೀಮೆಗಳನ್ನು ಹೇಳುವಾಗ ತೆಂಕಲು ಶ್ರೀ ವಿರುಪಾಕ್ಷಕ್ಕೆ ಹೋದ' ಎಂದು ಉಲ್ಲೇಖವಿದ್ದು, ಇದು ಹಂಪಿಯ ವಿರುಪಾಕ್ಷನನ್ನು ಸೂಚಿಸುತ್ತಿರಬಹುದು.[೭೫]

೭೨.	ಗ್ರಾಮ	:	ಅಣ್ಣಿಗೇರಿ
	ತಾಲೂಕು	:	ನವಲಗುಂದ
	ಸ್ಥಳ	:	ಅಮೃತೇಶ್ವರ ಗುಡಿ–ಪ್ರಾಕಾರ
	ರಾಜವಂಶ	:	ಯಾದವರು
	ಅರಸ	:	ಭಿಲ್ಲಮ
	ಕಾಲ	:	ಕ್ರಿ.ಶ. ೧೧೯೦

ಭಿಲ್ಲಮದೇವ ವರ್ಷ ಮೂರನೆಯ ಸೌಮ್ಯ ಸಂವತ್ಸರದ ಪುಷ್ಯ ಬಹುಳದಮಾವಾಸ್ಯ ಸೋಮವಾರಉತ್ತರಾಯಣ ಸಂಕ್ರಮಣವ್ಯತೀಪಾತ ಎಂದು ಶಾಸನದ ಕಾಲವನ್ನು ತಿಳಿಸಲಾಗಿದ್ದು ,ಇದು ಕ್ರಿ.ಶ. ೧೧೯೦ ಜನೆವರಿ ೭ಕ್ಕೆ ಸರಿ ಹೊಂದುತ್ತದೆ. ಶಾಸನವು ಸೇವುಣರಾಜ ಭಿಲ್ಲಮನ ಕಾಲದ್ದಾಗಿದ್ದು, ಆತನ ಪಾದ ಪದ್ಮೋಪಜೀವಿಯು ಬಾಚದಂಡನಾಯಕನು ಈತನನ್ನು ಬಹುವಾಗಿ ಕೊಂಡಾಡಿದ್ದು, ಭಾಸ್ಕರಾವತಾರನೂ ಸಾರಸಭೀಮಂ, ಸುಜನರ ರಕ್ಷಾಮಣಿ ಎಂದು ಕರೆದಿದೆ. ಈತನು ಸ್ವಯಂಭೂ ಅಮೃತೇಶ್ವರ ದೇವರಿಗೆ ತಿಂಗಳು ತಿಂಗಳು ಅಮವಾಸೆಯಲ್ಲಿ ದೇವರ ಅಂಗಭೋಗ, ನೈವೇದ್ಯ, ಪೂಜೆ, ಪುನಸ್ಕಾರಕಾಗಿ ಮಹಾಮಂಡಳೇಶ್ವರ ಬಾಚಿದೇವನು ತ್ರಿವರ್ಗದವರ ಸಮ್ಮುಖದಲ್ಲಿ ಭೂದಾನವನ್ನು ಬಿಟ್ಟ ಉಲ್ಲೇಖವಿದೆ.[೭೬]

೭೩.	ಗ್ರಾಮ	:	ಅಣ್ಣಿಗೇರಿ
	ತಾಲೂಕು	:	ನವಲಗುಂದ
	ಸ್ಥಳ	:	ಅಮೃತೇಶ್ವರ ಗುಡಿ–ಎಡಬದಿ ಕಂಬ
	ರಾಜವಂಶ	:	ಹೊಯ್ಸಳ

ಅರಸ : ವೀರಬಲ್ಲಾಳ ೨

ಕಾಲ : ಕ್ರಿ.ಶ. ೧೧೯೭

ಶಾಸನವು ತೃಟಿತವಾಗಿದ್ದು, ಕಾಲವನ್ನು ಹೊಯ್ಸಳ ಚಕ್ರವರ್ತಿ ವೀರಬಲ್ಲಾಳದೇವ ವರ್ಷದ ೭ನೇಯ ಮಂಗಳ ಸಂವತ್ಸರ ಮಾರ್ಗ(ಶಿರ) ಶುದ್ಧ ಪುಣ್ಮಮಿ ಸೋಮವಾರ ವ್ಯತೀಪಾತ ಸಂಕ್ರಮಣ ಎಂದು ನೀಡಿದ್ದು, ಇದು ಕ್ರಿ.ಶ.೧೧೯೭. ನವೆಂಬರ್ ೨೬ಕ್ಕೆ ಸರಿ ಹೊಂದುತ್ತದೆ. ಶಾಸನವು ವೀರಬಲ್ಲಾಳದೇವ ಆಳ್ವಿಕೆಯನ್ನು ಸೂಚಿಸುತ್ತಿದೆ. ಈತನ ಅಳಿಯನು ದಂಡಾಧಿಪತಿ ಸಿಂಗಣನು, ಪೂರ್ವೋಕ್ತದಿನದಂದು ದಕ್ಷಿಣ ವಾರಣಾಸಿಯ ಅಮೃತೇಶ್ವರ ದೇವರಿಗೆ ಭೂದಾನವನ್ನು ಬಿಟ್ಟ ವಿಷಯ ಶಾಸನದಲ್ಲಿ ಇದೆ.[೭೭]

೭೪. ಗ್ರಾಮ : ಹುಬ್ಬಳ್ಳಿ

ತಾಲೂಕು : ಹುಬ್ಬಳ್ಳಿ

ಸ್ಥಳ : ಪ್ರಿನ್ಸ ಆಫ್ ವೇಲ್ಸ ಮ್ಯೂಜಿಯಂ, ಮುಂಬೈ

ರಾಜವಂಶ : ಕಲ್ಯಾಣ ಚಾಲುಕ್ಯ, ಗೋವಾ ಕದಂಬ

ಅರಸ : ಸೋಮೇಶ್ವರ ೪, ಜಯಕೇಶಿದೇವ ೩

ಕಾಲ : ಕ್ರಿ.ಶ. ೧೧೯೮

ವಿಜಯಕೇಶಿದೇವನು ಕೊಂಕಣ-೯೦೦, ಪಲಸಿಗೆ-೧೨೦೦೦ವನ್ನು ಆಳುತ್ತಿದ್ದನು..... ನಾಡಿನಲ್ಲಿ ಎಲೆಯ ಹುಬ್ಬಳ್ಳಿ-ಪೂರ್ವಳ್ಳಿಯ ಊರೊಡೆಯ ೨೦೦ ಮಹಾಜನರು ಮಹಾಸಭೆಯಾಗಿ ಸೇರಿ ನವಿಲೂರು ಕುರುಬ ಸೇಣಿಗರ ಕೈಯಿಂದ ಅಪ್ಪಣೆಪಡೆದು ಸೇಣಿಗೇಶ್ವರದೇವರ ಅಂಗ, ರಂಗ, ಭೋಗ, ಭೂದತ್ತಿ ಬಿಟ್ಟ ವಿಷಯ ಶಾಸನದಲ್ಲಿ ಇದೆ.[೭೮]

೭೫. ಗ್ರಾಮ : ಮುತ್ತಗೆ

ತಾಲೂಕು : ಕಲಘಟಗಿ

ಸ್ಥಳ : ಕೆರೆಯ ಏರಿ

ರಾಜವಂಶ : ಗೋವಾ ಕದಂಬ

ಅರಸ : ಪೆರ್ಮಾಡಿದೇವ

ಕಾಲ : ಕ್ರಿ.ಶ. ೧೧೯೯

ಪೆರ್ಮಾಡಿದೇವನು ಕೊಂಕಣ-೯೦೦, ಪಲಸಿಗೆ-೧೨೦೦೦, ಕವಡಿದ್ವೀಪ ೧.೨೫.೦೦೦ವನ್ನು ಗೋವೆ ರಾಜಧಾನಿಯಿಂದ ಆಳುತ್ತಿದ್ದು, ಪೆರ್ಮಾಡಿದೇವ ಮತ್ತು ಮುತ್ತಗೆಯ ದೊಡ್ಡ ಬಮ್ಮಗಾವುಂಡ

ಮತ್ತು ಚಿಕ್ಕಬಮ್ಮಗಾವುಂಡರು ಸೇರಿ ಕೆರೆಯ ಜೀರ್ಣೋದ್ಧಾರಕ್ಕಾಗಿ ಕೆರೆಯ ಕೆಳಗಿನ ಮೊದಲೇರಿಯಲ್ಲಿ ೩೦೦ ಸ್ಥಳದತೋಟದ ಹತ್ತಿರ ದಕ್ಷಿಣದ ಕಡೆಯಲ್ಲಿ ಶಿವಚಿತ್ತಗೇಯಿ ಅರವತ್ತಲುಗದ್ದೆ ಆ ತೋಟದ ಪಶ್ಚಿಮದ ಕೋಡಿಯಲ್ಲಿ ಅರಳಿಯ ಪಕ್ಕದ ಮತ್ತರು–೧ ಗದ್ದೆಯನ್ನು ಕೊಟ್ಟರು. ಈ ಧರ್ಮದ ಯೋಗಕ್ಷೇಮವನ್ನು ಗೌಂಡುಗಳು ಅರವ್ವರು ನೋಡಿಕೊಳ್ಳುವರು.[೭೯]

೨೬. ಗ್ರಾಮ : ಮುತ್ತಗಿ

ತಾಲೂಕು : ಕಲಘಟಗಿ

ಸ್ಥಳ : ಕಲ್ಮೇಶ್ವರ ದೇವಾಲಯದ ಹೊಸ್ತಿಲ ಎದುರು

ರಾಜವಂಶ : ಗೋವಾ ಕದಂಬ

ಅರಸ : ಜಯಕೇಶಿದೇವ ೩

ಕಾಲ : ಕ್ರಿ.ಶ. ೧೧೮೯

ತೃಟಿತಗೊಂಡಿರುವ ಈ ಶಾಸನದಲ್ಲಿ ಸುಂಕವೆರ್ಗಡೆ ಹಾಗೂ ಉಗುರ ಮೂನೂರ್ವರಿಂದ ದೇವರಿಗೆ ಭೂದಾನದ ವಿಷಯವಿದೆ.[೮೦]

೨೭. ಗ್ರಾಮ : ನೂಲ್ವಿ

ತಾಲೂಕು : ಹುಬ್ಬಳ್ಳಿ

ಸ್ಥಳ : ಸ.ನಂ. ೨೧೭

ರಾಜವಂಶ : ಗೋವಾ ಕದಂಬ

ಅರಸ : ಜಯಕೇಶಿ ೩

ಕಾಲ : ಕ್ರಿ.ಶ. ೧೨ನೇ ಶ

ಶಾಸನವು ತೃಟಿತಗೊಂಡಿದ್ದು, ಒಕ್ಕಲಿಗರಿಂದ ದೇವಾಲಯದ ನೈವೇದ್ಯಕ್ಕಾಗಿ ದಾನದ ವಿಷಯವಿದೆ.[೮೧]

೨೮. ಗ್ರಾಮ : ನಾಗರಹಳ್ಳಿ

ತಾಲೂಕು : ನವಲಗುಂದ

ಸ್ಥಳ : ಹನುಮಂತ ದೇವಾಲಯದ ಎದುರು

ಕಾಲ : ಕ್ರಿ.ಶ. ೧೨ನೇ ಶ

ಈ ಶಾಸನದ ಕಾಲದ ಉಲ್ಲೇಖವಿರುವುದಿಲ್ಲ. ಲಿಪಿದೃಷ್ಟಿಯಿಂದ ಇದನ್ನು ೧೨ನೇ ಶತಮಾನವೆಂದು ಹೇಳಬಹುದು. ಶ್ರೀಸಾಂತನಾಥ ದೇವರಿಗೆ ಭೂಮಿ ದಾನವನ್ನು ಬಿಟ್ಟ ಉಲ್ಲೇಖವಿದೆ.[೮೨]

೭೯. ಗ್ರಾಮ : ಕುರಹಟ್ಟಿ

ತಾಲೂಕು : ನವಲಗುಂದ

ಸ್ಥಳ : ಶಂಕರಲಿಂಗ ದೇವಾಲಯದ ಗೋಡೆ

ರಾಜವಂಶ : ಕಲ್ಯಾಣಿ ಚಾಲುಕ್ಯ

ಅರಸ : ಜಗದೇಕಮಲ್ಲ೨

ಕಾಲ : ಕ್ರಿ.ಶ. ೧೨ನೇ ಶ

ಶಾಸನದಲ್ಲಿ ಕಾಲದ ಉಲ್ಲೇಖವಿರುವುದಿಲ್ಲ, ಲಿಪಿದೃಷ್ಟಿಯಿಂದ ಕ್ರಿ.ಶ. ೧೨ನೇಯ ಶತಮಾನವೆನ್ನಬಹುದು. ಶಾಸನವು ಶಿಥಿಲವಾಗಿದ್ದು, ಚಾಳುಕ್ಯರಾಜನ ಆಳ್ವಿಕೆಯನ್ನು ಸೂಚಿಸಿದೆ. ಅಗ್ರಹಾರಕ್ಕೆ ದತ್ತಿಯನ್ನು ಬಿಟ್ಟ ಉಲ್ಲೇಖ, ಶಂಕರಲಿಂಗ ದೇವಾಲಯದ ನಂದಾದೀವಿಗೆಗೆ ದತ್ತಿ ನೀಡಿರುವ ಒಳಗೊಂಡಿದೆ.[೮೩]

೮೦. ಗ್ರಾಮ : ಹಳೇ ಹುಬ್ಬಳ್ಳಿ

ತಾಲೂಕು : ಹುಬ್ಬಳ್ಳಿ

ಸ್ಥಳ : ಬಸದಿ–ಬ್ರಹ್ಮದೇವ ಪಾದಪೀಠ

ಕಾಲ : ಕ್ರಿ.ಶ. ೧೨ನೇ ಶ

ಅಸ್ಪಷ್ಟವಾಗಿರುವ ಈ ಶಾಸನದಲ್ಲಿ ಬ್ರಹ್ಮೇಶ್ವರ ಪ್ರತಿಮೆಯ ದಾನ ಎಂದಷ್ಟೇ ಇದೆ.[೮೪]

೮೧. ಗ್ರಾಮ : ಕುಂದಗೋಳ

ತಾಲೂಕು : ಕುಂದಗೋಳ

ಸ್ಥಳ : ಶಂಭುಲಿಂಗ ದೇವಾಲಯದ ರಂಗಮಂಟಪ

ರಾಜವಂಶ : ಕಲಚೂರು

ಅರಸ : ಸೋವಿದೇವ

ಕಾಲ : ಕ್ರಿ.ಶ. ೧೨ನೇ ಶ

ಶಾಸನದಲ್ಲಿ ಕಾಲವು ಅಪೂರ್ಣವಾಗಿದ್ದು, ಶಕವರ್ಷದ ಉಲ್ಲೇಖವಿಲ್ಲ. ಶುಕ್ರವಾರ ಸೋಮಗ್ರಹಣವೆಂದು, ಶುಕ್ರವಾರ ಮತ್ತು ಚಂದ್ರಗ್ರಹಣ ನಡೆದ ದಿನವೆಂದಷ್ಟೇ ಹೇಳಲಾಗಿದೆ. ರಾಯಮುರಾರಿ ಸೋವಿದೇವನು ಸ್ವಯಂಭೂದೇವರ ರಂಗಭೋಗ, ಅಂಗಭೋಗ, ನಿತ್ಯನೈವೇದ್ಯಕ್ಕಾಗಿ ಮಹಾ ಪ್ರಧಾನಲಕ್ಷ್ಮೀಧರ ದಂಡನಾಯಕ ಮತ್ತು ರಾಜ್ಯಾಧ್ಯಕ್ಷ ರೇಚಣ ದಂಡನಾಯಕ ಹಾಗೂ ಸಮಸ್ತರ ಪ್ರಸ್ತಾವನೆಯ ಮೇರೆಗೆ ಭೂದಾನವನ್ನು ಬಿಟ್ಟ ಉಲ್ಲೇಖವಿದೆ.[೮೫]

೮೨. ಗ್ರಾಮ : ಗುಡಗೇರಿ

ತಾಲೂಕು : ಕುಂದಗೋಳ

ಸ್ಥಳ : ಕಲ್ಮಠ–ಮತ್ತೊಂದು ಕಂಬ

ಕಾಲ : ಕ್ರಿ.ಶ. ೧೨ನೇ ಶ

ಈ ಶಾಸನವು ಗುಡಿಗೆರಿಯ ೧೨ ಗಾವುಂಡರುಗಳು ಮತ್ತು ಕಲ್ಲಿಮಯ್ಯಕಲಿದೇವ ದೇವಾಲಯಕ್ಕೆ ನೀಡಿದ ಭೂದಾನದ ಕುರಿತು ತಿಳಿಸುತ್ತದೆ. ಕೊಡೆಯರ ಕಲ್ಲಮಯ್ಯನು ಕಾಳೇಶ್ವರ ದೇವರ ದಕ್ಷಿಣ ಭಾಗದಲ್ಲಿ ತನ್ನ ಹೆಸರಿನಲ್ಲಿ ಲಿಂಗ ಪ್ರತಿಷ್ಠೆಯನ್ನು ಮಾಡಿಸಿ ಶಿವಲಿಂಗಪೂಜೆಗಾಗಿ ೬೩ ಗದ್ಯಾಣಹೊನ್ನ, ತಪೋದನರ ಭಿಕ್ಷೆಗಾಗಿ ಮೂರುಮತ್ತರು, ಮೂವತ್ತೆರಡುಗೇಣು, ಕೋಲು, ಕಂಬವರು ನೂರು ಭೂಮಿಯನ್ನು ದಾನನೀಡಿದ ಉಲ್ಲೇಖವಿದೆ.[೮೬]

೮೩. ಗ್ರಾಮ : ಗಳಿಗೆ

ತಾಲೂಕು : ಕಲಘಟಗಿ

ಸ್ಥಳ : ಬಸವಣ್ಣನ–ಗುಡಿ

ರಾಜವಂಶ : ಗೋವಾ ಕದಂಬ

ಅರಸ : ಮೂರನೇಜಯಕೇಶಿ

ಕಾಲ : ಕ್ರಿ.ಶ. ೧೨ನೇ ಶ

ಅಸ್ಪಷ್ಟ, ನಾಡಗಾವುಂಡ ಪ್ರಮುಖವಾಗಿ ಆರುಮತ್ತೊಕ್ಕಲುಗಳಿಂದ ಬೋಂತೇಶ್ವರ ದೇವರಿಗೆ ಭೂದಾನ ವಿಷಯವಿದೆ.[೮೭]

೮೪. ಗ್ರಾಮ : ಮುತ್ತಗಿ

ತಾಲೂಕು : ಕಲಘಟಗಿ

ಸ್ಥಳ : ರಾಮೇಶ್ವರ ದೇವಾಲಯದ ಮಂಟಪ

ರಾಜವಂಶ : ಗೋವಾ ಕದಂಬ

ಅರಸ : ಜಯಕೇಶಿ ೩

ಕಾಲ : ಕ್ರಿ.ಶ. ೧೨೦೨ನೇ ಶ

ಶಾಸನವು 'ಶ್ರೀ ಕಾದಂಬ ಬೀರಭುಜಬಳ ಜಯಕೇಶಿ ದೇವವರ್ಷದ ೧೫ನೇಯ ದುಂದುಭಿ ಸಂವತ್ಸರದ ಆಷಾಢ ಪುಣ್ಣಮಿ' ಹಿಮಕರವಾದ ದೊಳುವ್ಯತೀಪಾತ ಸಂಕ್ರಮಣಂ' ಎಂದಿದ್ದು, ಇದು ,ಕ್ರಿ.ಶ. ೧೨೦೨ ಜುಲೈ ೮ ಸೋಮವಾರಕ್ಕೆ ಸರಿಹೊಂದುತ್ತದೆ. ಕದಂಬ

ಚಕ್ರವರ್ತಿ ಮಹಾಮಂಡಳೇಶ್ವರ ಜಯಕೇಶಿ ೨ ದೇವನು ಪಲಸಿಗೆ ಪನ್ನಿರ್ಚಾಸಿರವನ್ನು ಆಳುತ್ತಿದ್ದನು. ಆತನ ಪತ್ನಿ ಮೈಳಾಲದೇವಿ ಇವರಿಬ್ಬರ ಪುತ್ರರು ವಿಜಯಾದಿತ್ಯ ಮತ್ತು ಪೆರ್ಮಾಡಿದೇವರು ವಿಜಯಾದಿತ್ಯ ಮತ್ತು ಲಕ್ಷ್ಮಿದೇವಿಯರ ಪುತ್ರನು ಮೂರನೆ ಜಯಕೇಶಿ ದೇವನು ರಾಜಧಾನಿ ಗೋವೆಯಾಳು ರಾಜ್ಯಭಾರವನ್ನು ಮಾಡುತಿದ್ದನು, ನಂತರ ಸೋಮಗಾವುಂಡ, ನೇಮಗಾವುಂಡರ ಮತ್ತು ಮಲ್ಲಿಕಾರ್ಜುನ ಮುನಿಯ ಉಲ್ಲೇಖವಿದ್ದು, ಆತನ ಪತ್ನಿ ಪದ್ಮಿಯಕ್ಕವೆಂದಿದೆ. ಪೂರ್ವೋಕ್ತ ದಿನದಂದು ಗೋವಗಾವುಂಡನು ಮಲ್ಲಿಕಾರ್ಜುನ ಮುನಿಯ ಪಾದ ಪ್ರಕ್ಷಾಲನವನ್ನು ಮಾಡಿ ಸೋಮನಾಥ ದೇವರ ನಿತ್ಯ ನೈವೇದ್ಯಕ್ಕೆಂದು ಭೂದಾನವನ್ನು ಮಾಡಿದ ಉಲ್ಲೇಖವಿದೆ.[೮೮]

೮೫. ಗ್ರಾಮ : ಅಣ್ಣಿಗೇರಿ

ತಾಲೂಕು : ನವಲಗುಂದ

ಸ್ಥಳ : ಅಮೃತೇಶ್ವರ ಗುಡಿ–ಪ್ರಾಕಾರ

ರಾಜವಂಶ : ಹೊಯ್ಸಳ

ಅರಸ : ೨ನೇ ವೀರಬಲ್ಲಾಳ

ಕಾಲ : ಕ್ರಿ.ಶ. ೧೨೦೨ನೇ ಶ

ಶಾಸನದ ಕಾಲವನ್ನು ವೀರಬಲ್ಲಾಳದೇವ ವರ್ಷದ ೧೨ನೆಯ ದುಂದುಭಿ ಸಂವತ್ಸರದ ಜೇಷ್ಠಶುದ್ಧ ಅಷ್ಟಮಿ ಬೃಹಸ್ಪತಿವಾರ ಬ್ಯತಿಪಾತ ಎಂದು ನೀಡಿದ್ದು, ಇದು ಕ್ರಿ.ಶ.೧೨೦೨ ಮೇ ೩೦ಕ್ಕೆ ಸರಿಹೊಂದುತ್ತದೆ. ಇದು ಹೊಯ್ಸಳ ದೊರೆ ವೀರಬಲ್ಲಾಳನ ಕಾಲಕ್ಕೆ ಸಂಬಂಧಿಸಿದ ಶಾಸನವಾಗಿದೆ. ವೀರಬಲ್ಲಾಳದೇವನ ವಂಶಾವತಾರವನ್ನು ವರ್ಣಿಸಲಾಗಿದೆ. ಈ ವಂಶವು ಸೋಮ(ಚಂದ್ರ)ನಿಂದ ಪ್ರಾರಂಭವಾಗಿದ್ದು, ಈ ವಂಶದಲ್ಲಿ ಸಳನೆಂಬ ಪ್ರತಾಪ ರಾಜನಿದ್ದನು. ಆತನು ಒಂದು ದಿನ ತನ್ನ ಕುಲದೇವತೆ ವಾಸಂತಿಕಾದೇವಿಯ ದೇವಾಲಯಕ್ಕೆ ಹೋಗಿರಲು ಒಂದು ಭಯಾನಕರವಾದ ಹುಲಿಯು ಅಲ್ಲಿದ್ದಂತಹ ಋಷಿಮುನಿಗಳ ಮೇಲೆ ಬಂದೆರಗಿತು ಆ ಸಂದರ್ಭದಲ್ಲಿ ಋಷಿಯು ನೀಡಿದಂತಹ ಸಲಾಕೆಯಿಂದ ಹುಲಿಯನ್ನು ಮೆಟ್ಟಿಸಿದನು, ಋಷಿಯು ಹೊಯ್–ಸಳ ಎಂದು ಪ್ರರೇಪಿಸಿದನು, ಭಯಂಕರವಾದ ಕಾದಾಟದಲ್ಲಿ ಸಳನು ಹುಲಿಯನ್ನು ಕೊಂದನು. ಅಂದಿನಿಂದ ಆತನ ವಂಶವು ಹೊಯ್ಸಳ ವಂಶವೆಂದು ಪ್ರಸಿದ್ದವಾಯಿತು.

ಈ ರೀತಿಯಾಗಿ ಹೊಯ್ಸಳ ವಂಶವನ್ನು ಸಳನಿದ ಆರಂಭಿಸಿ ವೀರ ಬಲ್ಲಾಳನವರೆಗೆ ವಂಶ ವೈಭವವನ್ನು ವರ್ಣಿಸಲಾಗಿದೆ. ಗಿರಿದುರ್ಗಮಲ್ಲನೂ ಪ್ರತಾಪ ಚಕ್ರವರ್ತಿ ವೀರಗಂಗ ಬಲ್ಲಾಳದೇವನು ರಾಜ್ಯವನ್ನಾಳುತ್ತಿದ್ದನು. ಆತನ ನಾಲ್ವರು ದಂಡನಾಯಕರಾದ ಅಮೃತಕಲ್ಲಿ ಮಸಣಯ್ಯ ಮತ್ತು ಬಸವಯ್ಯರಲ್ಲಿ, ಬಸಯ್ಯ ದಂಡನಾಥನು ಬೆಳ್ವಲ–೩೦೦ರನ್ನು ಅಳುತ್ತಿರುವನು. ಈತನನ್ನು ಬಹಳವಾಗಿ ಶಾಸನವು ವರ್ಣಿಸಿದೆ, ಈತನು ಪುರ್ವೋಕ್ತ ದಿನದಂದು ಗಾವುಂಡವರ್ಗ, ವಿಪ್ರವರ್ಗ ಮತ್ತು ಯತಿವರ್ಗಗಳ ಸಮ್ಮುಖದಲ್ಲಿ ಅಣ್ಣಿಗೆರೆಯ ಶ್ರೀಸ್ವಯಂಭೂ ಅಮೃತನಾಥದೇವರ

ಅಷ್ಟಮಿ ಮತ್ತು ಚತುರ್ದಶಿಯ ಪೂಜೆಗಾಗಿ ಮಲ್ಲಿಮೂರೊಡೆಯರ ಪುತ್ರ ನಾರಣದೇವಣನಿಗೆ, ಸಾಯಿಮೂರೊಡೆಯರ ಮೊಮ್ಮಗ ಮಲ್ಲಯ್ಯನಿಗೆ ಆರು ಮತ್ತರು ಭೂಮಿಯನ್ನು, ಮಾಹರಯ್ಯಂಗಳ ಮೊಮ್ಮಗ ಪಖಯ್ಯ ಮತ್ತು ಗೋವಿಂದದೇವನಿಗೆ ಆರು ಮತ್ತರು ಭೂಮಿಯನ್ನು ಮತ್ತು ದೇವರಿಗೆ ಹತ್ತು ಮತ್ತರು ಭೂಮಿಯನ್ನು ಬಿಟ್ಟ ಉಲ್ಲೇಖವಿದ್ದು, ಸೀಮಾ ವಿವರ ನೀಡಲಾಗಿದೆ.[೮೯]

೮೭.

ಗ್ರಾಮ	:	ಮನಗುಂಡಿ
ತಾಲೂಕು	:	ಧಾರವಾಡ
ಸ್ಥಳ	:	ಸಿದ್ದಲಿಂಗೇಶ್ವರ ದೇವಾಲಯ ಹತ್ತಿರ(ಕೆ.ಆರ್.ಐ)
ರಾಜವಂಶ	:	ಕಲ್ಯಾಣ ಚಾಲುಕ್ಯ
ಅರಸ	:	ನಾಲ್ಕನೇ ಸೋಮೇಶ್ವರ
ಕಾಲ	:	ಕ್ರಿ.ಶ. ೧೨೦೩ನೇ ಶ

ಈ ಶಾಸನದಲ್ಲಿ ಆರು ದಾನಗಳ ಉಲ್ಲೇಖವಿರುವುದರಿಂದ ಆರು ಕಾಲಗಳ ಮಾಹಿತಿಯನ್ನು ನೀಡಿದ್ದಾರೆ. ಒಂದೊಂದು ಕಾಲವೂ ಬೇರೆ-ಬೇರೆಯಾಗಿದ್ದು,

೧. 'ಕಲಿಯುಗ ಸಂವತ್ಸರ ೪೨೮೯ಸಂಹಾದಿಯಾಗಿ ಶ್ರೀ ವೀರಜಯಕೇಶಿದೇವ ವರ್ಷದ ೧೬ನೆಯ ದುಂದುಭಿ ಸಂವತ್ಸರದ ಪುಷ್ಯ ಬಹುಳ ಅಷ್ಟಮೆ ಬುಧವಾರದಂದು ಮತ್ತರಾಯಣ ಸಂಕ್ರಮಣಂ, ಇದು ಕ್ರಿ.ಶ. ೧೨೦೩ ಜನೆವರಿ ೮ ಬುಧವಾರಕ್ಕೆ ಸಮಾನಾಗುತ್ತದೆ.

೨. 'ರುಧುರೋದ್ಗಾರಿ ಸಂವತ್ಸರದ ಶ್ರಾವಣಶುದ್ಧ ಪುಣ್ಯಮೆ ಶುಕ್ರವಾರ' ಎಂದು ಎರಡನೆಯ ಕಾಲದ ಉಲ್ಲೇಖವಿದ್ದು, ಇದ್ದು, ಇದು ಕ್ರಿ.ಶ. ೧೨೦೩, ಜುಲೈ ೨೫, ಶುಕ್ರವಾರಕ್ಕೆ ಸಮಾನಾಗುತ್ತದೆ.

೩. 'ಕಲಿಯುಗ ಸಂತ್ಸರಂ ೪೨೮೮ ಸಂವಾದಿಯಾಗಿ ಶ್ರೀ ಕಾದಂಬ ಶ್ರೀವೀರಜಯಕೇಶಿ ವರ್ಷದ ೨೫ನೆಯ ಪ್ರಜಾಪತಿ ಸಂವತ್ಸರದ ಶ್ರಾವಣ ಬಹುಳ ೧೩ ಸೋಮವಾರ' ಉಲ್ಲೇಖವಾಗಿದ್ದು, ಇದು ಕ್ರಿ.ಶ. ೧೨೧೧, ಜುಲೈ ೪, ಸೋಮವಾರಕ್ಕೆ ಸಮಾನಾಗುತ್ತದೆ.

೪. ಕಲಿಯುಗ ಸಂವತ್ಸರಂ ೪೨೮೮ ಸಂದುದಾದಿಯಾಗಿ ಶ್ರೀಕಾದಂಬ ಶ್ರೀವೀರಜಯಕೇಶೀ ದೇವವರ್ಷದ ೨೮ನೆಯ ಭಾ ಸಂವತ್ಸರದ ಮಾಘ ಬಲಾವಡ್ಡವಾರ' ಎಂದು ೪ನೆಯ ಕಾಲದ ಉಲ್ಲೇಖವಾಗಿದ್ದು, ಇದು ಕ್ರಿ.ಶ. ೧೨೩೫ ಜನೆವರಿ ೨೪, ಶನಿವಾರಕ್ಕೆ ಸಮನಾಗುತ್ತದೆ.

೫. ಈ ಕಾಲದ ಮಿತಿಯು 'ಶ್ರೀಕಾದಂಬ ಶ್ರೀವೀರಭುಜ ವಜ್ರದೇವ ವರ್ಷದ ೨ನೆಯ ಧಾತು ಸಂತ್ಸರದ ಶ್ರಾವಣಶುದ್ಧ ೫ ಗುರುವಾರ ಎಂದು ಬಂದಿದ್ದು, ಇದು ಕ್ರಿ.ಶ, ೧೨೧೬ ಜುಲೈ ೩೧, ಗುರುವಾರಕ್ಕೆ ಸಮನಾಗುತ್ತದೆ.

೬. ಶ್ರೀಕಾದಂಬ ಶ್ರೀವೀರಭುಜಬಳ ವಜ್ರದೇವ ವರ್ಷದ ೨ನೆಯ ಧಾತು ಸಂವತ್ಸರದ ಮಾರ್ಗಶಿರ ಸುದ್ದ ಶನಿವಾರ ವೆಂದು ಉಲ್ಲೇಖವಾಗಿದ್ದು, ಇದು ಕ್ರಿ.ಶ. ೧೨೧೬ ನವೆಂಬರ್ ೧೯, ಶನಿವಾರಕ್ಕೆ ಸಮಾನಾಗುತ್ತದೆ.

ಶಾಸನದ ಪ್ರಾರಂಭದಲ್ಲಿ ಶ್ರೀಮತ್ ತ್ರಿಭುವನ ಮಲ್ಲಿದೇವ ಆಳ್ವಿಕೆಯನ್ನು ತಿಳಿಸುತ್ತದೆ. ಶಿವಚಿತ್ತ ವೀರಪೆರ್ಮಾಡಿದೇವ ಅನಂತರ ಆತನ ಸಹೋದರ ವಿಜಯ ದೇವನು ಮತ್ತು ಆತನ ಪುತ್ರ ವಜ್ರ ಜಯಕೇಶಿ ದೇವರ ವರ್ಣನೆಯಿದೆ. ಜಯಕೇಶಿದೇವನು ರಾಜ್ಯವಾಳುತ್ತಿರುವಾಗ ಹುಲ್ಲಂಬಿ-೨೦ರ ಒಳಗೆ ಮುನಿಗಳ ಬಗ್ಗೆ, ಅಲ್ಲಿ ಶಿವಶಕ್ತಿಪಂಡಿತರೆಂಬ ಮುನಿಗಳಿರುವ ಅವರ ತನೂಭವನು ಶ್ರೀಗಡರ್ಪಾದ ಯೋಗೀಶ್ವರರು, ಇವರ ಶಿಷ್ಯರಾದ ಚಂದ್ರಭೂಷಣ ದೇವರು ಇರುವರು. ಇವರ ಇಚ್ಛೆಯ ಮೇರೆಗೆ ಚಾವುಂಡಗಾವುಂಡನೇ ಪ್ರಮುಖರಾಗಿ ಎಳೆ ತೋಂಟಿಗರು, ಸೆಟ್ಟಿಗಳು ಸೇರಿ ಭಕ್ತಿಪೂರ್ವಕವಾಗಿ ವೀರಜಯಕೇಶಿ ದೇವರ ದೇವಾಲಯವನ್ನು ನಿರ್ಮಿಸಿ ಉತ್ತರಾಯಣ ಸಂಕ್ರಾಂತಿಯಂದು ಹೊಲದ ಹುಣಸೆಯಿಂದ ಪಶ್ಚಿಮಕ್ಕೆ ಒಂದು ಮತ್ತರು ಭೂಮಿಯನ್ನು ಚಂದ್ರಭೂಷಣ ದೇವರ ಕಾಲನ್ನು ತೊಳೆದು ದಾನ ನೀಡಿರುವರು. ಇದೇ ಕಾಲದಲ್ಲಿ ಮಣಿಗುಂದಗೆ, ಕಾವಣ, ಮುಗುದ, ಹುಪ್ಪೊವಳ್ಳಿ, ನುಗ್ಗಿಯಹಳ್ಳಿ, ಸತ್ತಿವೂರು, ನೀರಸಾಗರ ಮೊದಲಾದ ಸ್ಥಳದಲ್ಲಿ ಭೂದಾನವನ್ನು ನೀಡಿದ ವಿವಿಧ ದಾನಗಳ ಉಲ್ಲೇಖವಿದೆ.[೧೦]

೮೭. ಗ್ರಾಮ : ಅಣ್ಣಿಗೇರಿ

ತಾಲೂಕು : ನವಲಗುಂದ

ಸ್ಥಳ : ಅಮೃತೇಶ್ವರ ಗುಡಿ ಮಂಟಪ ಇನ್ನೊಂದು ಕಂಬ

ರಾಜವಂಶ : ಹೊಯ್ಸಳ

ಅರಸ : ೨ನೇ ವೀರಬಲ್ಲಾಳ

ಕಾಲ : ಕ್ರಿ.ಶ. ೧೨೦೫

ಶಾಸನದಲ್ಲಿ ಕಾಲವನ್ನು ವೀರಬಲ್ಲಾಳದೇವ ವರ್ಷದ ೧೫ನೇಯ ಕ್ರೋಧನ ಸಂವತ್ಸರದ ಆಷಾಢ ಶುದ್ಧ ೧೩ನೇ ಸೋಮವಾರ ಬಲಿಪಾತ ಸಂಕ್ರಮಣ ಎಂದಿದೆ. ಇದು ಕ್ರಿ.ಶ.೧೨೦೫, ಜೂನ್೨೭, ಸೋಮವಾರಕ್ಕೆ ಸರಿ ಹೊಂದುತ್ತದೆ. ವೀರಬಲ್ಲಾಳ ರಾಜನ ಆಳ್ವಿಕೆಗೆ ಸೇರಿದ್ದು, ಆತನ ಪಾದ ಪದ್ಮೋಪಜೀವಿ........(ಬಸವ)ಯ್ಯ ದಣ್ಣಾಯಕನು ಬೆಳ್ವಲ ದೇಶವನ್ನು ಆಳುತ್ತಿದ್ದನು. ಆತನ ರಾಜ್ಯದಲ್ಲಿ ಹಾಕಿಸೆಟ್ಟಿ-ದೇವಯ್ಯನೆಂದು ಭಕ್ತನಿರುವನು. ಈತನು ಪೂರ್ವೋಕ್ತ ದಿನದಂದು ಅಮೃತೇಶ್ವರ ದೇವರಿಗೆ ಚೌತಿ, ಸಪ್ತಮಿ ಮತ್ತು ತ್ರಯೋದಶಿ ಮೂರು ತಿಥಿಗಳಂದು ಪಾಯಸದ ನೈವೇದ್ಯಕ್ಕಾಗಿ, ದೇವರಿಗೆ ನಾಲ್ಕು ಅಡಕೆ, ಎಂಟು ವೀಳ್ಯದೆಲೆ, ಬ್ರಾಹ್ಮಣರಿಗೂ ಅಡಕೆ ಎಂಟು ವೀಳ್ಯದೆಲೆಯನ್ನು ಮತ್ತು ಆರು ಗದ್ಯಾಣವನ್ನು ಬಿಟ್ಟ ಉಲ್ಲೇಖವಿದೆ.[೧೧]

೮೮. ಗ್ರಾಮ : ಮನಗುಂಡಿ

ತಾಲೂಕು : ಧಾರವಾಡ

ಸ್ಥಳ : ದುರ್ಗಾ ದೇವಾಲಯದ ಹತ್ತಿರ(ಕೆ.ಆರ್.ಐ)

ರಾಜವಂಶ : ಕಲ್ಯಾಣ ಚಾಲುಕ್ಯ

ಅರಸ : ೪ನೇ ಸೋಮೇಶ್ವರ

ಕಾಲ : ಕ್ರಿ.ಶ. ೧೨೦೭

ಶಾಸನದಲ್ಲಿ ಎರಡು ಕಾಲಗಳ ಉಲ್ಲೇಖವಿದೆ. ಮೊದಲನೆಯ ಕಾಲದ ಉಲ್ಲೇಖ ಅಸ್ಪಷ್ಟವಾಗಿದೆ. ಸಕವರ್ಷ(ಸಾಸಿರದ)ನೆಯ ಪ್ರಭವ ಸಂವತ್ಸರದ ಪುಷ್ಯ ಸುದ್ಧ ಉತ್ತರಾಯಣ ಸಂಕ್ರಮಣವೆಂದಿದೆ. ಇದು ಗೋವೆಯ ಕದಂಬ ಜಯಕೇಶಿಗೆ ಸಂಬಂಧಿಸಿದ ಶಾಸನವಾಗಿರುವುದರಿಂದ ಅವನ ಆಳ್ವಿಕೆಯಲ್ಲಿ ಪ್ರಭವ ಸಂವತ್ಸರವು ೧೧೨೯ನೆಯ ಶಕವರ್ಷದಂದು ಎಂದಿತ್ತು. ಇದಕ್ಕೆ ಸಮಾನವಾಗದ ದಿನಾಂಕ ಕ್ರಿ.ಶ. ೧೨೦೭ ಡಿಸೆಂಬರ್ ೨೫ ಮಂಗಳವಾರಕ್ಕೆ ಸಮವಾಗುತ್ತೆ. ಇನ್ನೊಂದು ಕಾಲದ ಉಲ್ಲೇಖವು 'ಕಲಿಯುಗ ಸಂವತ್ಸರಂ ೧೧೪೦ ಸಂವತ್ಸರದ ಮಾಘ ಬ೬ ಶುಕ್ರವಾರ ಎಂದಿದ್ದು, ಇದು ಕ್ರಿ.ಶ. ೧೨೧೮ ಜನೆವರಿ ೧೯ ಶುಕ್ರವಾರಕ್ಕೆ ಸಮವಾಗುತ್ತದೆ.

ಕೇಶಿರಾಜನು ತನ್ನ ರಾಜಧಾನಿಯಾದ ಗೋವೆಯಲ್ಲಿ ನೆಲೆಸಿರಲು ತ್ರಿಭುವನ ಮಲ್ಲಿದೇವನ ರಾಜ್ಯ ಅಭಿವೃದ್ಧಿ ಹೊಂದುತ್ತಿರಲು, ಸಿದ್ದೇಶ್ವರ ಮಠದಲ್ಲಿ ತಿಪ್ಪಗಾವುಂಡರೇ ಮೊದಲಾಗಿ ಸಮಸ್ತ ಪ್ರಜೆಗಳೂ, ಪಂಚಮಠದವರೂ ಮಹಾಸಭೆಯಲ್ಲಿ ಸೇರಿ ೫೦೪ ಜನರು ಸರಳೇಶ್ವರ ಪಂಡಿತರಿಗೆ ಧಾರಾಪೂರ್ವಕವಾಗಿ ದಾನನೀಡಿದ ಉಲ್ಲೇಖವಿದೆ. ಎರಡನೆಯದಾಗಿ ಈಶ್ವರ ಭಟ್ಟೋಪಾಧ್ಯಯರಿಂದ ಮತ್ತು ಅವರ ಮಗ ನರಸಿಂಹದೇವರಿಂದ ಖರೀದಿಸಿದ ಭೂಮಿ ಹಾಗೂ ಮನೆಗಳನ್ನು ಬೋಗೇಶ್ವರ ದೇವರಿಗೆ ದಾನವಾಗಿ ನೀಡಿದ್ದನ್ನು ಶಾಸನ ದಾಖಲಿಸುತ್ತದೆ.[೨]

೮೯. ಗ್ರಾಮ : ಗುಡಗೇರಿ

ತಾಲೂಕು : ಕುಂದಗೋಳ

ಸ್ಥಳ : ಕಲ್ಮಠ-ಕಂಬ

ರಾಜವಂಶ : ಯಾದವ

ಅರಸ : ಸಿಂಘಣ

ಕಾಲ : ಕ್ರಿ.ಶ. ೧೨೧೭

ಈ ಶಾಸನವು ೭ನೇಯ ಈಶ್ವರ ಸಂವತ್ಸರ ಶ್ರಾವಣ ಅಮವಾಸ್ಯ, ಗುರುವಾರ ಸೂರ್ಯಗ್ರಹಣದಂದು ಎಂದಿದೆ. ಇದು ಕ್ರಿ.ಶ. ೧೨೧೭ ಅಗಸ್ಟ ೩ ಶುಕ್ರವಾರಕ್ಕೆ ಸಮವಾಗುತ್ತದೆ. ಈ ಶಾಸವು ಗುಡಿಗೆರೆಯ ೧೨ ಮಹಾಜನರ ಮತ್ತು ತೆಲ್ಲಿಗರೈವತ್ತೊಕ್ಕಲು ಎಂಬ ವರ್ತಕ ಸಂಘದವರು ಗುಡಿಗೆರೆಯ ಕಾಳೇಶ್ವರದೇವರ ಪೂಜೆಗಾಗಿ ನಂದಾದೀವಿಗೆಗಾಗಿ, ಸೊಲ್ಲಿಗೆ, ಸೊಟ್ಟಿಗೆ ಎಣ್ಣೆಯನ್ನು ದಾನವಾಗಿ ಕೊಡುತ್ತಾರೆ. ಈ ದಾನವನ್ನು ಪಡೆದುಕೊಂಡ ವ್ಯಕ್ತಿ ದೇವಸ್ಥಾನದ ಆಚಾರ್ಯ ತೇಜೋನಿಧಿದೇವ ಎಂದಿದೆ.[೩]

೯೦. ಗ್ರಾಮ : ಅಣ್ಣಿಗೇರಿ

ತಾಲೂಕು : ನವಲಗುಂದ

ಸ್ಥಳ : ಅಮೃತೇಶ್ವರ ಗುಡಿ–ಎಡಕಂಬ

ಕಾಲ : ಕ್ರಿ.ಶ. ೧೨೩೧

ಶಾಸನದಲ್ಲಿ ಕಾಲವನ್ನು ಶ್ರೀಜಯಾಭ್ಯುದಯಶ್ಚ ಶಕವರ್ಷದ ೧೧೫೩ನೇಯ ಖರ ಸಂವತ್ಸರದ ಭಾದ್ರಪದಮಾಸ್ಯ ವ್ಯತೀಪಾತ ಸಂಕ್ರಾಂತಿ ಬೃಹಸ್ಪತಿವಾರದಂದು ಎಂದು ನೀಡಲಾಗಿದ್ದು, ಇದು ಕ್ರಿ.ಶ.೧೨೩೧ ಅಗಸ್ಟ೨೮, ಗುರುವಾರಕ್ಕೆ ಸರಿಹೊಂದುತ್ತದೆ. ಸ್ಥಂಭವೊಂದರ ಎರಡು ಮಗ್ಗಲಲ್ಲಿ ಶಾಸನ ಬರೆಯಲ್ಪಟ್ಟಿದೆ. ಮೊದಲ ಮುಖಮಂಟಪದಲ್ಲಿ ಕೊಂಕಣದೇಶ ಚಕ್ರವರ್ತಿ ಶ್ರೀವೀರಭುಜಬಳ ಅರಿಯ ದೇವಸೆಟ್ಟಿಯ ರಾಜಧಾನಿ ಪಟ್ಟಣ ಅಣ್ಣಿಗೇರಿಯ ಸ್ವಯಂಭೂ ಅಮೃತೇಶ್ವರ ದೇವರಿಗೆ ಪನ್ನಾಯವನ್ನು ಬಿಟ್ಟನು. ಎರಡನೇ ಮುಖದಲ್ಲಿ ಸೇಣಿಗ ಎಂಬುವವನು ಭೈರವ ದೇವರಿಗೆ ದತ್ತಿಯನ್ನು ಉಲ್ಲೇಖಿಸುತ್ತದೆ.[೯೪]

೯೧. ಗ್ರಾಮ : ಕಟ್ನೂರು

ತಾಲೂಕು : ಹುಬ್ಬಳ್ಳಿ

ಸ್ಥಳ : ಕಲ್ಮೇಶ್ವರ ಗುಡಿ–ಕಂಬ

ರಾಜವಂಶ : ಗೋವಾ ಕದಂಬ

ಅರಸ : ತ್ರಿಭುವನಮಲ್ಲ

ಕಾಲ : ಕ್ರಿ.ಶ. ೧೨೪೨

ಶಾಸನವು ತೃಟಿತವಾಗಿದ್ದು, ಕಟ್ಟನೂರು ಮೂಲಸ್ಥಾನದೇವರಿಗೆ ಇಂದೆಯ ಸಾಹಣಿಯಿಂದ ಭೂದಾನ.[೯೫]

೯೨. ಗ್ರಾಮ : ಹೆಬ್ಬಳ್ಳಿ

ತಾಲೂಕು : ಧಾರವಾಡ

ಸ್ಥಳ : ಶಂಭುಲಿಂಗ ದೇವಾಲಯ

ರಾಜವಂಶ : ಯಾದವ

ಅರಸ : ಸಿಂಘಣ

ಕಾಲ : ಕ್ರಿ.ಶ. ೧೨೪೪

ಈ ಶಾಸನದಲ್ಲಿ ಕಾಲದ ಮಿತಿಯನ್ನು 'ಕಲಿಯುಗ ಸಂ...... ೧೧೬೯ನೆಯ ಕ್ರೋಧಿ ಸಂವತ್ಸರದಲ್ಲಿ ಭಾದ್ರಪದ ಸು..... ಶುಕ್ರವಾರ ಸೋಮಗ್ರಹಣ' ಎಂದು ನೀಡಿದ್ದು, ಇದು ಕ್ರಿ.ಶ. ೧೨೪೪ ಅಗಸ್ಟ ೧೯, ಶುಕ್ರವಾರಕ್ಕೆ ಸಮಾನವಾಗಿದೆ. ಯಾದವು ನಾರಾಯಣ ಸಿಂಹಣದೇವನು ಆಳ್ವಿಕೆ ನಡೆಸುತ್ತಿರಲು ಆತನ ಪಾದ ಪದ್ಮೋಪಜೀವಿಯು ಬಣಂಜು ಪಟ್ಟಣದ ಒಂದು ದೇವಾಲಯದ ಅಂಗರಂಗ ನೈವೇದ್ಯ ಮತ್ತು ನಂದಾದೀಪಕ್ಕಾಗಿ ಸುಂಕವನ್ನು ವಿನಾಯಿತಿ ಮಾಡಿದ ಉಲ್ಲೇಖವಿದೆ.[೯೨]

೯೩.	ಗ್ರಾಮ	:	ಹುಬ್ಬಳ್ಳಿ
	ತಾಲೂಕು	:	ಹುಬ್ಬಳ್ಳಿ
	ಸ್ಥಳ	:	ಜಂಬುಕೇಶ್ವರ ದೇವಾಲಯದ ಕಂಬ
	ರಾಜವಂಶ	:	ಯಾದವ
	ಅರಸ	:	ಸಿಂಘಣ
	ಕಾಲ	:	ಕ್ರಿ.ಶ. ೧೨೪೪

ತೃಟಿತಗೊಂಡಿರುವ ಈ ಶಾಸನದಲ್ಲಿ ಜಂಬುಕೇಶ್ರ ದೇವರಿಗೆ ಎತ್ತುಗಳನ್ನು ದಾನ ಮಾಡಿದ ಉಲ್ಲೇಖ ಇದೆ.[೯೩]

೯೪.	ಗ್ರಾಮ	:	ಬುಡರಸಿಂಗಿ
	ತಾಲೂಕು	:	ಹುಬ್ಬಳ್ಳಿ
	ಸ್ಥಳ	:	ಹನುಮಂತ ದೇವಾಲಯದ ಆವರಣ-ನಂದಿಕಲ್ಲು
	ರಾಜವಂಶ	:	ಗೋವಾ ಕದಂಬ
	ಅರಸ	:	ಚಟ್ಟಯದೇವ
	ಕಾಲ	:	ಕ್ರಿ.ಶ. ೧೨೫೪

ಶಾಸನವು ತೃಟಿತಗೊಂಡಿದ್ದು, ಸೊನ್ನಲಿಗೆಯ ಕಪಿಲಸಿದ್ಧ ಮಲ್ಲಿಕಾರ್ಜುನನಿಗೆ ಹಲಸಿಗೆನಾಡಿನ ಸಬ್ಬಿ ಕಂಪಣದ ಉಚ್ಚಂಗಿ ಗ್ರಾಮದಾನ ಎಂದಿದೆ.[೯೪]

೯೫.	ಗ್ರಾಮ	:	ಕೊಟಬಾಗಿ
	ತಾಲೂಕು	:	ಧಾರವಾಡ
	ಸ್ಥಳ	:	ಬಸವಣ್ಣ ದೇವಾಲಯದ ನಂದಿಕಲ್ಲು
	ರಾಜವಂಶ	:	ಯಾದವ

ಅರಸ : ಮಹಾದೇವರಾಯ

ಕಾಲ : ಕ್ರಿ.ಶ. ೧೨೬೪

ಈ ಶಾಸನದಲ್ಲಿ ಕಾಲವು ಉಲ್ಲೇಖವು 'ಶ್ರೀ ಸರದಾರಭ್ಯ ೧೧೮೬ನೆಯ ರಕ್ತಾಕ್ಷಿ ಸಂವತ್ಸರದ ವೈಶಾಖ ಶುದ್ಧ ಪುಣ್ಯಮಿಯಾದಿವಾರದಂದಲು' ಎಂದಿದೆ. ಇದು ಕ್ರಿ.ಶ. ೧೨೬೪ ಏಪ್ರೀಲ್ ೧೩ ರವಿವಾರಕ್ಕೆ ಸರಿಹೊಂದುತ್ತದೆ. ಹಳೆಗನ್ನಡದಲ್ಲಿರುವ ಶಾಸನದ ಪ್ರಾರಂಭದ ೨೧ ಸಾಲುಗಳಲ್ಲಿ ಸಿದ್ದರಾಮನ ವಚನಗಳು ಕಂಡು ಬರುತ್ತವೆ. ಚಕ್ರವರ್ತಿ ಮಹದೇವ ರಾಜ್ಯವನ್ನಾಳುತ್ತಿರುವಾಗ ಸೊನ್ನಲಗೆಯ ಕಪಿಲಸಿದ್ದ ಮಲ್ಲಿಕಾರ್ಜುನ ದೇವರ ಅಂಗಭೋಗ, ರಂಭೋಗ, ಖಂಡಸ್ಫುಟಿತ ಜಿರ್ಣೋದ್ದಾರಕ್ಕೆ ಅನೇಕ ನವೀನ ಪ್ರಸಾದಕ್ಕೆ, ಕಳಶಾಭಿಷೇಕ, ನಿತ್ಯಹೋಮ ಮುಂತಾದ ಶ್ರೀಕಾರ್ಯಕ್ಕಾಗಿ ಪಲಸಿಗೆ ದೇಶದ ಕುಂದೂರು ವಿಷಯದ ಕೊಟಬಾಗಿ ಗ್ರಾಮವನ್ನು ದತ್ತಿ ನೀಡಿದ ಬಗ್ಗೆ ಮಾಹಿತಿಯಿದೆ.[೯೯]

೯೬. ಗ್ರಾಮ : ಧಾರವಾಡ

ತಾಲೂಕು : ಧಾರವಾಡ

ಸ್ಥಳ : ರಾಜಾಲಖನಗೌಡ ಹೈಸ್ಕೂಲ-ಕಂಬ

ರಾಜವಂಶ : ವಿಜಯನಗರ

ಅರಸ : ಮಲ್ಲಿಕಾರ್ಜುನ

ಕಾಲ : ಕ್ರಿ.ಶ. ೧೪೪೮

ಕಾಲಮಿತಿ ಶಾಸನದಲ್ಲಿ 'ಶಕವರುಷ ೧೩೭೦ನೆಯ ವಿಭವ ಸಂವತ್ಸರದ ಶ್ರಾವಣ ಶು ೫' ಎಂಧೀದ್ದು, ಇದು ಕ್ರಿ.ಶ. ೧೪೪೮, ಜುಲೈ ೫, ಶುಕ್ರವಾರಕ್ಕೆ ಸಮವಾಗುತ್ತದೆ. ವಿಜಯನರದ ಅರಸ ಮಲ್ಲಿಕಾರ್ಜುನನ ಪಟ್ಟಮಹೋತ್ಸವದ ಸಮಯದ ನೆನಪಿಗಾಗಿ ನಂದಿ ಕಂಬವನ್ನು ಪ್ರತಿಷ್ಠಾಪಿಸಿ, ಧಾರವಾಡದ ನರೇಂದ್ರಪುರ, ಬಮ್ಮರಸಿಕೊಪ್ಪ, ಕುಂದಾಪುರ ಗ್ರಾಮವನ್ನು ದೇವರಿಗೆ ದಾನಮಾಡಿದ ವಿಷಯವಿದೆ.[೧೦೦]

೯೭. ಗ್ರಾಮ : ಬ್ಯಾಹಟ್ಟ

ತಾಲೂಕು : ಹುಬ್ಬಳ್ಳಿ

ಸ್ಥಳ : ಹಿರೇಮಠದ ಹತ್ತಿರ

ಕಾಲ : ಕ್ರಿ.ಶ. ೧೫ನೇ ಶ

ತೃಟಿತವಾಗಿರುವ ಈ ಶಾಸನದಲ್ಲಿ ಪಂಚಾಕ್ಷರದೇವರ ಮಠಕ್ಕೆಬಿಟ್ಟ ದತ್ತಿ ಎಂದಿದೆ.[೧೦೧]

೯೮. ಗ್ರಾಮ : ಸಿರಗುಪ್ಪಿ

ತಾಲೂಕು : ಹುಬ್ಬಳ್ಳಿ

ಸ್ಥಳ : ಹುಡೇದ ಹನುಮಂತ ದೇವಾಲಯದ-ತೊಲೆ

ರಾಜವಂಶ : ವಿಜಯನಗರ

ಅರಸ : ಕೃಷ್ಣದೇವರಾಯ

ಕಾಲ : ಕ್ರಿ.ಶ. ೧೬ನೇ ಶ

ಶಾಸನ ತೃಟಿತವಾಗಿದ್ದು, ಬಾಗಿಲ ತಿಮ್ಮಪ್ಪನಾಯಕನ ಅಧಿಕಾರಿ ತಿರುಮಲಪ್ಪನ ಪುಣ್ಯಾರ್ಥವಾಗಿ ಅಳಿಯ ಐರಾಪೀಳನು ದೇವಾಲಯ ಕಟ್ಟಿಸಿದ ಎಂಬ ವಿಷಯವಿದೆ.[೧೦೨]

೯೯. ಗ್ರಾಮ : ಭದ್ರಾಪೂರ

ತಾಲೂಕು : ನವಲಗುಂದ

ಸ್ಥಳ : ಚಾವಡಿಯ ಹತ್ತಿರ

ರಾಜವಂಶ : ಭೋಸಲೆ

ಅರಸ : ಶಿವಾಜಿ

ಕಾಲ : ಕ್ರಿ.ಶ. ೧೬೭೯

ಈ ಶಾಸನದಲ್ಲಿ ಶಾಲಿವಾಹನ ಶಕ......೧೬೦೧ನೆಯ ಸಿದ್ಧಾರ್ಥಿನಾಮ ಸಂ. ಶ್ರವಣ ಸುಲ..... ಎಂದು ನೀಡಲಾಗಿದೆ. ಇದು ಕ್ರಿ.ಶ.೧೬೭೯ ಜುಲೈ ೩೧ಕ್ಕೆ ಸರಿಹೊಂದುತ್ತದೆ. ಶಿವಾಜಿ ಮಹಾರಾಜನ ಕಾಲಕ್ಕೆ ಸೇರಿದ ಪೂರ್ವೋಕ್ತ ದಿನದಂದು ಲಿಂಗಪ್ಪಯ. ಸಂಗಪ್ಪರುಗಳಿಗೆ ಭೂಮಿ ದಾನ ನೀಡಿದ ಮಾಹಿತಿಯಿದೆ. ಈ ಶಾಸನದಲ್ಲಿ ಭದ್ರಾಪೂರ ಮತ್ತು ಹನುಮಂತದೇವ, ಶಂಕರಲಿಂಗ ದೇವರ ದೇವಾಲಯ ಉಲ್ಲೇಖಿತವಾಗಿದೆ.[೧೦೩]

೧೦೦. ಗ್ರಾಮ : ದೇವರಗುಡಿಹಾಳ

ತಾಲೂಕು : ಹುಬ್ಬಳ್ಳಿ

ಸ್ಥಳ : ಊರ ಸಮೀಪದ ದಾರಿಯಲ್ಲಿ

ಕಾಲ : ಕ್ರಿ.ಶ. ೧೨ನೇ ಶ

ಶಾಸನವು ತೃಟಿತವಾಗಿದ್ದು, ಕೇವಲ ಘಂಟರಾವುತನಿಂದ ಮಲ್ಲಿಕಾರ್ಜುನ ದೇವಾಲಯಕ್ಕೆ ಭೂದಾನ ಎಂದಿದೆ.[೧೦೪]

೧೧೧. ಗ್ರಾಮ : ಭದ್ರಾಪೂರ

ತಾಲೂಕು : ನವಲಗುಂದ

ಸ್ಥಳ : ನರಸಿಂಹ ದೇವಾಲಯದ-ಎದುರು

ಕಾಲ : ಈಚಿನ ಅಕ್ಷರ

ತೃಟಿತವಾಗಿದ್ದು, ಮಹಾಲಿಂಗ ದೇವಾಲಯಕ್ಕೆ ಭೂ ದಾನವನ್ನು ನೀಡಿದ ಮಾಹಿತಿ ಇದೆ.[೧೦೫]

ವೈಷ್ಣವ ದೇವಾಲಯಕ್ಕೆ ನೀಡಿದ ದಾನಶಾಸನಗಳು :

೧. ಗ್ರಾಮ : ಶಿರಗುಪ್ಪಿ

ತಾಲೂಕು : ಹುಬ್ಬಳ್ಳಿ

ಸ್ಥಳ : ಊರ ಚಾವಡಿಯ ಹತ್ತಿರ

ರಾಜವಂಶ : ಕಲ್ಯಾಣ ಚಾಲುಕ್ಯ

ಅರಸ : ವಿಕ್ರಮಾದಿತ್ಯ ೬

ಕಾಲ : ಕ್ರಿ.ಶ. ೧೦೮೩

ಶಾಸನವು ಅಪೂರ್ಣವಾಗಿ ಹಾಳಾಗಿದ್ದರಿಂದ ವಿಷಯ ಅಸ್ಪಷ್ಟವಾಗಿದೆ. ಶ್ರೀವಿಷ್ಣುದೇವರಿಗೆ ದತ್ತಿ ನೀಡಿದ ಬಗ್ಗೆ ಮತ್ತು ಮಹಾಜನರ ಉಲ್ಲೇಖ ತಿಳಿದುಬರುತ್ತದೆ.[೧೦೬]

೨. ಗ್ರಾಮ : ಗೂಗಿಕಟ್ಟಿ

ತಾಲೂಕು : ಧಾರವಾಡ

ಸ್ಥಳ : ಕೇಶವ ಮೂರ್ತಿ-ಪಾದಪೀಠ

ರಾಜವಂಶ : ಕಲ್ಯಾಣ ಚಾಲುಕ್ಯ

ಅರಸ : ವಿಕ್ರಮಾದಿತ್ಯ ೬

ಕಾಲ : ಕ್ರಿ.ಶ. ೧೧೨೫

ಶಾಸನದಲ್ಲಿ ಕಾಲವನ್ನು ಚಾಲುಕ್ಯ ವಿಕ್ರಮ ವರ್ಷದ ೪೯ನೆಯ ಕ್ರೋಧಿ ಸಂವತ್ಸರದ ವೈಶಾಖ ಬಹುಳ ೧೧ ಆದಿವಾರ'ವೆಂದು ಉಲ್ಲೇಖಿಸಿದ್ದು, ಇದು ಕ್ರಿ.ಶ. ೧೧೨೩ ಮೇ ೧೧, ಆದಿತ್ಯವಾರಕ್ಕೆ ಸಮವಾಗುತ್ತದೆ. ಈ ಶಾಸನದಲ್ಲಿ ಚಾಲುಕ್ಯ ಚಕ್ರವರ್ತಿ ತ್ರಿಭುವನ ಮಲ್ಲಿದೇವರ ಮಗಳೂ ಕದಂಬ ದೊರೆ ಜಯಕೇಶಿದೇವನ ಮಡದಿಯು ಕೇಶವರ ಪ್ರತಿಷ್ಠೆಮಾಡಿಸಿದನೆಂದಿದೆ.[೧೦೭]

೩. ಗ್ರಾಮ : ತಂಬೂರು

ತಾಲೂಕು : ಕಲಘಟಗಿ

ಸ್ಥಳ : ಊರಹೊರಗೆ-ಹಾಳಗುಡಿ

ರಾಜವಂಶ : ಕಲ್ಯಾಣ ಚಾಲುಕ್ಯ, ಗೋವಾ ಕದಂಬ

ಅರಸ : ವಿಕ್ರಮಾದಿತ್ಯ ೬, ಗುವಲದೇವ

ಕಾಲ : ಕ್ರಿ.ಶ. ೧೧೨೦

ಅತಿ ತೃಟಿತವಾಗಿರುವ ಈ ಶಾಸನದಲ್ಲಿ, ಜಯದೇವನಿಂದ ವಿಷ್ಣುದೇವಾಲಯ ನಿರ್ಮಾಣ ಹಾಗೂ ಭೂದಾನ ಮಾಡಿದ ವಿಷಯವಿದೆ.[೧೦೮]

೪. ಗ್ರಾಮ : ಬಾಡ

ತಾಲೂಕು : ಧಾರವಾಡ

ಸ್ಥಳ : ಶಿವ ದೇವಾಲಯದ ಬಳಿ

ಕಾಲ : ಕ್ರಿ.ಶ. ೧೨ನೇ ಶ

ಶಾಸನದಲ್ಲಿ ಅಕ್ಷರಗಳು ತೃಟಿತವಾಗಿರುವುದರಿಂದ ವಿಷಯ ಅಸ್ಪಷ್ಟವಾಗಿದೆ. ಶಾಸನ ಈಶ್ವರ ಮತ್ತು ಕೇಶವದೇವರಿಗೆ ದತ್ತಿ ನೀಡಿದ ಬಗ್ಗೆ ವಿಷಯವಿದೆ.[೧೦೯]

೫. ಗ್ರಾಮ : ಉಣಕಲ್

ತಾಲೂಕು : ಹುಬ್ಬಳ್ಳಿ

ಸ್ಥಳ : ಹನುಮಂತ ದೇವಾಲಯ ಪಾದಪೀಠ

ಕಾಲ : ಕ್ರಿ.ಶ. ೧೨ನೇ ಶ

ತೃಟಿತಗೊಂಡಿರುವ ಶಾಸದಲ್ಲಿ ವಾಮದೇವ ಪಂಡಿತನಿಂದ ಉಗುರೇಶ್ವರದ ಕೇಶವ ದೇವರ ಸ್ಥಾಪನೆ ಎಂದಿದೆ.[೧೧೦]

೬. ಗ್ರಾಮ : ತಂಬೂರು

ತಾಲೂಕು : ಧಾರವಾಡ

ಸ್ಥಳ : ಶಿವದೇವಾಲಯದ ಹತ್ತಿರ

ಕಾಲ : ಕ್ರಿ.ಶ. ೧೨ನೇ ಶ

ಈ ಶಾಸನದಲ್ಲಿ ಸ್ಪಷ್ಟವಾಗಿ ಕಾಲದ ಉಲ್ಲೇಖವಿರದಿದ್ದರೂ ಪುಣ್ಯದಿನದಂದು ಎಂದಷ್ಟೇ ನೀಡಿರುವರು. ಈ ಶಾಸನದಲ್ಲಿ ಬಾಡ ಗ್ರಾಮದ ಈಶ್ವರದೇವರಿಗೆ ಚೈತ್ರದ ಪರ್ವಕ್ಕೆ ವೇಳೆ ಪವಿತ್ರದ

ಪರ್ವಕ್ಕೆ ಬೇಳೆಯನ್ನು ಊರೊಡೆಯ ಕೇಶವ ದೇವರಿಗೆ ಬಂಡಿಭತ್ತದ ಗದ್ದೆಯನ್ನು ಊರಿನ ಮಹಾರಾಜನರು ಧಾರಾ ಪೂರ್ವಕವಾಗಿ ನೀಡಿರುವ ವಿಷಯವಿದೆ[೧೧೧]

೭. ಗ್ರಾಮ : ಕೋಳಿವಾಡ

ತಾಲೂಕು : ಹುಬ್ಬಳ್ಳಿ

ಸ್ಥಳ : ನಾರಾಯನ ದೇವಾಲಯದ ಎದುರು–ಕಂಬ

ಕಾಲ : ಕ್ರಿ.ಶ. ೧೫ನೇ ಶ

ಸೂರಪಯ್ಯನು ಮಾಧವಜನಾರ್ಧರ್ನನ ದೇವಾಲಯದ ಸೇವೆಗಾಗಿ ತಿರುಮಲ ಬೋವನ ಮಗಳಾದ ಮಾಣಿಕೆಯನ್ನು ದಾನನೀಡಿದ ಉಲ್ಲೇಖವಿದೆ.[೧೧೨]

ಜೈನ ದಾನಶಾಸನಗಳು:

೧. ಗ್ರಾಮ : ಅಣ್ಣಿಗೇರಿ

ತಾಲೂಕು : ನವಲಗುಂದ

ಸ್ಥಳ : ಬನಶಂಕರಿ ಗುಡಿ ಎದುರು–ಕಂಬ

ರಾಜವಂಶ : ಬಾದಾಮಿ ಚಾಲುಕ್ಯ

ಅರಸ : ಕೀರ್ತಿವರ್ಮ ೧

ಕಾಲ : ಕ್ರಿ.ಶ. ೭೫೧–೫೨

ಈ ಶಾಸನದಲ್ಲಿ ಕೀರ್ತಿವರ್ಮ ಸತ್ಯಾಶ್ರಯ ಶ್ರೀ ಪೃಥ್ವೀವಲ್ಲಭನ ಆಳ್ವಿಕೆಯ ಆರನೆಯ ವರ್ಷ ಉಲ್ಲೇಖಿತವಾಗಿದ್ದು, ಸತ್ಯಾಶ್ರಯನು.......ಇಸವಿಯಲ್ಲಿ ಪಟ್ಟಾಭಿಷಕ್ತನಾದನೆಂದು ತಿಳಿದರೆ ಈ ಶಾಸನದ ಕಾಲವನ್ನು ಕ್ರಿಶ ೮ನೇ ಶತಮಾನವೆಂದು ಊಹಿಸಬಹುದು. ಜೇಬುಲಗೇರಿಯ ಗಾವುಂಡನಾದ ಕಲಿಯಮ್ಮನು ಚೇದಿಯನ್ನು(ಜೈನ ದೇವಾಲಯ)ನಿರ್ಮಿಸಿರುವ ಉಲ್ಲೇಖವಿದೆ. ಕುಪ್ಪಕೀರ್ತಿವರ್ಮಗೋಸಾಸಿಯು ಈ ಜಿನಾಲಯದ ಮುಂದೆ ಮೂರ್ತಿಯನ್ನು ಪ್ರತಿಷ್ಠಾಪಿಸಿದುದರ ಉಲ್ಲೇಖವಿದೆ.[೧೧೩]

೨. ಗ್ರಾಮ : ಬ್ಯಾಹಟ್ಟಿ

ತಾಲೂಕು : ಹುಬ್ಬಳ್ಳಿ

ಸ್ಥಳ : ಕೆರೆಯ ದಂಡೆ

ರಾಜವಂಶ : ಕಲ್ಯಾಣ ಚಾಲುಕ್ಯ

ಅರಸ : ಜಯಕೇಶಿ ೩

ಕಾಲ : ಕ್ರಿ.ಶ. ೧೦೩೭

ತುಣುಕು, ಅಸ್ಪಷ್ಟ; ದಾವನರಸ ಮತ್ತು ಹನ್ನೆರಡು ಗಾವುಂಡರಿಂದ ಜಿನಾಲಯಕ್ಕೆ ದತ್ತಿ ಬಿಟ್ಟ ಉಲ್ಲೇಖವಿದೆ.[೧೧೪]

೩. ಗ್ರಾಮ : ಮುಗುದ

ತಾಲೂಕು : ಧಾರವಾಡ

ಸ್ಥಳ : ಜೈನ ಬಸದಿ

ರಾಜವಂಶ : ಕಲ್ಯಾಣ ಚಾಲುಕ್ಯ

ಅರಸ : ಸೋಮೇಶ್ವರ ೧

ಕಾಲ : ಕ್ರಿ.ಶ. ೧೦೪೫

ಶಾಸನದಲ್ಲಿ ಸಕವರ್ಷ ೯೬೬ನೆಯ ಪಾರ್ಥಿವ ಸಂವತ್ಸರ ಚೈತ್ರಶುದ್ಧ ಪಂಚಮಿ ಆದಿವಾರವೆಂದಿದ್ದು, ಇದು ಕ್ರಿ.ಶ. ೧೯೪೫, ಮಾರ್ಚ ೨೪ ರವಿವಾರಕ್ಕೆ ಸರಿಹೊಂದುತ್ತದೆ. ಶಾಸನವು ೪೯ ಸಾಲುಗಳನ್ನು ಹೊಂದಿದ್ದು, ಪ್ರಾರಂಭದ ೨೨ ಸಾಲುಗಳ ಕುಮುದಿಗಣಾನ್ವಯದ ೧೧ಜನ ವಂಶಾವಳಿಯನ್ನು ತಿಳಿಸುತ್ತದೆ. ಮಹಾಮಂಡಳೇಶ್ವರ ಚಟ್ಟಯದೇವ ಕೊಂಕಣ–೯೦೦, ಪಲಸಿಗೆ–೧೨೦೦೦ವನ್ನು ಆಳುತ್ತಿದ್ದನು. ಮಹಾರಾಜವಾಡಿಯಲ್ಲಿ ಮೂಗುಂದ–೩೦ ಇದ್ದಿತು. ಮುಗುಂದದ ಮಹಾಸಾಮಂತ ಮಾರ್ತಂಡಯ್ಯನು ತನ್ನ ಮತ್ತಯ್ಯನಾದ ಚಾವುಂಡಯ್ಯ ಮಾಡಿಸಿದ ಬಸದಿಯ ಜೀರ್ಣೋದ್ದಾರ ಮಾಡಿಸಿದನು. ಅದರ ಖಂಡಸ್ಪುಟಿತ ಜೀರ್ಣೋದ್ದಾರ, ನಾಮಕರಣಕ್ಕೆ ನಾನಾದೇಶಿಯ ಚಾತುರ್ದ್ವರ್ಣ ಭೋಜನಕ್ಕೆ ಹಿರಿಯಗೋವರ್ಧನ ದೇವರುಗಳ ಕಾಲಗಳಿಗೆ ಅರ್ಪಿಸಿ ಭೂದತ್ತಿ ನೀಡಿದನು ಮತ್ತು ಇದೇ ಮಾರ್ತಂಡೇಯನು ಜಿನಾಲಯಕ್ಕೆ ನಾಟಕ ಶಾಲೆಯನ್ನು ಮಾಡಿಸಿಕೊಟ್ಟನು.[೧೧೫]

೪. ಗ್ರಾಮ : ಕುಯಿಬಾಳ

ತಾಲೂಕು : ಕುಂದಗೋಳ

ಸ್ಥಳ : ಮಸೀದಿಯ ಹತ್ತಿರ

ರಾಜವಂಶ : ಕಲ್ಯಾಣ ಚಾಲುಕ್ಯ

ಅರಸ : ಸೋಮೇಶ್ವರ ೧

ಕಾಲ : ಕ್ರಿ.ಶ. ೧೦೪೮

ಶಾಸನದಲ್ಲಿ 'ಸಕವರ್ಷದ ೯೬೭ನೆಯ ಪಾ.....ದುಂದುತ್ತರಾಯಣ ಸಂಕ್ರಾಂತಿ.....ಎಂದು ಉಲ್ಲೇಖವಿದ್ದು, ಆ ವರ್ಷದಲ್ಲಿ ಉತ್ತರಾಯಣ ಸಂಕ್ರಾಂತಿಯು ಡಿಸೆಂಬರ್ ೨೪ ಆಗಿದ್ದು, ವರ್ಷ ಕ್ರಿ.ಶ. ೧೦೪೫ ಕ್ಕೆ ಸಮಾನವಾಗುತ್ತದೆ. ಈ ಶಾಸನವು ಕುಯ್ಯಿಬಾಳ ಬಸದಿಗೆ ಬಿಟ್ಟ ದತ್ತಿಯ ಬಗ್ಗೆ

ದಾಖಲಿಸುತ್ತದೆ. ಗುಣಭದ್ರ ಸಿದ್ಧಾಂತಿದೇವ ಅವರ ಕುಟುಂಬ ಮತ್ತು ಶಿಷ್ಯ ಮೋನಿಮತಿ ಕಂತಿಯನ್ನು ಉಲ್ಲೇಖಿಸುತ್ತದೆ. ಈ ಬಸದಿಯ ಜೀರ್ಣೋದ್ದಾರಕ್ಕೆಂದು ಹನ್ನೆರಡು ಮತ್ತರು ಭೂಮಿಯನ್ನು ಗುಣಭದ್ರ ಸಿದ್ಧಾಂತಿ ದೇವರ ಶಿಷ್ಯಯಾದಶ್ರೀಮೀನಿಮತಿಕಾಂತಿದೇವಿ ಮತ್ತು ಅರವತ್ತೊಕ್ಕಲು ಗೌಡರ ಸಮ್ಮುಖದಲ್ಲಿ ಭೂದಾನವನ್ನು ಬಿಟ್ಟ ವಿಷಯವಿದೆ.[೧೧೬]

೫. ಗ್ರಾಮ : ಅಣ್ಣಿಗೇರಿ

ತಾಲೂಕು : ನವಲಗುಂದ

ಸ್ಥಳ : ಜೈನ ಬಸದಿಯ ಹತ್ತಿರ

ರಾಜವಂಶ : ಕಲ್ಯಾಣಿ ಚಾಲುಕ್ಯ

ಅರಸ : ೨ನೇ ಸೋಮೇಶ್ವರ

ಕಾಲ : ಕ್ರಿ.ಶ. ೧೦೭೧

ಶಾಸನ ಸಂಪೂರ್ಣವಾಗಿ ತೃಟಿತಗೊಂಡಿದ್ದು, ಬಸದಿಗೆ ದತ್ತಿನೀಡಿದ ಬಗ್ಗೆ ಮಾಹಿತಿಯನ್ನು ತಿಳಿಸುತ್ತದೆ.[೧೧೭]

೬. ಗ್ರಾಮ : ಗುಡಗೇರಿ

ತಾಲೂಕು : ಕುಂದಗೋಳ

ಸ್ಥಳ : ಜೈನ ಬಸದಿ

ರಾಜವಂಶ : ಕಲ್ಯಾಣ ಚಾಲುಕ್ಯ

ಅರಸ : ಸೊಮೇಶ್ವರ ೨

ಕಾಲ : ೧೦೭೨

ಕುಂಕುಮ ಮಹಾದೇವಿ ಮುಳಗಂದ ನಾಡನ್ನು ಆಳುತ್ತಿದ್ದು, ಆಗ ಭುವನೈಕ್ಯಮಲ್ಲನ ಮಹಾದಂಡನಾಯಕ ಗುಡಗೇರಿಯನ್ನು ನೋಡಿಕೊಳ್ಳುತ್ತಿದ್ದನು. ವಿಷಯಾಧಿಕಾರಿಯಾಗಿ ಮುದ್ದಣ್ಣ, ಈಶ್ವರಭಟ್ಟ ನಿದ್ದನು. ಶ್ರೀಮಾದಯ್ಯ ದಂಡನಾಯಕ, ರುದ್ರಭಟ್ಟೋಪಾದ್ಯಾಯ, ಈಶ್ವರ ದಂಡನಾಯಕ, ಭಾಸ್ಕರ ಭಟ್ಟೋಪಾದ್ಯಾಯರು ಮಾಳ್ವ, ಸೌರಾಷ್ಟ್ರ, ಗೌಡ ವಿಷಯ ಮುಂತಾದವುಗಳನ್ನು ಜಯಿಸಿಕೊಂಡು ಬಂದರು. ಈ ಸಮಯದಲ್ಲಿ ಬಾದಾಮಿ ಚಲುಕ್ಯ ಚಕ್ರವರ್ತಿ ವಿಜಯಾದಿತ್ಯನ ಸಹೋದರಿ ಕುಂಕುಮ ಮಹಾದೇವಿ ಪುಲಗೇರಿಯಲ್ಲಿ ಮಾಡಿಸಿದ ಆನೆಸಜ್ಜೆಯ ಬಸದಿಗೆ ಗುಡಗೆರೆ ಗ್ರಾಮವನ್ನು ಬಿಟ್ಟ ಉಲ್ಲೇಖವಿದೆ.[೧೧೮]

೭. ಗ್ರಾಮ : ಅಳ್ನಾವರ

ತಾಲೂಕು : ಧಾರವಾಡ

ಸ್ಥಳ : ಪ್ಯಾಟಿ-ಓಣಿ ಜುಮ್ಮಾ ಮಸೀದಿ

ರಾಜವಂಶ : ಗೋವಾ ಕದಂಬ

ಅರಸ : ಗೋವಲದೇವ

ಕಾಲ : ಕ್ರಿ.ಶ. ೧೦೮೧

ಶಾಸನದಲ್ಲಿ 'ಸಕವರ್ಷ ೧೦೦೩ನೆಯ.... ಬುಧವಾರಕ್ಕೆಂದು ದಕ್ಷಿಣಾಯನ ಸಂಕ್ರಾಂತಿ ಎಂದು ಉಲ್ಲೇಖವಿದ್ದು, ಇದು ಕ್ರಿ.ಶ. ೧೦೮೧ಕ್ಕೆ ಸಮನಾಗುತ್ತದೆ. ಮಹಾಮಂಡಳೇಶ್ವರ ಗೂವಲದೇವ ಕೊಂಕಣ-೯೦೦, ಪಲಸಿಗೆ-೧೨೦೦೦, ಕುಂದೂರು-೫೦೦, ಕಾದರವಳ್ಳಿ-೩೦, ಕವಡೆದ್ವೀಪ-೧.೨೫.೦೦೦ ಆಳುತ್ತಿದ್ದನು. ರಾಜಧಾನಿ ಅನಿಲಾಪುರದಲ್ಲಿ ಪ್ರಧಾನ ಮಾಚಣ್ಣ ಮಾಡಿಸಿದ ಬಸದಿಯ ನೈಷ್ಠಿಕರಿಸಿ ಮಸುದಾಯದ ಆಹಾರ ದಾನಕ್ಕೆ ಆರುಮತ್ತರು ಭೂಮಿಯನ್ನು ನರಸಿಂಗಯ್ಯಸೆಟ್ಟಿಯ ದತ್ತಿ ನೀಡಿದನು.[೧೧೯]

೮. ಗ್ರಾಮ : ಮಲ್ಲಕನಕೊಪ್ಪ

ತಾಲೂಕು : ಕಲಘಟಗಿ

ಸ್ಥಳ : ಕೆರೆಯ ಏರಿ

ರಾಜವಂಶ : ಕಲ್ಯಾಣ ಚಾಲುಕ್ಯ

ಅರಸ : ೬ನೇ ವಿಕ್ರಮಾದಿತ್ಯ

ಕಾಲ : ಕ್ರಿ.ಶ. ೧೧೦೩

'ಸಕವರ್ಷ ೧೦೨೫ನೆಯ ಸುಭಾನು ಸಂವತ್ಸರದ ಉತ್ತರಾಯಣ ಸಂಕ್ರಾಂತಿಯಂದಿದ್ದು,' ಇದು ಕ್ರಿ.ಶ. ೧೧೦೩ ಡಿಸೆಂಬರ್ ೨೪, ಗುರುವಾರಕ್ಕೆ ಸರಿಹೊಂದುತ್ತದೆ. ಚಾಳುಕ್ಯ ಚಕ್ರವರ್ತಿ ೬ನೇ ವಿಕ್ರಮಾದಿತ್ಯನ ಸಾರ್ವಭೌಮಾಧಿಪತ್ಯದಲ್ಲಿ ಗೋವೆಯ ಕದಂಬ ವಂಶದ ಮಹಾಮಂಡಳೇಶ್ವರ ಗೂವಲದೇವನು ರಾಜ್ಯವನ್ನಾಳುತ್ತಿದ್ದಾಗ ಪುಲಿಗೊಡೆ ಬೊಮ್ಮಿಶೆಟ್ಟಿಯು ಬಸದಿಯನ್ನು ನಿರ್ಮಿಸಿದ ಹಾಗೂ ತಾನೇ ನಿರ್ಮಿಸಿದ ಬಸದಿಗೆ ಶಾಂತಿವರ್ಮದೇವನ ಪಾದವನ್ನು ತೊಳೆದು ಧಾರಾಪೂರ್ವಕವಾಗಿ ದತ್ತಿಯನ್ನು ಬಿಟ್ಟ ಉಲ್ಲೇಖವಿದೆ.[೧೨೦]

೯. ಗ್ರಾಮ : ತಂಬೂರು

ತಾಲೂಕು : ಕಲಘಟಗಿ

ಸ್ಥಳ : ಊರ ಕೋಟೆಯಲ್ಲಿ

ರಾಜವಂಶ : ಕಲ್ಯಾಣ ಚಾಲುಕ್ಯ, ಗೋವಾ ಕದಂಬ

ಅರಸ : ವಿಕ್ರಮಾದಿತ್ಯ ೬, ಜಯಕೇಶಿ ೨

ಕಾಲ : ಕ್ರಿ.ಶ. ೧೧೨೫

ಶ್ರೀಮಚ್ಚಾಳುಕ್ಯ ವಿಕ್ರಮ ವರ್ಷದ ವಿಶ್ವಾವಸು ಸಂವತ್ಸರದ ಪುಷ್ಯಶುದ್ಧ ಪಾಡ್ಯ ಆದಿತ್ಯವಾರಮುಂ ಉತ್ತರಾಯಣ ಸಂಕ್ರಮಣಮಂ ಎಂದಿದ್ದು, ಇದು ಕ್ರಿ.ಶ. ೧೧೨೫ ಡಿಸೆಂಬರ್.... ಆದಿತ್ಯವಾರಕ್ಕೆ ಸರಿಹೊಂದುತ್ತದೆ. ಶಾಸನದಲ್ಲಿ ಇನ್ನೊಂದು ಕಾಲವನ್ನು ಕ್ರಿ.ಶ. ವರ್ಷದ ೧೦೮೧ನೆಯ ಪ್ರಮಾಥಿ ಸಂವತ್ಸರದ ಎಂದಿದೆ. ಜಯಕೇಶಿ ದೇವನು ಕೊಂಕಣ–೯೦೦ ಪಲಸಿಗೆ ಪನ್ನಿರ್ಚಾಸಿರವನ್ನಾಳುತ್ತಿರುವನು. ಆತನ ಪಿರಿಯಾಳು ಹಕೀಬಲ್ಲನ ಮಡದಿಯಾದ ಪದ್ಮಳಾದೇವಿಯು ಬನವಾಸಿ ಪನ್ನಿರ್ಛಾಸಿರವನ್ನಾಳುತ್ತಿದ್ದಳು ಮಂತ್ರಿಯರಾದ ಬರ್ಮಾಚಯ್ಯ ಮತ್ತು ರಾಚಮಲ್ಲಿ, ಹರೇಬಲ್ಲ ಮತ್ತು ತನ್ನ ಮಂತ್ರಿಯರೊಡಗೂಡಿ ತಮ್ಮಿಯೂರಿನಲ್ಲಿ ಜಿನದೇವಾಲಯವನ್ನು ನಿರ್ಮಿಸಿ ನಂದಿ ದೇವರ ಪಾದಪ್ರಕ್ಷಾಲ ಮಾಡಿ ಭೂದಾನವನ್ನು ಮಾಡಿದನು.[೨೧]

೧೦. ಗ್ರಾಮ : ಮಾವಳ್ಳಿ

ತಾಲೂಕು : ಕಲಘಟಗಿ

ಸ್ಥಳ : ಹಾಳಾದ ಊರ

ರಾಜವಂಶ : ಕಲ್ಯಾಣ ಚಾಲುಕ್ಯ, ಗೋವಾ ಕದಂಬ

ಅರಸ : ೬ನೇ ವಿಕ್ರಮಾದಿತ್ಯ , ೨ನೇ ಜಯಕೇಶಿ

ಕಾಲ : ಕ್ರಿ.ಶ. ೧೧೨೫

ಶಾಸನ ಅಪೂರ್ಣವಾಗಿದ್ದು, ಬರ್ಮಚಯ್ಯನಾಕಯನಿಂದ ಶಾಂತಿನಾಥ ಬಸದಿಗೆ ಭೂದಾನ ವಿಷಯವಿದೆ.[೨೨]

೧೧. ಗ್ರಾಮ : ಬೊಮ್ಮಿಗಟ್ಟಿ

ತಾಲೂಕು : ಕಲಘಟಗಿ

ಸ್ಥಳ : ಊರ ಚಾವಡಿ

ರಾಜವಂಶ : ಗೋವಾ ಕದಂಬ

ಅರಸ : ಜಯಕೇಶಿ ೨

ಕಾಲ : ಕ್ರಿ.ಶ. ೧೧೪೭

ತೃಟಿತವಾಗಿದ್ದು, ಸಿಂಘಣನಿಂದ ಜಿನಾಲಯಕ್ಕೆ ಭೂದಾನ ವಿಷಯವಿದೆ.[೨೩]

೧೨. ಗ್ರಾಮ : ಕುಯಿಬಾಳ

ತಾಲೂಕು : ಕುಂದಗೋಳ

ಸ್ಥಳ : ಮಸೀದಿ ಹತ್ತಿರ ಇನ್ನೊಂದು ಕಲ್ಲಿನಲ್ಲಿ

ರಾಜವಂಶ : ಕಲ್ಯಾಣ ಚಾಲುಕ್ಯ

ಅರಸ : ೨ನೇ ಜಗದೇಕಮಲ್ಲ

ಕಾಲ : ಕ್ರಿ.ಶ. ೧೧೪೮

ಸ್ವಸ್ತಿ ಶ್ರೀಮತ್ ಪ್ರತಾಪ ಚಕ್ರವರ್ತಿಜಗದೇಕಮಲ್ಲ ವರ್ಷದ ೧೧ನೆಯ ವಿಭವ ಸಂವತ್ಸರದ ಚೈತ್ರ ಸು. ೧೫ ಆದಿತ್ಯವಾರ ಮುಂ ಸೋಮಗ್ರಹಣ'ವೆಂದಿದ್ದು, ಇದು ಕ್ರಿ.ಶ.೧೧೪೮ ಏಪ್ರಿಲ್ ೪ ಆದಿತ್ಯವಾರಕ್ಕೆ ಸರಿಹೊಂದುತ್ತದೆ. ಇದು ಜಗದೇಕಮಲ್ಲ ದೇವನ ಕಾಲಕ್ಕೆ ಸೇರಿದ್ದು, ಗಾವುಂಡರು ಹಿಟ್ಟುಕಾರರು, ಸೆಟ್ಟಿಗುತ್ತರು ಮತ್ತು ಅರುವತ್ತೊಕ್ಕಲು ಪ್ರಮುಖರಾಗಿ ಭತ್ತವನ್ನು ಮಹಾಪ್ರಧಾನ ಪೆರ್ಜಂಕದ ವಡ್ಡರಾಳದ ದಂಡನಾಯಕ ಬೆಸದಿಂದ ಹೆರ್ಗ್ಗಡೆ ಮಾದಿರಾಜ ಆದಿತ್ಯನಾಯಕರು ಕುಯ್ಯಂಬಾಳ ಬಸದಿಗೆ ಬಿಟ್ಟ ವಿಷಯವಿದೆ.[೨೪]

೧೩. ಗ್ರಾಮ : ಸಿದ್ದನಹಳ್ಳಿ

ತಾಲೂಕು : ಕಲಘಟಗಿ

ಸ್ಥಳ : ಊರಲ್ಲಿ

ರಾಜವಂಶ : ಗೋವಾ ಕದಂಬ

ಅರಸ : ೨ನೇ ಜಯಕೇಶಿ

ಕಾಲ : ಕ್ರಿ.ಶ. ೧೧೫೯

ಈ ಶಾಸನದಲ್ಲಿ 'ಸಕ ವರ್ಷದ ೧೦೮೦ನೆಯ ಬಹುಧಾನ್ಯ ಸಂವತ್ಸರದ ಫಾಲ್ಗುಣ ಶುದ್ಧಷ್ಟಮಿಯ ಆದಿವಾರಮುಂ' ಎಂದು ನೀಡಿದ್ದು, ಇದು ಕ್ರಿ.ಶ. ೧೧೫೯ಮಾರ್ಚ ೧ ಆದಿತ್ಯವಾರಕ್ಕೆ ಸರಿಹೊಂದುತ್ತದೆ. ಶಾಸನದಲ್ಲಿ ಯಾವುದೇ ರಾಜನ ಉಲ್ಲೇಖವಿಲ್ಲ. ಗುಣನಂದಿ ವ್ರತೀದ್ರಂರಿಗೆ ಮಹಾಸಾಮಂತ ರುದ್ರಯ್ಯನು ತಮ್ಮಿಯೂರಿನ ಬೀರನಹಳ್ಳಿಯಲ್ಲಿ ತಾನೇ ಮಾಡಿಸಿದ ಬಸದಿಯಲ್ಲಿರುವ ವೃಷಿವರೇಣ್ಯರ ಆಹಾರದಾನಕ್ಕೆಂದು ಗುಣನಂದಿ ವ್ರತೀಂದ್ರರ ಪಾದ ಪ್ರಕ್ಷಾಲನವನ್ನುಮಾಡಿ ಕೆಲವು ಭೂದಾನವನ್ನು ಬಿಟ್ಟ ಉಲ್ಲೇಖ ಶಾಸನದಲ್ಲಿ ದಾಖಲಿಸಿದೆ.[೨೫]

೧೪. ಗ್ರಾಮ : ಕೊಮರಗೊಪ್ಪ

ತಾಲೂಕು : ನವಲಗುಂದ

ಸ್ಥಳ : ಶಿವದೇವಾಲಯದ ಎದುರು

ಕಾಲ : ಕ್ರಿ.ಶ. ೧೨ನೇ ಶ

ಈ ಶಾಸನದಲ್ಲಿ ಯಾವುದೇ ಕಾಲದ ಉಲ್ಲೇಖವಿರುವುದಿಲ್ಲ ಆದರೂ ಲಿಪಿಯ ದೃಷ್ಟಿಯಿಂದ ಇದನ್ನು ೧೨ನೇ ಶತಮಾನವೆಂದ ಬಾಳಚಂದ್ರ ಸಿದ್ಧಾಂತ ದೇವರ(ಜೈನ) ಶಿಷ್ಯಯೂಪೆರ್ಗಡೆ ವಾಸಿಯಣ್ಣನ ಹೆಂಡತಿಯೂ ಆದ ಚಾವಿಕಬ್ಬೆಯು ತ್ರಿಭುವನತಿಳಕವೆಂಬ ಜಿನ ದೇವಾಲಯದಲ್ಲಿರುವ ರಿಷಿ ಸಮುದಾಯದವರ ನಿತ್ಯಭೋಜನದ ಸಲುವಾಗಿ ಹದಿನೈದು ಸುವರ್ಣಗಳನ್ನು ನೀಡಿದ್ದ ವಿಷಯ ತಿಳಿಯುತ್ತದೆ.[೧೬]

೧೫. ಗ್ರಾಮ : ಮನಗುಂಡಿ

ತಾಲೂಕು : ಧಾರವಾಡ

ಸ್ಥಳ : ಕಲ್ಲಪ್ಪನವರ ಹಿತ್ತಲಲ್ಲಿ

ರಾಜವಂಶ : ಗೋವಾ ಕದಂಬರು

ಅರಸ : ೩ನೇ ಜಯಕೇಶಿ, ವಜ್ರದೇವ

ಕಾಲ : ೧೨೧೫, ೧೭, ೨೧, ೧೨೦೩

ಮನಗುಂಡಿಯ ಹಾಳು ಸಿದ್ದಲಿಂಗೇಶ್ವರ ಗುಡಿಯಲ್ಲಿ ದೊರೆಕಿದಂತಹ ಶಾಸನ(ಶಾಸನ ಸಂಖ್ಯ ೫೧) ದಂತೆಯೇ ಈ ಶಾಸನದಲ್ಲೂ ಆರು ಕಾಲಗಳ ಮಾಹಿತಿಯಿದೆ.

೧. 'ಕಲಿಯುಗ ಸಂವತ್ಸರಂ ೪೨೮೮ ಶ್ರೀ ಕದಂಬ ಶಿವಚಿತ್ತ ಶ್ರೀ ಜಯಕೇಶಿದೇವ ವರ್ಷದ ೨೯ನೆಯ ಯುವಸಂವತ್ಸರದ ಚೈತ್ರಬಹುಳ ೭ ಸೋಮವಾರ' ಎಂದಿದೆ. ಇದು ಕ್ರಿ.ಶ. ೧೨೧೫ ಮಾರ್ಚ, ೨೩ ಸೋಮವಾರಕ್ಕೆ ಸಮನಾಗುತ್ತದೆ.

೨. 'ಶಕವರ್ಷಂ ೧೧೩೮ನೆಯ ಯುವ ಸಂವತ್ಸರದ ಚೈತ್ರ ಬಹುಳ ೧೦ ಗುರುವಾರಕ್ಕೆಂದು ಸಂಕ್ರಾಂತಿಯುಂ ವ್ಯತೀಪಾತಮುಂ ಕೂಡಿದ ಪುಣ್ಯತಿಥಿ' ಎಂದಿದೆ. ಇದು ಕ್ರಿ.ಶ. ೧೨೧೫ ಮಾರ್ಚ ೨೬, ಗುರುವಾರಕ್ಕೆ ಸರಿಹೊಂದುತ್ತದೆ.

೩. 'ಶಕವರ್ಷಂ ೧೧೪೦ನೆಯ ಈಶ್ವರ ಸಂವತ್ಸರದ ಕಾರ್ತಿಕ ಶುದ್ಧಷ್ಟಮಿ ಗುರುವಾರ ಇದು ಮೂರನೆಯ ಕಾಲದ ಮಾಹಿತಿಯಾಗಿದ್ದು, ಇದು ಕ್ರಿ.ಶ. ೧೨೧೭ ಅಕ್ಟೋಬರ್ ೧೨, ಗುರುವಾರಕ್ಕೆ ಸರಿ ಹೊಂದುತ್ತದೆ.

೪. 'ಕಾದಂಬ ಶಿವಚಿತ್ತ ಶ್ರೀವೀರವಜ್ರದೇವ ವರ್ಷದ ೮ನೆಯ ವಿಷಸಂವತ್ಸರದ ದ್ವಿತೀಯ ವೈಶಾಖ ಶು ೧ವಡ್ಡವಾರ' ಇದು ೪ನೆಯ ಕಾಲದ ಉಲ್ಲೇಖವಾಗಿದ್ದು, ಇದು ಕ್ರಿ.ಶ. ೧೨೨೧. ಏಪ್ರಿಲ್ ೨೪ ಶನಿವಾರಕ್ಕೆ ಸರಿಹೊಂದುತ್ತದೆ.

೫. ಶ್ರೀ ಕಾದಂಬ ಶಿವಚಿತ್ತ ಶ್ರೀವಜ್ರದೇವವರ್ಷದ ವಿಷು ಸಂವತ್ಸರದ ದ್ವಿತಿಯ ವೈಶಾಖದಮವಾಸ್ಯ ಆದಿವಾರದಂದು ಸೂರ್ಯ್ಯಗ್ರಹಣ ಮುಕ್ತ ಕೂಡಿದ ಪುಣ್ಯತಿಥಿ' ಎಂದು ೫ನೆಯ ಕಾಲದ ಉಲ್ಲೇಖವಿದ್ದು, ಇದೂ ಕೂಡಾ ಕ್ರಿ.ಶ. ೧೨೨೧ ಮೇ ೨೭ ಆದಿತ್ಯವಾರಕ್ಕೆ ಸಮನಾಗಿದೆ.

೬. ಕಲಿಯುಗ ಸಂವತ್ಸರಂ ೪೨೮೮ ಸಂವಾಂದಿಯಾಗಿ ಶ್ರೀಕಾದಂಬ ಶಿವಚಿತ್ತ ಶ್ರೀವೀರವಾರ' ಎಂದಿದ್ದು, ಇದು ಕ್ರಿ.ಶ. ೧೨೦೩ ಜನವರಿ ೮, ಬುಧವಾರಕ್ಕೆ ಸರಿ ಹೊಂದುತ್ತದೆ.

ಪ್ರಾರಂಭದಲ್ಲಿ 'ಪಲಸಿಗೆ' ಎಂಬ ಊರಿನಲ್ಲಿ ಮಣಿಗುಂದಗೆಯೆಂಬ ಪಟ್ಟಣವಿದೆ. ಈ ಪಟ್ಟಣವನ್ನು ಪೆರ್ಮಾಡಿದೇವನು ಆಳುತ್ತಿದ್ದನು. ಆನಂತರ ಆತನ ಸಹೋದರ ವೀರ ವಿಜಯಾದಿತ್ಯ ಆತನ ಪುತ್ರನು ಜಯಕೇಶಿದೇವನು ಆಳ್ವಿಕೆ ನಡೆಸುತ್ತಿರಲು, ಮಾಣಿಕ್ಯಪುರವೆಂಬ ಪಟ್ಟಣದಲ್ಲಿ ಚೈತ್ರಭವನವಿದ್ದು, ಅಲ್ಲಿಯ ಆಚಾರ್ಯರಾದ ಶಶಾಂಕರೇರ ವೀರ್ಯಾಚಾರ್ಯರು, ಅವರ ಸುತನು ಶ್ರೀರಾಮಚಂದ್ರನು ಇವನ ಶಿಷ್ಯನು ಶ್ರೀಶಂಕರಾಚಾರ್ಯರು, ಇವರ ಸಮ್ಮತಿಯ ಮೇರೆಗೆ ಮಾಣಿಕ್ಯಪುರದ ಪ್ರಭುವಾದ ತಿಪ್ಪಗೌಡನೂ ಮತ್ತು ಮಸನಸೆಟ್ಟಿಯ ಸಾತಯ್ಯನೂ, ಕೇತಿಸೆಟ್ಟಿಯೂ ಮತ್ತು ಎಲ್ಲಾ ಭವ್ಯಜನರೂ ಸೇರಿ ಜಿನಾಲಯಕ್ಕೆ ಭೂದಾನವನ್ನು ಬಿಟ್ಟ ವಿಷಯವಿದೆ.[೨೭]

೧೬. ಗ್ರಾಮ	:	ತಡಕೋಡ
ತಾಲೂಕು	:	ಧಾರವಾಡ
ಸ್ಥಳ	:	ಕಲ್ಮೇಶ್ವರ ದೇವಾಲಯದ ಗೋಡೆ
ರಾಜವಂಶ	:	ಯಾದವ
ಅರಸ	:	ರಾಮಚಂದ್ರ
ಕಾಲ	:	ಕ್ರಿ.ಶ. ೧೨೮೨

ಶ್ರೀ ರಾಮಚಂದ್ರರಾಯ ವಿಜಯರಾಜ್ಯೋದಯ ೧೪ನೆಯ ಚೈತ್ರಭಾನು ಸಂವತ್ಸರದ ಜೇಷ್ಠ....'ಎಂದು ಕಾಲದ ವಿವರಣೆಯಿದ್ದು, ಪಕ್ಷ, ತಿಥಿ ಮತ್ತು ವಾರದ ವಿವರಣೆ ಇರುವುದಿಲ್ಲ ಹಾಗಾಗಿ ಇದರ ಕಾಲವನ್ನು ಕ್ರಿ.ಶ. ೧೨೮೨ ಮೇ ಅಥವಾ ಜೂನ್ ತಿಂಗಳೆಂದು ತಿಳಿಯಬಹುದು. ಭುಜಬಲಿಪ್ರತಾಪ ಶ್ರೀರಾಮಚಂದ್ರರಾಯರ ಸಕಲ ಸಮಯಾಧಿಪತಿ ಕನ್ನರದೇವರಾಣಿಯರ ಆಜ್ಞೆಯನುಸಾರ ಮಹಾಪ್ರಧಾನ ಸರ್ವಾಧಿಕಾರಿ ಮಾಯಿದೇವ ನಾಯ್ಕರ ನಿರೂಪದಿಂದ ತಮ್ಮ ಕೈಯಿಂದಲೇ ಪಟ್ಟಣದ ಬಸದಿಗೆ ಏನನ್ನೋ ನೀಡಿದ ಉಲ್ಲೇಖವಿದೆ.[೨೮]

೧೭. ಗ್ರಾಮ	:	ಗುಡಗೇರಿ
ತಾಲೂಕು	:	ಕುಂದಗೋಳ
ಸ್ಥಳ	:	ಜೈನ ಬಸದಿಯ-ಕಂಬ
ಕಾಲ	:	ಕ್ರಿ.ಶ. ೧೨ನೇ ಶ

ಗುಡಿಗೆರೆಯ ಮೋರೆಯ ಬಸದಿಗೆ ಜವನಿಸೆಟ್ಟಿಯ ಮಗ ಕೇತಯ್ಯನು (ಎಣ್ಣೆಯಗಾಣ ನೀಡಿದನು) ಊರಿನ ಎಲ್ಲ ಗಾಣದವರಿಂದ ಒಂದು ಧಾರಣೆಯನ್ನು ದಾನ ನೀಡಿದ ವಿಷಯವಿದೆ.[೧೨೯]

೧೮. ಗ್ರಾಮ : ಶಿರೂರು

ತಾಲೂಕು : ಕುಂದಗೋಳ

ಸ್ಥಳ : ತೀರ್ಥಂಕರ ಪಾದಪೀಠ

ಕಾಲ : ಕ್ರಿ.ಶ. ೧೨ನೇ ಶ

ಶಾಸನದಲ್ಲಿ ಕಾಲದ ನಿರ್ಣಯವಿಲ್ಲ. ಶಾಸನದಲ್ಲಿ ಯಾಪನೀಯ ಸಂಘ, ವೃಕ್ಷಮೂಲಗಣದ ಕುಸುಮ ಜಿನಾಲಯಕ್ಕೆ ಬರೆಯೂರಿನ ಕಾಳಿಸೆಟ್ಟಿಯು ಪಾರಿಶ್ವ(ಪಾರ್ಶ್ವ)ಭಟ್ಟಾರಕರರ ಈ ಪ್ರತಿಮೆಯನ್ನು ಮಾಡಿಸಿ ಕೊಟ್ಟಿರುವ ವಿಷಯವಿದೆ.[೧೩೦]

೧೯. ಗ್ರಾಮ : ಜಾವೂರ

ತಾಲೂಕು : ನವಲಗುಂದ

ಸ್ಥಳ : ಹನುಮಂತ ದೇವಾಲಯದ ಎದುರು ಕಂಬ

ಕಾಲ : ಕ್ರಿ.ಶ. ೧೩ನೇ ಶ

ಈ ಶಾಸನದಲ್ಲಿ ಕಾಲದ ಉಲ್ಲೇಖವಿಲ್ಲ. ಲಿಪಿದೃಷ್ಟಿಯಿಂದ ೧೩ನೆಯ ಶತಮಾನದ್ದು. ಶಾಸನವು ನವಿಲುಗುಂದದ ಶ್ರೀ ಜ್ವಾಲಾಮಾಲದೇವಿಯ ಬಸದಿಯ ಶ್ರೀ ಕಾರ್ಯಕ್ಕೆ ಸಕಳಚಂದ್ರ ಭಟ್ಟಾರಕ ದೇವರಿಗೆ ಬೀಚಿಸೆಟ್ಟಿಯ ಜಾವೂರು ದತ್ತಿಬಿಟ್ಟನು. ಜಾವೂರನ್ನು ಅರಸರುಗಳು ಹದಿನೆಂಟು ಸಮಯಗಳು ಮತ್ತು ಆಚಾರ್ಯಶ್ರೀ ಜಯಕೇಶಿ ದೇವರು ಪಾಲಿಸುವುದು ಎಂದು ಹೇಳಿದ್ದಲ್ಲದೇ, ಮಲ್ಲಿದೇವನ ಉಲ್ಲೇಖವಿದೆ.[೧೩೧]

೨೦. ಗ್ರಾಮ : ಭದ್ರಾಪೂರ

ತಾಲೂಕು : ನವಲಗುಂದ

ಸ್ಥಳ : ಸ.ನಂ.೧೯

ಕಾಲ : ಕ್ರಿ.ಶ. ೧೩ನೇ ಶ

ಶಾಸನವು ಸಂಪೂರ್ಣವಾಗಿ ತ್ರುಟಿತವಾಗಿದ್ದು, ಮಹಿಳೆಯೊಬ್ಬಳಿಂದ ಬಸದಿ ನಿರ್ಮಾಣವಾದದ್ದನ್ನು ದಾಖಲಿಸುತ್ತದೆ.[೧೩೨]

ಶಾಕ್ತ ದೇವಾಲಯಗಳಿಗೆ ನೀಡಿದ ದಾನ ಶಾಸನಗಳು

೧. ಗ್ರಾಮ : ಅಣ್ಣಿಗೇರಿ

ತಾಲೂಕು : ನವಲಗುಂದ

ಸ್ಥಳ : ಗುಲ್ಲಿಕೇರಿ ಬಸವಣ್ಣನ ಗುಡಿ–ಎದುರು

ರಾಜವಂಶ : ಕಲಚೂರಿ

ಅರಸ : ಬಿಜ್ಜಳ

ಕಾಲ : ಕ್ರಿ.ಶ. ೧೧೬೨

ಈ ಶಾಸನದಲ್ಲಿ ವೀರಬಜ್ಜಣದೇವ ವರ್ಷದ ೬ನೇಯ ವಿಷ ಸಂವತ್ಸರದ ಪುಷ್ಯದಮವಾಸ್ಯೆ ಭುಧವಾರ ವ್ಯತೀಪಾತ ಸೂರ್ಯಗ್ರಣ" ಎಂದಿದ್ದು, ಇದು ಕ್ರಿಶ ೧೧೬೨ ಜನೆವರಿ ೧೭ಕ್ಕೆ ಸರಿಹೊಂದುತ್ತದೆ. ತ್ರಿಭುವನಮಲ್ಲಿ ಬುಜ್ಜಣದೇವನ ಕಾಲಕ್ಕೆ ಸಂಬಂಧಪಟ್ಟಿದ್ದಾಗಿದ್ದು, ಆತನ ಸಾಮಂತ ರಾಜನು ಶಾಂಡಿಲ್ಯಗೋತ್ರದ ಸಿದ್ದುದಂಡನಾಥನು ಆತನ ಅಂಕಕಾರ ಬರ್ಮ್ಮಣಯ್ಯನು ಆತನ ಬಂಧುವೇ ಕೇಸಿರಾಜನು ಈ ಕೇಸಿರಾಜನು ಬಿನ್ನಹದ ಮೇರೆಗೆ ಬೆಳ್ವಲ ನಾಡಿನ ಪೆರ್ಗಡೆ ದಂಡನಾಯಕ ಶ್ರಿಧರಯ್ಯಂಗಳು ಅಣ್ಣಿಗೆರೆಯ ಶ್ರೀಪುಣ್ಯಕ್ಷೇತ್ರ ಚಂಡಿಕಾದೇವಿಯ ರಂಗಭೋಗ ನೈವೇದ್ಯಕ್ಕೆಂದು, ಅದೇ ಸ್ಥಳದ ಬ್ರಾಹ್ಮಣರಿಗೆ, ಪೂಜಾರಿಗಳಿಗೆ ಭೂದಾನವನ್ನು ಕೊಟ್ಟ ವಿಷಯವಿದೆ.[೧೩೩]

೨. ಗ್ರಾಮ : ದೇವರ ಹುಬ್ಬಳ್ಳಿ

ತಾಲೂಕು : ಧಾರವಾಡ

ಸ್ಥಳ : ಕೋಡಿ ಬಸವಣ್ಣನ ದೇವಾಲಯದ–ಎದುರು

ರಾಜವಂಶ : ಗೋವಾ ಕದಂಬ

ಅರಸ : ೩ನೇ ಜಯಕೇಶಿ

ಕಾಲ : ಕ್ರಿ.ಶ. ೧೨೦೬

ಜಯಕೇಶಿದೇವ ವರ್ಷದ ೨೦ನೆಯಕ್ಷಯ ಸಂವತ್ಸರದ ಜೇಷ್ಠ ಸುದ್ದ ೮ ಬುಧವಾರವೆಂದಿದೆ. ಇದು ಕ್ರಿ.ಶ. ೧೨೧೬ ಮೇ ೧೭, ಬುಧವಾರಕ್ಕೆ ಸಮನಾಗುತ್ತದೆ. ಉಲ್ಲೇಖಿತ ದಿನದಂದು ಹುಪ್ಪವಳ್ಳಿ(ದೇವರ ಹುಬ್ಬಳ್ಳಿ ಪ್ರಾಚೀನ ಹೆಸರು)ಯ ೫ ಮೀಸಕದ ಪ್ರಮುಖ ಮಹಾಸಭೆಯನ್ನು ಕರೆದು ತಮ್ಮೊಳಗೆ ಐಕ್ಯಮತ್ಯವಾಗಿ ಶ್ರೀಮಹಾಲಕ್ಷ್ಮಿದೇವಿಯ ಪ್ರತಿಷ್ಠೆಯನ್ನು ಮಾಡಿ, ಆ ದೇವಿಯ ನೈವೇದ್ಯಕ್ಕೆಂದು ಮೂವರಕಟ್ಟಿ ಬಳಿ ೪೦೦ ಕಂಬ ಭೂಮಿ, ಅಂಗಡಿ ಸರ್ವಸಮಸ್ತವಾಗಿ ಬಿಟ್ಟು, ಕಾಳವೆ ಲೋಕಣನು ದೇವಕಾರ್ಯವನ್ನು ಮಾಡಬೇಕೆಂದು ನಿರ್ಧರಿಸುವನು. ಮತ್ತು ಹಲಸಿಗೆಯ, ಧಾರವಾಡ, ನರೇಂದ್ರಪುರ, ತಡಕೋಡ ಮತ್ತು ಅಮ್ಮೆಯಬಾವಿಯ, ಸೆಟ್ಟಿಗುತ್ತಿರು. ಚೌರಿಸೆಟ್ಟಿ,

ಕಂನ....ಸೋಸನಸೆಟ್ಟಿ ಮೊದಲಾದವರು ಕೂಡಿಕೊಂಡು ದೇವಿಯ ನಂದಾದೀವಿಗೆಗಾಗಿ ಎಣ್ಣೆ ಹಾಗೂ ಭತ್ತವನ್ನು, ನಾಲ್ಕು ಪಟ್ಟಣದ ೫೦೪ ಜನ ಸೆಟ್ಟಿಗಳ ಸಮ್ಮುಖದಲ್ಲಿ ದೇವಿಯ ಚೈತ್ರದ ಪರ್ವಕ್ಕೆಂದು ಎಲೆಯ ಬೋಜಂಗರು ಮತ್ತು ಗಾತ್ರಿಗರು ವಿವಿಧ ದಾನಗಳನ್ನು ಬಿಟ್ಟ ಉಲ್ಲೇಖವಿದೆ.[೧೩೪]

೩. ಗ್ರಾಮ : ಕುಂದಗೋಳ

ತಾಲೂಕು : ಕುಂದಗೋಳ

ಸ್ಥಳ : ದುರ್ಗಾ ದೇವಾಲಯದ–ಎದುರು

ರಾಜವಂಶ : ಯಾದವ

ಅರಸ : ಸಿಂಘಣ

ಕಾಲ : ಕ್ರಿ.ಶ. ೧೨೪೦

ಈ ಶಾಸನವು ಆ ರಾಜನ ಅಧಿಕಾರದ ೩೨ನೇ ವರ್ಷಸಾರ್ವರಿ ಸಂವತ್ಸರದ ಚೈತ್ರಬಹುಳ ೧೧ ಬುಧವಾರ ಅಂದರೆ ಕ್ರಿ.ಶ. ೧೨೪೦ ಮಾರ್ಚ ೨೦, ಈ ದಾಖಲೆಯ ದಿನಾಂಕ ಮಂಗಳವಾರ ಕ್ಕೆ ಸಮವಾಗುತ್ತದೆ. ಈ ಶಾಸನ ೨ ಭಾಗಗಳನ್ನು ಒಳಗೊಂಡಿದ್ದು ೧ ಭಾಗವು ಸಂಸ್ಕೃತ ಭಾಷೆಯಲ್ಲಿದೆ. ಇದು ಮಾಧವ ರಾಯನಮೊಮ್ಮಗ ಬಸವನ ಮಗ ಸಿಂಘನ ಅರಸನ ಅಧಿಕಾರಿ ವಾಸುದೇವನ ಒಪ್ಪಿಗೆಯ ಮೇರೆಗೆ ಕುಂದಾಮಗಳೊಳ(ಕುಂದಗೋಳ)ದ ದುರ್ಗಾ ದೇವಾಲಯಕ್ಕೆ ದೇವಾಲಯದ ಪೂಜೆಗೆ ಆರು ಮತ್ತರು ಭೂಮಿಯನ್ನು ದಾನವಾಗಿ ನೀಡುತ್ತಾನೆ. ವೈಜನಾಥನು ಈ ದಾಖಲೆಯನ್ನು ಪಡೆದುಕೊಂಡವನು. ಶಾಸನದ ಕೊನೆಯ ಭಾಗವು ಕನ್ನಡ ಭಾಷೆಯಲ್ಲಿದ್ದು, ತಳಿಯರ ಮಲ್ಲಯ್ಯನು ಆರು ಮತ್ತರು ಭೂಮಿಯನ್ನು ನೀಡಿದನು ಮತ್ತು ಕುಂದಗೋಳದ ಐವತ್ತೊಕ್ಕಲು ಜನ ಕುಂದಗೋಳದ ದುರ್ಗಾದೇವಾಯಲದ ಅಂಗಭೋಗಕ್ಕೆ ಎಣ್ಣೆಗಾಣವನ್ನು ದಾನವಾಗಿ ನೀಡಿರುವ ಈ ದಾನವನ್ನು ಕುಂದಗೋಳದ ಸಾವಿರ ಮಹಾಜನರು ಕಾಯ್ದುಕೊಂಡು ಬಂದರು ಎಂದಿದೆ.[೧೩೫]

೩.೩ ವೀರಗಲ್ಲುಗಳು

ಪ್ರಾಚೀನ ಕಾಲದಿಂದಲೂ ಸದ್ಗತಿಯನ್ನು ಸಂಪಾದನೆ ಮಾಡುವುದೇ ಕನ್ನಡಿಗರ ಪ್ರಮುಖ ಗುರಿಯಾಗಿಟ್ಟುಕೊಂಡು ಜೀವಿಸುತ್ತಾ ಬಂದಿದ್ದಾರೆ. ಇದಕ್ಕೆ ಆತ್ಮಾನುಸಂಧಾನ, ಆದರ್ಶಾನುಸಂಧಾನ, ಮತ್ತು ಮೌಲ್ಯಾನು ಸಂಧಾನಗಳನ್ನು ಸಾಧನಗಳನ್ನಾಗಿ ಪರಿಭಾವಿಸಿ ಕೊಂಡಿದ್ದಾರೆ.[೧೩೬] ವೀರಗಲ್ಲಿನ ಪದ ನಿಷ್ಪತ್ತಿ 'ವೀರ' ಇದು ಗುಣವಾಚಕ ಪದವಾಗಿದ್ದು, ವ್ಯಕ್ತಿಯ ವಿಶಿಷ್ಟ ಸಾಧನೆ, ಶೌರ್ಯ, ಸಾಹಸ ಮುಂತಾದ ಗುಣಗಳನ್ನು ಸೂಚಿಸುತ್ತದೆ. ಆಂಗ್ಲ ಭಾಷೆಯ 'Hero stone' ಎಂಬ ಪದಕ್ಕೆ ಸಂವಾದಿಯಾಗಿ ಕನ್ನಡದಲ್ಲಿ 'ವೀರಗಲ್ಲು' ಎಂಬ ಪದವನ್ನು ಬಳಸಲಾಗಿದೆ.[೧೩೭]

ವೀರತನದಿಂದ ಜೀವಿಸುತ್ತ ಬಂದ ವಿವಿಧ ಸಂದರ್ಭಗಳಲ್ಲಿ ಹೋರಾಡಿ ವೀರಮರಣವನ್ನಪ್ಪಿದ ಹಾಗೂ ತಮ್ಮ ಕೋರಿಕೆಯನ್ನು ಈಡೇರಿಸಲು ಸಾವನ್ನಪ್ಪಿದ ಜೊತೆಗೆ ಅವರ ವಿನಯಾರ್ಥವಾಗಿ, ಪರೋಕ್ಷವಾಗಿ ವೀರಗಲ್ಲುಗಳನ್ನು ನಿಲ್ಲಿಸುವ ಪರಂಪರೆಯನ್ನು ಕಾಣುತ್ತೇವೆ.[೧೩೮]

ವೀರಗಲ್ಲಿನ ಪ್ರಾಚೀನತೆಯ ಕುರಿತು ಚೀನಾದ ಯಾತ್ರಿಕನಾದ ಹುಯನ್‌ತ್ಸಾಂಗ್ ತನ್ನ ಪ್ರವಾಸ ಕಥನದಲ್ಲಿ "ಕನ್ನಡಿಗರು ತಮಗೆ ಅಪಮಾನವಾದರೆ ಶತ್ರುಗಳಿಗೆ ಎಚ್ಚರಿಕೆಯನ್ನು ಕೊಟ್ಟು, ಪ್ರಾಣಹೋದರೂ ಸೇಡನ್ನು ತೀರಿಸಿಕೊಳ್ಳದೇ ಬಿಡುವವರಲ್ಲ, ಯುದ್ಧದಲ್ಲಿ ಸೋತು ಶರಣಾದ ದಳಪತಿಗೆ ಸ್ತ್ರೀಯರ ವೇಷಭೂಷಣಗಳನ್ನು ಹಾಕಿ ಅಪಮಾನದಿಂದ ಸಾಯುವಂತೆ ಮಾಡುತ್ತಾರೆ.[೧೩೯] ಹಾಗೆಯೇ ಶ್ರೀವಿಜಯನ ಕವಿರಾಜಮಾರ್ಗದಲ್ಲಿ.[೧೪೦] ರನ್ನನ ಗದಾಯುದ್ಧದಲ್ಲಿ,[೧೪೧] ಮಹಾಭಾರತದ ವಿರಾಟಪರ್ವದಲ್ಲಿ[೧೪೨] ಈ ಬಗ್ಗೆ ಉಲ್ಲೇಖವಿದೆ.

ಮುಖ್ಯವಾಗಿ ವೀರಗಲ್ಲುಗಳ ಉದ್ದೇಶ ವೀರ ಪರಾಕ್ರಮವನ್ನು ಸಾರುತ್ತದೆ. ಈ ವೀರಗಲ್ಲು ಶಿಲ್ಪಗಳು ಹೆಚ್ಚಿನ ಮಟ್ಟಿಗೆ ಮೂರು, ನಾಲ್ಕು, ಏಳು, ಪಟ್ಟಿಕೆಗಳನ್ನು ಒಳಗೊಂಡಿರುತ್ತವೆ. ಮೊದಲನೆಯ ಪಟ್ಟಿಕೆಯಲ್ಲಿ ವೀರನು ಯುದ್ದದಲ್ಲಿ ಹೋರಾಡುತ್ತಿರುವ ಚಿತ್ರಣವನ್ನು, ಮಧ್ಯಮ ಹಂತದಲ್ಲಿ ಅಪ್ಸರೆಯರು ವೀರನನ್ನು ಶಿವನ ಸಾನಿದ್ಯಕ್ಕೆ ಕರೆದುಕೊಂಡು ಹೋಗುತ್ತಿರುವ ಹಾಗೂ ಮೇಲ್ಭಾಗದ ಹಂತದಲ್ಲಿ ವೀರನು ಶಿವನ ಸಾನಿದ್ಯದಲ್ಲಿ ಇರುವಿಕೆಯನ್ನು ಕಾಣುತ್ತೇವೆ.[೧೪೩]

ಈ ವೀರಗಲ್ಲು ಶಿಲ್ಪಗಳ ಮೇಲಿನ ಶಾಸನ ಮತ್ತು ಶಿಲ್ಪಗಳ ನಿರೂಪಣೆಯನ್ನು ಹಿನ್ನಲೆಯಾಗಿಟ್ಟುಕೊಂಡು ತುರುಗೋಳ್, ಪೆಣ್ಬುಯಿಲ್, ಊರಳಿವು, ಗಡಿಕಾಳಗ, ವ್ಯಕಿ–ಪ್ರಾಣಿಗಳ ಹೋರಾಟ, ಕಳ್ಳರೊಡನೆ ಹೋರಾಟ, ಪ್ರಾಣಿ–ಪ್ರಾಣಿಗಳೊಡನೆ ಹೋರಾಟ, ವೇಳವಾಳಿ, ಹರಕೆ, ಬಲಿದಾನ, ವೀರಸ್ಥಂಭ, ಲೆಂಕವಾಳಿ, ಸಿಡಿತಲೆ, ಗರುಡ ಪದ್ಧತಿಯ ಪ್ರಕಾರಗಳನ್ನು ಗುರುತಿಸಬಹುದಾಗಿದೆ.[೧೪೪]

ಒಟ್ಟಾರೆ ಸಂಕೇತಕ್ಕಾಗಿ ನಿಲ್ಲಿಸಿದ ಈ ಶಿಲೆಗಳು, ಆ ವೀರನ ಜೀವನ, ಧೋರಣೆ ಮತ್ತು ವಿಧಾನವನ್ನು ಜೊತೆಗೆ ಅಂದಿನ ನಾಗರಿಕತೆಯ ಮತ್ತು ಸಂಸ್ಕೃತಿಯ ಪ್ರತಿಬಿಂಬಗಳಾಗಿವೆ.[೧೪೫]

ಪ್ರಸ್ತುತ ಈ ಅಧ್ಯಯನ ಪ್ರದೇಶದಲ್ಲಿ ಶಾಸನಸಹಿತ ವೀರಗಲ್ಲುಗಳು ಮತ್ತು ಶಾಸನರಹಿತ ವೀರಗಲ್ಲುಗಳು ಎಂದು ವಿಭಾಗಿಸಲಾಗಿದೆ.

೧.	ಗ್ರಾಮ	:	ಕಲ್ಲೆ
	ತಾಲೂಕು	:	ಧಾರವಾಡ
	ಸ್ಥಳ	:	ಬಸವಣ್ಣ ದೇವಾಲಯದ–ಹತ್ತಿರ
	ಕಾಲ	:	ಕ್ರಿ.ಶ. ೮ನೇ ಶ

ಈ ವೀರಗಲ್ಲು ಶಾಸನದಲ್ಲಿ ಕಾಲದ ಉಲ್ಲೇಖವಿಲ್ಲ, ಲಿಪಿಯ ಆಧಾರದಿಂದ ೮ನೇ ಶತಮಾನವೆಂದು ತಿಳಿಯಬಹುದು. ಶ್ರೀ ಬಯ್ಸರ ಸಬ್ಬಯನೆಂಬುವವನು ದೊಡ್ಡವಾಡದಲ್ಲಿ ನಡೆದ ಊರಳಿವಿನಲ್ಲಿ ಕಾದಾಡಿ ಸುರಲೋಕವನ್ನು ಸೇರಿದನೆಂಬ ವಿಷಯ ದೊರೆಯುತ್ತದೆ.[೧೪೬]

೨. ಗ್ರಾಮ : ಛಬ್ಬಿ

ತಾಲೂಕು : ಹುಬ್ಬಳ್ಳಿ

ಸ್ಥಳ : ಹುಡೇದಹತ್ತಿರ–ವೀರಗಲ್ಲು

ಕಾಲ : ಕ್ರಿ.ಶ. ೯ನೇ ಶ

ಅಸ್ಪಷ್ಟವಾಗಿದ್ದು, ಅಕ್ಷರಗಳು ಸಂಪೂರ್ಣ ಹಾಳಾಗಿವೆ.[೧೪೭]

೩. ಗ್ರಾಮ : ಗಬ್ಬೂರು

ತಾಲೂಕು : ಹುಬ್ಬಳ್ಳಿ

ಸ್ಥಳ : ಹನುಮಂತ ದೇವರ ಗುಡಿ–ವೀರಗಲ್ಲು

ಕಾಲ : ಕ್ರಿ.ಶ. ೯೦೯

ತೃಟಿತವಾಗಿದ್ದು, ಗೊಬ್ಬನೂರಲ್ಲಿ ಕೊಂತದ ನಾಗನ ಮರಣದ ವಿಷಯವಿದೆ.[೧೪೮]

೪. ಗ್ರಾಮ : ತಂಬೂರ

ತಾಲೂಕು : ಕಲಘಟಗಿ

ಸ್ಥಳ : ಬಸವಣ್ಣ ದೇವಾಲಯದ ಹೊರಗೆ–ವೀರಗಲ್ಲು

ರಾಜವಂಶ : ರಾಷ್ಟ್ರಕೂಟ

ಅರಸ : ಗೋವಿಂದ ೪

ಕಾಲ : ಕ್ರಿ.ಶ. ೯೩೨

ಎರಡು ತುಣುಕಾದ ಈ ಶಾಸನದಲ್ಲಿ, ಕಣ್ಣಹ ಮಹಾರಾಜ ಪಲಸಿಗೆ–೧೨೦೦೦ ಆಳುವಾಗ ತಮ್ಮ ಊರ ಅಣ್ಣಿಗನ ವೀರಮರಣ ಎಂದಿದೆ.[೧೪೯]

೫. ಗ್ರಾಮ : ಅದರಗುಂಚಿ

ತಾಲೂಕು : ಹುಬ್ಬಳ್ಳಿ

ಸ್ಥಳ : ಹನುಮಂತ ದೇವಾಲಯದ–ವೀರಗಲ್ಲು

ಕಾಲ : ಕ್ರಿ.ಶ. ೧೦ನೇ ಶ

ವಿಷಯ ಅಸ್ಪಷ್ಟವಾಗಿದ್ದು, ವೀರಗಲ್ಲು ನಿಲ್ಲಿಸಿದ ಉಲ್ಲೇಖವಿದೆ.[೧೫೦]

೬. ಗ್ರಾಮ : ತಂಬೂರು

ತಾಲೂಕು : ಕಲಘಟಗಿ

ಸ್ಥಳ : ಬಸವಣ್ಣ ದೇವಾಲಯದ ಹೊರಗೆ

ಕಾಲ : ಕ್ರಿ.ಶ. ೧೦ನೇ ಶ

ತುಣುಕು, ಸಾಸಿರ್ವರ ಅನುಮತಿಯಿಂದ ಮರಣಹೊಂದಿದ ಯೋಧನ ಸ್ಮರಣಾರ್ಥವಾಗಿ ಆತನ ಮೈದುನ ವೀರಗಲ್ಲು ನಿಲ್ಲಿಸಿದ ಉಲ್ಲೇಖವಿದೆ.[೧೫೧]

೭. ಗ್ರಾಮ : ಸಂಗಮೇಶ್ವರ

ತಾಲೂಕು : ಕಲಘಟಗಿ

ಸ್ಥಳ : ರೈತನೊಬ್ಬನ ಮನೆಯ ಹಿತ್ತಲಿನಲ್ಲಿ

ರಾಜವಂಶ : ಗೋವಾ ಕದಂಬ

ಅರಸ : ೩ನೇ ಗುವಲದೇವ

ಕಾಲ : ೧೦೭೯

ಈ ಶಾಸನದಲ್ಲಿ 'ಶಕವರ್ಷ ೧೦೦೩ನೆಯ ದುರ್ಮತಿ ಸಂವತ್ಸರದ ಜೇಷ್ಟ ಶುದ್ಧ ಪಾಡ್ಯ ಮಂಗಳವಾರ' ಎಂದು ಕಾಲವನ್ನು ನೀಡಿದ್ದು, ಇದು ಕ್ರಿ.ಶ. ೧೦೮೧ ಮೇ, ೧೧ ಮಂಗಳವಾರಕ್ಕೆ ಸರಿಹೊಂದುತ್ತದೆ. ಈ ಶಾಸನವು ಅಸ್ಪಷ್ಟವಾಗಿದ್ದು, ಗೂವಳದೇವನನ್ನು ಹೆಸರಿಸುತ್ತದೆ. ಈ ಕಾಲಕ್ಕೆ ಜೀವಿತದಲ್ಲಿದ್ದುದು ಗೂವಳದೇವ(ಜಯಕೇಸಿ ೧ನಪುತ್ರ)ನು ಈತನ ಬಂಟನೂ ಪಡವಲ ಬೆರ್ಮಜ್ಜನ ಅನುಜನು(ಹೆಸರು ಅಸ್ಪಷ್ಟ) ಯುದ್ಧದಲ್ಲಿ ಮಡಿದ ವಿಷಯವಿದೆ.[೧೫೨]

೮. ಗ್ರಾಮ : ಮಂಟೂರು

ತಾಲೂಕು : ಹುಬ್ಬಳ್ಳಿ

ಸ್ಥಳ : ಹನುಮಂತ ದೇವಾಲಯದ ಎದುರು–ವೀರಗಲ್ಲು

ಕಾಲ : ಕ್ರಿ.ಶ. ೧೧ನೇ ಶ

ತೃಟಿತವಾಗಿರುವ ಈ ಶಾಸನದಲ್ಲಿ, ಕಲಿವಿಟ್ಟನ ವೀರಮರಣ ಎಂದಿದೆ.[೧೫೩]

೯. ಗ್ರಾಮ : ಅಳ್ನಾವರ

ತಾಲೂಕು : ಧಾರವಾಡ

ಸ್ಥಳ : ಬರಗುಂಡಿಯವರ ಮನೆಯ ಆವರಣ–ವೀರಗಲ್ಲು

ರಾಜವಂಶ : ಗೋವಾ ಕದಂಬ

ಅರಸ : ಗೋವಲದೇವ

ಕಾಲ : ಕ್ರಿ.ಶ. ೧೧ನೇ ಶ

ಲಿಪಿಯ ದೃಷ್ಟಿಯಿಂದ ಈ ಶಾಸನದ ಕಾಲ ಕ್ರಿ.ಶ. ೧೧ನೆಯ ಶತಮಾನ. ಗೋವೆಯ ಕದಂಬ ಗೋವಲದೇವನು ಆಳುತ್ತಿರಲು ವೀರನು ಯುದ್ದದಲ್ಲಿ ಹೋರಾಡಿ ಸ್ವರ್ಗಸ್ಥನಾದ ಉಲ್ಲೇಖವು ವೀರಗಲ್ಲಿನಲ್ಲಿ ಕಂಡು ಬಂದಿದ್ದು, ವೀರನ ಹೆಸರು ಸ್ಪಷ್ಟವಾಗುವುದಿಲ್ಲ.[೧೫೪]

೧೦. ಗ್ರಾಮ : ಕಂದಲಿ

ತಾಲೂಕು : ಕಲಘಟಗಿ

ಸ್ಥಳ : ಕಂದಲಿಯ ಹಾಳು ಜಾಗೆ–ವೀರಗಲ್ಲು

ಕಾಲ : ಕ್ರಿ.ಶ. ೧೧೩೨

ಅಜ್ಜಿಗಾದೆಯ ತೈಲಯ ಸಾವಂತನು ಕಿರುವತ್ತಿಯನ್ನು ಮುತ್ತಿದಾಗ ಅಹವಮಲ್ಲಯ್ಯ ನಾಯಕನ ವೀರಮರಣ ಎಂದು ದಾಖಲಿಸಿದೆ.[೧೫೫]

೧೧. ಗ್ರಾಮ : ತಂಬೂರು

ತಾಲೂಕು : ಕಲಘಟಗಿ

ಸ್ಥಳ : ಈಶ್ವರ ದೇವಾಲಯ–ವೀರಗಲ್ಲು

ರಾಜವಂಶ : ಕಲ್ಯಾಣ ಚಾಲುಕ್ಯ

ಅರಸ : ೩ನೇ ಸೋಮೇಶ್ವರ

ಕಾಲ : ಕ್ರಿ.ಶ. ೧೧೩೫

ಯುದ್ದದಲ್ಲಿ ಮಾಚನಾಯಕನ ವೀರಮರಣ.[೧೫೬]

೧೨. ಗ್ರಾಮ : ತಂಬೂರು

ತಾಲೂಕು : ಕಲಘಟಗಿ

ಸ್ಥಳ : ಕೋಟೆಯ ಕಂದಲಿ–ವೀರಗಲ್ಲು(ಕೆ.ಆರ್.ಐ)

ರಾಜವಂಶ : ಕಲ್ಯಾಣ ಚಾಲುಕ್ಯ, ಕಲಚೂರಿ

ಅರಸ : ೩ನೇ ಸೋಮೇಶ್ವರ, ಬಿಜ್ಜಳ

ಕಾಲ : ಕ್ರಿ.ಶ. ೧೧೩೬

ಶಾಸನದಲ್ಲಿ ಕಾಲವನ್ನು ಶ್ರೀಭೂಲೋಕ ವರ್ಷದ ೧೧ನೆಯ ನಳ ಸಂವತ್ಸರದ ಜೇಷ್ಠ ಶು ೧೪ ಮಂಗಳವಾರ ವೆಂದಿದ್ದು, ಇದು ಕ್ರಿ.ಶ. ೧೧೩೬....ಸರಿಹೊಂದುತ್ತದೆ. ಹಾನಗಲ್ಲು ಕದಂಬ ಅರಸನಿಗೆ ಸಂಬಂಧಿಸಿದ ಶಾಸನವಾಗಿದೆ. ಮಹಾಮಂಡಳೇಶ್ವರ ವೀರ ಕದಂಬಮಲ್ಲಿಕಾರ್ಜುನ ದೇವನು ತನ್ನ ರಾಜಧಾನಿಗೆ ಬಂದು ಹಾನಗಲ್ಲಿನ ಪೂರ್ವದಲ್ಲಿ ಬೀಡುಬಿಟ್ಟ, ಹಾನಗಲ್ಲು ಕೋಟೆಗೆ ತನ್ನ ಆನೆಯನ್ನು ಆಕ್ರಮಣ ಮಾಡಿದಾಗ ಸಾಮಂತ ಮೈದುನ ಮಲ್ಲಿರಸನು ಹೋರಾಡಿ ಆನೆಯನ್ನು ಕೊಂದು ವೀರಮರಣ ಹೊಂದಿದ ವಿಷಯವಿದೆ.[೧೫೭]

೧೩. ಗ್ರಾಮ : ತಂಬೂರು

ತಾಲೂಕು : ಕಲಘಟಗಿ

ಸ್ಥಳ : ಊರ ಅಗಸಿ–ವೀರಗಲ್ಲು

ರಾಜವಂಶ : ಕಲ್ಯಾಣ ಚಾಲುಕ್ಯ

ಅರಸ : ೩ನೇ ಸೋಮೇಶ್ವರ

ಕಾಲ : ಕ್ರಿ.ಶ. ೧೧೩೯

ಶಾಸನದಲ್ಲಿ ಕಾಲವನ್ನು 'ಭೂಲೋಕ ವರ್ಷದ ೧೩ನೆಯ ಕಾಳಯುಕ್ತ ಸಂವತ್ಸರದ ಫಾಲ್ಗುಣ ಶುದ್ದ ೭ ಆದಿವಾರವೆಂದಿದ್ದು, ಇದು ಕ್ರಿ.ಶ. ೧೧೩೯ ಫೆಬ್ರವರಿ ೫ ಆದಿತ್ಯವಾರಕ್ಕೆ ಸರಿ ಹೊಂದುತ್ತದೆ. ಇದು ಜೋಳವಳಿ ಸ್ಮಾರಕಶಾಸನವಾಗಿದ್ದು, ಗಾವಣಿಗ ಕುಲತಿಲಕ ಸಿಡಿಲಕೇತನನ ಪುತ್ರ ಸಾಮಂತ ಮೂಲಕರಸನ ನೆಚ್ಚಿನ ಆಳು ಜೋಳವಾಳಿಯ ಕ್ರಮದಿಂದ ಸುರಲೋಕವನ್ನು ಹೊಂದಿದನು. ವೀರನ ಹೆಸರು ದಾಖಲಾಗಿಲ್ಲ, ಆತನ ಮರಣದ ನಂತರ ಆತನ ತಂದೆ ಸಿಡಿಲಕೇತ ತಾಯಿ ನಾಗಿಯಕ್ಕ ಮತ್ತು ಆತನ ಅಣ್ಣ ಅಜಣನು ಈ ವೀರಗಲ್ಲನ್ನು ನಿಲ್ಲಿಸಿದನು.[೧೫೮]

೧೪. ಗ್ರಾಮ : ಮುಗುದ

ತಾಲೂಕು : ಧಾರವಾಡ

ಸ್ಥಳ : ಹೆಗ್ಗರೆಯ ದಿಬ್ಬದ ಮೇಲಿನ ಈಶ್ವರಗುಡಿ–ವೀರಗಲ್ಲು

ಕಾಲ : ಕ್ರಿ.ಶ. ೧೨ನೇ ಶ

ಶಾಸನ ಅಸ್ಪಷ್ಟವಾಗಿದ್ದು, ಶ್ಲೋಕದ ಕೊನೆಯ ಭಾಗದಲ್ಲಿ 'ಮುಗುದ' ಗ್ರಾಮದ ಹೆಸರಿದೆ.[೧೫೯]

೧೫. ಗ್ರಾಮ : ಮಂಟೂರು

ತಾಲೂಕು : ಹುಬ್ಬಳ್ಳಿ

ಸ್ಥಳ : ವಲ್ಲಭೇಶ್ವರ ದೇವಾಲಯದ ಆವರಣ–ವೀರಗಲ್ಲು

ಕಾಲ : ಕ್ರಿ.ಶ. ೧೨ನೇ ಶ

ತೃಟಿತ, ಅಸ್ಪಷ್ಟವಾಗಿದೆ.[೧೬೦]

೧೬. ಗ್ರಾಮ : ಬ್ಯಾಹಟ್ಟಿ

ತಾಲೂಕು : ಹುಬ್ಬಳ್ಳಿ

ಸ್ಥಳ : ಹನುಮಂತ ದೇವಾಲಯದ ಆವರಣ–ವೀರಗಲ್ಲು

ಕಾಲ : ಕ್ರಿ.ಶ. ೧೨ನೇ ಶ

ತೃಟಿತವಾಗಿದ್ದು, ಈಶ್ವರನೆಂಬವನು ಗಾಮುಂಡನಾಗಿದ್ದ ಉಲ್ಲೇಖವಿದೆ.[೧೬೧]

೧೭. ಗ್ರಾಮ : ಹನಸಿ

ತಾಲೂಕು : ನವಲಗುಂದ

ಸ್ಥಳ : ಹನುಮಂತ ದೇವಾಲಯದ ಎದುರು–ವೀರಗಲ್ಲು

ಕಾಲ : ಕ್ರಿ.ಶ. ೧೨ನೇ ಶ

ಈ ಶಾಸನ ಅಸ್ಪಷ್ಟವಾಗಿದ್ದು, ಕಾಲದ ಉಲ್ಲೇಖವಿರುವುದಿಲ್ಲ. ಒಬ್ಬ ವೀರನ ಪರಾಕ್ರಮವನ್ನು ವರ್ಣಿಸುವಂತಿದೆ. ಚಂದಿಯಪ್ಪ ಮತ್ತು ನಾರಯಣಿ ಎಂಬೆರಡು ಹೆಸರಿನ ವಿಷಯವಿದೆ.[೧೬೨]

೧೮. ಗ್ರಾಮ : ಬ್ಯಾಹಟ್ಟಿ

ತಾಲೂಕು : ಹೆಬ್ಬಳ್ಳಿ

ಸ್ಥಳ : ವೀರಭದ್ರ ದೇವಾಲಯದ ಹತ್ತಿರ–ವೀರಗಲ್ಲು

ಕಾಲ : ಕ್ರಿ.ಶ. ೧೨ನೇ ಶ

ತೃಟಿತ, ಅಸ್ಪಷ್ಟವಾಗಿದೆ.[೧೬೩]

೧೯. ಗ್ರಾಮ : ಹಂಚಿನಾಳ

ತಾಲೂಕು : ಕುಂದಗೋಳ

ಸ್ಥಳ : ಕೆರೆಯ ದಂಡೆ

ರಾಜವಂಶ : ಸಿಂದರು

ಅರಸ : ಪೆರ್ಮಾಡಿ ೧

ಕಾಲ : ಕ್ರಿ.ಶ. ೧೨ನೇ ಶ

ಸಿಂಧ ಪೆರ್ಮಾಡಿ, ಯುದ್ದಗಳಲ್ಲಿ ಜಯಹೊಂದಿದ ಉಲ್ಲೇಖ.[೧೬೪]

೨೦. ಗ್ರಾಮ : ಬೆಳಗಲಿ

ತಾಲೂಕು : ಹುಬ್ಬಳ್ಳಿ

ಸ್ಥಳ : ಊರ ಕೆರೆ-ವೀರಗಲ್ಲು

ಕಾಲ : ಕ್ರಿ.ಶ. ೧೨ನೇ ಶ

ತೃಟಿತವಾಗಿದ್ದು, ಗಾವುಂಡ ಹಾಗೂ ಹಿಟ್ಟುಗಳು ಮರಣಹೊಂದಿದ ಬಗ್ಗೆ ಹಾಗೂ ವೀರನಿಗೆ ನೀಡಿದ ದಾನದ ಉಲ್ಲೇಖವಿದೆ.[೧೬೫]

೨೧. ಗ್ರಾಮ : ನೂಲ್ವಿ

ತಾಲೂಕು : ಹುಬ್ಬಳ್ಳಿ

ಸ್ಥಳ : ಕೆರೆಯ ಹತ್ತಿರ-ವೀರಗಲ್ಲು

ಕಾಲ : ಕ್ರಿ.ಶ. ೧೨ನೇ ಶ

ಸಂಪೂರ್ಣವಾಗಿ ಹಾಳಾಗಿದೆ.[೧೬೬]

೨೨. ಗ್ರಾಮ : ವರೂರು

ತಾಲೂಕು : ಹುಬ್ಬಳ್ಳಿ

ಸ್ಥಳ : ಹನುಮಂತ ದೇವಾಲಯದ-ವೀರಗಲ್ಲು

ಕಾಲ : ಕ್ರಿ.ಶ. ೧೨ನೇ ಶ

ಎಲೆವಳೆಯ ಬಿಜ್ಜಯ ಮತ್ತು ಜಕ್ಕರಸರ ವೀರಮರಣದ ವಿಷಯ ಶಾಸನದಲ್ಲಿದೆ.[೧೬೭]

೨೩. ಗ್ರಾಮ : ಮುಗುದ

ತಾಲೂಕು : ಧಾರವಾಡ

ಸ್ಥಳ : ಕೆರೆಯ ಏರಿ-ವೀರಗಲ್ಲು

ಕಾಲ : ಕ್ರಿ.ಶ. ೧೨ನೇ ಶ

ಶಾಸನದಲ್ಲಿ ಕಾಲದ ಉಲ್ಲೇಖವಿಲ್ಲ, ಇದು ಸ್ಮಾರಕ ಶಾಸನವಾಗಿದ್ದು, ತುರುಗೋಳ್ ಕಾಳಗಕ್ಕೆ ಸಂಬಂಧಿಸಿದ ಮಾಹಿತಿಯನ್ನು ನೀಡುತ್ತದೆ. ಸಿವನಾಯಕಾಗ್ರಣಿ ಮತ್ತು ನಾಗ ಗಾವುಂಡನ ಉಲ್ಲೇಖ ಶಾಸನದಲ್ಲಿದೆ.[೧೬೮]

೨೪. ಗ್ರಾಮ : ಕೋಳಿವಾಡ

ತಾಲೂಕು : ಹುಬ್ಬಳ್ಳಿ

ಸ್ಥಳ : ಕಲ್ಮೇಶ್ವರ ದೇವಾಲಯದ ಗುಡಿ-ಆವರಣ

ಕಾಲ : ಕ್ರಿ.ಶ. ೧೨ನೇ ಶ

ಸಂಪೂರ್ಣ ಹಾಳಾಗಿದೆ.[೧೬೯]

೨೫.	ಗ್ರಾಮ	:	ಕುಯಿಬಾಳ

ತಾಲೂಕು	:	ಕುಂದಗೋಳ

ಸ್ಥಳ	:	ಚಾವಡಿಯ ಹತ್ತಿರ-ವೀರಗಲ್ಲು

ರಾಜವಂಶ	:	ಯಾದವ

ಅರಸ	:	ಸಿಂಘಣ

ಕಾಲ	:	ಕ್ರಿ.ಶ. ೧೨೨೩

ಈ ಶಾಸನದಲ್ಲಿ 'ಶ್ರೀಸಿಂಹಣದೇವ ವರುಷದ ೧೮ನೇಯ ಸ್ವಭಾ ಸಂವತ್ಸರದ ಮಾರ್ಗಶಿರ ಬಹುಳ ಅಮವಾಸೆ ಆದಿವಾರ' ಎಂದಿದೆ. ಇದು ಕ್ರಿ.ಶ. ೧೨೨೩ ಡಿಸೆಂಬರ್ ೨೩ಕ್ಕೆ ಸರಿ ಹೊಂದುತ್ತದೆ. ಯಾದವ ನಾರಾಯಣ ಪ್ರತಾಪ ಚಕ್ರವರ್ತಿ ಸಿಂಹಣ ದೇವನ ಉಲ್ಲೇಖವಿದೆ. ಈತನು ಆಳ್ವಿಕೆ ನಡೆಸುತ್ತಿರಲು ನಡೆದ ಯುದ್ಧದಲ್ಲಿ ಯಾರೋ (ಅಸ್ಪಷ್ಟ)ವೀರ ಪುರುಷನು ವೀರ ಮರಣವನ್ನು ಹೊಂದಿರುವ ವಿಷಯವನ್ನು ತಿಳಿಸುತ್ತದೆ.[೧೭೦]

೨೬.	ಗ್ರಾಮ	:	ಅಮ್ಮಿನಭಾವಿ

ತಾಲೂಕು	:	ಧಾರವಾಡ

ಸ್ಥಳ	:	ಕಲ್ಮೇಶ್ವರ ದೇವಾಲಯದ-ವೀರಗಲ್ಲು(ಕೆ.ಆರ್.ಐ)

ರಾಜವಂಶ	:	ಗೋವಾ ಕದಂಬ

ಅರಸ	:	ತ್ರಿಭುವನಮಲ್ಲ

ಕಾಲ	:	ಕ್ರಿ.ಶ. ೧೨೪೩

ಪ್ರಸ್ತುತ ಈ ಶಾಸನ ಕರ್ನಾಟಕ ವಿಶ್ವವಿದ್ಯಾಲಯ ಇತಿಹಾಸ ಮತ್ತು ಪ್ರಾಚ್ಯವಸ್ತು ವಿಭಾಗದಲ್ಲಿದೆ. ಶಾಸನದಲ್ಲಿ ಕಾಲವನ್ನು ವೀರತ್ರಿಭುವನಮಲ್ಲಿ ದೇವರಸ ೧೮ನೆಯ ಶೋಭಕೃತ ಸಂವತ್ಸರದ ಚೈಯಿತ್ರ ಸು ೧೧ ಮಂಗಳವಾರ ವೆಂದಿದ್ದು, ಇದು ಕ್ರಿ.ಶ. ೧೨೪೩ ಮಾರ್ಚ ೩೧, ಮಂಗಳವಾರಕ್ಕೆ ಸರಿ ಹೊಂದುತ್ತದೆ. ಶ್ರೀ ಕಾದಂಬ ಶ್ರೀಸಿವಚಿತ್ತ ವೀರ ತ್ರಿಭುವನ ಮಲ್ಲಿದೇವನ ಆಳ್ವಿಕೆಯ ಕಾಲದಲ್ಲಿ ಪರಮ ವಿಶ್ವಾಸಿಯೂ ಬಂಧುಜನ ಚಿಂತಾಮಣಿಯೂ, ತ್ರಿಭುವನ ಮಲ್ಲಿದೇವರನ ಅನುಚರನೂ ಶ್ರೀ ಮೂಲಸ್ಥಾನ ದೇವರ ದಿವ್ಯ ಪಾದಾರಾಧಕನೂ ಆದ ಮೂಗುಡ ಹಿಟ್ಟೆಯ ನಾಯ್ಕನು ಅರಸರ ಸಲುವಾಗಿ ಯುದ್ದದಲ್ಲಿ ಹೋರಾಡಿ ಸ್ವರ್ಗಸ್ಥನಾದ ವಿಷಯವಿದೆ.[೧೭೧]

೨೭.	ಗ್ರಾಮ	:	ತಂಬೂರು

ತಾಲೂಕು	:	ಕಲಘಟಗಿ

ಸ್ಥಳ : ಊರ ಅಗಸಿ–ವೀರಗಲ್ಲು

ಕಾಲ : ಕ್ರಿ.ಶ. ೧೨೫೨

ಸಾತೇನಹಳ್ಳಿಯ ಮುತ್ತಿಗೆಯಲ್ಲಿ ಮಣಿಗೆರೆಯ ಠಾಣೆಯ ನಾಯಕನ ನೆಚ್ಚಿನ ಆಳು, ಹಿರಿಯ ರಾಮನ ಮರಣ.[೧೬೨]

೨೮. ಗ್ರಾಮ : ಹುಬ್ಬಳ್ಳಿ

ತಾಲೂಕು : ಹುಬ್ಬಳ್ಳಿ

ಸ್ಥಳ : ಕಚೇರಿಯ ಆವರಣ–ವೀರಗಲ್ಲು

ಕಾಲ : ಕ್ರಿ.ಶ. ೧೩ನೇ ಶ

ಸಂಪೂರ್ಣವಾಗಿ ತೃಟಿತಗೊಂಡಿದೆ,[೧೬೩]

೨೯. ಗ್ರಾಮ : ಛಬ್ಬಿ

ತಾಲೂಕು : ಹುಬ್ಬಳ್ಳಿ

ಸ್ಥಳ : ಕರಿಮಲ್ಲೇಶ್ವರ ದೇವಾಲಯದ ಗೋಡೆ–ವೀರಗಲ್ಲು

ಕಾಲ : ಕ್ರಿ.ಶ. ೧೩ನೇ ಶ

ತೃಟಿತವಾಗಿದ್ದು, ತಳವರ ಸಾಸಣಿಗೆ ಮಲ್ಲನಾಯಕನ ಉಲ್ಲೇಖವಿದೆ.[೧೬೪]

೩೦. ಗ್ರಾಮ : ಬೆಳಗಲಿ

ತಾಲೂಕು : ಹುಬ್ಬಳ್ಳಿ

ಸ್ಥಳ : ಚಿಕ್ಕಮಠದ ಹತ್ತಿರ–ವೀರಗಲ್ಲು

ಕಾಲ : ಕ್ರಿ.ಶ. ೧೩ನೇ ಶ

ಸಂಪೂರ್ಣವಾಗಿ ಹಾಳಾಗಿದ್ದು, ವ್ಯಕ್ತಿಯೊಬ್ಬನ ವೀರಮರಣದ ದಾಖಲಾತಿ ಶಾಸನದಲ್ಲಿದೆ.[೧೬೫]

೩೧. ಗ್ರಾಮ : ಕುಯಿಬಾಳ

ತಾಲೂಕು : ಕುಂದಗೋಳ

ಸ್ಥಳ : ಮಸೀದಿಯ ಹತ್ತಿರ–ವೀರಗಲ್ಲು

ಕಾಲ : ಕ್ರಿ.ಶ. ೧೩ನೇ ಶ

ವೈಶಾಂಕ ಸು ೧೦ ಸೋಮವಾರಲು ಎಂದು ಇದ್ದು, ಶಕವರ್ಷದ ಉಲ್ಲೇಖವಿರುವುದಿಲ್ಲ, ಲಿಪಿಯ ದೃಷ್ಠಿಯಿಂದ ೧೩–೧೪ನೇ ಶತಮಾನವೆನ್ನಬಹುದು. ಶಾಸನವು ಯುದ್ದದಲ್ಲಿ ಹೋರಾಡಿ ಮಡಿದ ವಿಷಯವನ್ನು ತಿಳಿಸುತ್ತಿದೆ.[೧೬೬]

೩೨. ಗ್ರಾಮ : ಬಮ್ಮರಸಿಕೊಪ್ಪ

ತಾಲೂಕು : ಧಾರವಾಡ

ಸ್ಥಳ : ಊರಮಧ್ಯದಲ್ಲಿ

ಕಾಲ : ಕ್ರಿ.ಶ. ೧೩ನೇ ಶ

ಸಂಪೂರ್ಣವಾಗಿ ತೃಟಿತವಾಗಿದೆ.[೧೭೭]

೩೩. ಗ್ರಾಮ : ಹಾಳುಕುಸುಗಲ್ಲ

ತಾಲೂಕು : ನವಲಗುಂದ

ಸ್ಥಳ : ಹನುಮಂತ ದೇವಾಲಯದ–ವೀರಗಲ್ಲು

ಕಾಲ : ಕ್ರಿ.ಶ. ೧೩೭೧

ಈ ಶಾಸನದಲ್ಲಿ ಕಾಲವನ್ನು 'ಶಕವರ್ಷ ೧೨೯೨ನೆಯ....ರವಿವಾರದಲು....ಸೋಮಂ...ಎಂದು ಉಲ್ಲೇಖಿಸಿದ್ದು, ಮಾಸನ ಉಲ್ಲೇಖ ವಿರುವುದಿಲ್ಲ. ಇದರ ಕಾಲ ಕ್ರಿ.ಶ. ೧೩೭೦ ಪೂರ್ವೋಕ್ತದಿನದಂದು ಒಬ್ಬ ವೀರನು ಹೋರಾಡಿ ಮರಣ ಹೊಂದಿದ ವಿವರವಿದೆ.[೧೭೮]

೩೪. ಗ್ರಾಮ : ಮನಗುಂಡಿ

ತಾಲೂಕು : ಧಾರವಾಡ

ಸ್ಥಳ : ಸಿದ್ದಲಿಂಗನ ಹಿತ್ತಲು–ವೀರಗಲ್ಲು

ಕಾಲ : ಕ್ರಿ.ಶ. ೧೩೮೪

ಈ ಶಾಸನದಲ್ಲಿ 'ಕಾಲಯುಕ್ತಾಕ್ಷಿ ಸಂವತ್ಸರದ ಶ್ರಾವಣ ಬಹುಳಮಾವಾಸ್ಯ ಬುಧವಾರದಲು ಎಂದಿದ್ದು, ಶಕವರ್ಷವನ್ನು ಉಲ್ಲೇಖಿಸಿಲ್ಲ. ಬರವಣಿಗೆಯ ದೃಷ್ಟಿಯಿಂದ ಕ್ರಿ.ಶ ೧೪ನೇಯ ಶತಮಾನವಿರುವ ಸಾದ್ಯತೆ ಇದೆ. ಪೂರ್ವೋಕ್ತ ದಿನದಂದು ನಾಡಪ್ರಭು ಹಳಿಗೆರೆ ಮಲ್ಲಪ್ಪನು ಸ್ವರ್ಗಸ್ಥನಾಗಿದ್ದು, ಆತನ ನೆನಪಿಗಾಗಿ ಈ ವೀರಗಲ್ಲು ಶಾಸನವನ್ನು ನಿಲ್ಲಿಸಲಾಗಿದೆ.[೧೭೯]

೩೫. ಗ್ರಾಮ : ಅದರಗುಂಚಿ

ತಾಲೂಕು : ಹುಬ್ಬಳ್ಳಿ

ಸ್ಥಳ : ಹನುಮಂತ ದೇವಾಲಯದ–ವೀರಗಲ್ಲು

ಕಾಲ : ಕ್ರಿ.ಶ. ೧೪ನೇ ಶ

ಸಂಪೂರ್ಣತೃಟಿತಗೊಂಡಿದ್ದು, ಗಾವುಂಡನೊಬ್ಬನ ಉಲ್ಲೇಖವಿದೆ.[೧೮೦]

೩೬. ಗ್ರಾಮ : ಧಾರವಾಡ

ತಾಲೂಕು : ಧಾರವಾಡ

ಸ್ಥಳ : ವಿದ್ಯಾರಣ್ಯ ಹೈಸ್ಕೂಲು–ವೀರಗಲ್ಲು

ಕಾಲ : ಕ್ರಿ.ಶ. ೧೪ನೇ ಶ

ಶಾಸನ ತೃಟಿತಗೊಂಡಿದ್ದರೂ ಕಾಲದ ಉಲ್ಲೇಖವಿಲ್ಲ, ಆದರೆ ಲಿಪಿಯ ದೃಷ್ಟಿಯಿಂದ ೧೪ನೆಯ ಶತಮಾನವೆಂದು ಊಹಿಸಬಹುದು. ಮಲ್ಲಿದೇವನ ಉಲ್ಲೇಖವಿದೆ.[೧೮೧]

೩೭. ಗ್ರಾಮ : ಭೈರಿದೇವರಕೊಪ್ಪ

ತಾಲೂಕು : ಹುಬ್ಬಳ್ಳಿ

ಸ್ಥಳ : ಕೆರೆಯ ಹತ್ತಿರ–ವೀರಗಲ್ಲು

ಕಾಲ : ಕ್ರಿ.ಶ. ೧೪೩೮

ಸಂಪೂರ್ಣ ತೃಟಿತಗೊಂಡಿದ್ದು, ಸ್ವಯಂಭೂದೇವರ ಉಲ್ಲೇಖ.[೧೮೨]

೩೮. ಗ್ರಾಮ : ಛಬ್ಬಿ

ತಾಲೂಕು : ಹುಬ್ಬಳ್ಳಿ

ಸ್ಥಳ : ನಾರಾಯಣ ದೇವಾಲಯದ ಬಾವಿ

ಕಾಲ : ಕ್ರಿ.ಶ. ೧೫ನೇ ಶ

ತೃಟಿತವಾಗಿದ್ದು, ಛಬ್ಬಿಯ ತಿಮ್ಮನಗೌಡನ ಅಳಿಯ ಸೋಮಣ್ಣ ಹೆಗ್ಗಡೆಯ ಯುದ್ಧ ಮರಣವನ್ನು ತಿಳಿಸುತ್ತದೆ.[೧೮೩]

೩೯. ಗ್ರಾಮ : ಛಬ್ಬಿ

ತಾಲೂಕು : ಹುಬ್ಬಳ್ಳಿ

ಸ್ಥಳ : ಹುಡೇದ ಹತ್ತಿರ–ವೀರಗಲ್ಲು

ಕಾಲ : ಕ್ರಿ.ಶ. ೧೫ನೇ ಶ

ಸಂಪೂರ್ಣತೃಟಿತವಾಗಿದ್ದು, ಅಸ್ಪಷ್ಟವಾಗಿದೆ.[೧೮೪]

೪೦. ಗ್ರಾಮ : ಅಹೋಬಳಿಪುರ

ತಾಲೂಕು : ಹುಬ್ಬಳ್ಳಿ

ಸ್ಥಳ : ಗೋರಿಯ ಮೇಲೆ

ಕಾಲ : ಕ್ರಿ.ಶ. ೧೮೧೮

ನಾನ್‌ಕಮಿಶನ್ ಆಫಿಸರನ ಮರಣವನ್ನು ಶಾಸನ ದಾಖಲಿಸುತ್ತದೆ.[೧೮೫]

೪೧. ಗ್ರಾಮ : ಅಹೋಬಳಿಪುರ

ತಾಲೂಕು : ಹುಬ್ಬಳ್ಳಿ

ಸ್ಥಳ : ಗೋರಿಯ ಮೆಲೆ

ಕಾಲ : ೧೮೧೮

ಕಾಲರಾ ಬೇನೆಯಿಂದ ಜಾರ್ಜಬಾಯಿಡೆ ಕಲರ್‌ನ ಮರಣ ಎಂದಿದೆ.[೧೮೬]

೪೨. ಗ್ರಾಮ : ಅಹೋಬಳಿಪುರ

ತಾಲೂಕು : ಹುಬ್ಬಳ್ಳಿ

ಸ್ಥಳ : ಗೋರಿಯ ಮೇಲೆ

ಕಾಲ : ಕ್ರಿ.ಶ. ೧೮೧೮ನೇ ಶ

ಇಂಗ್ಲೀಷ ಭಾಷೆ, ಹುಬ್ಬಳ್ಳಿಯಲ್ಲಿ ಹಬ್ಬಿದ್ದ ಕಾಲರಾ ಬೇನೆಯಲ್ಲಿ ಕ್ಯಾಪ್ಟನ್ ಜೇಮ್ಸಕುಕ್ ಮರಣವನ್ನು ದಾಖಲಿಸುತ್ತದೆ.[೧೮೭]

೩.೪ ಮಾಸ್ತಿಕಲ್ಲು

'ಮಾಸ್ತಿ' ಎಂಬುದು ಸಂಸ್ಕೃತದ ಮಹಾಸತಿ ಎಂಬುದರ ಸಂಕ್ಷಿಪ್ತ ರೂಪ, ಪತಿಯು ಸತ್ತಮೇಲೆ ಅವನ ಜೊತೆ ಪ್ರಾಣತ್ಯಾಗ ಮಾಡುವ ಸ್ತ್ರೀಯನ್ನು 'ಮಹಾಸತಿ' ಅಥವಾ 'ಮಾಸ್ತಿ' ಎಂದು ಕರೆಯಲಾಗುತ್ತದೆ.[೧೮೮]ಮಾಸ್ತಿಕಲ್ಲುಗಳನ್ನು ಮಾಸ್ತಿಗಲ್ಲು, ವ್ಯಾಸನತೋಳು, ಮಾಸ್ತ್ಯಮ್ಮ ಎನ್ನುತ್ತಾರೆ.[೧೮೯] ಮಾಸ್ತಿಕಲ್ಲಿನ ಪ್ರಾಚೀನತೆಯನ್ನು ನೋಡಿದಾಗ ವೇದಗಳಲ್ಲಿ, ಪುರಾಣಗಳಲ್ಲಿ, ಊರಭಂಗ, ಕಾಮಸೂತ್ರ, ಮೃಚ್ಛಕಟಿಕ, ಕುಮಾರಸಂಭವ, ರಾಮಾಯಣ, ಮಹಾಭಾರತ, ಮಹಾಶಿವಪುರಾಣ, ಇತ್ಯಾದಿ ಮಹಾಕಾವ್ಯಗಳಲ್ಲಿ ಇದರ ಉಲ್ಲೇಖವಿದೆ.[೧೯೦]

ಈ ಪದ್ಧತಿಯ ಉಗಮಕ್ಕೆ ಹಲವಾರು ವಿದ್ವಾಂಸರು ವಿವಿಧ ರೀತಿಯಲ್ಲಿ ವ್ಯಾಖ್ಯಾನಿಸಿದ್ದು, ಪತಿಯ ಮೇಲಿನ ಉತ್ಕಟಪ್ರೀತಿ, ಪಾತಿವ್ರತ್ಯದ ವೈಭವೀಕರಣ, ವೈಯಕ್ತಿಕ ಪ್ರತಿಷ್ಠೆ, ವಿಧವೆಯ ನಿಕೃಷ್ಟ ಜೀವನ, ಸಂಪತ್ತನ್ನು ಪಡೆಯುವ ಸಂಚು, ಮನೆತನದ ಹಾಗೂ ಸಮಾಜದ ಪ್ರತಿಷ್ಠೆ, ಸತಿಪತಿಗಳಿಬ್ಬರು ಸ್ವರ್ಗ ಪಡೆಯುವ ನಂಬಿಕೆ, ಹೀಗೆ ಪರಲೋಕದ ಕಲ್ಪನೆಗಳು ಈ ಸತಿಪದ್ಧತಿಯ ಉಗಮಕ್ಕೂ ಮತ್ತು ಬೆಳವಣಿಗೆಗಳಿಗೂ ಕಾರಣಗಳಾಗಿವೆ.[೧೯೧]

ಮಹಾಸತಿಯಾಗುವ ಪದ್ಧತಿಯಲ್ಲಿ ಎರಡು ವಿಧವಿದೆ. ಒಂದು ಸಹಗಮನ ಅಂದರೆ ಸಹಮರಣ ಮತ್ತೊಂದು ಅನುಗಮನ ಅಂದರೆ ಗಂಡ ಸತ್ತ ಸುದ್ದಿ ಕೇಳಿ ಚಿತೆ ನಿರ್ಮಿಸಿಕೊಂಡು ಅವನಿಗೆ ಪ್ರಿಯವಾದ ವಸ್ತು ಹಿಡಿದು ಚಿತೆಯನ್ನು ಪ್ರವೇಶಿಸುವುದು.[೧೯೨] 'ಮಾಸ್ತಿ' ಶಿಲ್ಪದಲ್ಲಿ ಎರಡು

ವಿಧಗಳಿದ್ದು, ೧ ಒಕ್ಕೈ ಮಾಸ್ತಿಕಲ್ಲು–ಕಂಬದಿಂದ ಒಂದು ಕೈಹೊರಗೆ ಎತ್ತಿರುತ್ತದೆ.[೯೩] ಇಕ್ಕೈ ಮಾಸ್ತಿಕಲ್ಲು ಎರಡು ಕೈಗಳು ಎತ್ತಿರುತ್ತದೆ. ಒಟ್ಟಾರೆ ಮಹಾಸತಿಯ ಶಿಲ್ಪಗಳ ಒಂದು ವೈಶಿಷ್ಟ್ಯ ಸ್ತ್ರಿ ಮುತ್ತೈದೆಯಾಗಿ ಮರಣವನ್ನಪ್ಪಿದ ಸೂಚಕವಾಗಿ ಕುಂಕುಮ, ಕೈಗಡಗ, ಓಲೆ, ಕೊರಳಲ್ಲಿ ಮುತ್ತಿನಸರ, ತಾಳಿ, ಹೂವಿನದಂಡೆ, ನಡಪಟ್ಟಿ, ಅಂಗೈಯಲ್ಲಿ ಹೂ, ಕಾಲುಗಳಲ್ಲಿ ಅಂದುಗೆ, ಕಳಸ, ಕನ್ನಡಿ, ಲಿಂಬೆಹಣ್ಣು ಹಿಡಿದಿರುತ್ತಾಳೆ, ಬಲಗೈ ಶುಭದ, ಸೌಭಾಗ್ಯದ ಸಂಕೇತ,[೯೪] ಬಲಗೈ ಹಸ್ತ ತೋರಿಸುವುದು ಸ್ವರ್ಗಕ್ಕೆ ಹೋಗುತ್ತಿರುವ ಮತ್ತು ಕಂಬವನ್ನು ತೋರಿಸಿರುವುದು ದೈವತ್ವದ ಪ್ರತೀಕವಾಗಿದೆ.[೯೫] ಯೋಧನ ಪತ್ನಿಯಾದಲ್ಲಿ ವೀರ ಹೋರಾಟದ ಭಂಗಿಯಲ್ಲಿರುವಂತೆಯೂ ಅಥವಾ ವೀರ ಮಹಿಳೆಯ ರೂಪದಲ್ಲಿ ಕೆತ್ತಿರುತ್ತಾರೆ.

ಪ್ರಸ್ತುತ ಈ ಅಧ್ಯಯನಕ್ಕೆ ಸಂಬಂಧಿಸಿದಂತೆ ಧಾರವಾಡ ಜಿಲ್ಲೆಯಲ್ಲಿ ಶಾಸನಸಹಿತ ಮಾಸ್ತಿಕಲ್ಲುಗಳು ಕೇವಲ ಎರಡು ಪ್ರದೇಶಗಳಲ್ಲಿ ದೊರೆತಿದ್ದು, ಅವುಗಳು ಕೆಳಗಿನಂತಿವೆ.

೧. ಗ್ರಾಮ : ಕುಂದಗೋಳ

ತಾಲೂಕು : ಕುಂದಗೋಳ

ಸ್ಥಳ : ಹನುಮಂತ ದೇವಾಲಯದ ಹತ್ತಿರ

ಕಾಲ : ಕ್ರಿ.ಶ. ೧೪ನೇ ಶ

ಕೇವಲ ಒಂದೇ ಸಾಲಿರುವ ಈ ಶಾಸನವು ಅಸ್ಪಷ್ಟವಾಗಿದೆ. ಶಾಸನದಲ್ಲಿ ಹೊಡವಟ್ಟು ಧನ್ಯ(ಗೆರೆ)ಎಂದು ಉಲ್ಲೇಖವಿದೆ.[೯೬]

೨. ಗ್ರಾಮ : ಅಣ್ಣಿಗೇರಿ

ತಾಲೂಕು : ನವಲಗುಂದ

ಸ್ಥಳ : ಜೈನ ಬಸದಿ

ಕಾಲ : ಕ್ರಿ.ಶ. ೧೨೬೭ನೇ ಶ

ಈ ಶಾಸನದಲ್ಲಿ ಸ್ವಸ್ತಿಶ್ರೀಶಕವರ್ಷ ೧೧೮೯ಸಂದ ಪ್ರಭವ ಸಂವತ್ಸರದ ಚಾಯಿತ್ರಬ ಮಂಗಳವಾರ'ವೆಂದು ಕಾಲದ ಉಲ್ಲೇಖವಿದ್ದು, ಇದು ಕ್ರಿ.ಶ.೧೨೬೭, ಮಾರ್ಚ೧೫ಕ್ಕೆ ಸರಿಹೊಂದುತ್ತದೆ. ಮೂಲಸಂಘದ, ಕುಂದಕುಂದಾನ್ವಯದಲು, ಸೋಮದೇವಾಚಾರ್ಯ ಶಿಷ್ಯಳೂ, ನೊಪಿಶೆಟ್ಟಿಯ ಪುತ್ರನಾದ ವೀರಯ್ಯನ ಹೆಂಡತಿಯೂ ಆದ ಕೆಳದಿ ಅವ್ವೆಯು ಶರೀರ ತ್ಯಾಗವನ್ನು ಮಾಡಿದ ವಿವರವಿದೆ.[೯೭]

೩.೫ ನಿಷಿಧಿಗಲ್ಲು

ಜೈನಪರಂಪರೆಯಲ್ಲಿ ಸಮಾಧಿಮರಣದ ಪ್ರತೀಕವಾಗಿ ನಿಲ್ಲಿಸಿದ ಜೈನ ಮುನಿಗಳ ಸ್ಮಾರಕಗಳೇ ನಿಷಿಧಿಗಲ್ಲುಗಳಾಗಿವೆ.[೯೮] 'ನಿಷಿಧಿ' ಎಂಬ ಪದ ಸಂಸ್ಕೃತದ ನಿಷಿಕಾ, ಪ್ರಾಕೃತದಲ್ಲಿ 'ನಸೀಹಿಯಾ' ಎಂಬುದಾಗಿದೆ. ಶಾಸನಗಳಲ್ಲಿ ನಿಷಿಧಿಕಾ, ನಿಶಿಧಿ, ನಿಶಿದಿಗೆ, ನಿಶೀಧಿಗೆ, ನಿಷಿದ್ಯಿಕಾ, ನಿಷಿಧಿ, ನಿಶಿಧ್ಯಾಲಯ, ನಿಷಿಧಿ, ನಿಷಿಧಿಗೆ, ನಿಸ್ತಿಗೆ ಎಂಬುದನ್ನು ಗುರುತಿಸಲಾಗಿದೆ.[೯೯] ಜೈನರಲ್ಲಿ ತಮ್ಮ ಆತ್ಮೀಯರು, ಪೂಜ್ಯವ್ಯಕ್ತಿಗಳು, ಬಂಧುಗಳು, ಗುರುಗಳು ತಮ್ಮ ಬದುಕಿನಲ್ಲಿ ಮೋಕ್ಷ ಸಂಪಾದನೆಗಾಗಿ ಸಲ್ಲೇಖನ ವ್ರತದಿಂದ ಮರಣವನ್ನಪ್ಪುತ್ತಿದ್ದರು. ಸಲ್ಲೇಖನ ಪದವು 'ಸತ್' ಮತ್ತು 'ಲೇಖನ' ಎರಡು ಪದದಿಂದ ಉತ್ಪತ್ತಿಯಾಗಿವೆ. ಅಂದರೆ ಕ್ರಮವಾಗಿ ಆಹಾರವನ್ನು ಕಡಿಮೆಮಾಡುತ್ತಾ ಹಾಲು, ಮೊಸರು, ಮಜ್ಜಿಗೆ, ಇವುಗಳನ್ನು ತೆಗೆದುಕೊಳ್ಳುತ್ತಿದ್ದರು. ನಂತರದ ಕಾಲಘಟ್ಟದಲ್ಲಿ ಅವುಗಳ ಪ್ರಮಾಣದಲ್ಲಿ ಕಡಿಮೆ ಮಾಡಿ ಬಿಸಿನೀರನ್ನು, ಮುಂದೆ ಅದನ್ನು ಬಿಟ್ಟು ತಮ್ಮ ಶಕ್ತಿಗೆ ಅನುಸರಿಸಿ ಉಪವಾಸವನ್ನು ಕೈಗೊಂಡು, ಪಂಚನಮಸ್ಕಾರ ಮಂತ್ರದ ಧ್ಯಾನದಲ್ಲೇ ಶರೀರವನ್ನು ತ್ಯಾಗಮಾಡುವುದೇ ಆಗಿದೆ. ಇವರು ಪರಣವನ್ನಪ್ಪಿದಾಗ ಪರೋಕ್ಷವಾಗಿ ಜಿನಾಲಯಗಳನ್ನು ನಿರ್ಮಿಸುವ, ನಿಷಿದಿ ಮಂಟಪಗಳನ್ನು ಕಟ್ಟುವ, ನಿಷಿಧಿಗಲ್ಲುಗಳನ್ನು ನಿಲ್ಲಿಸುವ, ಚತುರ್‌ದಾನಗಳನ್ನು ಮಾಡುವುದು ಮತ್ತು ಶಾಸನಗಳನ್ನು ಹಾಕಿಸುವ ಪರಂಪರೆಯು ಪ್ರಾಚೀನ ಕಾಲಘಟ್ಟದಿಂದಲೂ ಇರುವುದನ್ನು ಹಲವಾರು ಕೃತಿಗಳಿಂದ ಗಮನಿಸಬಹುದು. ಅವುಗಳಲ್ಲಿ ಪ್ರಮುಖವಾಗಿ ಆಚಾರ್ಯ ಸಮಂತಭದ್ರನ 'ರತ್ನಕರಂಡಕ ಶ್ರಾವಕಾಚಾರ[೨೦೦] ಶಸ್ತ್ರಸಾರ ಸಮುಚ್ಚಯ, ಭಗವತೀ ಆರಾಧನಾ, ಉತ್ತರಾಧ್ಯಯನ ಸೂತ್ರ, ಇನ್ನೂ ಹಲವಾರು ಕೃತಿಗಳಲ್ಲಿ ಸಲ್ಲೇಖನ ವ್ರತದ ಪ್ರಕಾರಗಳು, ವಿಧಾನ, ಮಹತ್ವದ ಕುರಿತಿದೆ.

ಜೈನರು ಸಲ್ಲೇಖನವನ್ನು ಎಲ್ಲರೂ ಗುರುವಿನ ಸನ್ನಿಧಿಯಲ್ಲಿ ಪಡೆಯುತ್ತಿದ್ದುದು ಸಾಮಾನ್ಯವಾಗಿದ್ದು, ಗುರುಗಳು ಮಾರ್ಗದರ್ಶನ ಮಾಡುವುದರ ಜೊತೆಗೆ ಆತನಿಗೆ ಧೈರ್ಯ ಕುಸಿಯದಂತೆ ಮುಂಚೆ ಸಲ್ಲೇಖನ ವ್ರತಹಿಡಿದು ಸರ್ವ ಸಂಕಟಗಳನ್ನು ಅನುಭವಿಸುವರ ಕಥೆಗಳನ್ನು ಹೇಳಲಾಗುತ್ತಿತ್ತು. ಒಟ್ಟಾರೆ ಕರ್ಮಗಳಿಂದ ಬಿಡುಗಡೆ ಹೊಂದುವುದೇ ಈ ವ್ರತದ ಮುಖ್ಯ ಉದ್ದೇಶ, ವ್ರತಾಚರಣೆಯ ಈ ವಿಧಾನವನ್ನು ಸಲ್ಲೇಖನಾ, ಪಂಡಿತ, ಪೌಗ್ಗಮಣ, ಸನ್ಯಸನ, ಪಂಚಪವ, ಆರಾಧನಾ ಇತ್ಯಾದಿ ಪದಗಳಿಂದ ಗುರುತಿಸಲಾಗಿದೆ.[೨೦೧]

ನಿಷಿಧಿ ಫಲಕಗಳಲ್ಲಿ ಸಾಮಾನ್ಯವಾಗಿ ಶ್ರಾವಕರು ಅಥವಾ ಮುನಿಗಳು ಸಲ್ಲೇಖನ ವ್ರತದಿಂದ, ಭೂಲೋಕ ದೇವಲೋಕಕ್ಕೆ ಸಂದರು ಎಂಬ ಸಾಮಾಜಿಕ ಹಿನ್ನಲೆಯಲ್ಲಿ ಕೆಳಗಿನಿಂದ ಮೇಲಕ್ಕೆ ಅವರ ಪ್ರತಿರೂಪವನ್ನು ಉಬ್ಬುಶಿಲ್ಪಗಳ ಮೂಲಕ ನಿರೂಪಿಸಬಹುದಾಗಿದೆ. ವೀರಗಲ್ಲಿನಂತೆ ನಿಷಿಧಿ ಶಿಲ್ಪಗಳಲ್ಲಿಯೂ ವಿಭಿನ್ನತೆಯಿಂದಿರುವುದನ್ನು ಗುರುತಿಸಬಹುದಾಗಿದ್ದು, ಎರಡು ಅಥವಾ ಹೆಚ್ಚಿನ ಪಟ್ಟಿಕೆಗಳಲ್ಲಿ ನಿರೂಪಣೆಯನ್ನು ಕಾಣುತ್ತೇವೆ. ಕೆಳಹಂತದ ಮಧ್ಯದಲ್ಲಿ ದೊಡ್ಡದಾಗಿ ತೋರಿಸುವ

ಅಟ್ಟವಣೆಯ ಮೇಲಿರಿಸಿದ ಜಿನಗ್ರಂಥ ಅಥವಾ ಪುಸ್ತಕ ಹೊತ್ತ ವ್ಯಾಸಪೀಠ. ಅದರ ಇಕ್ಕೆಲಗಳಲ್ಲಿ ಉಪದೇಶ ನೀಡುವ ಜೈನಮುನಿ ಮತ್ತು ಉಪದೇಶ ಪಡೆಯುತ್ತಿರುವ ಜಿನ ಶ್ರಾವಕ-ಶ್ರಾವಕಿ ಜೊತೆಗೆ ಮೇಲಿನ ಹಂತದ ಮಧ್ಯಭಾಗದಲ್ಲಿ ತೀರ್ಥಂಕರ ಅವನ ಪಾರ್ಶ್ವಗಳಲ್ಲಿ ಸಮಾಧಿ ಮರಣಾನಂತರ ತೀರ್ಥಂಕರನ ಸನ್ನಿಧಿಯಲ್ಲಿ ಶಾಶ್ವತ ಉಪದೇಶ ಪಡೆಯುತ್ತಿರುವ ವೃತಸ್ಥನ ಚಿತ್ರಣಗಳಿರುತ್ತವೆ.[೨೦೨] ಇಂತಹ ನಿಷಿಧಿ ಶಿಲ್ಪಗಳು ಬಸದಿಗಳಮುಂದೆ, ಶಿಲಾಫಲಕದಲ್ಲಿ, ಹೊಲಗಳಲ್ಲಿ ನೆಟ್ಟ ಕಲ್ಲುಗಳಲ್ಲಿ, ಕಂಬಗಳ ಮೇಲೆ, ಬಂಡೆಗಳ ಮೇಲೆ, ಕಾಣುತ್ತೇವೆ.[೨೦೩] ಈ ನಿಷಿಧಿಗಲ್ಲುಗಳು ಒಂದರಿಂದ ನಾಲ್ಕು ಹಂತದ ಶಿಲ್ಪಪಟ್ಟಿಕೆಗಳನ್ನು, ಸ್ಥಂಭಗಳ ಆಕಾರದ ರೀತಿಯಲ್ಲಿ ಜೊತೆಗೆ ಫಲಕದ ಆಕಾರ ಮತ್ತು ಪಾದಗಳಲ್ಲಿ ಇರುವಿಕೆಯನ್ನು ಗುರುತಿಸಬಹುದಾಗಿದೆ.[೨೦೪]

ಪ್ರಸ್ತುತ ಈ ಅಧ್ಯಯನ ಪ್ರದೇಶಗಳಲ್ಲಿ ಗರಗ, ಮಂಟೂರು, ಅಣ್ಣಿಗೇರಿ, ಕಿತ್ತೂರು, ಮೊರಬ, ನರೇಂದ್ರ, ಅಳ್ನಾವರ, ಸೈಬನಕೊಪ್ಪ ಗ್ರಾಮಗಳಲ್ಲಿ ನಿಷಿಧಿಗಲ್ಲುಗಳು ಕಂಡು ಬರುತ್ತವೆ.

೧. ಗ್ರಾಮ : ಮೊರಬ

ತಾಲೂಕು : ನವಲಗುಂದ

ಸ್ಥಳ : ಹನುಮಂತ ದೇವಾಲಯ

ಕಾಲ : ಕ್ರಿ.ಶ. ೧೦೫೯

ಶಾಸನದಲ್ಲಿ ಕಾಲವನ್ನು ಶಾಕಾಬ್ದೇ ಭೂಗಜಾಂಕ ಪ್ರಮಿತ ವತ್ಸರೇ ಸದ್ವಿಕಾರ್ಯಂ ಶುಕ್ಲ ದ್ವಿತಿಯಾ ಹನನಂತ ಕರಣೇ ಕಾಲವೇ ಸೌಮ್ಯವಾರೇ. ಪೂರ್ವಾಷಾಡಾಭಿದಾಭೇ ಸತಿ ಗಂಡಯೋಗೇ ಎಂದು ನೀಡಲಾಗಿದ್ದು, ಇದು ಕ್ರಿ.ಶ.೧೦೫೯ ನವೆಂಬರ್ ೧೦ಕ್ಕೆ ಸರಿಹೊಂದುತ್ತದೆ. ಇದು ಅರ್ಧಭಾಗ ಸಂಸ್ಕೃತ ಮತ್ತು ಅರ್ಧಭಾಗ ಕನ್ನಡದಿಂದ ಕೂಡಿದೆ. ಯಾಪನೀಯ ಸಂಘದ ಮೈಳಾಪತೀರ್ಥ. ಕಾರೇಯಗಳದಲ್ಲಿ ಶ್ರೀಜಯಕೀರ್ತಿದೇವ ಈತನು ಜೈನ ಸಿದ್ದಾಂತದಲ್ಲಿ ಪ್ರಚಂಡ ಪಂಡಿತನಾಗಿದ್ದನು. ಈತನ ಶಿಷ್ಯ ನಾಗಚಂದ್ರಯತಿಯು, ಈತನನ್ನು ಮಹಾಗುಣನಿಧಿಯು ವಿಜ್ಞಾನ ವಿದ್ಯಾಧರನೂ ಎಂದು ಬಹಳವಾಗಿ ಶಾಸನವು ಕೊಂಡಾಡಿದೆ. ಈತನು ಪೂರ್ವೋಕ್ತದಿನದಂದು ಮೊರಬದಲ್ಲಿರುವ ಘಟಾಂತಕೀಯ ಬಸದಿಯಲ್ಲಿ ಸನ್ಯಾಸ ವಿಧಿಯಿಂದ ಸ್ವರ್ಗಸ್ಥನಾದನೆಂದು ಆತನ ಶಿಷ್ಯನಾದ ಕನಕಶಕ್ತಿ ಸಿದ್ಧಾಂತದೇವರನು ನಿಷಿಧಿಕಲ್ಲನ್ನು ನಿಲ್ಲಿಸಿದನು, ಸರಸ್ವತೇ ಗಣದಾಸಿ ಬಮ್ಮೋಜನು ಶಾಸನವನ್ನು ನಿಲ್ಲಿಸುವಂತೆ ಕೋರಿದ್ದನೆಂಬ ಮಾಹಿತಿ ಶಾಸನದಲ್ಲಿದೆ.[೨೦೫]

೨. ಗ್ರಾಮ : ಛಬ್ಬಿ

ತಾಲೂಕು : ಹುಬ್ಬಳ್ಳಿ

ಸ್ಥಳ : ಹುಡೇದಬಾವಿ

ಕಾಲ : ಕ್ರಿ.ಶ. ೧೦೬೧

ಶಾಸನ ಸಬ್ಬಿಯ ಧೋರಜಿನಾಲಯ ಕನಕನಂದಿ ನಿಷಿಧಿಯಾದ ಬಗ್ಗೆ ತಿಳಿಸುತ್ತದೆ.[೨೦೬]

೩. ಗ್ರಾಮ : ಭದ್ರಾಪುರ

ತಾಲೂಕು : ನವಲಗುಂದ

ಸ್ಥಳ : ದ್ಯಾಮವ್ವನ ಗುಡಿ–ಎದುರು

ಕಾಲ : ಕ್ರಿ.ಶ. ೧೨೪೮

ತೃಟಿತವಾಗಿದ್ದು, ಮೂಲಸಂಘ, ದೇವಗಣದ ರತ್ನಸೇನ ಸಿದ್ಧಾಂತ ದೇವನ ಮರಣವನ್ನು ಶಾಸನ ದಾಖಲಿಸುತ್ತದೆ.[೨೦೭]

೪. ಗ್ರಾಮ : ಗರಗ

ತಾಲೂಕು : ಧಾರವಾಡ

ಸ್ಥಳ : ಕೆರೆಯ ಏರಿ

ಕಾಲ : ಕ್ರಿ.ಶ. ೧೨೯೦

ಶಾಸನದಲ್ಲಿ ವಿಕೃತ ಸಂವತ್ಸರದ ಶ್ರಾವಂ ಮಾಸದಲ್ಲಿ ಬಹುಳ ಚವುತಿ ಬ್ರಹಸ್ಪತಿ ವಾರದೆಂದು ಕಾಲದ ಉಲ್ಲೇಖವಿದೆ. ಆದರೆ ಲಿಪಿಯ ಆಧಾರದ ಮೇಲೆ ವಿಕೃತ ಸಂವತ್ಸರವು ೧೨೧೨ನೆಯ ಶಕವರ್ಷದಲ್ಲಿ ಬಂದಿರುವುದರಿಂದ ಇದರ ಕಾಲವನ್ನು ಕ್ರಿ.ಶ. ೧೨೯೦ ಜುಲೈ ೨೭, ಗುರುವಾರಕ್ಕೆ ಸಮಾನಾಗುತ್ತದೆ. ಇದು ಶ್ರೀಯಾಪನೀಯ ಸಂಘದ ಕುಂಮಡಿಗಣದ ಆಚಾರ್ಯ್ಯಶಾಂತಿ ವೀರದೇವರ ಪೂರ್ವೋಕ್ತ ದಿನದಂದು ಸಮಾಧಿಯನ್ನು ಹೊಂದಿ ಮೋಕ್ಷ ಪದವಿಯನ್ನು ಪಡೆದರೆಂದು ಈ ಶಾಸನ ದಾಖಲಿಸುತ್ತದೆ.[೨೦೮]

೫. ಗ್ರಾಮ : ಗರಗ

ತಾಲೂಕು : ಧಾರವಾಡ

ಸ್ಥಳ : ಕೆರೆಯ ಏರಿ

ಕಾಲ : ಕ್ರಿ.ಶ. ೧೩ನೇ ಶ

ಈ ಶಾಸನವು ಅಪೂರ್ಣವಾಗಿದ್ದು, ಕೇವಲ ೩ ಸಾಲುಗಳಷ್ಟೇ ಕಂಡು ಬರುತ್ತವೆ. ಶ್ರೀ ಯಾಪನೀಯ ಸಂಘ ಕುಮ್ಮಡಿಗಣದ ಬೆಳೆದಿಗೆಯ' ವಿಷಯವಿದ್ದು, ಬಹುಶಃ ನಿಷಿಧಿಯನ್ನೇ ಸೂಚಿಸುತ್ತದೆ.[೨೦೯]

೬. ಗ್ರಾಮ : ಆಳ್ನಾವರ

ತಾಲೂಕು : ಧಾರವಾಡ

ಸ್ಥಳ : ಲಿಂಗಾಯತ ಮಠದ ಹೊಲ

ಕಾಲ : ಕ್ರಿ.ಶ. ೧೫೦೫ನೇ ಶ

ಶಾಸನದಲ್ಲಿ 'ಸಕವರ್ಷಸಾವಿರದ ನಾನೂ ಇಪ್ಪತ್ತೆಂಟನೆಯ ಕ್ರೋಧನ ಸಂವಧರದ ಆರ್ಶವಿಜ ಬಹುಳ ಚತುರ್ದಶಿ' ಎಂದು ಉಲ್ಲೇಖವಿದ್ದು, ಇದು ಕ್ರಿ.ಶ. ೧೫೦೫ನೆಯ ಅಕ್ಟೋಬರ್ ೨೬ ಆದಿತ್ಯವಾರಕ್ಕೆ ಸರಿ ಹೊಂದುತ್ತದೆ. ಪೂರ್ವೋಕ್ತದಿನದಂದು ಹುಬ್ಬಳ್ಳಿಯ ಚಿಕ್ಕಮಲ್ಲಿಸೆಟ್ಟಿಯು ಇಪ್ಪತ್ತೊಂದು ದಿನಗಳ ಕಾಲ ಸಲ್ಲೇಖನ ವೃತವನ್ನಾಚರಿಸಿ ಚತುರ್ದಶಿಯಂದು ಸೂರ್ಯ ಉದಯದ ಒಂದನೆಯ ಜಾವದಲ್ಲಿ ಸ್ವರ್ಗಸ್ಥರಾದರು. ಅವರನ್ನು ಹೊಳೆಯ ದಂಡೆಯಲ್ಲಿ ದಹನಮಾಡಿದರು. ಅಲ್ಲದೇ ಈತನನ್ನು ಸಿದ್ದೇಮದ್ರತನು ಸಂಜಾತ ಬಡವರ ಬೇಲಿ ಜಿನಧರ್ಮಪರಾಯಣ ಎಂದು ಹೊಗಳಲಾಗಿದೆ.[೨೧೦]

೩.೬ ಗೋಸಾಸಗಲ್ಲು

ದಾನಶಾಸನಗಳಲ್ಲಿ ಗೋಸಾಸಗಲ್ಲು ಒಂದಾಗಿದ್ದು, ಗೋವುಗಳನ್ನು ದಾನಮಾಡಿದ ಸಂದರ್ಭದಲ್ಲಿ ಪರೋಕ್ಷವಾಗಿ ಅವರ ನೆನಪಿಗಾಗಿ ನಿಲ್ಲಿಸಿದ ಶಿಲಾಸ್ಥಂಭಗಳನ್ನು ಗೋಸಾಸಗಳು ಎಂದು ಕರೆಯಲಾಗುತ್ತದೆ. 'ಗೋಸಾಸ' ಎಂಬುದು ಸಂಸ್ಕೃತದ ಗೋಸಹಸ್ರ ಎಂಬ ಪದದ ರೂಪ. ಈ ಪದದ ಅರ್ಥದ ಬಗ್ಗೆ ಡಾ. ಫ್ಲೀಟ್,[೨೧೧] ಎನ್.ಲಕ್ಷ್ಮೀನರಾಯಣರಾವ್,[೨೧೨] ಎಂ.ಚಿದಾನಂದಮೂರ್ತಿ,[೨೧೩] ಎಂ.ಎಂ. ಕಲಬುರ್ಗಿ,[೨೧೪]ಇನ್ನೂ ಮುಂತಾದ ವಿದ್ವಾಂಸರುಗಳು ಈ ಪದದ ಬಗ್ಗೆ ಚರ್ಚಿಸಿದ್ದಾರೆ.

ಜೊತೆಗೆ ರನ್ನನ 'ಅಜಿತನಾಥ ಪುರಾಣದಲ್ಲಿ',[೨೧೫] ಮನುಸ್ಮೃತಿಯಲ್ಲಿ,[೨೧೬] ಮತ್ಸ್ಯಪುರಾಣ ಮತ್ತು ಲಿಂಗಪುರಾಣದಲ್ಲಿ ಉಲ್ಲೇಖಿಸಲಾಗಿದೆ. ಕರ್ನಾಟಕದಲ್ಲಿ ಇದರ ಪ್ರಾಚೀನತೆ ನೋಡಿದರೆ ಕ್ರಿ.ಶ. ಸುಮಾರು ೮ನೆ ಶತಮಾನದಿಂದ-೧೦ನೇ ಶತಮಾನದ ಉತ್ತರಾರ್ಧದ ಕಾಲಘಟ್ಟದಲ್ಲಿ ಗುರುತಿಸಬಹುದಾಗಿದೆ. ಅಂದರೆ ಬಾದಾಮಿ ಚಾಲುಕ್ಯ ಮನೆತನದ ಉತ್ತರಾರ್ಧದ ಕಾಲಘಟ್ಟದಿಂದ ಪ್ರಾರಂಭವಾಗಿ ರಾಷ್ಟ್ರಕೂಟರ ಮನೆತನದ ಕಾಲದಲ್ಲಿ ಬೆಳವಣಿಗೆಯನ್ನು ಕಂಡಿತು. ಭೌಗೋಳಿಕವಾಗಿ ಎಂ.ಎಂ. ಕಲಬುರ್ಗಿಯವರು ಬೆಳ್ವಲಮುನ್ನೂರು, ಪುಲಿಗೇರಿಮುನ್ನೂರು, ಬನವಾಸಿಪನ್ನಿರ್ಚ್ಛಾಸಿರ, ಪ್ರಾಂತ್ಯಗಳಲ್ಲಿ ಕಂಡು ಬರುತ್ತವೆಂದು ಸೂಚಿಸಿದ್ದಾರೆ.[೨೧೭] ಅದೇ ರೀತಿಯಲ್ಲಿ ನಾಗರಖಂಡ ಎಪ್ಪತ್ತು ಮತ್ತು ನೂರುಂಬಾಡ ಪ್ರಾಂತ್ಯಗಳಲ್ಲಿಯೂ ಹೆಚ್ಚಿನ ಪ್ರಮಾಣದಲ್ಲಿ ಕಂಡು ಬಂದಿವೆ.[೨೧೮]ಕರ್ನಾಟಕದಲ್ಲಿ ಇದರ ಪ್ರಾಚೀನತೆಯನ್ನು ಪಟ್ಟದಕಲ್ಲಿನ ಕ್ರಿ.ಶ. ೭೭೮ ಶಿಲಾಸ್ಥಂಭ ಶಾಸನವನ್ನು ಗುರುತಿಸಬಹುದಾಗಿದ್ದು, ಬಾದಿಪೊಟ್ಟಿ ಎಂಬ ಸೂಳೆ ಸಾವಿರ ಗೋವುಗಳನ್ನು ದಾನ ಮಾಡಿದ ವಿವರವನ್ನು ಕಾಣುತ್ತೇವೆ. ಜೊತೆಗೆ ಸಮಕಾಲೀನ ಶಾಸನಗಳಲ್ಲಿ 'ಗೋಸಾಸಿ' ಎಂದು ಕರೆಯಲಾಗುತ್ತದೆ.[೨೧೯]

ಪ್ರಸ್ತುತ ಈ ಅಧ್ಯಯನದ ಪ್ರದೇಶದಲ್ಲಿ ಅಣ್ಣಿಗೇರಿ, ಮಲ್ಲಿಗವಾಡ, ಬೆಳಗಲಿ, ಅಂಚಟಗೇರಿ, ಛಬ್ಬಿ, ಮಾವಳ್ಳಿ, ಕಾರ್ಲವಾಡ, ಗುಡಗೇರಿ ಪ್ರದೇಶಗಳಲ್ಲಿ ಇಂತಹ ಶಾಸನಗಳನ್ನು ಗುರುತಿಸಬಹುದಾಗಿದೆ.

೧. ಗ್ರಾಮ : ಗುಡಗೇರಿ

ತಾಲೂಕು : ಕುಂದಗೋಳ

ಸ್ಥಳ : ಪರ್ವತದೇವರ ಗುಡಿಯ ಹತ್ತಿರ

ರಾಜವಂಶ : ರಾಷ್ಟ್ರಕೂಟ

ಅರಸ : ಅಮೋಘವರ್ಷ

ಕಾಲ : ಕ್ರಿ.ಶ. ೮ನೇ ಶ

ಅಪೂರ್ಣವಾಗಿದ್ದು, ಗೋಸಾಸ ಹಾಗೂ ಶುಭಚಂದ್ರಪಂಡಿತರ ಉಲ್ಲೇಖವಿದೆ.[೨೨೦]

೨. ಗ್ರಾಮ : ಗಬ್ಬೂರು

ತಾಲೂಕು : ಹುಬ್ಬಳ್ಳಿ

ಸ್ಥಳ : ಹನುಮಂತ ದೇವರಗುಡಿ

ರಾಜವಂಶ : ರಾಷ್ಟ್ರಕೂಟ

ಅರಸ : ಕೃಷ್ಣ ೩

ಕಾಲ : ಕ್ರಿ.ಶ. ೯ನೇ ಶ

ತೃಟಿತವಾಗಿದ್ದು, ಗೋಗ್ರಹಣ ಪ್ರಸಂಗದಲ್ಲಿ ಸಿರಿವೆಗೆ ಎಂಬವನ ಮರಣದ ದಾಖಲೆ ಇದೆ.[೨೨೧]

೩. ಗ್ರಾಮ : ಮಾವಳ್ಳಿ

ತಾಲೂಕು : ಕಲಘಟಗಿ

ಸ್ಥಳ : ಹುಲ್ಲೆಪ್ಪನ ಗುಡಿ

ಕಾಲ : ಕ್ರಿ.ಶ. ೯ನೇ ಶ

ಸಂಪೂರ್ಣ ತೃಟಿತಗೊಂಡಿದೆ.[೨೨೨]

೪. ಗ್ರಾಮ : ಮಾವಳ್ಳಿ

ತಾಲೂಕು : ಕಲಘಟಗಿ

ಸ್ಥಳ : ಹಾಳಾದ ಊರು–ದುರ್ಗವ್ವನ ಗುಡಿಹತ್ತಿರ

ಕಾಲ : ಕ್ರಿ.ಶ. ೯ನೇ ಶ

ಪಸಳ್ಬುಗಾಮಿಗನು ಗೋಸಾಸಧರ್ಮ ಮಾಡಿದ ಉಲ್ಲೇಖ ವಿದೆ.[೨೨೩]

೫. ಗ್ರಾಮ : ಕಟ್ನೂರು

ತಾಲೂಕು : ಹುಬ್ಬಳ್ಳಿ

ಸ್ಥಳ : ಸ.ನಂ. ೧೪

ಕಾಲ : ಕ್ರಿ.ಶ. ೯ನೇ ಶ

ಕಟ್ಪನೂರು ಗೋಗ್ರಹಣದಲ್ಲಿ ಕಟ್ಪಳಿ ಎಂದಿದೆ.[೨೨೪]

೬. ಗ್ರಾಮ : ಅಂಬಳ್ಳಿ

ತಾಲೂಕು : ಧಾರವಾಡ

ಸ್ಥಳ : ಗ್ರಾಮದ ಸಮೀಪದಲ್ಲಿನ ಗದ್ದೆಯಲ್ಲಿದೆ

ರಾಜವಂಶ : ರಾಷ್ಟ್ರಕೂಟ

ಅರಸ : ಕನ್ನರದೇವ

ಕಾಲ : ಕ್ರಿ.ಶ. ೧೦ನೇ ಶ

ಶಾಸನದಲ್ಲಿ ಕಾಲದ ಉಲ್ಲೇಖವಿಲ್ಲ, ಲಿಪಿಯ ದೃಷ್ಠಿಯಿಂದ ಕ್ರಿ.ಶ. ೧೦ನೆಯ ಶತಮಾನ. ಮಹಾರಾಜಾವೆಂದಷ್ಟೇ ಉಲ್ಲೇಖವಿದ್ದು, ರಾಜನ ಹೆಸರು ಅಸ್ಪಷ್ಟವಾಗಿದೆ. ಮಹರಾಜನು ರಾಜ್ಯವನ್ನಾಳುತ್ತಿದ್ದಾಗ ಗೊಗೆಯಹಳ್ಳಿಯ ಗಾವುಂಡ ಮಾದಯ್ಯನು ತುರುಮಂದಿ(ತುರುಗೋಳ)ಯಲ್ಲಿ ಮರಣದ ಮಾಹಿತಿಯನ್ನು ತಿಳಿಸುತ್ತಿದೆ. ಮಾದಯ್ಯನ ಸ್ಮರಣಾರ್ಥ ಇದನ್ನು ನಿಲ್ಲಿಸಲಾಗಿದೆ.[೨೨೫]

೭. ಗ್ರಾಮ : ಮಾವಳ್ಳಿ

ತಾಲೂಕು : ಕಲಘಟಗಿ

ಸ್ಥಳ : ಹಾಳಾದ ಊರು–ವೀರಗಲ್ಲು

ರಾಜವಂಶ : ಕಲ್ಯಾಣ ಚಾಲುಕ್ಯ

ಕಾಲ : ಕ್ರಿ.ಶ. ೧೦೦೬

ಶಕಕಾಲವನ್ನು ತಿಳಿಸುವ ಭಾಗವು ನಶಿಸಿದ್ದು, 'ಪರಾಭವ' ಸಂವತ್ಸರವೆಂದಷ್ಟೇ ತಿಳಿಯುತ್ತದೆ. ಇದು ಕ್ರಿ.ಶ. ೧೦೦೬-೦೭ಕ್ಕೆ ಹೊಂದುತ್ತದೆ. ರಾಜನು ರಾಜ್ಯವನ್ನಾಳುತ್ತಿರಲು ಏಚ(?)ನೆಂಬುವವನು ತುರುಗೋಳ್ ಕಾಳಗದಲ್ಲಿ ಮರಣ ಹೊಂದಿದ ವಿಚಾರವು ಇದರಲ್ಲಿದೆ. ಆತನ ಸ್ಮರನಾರ್ಥವಾಗಿ ರವಿಗನೆಂಬುವವನು ಈ ಕಲ್ಲನ್ನು ಇರಿಸಿದ ವಿಷಯವಿಲ್ಲಿದೆ.[೨೨೬]

೮. ಗ್ರಾಮ : ಶಿಶುವಿನಹಳ್ಳಿ

ತಾಲೂಕು : ನವಲಗುಂದ

ಸ್ಥಳ : ಹನುಮಂತ ದೇವಾಲಯದ-ವೀರಗಲ್ಲು

ಕಾಲ : ಕ್ರಿ.ಶ. ೧೨ನೇ ಶ

ಕಾಲದ ಉಲ್ಲೇಖವಿರದ ಈ ಶಾಸನದಲ್ಲಿ ಲಿಪಿಯ ದೃಷ್ಟಿಯಿಂದ ೧೨ನೆಯ ಶತಮಾನವೆಂದು ಊಹಿಸಬಹುದು. ಈ ಶಾಸನವು ತುರುಗೋಳು ಶಾಸನವಾಗಿದ್ದು, ಮಾಹಿತಿ ಅಸ್ಪಷ್ಟವಾಗಿದೆ.[೨೨೭]

೯. ಗ್ರಾಮ : ಅಣ್ಣಿಗೇರಿ

ತಾಲೂಕು : ನವಲಗುಂದ

ಸ್ಥಳ : ಚಾವಡಿಯ ಎದುರು ವೀರಗಲ್ಲು

ರಾಜವಂಶ : ರಾಷ್ಟ್ರಕೂಟ

ಅರಸ : ಅಕಾಲವರ್ಷ

ಅಸ್ಪಷ್ಟವಾಗಿದ್ದು, ತುರುಗೋಳು ಕಾಳಗದಲ್ಲಿ ಕಾದಾಡಿ ಮಡಿದ ವೀರನ ಉಲ್ಲೆಖವಿದೆ. ವೀರನ ಹೆಸರು ಉಲ್ಲೇಖಗೊಂಡಿಲ್ಲ, ಶಾಸನದಲ್ಲಿ 'ಚಟ್ಟಗನ' 'ಸಿರಿಗಸ' ಎಂಬ ಹೆಸರು ಉಲ್ಲೇಖವಾಗಿದೆ.[೨೨೮]

೧೦. ಗ್ರಾಮ : ತಂಬೂರು

ತಾಲೂಕು : ಕಲಘಟಗಿ

ಸ್ಥಳ : ಬಸವಣ್ಣ ದೇವಾಲಯದ-ವೀರಗಲ್ಲು

ರಾಜವಂಶ : ಗೋವಾ ಕದಂಬ

ಅರಸ : ೩ನೇ ಜಯಕೇಶಿ

ಕಾಲ : ಕ್ರಿ.ಶ. ೧೨೦೨

ಜಯಕೇಶಿ ದೇವರ ವರ್ಷದ ೧೫ನೆಯ ದುರ್ಮತಿ ಸಂವತ್ಸರದ ಶ್ರಾವಣ ಶುದ್ಧ ಆದಿತ್ಯವಾರವೆಂದು ಕಾಲದ ಉಲ್ಲೇಖವು ಈ ಶಾಸನದಲ್ಲಿದ್ದು, ಇದು ಕ್ರಿ.ಶ. ೧೨೦೧ ಜುಲೈ ೮,

ಆದಿತ್ಯವಾರಕ್ಕೆ ಸರಿ ಹೊಂದುತ್ತದೆ. ತಮ್ಮಿಯೂರ ನಮಿಕ ಬೊಪ್ಪನು ತುರುಗಾಳಗದಲ್ಲಿ ಕಾದು ಮಡಿದು ಸುರಲೋಕಕ್ಕೆ ಸೇರಿದ ವಿಚಾರವಿದೆ.[೨೨೯]

೧೧. ಗ್ರಾಮ : ಎಲಿವಾಳ

ತಾಲೂಕು : ಕುಂದಗೋಳ

ಸ್ಥಳ : ಕಲ್ಮೇಶ್ವರ ದೇವಾಲಯದ–ವೀರಗಲ್ಲು

ಕಾಲ : ಕ್ರಿ.ಶ. ೧೨೪೮

ಶಾಸನದಲ್ಲಿ ಕಾಲವನ್ನು 'ಶಕವರುಷ ೧೧೭೧ನೆಯ ಕೀಲಕ ಸಂವತ್ಸರದ ಚೈತ್ರ ಬಹುಳ ೩.ಆ'ಎಂದು ನೀಡಿದ್ದು, ಇದು ಕ್ರಿ.ಶ. ೧೨೪೮ ಮಾರ್ಚ ೧೪ಕ್ಕೆ ಸರಿಹೊಂದುತ್ತದೆ. ಹಲಸಿಗೆ ನಾಡಿನ ಚಟ್ಟಿಯದೇವನ ಆಜ್ಞೆಯ ಮೇರೆಗೆ ಗುತೋಖದ ಜೋಯಿದೇವನು ತುರುಗಳನ್ನು ಅಪಹರಿಸಲು ಅದನ್ನು ತಡೆದು ಹೋರಾಡಿ ವೀರಮರಣವನ್ನು ಹೊಂದಿದ....ಯನಾಯ್ಕ(?) ವಿಷಯವನ್ನು ಈ ಶಾಸನವು ತಿಳಿಸುತ್ತಿದೆ.[೨೩೦]

೧೨. ಗ್ರಾಮ : ಎಲಿವಾಳ

ತಾಲೂಕು : ಕುಂದಗೋಳ

ಸ್ಥಳ : ಕಲ್ಮೇಶ್ವರ ದೇವಾಲಯದ–ವೀರಗಲ್ಲು

ಅರಸ : ಎರಗೆಯ ನಾಯಕ

ಕಾಲ : ಕ್ರಿ.ಶ. ೧೨೪೮

ಶಾಸನದಲ್ಲಿ ಚೈತ್ರ ಬಹುಳ ೨ ಎಂದು ಹೇಳಿದೆ. ಇದು ಕ್ರಿ.ಶ. ೧೨೪೮ ಮಾರ್ಚ ೧೪ಕ್ಕೆ ಸಮನಾಗುತ್ತದೆ. ಕುಂದಗೋಳದ ಅನಾದಿ ಅಗ್ರಹಾರದ ಉಲ್ಲೇಖವಿದೆ, ಗುತೋಳದ ಜೋಯಿದೇವನು ಎರಗೆಯ ನಾಯಕ ಹಸುವನ್ನು ಕದಿಯುತ್ತಾನೆ. ಈ ಕದನದಲ್ಲಿ ಎರಗೆಯ ನಾಯಕನು ಗದ್ದೆ, ಹಸುವನ್ನು ಬಿಡಿಸಿಕೊಂಡು ಬರುವಾಗ ಸ್ವರ್ಗಕ್ಕೆ ಹೋಗುತ್ತಾನೆ, ಅವನ ನೆನಪಿಗಾಗಿ ನಿಲ್ಲಿಸಿದ ವೀರಗಲ್ಲಾಗಿದೆ.[೨೩೧]

೧೩. ಗ್ರಾಮ : ಅಣ್ಣಿಗೇರಿ

ತಾಲೂಕು : ನವಲಗುಂದ

ಸ್ಥಳ : ಹುಡೇದ ಬಾವಿ ಹತ್ತಿರ

ರಾಜವಂಶ : ಆದಿಲ್‌ಷಾಹಿ

ಅರಸ : ಮಹಮ್ಮದ ಶಹಾ

ಕಾಲ : ಕ್ರಿ.ಶ. ೧೬೪೬

ಈ ಶಾಸನದಲ್ಲಿ ಕಾಲದ ಉಲ್ಲೇಖವನ್ನು ವಿಜಯಾಭ್ಯುದಯ ಶಾಲಿವಾಹನ ಶಕವರುಷ ಎಂದಿದೆ. ಯನಾಮ ಸಂವತ್ಸರದ ಮಾರ್ಗಶಿರ ಸುದ್ದ ತೆದಿಗೆ ೩ಆದಿತ್ಯಾವಾರ ಚಂದ್ರನ ಹೋರೆಯಲ್ಲಿ ಇದು ಕ್ರಿ.ಶ.೧೬೪೫ ನವೆಂಬರ್೨೯ ಆದಿತ್ಯವಾರಕ್ಕೆ ಸರಿಹೊಂದುತ್ತದೆ. ಬಿಜಾಪುರದ ಆದಿಲ್‌ಷಾಹಿ ಸುಲ್ತಾನ ಮೊಹಮ್ಮದ್‌ಷಾಹನ ಕಾಲಕ್ಕೆ ಸೇರಿದ ಶಾಸನವಾಗಿದ್ದು, ಈತನನ್ನು ಶಾಸನವು ವಿದ್ಯಾಪುರದ ರಾಜಾಧಿರಾಜ ಎಂದು ಹೊಗಳಿದೆ. ಈತನು ಆಳ್ವಿಕೆ ನಡೆಸುತ್ತಿರುವಾಗ ಈತನ ಕಾರ್ಯಕ್ಕೆ ಕಾರಣನಾದ ರಣದುಲ್ಲಾಖಾನನ ಮಗ ರುಸ್ತುಂಮಜಮ ಸಾಹೇಬರು ಅಣ್ಣಿಗೇರಿಯ ಸೀಮೆಯಲ್ಲಿ ಹೊಸದಾಗಿ ನಿರ್ಮಿಸಿದ ರುಸ್ತುಂಪೇಟೆಯ ಮಹಾನಾಡುಗಳಿಗೆ ಗೋದಾನವನ್ನು ಮಾಡಿ ೧೨ವರ್ಷಗಳ ವರೆಗೆ ತೆರಿಗೆ ವಿನಾಯತಿಯನ್ನು ಬಿಟ್ಟ ಉಲ್ಲೇಖವಿದೆ.[೨೨]

ಸಾಮಾಜಿಕ ಕಾರ್ಯಗಳಿಗಾಗಿ ನೀಡಿದ ದಾನಶಾಸನಗಳು

ಕೆರೆಗಳಿಗೆ ನೀಡಿದ ದಾನಶಾಸನಗಳು; ಈ ಪ್ರದೇಶಗಳಲ್ಲಿ ಹಲವಾರು ರಾಜರುಗಳು ಆಳ್ವಿಕೆಯನ್ನು ಮಾಡುತ್ತಿದ್ದುದನ್ನು ನಾವು ಹಲವಾರು ಶಾಸನಗಳಿಂದ ನೋಡಿದ್ದೇವೆ. ಈ ರಾಜರುಗಳು, ಆಧಿಕಾರಿಗಳು, ಮಂತ್ರಿಗಳು ಇನ್ನೂ ಮುಂತಾದವರು ತಮ್ಮ-ತಮ್ಮ ಪ್ರದೇಶದ ಜನರ ಯೋಗಕ್ಷೇಮಕ್ಕಾಗಿ ಹಲವಾರು ರೀತಿಯ ಜನೋಪಯೋಗಿ ಕಾರ್ಯಗಳನ್ನು ಮಾಡುತ್ತಿದ್ದರು ಎಂಬ ಅಂಶವು ನಮಗೆ ಹಲವಾರು ಶಾಸನಗಳಿಂದ ದೃಢಪಟ್ಟಿದ್ದು, ಈ ಶಾಸನಗಳಲ್ಲಿ ಕೆರೆಗಳನ್ನು ಕಟ್ಟಿಸುವ, ಬಾವಿಗಳನ್ನು ಕೊರೆಸುವ, ಅವುಗಳ ನಿರ್ವಹಣೆಗಾಗಿ ಅನೇಕ ಗ್ರಾಮಗಳನ್ನು ದತ್ತಿಯನ್ನು ನೀಡುವ ಪರಂಪರೆಯನ್ನು, ಅಲ್ಲದೇ ಅನೇಕ ರೀತಿಯ ದಾನ-ದತ್ತಿಗಳನ್ನು ನೀಡಿದ್ದರು ಎಂಬುದರ ಬಗ್ಗೆ ಈ ಶಾಸನಗಳು ತಿಳಿಸಿಕೊಡುತ್ತವೆ. ಪ್ರಸ್ತುತ ಈ ಜಿಲ್ಲೆಯಲ್ಲಿ ಹಲವಾರು ರಾಜ ಮನೆತನಗಳು ಆಳ್ವಿಕೆಯನ್ನು ಮಾಡಿದ್ದಲ್ಲದೇ ಅವರುಗಳು ಕೆರ, ಬಾವಿಗಳನ್ನು ಕಟ್ಟಿಸಿ ಅವುಗಳ ಜೀರ್ಣೋದ್ಧಾರ ಮಾಡಿದ್ದನ್ನು ಈ ಕೆಳಕಂಡ ಶಾಸನಗಳಿಂದ ಗುರುತಿಸ ಬಹುದಾಗಿದೆ.

೧.	ಗ್ರಾಮ	:	ಹುಬ್ಬಳ್ಳಿ
	ತಾಲೂಕು	:	ಹುಬ್ಬಳ್ಳಿ
	ಸ್ಥಳ	:	ಕಛೇರಿ ಆವರಣ
	ರಾಜವಂಶ	:	ರಾಷ್ಟ್ರಕೂಟ
	ಅರಸ	:	ಅಮೋಘವರ್ಷ
	ಕಾಲ	:	ಕ್ರಿ.ಶ. ೯೭೫

ಮೋರಿಯ ಕಲಿಬಿಟ್ಟಯ್ಯನಿಂದ ಕೆರೆಯ ನಿರ್ಮಾಣ ಹಾಗೂ ದಾನದ ಕುರಿತಿದೆ.[೨೩]

೨.	ಗ್ರಾಮ	:	ಬೆಳಗಲಿ
	ತಾಲೂಕು	:	ಹುಬ್ಬಳ್ಳಿ

ಸ್ಥಳ	:	ಚಿಕ್ಕ ಮಠದ ಹತ್ತಿರ
ರಾಜವಂಶ	:	ಕಲ್ಯಾಣ ಚಾಲುಕ್ಯ
ಅರಸ	:	ಜಯಸಿಂಹದೇವ
ಕಾಲ	:	ಕ್ರಿ.ಶ. ೧೦೪೨

ತೃಟಿತವಾಗಿದ್ದು, ಸಬ್ಬಿನಾಡಿನಲ್ಲಿ ಕದಂಬ ಅರಸನೊಬ್ಬ ಕೆರೆ ಕಟ್ಟಿಸಿ ದಾನ ನೀಡಿದ ಉಲ್ಲೇಖ.[೨೩೪]

೩.	ಗ್ರಾಮ	:	ಮೊರಬ
	ತಾಲೂಕು	:	ನವಲಗುಂದ
	ಸ್ಥಳ	:	ಕಲ್ಮೇಶ್ವರ ದೇವಾಲಯದ–ಎದುರು
	ರಾಜವಂಶ	:	ಕಲ್ಯಾಣ ಚಾಲುಕ್ಯ
	ಅರಸ	:	೪ನೇ ವಿಕ್ರಮಾದಿತ್ಯ
	ಕಾಲ	:	ಕ್ರಿ.ಶ. ೧೦೭೨

ಈ ಶಾಸನದ ಕಾಲವು ಚಾಲುಕ್ಯ ವಿಕ್ರಮಕಾಲ ೨ನೆಯ ಎಂಗಳ ಸಂವತ್ಸರದ ಫಾಲ್ಗುಣದ ಪುಣ್ಣಮೆ ಆದಿತ್ಯವಾರಮುಂ ಸೋಮಗ್ರಹಣಮಂ' ಎಂದಿದೆ. ಪ್ರಸ್ತುತ ಪಂಗಳ ಸಂವತ್ಸರವು ವಿಕ್ರಮಕಾಲದ ೨ನೆಯ ವರ್ಷವಾಗಿದೆ, ಆದರೆ ಈ ವರ್ಷದಲ್ಲಿ ಫಾಲ್ಗುಣ ಮಾಸದಲ್ಲಿ ಸೂರ್ಯಗ್ರಹಣವು ಘಟಿಸದೇ ಶ್ರಾವಣ ಮಾಸದಲ್ಲಿ ಸಂಭವಿಸಿದೆ. ಇದನ್ನು ಆಧಾರವಾಗಿಟ್ಟುಕೊಂಡರೆ ಕ್ರಿ.ಶ.೧೦೭೭ ಅಗಸ್ಟ ೬ಕ್ಕೆ ಸರಿಹೊಂದುತ್ತದೆ. ವಿಕ್ರಮಾದಿತ್ಯ ಸಾಮ್ರಾಜ್ಯ ಆಳುತ್ತಿದ್ದಾಗ ಪಲ್ಲವ ಮನೆತನದ ಯುವರಾಜ ಪೆರ್ಮಾಡಿ ಜಯಸಿಂಘದೇವ ಕೋಗಳಿ–೧೦೦೦, ಕುಂದೂರು–೧೦೦೦, ಪುಲಿಗೆರೆ–೩೦೦, ಬೆಳ್ವಲ–೩೦೦ನ್ನು ನೋಡಿಕೊಳ್ಳುತಿದ್ದನು. ಆ ಸಮಯದಲ್ಲಿ ಮಹಾದಂಡನಾಯಕ ಸಂಖರಯ್ಯನಾಯಕ ಮಹಾಸೇನಾಪತಿ ಮನೆವೆರ್ಗಡೆ ದಂಡನಾಯಕ ಮಧುಪಯ್ಯ ನಾಯಕರು ಬೆಳ್ವಲನಾಡ ಬಳಿಯ ಮೊರಬದ ಹಿರಿಯ ಕೆರೆಗೆ ನೊಳಂಬ ಸಮುದ್ರ ಎಂಬ ಹೆಸರುನೀಡಿ ದತ್ತಿ ಬಿಟ್ಟರು. ಮತ್ತು ಶಾಸನದ ಕೊನೆಯಭಾಗದಲ್ಲಿ ಶಾಪಾಶಯವಿದೆ.[೨೩೫]

೪.	ಗ್ರಾಮ	:	ಮುಗುದ
	ತಾಲೂಕು	:	ಧಾರವಾಡ
	ಸ್ಥಳ	:	ಕೆರೆಯ ಏರಿ
	ರಾಜವಂಶ	:	ಕಲ್ಯಾಣ ಚಾಲುಕ್ಯ

ಅರಸ : ವಿಕ್ರಮಾದಿತ್ಯ ೬

ಕಾಲ : ಕ್ರಿ.ಶ. ೧೧೨೫

ಈ ಶಾಸನದ ಕಾಲವು 'ಸಕವರ್ಷ ೧೦೪೭ನೆಯ ವಿರ್ಶವಾಸು ಸಂವತ್ಸರದ ಪುಷ್ಯಸುದ್ದ ೫ ಸುಕ್ರವಾರದಂದಿನುತ್ತರಾಯಣ ಸಂಕ್ರಾಂತಿ ವ್ಯತೀಪಾತ ಎಂದು ನೀಡಿದ್ದು, ಇದು ಕ್ರಿ.ಶ. ೧೧೨೫ ಡಿಸೆಂಬರ್ ೪ ಶುಕ್ರವಾರ ಸಮನಾದರೂ ಈ ಸಂವತ್ಸರದಲ್ಲಿ ಉತ್ತರಾಯಣ ಸಂಕ್ರಮಣವು ಕ್ರಿ.ಶ. ೧೧೨೫ ಡಿಸೆಂಬರ್ ೨೫ ಶುಕ್ರವಾರ ಸಂಭವಿಸಿದೆ. ಕಲ್ಯಾಣ ಚಾಲುಕ್ಯ ಅರಸ ೬ನೇ ವಿಕ್ರಮಾದಿತ್ಯ ಚಕ್ರವರ್ತಿಯಾಗಿದ್ದ ಸಮಯದಲ್ಲಿ ಮಹಾಮಂಡಳೇಶ್ವರ ಗೂವಲದೇವ ಪಲಸಿಗೆ–೧೨೦೦೦, ಕೊಂಕಣ–೯೦೦ನ್ನು ಆಳುತಿದ್ದು, ಪಲಸಿಗೆ–೧೨೦೦೦ದಲ್ಲಿ ಮಹಾರಾಜವಾಡಿ ನೀಡಿದ್ದು, ಅದರಲ್ಲಿ ಮುಗುಂದ–೩೦ ಇದ್ದಿತು. ಇಲ್ಲಿಯ ಮಹಾಸಾಮಂತ ಮಾರ್ತಂಡರು ಕೆರೆಗೆ ಭೂ ದತ್ತಿ ನೀಡಿದ್ದಾರೆ. ಶಾಸನದಲ್ಲಿ ಬಮ್ಮರಸನ ಪ್ರಶಸ್ತಿ ಇದೆ. ಮತ್ತು ಚಾವುಂಡನ ವಂಶಾವಳಿ ಇದೆ. ಭಂತೋಜನು ಈ ಶಾಸನವನ್ನು ಕಂಡರಿಸಿರುವನು.[೨೬]

೫. ಗ್ರಾಮ : ಮುತ್ತಗಿ

ತಾಲೂಕು : ಕಲಘಟಗಿ

ಸ್ಥಳ : ಕೆರೆಯ ಏರಿ

ರಾಜವಂಶ : ಗೋವಾ ಕದಂಬ

ಅರಸ : ಗುವಲದೇವ

ಕಾಲ : ಕ್ರಿ.ಶ. ೧೧೮೪

ಕಾದಂಬ ಭುಜಬಳ ಶ್ರೀವೀರ ಜಯಕೇಶಿದೇವ ವರ್ಷಧ ೫ನೆಯ ವಿರೋಧಿಕೃತ ಸಂವತ್ಸರದ ಮಾಘದ ಅಮವಾಸ್ಯ ಆದಿವಾರ ಸಂಕ್ರಮಣ ವ್ಯತೀಪಾತ ಸೂರ್ಯ್ಯಗ್ರಹಣ ಎಂದು ಕಾಲದ ಉಲ್ಲೇಖವಿದ್ದು, ಇದು ಕ್ರಿ.ಶ. ೧೧೯೧... ಸರಿ ಹೊಂದುತ್ತದೆ. ಇನ್ನೊಂದು ಕಾಲವನ್ನು ಶಿವಚಿತ್ತವೀರ ಪೆರ್ಮಾಡಿದೇವ ವರ್ಷದ ೨೭ನೆಯ ವಿಜಯಸಂವತ್ಸರದ ಮಾಘದ ಪುಣ್ಣಮಿ ಆದಿವಾರ ವ್ಯತೀಪಾತ ಎಂದಿದ್ದು, ಇದು ಕ್ರಿ.ಶ. ೧೧೮೪ ಜನವರಿ ೩೦, ಸೋಮವಾರಕ್ಕೆ ಸರಿಹೊಂದುತ್ತದೆ. ಈ ಶಾಸನದ ಪ್ರಾರಂಭದ ಭಾಗವು ಅಸ್ಪಷ್ಟವಾಗಿದೆ. ಕದಂಬ ಚಕ್ರವರ್ತಿ ಪೆರ್ಮಾಡಿದೇವನು ರಾಜ್ಯವನ್ನಾಳುತ್ತಿರಲು ಆತನ ಪಾದಪದ್ಮೋಪಜೀವಿ ಬಮ್ಮಗಾವುಂಡನು ಕೆರೆಯ ಜೀರ್ಣೋದ್ದಾರಕ್ಕೆಂದು ಗದ್ದೆಯನ್ನು ದಾನಮಾಡಿದ ವಿಚಾರವಿದೆ. ಅದೇ ರೀತಿಯಾಗಿ ಶ್ರೀಸಂತಕೋಟೋಶ್ವರ ಲಬ್ದವರ ಪ್ರಸಾದನೂ ಆದ ವೀರ ಜಯಕೇಶಿ ದೇವನು ಆಳುತ್ತಿರಲು ಸೂರ್ಯಗ್ರಹಣದಂದು ಮುತ್ತಗೆಯ ಬ್ರಹ್ಮದೇವ ನೈವೇದ್ಯಕ್ಕೆಂದು ಸಿಂಗಗಾವುಂಡ ಮತ್ತು ದಾಸಿಗಾವುಂಡನು ಭೂದಾನವನ್ನು ಬಿಟ್ಟ ವಿವರವಿದೆ.[೨೭]

೬. ಗ್ರಾಮ : ಎಲಿವಾಳ

ತಾಲೂಕು : ಕುಂದಗೋಳ

ಸ್ಥಳ : ಕಲ್ಮೇಶ್ವರ ದೇವಾಲಯದ–ಹಾಳುಬಾವಿ

ಕಾಲ : ಕ್ರಿ.ಶ. ೧೧೯೧

ಈ ಶಾಸನ ಶಕ ೧೧೧೫, ವಿರೋಧಿಕೃತ, ಉತ್ತರಾಯಣ ಎಂದಿದೆ. ಆದರೆ ಇದು ಕ್ರಿ.ಶ. ೧೧೯೧ ಗುರುವಾರ ಡಿಸೆಂಬರ್ ೨೬ಕ್ಕೆ ಸಮನಾಗುತ್ತದೆ. ಇದು ಮಹಾಅಗ್ರಹಾರದ(ಹೆಸರು ಅಸ್ಪಷ್ಟವಾಗಿದೆ)ಸಾಸಿರ್ವರು ಭೂಮಿಯನ್ನು ದತ್ತಿನೀಡಿದ ಬಗ್ಗೆ ಹಾಗೂ ಎಮ್ಮೇರೆ ಮಾದಯ್ಯನ ವಂಶಾವಳಿ ಮತ್ತು ಭಾವಿ(ಕೆರೆ)ಯನ್ನು ನಿರ್ಮಿಸಿದ್ದ ಬಗ್ಗೆ ತಿಳಿಸುತ್ತದೆ. ದಾನಗಳ ಉಲ್ಲೇಖವಿದೆ. ಕಲ್ಲಿಸೆಟ್ಟಿ, ದೇಚವ್ವೆ ಹಾಗೂ ಬೆಳ್ವಲವಾಡನ್ನು ಉಲ್ಲೇಖಿಸುತ್ತದೆ.[೨೩೮]

೭. ಗ್ರಾಮ : ಗರಗ

ತಾಲೂಕು : ಧಾರವಾಡ

ಸ್ಥಳ : ಅಗಸಿ ಓಣಿಯ ಗರಡಿಮನೆ

ರಾಜವಂಶ : ಗೋವಾ ಕದಂಬರು

ಅರಸ : ಜಯಕೇಶಿ ೩

ಕಾಲ : ಕ್ರಿ.ಶ. ೧೨೦೪

ಈ ಸ್ಮಾರಕ ಶಾಸನದಲ್ಲಿ 'ಶ್ರೀ ವೀರ ಜಯಕೇಶಿದೇವ ವರ್ಷದ ೧೮ನೆಯ' ಎಂದು ಕಾಲದ ಉಲ್ಲೇಖವಿದ್ದು, ಇದು ಶಕವರ್ಷ ೧೦೨೯ರಕ್ಕೆ ಸಮನಾಗುತ್ತದೆ. ಇದು ರಕ್ತಾಕ್ಷಿ ಸಂವತ್ಸರದ ವರ್ಷವಾಗಿದ್ದು, ಕ್ರಿ.ಶ. ೧೨೦೪–೦೫ಕ್ಕೆ ಸರಿ ಹೊಂದುತ್ತದೆ. ಈ ಶಾಸನವು ೬ಸಾಲುಗಳನ್ನು ಹೊಂದಿದ್ದು, ಸಂಪೂರ್ಣ ತೃಟಿತವಾಗಿದೆ. ಮಹಾಮಂಡಳೇಶ್ವರನೂ, ಬನವಾಸಿಪುರವರಾಧೀಶ್ವರನೂ ಆದ ಶ್ರೀವೀರ ಜಯಕೇಸಿದೇವನು ಬೆಳೊಟ್ಟಿಗೆಯ...ನಾಯಕನಿಗೆ...ಯಾವುದೋ ಕೆರೆಯ ಪಶ್ಚಿಮಕ್ಕಿರುವ ಭಾಗವನ್ನು ಕೊಟ್ಟ ವಿಷಯ ಶಾಸನದಲ್ಲಿದೆ.[೨೩೯]

೮. ಗ್ರಾಮ : ಬೆಳವಟಗಿ

ತಾಲೂಕು : ನವಲಗುಂದ

ಸ್ಥಳ : ಸ.ನಂ.೧೧೨

ಕಾಲ : ಕ್ರಿ.ಶ. ೧೬ನೇ ಶ

ಈ ಶಾಸನದಲ್ಲಿ ಕಾಲದ ಉಲ್ಲೇಖವಿರುವುದಿಲ್ಲ, ಲಿಪಿಯ ದೃಷ್ಟಿಯಿಂದ ಕ್ರಿ.ಶ. ೧೬ನೆಯ ಶತಮಾನವೆನ್ನಬಹುದು. ಈ ಶಾಸನದಲ್ಲಿ ೧೯ ಸಾಲುಗಳಿದ್ದರೂ ಮೊದಲ ೧೨ ಸಾಲುಗಳು

ಶಿಥಿಲವಾಗಿದೆ. ಉಳಿದ ೭ ಸಾಲುಗಳಲ್ಲಿ ಸೇನೆಭೋವಲಕಣ ಮಕ್ಕಳು ಕೆರೆಯನ್ನು ಕಟ್ಟಿಸಿದ ಉಲ್ಲೇಖವಿದ್ದು, ಅದಕ್ಕೆ ೨ಮಾರು ಹೊಲ. ೨ಮನೆಯನ್ನು ಕೊಡಲಾಗಿದೆ.[೨೪೦]

೯. ಗ್ರಾಮ : ಸುಳ್ಳ

ತಾಲೂಕು : ಹುಬ್ಬಳ್ಳಿ

ಸ್ಥಳ : ಹಿರೇಗೌಡರ ಮನೆಯ ಹತ್ತಿರ

ಕಾಲ : ಕ್ರಿ.ಶ. ೧೬ನೇ ಶ

ತೃಟಿತವಾಗಿರುವ ಈ ಶಾಸನದಲ್ಲಿ, ಸುಳ್ಳದ ತಿಮ್ಮಪ್ಪನಾಯಕನು ಅಗೆಯಿಸಿದ ಬಾವಿಗೆ ಬಿಟ್ಟ ದತ್ತಿಯ ವಿಷಯವಿದೆ.[೨೪೧]

೧೦. ಗ್ರಾಮ : ಸುಳ್ಳ

ತಾಲೂಕು : ಹುಬ್ಬಳ್ಳಿ

ಸ್ಥಳ : ತೀರ್ಥಗೌಡರ ಮನೆಯ ಹತ್ತಿರ

ಕಾಲ : ಕ್ರಿ.ಶ. ೧೭ನೇ ಶ

ತೃಟಿತ, ಸುಳ್ಳದ ಸಿರಿಯಪ್ಪಗೌಡಾದಿಗಳು ಅಮರಗೋಳ್ಳ ಸೀಮೆಯಲ್ಲಿ ಅಗೆಯಿಸಿದ ಬಾವಿಗೆ ನೀಡಿದ ದಾನದ ವಿಷಯವಿದೆ.[೨೪೨]

ವ್ಯಕ್ತಿಗಳಿಗೆ ನೀಡಿದ ದಾನಗಳು:

ಪ್ರಸ್ತುತ ಧಾರವಾಡ ಜಿಲ್ಲೆಯಲ್ಲಿ ಹಲವಾರು ರಾಜಮನೆತನಗಳು ಆಳಿ-ಅಳಿದುದನ್ನು ಹಲವಾರು ಶಾಸನಗಳು ದಾಖಲಿಸಿವೆ. ಈ ರಾಜರುಗಳು ದೇವಾಲಯಗಳಿಗೆ, ಬಸದಿಗಳಿಗೆ, ಕೆರೆ-ಕಟ್ಟೆಗಳನ್ನು ಕಟ್ಟಿಸಿದುದಲ್ಲದೇ ಅವುಗಳನ್ನು ಜೀರ್ಣೋದ್ಧಾರ ಮಾಡುವಂತಹ ಮತ್ತು ಅವುಗಳನ್ನು ನೊಡಿಕೊಳ್ಳಲು ಹಲವಾರು ವ್ಯಕ್ತಿಗಳನ್ನು ನೇಮಿಸುತ್ತಿದ್ದರು. ಹಾಗೆಯೇ ಅವರುಗಳಿಗೆ ಹಲವಾರು ದತ್ತಿಗಳನ್ನು ನೀಡುವ ಅಂಶಗಳು ತಿಳಿಯುತ್ತವೆ.

ಪ್ರಸ್ತುತ ಶಾಸನಗಳಲ್ಲಿ ಹಲವಾರು ವ್ಯಕ್ತಿಗಳು ಇದ್ದುದರ ಬಗ್ಗೆ ಮಾಹಿತಿ ಕಂಡು ಬರುತ್ತವೆ. ಸಮಾಜದಲ್ಲಿ ಅರ್ಚಕರು, ಬ್ರಾಹ್ಮಣರು, ಪಂಡಿತರು, ರಾಣಿಯರು, ಬಡಗಿ, ಕ್ಷೌರಿಕರು, ಜಂಗಮರು, ಉಪಾಧ್ಯಾಯರು, ಇನ್ನೂ ಮುಂತಾದವರುಗಳ ಹೆಸರುಗಳು ನಮಗೆ ಕಾಣಸಿಗುತ್ತವೆ. ಈ ಎಲ್ಲಾ ವ್ಯಕ್ತಿಗಳು ತಮ್ಮ-ತಮ್ಮ ಕೆಲಸಗಳನ್ನು ಸಮಾಜದಲ್ಲಿ ಮಾಡುತ್ತಿದ್ದು, ಅವರುಗಳಿಗೆ ಭೂಮಿ, ಗ್ರಾಮಗಳನ್ನು ದಾನ-ದತ್ತಿಯ ರೂಪದಲ್ಲಿ ನೀಡುತ್ತಿದ್ದರು. ಅವುಗಳು ಆರ್ಥಿಕ ರೂಪದಲ್ಲಿರಬಹುದು ಅಥವಾ ನಗದು ರೂಪದಲ್ಲಿರಬಹುದಾಗಿರುತ್ತಿದ್ದವು. ಈ ಮೇಲ್ಕಾಣಿಸಿದ ವ್ಯಕ್ತಿಗಳ ಉಲ್ಲೇಖಗಳಿರುವ ಶಾಸನಗಳನ್ನು ಕಾಲಾನುಕ್ರಮದಲ್ಲಿ ದಾಖಲಿಸಲಾಗಿದೆ.

೧. ಗ್ರಾಮ : ಶಿಶುವಿನಹಳ್ಳಿ

ತಾಲೂಕು : ನವಲಗುಂದ

ಸ್ಥಳ : ಹನುಮಂತ ದೇವಾಲಯ

ರಾಜವಂಶ : ರಾಷ್ಟ್ರಕೂಟ

ಅರಸ : ಅಮೋಘವರ್ಷ

ಕಾಲ : ಕ್ರಿ.ಶ. ೮೭೨

ಶಾಸನದಲ್ಲಿ ಸಕನೃಪಕಾಲಾತೀತ ಸಂವತ್ಸರಂಗಳೆಳ್ನೂರ ತೊಂಬತ್ತಮೂರನೆಯ ಖರಮೆಮ್ಬ ವರಿಷಂ ಪ್ರವರ್ತ್ತಿಸೆ ಫಾಲ್ಗುಣಮಾಸ ಶುದ್ಧ ಪಕ್ಷಪ್ರತಿಪದ ತಿಥಿ ಭುಧವಾರ ಹಸ್ತ ನಕ್ಷತ್ರ ಎಂದಿದೆ. ಇದು ಕ್ರಿ.ಶ.೮೭೨ ಫೆಬ್ರವರಿ ೨೯ಕ್ಕೆ ಸರಿಹೊಂದುತ್ತದೆ. ಇದು ಅಮೋಘವರ್ಷ ಆತನ ಪಾದಪದ್ಮೋಪಜೀವಿಯಾದ ಶ್ರೀಮತ್ ದೇವಣಯ್ಯನು ಬೆಳ್ವಲ–೩೦೦ನ್ನು ಆಳುತ್ತಿರುವಾಗ ಪೂರ್ವೋಕ್ತದಿನದಂದು ಸಿಸುಹಾಳದ, ಶೃತಿ, ವ್ಯಾಕರಣ. ಕಾವ್ಯನಾಟಕ, ತರ್ಕ ಮೊದಲಾದವುಗಳಲ್ಲಿ ಪಂಡಿತರಾದ ಬ್ರಾಹ್ಮಣರನ್ನು ಕರೆದು ಪಾದ ಪ್ರಕ್ಷಾಲನವನ್ನು ಮಾಡಿ ತುಪ್ಪದ ಮೇಲಿನ ತೆರಿಗೆಯನ್ನು ಬಿಟ್ಟ ವಿಷಯವಿದೆ. ವಿಷಯ ಪ್ರತಿಪಾದನೆ ಮಾಡುವಾಗ ಈ ಅಗ್ರಹಾರವು ಸಳ ರಾಜ್ಯ(ಚಾಳುಕ್ಯರಾಜ್ಯ) ರಾಜನಿಂದ ಪಡೆದುದೆಂದು ಹೇಳಲಾಗಿದೆ.[೨೪೩]

೨. ಗ್ರಾಮ : ಕಳಸ

ತಾಲೂಕು : ಕುಂದಗೋಳ

ಸ್ಥಳ : ಕೊನೇರಿಬಾಗಲ್‌ರ ಮನೆ–ಹೊರಗೆ

ರಾಜವಂಶ : ರಾಷ್ಟ್ರಕೂಟ

ಅರಸ : ಗೋವಿಂದ ೪

ಕಾಲ : ಕ್ರಿ.ಶ. ೯೨೦

ತೃಟಿತವಾಗಿದ್ದು, ರೇವದಾಸ, ವೀಸೋತ್ತರ ದೀಕ್ಷಿತರಿಗೆ ಬಿಟ್ಟ ದತ್ತಿ ವಿಷಯವಿದೆ.[೨೪೪]

೩. ಗ್ರಾಮ : ಕುರಹಟ್ಟಿ

ತಾಲೂಕು : ನವಲಗುಂದ

ಸ್ಥಳ : ಹನುಮಂತ ದೇವಾಲಯದ ಎದುರು

ರಾಜವಂಶ : ಕಲ್ಯಾಣ ಚಾಲುಕ್ಯ

ಅರಸ : ತೈಲ ೩

ಕಾಲ : ಕ್ರಿ.ಶ. ೯೮೦

ಶಾಸನದಲ್ಲಿ ಕಾಲವನ್ನು....ಖನಿರ್ಧಿ೦೨ಮಾನ ಶಕಾಂಕದ ವಿಕ್ರಮಾಬ್ದ ಪಾಲ್ಗುಣದ..... ಎಂದಷ್ಟೇ ನೀಡಿದ್ದು, ಇದು ಕ್ರಿ.ಶ.೯೮೦ನೆಯ.....ತಿಂಗಳಿಗೆ ಸಮಾನಾಗಿದ್ದು, ದಿನದ ಮಾಹಿತಿ ಅಸ್ಪಷ್ಟವಾಗಿದೆ. ರೇವಂತನೆಂಬ ಮಂತ್ರಿಯ ವಂಶವನ್ನು ಪ್ರಾರಂಭದಲ್ಲಿ ವರ್ಣಿಸಲಾಗಿದೆ. ಈ ವಂಶದಲ್ಲಿ ಕೆಂಚನೆಂಬ ವೀರನಿದ್ದನು. ಈತನು ವೀರ ನರ್ಕ್ಕನಸುತನು ತನಗೆ ಪೀಡಿಸಿದ ನವಿಲನ್ನು ಕೊಂದು ಬೆಳ್ವಲವೆಂಬನಾಡನ್ನು ಪಡೆದನು. ಆ ಸ್ಥಳವು ನಂತರ ನವಿಲ್ಗುಂದ ಪುರವೆಂದು ಹೆಸರಾಯಿತು. ಈತನ. ಹಿರಿಯಮಗ "ಸಿರಿಮುದ್ದನು' ಶಿವದೇವಾಲಯವನ್ನೂ, ಜೈನ ಶಾಲೆಯನ್ನೂ, ಕಟ್ಟಿಸಿದನು. ಈತನ ಮಗ ಪಿರಿಯಚ್ಚನು ಈತನ ಹಿರಿಯಮಗನು ಕಾಳಿಧುರಂಧರ ಕನ್ನರದೇವನಿಂದ ಮೆಚ್ಚುಗೆಯನ್ನು ಪಡೆಯನ್ನು ಪಡೆದಿದ್ದ. ನಂತರ ಬೆಳ್ವಲಾದಿತ್ಯದೇವನ ಹೆಸರು ಉಲ್ಲೇಖಿತವಾಗಿದೆ.[೨೪೫]

೪. ಗ್ರಾಮ : ಯರಗುಪ್ಪಿ

ತಾಲೂಕು : ಕುಂದಗೋಳ

ಸ್ಥಳ : ನಾರಾಯಣ ದೇವಾಲಯದ ಗೋಡೆ

ರಾಜವಂಶ : ಕಲ್ಯಾಣ ಚಾಲುಕ್ಯ

ಅರಸ : ೧ನೇ ಸೋಮೇಶ್ವರ

ಕಾಲ : ಕ್ರಿ.ಶ. ೧೦೬೨

ಈ ಶಾಸನವು ಅಹವಮಲ್ಲಿದೇವನ ಆಳ್ವಿಕೆಯ ಕುರಿತು ತಿಳಿಸುತ್ತದೆ. ಕಾಲ ಶಕ ೯೮೫ನೆಯ ಶೋಭಕ್ರಿತ್ಸರದ ಪೌಷ್ಯಶುದ್ಧ ೫ ಆದಿತ್ಯವಾರ ಉತ್ತರಾಯಣ ಸಂಕ್ರಾಂತಿ ಎಂದು ಉಲ್ಲೇಖವಾಗಿದ್ದು, ಇದು ಕ್ರಿ.ಶ. ೧೦೦೩ ಡಿಸೆಂಬರ್ ೮, ಆದಿತ್ಯವಾರಕ್ಕೆ ಸಮನಾಗುತ್ತದೆ. ಈ ಶಾಸನದಲ್ಲಿ ಕೇಸಿಮಯ್ಯ ಕಟ್ಟಿಸಿದ ಯರಗುಪ್ಪಿಯ ಅರಭಾವಿಗೆ ೨೦೦, ಮಹಾಜನರು ಅರವತ್ತೊಕ್ಕಲು ಪಟ್ಟಗಾರ ಸಮೂಹ ಎರಡು ಮತ್ತರು. ಒಟ್ಟು ೨೭ ಮತ್ತರು ಭೂಮಿದಾನ ನೀಡಿದ ಕುರಿತು ತಿಳಸುತ್ತದೆ. ಮಹಾಮಂಡಳೇಶ್ವರರ ಮಾರರಸನು ಎರಡುನೂರು ವಿಭಾಗದ ರಾಜ್ಯಡಳಿತ ನಡೆಸುತ್ತಿದ್ದನು.[೨೪೬]

೫. ಗ್ರಾಮ : ಮಂಟೂರು

ತಾಲೂಕು : ಹುಬ್ಬಳ್ಳಿ

ಸ್ಥಳ : ವಲ್ಲಭೇಶ್ವರ ದೇವಾಲಯದ–ಹಿಂದೆ

ರಾಜವಂಶ : ಕಲ್ಯಾಣ ಚಾಲುಕ್ಯ

ಅರಸ : ೨ನೇ ಸೋಮೇಶ್ವರ

ಕಾಲ : ಕ್ರಿ.ಶ. ೧೦೭೨

ತೃಟಿತಗೊಂಡಿದ್ದು, ಮಹಾಮಂಡಳೇಶ್ವರ ಲಕ್ಷ್ಮರಸನು ಮಂಟೂರು ರುದ್ರಶಕ್ತಿ ಪಂಡಿತರಿಗೆ ಭೂದಾನ ಮಾಡಿದ ವಿಷಯವಿದೆ.[೨೪೭]

೬. ಗ್ರಾಮ : ಗುಡಗೇರಿ

ತಾಲೂಕು : ಕುಂದಗೋಳ

ಸ್ಥಳ : ಜೈನ ಬಸದಿ

ರಾಜವಂಶ : ಕಲ್ಯಾಣ ಚಾಲುಕ್ಯ

ಅರಸ : ೧ನೇ ಸೊಮೇಶ್ವರ

ಕಾಲ : ಕ್ರಿ.ಶ. ೧೦೭೨

ಸೊಮೇಶ್ವರನ ದಂಡನಾಯಕ ರುದ್ರಭಟ್ಟೋಪಾದ್ಯಯನಿಂದ ನಂದಿಪಂಡಿತ ದೇವನಿಗೆ ಗುಡಿಗೆರೆ ಗ್ರಾಮದ ಪುನರ್ದತ್ತಿ ಮಾಡಿದ ದಾಖಲೆಯಿದೆ.[೨೪೮]

೭. ಗ್ರಾಮ : ಅಣ್ಣಿಗೇರಿ

ತಾಲೂಕು : ನವಲಗುಂದ

ಸ್ಥಳ : ಪುರದ ವೀರಪ್ಪನ ಗುಡಿ-ಎದುರು

ರಾಜವಂಶ : ಕಲ್ಯಾಣ ಚಾಲುಕ್ಯ

ಅರಸ : ೨ನೇ ಸೋಮೇಶ್ವರ

ಕಾಲ : ಕ್ರಿ.ಶ. ೧೦೭೫

ಈ ಶಾಸನದಲ್ಲಿ ಕಾಲದ ಉಲ್ಲೇಖವು ಅಪೂರ್ಣವಾಗಿದ್ದು, ಶ್ರೀಮದ್ಭು......ಕಮಲ್ಲಿದೇವನು ಆಳ್ವಿಕೆ ನಡೆಸುತ್ತಿರಲು ಶಕವರ್ಷ೯೭ನೆಯ ರಾಕ್ಷಸ ಸಂವತ್ಸರದ ಪುಷ್ಯ(ಶುದ್ಧ)ವೆಂದಷ್ಟೇ ನೀಡಿದ್ದು, ಇದು ಕ್ರಿ.ಶ.೧೦೭೫-೭೬ಕ್ಕೆ ಸಮನಾಗುತ್ತದೆ. ಪುಷ್ಯಮಾಸವು ಡಿಸೆಂಬರ ತಿಂಗಳಲ್ಲಿ ಬರುವುದು. ಶ್ರೀಮತ್ಭುವನ...ಕಮಲ್ಲಿ ದೇವರು ರಾಜ್ಯವನ್ನಾಳುತ್ತಿರಲು ಮಾಸವಾಡಿಯ ಬಳಿಯಿರುವ ಅಗ್ರಹಾರವನ್ನು ಸೊಮಯಾಜಿಯರ ಮಗನು ಪೂರ್ವೋಕ್ತದಿನದಂದು ದಾನ ನೀಡಿದಂತೆ ಉಲ್ಲೇಖವಿದೆ. ಈ ಶಾಸನದ ಲೇಖಕ ಸೇಗರ ಬಮ್ಮಯ್ಯನ ಉಲ್ಲೇಖವಿದೆ.[೨೪೯]

೮. ಗ್ರಾಮ : ಅಣ್ಣಿಗೇರಿ

ತಾಲೂಕು : ನವಲಗುಂದ

ಸ್ಥಳ : ಮೈಲಾರಪ್ಪಗುಡಿ-ಎದುರು

ರಾಜವಂಶ : ಕಲ್ಯಾಣ ಚಾಲುಕ್ಯ

ಅರಸ : ವಿಕ್ರಮಾದಿತ್ಯ

ಕಾಲ : ಕ್ರಿ.ಶ. ೧೦೭೬

ಈ ಶಾಸನದಲ್ಲಿ ಶ್ರೀಮಚ್ಚಾಳುಕ್ಯ ವಿಕ್ರಮವರ್ಷ(ಎ)ಪ್ಪತ್ತೆರಡನೆಯ ಈಶ್ವರಸಂವತ್ಸರದ ಶ್ರಾವಣದ ಪುಣ್ಣಮೆ ಆದಿತ್ಯವಾರ ಸಂಕ್ರಮಣಂ ಸೋಮಗ್ರಹ ಕಾಲದ ಮಾಹಿತಿಯಿದ್ದು, ಕ್ರಿ.ಶ. ೧೦೯೭ ಜುಲೈ೨೬, ಆದಿತ್ಯವಾರಕ್ಕೆ ಸರಿಹೊಂದಿದರೂ ಈ ದಿನ ಯಾವುದೇ ಸೂರ್ಯಗ್ರಹಣವು ಸಂಭವಿಸಿರುವುದಿಲ್ಲ. ಚಾಲುಕ್ಯ ಚಕ್ರವರ್ತಿ ತ್ರಿಭುವನಮಲ್ಲದೇವನ ಅಳ್ವಿಕೆಯ ಕಾಲದ ಶಾಸನವಿದ್ದು, ೪೪ ಸಾಲಿನ ಈ ಶಾಸನದಲ್ಲಿ ಹೆಚ್ಚಿನ ಭಾಗವು ಶಿಥಿಲವಾಗಿದೆ. ರಾಜ್ಯಾಧ್ಯಕ್ಷ ಬಲದೇವಯ್ಯ ನಾಯಕರು ಪೂರ್ವೋಕ್ತ ಕಾಲದಲ್ಲಿ ಬ್ರಾಹ್ಮಣರಿಗೆ ಹಲವಾರು ಗದ್ಯಾಣಗಳಷ್ಟು ದಕ್ಷಿಣೆಯಾಗಿ ನೀಡಿದ್ದರು. ಶಾಸನದ ಮಧ್ಯಭಾಗದಲ್ಲಿ ಬಲದೇವಯ್ಯನ ಉಲ್ಲೇಖವಿದೆ. ಆತನು ಮನುವಂಶ ಚುಡಾಮಣಿಯೆಂದು ಹೊಗಳಿವೆ.[೨೫೦]

೯. ಗ್ರಾಮ : ಕಲಘಟಗಿ

ತಾಲೂಕು : ಕಲಘಟಗಿ

ಸ್ಥಳ : ರುಸ್ತುಮ ಸಾಹೇಬನ ಕೆರೆ

ರಾಜವಂಶ : ಕಲ್ಯಾಣ ಚಾಲುಕ್ಯ

ಅರಸ : ೬ನೇ ವಿಕ್ರಮಾದಿತ್ಯ

ಕಾಲ : ಕ್ರಿ.ಶ. ೧೦೮೦

ಶಾಸನದಲ್ಲಿ ಕಾಲದ ಉಲ್ಲೇಖವಿರುವುದಿಲ್ಲ. ಗೋವಲದೇವನ ರಾಜ್ಯಭಾರ ಕ್ರಿ.ಶ. ೧೦೮೦ ಆಗಿರುವ ಸಾದ್ಯತೆ ಇದೆ. ಈ ಶಾಸನವು ತ್ರಿಭುವನಮಲ್ಲಿ ದೇವರಸನ್ನು ಆತನ ಮಹಾಮಂಡೇಶ್ವರನಾದ ಗೋವಲದೇವನನ್ನು ಪ್ರಸ್ತಾಪಿಸಿದೆ. ಆತನು ಉಣಕಲ್ ಮೂವತ್ತು ಮತ್ತು ಸಬ್ಬಿ–೩೦ನ್ನು ಆಳುತ್ತಿರಲು ಆತನಪಾದ ಪದ್ಮೋಪಜೀವಿ ಚಟ್ಟಯ್ಯನು (ಪ್ರತಿಹಾರ) ಕೊಂಕಣದೇಶವನ್ನು ಆಳುತ್ತಿರಲು ಯಾವುದೋ ದಾನವನ್ನು ಬಿಟ್ಟ ಮಾಹಿತಿಯಿದೆ. ಈ ಸಂದರ್ಭದಲ್ಲಿ ಚಟ್ಟಯ್ಯನ ಮಡದಿ ಬಾಣಿಯಬ್ಬೆ ಅವರಿಬ್ಬರ ಪುತ್ರನಾದ ದೇವಳನ ಹೆಸರನ್ನು ಪ್ರಸ್ತಾಪಿಸಿದೆ.[೨೫೧]

೧೦. ಗ್ರಾಮ : ಸಂಶಿ

ತಾಲೂಕು : ಕುಂದಗೋಳ

ಸ್ಥಳ : ಸಿದ್ದೇಶ್ವರ ದೇವಾಲಯದ ಹತ್ತಿರ

ರಾಜವಂಶ : ಕಲ್ಯಾಣ ಚಾಲುಕ್ಯ

ಅರಸ : ೬ನೇ ಸೋಮೇಶ್ವರ

ಕಾಲ : ಕ್ರಿ.ಶ. ೧೧ನೇ ಶ

ಶಾಸನದಲ್ಲಿ ಕಾಲದ ಉಲ್ಲೇಖವು ಅಸ್ಪಷ್ಟವಾಗಿದ್ದು. ಪ್ರಾರಂಭದಲ್ಲಿ ಚಾಳುಕ್ಯವಂಶದ ಉಗಮವನ್ನು ತಿಳಿಸಿದಂತಿದೆ. ಚಾಳುಕ್ಯ ಚಕ್ರವರ್ತಿ ತ್ರಿಭುವನ ಮಲ್ಲಿದೇವನ ಕಾಲಕ್ಕೆ ಸಂಬಂಧಿಸಿದ್ದಾಗಿದ್ದು, ಆತನು ತನ್ನ ರಾಜಧಾನಿ ಕಲ್ಯಾಣಪುರದಲ್ಲಿ ನೆಲೆಸಿರಲು ಅತನ ಪಾದ ಪದ್ಮೋಪಜೀವಿ... ದಂಡನಾಯಕನು ಭೂದಾನವನ್ನು ಕೊಟ್ಟ ವಿಷಯವಿದೆ.[೨೫೨]

೧೧. ಗ್ರಾಮ : ಅಣ್ಣಿಗೇರಿ
ತಾಲೂಕು : ನವಲಗುಂದ
ಸ್ಥಳ : ಹನುಮಂತ ದೇವಾಲಯ
ರಾಜವಂಶ : ಯಾದವರು
ಅರಸ : ಕನ್ನರ
ಕಾಲ : ಕ್ರಿ.ಶ. ೧೧ನೇ ಶ

ತೃಟಿತವಾಗಿರುವ ಈ ಶಾಸನದಲ್ಲಿ "ಸಕ ವರುಷ..... ಭಾದ್ರಪದ ಬಹುಳ' ಎಂದಿದೆ. ವರ್ಷದ ಸಂಖ್ಯೆ ಮತ್ತು ಇತರ ಮಾಹಿತಿಗಳು ಸಪ್ಪವಾಗಿದೆ. ಶ್ರೀಮತ್ ಪ್ರೌಢ ಪ್ರತಾಪ ಚಕ್ರವರ್ತಿ ಕನ್ನರದೇವನ ಕಾಲಕ್ಕೆ ಸಂಬಂಧಿಸಿದ್ದು, ಆತನನ್ನು ಯಾದವ ಕುಲ ಕಮಲ ವಿಕಾಸಭಾಸ್ಕರ' ಗೊರ್ಜ್ಜರರಾಯ, ಭಯಂಕರ ಮಾಳವ ಕೃತಾಳತ' ಎಂದು ಹೊಗಳಿದೆ. 'ಬ್ರಹ್ಮಪುರಿಗೆ' ದಾನವನ್ನು ಬಿಟ್ಟ ದಾಖಲಾತಿ ನೀಡಲಾಗಿದೆ.[೨೫೩]

೧೨. ಗ್ರಾಮ : ಛಬ್ಬಿ
ತಾಲೂಕು : ಹುಬ್ಬಳ್ಳಿ
ಸ್ಥಳ : ನಂದಿಕಂಬ
ರಾಜವಂಶ : ಹಾನಗಲ್ಲ ಕದಂಬರು
ಅರಸ : ಕಾಮದೇವ
ಕಾಲ : ಕ್ರಿ.ಶ. ೧೧ನೇ ಶ

ತೃಟಿತವಾಗಿರುವ ಈ ಶಾಸನವು, ಶಿವಮುದ್ದುದೇವನ ಶಿಷ್ಯ ಹಾಗೂ ಕಾಲಡಿಯ ಧವಳೇಶ್ವರ ದೇವರ ಅರ್ಚಕನಾದ ರಾಜಗುರು ಲಕ್ಷ್ಮೀದೇವನಿಗೆ ಬಿಟ್ಟದಾನವನ್ನು ದಾಖಲಿಸುತ್ತದೆ.[೨೫೪]

೧೩. ಗ್ರಾಮ : ತೀರ್ಥ
ತಾಲೂಕು : ಕುಂದಗೋಳ
ಸ್ಥಳ : ಹನುಮಂತ ದೇವಾಲಯದ ಹೊರಗೆ
ಕಾಲ : ಕ್ರಿ.ಶ. ೧೧ನೇ ಶ

ಸಿಂಗೆನಾಯಕ ವೊಡೆಯನು ಪುರುಷೋತ್ತಮಯ್ಯನಿಗೆ ನೀಡಿದ ದಾನ.[೨೫೫]

೧೪.	ಗ್ರಾಮ	:	ಮೊರಬ

ತಾಲೂಕು	:	ನವಲಗುಂದ

ಸ್ಥಳ	:	ಹನುಮಂತ ದೇವಾಲಯದ

ಕಾಲ	:	ಕ್ರಿ.ಶ. ೧೧೦೩

ತೃಟಿತಗೊಂಡಿರುವ ಈ ಶಾಸನದಲ್ಲಿ ಕಾಲವನ್ನು ಶ್ರೀಮತ್ ಚಾಳುಕ್ಯ ವಿಕ್ರಮಕಾಲದ ೨೮ನೆಯ ಸುಭಾನು ಸಂವತ್ಸರದ ದೀಪಾವಳಿಯಮವಾಸೆ ಆದಿವಾರಮುಂ ವ್ಯತೆಪಾತಮುಂ' ಎಂದು ನೀಡಲಾಗಿದ್ದು, ಇದು ಕ್ರಿ.ಶ.೧೧೦೩ ಅಕ್ಟೋಬರ್ ೪ಕ್ಕೆ ಸಮನಾಗುತ್ತದೆ. (ತೃಟಿತ) ದಂಡನಾಯಕನು ಪೂರ್ವೋಕ್ತದಿನದಂದು ಒಂದು ಮತ್ತರು ಭೂಮಿಯನ್ನು ದಾನ ನೀಡಿದುದರ ಉಲ್ಲೇಖವಿದೆ. ಶಾಸನ ಬರೆದವನು ವರ್ಧಮಾನವೋಜ.[೨೫೬]

೧೫.	ಗ್ರಾಮ	:	ಮುಕ್ಕಲ್ಲು

ತಾಲೂಕು	:	ಕಲಘಟಗಿ

ಸ್ಥಳ	:	ಕಲ್ಮೇಶ್ವರ ದೇವಾಲಯದ ಹತ್ತಿರ

ರಾಜವಂಶ	:	ಕಲ್ಯಾಣ ಚಾಲುಕ್ಯ, ಗೋವಾ ಕದಂಬ

ಅರಸ	:	೬ನೇ ಸೋಮೇಶ್ವರ , ೨ನೇ ಗುವಲದೇವ

ಕಾಲ	:	ಕ್ರಿ.ಶ. ೧೧೦೩

ಶಾಸನವು ಕಾಲವನ್ನು ಶ್ರೀಮಚ್ಚಾಳುಕ್ಯ ವಿಕ್ರಮಕಾಲದ ಸುಭಾನು ಸಂವತ್ಸರದ ಪೌಷ್ಯಶುದ್ಧ ಪಂಚಮಿ ಆದಿತ್ಯವಾರ ಉತ್ತರಾಯಣ ಎಂದಿದ್ದು, ಶಕವರ್ಷವನ್ನು ಸೂಚಿಸದೇ ಇದ್ದುದರಿಂದ ಇಲ್ಲಿ ಉತ್ತರಾಜ ಕಾಲವನ್ನಾಧಾರಸಿ ಕ್ರಿ.ಶ. ೧೧೦೩ ಡಿಸೆಂಬರ್ ೩೦ ಆದಿತ್ಯವಾರಕ್ಕೆ ಸರಿ ಹೊಂದಿಸಬಹುದಾಗಿದೆ. ಕಲ್ಯಾಣ ಚಾಲುಕ್ಯ ತ್ರಿಭುವನಮಲ್ಲನ ವಿಜಯರಾಜ್ಯದಲ್ಲಿ ಮಹಾಮಂಡಳೇಶ್ವರ ತೈಲಪನು ಹಾನಗಲ್ಲುಂ-೫೦೦, ಕೊಂತಕುಳಿ-೩೦ನ್ನು ಆಳುತಿದ್ದನು. ಹನ್ನೆಸೋಗೆಯ ಬರ್ಮಗಾವುಂಡನ ಪುತ್ರ ಮಾಳಗಾವುಂಡ, ಮಾಳಗಾವುಂಡನ ಸತಿ ರಣಕಬ್ಬೆ. ಈ ಮಾಳಗಾವುಂಡ ಮೂಲಸ್ಥಾನ ದೇವರಿಗೆ ಊರಿನ ದಕ್ಷಿಣದ ಹಳ್ಳಿ ಬರ್ಮಯ್ಯನು ಕೆರೆಯ ದಕ್ಷಿಣದಕೊಳ, ಆಕೊಳದ ಪೂರ್ವದ ಹಕ್ಕಲು ಅರವತ್ತನು ಬಿಟ್ಟನು. ಈ ದತ್ತಿಯನ್ನು ಸ್ವೀಕರಿಸಿದವರು ಹಾನಗಲ್ಲ ಬಂಕೇಶ್ವರದ ಏಕಳೇಶ್ವರ ಪಂಡಿತರ ಶಿಷ್ಯ ವಿದೀಶ್ವರರು ಶಾಸನವನ್ನು ಬರೆದವರು-ಪೂರ್ವದಹಳ್ಳಿಯ ಕಲ್ಲೋಜ, ಶಾಸನದಲ್ಲಿ ತ್ರಿಭುವನಮಲ್ಲಿ ಗೂವಲದೇವ ಹಾಗೂ ತೈಲಪನ ಬಿರುದಾವಳಿಗಳು ದಾಖಲಾಗಿವೆ.[೨೫೭]

೧೬.	ಗ್ರಾಮ	:	ಕನಕೂರು

ತಾಲೂಕು	:	ಧಾರವಾಡ

ಸ್ಥಳ : ಕನಕಂಬನ ಗುಡಿ-ಕಂಬ

ರಾಜವಂಶ : ಕಲ್ಯಾಣ ಚಾಲುಕ್ಯ

ಅರಸ : ೬ನೇ ವಿಕ್ರಮಾದಿತ್ಯ

ಕಾಲ : ಕ್ರಿ.ಶ. ೧೧೦೪

ಶಾಸನದಲ್ಲಿ ಕಾಲವನ್ನು 'ಶ್ರೀಮಚ್ಚಾಳುಕ್ಯ ವಿಕ್ರಮ ವರ್ಷದ ೨೭ನೆಯ ಸುಭಾನು ಸಂವತ್ಸರದ ಮಾಘಶುದ್ಧ ೧೨ ಸೋಮವಾರ' ಎಂದಿದೆ. ಇದು ಕ್ರಿ.ಶ. ೧೧೨೫ ಜನೆವರಿ ೧೧ ಸೋಮವಾರಕ್ಕೆ ಸರಿ ಹೊಂದುತ್ತದೆ. ಪ್ರಾರಂಭದಲ್ಲಿ ಶಿವನನ್ನು ಕುರಿತಾಗಿ ಪ್ರಾರ್ಥಿನಾ ಶ್ಲೋಕಗಳಿವೆ. ಚಾಳುಕ್ಯಭರಣ ಶ್ರೀಮತ್ರಿಭುವನ ಮಲ್ಲಿದೇವರು ತಮ್ಮ ರಾಜಧಾನಿ ವಿಳಾಸಪುರದಲ್ಲಿ ಸುಖ ಸಂತೋಷದಿಂದ ನೆಲೆಸಿರಲು, ಕನಕಪುರವೆಂಬ ಅಗ್ರಹಾರದ ಒಡೆಯನಾದ ವಾಮನ ಭಟ್ಟೋಪಾದ್ಯಾಯನಿಗೆ ಮತ್ತು ತ್ರಿಭುವನ ಮಲ್ಲಿದೇವನ ತಮ್ಮನು ಸ್ವಯಂಪಾಕಿ ಪುರುಷೋತ್ತಮ ಭಟ್ಟೋಪಾದ್ಯಾಯರಿಗೆ ೫೦ ಗದ್ಯಾಣ ಹೊನ್ನನ್ನು ಧಾರಾಪೂರ್ವಕ ನೀಡಿದುದರ ಉಲ್ಲೇಖವಿದ್ದು, ನಂತರ ಶ್ರೀಮತ್ ಕೊಂಕಣಾಧಿಪತಿ ಶ್ರೀಮನ್ಮಹಾ ಮಂಡಳೇಶ್ವರ ಜಯಕೇಶಿದೇವರ ವಿವಾಹ ಮಹೊತ್ಸವ ಕಾಲದಲ್ಲಿ ತ್ರಿಭುವನಮಲ್ಲಿ ದೇವರು ಕುಂದೂರು-೫೦೦ರ ಬಲಿಯಲ್ಲಿರುವ ಕನಕಾಪುರವನ್ನು ಶ್ರೀಸೌರಾಷ್ಟ್ರದ ಶ್ರೀ ಸೋಮನಾಥ ದೇವರ ಧೂಪಕ್ಕೆಂದು ಬಿಟ್ಟಂತಹ ವಿಷಯವನ್ನು ತಿಳಿಸುತ್ತಿದೆ. ಈ ಶಾಸನವನ್ನು ಬರೆದವನು ಬೊಪ್ಪಪಂಡಿತನು.[೨೫೮]

೧೭. ಗ್ರಾಮ : ಎಲಿವಾಳ

ತಾಲೂಕು : ಕುಂದಗೋಳ

ಸ್ಥಳ : ಕಲ್ಮೇಶ್ವರ ದೇವಾಲಯದ-ಗೋಡೆ

ರಾಜವಂಶ : ಕಲ್ಯಾಣ ಚಾಲುಕ್ಯ

ಅರಸ : ೬ನೇ ವಿಕ್ರಮಾದಿತ್ಯ

ಕಾಲ : ಕ್ರಿ.ಶ. ೧೧೦೮

ಶಾಸನದಲ್ಲಿ ಕಾಲದ ಉಲ್ಲೇಖವನ್ನು ಶ್ರೀಮಚ್ಚಾಳುಕ್ಯ ವಿಕ್ರಮ ಕಾಲದ ೩೩ನೆಯ ಸರ್ವಧಾರಿ ಸಂವತ್ಸರ ದಾಷಾಢದಮವಾಸೆ ಬುಧವಾರ ಸೂರ್ಯಗ್ರಹಣ' ವಿದ್ದು, ಇದು ಕ್ರಿ.ಶ. ೧೧೦೮ ಜೂನ್ ೧೦ ಬುಧವಾರಕ್ಕೆ ಸರಿಹೊಂದುತ್ತದೆ. ವಿಕ್ರಮಾದಿತ್ಯ ಸಾಮ್ರಾಜ್ಯವನ್ನಾಳುತ್ತಿರುವ ಸಮಯದಲ್ಲಿ ಕೇಶಿಯಣ್ಣನು ನಖಲೇಶ್ವರ ದೇವರಿಗೆ ಮೂರು ಅಂಗಡಿಗಳನ್ನು ನೀಡಿದ್ದಾನೆ. ಈತನನ್ನು ಸಾಸಿರ್ವರು ಪುತ್ರನೆಂದು ಶಾಸನ ಉಲ್ಲೇಖಿಸುತ್ತದೆ.[೨೫೯]

೧೮. ಗ್ರಾಮ : ಹುಣಸಿಕಟ್ಟಿ

ತಾಲೂಕು : ಕಲಘಟಗಿ

ಸ್ಥಳ : ಮಲ್ಲಿಕಾರ್ಜುನ ದೇವಾಲಯ

ರಾಜವಂಶ : ಕಲ್ಯಾಣ ಚಾಲುಕ್ಯ, ಗೋವಾ ಕದಂಬ

ಅರಸ : ೩ನೇ ಸೋಮೇಶ್ವರ , ೨ನೇ ಜಯಕೇಶಿ

ಕಾಲ : ಕ್ರಿ.ಶ. ೧೧೧೩

ಸ್ವಸ್ತಿ ಶ್ರೀಮಚ್ಚಾಳುಕ್ಯ ವಿಕ್ರಮ ವರ್ಷದ ೫೫ನೆಯ ಸಾಧಾರಣ ಸಂವತ್ಸರದ ಎಂದು ಕಾಲವನ್ನು ನೀಡಿದ್ದು, ಸಂಪೂರ್ಣವಾಗಿ ಕಾಲವನ್ನು ನೀಡಿರುವ ಭಾಗ ಅಪೂರ್ಣವಾಗಿದೆ. ಶ್ರೀಮಜ್ಜಯಕೇಶಿ ದೇವರು ಕೊಂಕಣ-೯೦೦, ಪಲಸಿಗೆ ಪನ್ನಿರ್ಚಾಸಿರವನ್ನು ಆಳುತ್ತಿದ್ದುದರ ಬಗ್ಗೆ ಮತ್ತು ಶಾಂತಿಗಾವುಂಡನ ವಿಚಾರವಾಗಿ ಒಂದು ವಾಕ್ಯವಿದೆ. ಬಹುಶಃ ಆತನು ಯಾವುದೋ ದಾನವನ್ನು ಕೊಟ್ಟಿರುವ ವಿಚಾರವಿದ್ದಿರಬಹುದು.[೨೬೦]

೧೯. ಗ್ರಾಮ : ಮಿಶ್ರಿಕೋಟಿ

ತಾಲೂಕು : ಕಲಘಟಗಿ

ಸ್ಥಳ : ರಾಮೇಶ್ವರ ದೇವಾಲಯ

ರಾಜವಂಶ : ಗೋವಾ ಕದಂಬ

ಅರಸ : ಜಯಕೇಶಿ ೨

ಕಾಲ : ಕ್ರಿ.ಶ. ೧೧೩೬

ತೃಟಿತವಾಗಿದ್ದು, ಜಯಕೇಶಿಯ ಪಟ್ಟದರಸಿ ಮೈಳಲದೇವಿ ಕುಂದರನ್ನಾಳುವಾಗ ಬಾರಗಿಯರ ಬಾಚಣ್ಣನಿಗೆ ಊರೊಡೆಯ ಮಲ್ಲರಸ ಮತ್ತು ಸೋವರಸರಿಂದ ದಾನಮಾಡಿದ ಉಲ್ಲೇಖವಿದೆ.[೨೬೧]

೨೦. ಗ್ರಾಮ : ವೆಂಕಟಾಪುರ

ತಾಲೂಕು : ಧಾರವಾಡ

ಸ್ಥಳ : ಕಲ್ಮೇಶ್ವರ ದೇವಾಲಯದ-ಎದುರು

ರಾಜವಂಶ : ಗೋವಾ ಕದಂಬ

ಅರಸ : ೨ನೇ ಜಯಕೇಶಿ

ಕಾಲ : ಕ್ರಿ.ಶ. ೧೧೩೬

ಕಾಲದ ಉಲ್ಲೇಖವನ್ನು ಸಕನೃಪ ಕಾಲಾತೀತ ಸಂವತ್ಸರದ ಶತಂಗಳು ೧೦೫೧...ವೃತ್ತರಾಯಣ ಸಂ... ಎಂದು ದಾಖಲಾಗಿದ್ದು, ಇದು ಕ್ರಿ.ಶ. ೧೧೩೬ ಡಿಸೆಂಬರ್ ೨೪ ಮಂಗಳವಾರಕ್ಕೆ ಸಮಾನಾಗುತ್ತದೆ. ಜಯಕೇಶಿರಾಜನ ರಾಣಿಯಾದ ಮೈಳಲ ಮಹಾದೇವಿಯ ರಾಜ್ಯಭಾರ ಮಾಡುತ್ತಿದ್ದ ಸಂದರ್ಭದಲ್ಲಿ ಪದ್ಮಲದೇವಿಯೆಂಬುವವಳು ದಾನ ನೀಡಿದೆ. ಶಾಸನದ ಕೊನೆಯ ಭಾಗದಲ್ಲಿ ಬೀರಬೋವನು ನಿರ್ಮಿಸಿದ ದೇವಾಲಯದಲ್ಲಿ ಕಾಳತ್ರಯ ದೇವರಾಶಿಯಾಚಾರ್ಯ್ಯರು ಕೆಸರು ಕಲ್ಲನ್ನು ಬಿಟ್ಟು ಶಿವಲಿಂಗವನ್ನು ಪ್ರತಿಷ್ಠೆ ಮಾಡಿದುದರ ಉಲ್ಲೇಖವೂ ಇದೆ.[೨೬೨]

೨೧. ಗ್ರಾಮ : ಸೋಮನಕೊಪ್ಪ

ತಾಲೂಕು : ಕಲಘಟಗಿ

ಸ್ಥಳ : ಹಾಳಾದ ಊರು-ಕೆರೆಯ ಏರಿ

ರಾಜವಂಶ : ಗೋವಾ ಕದಂಬ

ಅರಸ : ಪೆರ್ಮಾಡಿದೇವ

ಕಾಲ : ಕ್ರಿ.ಶ. ೧೧೬೮

ಶ್ರೀಕಾದಂಬ ಶಿವಚಿತ್ತ ವೀರ ಪೆರ್ಮಾಡಿದೇವ ವರ್ಷದ ೩೩ನೆಯ ಸರ್ವಾಧಿಕಾರಿ ಸಂವತ್ಸರದ ಪುಷ್ಯ ಬಹುಳ ಬೃಹಸ್ಪತಿವಾರನುತ್ತರಾಯಣ ಸಂಕ್ರಾಂತಿ ವ್ಯತೀಪಾತ' ಎಂದು ಕಾಲದ ಉಲ್ಲೇಖವಿದ್ದು, ಇದು ಕ್ರಿ.ಶ. ೧೧೬೮ ಡಿಸೆಂಬರ್ ೧೯, ಗುರುವಾರಕ್ಕೆ ಸರಿ ಹೊಂದುತ್ತದೆ. ಶಾಸನದ ಪ್ರಾರಂಭವು ಅಸ್ಪಷ್ಟವಾಗಿದ್ದು, ಮಸಣಗಾವುಂಡನು ಮತ್ತು ಕೇತಗಾವುಂಡನು ಮೂಲಸ್ಥಾನ ದೇವರಿಗೆ ಪೂರ್ವೋಕ್ತ ದಿನದಂದು ಅಮೃತರಾಸಿ ಪಂಡಿತ ದೇವರಿಗೆ ಓರೊಗಣ ಕೆಲವು ಭೂಮಿಯನ್ನು ದಾನ ಬಿಟ್ಟ ವಿಷಯವಿದೆ.[೨೬೩]

೨೨. ಗ್ರಾಮ : ರಾಯಾಪೂರ

ತಾಲೂಕು : ಧಾರವಾಡ

ಸ್ಥಳ : ಬಸಯ್ಯ ಮಲ್ಲಯ್ಯ ಮಠಪತಿಯವರಿಂದ ತಂದ ತಾಮ್ರಪಟ

ರಾಜವಂಶ : ಕಲಚೂರಿ, ಗೋವಾ ಕದಂಬ

ಅರಸ : ಅಹವಮಲ್ಲ, ಪೆರ್ಮಾಡಿದೇವ

ಕಾಲ : ಕ್ರಿ.ಶ. ೧೧೮೨

ಈ ಶಾಸನದಲ್ಲಿ ಕಾಲವನ್ನು 'ಚತುರುತ್ತರ ಶತಾಧಿಕ ಸಹಸ್ರಮೇಶಕೇ ಶುಭಕೃತು ಸಂವತ್ಸರೇ ಶ್ರಾವಣ್ಯಾಂ ಶನ್ಯೆಶ್ಚರವಾರೇ' ಎಂದಿದೆ. ಇದು ಶಾಲಿವಾಹನಶಕ ೧೧೦೪ನೆಯ ವರ್ಷವಾಗುತ್ತದೆ.

ಇದು ಕ್ರಿ.ಶ. ೧೧೮೨ ಜುಲೈ ೧೭ ಶನಿವಾರಕ್ಕೆ ಸಮಾನಾಗುತ್ತದೆ. ಇದು ತಾಮ್ರ ಶಾಸನವಾಗಿದ್ದು, ಸಂಸ್ಕೃತ ಭಾಷೆಯಲ್ಲಿದೆ. ಈ ಶಾಸನವು ಕಳಚೂರಿ ವಂಶದ ವಂಶಾವಳಿಯನ್ನು ವಿಸ್ತ್ರತವಾಗಿ ಪರಿಚಯಿಸುತ್ತಿದೆ. ಕೃಷ್ಣನೆಂಬ ರಾಜನ ಬಗ್ಗೆ ಈತನ ಪುತ್ರ ಜೋಗಮಹಿಪಾಲ, ಈತನ ಮಗ ಪರಮಮಹಿಪತಿ ಈತನ ಸಹೋದರ ಸಹಮಭೂಪತಿಯು, ಇವನ ಮಗ ಅಹವಮಲ್ಲದೇವನು, ಈತನು ಹಿರಿಯ ಸಹೋದರನು ವಿಜಯ ಭೂಪತಿ ಮತ್ತು ಜಯಕೇಶಿಯ ಮಡದಿಯು ವಿಕ್ರಮಾಂಕ ರಾಜನ ಮಗಳಾದ ಮೈಳಾಲದೇವಿಯು, ಇವರಿಬ್ಬರ ಪುತ್ರನಾದ ವಿಜಯಾದಿತ್ಯನು ಆಳ್ವಿಕೆ ನಡೆಸುತ್ತಿರಲು ಹುಪ್ಪವಳ್ಳಿ ಎಂಬ ಅಗ್ರಹಾರದಲ್ಲಿರುವ ವಿವಿಧಗೋತ್ರದ ೧೦೨ ಮಹಾಬ್ರಾಹ್ಮಣರಿಗೆ ಬೆಲುವಲಿ-೨೦೦ರ ಒಳಗಿರುವ ನವಿಲುಗುಂದ-೨೪ರ ಅಂತವರ್ತ್ತಿಯಾದ ಬೆಲ್ಲವುರ ಎಂಬ ಗ್ರಾಮಗಳನ್ನು ಧಾರಾಪೂರ್ವಕವಾಗಿ ನೀಡಿರುವ ಉಲ್ಲೇಖ ಇದೆ. ಅದನ್ನು ತ್ರಿಭುವನ ಚಕ್ರವರ್ತಿಯಾದ ಆದಿತ್ಯದೇವನಿಂದ ರಚಿಸಿದ್ದು, ಪಂಡಿತ ಲಕ್ಷ್ಮೀಧರನು ಕಂಡರಿಸಿದ್ದಾನೆ.[೨೬೪]

೨೩.	ಗ್ರಾಮ	:	ಅಣ್ಣಿಗೇರಿ
	ತಾಲೂಕು	:	ನವಲಗುಂದ
	ಸ್ಥಳ	:	ಬನಶಂಕರಿ ಗುಡಿ-ಎದುರು
	ರಾಜವಂಶ	:	ಕಲ್ಯಾಣ ಚಾಲುಕ್ಯ
	ಅರಸ	:	೪ನೇ ಸೋಮೇಶ್ವರ
	ಕಾಲ	:	ಕ್ರಿ.ಶ. ೧೧೮೬

ಈ ಶಾಸನದಲ್ಲಿ ಎರಡು ಕಾಲಗಳ ಉಲ್ಲೇಖವಿದೆ. ಎರಡು ಕಾಲಗಳಲ್ಲಿ ವರ್ಷ ಮತ್ತು ಸಂವತ್ಸರವಷ್ಟೇ ಇದೆ. ಒಂದು ಕಾಲವು ವೀರಸೋಮೇಶ್ವರದೇವ ವರ್ಷದ ೫ನೆಯ ಪರಾಭವ ಸಂವತ್ಸರ....ವ್ಯತೀಪಾತವೆಂದು ನೀಡಿದ್ದು, ಇದು ಕ್ರಿ.ಶ.೧೧೮೬ಕ್ಕೆ ಸರಿಹೊಂದುತ್ತದೆ. ಆರನೆ ಪ್ಲಂಗ...ವೆಂದು ಎರಡನೆಯ ಉಲ್ಲೇಖವಿದ್ದು, ಇದು ಕ್ರಿ.ಶ.೧೧೮೭ನೇಯ ಇಸವಿಗೆ ಸರಿಹೊಂದುತ್ತದೆ. ಶಾಸನದಲ್ಲಿ ಚಾಳುಕ್ಯ ಚಕ್ರವರ್ತಿಗಳ ವಂಶಾವಳಿಯಿದ್ದು, ತ್ರಿಭುವನಮಲ್ಲಿ ವೀರಸೋಮೇಶ್ವರನು ಆಳುತ್ತಿರಲು ಆತನ ಪಾದಪದ್ಮೋಪಜೀವಿ ಬಮ್ಮಿದೇವರಸನು ಆಳ್ವಿಕೆ ನಡೆಸುತ್ತಿರುವ, ಬೆಳ್ವಲನಾಡಿನ ಪೆರ್ಗಡೆದಂಡ ನಾಯಕ ಶ್ರಿಕೇಸಿರಾಜನು ಮೊದಲ ಹೇಳಿದ ದಿನದಂದು ಸಾವಿರನಾಡಿನ ಕರಣರೂ, ತ್ರಿವರ್ಗಸಮಯರು ಉಪಸ್ಥಿತಿಯಲ್ಲಿ ಅಣ್ಣಿಗೇರಿಯ ೫ ಬ್ರಹ್ಮಪುರಿಯ ಬ್ರಾಹ್ಮಣರುಗಳಿಗೆ ಭೂ ತೆರಿಗೆಯನ್ನು ಮನ್ನಾ ಮಾಡಿರುವ ವಿಷಯವಿದೆ, ಅದೇ ರೀತಿಯಾಗಿ ಇನ್ನೊಂದು ದಿನದಂದು ಪಟ್ಟಣಾಧಿಪತಿ ಹಡವಳ ಬಸಯ್ಯವನರು ಬ್ರಹ್ಮಪುರಿಯ ಬ್ರಾಹ್ಮಣರುಗಳಿಗೆ ಪಾದಪುಕ್ಷಲನವನ್ನು ಮಾಡಿ ಭೂ ದಾನವನ್ನು ನೀಡಿದರು. ಈ ಶಾಸನವನ್ನು ಬರೆದವನು ಕಲಿದೇವ ಭಟ್ಟೋಪಾಧ್ಯಾಯರ ಪುತ್ರ ಮಾರ್ತಂಡದೇವ. ಕಂಡರಿಸಿದವನು ಚಾದೋಜನ ಉಲ್ಲೇಖವಿದೆ.[೨೬೫]

೨೪.	ಗ್ರಾಮ	:	ನೂಲ್ವಿ
	ತಾಲೂಕು	:	ಹುಬ್ಬಳ್ಳಿ
	ಸ್ಥಳ	:	ಕಲ್ಮೇಶ್ವರಗುಡಿ–ಎದುರು
	ರಾಜವಂಶ	:	ಗೋವಾ ಕದಂಬ
	ಅರಸ	:	ಪೆರ್ಮಾಡಿದೇವ
	ಕಾಲ	:	ಕ್ರಿ.ಶ. ೧೧೮೬

ಈ ಶಾಸನ ತೃಟಿತವಗಿದ್ದು, ಕಾಳೇಶ್ವರನಿಗೆ ಬಿಟ್ಟ ದಾನದ ದಾಖಲಾತಿ ಶಾಸನದಲ್ಲಿದೆ.[೨೬೬]

೨೫.	ಗ್ರಾಮ	:	ಬೆಣ್ಣೂರು
	ತಾಲೂಕು	:	ನವಲಗುಂದ
	ಸ್ಥಳ	:	ಹನುಮಂತ ದೇವಾಲಯದ ಎದುರು
	ಕಾಲ	:	ಕ್ರಿ.ಶ. ೧೨ನೇ ಶ

ಈ ಶಾಸನದಲ್ಲಿ ಕಾಲದ ಉಲ್ಲೇಖವಿರುವುದಿಲ್ಲ. ಆದರೆ ಯಾವ ರಾಜನ ಕಾಲಕ್ಕೆ ಸಂಬಂಧಿಸಿದ್ದು ಎಂಬ ವಿಷಯ ನಷ್ಟವಾಗಿದೆ. ಕೊನೆಯಲ್ಲಿ ಬಡಗಿಯಾದ ನಾಗೋಜನ ಮಗಸಿದ್ದರ ಮಗನಿಗೆ ತೆರಿಗೆ ವಿನಾಯಿತಿಸಿದ ವಿಷಯವಿದೆ.[೨೬೭]

೨೬.	ಗ್ರಾಮ	:	ಹಂಚಿನಾಳ
	ತಾಲೂಕು	:	ಕುಂದಗೋಳ
	ಸ್ಥಳ	:	ಕೆರೆಯ ದಂಡೆ
	ಕಾಲ	:	ಕ್ರಿ.ಶ. ೧೨ನೇ ಶ

ತೃಟಿತಗೊಂಡಿದ್ದು, ಲೊಕ್ಕೊಗೊಂಡಿಯ(ಊರೊಡೆಯ) ಪ್ರಮುಖನ ನೇತ್ರತ್ವದಲ್ಲಿ ಶ್ರೀಸಾಸಿರ ಮಹಾಜನರಿಂದ ಎರಡು ಮತ್ತರು ತೋಟ, ಭೂಮಿ, ದಾನ, ಹುತಿಯರ ಶಿವಮಯ್ಯನಾಯಕ ಈ ದಾನವನ್ನು ಪಡೆದುಕೊಂಡು ದಾಖಲೆಯಿದೆ.[೨೬೮]

೨೭.	ಗ್ರಾಮ	:	ಬ್ಯಾಹಟ್ಟಿ
	ತಾಲೂಕು	:	ಹುಬ್ಬಳ್ಳಿ
	ಸ್ಥಳ	:	ಹಿರೇಮಠದ ಹತ್ತಿರ
	ಕಾಲ	:	ಕ್ರಿ.ಶ. ೧೨ನೇ ಶ

ತೃಟಿತ. ಅಸ್ಪಷ್ಟ: ಬ್ರಾಹ್ಮಣರಿಗೆ ನೀಡಿದ ವೃತ್ತಿದಾನದ ಉಲ್ಲೇಖವಿದೆ.[೨೬೯]

೨೮. ಗ್ರಾಮ : ಯರಗುಪ್ಪಿ

ತಾಲೂಕು : ಹುಬ್ಬಳ್ಳಿ

ಸ್ಥಳ : ನಾರಾಯಣಗುಡಿ–ಎಡಗೋಡೆ

ರಾಜವಂಶ : ಕಲ್ಯಾಣ ಚಾಲುಕ್ಯ

ಅರಸ : ೧ನೇ ಸೋಮೇಶ್ವರ

ಕಾಲ : ಕ್ರಿ.ಶ. ೧೨ನೇ ಶ

ತೃಟಿತಗೊಂಡಿದ್ದು, ಶಾಸನದಲ್ಲಿ ಯರಗುಪ್ಪಿಯ ಗಾವುಂಡರು ಹಾಗೂ ೬೦ ಒಕ್ಕಲಾದಿಗಳು ಅರಬಾವಿಗೆ ನೀಡಿದ ಭೂದಾನದ ಉಲ್ಲೇಖವಿದೆ.[೨೦]

೨೯. ಗ್ರಾಮ : ಕುಂದಗೋಳ

ತಾಲೂಕು : ಕುಂದಗೋಳ

ಸ್ಥಳ : ಗಂಗಾಧರೇಶ್ವರ ದೇವಾಲಯದ–ಗೋಡೆ

ರಾಜವಂಶ : ಕಲ್ಯಾಣ ಚಾಲುಕ್ಯ

ಅರಸ : ತ್ರಿಭುವನಮಲ್ಲ

ಕಾಲ : ಕ್ರಿ.ಶ. ೧೨ನೇ ಶ

ಶಾಸನ ಅಪೂರ್ಣವಾಗಿದ್ದು, ಕಾಲದ ಉಲ್ಲೇಖವಿರುವುದಿಲ್ಲ, ಆರನೆಯ ಸಾಲಿನ ನಂತರದ ವಿಷಯಗಳು ನಿಂತು ಹೋಗಿದೆ. ಚಾಲುಕ್ಯ ಚಕ್ರವರ್ತಿ ತ್ರಿಭುವನಮಲ್ಲಿದೇವನಿಗೆ ಸಂಬಂಧಿಸಿದಾಗಿದ್ದು, ಸ್ವಯಂಭೂದೇವರ ಸೂತ್ರಧಾರಿ ಬಮ್ಮೋಜನಪುತ್ರ ಕಾಳೋಜನಿಗೆ ದಾನವನ್ನು ನೀಡಿರುವ ವಿಷಯವನ್ನು ತಿಳಿಸುತ್ತದೆ.[೨೧]

೩೦. ಗ್ರಾಮ : ಸಿಂಗನಹಳ್ಳಿ

ತಾಲೂಕು : ಕಲಘಟಗಿ

ಸ್ಥಳ : ಹಾಳಾದ ಊರು

ಕಾಲ : ಕ್ರಿ.ಶ. ೧೨ನೇ ಶ

ತೃಟಿತ, ತುಣುಕು: ಕೇತಗಾವುಂಡನು ನೀಡಿದ ಭೂದಾನ.[೨೨]

೩೧. ಗ್ರಾಮ : ಸಂಗಮೇಶ್ವರ

ತಾಲೂಕು : ಕಲಘಟಗಿ

ಸ್ಥಳ : ಕೆರೆಯ ಏರಿ–ಒಳಗಡೆ

ಕಾಲ : ಕ್ರಿ.ಶ. ೧೨ನೇ ಶ

ತುಣುಕು, ಅಸ್ಪಷ್ಟ ದತ್ತಿಬಿಟ್ಟ ಭೂಮಿಗಳ ಸೀಮೆ ಹಾಗೂ ಹೆಮ್ಮೇಶ್ವರ ದೇವರ ಉಲ್ಲೇಖ.[೨೭೩]

೩೨. ಗ್ರಾಮ : ಕುಂದಗೋಳ

ತಾಲೂಕು : ಕುಂದಗೋಳ

ಸ್ಥಳ : ಹನುಮಂತ ದೇವಾಲಯದ ಎದುರು–ವೀರಗಲ್ಲು

ರಾಜವಂಶ : ಕಲ್ಯಾಣ ಚಾಲುಕ್ಯ

ಅರಸ : ೨ನೇ ಜಗದೇಕಮಲ್ಲ

ಕಾಲ : ಕ್ರಿ.ಶ. ೧೨ನೇ ಶ

ತ್ರುಟಿತವಾಗಿರುವ ಈ ಶಾಸನದಲ್ಲಿ ಕಾಲದ ಉಲ್ಲೇಖವಿರುವುದಿಲ್ಲ, ಲಿಪಿಯ ದೃಷ್ಟಿಯಿಂದ ೧೨ನೆಯ ಶತಮಾನವನ್ನೆಬಹುದು. ಚಾಳುಕ್ಯ ಚಕ್ರವರ್ತಿ ಜಗದೇಕಮಲ್ಲಿದೇವನ ಆಳ್ವಿಕೆ ಸಂಬಂಧಿಸಿದ್ದು, ಗುಡುವನ ತೋಟವನ್ನು ನೀಡಿರುವಂತೆ ಕಂಡು ಬರುತ್ತದೆ.[೨೭೪]

೩೩. ಗ್ರಾಮ : ಕಲಘಟಗಿ

ತಾಲೂಕು : ಕಲಘಟಗಿ

ಸ್ಥಳ : ಬಸಯ್ಯನವರ ಹೊಲ

ಕಾಲ : ಕ್ರಿ.ಶ. ೧೨ನೇ ಶ

ತ್ರುಟಿತ, ಅಸ್ಪಷ್ಟ: ಅರಸವ್ವೆಗೆ ಕಲ್ಲುಕುಟಿಗೆ ಗ್ರಾಮದಲ್ಲಿ ಗದ್ದೆ ದಾನದ ಉಲ್ಲೇಖವಿದೆ.[೨೭೫]

೩೪. ಗ್ರಾಮ : ಬ್ಯಾಹಟ್ಟಿ

ತಾಲೂಕು : ಹುಬ್ಬಳ್ಳಿ

ಸ್ಥಳ : ಹಿರೇಮಠದ ಹತ್ತಿರ

ರಾಜವಂಶ : ಹೊಯ್ಸಳ

ಅರಸ : ೨ನೇ ವೀರಬಲ್ಲಾಳ

ಕಾಲ : ಕ್ರಿ.ಶ. ೧೨ನೇ ಶ

ತ್ರುಟಿತ, ಭೂದಾನ ನೀಡಿದ ಉಲ್ಲೇಖ.[೨೭೬]

೩೫. ಗ್ರಾಮ : ಬ್ಯಾಹಟ್ಟಿ

ತಾಲೂಕು : ಹುಬ್ಬಳ್ಳಿ

ಸ್ಥಳ : ತೋಟದಪ್ಪನ ಮಠ

ರಾಜವಂಶ : ಯಾದವರು

ಅರಸ : ಸಿಂಘಣ

ಕಾಲ : ಕ್ರಿ.ಶ. ೧೨೩೫

ತೃಟಿತ, ಹೊನ್ನಬೊಮ್ಮಿಸೆಟ್ಟಿ ಹಾಗೂ ಚೌಡಿಸೆಟ್ಟಿಯರು ಬ್ರಾಹ್ಮಣರಿಗೆ ನೀಡಿದ ದಾನ ಉಲ್ಲೇಖವಿದೆ.[೨೭೭]

೩೬. ಗ್ರಾಮ : ನೂಲ್ವಿ

ತಾಲೂಕು : ಹುಬ್ಬಳ್ಳಿ

ಸ್ಥಳ : ಸ.ನಂ. ೨೧೭

ರಾಜವಂಶ : ಗೋವಾ ಕದಂಬ

ಅರಸ : ತ್ರಿಭುವನಮಲ್ಲ

ಕಾಲ : ಕ್ರಿ.ಶ. ೧೨೩೭

ತೃಟಿತಗೊಂಡಿದ್ದು, ಆರುವತ್ತು ಒಕ್ಕಲುಮಕ್ಕಳಿಂದ ದೇವರಾಶಿದೇವನಿಗೆ ಮಾಡಿದ ದಾನ.[೨೭೮]

೩೭. ಗ್ರಾಮ : ಹುಬ್ಬಳ್ಳಿ

ತಾಲೂಕು : ಹುಬ್ಬಳ್ಳಿ

ಸ್ಥಳ : ಜಂಬುಕೇಶ್ವರ ದೇವಾಲಯದ ಎದುರು

ರಾಜವಂಶ : ಯಾದವ

ಅರಸ : ಕನ್ನರದೇವ

ಕಾಲ : ಕ್ರಿ.ಶ. ೧೨೪೮

ಬೀಚಿಸೆಟ್ಟಿಯ ಅಳಿಯ ಮಲ್ಲಿಸೆಟ್ಟಿಯಿಂದ ಬ್ರಾಹ್ಮಣರಿಗೆ ಭೂ ದಾನಮಾಡಿದ ಉಲ್ಲೇಖವಿದೆ.[೨೭೯]

೩೮. ಗ್ರಾಮ : ಹೆಬ್ಬಳ್ಳಿ

ತಾಲೂಕು : ಧಾರವಾಡ

ಸ್ಥಳ : ಶಂಭುಲಿಂಗೇಶ್ವರ ದೇವಾಲಯದ ಮಹಾದ್ವಾರ

ರಾಜವಂಶ : ಯಾದವ

ಅರಸ : ಕನ್ನರದೇವ

ಕಾಲ : ಕ್ರಿ.ಶ. ೧೨೪೮

ಈ ಶಾಸನದಲ್ಲಿ ಕಾಲದ ಉಲ್ಲೇಖವನ್ನು 'ಕನ್ನರದೇವ ವರ್ಷದ ಮೂರನೆಯ ಕೀಲಕ ಸಂವತ್ಸರದ ಪುಷ್ಯಶುದ್ಧ ಭೃಗುವಾರವೆಂದು ಉತ್ತರಾಯಣ ಸಂಕ್ರಾಂತಿ' ಎಂದಿದ್ದು, ಇದು ಕ್ರಿ.ಶ. ೧೨೪೮ ಡಿಸೆಂಬರ್ ೨೫, ಶುಕ್ರವಾರಕ್ಕೆ ಸಮಾವಾಗುತ್ತದೆ. ಪ್ರಾರಂಭದಲ್ಲಿ ಪಂಡರಂಗೆಯ ಶ್ರೀವಿಠಲದೇವರಿಗೆ ಕಲುವರಸಿಂಗ ಗಾವುಂಡನು ಒಂದು ವೃತ್ತಿಯನ್ನು ನೀಡಿರುವ ವಿಷಯ ವಿದೆ. ನಂತರ ಶ್ರೀ ಯಾದವ ನಾರಾಯಣ ಶ್ರೀಕನ್ನರದೇವನು ಸರ್ವಾಧಿಕಾರಿ ಅಳಿಯಮಲ್ಲಿಸೆಟ್ಟಿಯವರು ರಾಜಧಾನಿ ಪಟ್ಟಣ ಅಣ್ಣಿಗೆರೆಯ ಅಮೃತೇಶ್ವರ ದೇವರ ಸನ್ನಿಧಾನದಲ್ಲಿ ಬ್ರಹ್ಮಪುರಿಯ ೨೧ ಬ್ರಾಹ್ಮಣರಿಗೆ ೨೧ ವೃತ್ತಿಗಳನ್ನು ಪುನಃಹ ೧೬ ಬ್ರಾಹ್ಮಣರಿಗೆ ೧೮ವ್ಯಕ್ತಿಗಳನ್ನೂ ಪುನಃಹ ೮ ಬ್ರಾಹ್ಮಣರಿಗೆ ೨ವೃತ್ತಿಗಳನ್ನು ಪುನಃ ೭ ಜನ ಬ್ರಾಹ್ಮಣರಿಗೆ ೩ ವೃತ್ತಿಗಳನ್ನು ಪಾಲುಮಾಡಿ ದಾನ ನೀಡಿದನು.[೨೮೦]

೩೯. ಗ್ರಾಮ : ಛಬ್ಬಿ

ತಾಲೂಕು : ಹುಬ್ಬಳ್ಳಿ

ಸ್ಥಳ : ತಳವಾರ ಹೊಲ

ರಾಜವಂಶ : ಯಾದವರು

ಅರಸ : ಮಹಾದೇವ

ಕಾಲ : ಕ್ರಿ.ಶ. ೧೨೬೮

ತೃಟಿತವಾಗಿದ್ದು, ತಳಪದ ಆಚರಸಾದಿಗಳಿಂದ ಭೂ ದಾನಮಾಡಿದ್ದನ್ನು ಉಲ್ಲೇಖಿಸಲಾಗಿದೆ.[೨೮೧]

೪೦. ಗ್ರಾಮ : ಗರಗ

ತಾಲೂಕು : ಧಾರವಾಡ

ಸ್ಥಳ : ಜೈನರ ಓಣಿ

ರಾಜವಂಶ : ಯಾದವರು

ಅರಸ : ರಾಮಚಂದ್ರ

ಕಾಲ : ಕ್ರಿ.ಶ. ೧೨೮೭

ರಾಮಚಂದ್ರ ದೇವರಾಯ ವಿಜಯ ರಾಜ್ಯೋದಯದ ಹತ್ತೊಂಭತ್ತನೆಯ ಸರ್ವಜಿತು ಸಂವತ್ಸರದ ಭಾದ್ರಪದ ಸುದ ಪೌರ್ಣಮಿ ರವಿವಾರ'ವೆಂದು ದಾಖಲಿಸುತ್ತದೆ. ಇದು ಕ್ರಿ.ಶ.

೧೨೮೭ ಅಗಸ್ಟ ೨೪ ಆದಿತ್ಯವಾರಕ್ಕೆ ಸಮವಾಗುತ್ತದೆ. ಶ್ರೀಮತ್ ಯಾದವ ನಾರಾಯಣ ರಾಮಚಂದ್ರ ದೇವರಾಯನು ಆಳ್ವಿಕೆ ನಡೆಸುತ್ತಿರಲು ಮಹಾಮಂಡಳೇಶ್ವರನು (ತೃಟಿತ)ರಾಣಿಯ ಕೈಯಿಂದ ಬೆಳ್ಳಿಟ್ಟಿಗೆಯ ಶ್ರೀಮತ್ ಮಹಾಪ್ರಭು....ಮತ್ತರು ಭೂಮಿಯನ್ನು ಪಡೆದನೆಂಬದನ್ನು ದಾಖಲಿಸಲಾಗಿದೆ.[೨೮೨]

೪೧. ಗ್ರಾಮ : ನೂಲ್ವಿ

ತಾಲೂಕು : ಹುಬ್ಬಳ್ಳಿ

ಸ್ಥಳ : ಮೂಕಾಶಿ ಬಾಲರಾಯನ ಮನೆ-ಗೋಡೆ

ರಾಜವಂಶ : ಯಾದವ

ಅರಸ : ರಾಮಚಂದ್ರ

ಕಾಲ : ಕ್ರಿ.ಶ. ೧೨೭೪

ತೃಟಿತ, ಹಲಸಿಗೆ-೧೨೦೦೦ ಹಾಗೂ ಭೂದಾನದ ವಿಷಯವಿದೆ.[೨೮೩]

೪೨. ಗ್ರಾಮ : ಬ್ಯಾಹಟ್ಟಿ

ತಾಲೂಕು : ಹುಬ್ಬಳ್ಳಿ

ಸ್ಥಳ : ಹಿರೇಮಠದ ಹತ್ತಿರ

ರಾಜವಂಶ : ಹೊಯ್ಸಳ

ಅರಸ : ೨ನೇ ವೀರಬಲ್ಲಾಳ

ಕಾಲ : ಕ್ರಿ.ಶ. ೧೨ನೇ ಶ

ತೃಟಿತ, ಅಸ್ಪಷ್ಟ: ಬ್ಯಾಹಟ್ಟಿಯ ಇಪ್ಪತ್ತುಜನ ಬ್ರಾಹ್ಮಣ ಪಂಡಿತರಿಗೆ ನೀಡಿದ ಭೂದಾನದ ಉಲ್ಲೇಖವಿದೆ.[೨೮೪]

೪೩. ಗ್ರಾಮ : ಶಿಶುವಿನಹಳ್ಳಿ

ತಾಲೂಕು : ನವಲಗುಂದ

ಸ್ಥಳ : ಹನುಮಂತ ದೇವಾಲಯದ-ವೀರಗಲ್ಲು

ಕಾಲ : ಕ್ರಿ.ಶ. ೧೩ನೇ ಶ

ಶಿಥಿಲವಾಗಿದ್ದು, ಕಾಲದ ಉಲ್ಲೇಖವಿರುವುದಿಲ್ಲ. ಲಿಪಿಯ ದೃಷ್ಟಿಯಿಂದ ೧೩ನೇ ಶತಮಾನದೆಂದು ಹೇಳಬಹುದಾಗಿದೆ. ಸಿಸುವಿನಹಳ್ಳಿಯ ಮಠ, ಎಂಟು ಹಿಟ್ಟು ಮತ್ತು ಐದು ಮಠದವರು ಸೇರಿಕೊಂಡು ಮಲ್ಲಯ್ಯನಾಯಕನಿಗೆ ಎರಡು ಕೈಯ ಭೂಮಿಯನ್ನು ನೀಡಿದ್ದರ ಮಾಹಿತಿಯಿದೆ.[೨೮೫]

೪೪. ಗ್ರಾಮ : ಬ್ಯಾಹಟ್ಟಿ

ತಾಲೂಕು : ಹುಬ್ಬಳ್ಳಿ

ಸ್ಥಳ : ಹಿರೇಮಠದ ಹತ್ತಿರ

ಕಾಲ : ಕ್ರಿ.ಶ. ೧೩ನೇ ಶ

ಸಂಪೂರ್ಣವಾಗಿ ತೃಟಿತಗೊಂಡಿದ್ದು, ಯಾರಿಗೋ ದಾನಬಿಟ್ಟ ಉಲ್ಲೇಖವಿದೆ.[೨೮೬]

೪೫. ಗ್ರಾಮ : ಮಿಶ್ರಿಕೋಟೆ

ತಾಲೂಕು : ಕಲಘಟಗಿ

ಸ್ಥಳ : ಸ.ನಂ. ೨೬೨

ಕಾಲ : ಕ್ರಿ.ಶ. ೧೪ನೇ ಶ

ತೃಟಿತವಾಗಿದ್ದು, ಮದ್ವಳರಸನಿಗೆ ಎಲ್ಲವ್ವ ಒಡೆಯ ಬಿಟ್ಟದತ್ತಿ ಎಂದಿದೆ.[೨೮೭]

೪೬. ಗ್ರಾಮ : ಕೋಳಿವಾಡ

ತಾಲೂಕು : ಹುಬ್ಬಳ್ಳಿ

ಸ್ಥಳ : ಚಾವಡಿ ಹತ್ತಿರ

ಕಾಲ : ಕ್ರಿ.ಶ. ೧೪೫೮ನೇ ಶ

ತೃಟಿತ, ಅಸ್ಪಷ್ಟವಾಗಿದ್ದು, ಮಹಾದೇವರಿಗೆ ನೀಡಿದ ದತ್ತಿ.[೨೮೮]

೪೭. ಗ್ರಾಮ : ಶಿಶುವಿನಹಳ್ಳಿ

ತಾಲೂಕು : ನವಲಗುಂದ

ಸ್ಥಳ : ಸ.ನಂ. ೬೬

ಕಾಲ : ಕ್ರಿ.ಶ. ೧೫ನೇ ಶ

ಇದು ವಾಮನ ಮುಂದ್ರಾಂಕಿತವಾದ ಕಲ್ಲಾಗಿದ್ದು, ಕೃಷ್ಣರಾಯ ಸಮುದ್ರವೆಂಬ ಅಗ್ರಹಾರವನ್ನು ಬ್ರಾಹ್ಮಣರಿಗೆ ನೀಡಿದ್ದು ಉಲ್ಲೇಖವಿದೆ. ಶಾಸನವನ್ನು ಬರೆದವನು ದೇವೋಜನಮಗ ಕರಿಯೋಜನಾಗಿದ್ದಾನೆ.[೨೮೯]

೪೮. ಗ್ರಾಮ : ಗುಮಗೋಳ

ತಾಲೂಕು : ನವಲಗುಂದ

ಸ್ಥಳ : ಸ.ನಂ.೪೧೪

ರಾಜವಂಶ : ವಿಜಯನಗರ

ಅರಸ : ಕೃಷ್ಣದೇವರಾಯ

ಕಾಲ : ಕ್ರಿ.ಶ. ೧೫೨೯

ಶಾಸನದಲ್ಲಿ ಕಾಲವನ್ನು ಶ್ರೀಜಯಾಭ್ಯದಯ ಶಾಲಿವಾಹನ ಶಕ ವರುಶ ೧೪೫೧ನೆಯ ಸರ್ವಧಾರಿ ಸಂವತ್ಸರದ ಮಾಘ ಶು೨ಸ್ಥಿರವಾರದಲು' ಎಂದಿದೆ. ಇದು ಕ್ರಿ.ಶ.೧೫೨೯. ಜನವರಿ ೧೬ಕ್ಕೆ ಸರಿಹೊಂದುತ್ತದೆ. ವಿಜಯನಗರದ ಅರಸ ಕೃಷ್ಣದೇವರಾಯನ ಆಳ್ವಿಕೆಗೆ ಸಂಬಂಧಿಸಿದೆ. ಆತನ ಪಾದ ಪದ್ಮೋಪಜೀವಿಯರಾದ ತೊರಗೆರೆಯ ದುರ್ಗಾಧಿಪತಿ ಮತ್ತು ವೀರನರಸಿಂಗರಾಯ ನಾಯಕರ ಆಳ್ವಿಕೆಯ ಕಾಲದಲ್ಲಿ ತೊರಗೆರೆಯವೆಂದೇ ಮತ್ತು ಗುಂಮಗೊಳಕ್ಕೆ ದಾನ ಬಿಟ್ಟ ಉಲ್ಲೇಖವಿದೆ. ಬಹುಶಃ ತೆರಿಗೆಯನ್ನು ಬಿಟ್ಟ ಉಲ್ಲೇಖವಿದ್ದಿರಬಹುದು.[೨೦]

೪೯. ಗ್ರಾಮ : ಅಣ್ಣಿಗೇರಿ

ತಾಲೂಕು : ನವಲಗುಂದ

ಸ್ಥಳ : ಅಮೃತೇಶ್ವರ ದೇವಾಲಯದ ಮಗ್ಗಲು

ರಾಜವಂಶ : ವಿಜಯ ನಗರ

ಅರಸ : ಅಚ್ಯುತರಾಯ

ಕಾಲ : ಕ್ರಿ.ಶ. ೧೫೩೯

ಶಾಸನದಲ್ಲಿ ಶಕವರ್ಷ೧೪೬೧ನೆಯ ವಿಕಾರಿ ಸಂವತ್ಸರದ ಭಾದ್ರಪದ ಶುದ್ದಶ್ರಾವಣ ೧೨ ಮಂಗಳವಾರವೆಂದಿದೆ. ಇದು ಕ್ರಿ.ಶ.೧೫೩೯ ಅಗಸ್ಟ್೨೬, ಮಂಗಳವಾರಕ್ಕೆ ಸರಿಹೊಂದುತ್ತದೆ. ಶ್ರೀವೀರಪ್ರತಾಪ ಅಚ್ಯುತರಾಯ ಮಾಹಾರಾಯರ ಕಾಲಕ್ಕೆ ಸಂಬಂಧಿಪಟ್ಟಿದೆ. ಭಾಸ್ಕರಕ್ಷೇತ್ರವೆಂದು ಕರೆಯಲ್ಪಡುವಂತಹ, ತುಂಗಭದ್ರಾ ವಿಠಲೇಶ್ವರನ ಸನ್ನಿಧಿಯಲ್ಲಿ ಮಾಧವ ಪ್ರೀತ್ಸರ್ಥವಾಗಿ ಆನಂದ ನಿಧಿಯೆಂಬ ದಾನವನ್ನು ನೀಡಿದ್ದಾನೆ. ಇನ್ನುಳಿದ ಶಾಸನದ ಅರ್ಧಭಾಗವು ಸಂಸ್ಕೃತ ಭಾಷೆಯಲ್ಲಿದೆ.[೨೧]

೫೦. ಗ್ರಾಮ : ದೇವರ ಹುಬ್ಬಳ್ಳಿ

ತಾಲೂಕು : ಧಾರವಾಡ

ಸ್ಥಳ : ಊರ ಅಗಸಿ

ರಾಜವಂಶ : ವಿಜಯ ನಗರ

ಅರಸ : ಸದಾಶಿವರಾಯ

ಕಾಲ : ಕ್ರಿ.ಶ. ೧೫೪೭

ಶಾಸನದಲ್ಲಿ 'ಸಾಲಿವಾಹನ ಶಕವರುಷ ಸಾವಿರದ ನಾನೂರು ಐವತ್ತೊಂಭತ್ತನೆಯ ಪ್ಲವಗ ಸಂವತ್ಸರದ ಅವನಿಜ ಶು ೩ಲೂ' ಎಂದು ಉಲ್ಲೇಖಿಸಿದ್ದು, ಇದು ಕ್ರಿ.ಶ. ೧೫೪೭ ಸಪ್ಟಂಬರ್ ೧೫, ಗುರುವಾರಕ್ಕೆ ಸಮನಾಗುತ್ತದೆ. ವಿಜಯನಗರದ ಅರಸ ಸದಾಶಿವರಾಯ ಕಾರ್ಯಕರ್ತೃರಾದ ರಾಮರಾಜಯ್ಯದೇವ ಅರಸರು ಕೆಲಸಿಗರಾದ ತೊಂವೋಜ, ಕೊಂಡೋಜ, ಭದ್ರೋಜಗಳಿಗೆ ನಾವಿಂದರಿಗೆ ಬರಾಡ ಮತ್ತು ಮನೆ ತೆರಿಗೆಯನ್ನು ಬಿಟ್ಟನು. ಕೊನೆಯಲ್ಲು ಮುಗುದ-೩೦ ಹಳ್ಳಿಗೆ ಕಾಣಾಚಿಗಳು, ಮಾದೋಜ, ಮಧುವೋಜ ಎರಡು ಬಣಗಳ ಉಲ್ಲೇಖವಿದೆ.[೨೨]

೫೧. ಗ್ರಾಮ : ಬೆಳವಟಗಿ

ತಾಲೂಕು : ನವಲಗುಂದ

ಸ್ಥಳ : ರಾಮಲಿಂಗ ದೇವಾಲಯದ ಎದುರು

ರಾಜವಂಶ : ವಿಜಯನಗರ

ಅರಸ : ಸದಾಶಿವರಾಯ

ಕಾಲ : ಕ್ರಿ.ಶ. ೧೫೪೭

ಈ ಶಾಸನದಲ್ಲಿ ಶಕವರ್ಷ ೧೪೬೯ ಎಂದು ಪ್ಲವಂಗ ಸಂವತ್ಸರ ೧೦ ಎಂದಿದೆ. ಇದು ಕ್ರಿ.ಶ.೧೫೪೭ಕ್ಕೆ ಸೇರಿದ ಶಾಸನವಾಗಿದೆ. ವಿಜಯನಗರದರಸ ಸದಾಶಿವರಾಯನಿಗೆ ಕಾಲದ ಶಾಸನವಾಗಿದ್ದು, ರಾಜನು ರಾಜ್ಯವನ್ನಾಳುತ್ತಿದ್ದಾಗ ರಾಮರಾಜ ಮತ್ತು ವೆಂಕಟಾದಿ ಅರಸರುಗಳು ಕೊರಗಲ ಸೀಮೆಯ ನಾವಿಲರಿಗೆ(ಕ್ಷೌರಿಕರಿಗೆ) ಕೆಲವು ತೆರಿಗೆಯ ವಿನಾಯಿತಿಯನ್ನು ನೀಡಿದುದರ ಉಲ್ಲೇಖವು ಇದೆ.[೨೩]

೫೨. ಗ್ರಾಮ : ಅಮ್ಮಿನಭಾವಿ

ತಾಲೂಕು : ಧಾರವಾಡ

ಸ್ಥಳ : ಕ್ಷೌರಿಕರ ಮನೆಯ ಹಿತ್ತಲ

ರಾಜವಂಶ : ವಿಜಯನಗರ

ಅರಸ : ಸದಾಶಿವರಾಯ

ಕಾಲ : ಕ್ರಿ.ಶ. ೧೫೪೭

ಶಾಸನದಲ್ಲಿ ಕಾಲದ ಉಲ್ಲೇಖವನ್ನು 'ಶಾಲಿವಾಹನ ಶಕವಂಶ ೧೪೬೯ ಪ್ಲವಂಗ ಸಂವತ್ಸರಧರ ಆಶಾಢ ಸು ೧೧' ಎಂದಿದ್ದು, ಇದು ಕ್ರಿ.ಶ. ೧೫೪೭ ಜೂನ್ ೨೮, ಮಂಗಳವಾರಕ್ಕೆ ಸರಿ ಹೊಂದುತ್ತದೆ. ಶ್ರೀವೀರಪ್ರತಾಪ ಸದಾಶಿವರಾಯ ವಿಜಯನಗರದಲ್ಲಿ ಆಳುತ್ತಿರಲು, ಮಹಮಂಡಳೇಶ್ವರ ಶ್ರೀರಂಗರಾಜರಾಮ ರಾಜದೇವ ತೋರಗಲು ಸೀಮೆಯ ಅಮ್ಮಿನಬಾವಿಯ ಗ್ರಾಮದ ಗೌಡ

ಸೇನಬೋವರಿಗೆ, ಪ್ರಜೆಗಳಿಗೆ ಸೆಟ್ಟಿಪಟ್ಟಣದ ಸೆಟ್ಟಿಗಳುಗೆ ತಿಳಿಸಿ ತಿಂಮೋಜ, ಕೊಂಡೋಜ, ಭದ್ರೋಜರಿಗೆ ನಾವಿಂದರಿಗೆ(ಕ್ಷೌರಿಕರಿಗೆ) ತೆರಿಗೆಯನ್ನು ಮನ್ನಾ ಮಾಡಿರುವ ಉಲ್ಲೇಖವಿದೆ.[೨೯೩]

೫೩. ಗ್ರಾಮ : ಕಲಘಟಗಿ

ತಾಲೂಕು : ಕಲಘಟಗಿ

ಸ್ಥಳ : ಖಾನಾಪುರದವರ ಹೊಲ

ಕಾಲ : ಕ್ರಿ.ಶ. ೧೫೪೦

ತೃಟಿತವಾಗಿದ್ದು, ಕೇವಲ ಬ್ರಾಹ್ಮಣನೊಬ್ಬನಿಗೆ ನೀಡಿದ ದಾನವನ್ನು ದಾಖಲಿಸುತ್ತದೆ.[೨೯೪]

೫೪. ಗ್ರಾಮ : ಸುಳ್ಳ

ತಾಲೂಕು : ಹುಬ್ಬಳ್ಳಿ

ಸ್ಥಳ : ಹಿರೇಗೌಡರ ಮನೆಯ ಹತ್ತಿರ-ಕಂಬ

ಕಾಲ : ಕ್ರಿ.ಶ. ೧೬ನೇ ಶ

ತೃಟಿತಗೊಂಡಿದ್ದು, ಇದರಲ್ಲಿ ಚಂದ್ರಭಟ್ಟನಿಗೆ ನೀಡಿದ ದಾನದ ವಿಷಯವಿದೆ.[೨೯೫]

೫೫. ಗ್ರಾಮ : ಬೆಟದೂರು

ತಾಲೂಕು : ಕುಂದಗೋಳ

ಸ್ಥಳ : ಚಾವಡಿಯ ಹತ್ತಿರ

ಕಾಲ : ಕ್ರಿ.ಶ. ೧೬ನೇ ಶ

ಲಿಪಿಯ ದೃಷ್ಟಿಯಿಂದ ೧೬ನೆಯ ಶತಮಾನವೆನ್ನಬಹುದು. ಋಕ್‌ಶಾಖೆ ಅತ್ರೆಯಗೋತ್ರ ಮತ್ತು ಅಶ್ವಲಾಯನ ಸೂತ್ರದ ಮತ್ತು ಗಂಗಪಯ್ಯನ ಮಗ ಮಾದಪ್ಪನಿಗೆ ಸೇರಿದ ಮಾನ್ಯದ ಹೊಲವಿದೆಂದು ತಿಳಿಸುತ್ತಿದೆ.[೨೯೬]

೫೬. ಗ್ರಾಮ : ಮಡಕಿಹೊನ್ನಳ್ಳಿ

ತಾಲೂಕು : ಕಲಘಟಗಿ

ಸ್ಥಳ : ಊರ ಸಮೀಪದ ಹತ್ತಿರ

ಕಾಲ : ಕ್ರಿ.ಶ. ೧೬ನೇ ಶ

ತೃಟಿತವಾಗಿದ್ದು, ಹೋಮದ ಹೊನ್ನಹಳ್ಳಿಯ ಹಿರಿಯ ಗೌಡನಿಂದ ಗದ್ದೆದಾನವನ್ನು ದಾಖಲಿಸುತ್ತದೆ.[೨೯೭]

೫೭. ಗ್ರಾಮ : ಭೈರಿದೇವರಕೊಪ್ಪ

ತಾಲೂಕು : ಹುಬ್ಬಳ್ಳಿ

ಸ್ಥಳ : ಸವದತ್ತಿಯವರ ಹೊಲ

ಕಾಲ : ಕ್ರಿ.ಶ. ೧೬ನೇ ಶ

ಅಕ್ಷರಗಳು ತೃಟಿತವಾಗಿವೆ, ತಿಮ್ಮರಸ ಒಡೆಯನು ಹನುಮಂತ ದೇವರಿಗಾಗಿ ಕರುಣಾಕರಯ್ಯನಿಗೆ ನೀಡಿದ ದಾನದ ವಿಷಯವಿದೆ.[೨೯೮]

೫೮. ಗ್ರಾಮ : ಹಳೆಹುಬ್ಬಳ್ಳಿ

ತಾಲೂಕು : ಹುಬ್ಬಳ್ಳಿ

ಸ್ಥಳ : ವೆಂಕಟೇಶ್ವರ ದೇಸಾಯಿಯವರ ಮನೆ-ಕಂಬ

ಹುಬ್ಬಳ್ಳಿಸೀಮೆ ಜಂಗಮರಿಗೆ ನೀಡಿದ ಸುಂಕದಾನ.[೨೯೯]

೫೯. ಗ್ರಾಮ : ಗುಡಗೇರಿ

ತಾಲೂಕು : ಕುಂದಗೋಳ

ಸ್ಥಳ : ಲಕುಮೇಶ್ವರ ಗುಡಿ-ಹಿಂದಿನಗೋಡೆ

ಕಾಲ : ಕ್ರಿ.ಶ. ೧೬-೧೭

ಈ ಶಾಸನವು ಪಾರ್ಥಿರ ಸಂವತ್ಸರ ಕಾರ್ತಿಕಶುದ್ಧ ೭ ಎಂದು ಹೇಳಿದೆ. ಬಮ್ಮನಾಸಖಾನ ಸಾಹೇಬರು ಚಾಂಡರಸನಿಗೆ ಕೊಟ್ಟದಾನ.[೩೦೦]

ಒಟ್ಟಾರೆ ವೈವಿಧ್ಯತೆಯಿಂದ ದಾನಶಾಸನಗಳು, ವೀರಗಲ್ಲು, ಮಹಾಸತಿಗಲ್ಲು, ನಿಷಿಧಿಗಲ್ಲು, ಗೋಸಾಸಗಲ್ಲುಗಳು ಮಹತ್ವದ್ದಾಗಿದೆ. ಈ ಶಾಸನಗಳಲ್ಲಿ ಬಾದಾಮಿ ಚಲುಕ್ಯರ ಎರಡನೇ ಕೀರ್ತಿವರ್ಮನ ಶಾಸನವೇ ಅತೀ ಪ್ರಾಚೀನವಾಗಿದೆ. ಶಾಸನದಲ್ಲಿ ಉಲ್ಲೇಖಿತವಾದ ಸ್ಥಳನಾಮಗಳನ್ನು ಪರಿಚಯಿಸಲಾಗಿದೆ. ತುಲನಾತ್ಮಕವಾಗಿ ನೋಡಿದಾಗ ಈ ಭಾಗದಲ್ಲಿ ಶೈವಧರ್ಮವು ಅತೀ ಪ್ರಾಚೀನವಾಗಿದೆ. ಈ ಶಾಸನಗಳು ಅಂದಿನ ಕಾಲಘಟ್ಟದ ರಾಜಕೀಯ, ಸಾಮಾಜಿಕ, ಧಾರ್ಮಿಕ ಹಾಗೂ ಶೈಕ್ಷಣಿಕ ಸ್ಥಿತಿಗತಿಗಳನ್ನು ತಿಳಿದುಕೊಳ್ಳುವಲ್ಲಿ ಆಕರಗಳಾಗಿ ಇತಿಹಾಸ ರಚಿಸಲು ಮಾಹಿತಿಯನ್ನು ನೀಡಿವೆ.

ಧಾರವಾಡ ಜಿಲ್ಲೆಯ ಇತರೆ ಶಾಸನಗಳು

ಕ್ರ.ಸಂ	ಗ್ರಾ&ತಾ	ದೊರೆತ ಸ್ಥಳ	ರಾಜವಂಶ	ಅರಸ	ಕಾಲ	ಶಾಸನದಲ್ಲಿನ ವಿಷಯ	ಪ್ರಕಟಣೆ
೧	ಶಿರಗುಪ್ಪಿ(ಹು)	ಹುಡೇದಹನುಮಪ್ಪ ದೇ	ಸೇಂದ್ರಕ	ಬಾಣಸತ್ತಿ	೬ನೇ	ಅರಸನ ಮಗನು ಸಿರಗುಪ್ಪಿಯನ್ನಾಳಿದ ಉಲ್ಲೇಖ	ಎಸ್.ಐ.ಐ. ೧೫, ೧೧೭
೨	ಛಬ್ಬಿ(ಹು)	ಹುಡೇದ ಬಾವಿ-ಕಂಬ	ಬಾ.ಚಾಲುಕ್ಯ	ವಿಜಯಾದಿತ್ಯ	೮ನೇ	ತ್ರುಟಿತ, ಅಸ್ಪಷ್ಟ	ಧಾ.ಜಿ.ಶಾ.ಸೂ. ೧೯೪೧-೪೨ ೧೬
೩	ಶಿರಗುಪ್ಪಿ(ಹು)	ಕಿಟ್ಟದ ಹನುಮಪ್ಪ ದೇ	–	–	೮ನೇ	ಪರಶುರಾಮಲೆಂಕ ಮತ್ತು ಇಂದ್ರರ ಉಲ್ಲೇಖ	ಎಸ್.ಐ.ಐ. ೧೫, ೩೧೮
೪	ಅಣ್ಣಿಗೇರಿ(ನ)	ಅಶ್ವದ ಕಟ್ಟೆಯ ಬಳಿ	ಕಲಚೂರಿ	ಸೋವಿದೇವ	೯ನೇ	ಸೋಮಭೂಮಿನಾಥ ಮತ್ತು ಹರಿದೇವ	ಎಸ್.ಐ.ಐ. ೧೫, ೧೩೦
೫	ಅಣ್ಣಿಗೇರಿ(ನ)	ಉಳವಿ ಬಸಪ್ಪ ದೇ	ಕಲಚೂರಿ	ಬಿಜ್ಜಳ	೯ನೇ	ವಾಸುದೇವ ದಂಡನಾಯಕ ಬೆಳ್ವಲ ಪ್ರದೇಶದವನಾಗಿದ್ದ	ಎಸ್.ಐ.ಐ. ೧೫, ೧೧೦
೬	ಸುಳ್ಳ(ಹು)	ತಟ್ಟಿ ಮನೆ ಹತ್ತಿರ	ರಾಷ್ಟ್ರಕೂಟ	ಅಮೋಘವರ್ಷ	೯ನೇ	ಪಾದುಕೆಗಳ ಪೂಜೆ, ಉಣಕಲ್-೩೦ರ ಗಾವುಂಡ	ಧಾ.ಜಿ.ಶಾ.ಸೂ. ೧೯೫೨-೫೩ ೯೯
೭	ಮಾವಳ್ಳಿ(ಕ)	ಊರ ಮಧ್ಯ	–	–	೯ನೇ	ನಾವಿಣ್ಣಮಿಗನ ನಗ ಬಿಣಚಿಯ	ಗುರುವ ಆರ್.ಎನ್, ಅವರ ಪ್ರಬಂಧ
೮	ಹುಬ್ಬಳ್ಳಿ(ಹು)	ಕಛೇರಿಯ ಆವರಣ	ರಾಷ್ಟ್ರಕೂಟ	ಅಮೋಘವರ್ಷ	೧೦ನೇ	ತ್ರುಟಿತ, ಅಸ್ಪಷ್ಟ	ಧಾ.ಜಿ.ಶಾ.ಸೂ. ೧೯೪೧-೪೨ ೩೯
೯	ಇಂಗಳಹಳ್ಳಿ(ಹು)	ಊರ ಚಾವಡಿ	–	–	೧೦ನೇ	ತ್ರುಟಿತ, ಅಸ್ಪಷ್ಟ	ಧಾ.ಜಿ.ಶಾ.ಸೂ. ೧೯೫೨-೫೩ ೮೪
೧೦	ಕೋಳಿವಾಡ(ಹು)	ಕಲ್ಮೇಶ್ವರ ಗುಡಿ	ರಾಷ್ಟ್ರಕೂಟ	ಕೊಟ್ಟಿಗ	೧೦ನೇ	ಕೊಂಗಣಿವರ್ಮ ಮಹಾರಾಜ	ಕೆ.ಇ. ೫
೧೧	ಕುಯಿಬಾಳ(ಕು)	ಚಾವಡಿ ಹತ್ತಿರ	ಯಾದವ	ಸಿಂಘಣ	೧೦ನೇ	ನಾರಾಯಣ ಸಿಂಹಣ ದೇವನ ಮಹಾರಾಜ	ಎಸ್.ಐ.ಐ. ೧೫, ೨೧೪
೧೨	ಕುಂದಗೋಳ(ಕು)	ಗಂಗಾಧರೇಶ್ವರ ದೇ	ಯಾದವ	ಸಿಂಘಣ	೧೦ನೇ	ತೆಲೆಂಗರಾಯ ಭಾಸ್ಕರ, ಕುಂದಗೋಳ	ಎಸ್.ಐ.ಐ. ೨೦, ೨೧೩
೧೩	ನಾವಳ್ಳಿ(ನ)	ಪಾದಗಟ್ಟಿಯಲ್ಲಿ	ಕ ಚಾಲುಕು	೧ ಸೋಮೇಶ್ವರ	೧೦೫೦	ತ್ರೈಲೋಕ್ಯಮಲ್ಲಿದೇವನೆಂಬ ಬಿರಿದು	ಎಫ್.ಟಿ. ಹಳ್ಳಿಕೇರಿ(ಸಂ) ನಮ್ಮೂರ ನಾವಳ್ಳಿ, ೨೦೦೭, ಪು. ೭

೧೪	ಕಂದಲಿ(ಕ)	ಊರ ಮಧ್ಯ	ಗೋ.ಕದಂಬ	ಚಟ್ಟದೇವ ೨	೧೦೫೦	ಮಾರಯ್ಯನಿಂದ ಬಾದುಬ್ಬೆ ವಿಗ್ರಹ ಸ್ಥಾಪನೆ	ಗುರುವ ಆರ್.ಎನ್. ಪ್ರಬಂಧ
೧೫	ಸಂಶಿ(ಕು)	ಸಿದ್ದೇಶ್ವರ ದೇವಾಲಯ	ಕ.ಚಾಲುಕ್ಯ	೨ ಸೋಮೇಶ್ವರ	೧೦೭೪	ವಾರಗಣ, ತೆಲ್ಲಿಗರ ಮೂಲಗರ ಹೆಸರುಗಳಿವೆ	ಎಸ್.ಐ.ಐ. ೨೦, ೪೮
೧೬	ಶಿರಗುಪ್ಪಿ(ಹು)	ಊರ ಚಾವಡಿ	ಕ.ಚಾಲುಕ್ಯ	೬ ವಿಕ್ರಮಾದಿತ್ಯ	೧೦೮೩	ನೂರ ಮಹಾಜನರ ಉಲ್ಲೇಖ	ಎಸ್.ಐ.ಐ. ೧೫, ೯೦
೧೭	ಕಳಸ(ಕು)	ಶಾಲೆಯ ಹೊರಗೆ	ಕ.ಚಾಲುಕ್ಯ	೬ ವಿಕ್ರಮಾದಿತ್ಯ	೧೧ನೇ	ಕಾಡಿಯೂರ ಇನ್ನೂರ್ವರ	ಧಾ..ಜಿ.ಶಾ.ಸೂ. ೧೯೪೫-೪೬ ೩೦೧
೧೮	ತುಪ್ಪದ ಕುರಹಟ್ಟಿ(ನ)	ಹನುಮಂತ ದೇ	–	–	೧೧ನೇ	ಫಲಶೃತಿ ಪದ್ಯಗಳು ಮಾತ್ರ ಇವೆ	–
೧೯	ಬ್ಯಾಲ್ಹಾಳ(ನ)	ಕಲ್ಮೇಶ್ವರ ದೇ	ಕ.ಚಾಲುಕ್ಯ	೬ ವಿಕ್ರಮಾದಿತ್ಯ	೧೧೦೨	ಮಲ್ಲಿಕಾರ್ಜುನ ಪಂಡಿತರ ಹೆಸರು	ಎಸ್.ಐ.ಐ. ೧೧-೨ ೧೮೫
೨೦	ಧಾರವಾಡ(ಧಾ)	ರಾಜಾಲಖಮಗೌಡ ಶಾಲೆ	–	–	೧೧೧೦	ದೇವರಾಸಿ ಪಂಡಿತ&ಸೀಮಾಸಿ ಪಂಡಿತ	ಕೆ.ಐ. ೬. ೧೬
೨೧	ತಂಬೂರು(ಕ)	ಬಸವಣ್ಣ ದೇ.	ಕ.ಚಾಲುಕ್ಯ	–	೧೧೪೦	ಜಯಕೇಶಿ ಸಹೋದರಿ ಪದ್ಮಾವತಿ	ಧಾ.ಜಿ.ಶಾ.ಸೂ. ೧೯೬೪-೬೫ ೪೦೪
೨೨	ಕಲಕುಂಡಿ(ಕ)	ರೈತನೊಬ್ಬನ ಮನೆ	–	೨ ಜಗದೇಕಮಲ್ಲ	೧೧೫೧	ಅರಸ ಮತ್ತು ಸಾಮಂತ ವಂಶಾವಳಿ	ಗುರುವ ಆರ್.ಎನ್. ಅವರ ಪ್ರಬಂಧ
೨೩	ಮೊರಬ(ನ)	ಕಲ್ಮೇಶ್ವರ ದೇ	–	–	೧೨ನೇ	ಮಾರಸಿಂಗಯ್ಯ & ಬೆಳ್ಗಾವುಂಡ	ಎಸ್.ಐ.ಐ. ೧೫ ೫೮೮
೨೪	ಅಣ್ಣಿಗೇರಿ(ನ)	ಅಮೃತೇಶ್ವರ ದೇ	–	–	೧೨ನೇ	ದುಂಡದೇವರ ಪುತ್ರ ನಾಕಿಮಯ್ಯ ಮಲಣನು ವಿಗ್ರಹ ರಚಿಸಿದ	ಎಸ್.ಐ.ಐ. ೧೫ ೩೦೪
೨೫	ಹಿರೇಹರಕುಣಿ(ಕು)	ಹನುಮಂತ ದೇ	–	–	೧೨ನೇ	ತೃಟಿತ, ಅಸ್ಪಷ್ಟ	ಧಾ.ಜಿ.ಶಾ.ಸೂ. ೧೯೪೪-೪೫ ೧೪
೨೬	ಬೋಗಾನೂರು(ನ)	ಕಲ್ಮೇಶ್ವರ ದೇ	–	–	೧೨ನೇ	ನವಿಲುಗುಂದೆಯಲ್ಲಿ ನಂದಿ ಕಂಬ ನೆಡಲಾಗಿದೆ	ಎಸ್.ಐ.ಐ. ೨೦ ೩೩೦
೨೭	ಶಿರೂರು(ಕು)	ಕೆರೆಯ ಏರಿ	–	–	೧೨ನೇ	ತೃಟಿತ, ಅಸ್ಪಷ್ಟ	ಧಾ.ಜಿ.ಶಾ.ಸೂ. ೧೯೪೧-೪೨ ೧೨

೨೮	ಕಮಡೊಳ್ಳಿ(ಕು)	ರಾಮೇಶ್ವರ ದೇ	–	–	೧೨ನೇ	ಸೋಮರಸನ ಮಗ ನಾಕರಸನ ವರ್ಣನೆ	ಎಸ್.ಐ.ಐ. ೨೦ ೩೩೦
೨೯	ಬಂಢಿವಾಡ(ಹು)	ಮಲ್ಲಿಕಾರ್ಜು ದೇ	–	೬ ವಿಕ್ರಮಾದಿತ್ಯ	೧೨ನೇ	ಅಸ್ಪಷ್ಟವಾಗಿದೆ	ಎಸ್.ಐ.ಐ. ೧೧-೨ ೧೮೫
೩೦	ಹಳೆ ಹುಬ್ಬಳ್ಳಿ(ಹು)	ಪ್ಯಾಟಿಯವರ ಹೊಲ	ಕ.ಚಾಲುಕ್ಯ	–	೧೨ನೇ	ಉಪಾಧ್ಯಾಯನೊಬ್ಬನ ಉಲ್ಲೇಖ	ಧಾ.ಜಿ.ಶಾ.ಸೂ.೧೯೪೧-೪೨ ೧೨
೩೧	ಕೊಮರಕೊಪ್ಪ(ನ)	ಶಿವ ದೇವಾಲಯ	–	–	೧೨ನೇ	ಮಾಂಡಳೀಕನ ಹೆಸರು	ಎಸ್.ಐ.ಐ. ೧೧-೨ ೧೧೮
೩೨	ಮಲ್ಲಿಗವಾಡ(ಹು)	ಶಿವ ದೇವಾಲಯ	–	–	೧೨ನೇ	ಸೋಮಗಾವುಂಡನ ಹೆಸರು	ಕ.ಇ. ೫ ೧೦೨
೩೩	ಮಲ್ಲಿಗವಾಡ(ಹು)	ಶಿವ ದೇವಾಲಯ	–	–	೧೨ನೇ	ಗುರುವಿನ ವರ್ಣನೆ	ಧಾ.ಜಿ.ಶಾ.ಸೂ. ೧೯೫೨-೫೩ ೯೨
೩೪	ಮಂಟೂರು(ಹು)	ವಲ್ಲಭೇಶ್ವರ ದೇ	–	–	೧೨ನೇ	ತೃಟಿತ, ಅಸ್ಪಷ್ಟ	ಧಾ.ಜಿ.ಶಾ.ಸೂ. ೧೯೫೨-೫೩ ೯೪
೩೫	ಕೋಳಿವಾಡ(ಹು)	ಕಲ್ಮೇಶ್ವರ ದೇ	–	–	೧೨ನೇ	ಇನ್ನೂರ್ವರು ಧರ್ಮಾ ಕೋಳಿವಾಡ	ಕ.ಇ. ೫ ೯೧
೩೬	ಛಬ್ಬಿ(ಹು)	ಬಸದಿ-ಪಾದಪೀಠ	–	–	೧೨ನೇ	ಮೂರ್ತಿಸ್ಥಾಪನೆ	ಧಾ.ಜಿ.ಶಾ.ಸೂ. ೧೯೪೧-೪೨ ೨೧
೩೭	ಹಾಳಕುಸುಗಲ(ಹು)	ಸಿದ್ದೇಶ್ವರ ದೇ	ಕ.ಚಾಲುಕ್ಯ	–	೧೨ನೇ	ತೃಟಿತ, ಅಸ್ಪಷ್ಟ	ಎಸ್.ಐ.ಐ. ೧೫ ೯೪
೩೮	ಬೆಳಗಲಿ(ಹು)	ಕಲ್ಲಪ್ಪನ ಗುಡಿ	–	–	೧೨ನೇ	ತೃಟಿತವಾಗಿದೆ	ಧಾ.ಜಿ.ಶಾ.ಸೂ. ೧೯೪೧-೪೨ ೧೧
೩೯	ದ್ಯಾವನಕೊಪ್ಪ(ಕ)	ರೈತನೊಬ್ಬನ ಹೊಲ	ಕ.ಚಾಲುಕ್ಯ	೩ ಸೋಮೇಶ್ವರ	೧೨ನೇ	ಹುಲಿಗೋಡ ಶಾಂತಗಾವುಂಡನ ವರ್ಣನೆ	ಗುರುವ ಆರ್.ಎನ್. ಅವರ ಪ್ರಬಂಧ
೪೦	ಸಿದ್ದಾಪುರ(ಧಾ)	ಭಗವತಿ ಪಾದಪೀಠ	–	–	೧೨ನೇ	ಕಮ್ಮಾರಸೆಟ್ಟಿಯು ರಚಿಸಿದನೆಂದಿದೆ	ಎಸ್.ಐ.ಐ. ೧೫ ೫೫೪
೪೧	ಮುಗುದ(ಧಾ)	ಪಾರ್ಶ್ವನಾಥ ಪಾದಪೀಠ	–	–	೧೨ನೇ	ಸೇನಬೋವರೊಬ್ಬ ತೃಟಿತ	–
೪೨	ಮುಗುದ(ಧಾ)	ಕೆರೆಯ ಏರಿ	ಕ.ಚಾಲುಕ್ಯ	೬ ವಿಕ್ರಮಾದಿತ್ಯ	೧೨ನೇ	ಮಲ್ಲಿದೇವನಂದ-ನಾಕರದರ ತನಕ ವಂಶಾವಳಿ ಇದೆ	ಎಸ್.ಐ.ಐ. ೧೫-೨ ೨೧೧
೪೩	ಅಳ್ನಾವರ(ಧಾ)	ಕಲ್ಮೇಶ್ವರ ದೇ	–	–	೧೨ನೇ	ತೃಟಿತ, ಅಸ್ಪಷ್ಟ	ಎಸ್.ಐ.ಐ. ೧೫ ೨೩೪

೪೪	ತಡಕೋಡ(ಧಾ)	ಕಲ್ಮೇಶ್ವರ ದೇ	–	–	೧೨ನೇ	ಶ್ರೀವಾಸುಪೂಜ್ಯ ಮುನಿಯನ್ನು ಚಂದ್ರನಾಥನು ರಕ್ಷಿಸಿದ	ಎಸ್.ಐ.ಐ. ೧೫ ೫೫೨
೪೫	ಅಮ್ಮಿನಭಾವಿ(ಧಾ)	ವರ್ಧಮಾನಪೀಠ	–	–	೧೨ನೇ	ಬಮ್ಮಿಸೆಟ್ಟಿಯು ಬಸದಿಗೆ ಚಂಧ್ರನಾಥಸ್ವಾಮಿಯಗಳ ಪ್ರತಿಮೆ ಮಾಡಿಸಿದ್ದು	ಧಾ.ಜಿ.ಶಾ.ಸೂ. ೧೯೫೨-೫೩ ೭೦
೪೬	ಭಟ್ಟಿಕೊಪ್ಪ(ಕ)	ಊರಮಧ್ಯ	ಗೋ.ಕದಂಬ	೨ ಚಟ್ಟಯ್ಯ	೧೨೫೦	ಅರಸನಿಂದ ಶಂಖದೇವರ ಸ್ಥಾಪನೆ	ಗುರುವ ಆರ್.ಎನ್ ಅವರ ಪ್ರಬಂಧ
೪೭	ಅಮ್ಮಿನಭಾವಿ(ಧಾ)	ಪಂಚಗೃಹ ಮಠದಲ್ಲಿ	–	–	೧೨೮೪	ವೀರಮಡಿವಾಳ ಮಾಚಿದೇವನ ವಿಗ್ರಹ ಪ್ರತಿಷ್ಠಾಪನೆ	ಕರ್ನಾಟಕ ಭಾರತಿ ಸಂ. ೧೨. ಪು. ೬-೮
೪೮	ಬ್ಯಾಲ್ಹಾಳ(ನ)	ಕನುಮಂತ ದೇ	–	–	೧೩ನೇ	ರಾಯರ ವಿಗ್ರಹ ಪ್ರತಿಷ್ಠಾಪನೆ	ಎಸ್.ಐ.ಐ. ೧೫ ೬೩೬
೪೯	ಬಳ್ಳೂರು(ನ)	ಹನುಮಂತ ದೇ	–	–	೧೩ನೇ	ಶ್ರೀಬಾದುಮ್ಮನ ಹೆಸರಿದೆ	ಎಸ್.ಐ.ಐ. ೧೫ ೬೩೫
೫೦	ಕೊಟಬಾಗಿ(ಧಾ)	ಬಸವಣ್ಣ ದೇ	–	–	೧೩ನೇ	ಗುರುಲಿಂಗ ಜಂಗಮದ ವಿಷಯ	ಎಸ್.ಐ.ಐ. ೧೫ ೬೧೯
೫೧	ಅಣ್ಣಿಗೇರಿ(ನ)	ಪವಾಡ ಬಸವಣ್ಣ ದೇ	–	–	೧೩ನೇ	ಚಿಕಲವಾಯತಿಪ್ಪ ಎಂಬ ಹೆಸರಿದೆ	ಎಸ್.ಐ.ಐ. ೧೫ ೬೩೪
೫೨	ಕುಂದಗೋಳ(ಕು)	ವಿ.ಪ್ಪಿ. ಶಾಲೆ	–	–	೧೩ನೇ	ಮೂಲಸಂಘದ ವಿಷಯ	ಎಸ್.ಐ.ಐ. ೨೦ ೩೫೪
೫೩	ಎಲಿವಾಳ(ಕು)	ಕಲ್ಮೇಶ್ವರ ದೇ	–	–	೧೩ನೇ	ಲಕುವೆಯ ನಾಯಕ	ಎಸ್.ಐ.ಐ. ೨೦ ೩೬೩
೫೪	ಹಳೇಹುಬ್ಬಳ್ಳಿ(ಹು)	ವಿಗ್ರಹದ ಕೆಳಗೆ	–	–	೧೩ನೇ	ಯಾಪನೀಯಸಂಘ, ಕಾಡೂರು ಗಣ	ಧಾ.ಜಿ.ಶಾ.ಸೂ. ೧೯೪೧-೪೨ ೩೪
೫೫	ಶಿರಗುಪ್ಪಿ(ಹು)	ಊರ ಚಾವಡಿ	–	–	೧೩ನೇ	ನಾಗರಸನಿಂದ ಬ್ರಹ್ಮಪುರಿ ನಿರ್ಮಾಣ	ಎಸ್.ಐ.ಐ.೧೫ ೩೯೪
೫೬	ಅದರಗುಂಚಿ(ಹ)	ಸ.ನಂ. ೫೭	–	–	೧೩ನೇ	ಉಚ್ಚಂಗಿ ಬಸದಿ ಹೊಲ	ಧಾ.ಜಿ.ಶಾ.ಸೂ. ೧೯೪೧-೪೨ ೩
೫೭	ಕಾಮಧೇನು(ಕ)	ಕಲ್ಮೇಶ್ವರ ದೇ	–	–	೧೩ನೇ	ಮಂಡಳಿಕ ಮಾದಿಗ ಬೆಸ(ಂತಂ)	ಎಸ್.ಐ.ಐ. ೧೫ ೩೨೭

೫೮	ಸಿದ್ದಾಪೂರ(ಧಾ)	ಶಿವಮಂಟಪ	–	–	೧೩ನೇ	..ಯಕನ ನಿವಾಯಕ(?)	ಎಸ್.ಐ.ಐ. ೧೫ ೫೫೫
೫೯	ಬೇಗೂರು(ಕ)	ಕಲ್ಮೇಶ್ವರ ದೇ	–	–	೧೩ನೇ	ಅರಸನ ಪ್ರಶಸ್ತಿ	ಗುರುವ ಆರ್.ಎನ್ ಅವರ ಪ್ರಬಂಧ
೬೦	ಹೆಬ್ಬಳ್ಳಿ(ಧಾ)	ಶಂಭುಲಿಂಗೇಶ್ವರ ದೇ.	–	–	–	ತಲೆಮೊರಬ ಗ್ರಾಮವನ್ನು ತೆರಿಗೆಗಳಿಂದ ಮುಕ್ತಿ	ಧಾ.ಜಿ.ಶಾ.ಸೂ. ೧೯೨೫-೨೬ ೬೬
೬೧	ಅಣ್ಣಿಗೇರಿ(ನ)	ಅಮೃತೇಶ್ವರ ದೇ	ಹೊಯ್ಸಳ	೨ ವೀರಬಲ್ಲಾಳ	೧೩ನೇ	ಮಾಂಡಳಿಕನ, ಭಾಖುತವರ್ಷ ಪ್ರಯೋಗ	ಎಸ್.ಐ.ಐ. ೧೫ ೨೨೪
೬೨	ಬ್ಯಾಹಟ್ಟಿ(ಹು)	ಚಾವಡಿ ಹತ್ತಿರ	ಹೊಯ್ಸಳ	೨ ವೀರಬಲ್ಲಾಳ	೧೩ನೇ	ಸೇನಾಧಿಪತಿ ಬಾಹತ್ತರ ವೋಗಾಧಿಪತಿ	ಧಾ.ಜಿ.ಶಾ.ಸೂ. ೧೯೫೨-೫೩ ೬೨
೬೩	ಕೋಳಿವಾಡ(ಹು)	ಕಲ್ಮೇಶ್ವರ ದೇ	–	–	೧೩ನೇ	ಆಯ್ಯ್ರತಾರಾಭವತಿ	ಕೆ.ಇ. ೫ ೧೦೭
೬೪	ಅಣ್ಣಿಗೇರಿ(ನ)	ಅಮೃತೇಶ್ವರ ದೇ	–	–	೧೩ನೇ	ಜೂಜಾಟವನ್ನು ನಷೇಧಿಸಿದೆ	ಎಸ್.ಐ.ಐ. ೧೫ ೬೫೬
೬೫	ಶಿರೂರು(ಕು)	ಚಾವಡಿ ಹತ್ತಿರ	–	–	೧೪ನೇ	ಹುಲಿಗೆರೆ ಎಂದಷ್ಟಿದೆ	ಎಸ್.ಐ.ಐ. ೨೦ ೩೭೯
೬೬	ಕುಂದಗೋಳ(ಕು)	ಹನುಮಂತ ದೇ	ವಿ.ನಗರ	೨ ದೇವರಾಯ	೧೪೪೪	ಹನುಮಂತ ದೇವರ ಪ್ರತಿಷ್ಠೆ ಮಾಡಿಸಿದ, ಕಲ್ಲೋಜ	ಎಸ್.ಐ.ಐ. ೨೦ ೨೩೪
೬೭	ಅಣ್ಣಿಗೇರಿ(ನ)	ಅಮೃತೇಶ್ವರ ದೇ	–	–	೧೫ನೇ	ಕರಿಯೋಜ ಮಾಡಿದ ನಂದಿ ವಿಗ್ರಹ	ಎಸ್.ಐ.ಐ. ೧೫ ೬೭೮
೬೮	ಭಬ್ಬಿ(ಹು)	ಕಾಳಮ್ಮ ದೇ	–	–	೧೫ನೇ	ತ್ರುಟಿತ, ಅಸ್ಪಷ್ಟ	ಧಾ.ಜಿ.ಶಾ.ಸೂ. ೧೯೪೧-೪೨ ೨೩
೬೯	ಸುಳ್ಳ(ಹು)	ಮುಲ್ಕಿ ಪಾಟೀಲ್ ಮನೆ	–	–	೧೫೧೯	ತಿಪ್ಪನಾಯ ಹಾಗೂ ಅರವಟಿಗೆ	ಧಾ.ಜಿ.ಶಾ.ಸೂ. ೧೯೫೨-೫೩ ೯೯
೭೦	ಶರೇವಾಡ(ಹು)	ಸ.ನಂ. ೧೩೪	–	–	೧೫೩೯	ಕೇವಲ ಮಿತಿಯ ಉಲ್ಲೇಖ	ಧಾ.ಜಿ.ಶಾ.ಸೂ. ೧೯೪೧-೪೨ ೫೬
೭೧	ಗುಡಿಸಾಗರ(ನ)	ಹಡಪದ ಮನೆ ಹತ್ತಿರ	ವಿ.ನಗರ	ಸದಾಶಿವರಾಯ	೧೫೪೭	ತ್ರುಟಿತ, ಅಸ್ಪಷ್ಟ	ಎಸ್.ಐ.ಐ. ೧೫ ೨೫೭
೭೨	ಕಲಘಟಗಿ(ಕ)	ಅಪ್ಪಣ್ಣನವರ ಹೊಲ	–	–	೧೬ನೇ	ಬ್ರಾಹ್ಮಣ ಅಸ್ಪಷ್ಟ	ಧಾ.ಜಿ.ಶಾ.ಸೂ. ೧೯೫೧-೫೨ ೫೨
೭೩	ಕಮಡೊಳ್ಳಿ(ಕು)	ಬಸವಣ್ಣ ದೇ.	–	–	೧೬ನೇ	ಕುಂದಗೋಳ ಗ್ರಾಮದ ಹೆಸರು	ಎಸ್.ಐ.ಐ. ೨೦ ೪೦೫

೭೪	ಕಲಘಟಗಿ(ಕ)	ಜೈನ ಉಪಾದ್ಯಾಯ ಹೊಲ	–	–	೧೬ನೇ	ಕಮಳದೇವಭರ್ರಟನ ವೃತ್ತಿ ಎಂದಿದೆ	ಧಾ.ಜಿ.ಶಾ.ಸೂ. ೧೯೫೧-೫೨ ೫೪
೭೫	ಪರಸಾಪುರ(ಹು)	ಹನುಮಂತ ದೇ	–	–	೧೬ನೇ	ತೃಟಿತ	ಧಾ.ಜಿ.ಶಾ.ಸೂ. ೧೯೪೧-೪೨ ೫೫
೭೬	ಛಬ್ಬಿ(ಹು)	ಶಂಕದವರ ಮನೆ	–	–	೧೬ನೇ	ತೃಟಿತ	ಧಾ.ಜಿ.ಶಾ.ಸೂ. ೧೯೪೧-೪೨ ೨೨
೭೭	ತಿರ್ಲಾಪುರ(ನ)	ಹಳ್ಳಿಯ ದಕ್ಷಿಣದಿಕ್ಕಿನಲ್ಲಿ	–	–	೧೬ನೇ	ಸಿರಕೋಂದ ಮತ್ತೊಂದು ಹೆಸರು ವಿಠಲಾಪುರ	ಎಸ್.ಐ.ಐ. ೧೫ ೭೧೨
೭೮	ಕಮಡೊಳ್ಳಿ(ಕು)	ಸಿದ್ದೇಶ್ವರ ದೇ	–	–	೧೬ನೇ	೩೦ ಸಾಲುಗಳಿದ್ದು, ತೃಟಿತವಾಗಿದೆ	ಎಸ್.ಐ.ಐ. ೨೦ ೨೯
೭೯	ಗಬ್ಬೂರು(ಹು)	ಛಬ್ಬಿಯವರ ಹೊಲ	–	–	೧೬ನೇ	ಶ್ರೀ ತಿಮ್ಮಸಮುದ್ರ	ಧಾ.ಜಿ.ಶಾ.ಸೂ. ೧೯೪೧-೪೨ ೩೦
೮೦	ಕಟ್ನೂರು(ಹು)	ಸ.ನಂ. ೪	–	–	೧೬ನೇ	ಹನುಮಂತ ದೇವರ ಹೊಲ	ಧಾ.ಜಿ.ಶಾ.ಸೂ. ೧೯೪೧-೪೨ ೪೪
೮೧	ಚಿಕ್ಕಹರಕುಣಿ(ಕು)	ಚಾವಡಿ ಹತ್ತಿರ	–	–	೧೬೧೮	ಅತೀ ತೃಟಿತ	ಧಾ.ಜಿ.ಶಾ.ಸೂ. ೧೯೪೧-೪೨ ೪
೮೨	ಕಿರೇಸೂರು(ಹು)	ಕಲ್ಮೇಶ್ವರ ದೇ	–	–	೧೬೨೩	ಸಂಕನಗೌಡನಮಗ ಲಿಂಗನಗೌಡ ಬಾಗಿಲ ನಿರ್ಮಾಣ	ಧಾ.ಜಿ.ಶಾ.ಸೂ. ೧೯೫೧-೫೨ ೮೫
೮೩	ಹುಬ್ಬಳ್ಳಿ(ಹು)	ಕಛೇರಿ ಹತ್ತಿರ	–	–	೧೬೪೪	ತೃಟಿತ, ಅಸ್ಪಷ್ಟ	ಧಾ.ಜಿ.ಶಾ.ಸೂ. ೧೯೪೧-೪೨ ೩೭
೮೪	ಕುಯಿಬಾಳ(ಕು)	ಪ್ರವಾಸಿ ಮಂದಿರ	–	–	೧೭ನೇ	ಶ್ರೀಮತ್ ಹಂಕುರೀ ನಾಯಕ	ಎಸ್.ಐ.ಐ. ೨೦ ೪೧೫
೮೫	ತಿಮ್ಮಸಾಗರ(ಹು)	ಕೋರಿಯವರ ಬಾವಿ	–	–	೧೭೨೯	ಸತ್ಯಪುಣ್ಯತೀರ್ಥ ಗುರುವಿಗೆ ಶರಣು	ಧಾ.ಜಿ.ಶಾ.ಸೂ ೧೯೪೧-೪೨ ೪೭
೮೬	ಹುಬ್ಬಳ್ಳಿ(ಹು)	ಕಛೇರಿ ಆವರಣ	–	–	೧೮ನೇ	ಶಿಷ್ಠರಂಗುಭಟ್ಟನ ಸರ್ವಮಾನ್ಯ ಹೊಲ	ಧಾ.ಜಿ.ಶಾ.ಸೂ ೧೯೪೧-೪೨ ೩೭
೮೭	ತಲೆಮೊರಬ(ನ)	ಪಂಚಮುಖಿ ದೇ	–	–	೧೮೪೧	ದತ್ತಾತ್ರೆಯ ಅವಧೂತ	ಎಸ್.ಐ.ಐ. ೨೦ ೭೩೩
೮೮	ಅಮ್ಮಿನಭಾವಿ(ಧಾ)	ನೇಮಿನಾಥ ಪೀಠ	–	–	೧೮೪೧	ಮೂರ್ತಿ ಪ್ರತಿಷ್ಠಾಪನೆ	ಧಾ.ಜಿ.ಶಾ.ಸೂ ೧೯೨೮-೨೯ ೧೦

೮೯	ಹಳೇಹುಬ್ಬಳ್ಳಿ(ಹು)	ಬಸದಿಯ ಜಾಗಟೆ	–	–	೧೮೬೩	೧೧೦೦ ವರ್ಷದ ಹಿಂದಿನ ಜಾಗಟೆ	ಧಾ.ಜಿ.ಶಾ.ಸೂ ೧೯೪೧-೪೨ ೫೩
೯೦	ಮುರಾರಿಹಳ್ಳಿ(ಹು)	ಸ.ನಂ. ೧೮	–	–	–	ಪೊಡವಿಡಿದೇವನ ಹೊಲ	ಧಾ.ಜಿ.ಶಾ.ಸೂ ೧೯೪೧-೪೨ ೪೮
೯೧	ಮಂಟೂರು(ಹು)	ವಲ್ಲಭೇಶ್ವರ ದೇ.	–	–	–	ನಂದಿಭಟ್ಟಾರಕ & ನಾಗಚಂಧ್ರ	ಧಾ.ಜಿ.ಶಾ.ಸೂ ೧೯೪೧-೪೨ ೪೪
೯೨	ಮಜೀದಪುರ(ಹು)	ಹೊಸಮಠ-ಗೋರಿ	–	–	–	ಮುನಿಯಪ್ಪ ಬಸಪ್ಪ ಶೆಟ್ಟರ ಸಮಾಧಿ	ಧಾ.ಜಿ.ಶಾ.ಸೂ ೧೯೪೧-೪೨ ೪
೯೩	ಬ್ಯಾಹಟ್ಟಿ(ಹು)	ಬೊಪ್ಪಣ್ಣನವರ ಹೊಲ	–	–	–	ಗದ್ದುಗೆ ನಿರ್ಮಾಣ ಬಸಲಿಂಗದೇವರ ಮಠ	ಧಾ.ಜಿ.ಶಾ.ಸೂ ೧೯೫೨-೫೩ ೮೨
೯೪	ಗಬ್ಬೂರು(ಹು)	ಬನಶಂಕರಿ ಗುಡಿ	–	–	–	ತೃಟಿತ, ಅಸ್ಪಷ್ಟ	ಧಾ.ಜಿ.ಶಾ.ಸೂ ೧೯೪೧-೪೨ ೨೯
೯೫	ಉಣಕಲ್(ಹು)	ಚಾವಡಿ ಹತ್ತಿರ	–	–	–	ಮಲ್ಲಿದೇವ	ಧಾ.ಜಿ.ಶಾ.ಸೂ ೧೯೪೧-೪೨ ೫೭
೯೬	ತಂಬೂರು(ಕ)	ಊರ ಮಧ್ಯ	–	–	–	ತೃಟಿತ, ಅಸ್ಪಷ್ಟ	ಗುರುವ ಆರ್.ಎನ್. ಅವರ ಪ್ರಬಂಧ
೯೭	ಇಂಗಳಹಳ್ಳಿ(ಹು)	ಮಾರವ್ವನ ಗುಡಿ	–	–	–	ಅಪೂರ್ಣ, ಚಾವುಂಡ	ಧಾ.ಜಿ.ಶಾ.ಸೂ ೧೯೫೪-೫೫ ೩೬
೯೮	ಎಲಿವಾಳ(ಕು)	ದ್ಯಾಮವ್ವನ ಗುಡಿ	–	–	–	ಅತೀ ತೃಟಿತ, ಅಸ್ಪಷ್ಟ	ಧಾ.ಜಿ.ಶಾ.ಸೂ ೧೯೪೪-೪೫ ೩೭
೯೯	ಕಳಸ(ಕು)	ಶಾಲೆಯ ಹೊರಗೆ	–	–	–	ಅತೀ ತೃಟಿತ, ಅಸ್ಪಷ್ಟ	ಧಾ.ಜಿ.ಶಾ.ಸೂ ೧೯೩೮-೩೮ ೧೦೭
೧೦೦	ಕುಂದಗೋಳ(ಕು)	ಶಂಭುಲಿಂಗ ದೇ	–	–	–	ಶ್ರೀ ರಘುನಾಥ	ಧಾ.ಜಿ.ಶಾ.ಸೂ ೧೯೩೮-೩೯ ೮೫
೧೦೧	ತೀರ್ಥ(ಕು)	ಹನುಮಂತ ದೇ.	–	–	–	ದವಳದೇವನ ಹೊಲ	ಧಾ.ಜಿ.ಶಾ.ಸೂ ೧೯೪೫-೪೬ ೩೨೯
೧೦೨	ಹಾಳಕುಸುಗಲ್(ಹು)	ಹಿರೇಮಠದ ಹತ್ತಿರ	–	–	–	ನವಲಗುಂದ ಹಿರೇಮಠದ ಕೆಳಗೆ	ಎಸ್.ಐ.ಐ. ೧೫ ೭೧೧
೧೦೩	ಶಿರೂರು(ಕು)	ಅಗಸಿಯ ಹತ್ತಿರ	–	–	–	ತೃಟಿತ, ಅಸ್ಪಷ್ಟ	ಎಸ್.ಐ.ಐ. ೧೫ ೭೫೩
೧೦೪	ಮೊರಬ(ನ)	ಬಸವಣ್ಣ ದೇ	–	–	–	ಅರಳೀಮರದ ಮಾನ್ಯವೆಂದಷ್ಟೇ	ಎಸ್.ಐ.ಐ. ೧೫ ೭೩೪
೧೦೫	ಕುರಹಟ್ಟಿ(ನ)	ಹನುಮಂತ ದೇ	–	–	–	ಹಣದೇವವರಿಷ ಎಂದಿದೆ	ಎಸ್.ಐ.ಐ. ೧೫ ೧೮೬


<u>ಸಂಕೇತ ಸೂಚಿ</u>

ಹು=ಹುಬ್ಬಳ್ಳಿ ನ=ನವಲಗುಂದ ಧಾ=ಧಾರವಾಡ ಕ=ಕಲಘಟಗಿ ಕು=ಕುಂದಗೋಳ ಕ್ರಮ=ಕ್ರಮಸಂಖ್ಯೆ

ಗ್ರಾ&ತಾ=ಗ್ರಾಮ ಮತ್ತು ತಾಲೂಕು ದೇ=ದೇವಾಲಯ ಕ=ಕಲ್ಯಾಣ ಚಾಲುಕ್ಯ ಗೋ=ಗೋವಾ ಕದಂಬ ವಿ=ವಿಜಯನಗರ

ಧಾ.ಜಿ.ಶಾ.ಸೂ=ಕಲಬುರ್ಗಿ ಎಂ.ಎಂ.(ಸಂ) ಧಾರವಾಡ ಜಿಲ್ಲಾ ಶಾಸನ ಸೂಚಿ.

ಶಾಸನಗಳ ವೈವಿಧ್ಯತೆ



ದಾನಶಾಸನಗಳು	:	೧೩೧
ವೀರಗಲ್ಲು	:	೪೨
ಮಾಸ್ತಿಗಲ್ಲು	:	೦೨
ನಿಷದಿಗಲ್ಲು	:	೦೫
ಗೋಸಾಸಗಲ್ಲು	:	೧೩
ಕೆರೆಗಳು	:	೧೦
ಇತರೆ	:	೧೧೬

ಅಡಿ ಟಿಪ್ಪಣಿಗಳು

೧. ಹಿರೇಮಠ ಎಸ್.ಎಂ., ಶಾಸನ ಪರಿಭಾಷೆ, ೨೦೦೫, ಪು. ೧

೨. ಮಂಜುನಾಥ ಎಂ.ಜಿ, ಕೆ. ದೇವರಾಜಸ್ವಾಮಿ., ಕನ್ನಡ ಲಿಪಿ ವಿಕಾಸ, ೨೦೦೪, ಪು. ೧

೩. ಕಲಬುರ್ಗಿ ಎಂ.ಎಂ., ಸಮಾಧಿ-ಬಲಿದಾನ-ವೀರಮರಣ ಸ್ಮಾರಕಗಳು, ೧೯೮೦, ಪು. ೩-೪

೪. ಅದೇ., ಪು. ೪-೬

೫. ಎಸ್.ಐ.ಐ., ೧೮, ಶಾ.ಸಂ. ೩೨೫

೬. ಕಲಬುರ್ಗಿ ಎಂ.ಎಂ.(ಸಂ), ಧಾರವಾಡ ಜಿಲ್ಲೆಯ ಶಾಸನ ಸೂಚಿ, ೧೯೭೫, ಪು. ೩ ಶಾ.ಸಂ. ೨೧೯

೭. ಎಸ್.ಐ.ಐ., ೨೦, ಶಾ.ಸಂ. ೨೯

೮. ಎಸ್.ಐ.ಐ., ೨೦, ಶಾ.ಸಂ. ೩೮

೯. ಗುರುವ ಆರ್.ಎನ್., ದ ಕದಂಬಾಸ್ ಆಫ್ ಗೋವಾ ಇನ್ಸ್ಕ್ರಿಪ್‌ಷನ್ಸ್, (ಅಪ್ರಕಟಿತ ಪಿಎಚ್.ಡಿ ಪ್ರಬಂಧ) ೧೯೬೯, ಪು. ೫೨೩-೫೨೫

೧೦. ಅದೇ., ಪು. ೫೨೬-೫೨೭

೧೧. ಅದೇ., ಪು. ೫೨೭-೫೨೮

೧೨. ಅದೇ., ಪು. ೫೨೬-೫೨೭

೧೩. ಎಸ್.ಐ.ಐ., ೨೦-ii, ಶಾ.ಸಂ. ೧೨೧

೧೪. ಕಲಬುರ್ಗಿ ಎಂ.ಎಂ.(ಸಂ), ಪೂರ್ವೋಕ್ತ, ಪು. ೫ ಶಾ.ಸಂ. ೫೧

೧೫. ಗುರುವ ಆರ್.ಎನ್., ಪೂರ್ವೋಕ್ತ, ಪು. ೫೨೩-೫೨೫

೧೬. ಅದೇ., ಪು. ೫೪೦-೫೪೨

೧೭. ಅದೇ., ಪು. ೫೪೬

೧೮. ಎಸ್.ಐ.ಐ., ೨೦-ii, ಶಾ.ಸಂ. ೧೭೮

೧೯. ಎಸ್.ಐ.ಐ., ೨೦-ii, ಶಾ.ಸಂ. ೧೩೮

೨೦. ಎಸ್.ಐ.ಐ., ೨೦, ಶಾ.ಸಂ. ೨೮೯

೨೧. ಕಲಬುರ್ಗಿ ಎಂ.ಎಂ.(ಸಂ), ಪೂರ್ವೋಕ್ತ, ಪು. ೪ ಶಾ.ಸಂ. ೪೨

೨೨. ಎಫ್.ಟಿ. ಹಳ್ಳಿಕೇರಿ(ಸಂ), 'ನಮ್ಮೂರ ನಾವಳ್ಳಿ', ೨೦೦೭, ಪು. ೫-೭.

೨೩. ಕಲಬುರ್ಗಿ ಎಂ.ಎಂ.(ಸಂ), ಪೂರ್ವೋಕ್ತ, ಪು. ೩೪ ಶಾ.ಸಂ. ೨೯

೨೪. ಅದೇ., ಪು. ೨ ಶಾ.ಸಂ. ೧೮

೨೫. ಅದೇ., ಪು. ೪ ಶಾ.ಸಂ. ೧೭

೨೬. ಎಸ್.ಐ.ಐ., ೧೧-ii, ಶಾ.ಸಂ. ೧೬೦

೨೭. ಎಸ್.ಐ.ಐ., ೧೧-ii, ಶಾ.ಸಂ. ೧೯೧
೨೮. ಕೆ.ಐ., ೫, ಶಾ.ಸಂ. ೧೬
೨೯. ಎಸ್.ಐ.ಐ., ೧೧-ii, ಶಾ.ಸಂ. ೧೯೪
೩೦. ಗುರುವ ಆರ್.ಎನ್., ಪೂರ್ವೋಕ್ತ., ಪು. ೫೫೭-೫೬೦
೩೧. ಕಲಬುರ್ಗಿ ಎಂ.ಎಂ.(ಸಂ), ಪೂರ್ವೋಕ್ತ, ಪು. ೨೪ ಶಾ.ಸಂ. ೪೦೨
೩೨. ಎಸ್.ಐ.ಐ., ೧೧-ii, ಶಾ.ಸಂ. ೧೭೧
೩೩. ಎಸ್.ಐ.ಐ., ೨೦, ಶಾ.ಸಂ. ೮೨
೩೪. ಇ.ಐ., ೧೩, ಶಾ.ಸಂ. ೨೮
೩೫. ಎಸ್.ಐ.ಐ., ೧೫, ಶಾ.ಸಂ. ೭
೩೬. ಕಲಬುರ್ಗಿ ಎಂ.ಎಂ.(ಸಂ), ಪೂರ್ವೋಕ್ತ, ಪು. ೨೫ ಶಾ.ಸಂ. ೪೦೩
೩೭. ಇ.ಐ., ೧೭, ಶಾ.ಸಂ. ೯
೩೮. ಎಸ್.ಐ.ಐ., ೧೫, ಶಾ.ಸಂ. ೯
೩೯. ಇ.ಐ., ೧೭, ಶಾ.ಸಂ. ೯EI XVII
೪೦. ಗುರುವ ಆರ್.ಎನ್., ಪೂರ್ವೋಕ್ತ, ಪು. ೫೭೭
೪೧. ಕಲಬುರ್ಗಿ ಎಂ.ಎಂ.(ಸಂ), ಪೂರ್ವೋಕ್ತ, ಪು. ೨೦ ಶಾ.ಸಂ. ೩
೪೨. ಎಸ್.ಐ.ಐ., ೨೦, ಶಾ.ಸಂ. ೧೬
೪೩. ಗುರುವ ಆರ್.ಎನ್., ಪೂರ್ವೋಕ್ತ, ಪು. ೬೦೬-೬೦೯
೪೪. ಎಸ್.ಐ.ಐ., ೨೦, ಶಾ.ಸಂ. ೧೬
೪೫. ಎಸ್.ಐ.ಐ., ೨೦, ಶಾ.ಸಂ. ೧೪
೪೬. ಕಲಬುರ್ಗಿ ಎಂ.ಎಂ.(ಸಂ), ಪೂರ್ವೋಕ್ತ, ಪು. ೨೬ ಶಾ.ಸಂ. ೪೫೩
೪೭. ಗುರುವ ಆರ್.ಎನ್., ಪೂರ್ವೋಕ್ತ, ಪು. ೫೯೮-೬೦೧
೪೮. ಎಸ್.ಐ.ಐ., ೧೫, ಶಾ.ಸಂ. ೨೦
೪೯. ಎಸ್.ಐ.ಐ., ೧೫, ಶಾ.ಸಂ. ೧೧೦
೫೦. ಎಸ್.ಐ.ಐ., ೧೫, ಶಾ.ಸಂ. ೨೨
೫೧. ಗುರುವ ಆರ್.ಎನ್., ಪೂರ್ವೋಕ್ತ, ಪು. ೬೦೬-೬೦೯
೫೨. ಎಸ್.ಐ.ಐ., ೨೦, ಶಾ.ಸಂ. ೧೧೨
೫೩. ಕಲಬುರ್ಗಿ ಎಂ.ಎಂ.(ಸಂ), ಪೂರ್ವೋಕ್ತ, ಪು. ೨೫ ಶಾ.ಸಂ. ೪೦೫
೫೪. ಎಸ್.ಐ.ಐ., ೧೫, ಶಾ.ಸಂ. ೩೧
೫೫. ಗುರುವ ಆರ್.ಎನ್., ಪೂರ್ವೋಕ್ತ, ಪು. ೬೨೧-೬೨೬

೫೬. ಕಲಬುರ್ಗಿ ಎಂ.ಎಂ.(ಸಂ), ಪೂರ್ವೋಕ್ತ, ಪು. ೨೧ ಶಾ.ಸಂ. ೨೧೨

೫೭. ಅದೇ., ಪು. ೨೫ ಶಾ.ಸಂ. ೪೦೩

೫೮. ಎಸ್.ಐ.ಐ., ೧೫, ಶಾ.ಸಂ. ೯೬

೫೯. ಎಸ್.ಐ.ಐ., ೧೫, ಶಾ.ಸಂ. ೨೨೯

೬೦. ಕಲಬುರ್ಗಿ ಎಂ.ಎಂ.(ಸಂ), ಪೂರ್ವೋಕ್ತ, ಪು. ೨೫ ಶಾ.ಸಂ. ೫೬

೬೧. ಅದೇ., ಪು. ೨೫ ಶಾ.ಸಂ. ೯೩

೬೨. ಎಸ್.ಐ.ಐ., ೧೫, ಶಾ.ಸಂ. ೧೦೦

೬೩. ಗುರುವ ಆರ್.ಎನ್., ಪೂರ್ವೋಕ್ತ, ಪು. ೬೦೬–೬೦೯

೬೪. ಎಸ್.ಐ.ಐ., ೧೫, ಶಾ.ಸಂ. ೨೨೮

೬೫. ಎಸ್.ಐ.ಐ., ೧೫, ಶಾ.ಸಂ. ೨೩೦

೬೬. ಗುರುವ ಆರ್.ಎನ್., ಪೂರ್ವೋಕ್ತ, ಪು. ೫೨೩–೫೨೫

೬೭. ಅದೇ., ಪು. ೬೫೪–೬೫೮

೬೮. ಕಲಬುರ್ಗಿ ಎಂ.ಎಂ.(ಸಂ), ಪೂರ್ವೋಕ್ತ, ಪು. ೫ ಶಾ.ಸಂ. ೭೩

೬೯ ಗುರುವ ಆರ್.ಎನ್., ಪೂರ್ವೋಕ್ತ, ಪು. ೬೬೧–೬೬೮

೭೦. ಅದೇ., ಪು. ೬೭೩–೬೭೯

೭೧. ಅದೇ., ಪು. ೫೭೯–೫೮೭

೭೨. ಎಸ್.ಐ.ಐ., ೨೦, ಶಾ.ಸಂ. ೨೫೧

೭೩. ಎಸ್.ಐ.ಐ., ೧೫, ಶಾ.ಸಂ. ೧೨೨

೭೪. ಗುರುವ ಆರ್.ಎನ್., ಪೂರ್ವೋಕ್ತ, ಪು. ೫೮೩–೫೮೫

೭೫. ಎಸ್.ಐ.ಐ., ೧೫, ಶಾ.ಸಂ. ೫೯

೭೬. ಎಸ್.ಐ.ಐ., ೧೫, ಶಾ.ಸಂ. ೧೪೯

೭೭. ಎಸ್.ಐ.ಐ., ೧೫, ಶಾ.ಸಂ. ೨೨೪

೭೮. ಕೆ.ಐ., ೫, ಶಾ.ಸಂ. ೨೩

೭೯. ಗುರುವ ಆರ್.ಎನ್., ಪೂರ್ವೋಕ್ತ, ಪು. ೬೭೬–೬೮೦

೮೦. ಅದೇ., ಪು. ೫೩೩–೫೩೯

೮೧. ಕಲಬುರ್ಗಿ ಎಂ.ಎಂ.(ಸಂ), ಪೂರ್ವೋಕ್ತ, ಪು. ೫ ಶಾ.ಸಂ. ೫೩

೮೨. ಎಸ್.ಐ.ಐ., ೧೫, ಶಾ.ಸಂ. ೫೮೯

೮೩. ಎಸ್.ಐ.ಐ., ೧೫, ಶಾ.ಸಂ. ೯೫

೮೪. ಕಲಬುರ್ಗಿ ಎಂ.ಎಂ.(ಸಂ), ಪೂರ್ವೋಕ್ತ, ಪು. ೭ ಶಾ.ಸಂ. ೩೩

೮೫. ಎಸ್.ಐ.ಐ., ೨೦, ಶಾ.ಸಂ. ೧೦೩

೮೬. ಎಸ್.ಐ.ಐ., ೨೦, ಶಾ.ಸಂ. ೩೧೪

೮೭. ಗುರುವ ಆರ್.ಎನ್., ಪೂರ್ವೋಕ್ತ, ಪು. ೫೩೩-೫೩೯

೮೮. ಅದೇ., ಪು. ೭೦೦-೭೦೫

೮೯. ಎಸ್.ಐ.ಐ., ೧೫, ಶಾ.ಸಂ. ೨೧೬

೯೦. ಎಸ್.ಐ.ಐ., ೧೫, ಶಾ.ಸಂ. ೨೩೩

೯೧. ಎಸ್.ಐ.ಐ., ೧೫, ಶಾ.ಸಂ. ೨೧೭

೯೨. ಎಸ್.ಐ.ಐ., ೧೫, ಶಾ.ಸಂ. ೭೨

೯೩. ಎಸ್.ಐ.ಐ., ೨೦, ಶಾ.ಸಂ. ೧೯೩

೯೪. ಎಸ್.ಐ.ಐ., ೧೫, ಶಾ.ಸಂ. ೬೧೧

೯೫. ಕಲಬುರ್ಗಿ ಎಂ.ಎಂ.(ಸಂ), ಪೂರ್ವೋಕ್ತ, ಪು. ೪ ಶಾ.ಸಂ. ೪೧

೯೬. ಅದೇ., ಪು. ೧೫೭-೧೫೮ ಶಾ.ಸಂ. ೬೪

೯೭. ಎಸ್.ಐ.ಐ., ೧೫, ಶಾ.ಸಂ. ೧೭೯

೯೮. ಇ.ಐ., ೪೬, ಶಾ.ಸಂ. ೨೧

೯೯. ಎಸ್.ಐ.ಐ., ೧೫, ಶಾ.ಸಂ. ೧೯೫

೧೦೦. ಕೆ.ಐ., ೬, ಶಾ.ಸಂ. ೬೮

೧೦೧. ಕಲಬುರ್ಗಿ ಎಂ.ಎಂ.(ಸಂ), ಪೂರ್ವೋಕ್ತ, ಪು. ೬ ಶಾ.ಸಂ. ೭೮

೧೦೨. ಅದೇ., ಪು. ೬ ಶಾ.ಸಂ. ೯೬

೧೦೩. ಎಸ್.ಐ.ಐ., ೧೫, ಶಾ.ಸಂ. ೨೭೦

೧೦೪. ಕಲಬುರ್ಗಿ ಎಂ.ಎಂ.(ಸಂ), ಪೂರ್ವೋಕ್ತ, ಪು. ೫ ಶಾ.ಸಂ. ೨೬

೧೦೫. ಅದೇ., ಪು. ೨೫ ಶಾ.ಸಂ. ೩೧

೧೦೬. ಎಸ್.ಐ.ಐ., ೧೫, ಶಾ.ಸಂ. ೯೦

೧೦೭. ಎಸ್.ಐ.ಐ., ೧೫, ಶಾ.ಸಂ. ೫೫೧

೧೦೮. ಎಸ್.ಐ.ಐ., ೧೫, ಶಾ.ಸಂ. ೧೮

೧೦೯. ಕಲಬುರ್ಗಿ ಎಂ.ಎಂ.(ಸಂ), ಪೂರ್ವೋಕ್ತ, ಪು. ೮೬-೮೭ ಶಾ.ಸಂ. ೧೪

೧೧೦. ಅದೇ., ಪು. ೪ ಶಾ.ಸಂ. ೫೮

೧೧೧. ಎಸ್.ಐ.ಐ., ೧೫, ಶಾ.ಸಂ. ೫೫೧

೧೧೨. ಕೆ.ಐ., ೫, ಶಾ.ಸಂ. ೧೨೩

೧೧೩. ಎಸ್.ಐ.ಐ., ೧೧-ii, ಶಾ.ಸಂ. ೫

೧೧೪. ಕಲಬುರ್ಗಿ ಎಂ.ಎಂ.(ಸಂ), ಪೂರ್ವೋಕ್ತ, ಪು. ೫ ಶಾ.ಸಂ. ೭೩

೧೧೫. ಎಸ್.ಐ.ಐ., ೧೧-ii, ಶಾ.ಸಂ. ೭೮

೧೧೬. ಎಸ್.ಐ.ಐ., ೨೦, ಶಾ.ಸಂ. ೧೧೮

೧೧೭. ಎ,ಈ. ೧೫ ಪು, ೩೪೭

೧೧೮. ಎಸ್.ಐ.ಐ., ೨೦, ಶಾ.ಸಂ. ೪೬

೧೧೯. ಎಸ್.ಐ.ಐ., ೧೫, ಶಾ.ಸಂ. ೨೨೫

೧೨೦. ಗುರುವ ಆರ್.ಎನ್., ಪೂರ್ವೋಕ್ತ, ಪು. ೫೫೦–೫೫೨

೧೨೧. ಅದೇ., ಪು. ೬೦೨–೬೦೪

೧೨೨. ಕಲಬುರ್ಗಿ ಎಂ.ಎಂ.(ಸಂ), ಪೂರ್ವೋಕ್ತ, ಪು. ೨೫ ಶಾ.ಸಂ. ೪೭

೧೨೩. ಅದೇ., ಪು. ೨೫ ಶಾ.ಸಂ. ೩೭

೧೨೪. ಎಸ್.ಐ.ಐ., ೨೦, ಶಾ.ಸಂ. ೧೧೮

೧೨೫. ಗುರುವ ಆರ್.ಎನ್., ಪೂರ್ವೋಕ್ತ, ಪು. ೬೩೪–೬೩೭

೧೨೬. ಎಸ್.ಐ.ಐ., ೧೫, ಶಾ.ಸಂ. ೨೮೭

೧೨೭. ಎಸ್.ಐ.ಐ., ೧೫, ಶಾ.ಸಂ. ೬೫೧

೧೨೮. ಎಸ್.ಐ.ಐ., ೧೫, ಶಾ.ಸಂ. ೧೯೯

೧೨೯. ಎಸ್.ಐ.ಐ., ೨೦, ಶಾ.ಸಂ. ೩೨೬

೧೩೦. ಎಸ್.ಐ.ಐ., ೨೦, ಶಾ.ಸಂ. ೩೨೫

೧೩೧. ಎಸ್.ಐ.ಐ., ೧೫, ಶಾ.ಸಂ. ೩೭

೧೩೨. ಕಲಬುರ್ಗಿ ಎಂ.ಎಂ.(ಸಂ), ಪೂರ್ವೋಕ್ತ, ಪು. ೨೨ ಶಾ.ಸಂ. ೨೩

೧೩೩. ಎಸ್.ಐ.ಐ., ೧೫, ಶಾ.ಸಂ. ೧೦೨

೧೩೪. ಎಸ್.ಐ.ಐ., ೧೫, ಶಾ.ಸಂ. ೨೩೨

೧೩೫. ಎಸ್.ಐ.ಐ., ೨೦, ಶಾ.ಸಂ. ೧೯೯

೧೩೬. ಪರಮಶಿವಮೂರ್ತಿ ಡಿ.ವಿ., ಕನ್ನಡ ಶಾಸನಶಿಲ್ಪ, ೧೯೯೯, ಪು. ೭೭–೧೧೦

೧೩೭. ನಾಗೇಗೌಡ ಎಚ್.ಎಲ್., ಪ್ರವಾಸಿ ಕಂಡ ಇಂಡಿಯಾ, ಭಾಗ. ೧. ೧೯೬೪, ಪು.೨೧೪–೧೧೯

೧೩೮. ಸೀತಾರಾಮಯ್ಯ ಎ.ಎಂ., ಕವಿರಾಜಮಾರ್ಗ, ೧, ೧೯೭೫, ಪು. ೧–೨೮.

೧೩೯. ಸುಬ್ರಾಯಭಟ್ ಪಿ.(ಸಂ)., ಗದಾಯುದ್ಧ ದರ್ಪಣಂ, ೧೯೭೫, ಪು. ೬೪

೧೪೦. ಭೋಜರಾಜ ಪಾಟೀಲ್., ನಾಗರಖಂಡ–೭೦ ಒಂದು ಅಧ್ಯಯನ, ೧೯೯೫, ಪು. ೧೧೮

೧೪೧. ಕಲಬುರ್ಗಿ ಎಂ.ಎಂ.(ಸಂ), ಪೂರ್ವೋಕ್ತ, ಪು. ೪–೫ ಶಾ.ಸಂ. ೧೫

೧೪೨. ಪರಮಶೀವಮೂರ್ತಿ ಡಿ.ವಿ., ಪೂರ್ವೋಕ್ತ, ಪು. ೧೬೧–೧೬೫

೧೪೩. ಶೇಷಶಾಸ್ತ್ರಿ ಆರ್., ಕರ್ನಾಟಕದ ವೀರಗಲ್ಲುಗಳು, ೨೦೦೫, ಪು. ೧೫.

೧೪೪. ಕಲಬುರ್ಗಿ ಎಂ.ಎಂ.(ಸಂ), ಪೂರ್ವೋಕ್ತ, ಪು. ೧೫ ಶಾ.ಸಂ. ೧೫

೧೪೫. ಅದೇ, ಪು. ೧೫ ಶಾ.ಸಂ. ೧೫

೧೪೬. ಎಸ್.ಐ.ಐ., ೧೫, ಶಾ.ಸಂ. ೪೪೮

೧೪೭. ಕಲಬುರ್ಗಿ ಎಂ.ಎಂ.(ಸಂ), ಪೂರ್ವೋಕ್ತ, ಪು. ೫ ಶಾ.ಸಂ. ೧೮

೧೪೮. ಅದೇ., ಪು. ೫ ಶಾ.ಸಂ. ೨೮

೧೪೯. ಅದೇ., ಪು. ೫ ಶಾ.ಸಂ. ೪೦೦

೧೫೦. ಅದೇ., ಪು. ೨೪ ಶಾ.ಸಂ. ೧

೧೫೧. ಅದೇ., ಪು. ೪ ಶಾ.ಸಂ. ೪೦೧

೧೫೨. ಗುರುವ ಆರ್.ಎನ್., ಪೂರ್ವೋಕ್ತ, ಪು. ೫೨೬-೫೨೭

೧೫೩. ಕಲಬುರ್ಗಿ ಎಂ.ಎಂ.(ಸಂ), ಪೂರ್ವೋಕ್ತ, ಪು. ೬ ಶಾ.ಸಂ. ೨೪೬

೧೫೪. ಎಸ್.ಐ.ಐ., ೧೫, ಶಾ.ಸಂ. ೨೨೬

೧೫೫. ಎಸ್.ಐ.ಐ., ೧೫, ಶಾ.ಸಂ. ೨೭೭

೧೫೬. ಗುರುವ ಆರ್.ಎನ್., ಪೂರ್ವೋಕ್ತ, ಪು. ೫೯೧

೧೫೭. ಅದೇ., ಪು. ೫೯೨

೧೫೮. ಅದೇ., ಪು. ೫೯೩

೧೫೯. ಕಲಬುರ್ಗಿ ಎಂ.ಎಂ.(ಸಂ), ಪೂರ್ವೋಕ್ತ, ಪು. ೧೩೩-೧೩೪ ಶಾ.ಸಂ. ೪೫೬

೧೬೦. ಅದೇ., ಪು. ೬ ಶಾ.ಸಂ. ೯೪

೧೬೧. ಅದೇ., ಪು. ೫ ಶಾ.ಸಂ. ೭೫

೧೬೨. ಎಸ್.ಐ.ಐ., ೧೫, ಶಾ.ಸಂ. ೫೮೬

೧೬೩. ಕಲಬುರ್ಗಿ ಎಂ.ಎಂ.(ಸಂ), ಪೂರ್ವೋಕ್ತ, ಪು. ೫ ಶಾ.ಸಂ. ೭೪

೧೬೪. ಕೆ.ಐ., ೫, ಶಾ.ಸಂ. ೭೨

೧೬೫. ಕಲಬುರ್ಗಿ ಎಂ.ಎಂ.(ಸಂ), ಪೂರ್ವೋಕ್ತ, ಪು. ೫ ಶಾ.ಸಂ. ೧೦

೧೬೬. ಅದೇ., ಪು. ೫ ಶಾ.ಸಂ. ೫೦

೧೬೭. ಅದೇ., ಪು. ೬ ಶಾ.ಸಂ. ೫೯

೧೬೮. ಎಸ್.ಐ.ಐ., ೧೫, ಶಾ.ಸಂ. ೫೫೩

೧೬೯. ಕಲಬುರ್ಗಿ ಎಂ.ಎಂ.(ಸಂ), ಪೂರ್ವೋಕ್ತ, ಪು. ೪ ಶಾ.ಸಂ. ೮೮

೧೭೦. ಎಸ್.ಐ.ಐ., ೨೦, ಶಾ.ಸಂ. ೧೯೫

೧೭೧. ಎಸ್.ಐ.ಐ., ೧೫, ಶಾ.ಸಂ. ೨೩೧

೧೭೨. ಗುರುವ ಆರ್.ಎನ್., ಪೂರ್ವೋಕ್ತ, ಪು. ೭೦೦

೧೭೩. ಕಲಬುರ್ಗಿ ಎಂ.ಎಂ.(ಸಂ), ಪೂರ್ವೋಕ್ತ, ಪು. ೭ ಶಾ.ಸಂ. ೪೦

೧೭೪. ಅದೇ., ಪು. ೫ ಶಾ.ಸಂ. ೧೯

೧೭೫. ಅದೇ., ಪು. ೫ ಶಾ.ಸಂ. ೮

೧೭೬. ಎಸ್.ಐ.ಐ., ೨೦, ಶಾ.ಸಂ. ೩೬೨

೧೭೭. ಕಲಬುರ್ಗಿ ಎಂ.ಎಂ.(ಸಂ), ಪೂರ್ವೋಕ್ತ, ಪು. ೨ ಶಾ.ಸಂ. ೪೬೭

೧೭೮. ಎಸ್.ಐ.ಐ., ೧೫, ಶಾ.ಸಂ. ೬೫೦

೧೭೯. ಎಸ್.ಐ.ಐ., ೧೫, ಶಾ.ಸಂ. ೬೫೧

೧೮೦. ಕಲಬುರ್ಗಿ ಎಂ.ಎಂ.(ಸಂ), ಪೂರ್ವೋಕ್ತ, ಪು. ೪ ಶಾ.ಸಂ. ೨

೧೮೧. ಅದೇ., ಪು. ೨ ಶಾ.ಸಂ. ೩೨

೧೮೨. ಅದೇ., ಪು. ೬ ಶಾ.ಸಂ. ೧೨

೧೮೩. ಅದೇ., ಪು. ೫ ಶಾ.ಸಂ. ೨೦

೧೮೪. ಅದೇ., ಪು. ೫ ಶಾ.ಸಂ. ೧೭

೧೮೫. ಅದೇ., ಪು. ೪ ಶಾ.ಸಂ. ೬

೧೮೬. ಅದೇ., ಪು. ೪ ಶಾ.ಸಂ. ೫

೧೮೭. ಅದೇ., ಪು. ೪ ಶಾ.ಸಂ. ೪

೧೮೮. ಕಲಬುರ್ಗಿ ಎಂ.ಎಂ.(ಸಂ), ಪೂರ್ವೋಕ್ತ, ಪು. ೧೫ ಶಾ.ಸಂ. ೧೫

೧೮೯. ಶೇಷಶಾಸ್ತ್ರಿ ಆರ್., ಪೂರ್ವೋಕ್ತ, ಪು. ೨೯

೧೯೦. ಚಿದಾನಂದಮೂರ್ತಿ ಎಂ., ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ, ೨೦೦೦, ಪು. ೩೪೬–೩೫೦

೧೯೧. ಶೇಠ ಬಿ.ಎಸ್., ಕರ್ನಾಟಕ ಸತಿ ಪದ್ಧತಿ, ೧೯೯೧, ಪು. ೯೭

೧೯೨. ಭಟ್‌ಸೂರಿ ಕೆ.ಜಿ., ಹಾಡುವಳ್ಳಿ ಜೈನಶಾಸನ ವಾಸ್ತು–ಮೂರ್ತಿಶಿಲ್ಪ, ೨೦೧೧,ಪು. ೭೫

೧೯೩. ಅದೇ., ಪು. ೭೫

೧೯೪. ಚಿದಾನಂದಮೂರ್ತಿ ಎಂ., ಪೂರ್ವೋಕ್ತ, ಪು. ೩೫೩

೧೯೫. ಪರಮಶಿವಮೂರ್ತಿ ಡಿ.ವಿ., ಪೂರ್ವೋಕ್ತ, ಪು. ೨೬೫.

೧೯೬. ಎಸ್.ಐ.ಐ., ೨೦, ಶಾ.ಸಂ. ೩೭೮

೧೯೭. ಎಸ್.ಐ.ಐ., ೧೫, ಶಾ.ಸಂ. ೬೩೧

೧೯೮. ಶ್ರೀನಿವಾಸ ರಿತ್ತಿ., (ಸಂ), ಪ್ರಾಚೀನ ಕರ್ನಾಟಕದ ಆಡಳಿತ ಪಾರಿಭಾಷಿಕ ಕೋಶ, ೨೦೦೨, ಪು. ೧೮೩

೧೯೯. ಕಲಬುರ್ಗಿ ಎಂ.ಎಂ.(ಸಂ), ಪೂರ್ವೋಕ್ತ, ಪು. ೧೦ ಶಾ.ಸಂ. ೩೨

೨೦೦. ಮಿರ್ಜಾ ಅಣ್ಣಾರಾಯ(ಅನು)., ಸಮಂತಭದ್ರ ರತ್ನಕರಂಡ-ಶ್ರಾವಕಾಚಾರ, ೧೯೯೨, ಪು. ೫೧೬-೫೫೭

೨೦೧. ಸದಾನಂದ ಕನವಳ್ಳಿಮತ್ತು ಶೆಟ್ಟರ್. ಎಸ್.(ಅನು)., ಸಾವಿಗಡ ಆಹ್ವಾನ, ೨೦೦೪, ಪು. ೯೮

೨೦೨. ಶ್ರೀನಿವಾಸ ಪಾಡಿಗಾರ., ಜಿನತಿಲಕ, ಡಿಸೆಂಬರ್, ೨೦೦೪/ಜನವರಿ ೨೦೦೫, ಪು. ೧೧೪

೨೦೩. ಚಿದಾನಂದಮೂರ್ತಿ ಎಂ., ಪೂರ್ವೋಕ್ತ, ಪು. ೯೮

೨೦೪. ಪರಮಶಿವಮೂರ್ತಿ ಡಿ.ವಿ., ಪೂರ್ವೋಕ್ತ, ಪು. ೧೧೮

೨೦೫. ಎಸ್.ಐ.ಐ., ೧೫, ಶಾ.ಸಂ. ೫೩೦

೨೦೬. ಕಲಬುರ್ಗಿ ಎಂ.ಎಂ.(ಸಂ), ಪೂರ್ವೋಕ್ತ, ಪು. ೫ ಶಾ.ಸಂ. ೧೫

೨೦೭. ಅದೇ., ಪು. ೨೧ ಶಾ.ಸಂ. ೨೨

೨೦೮. ಎಸ್.ಐ.ಐ., ೧೫, ಶಾ.ಸಂ. ೬೧

೨೦೯. ಎಸ್.ಐ.ಐ., ೧೫, ಶಾ.ಸಂ. ೬೧೮

೨೧೦. ಎಸ್.ಐ.ಐ., ೧೫, ಶಾ.ಸಂ. ೬೯೩

೨೧೧. ಇ.ಐ., ೬, ಪು. ೨೫೫

೨೧೨. ಇ.ಐ., ೨೧, ಪು. ೨೦೭

೨೧೩. ಚಿದಾನಂದಮೂರ್ತಿ ಎಂ., ಸಂಶೋಧನ ತರಂಗ, ೧೯೬೬, ಪು. ೨೭೨

೨೧೪. ಪಾಟೀಲ್ ಎಸ್.ಪಿ., ಅಜಿತ ಪುರಾಣ., ೧೯೮೨, ಪು. ೧-೨೧

೨೧೫. ಶೇಷನವರತ್ನ (ಅನು), ಮನುಸ್ಮೃತಿ, ಸಂ, ೮೬, ೨೦೦೦, ಪು. ೧೯

೨೧೬. ಕಲಬುರ್ಗಿ ಎಂ.ಎಂ.(ಸಂ), ಗೋಸಾಸ, ಮಾರ್ಗ-೨, ೧೯೯೫, ಪು. ೧೪

೨೧೭. ಭೋಜರಾಜ ಪಾಟೀಲ ಬಿ., ಪೂರ್ವೋಕ್ತ, ಪು. ೧೮೭-೧೯೦

೨೧೮. ಇ.ಎ., ಸಂ, ೧೧, ಪು. ೧೨೪

೨೧೯. ಎಸ್.ಐ.ಐ., ೧೫, ಶಾ.ಸಂ. ೧೨

೨೨೦. ಕಲಬುರ್ಗಿ ಎಂ.ಎಂ.(ಸಂ), ಪೂರ್ವೋಕ್ತ, ಪು. ೩೫ ಶಾ.ಸಂ. ೨೭

೨೨೧. ಅದೇ., ಪು. ೫ ಶಾ.ಸಂ. ೨೮

೨೨೨. ಅದೇ., ಪು. ೨೫ ಶಾ.ಸಂ. ೪೩

೨೨೩. ಅದೇ., ಪು. ೨೫ ಶಾ.ಸಂ. ೪೩

೨೨೪. ಅದೇ., ಪು. ೪ ಶಾ.ಸಂ. ೮೮

೨೨೫. ಅದೇ., ಪು. ೧ ಶಾ.ಸಂ. ೮೮

೨೨೬. ಎಸ್.ಐ.ಐ., ೧೫, ಶಾ.ಸಂ. ೫೯೦

೨೨೭. ಎಸ್.ಐ.ಐ., ೧೧-i, ಶಾ.ಸಂ. ೩೨

೨೨೮. ಕಲಬುರ್ಗಿ ಎಂ.ಎಂ.(ಸಂ), ಪೂರ್ವೋಕ್ತ, ಪು. ೨೦ ಶಾ.ಸಂ. ೪೦೭

೨೨೯. ಎಸ್.ಐ.ಐ., ೨೦, ಶಾ.ಸಂ. ೩೨೯

೨೩೦. ಎಸ್.ಐ.ಐ., ೨೦, ಶಾ.ಸಂ. ೩೨೮

೨೩೧. ಎಸ್.ಐ.ಐ., ೧೫, ಶಾ.ಸಂ. ೨೬೮

೨೩೨. ಕಲಬುರ್ಗಿ ಎಂ.ಎಂ.(ಸಂ), ಪೂರ್ವೋಕ್ತ, ಪು. ೨೦ ಶಾ.ಸಂ. ೩೬

೨೩೩. ಅದೇ., ಪು. ೭ ಶಾ.ಸಂ. ೯

೨೩೪. ಎಸ್.ಐ.ಐ., ೧೧-ii, ಶಾ.ಸಂ. ೧೨೪

೨೩೫. ಎಸ್.ಐ.ಐ., ೧೧-ii, ಶಾ.ಸಂ. ೧೭೭

೨೩೬. ಗುರುವ ಆರ್.ಎನ್., ಪೂರ್ವೋಕ್ತ, ಪು. ೬೭೬-೬೮೨

೨೩೭. ಎಸ್.ಐ.ಐ., ೨೦, ಶಾ.ಸಂ. ೨೯೩

೨೩೮. ಗುರುವ ಆರ್.ಎನ್., ಪೂರ್ವೋಕ್ತ, ಪು. ೭೦೫

೨೩೯. ಎಸ್.ಐ.ಐ., ೧೫, ಶಾ.ಸಂ. ೭೧೦

೨೪೦. ಕಲಬುರ್ಗಿ ಎಂ.ಎಂ.(ಸಂ), ಪೂರ್ವೋಕ್ತ, ಪು. ೨೧ ಶಾ.ಸಂ. ೧೦೦

೨೪೧. ಅದೇ., ಪು. ೭ ಶಾ.ಸಂ. ೯೮

೨೪೨. ಎಸ್.ಐ.ಐ., ೧೧-i, ಶಾ.ಸಂ. ೧೪

೨೪೩. ಇ.ಐ., ೧೨, ಶಾ.ಸಂ. ೮೨

೨೪೪. ಎಸ್.ಐ.ಐ., ೧೧-i, ಶಾ.ಸಂ. ೪೫

೨೪೫. ಎಸ್.ಐ.ಐ., ೧೮, ಶಾ.ಸಂ. ೬೮

೨೪೬. ಕಲಬುರ್ಗಿ ಎಂ.ಎಂ.(ಸಂ), ಪೂರ್ವೋಕ್ತ, ಪು. ೬ ಶಾ.ಸಂ. ೨೪೫

೨೪೭. ಎಸ್.ಐ.ಐ., ೨೦, ಶಾ.ಸಂ. ೪೬

೨೪೮. ಎಸ್.ಐ.ಐ., ೧೧-ii, ಶಾ.ಸಂ. ೧೧೫

೨೪೯. ಎಸ್.ಐ.ಐ., ೧೧-ii, ಶಾ.ಸಂ. ೧೪೩

೨೫೦. ಕಲಬುರ್ಗಿ ಎಂ.ಎಂ.(ಸಂ), ಪೂರ್ವೋಕ್ತ, ಪು. ೨೦ ಶಾ.ಸಂ. ೫೧

೨೫೧. ಎಸ್.ಐ.ಐ., ೨೦, ಶಾ.ಸಂ. ೯೭

೨೫೨. ಎಸ್.ಐ.ಐ., ೧೫, ಶಾ.ಸಂ. ೧೯೪

೨೫೩. ಕಲಬುರ್ಗಿ ಎಂ.ಎಂ.(ಸಂ), ಪೂರ್ವೋಕ್ತ, ಪು. ೨೧ ಶಾ.ಸಂ. ೨೫

೨೫೪. ಅದೇ., ಪು. ೫ ಶಾ.ಸಂ. ೩೨೮

೨೫೫. ಎಸ್.ಐ.ಐ., ೧೧-ii, ಶಾ.ಸಂ. ೧೮೬

೨೫೬. ಗುರುವ ಆರ್.ಎನ್., ಪೂರ್ವೋಕ್ತ, ಪು. ೧೫೪-೧೫೭

೨೫೭. ಎಸ್.ಐ.ಐ., ೧೧-ii, ಶಾ.ಸಂ. ೧೩೪

೨೫೮. ಎಸ್.ಐ.ಐ., ೧೧-ii, ಶಾ.ಸಂ. ೭೦

೨೫೯. ಕಲಬುರ್ಗಿ ಎಂ.ಎಂ.(ಸಂ), ಪೂರ್ವೋಕ್ತ, ಪು. ೩೪ ಶಾ.ಸಂ. ೧೦೪

೨೬೦. ಗುರುವ ಆರ್.ಎನ್., ಪೂರ್ವೋಕ್ತ, ಪು. ೫೮೮-೫೮೯

೨೬೧. ಎಸ್.ಐ.ಐ., ೧೫, ಶಾ.ಸಂ. ೨೨೭

೨೬೨. ಗುರುವ ಆರ್.ಎನ್., ಪೂರ್ವೋಕ್ತ, ಪು. ೧೫೮-೧೬೧

೨೬೩. ಎಸ್.ಐ.ಐ., ೧೫, ಶಾ.ಸಂ. ೭೨

೨೬೪. ಕಲಬುರ್ಗಿ ಎಂ.ಎಂ.(ಸಂ), ಪೂರ್ವೋಕ್ತ, ಪು. ೧೪೦-೧೪೨ ಶಾ.ಸಂ. ೫೨

೨೬೫. ಎಸ್.ಐ.ಐ., ೧೫, ಶಾ.ಸಂ. ೯೩

೨೬೬. ಕೆ.ಐ., ೫, ಶಾ.ಸಂ. ೧೦೬

೨೬೭. ಕಲಬುರ್ಗಿ ಎಂ.ಎಂ.(ಸಂ), ಪೂರ್ವೋಕ್ತ, ಪು. ೨೧ ಶಾ.ಸಂ. ೮೦

೨೬೮. ಅದೇ., ಪು. ೩೫ ಶಾ.ಸಂ. ೩೬

೨೬೯. ಎಸ್.ಐ.ಐ., ೨೦, ಶಾ.ಸಂ. ೯೬

೨೭೦. ಕಲಬುರ್ಗಿ ಎಂ.ಎಂ.(ಸಂ), ಪೂರ್ವೋಕ್ತ, ಪು. ೬ ಶಾ.ಸಂ. ೩೬

೨೭೧. ಅದೇ., ಪು. ೩೪ ಶಾ.ಸಂ. ೮೧

೨೭೨. ಎಸ್.ಐ.ಐ., ೨೦, ಶಾ.ಸಂ. ೧೨೧

೨೭೩. ಕಲಬುರ್ಗಿ ಎಂ.ಎಂ.(ಸಂ), ಪೂರ್ವೋಕ್ತ, ಪು. ೨೬ ಶಾ.ಸಂ. ೫೫

೨೭೪. ಅದೇ., ಪು. ೩೪ ಶಾ.ಸಂ. ೭೬

೨೭೫. ಅದೇ., ಪು. ೨೪ ಶಾ.ಸಂ. ೮೦

೨೭೬. ಅದೇ., ಪು. ೫ ಶಾ.ಸಂ. ೫೪

೨೭೭. ಎಸ್.ಐ.ಐ., ೧೫, ಶಾ.ಸಂ. ೧೮೭

೨೭೮. ಕಲಬುರ್ಗಿ ಎಂ.ಎಂ.(ಸಂ), ಪೂರ್ವೋಕ್ತ, ಪು. ೫ ಶಾ.ಸಂ. ೫೪

೨೭೯. ಅದೇ., ಪು. ೭ ಶಾ.ಸಂ. ೨೪

೨೮೦. ಅದೇ., ಪು. ೧೫೮-೧೬೦ ಶಾ.ಸಂ. ೬೫

೨೮೧. ಅದೇ., ಪು. ೫ ಶಾ.ಸಂ. ೪೯

೨೮೨. ಅದೇ., ಪು. ೩೭-೩೯ ಶಾ.ಸಂ. ೭೯

೨೮೩. ಎಸ್.ಐ.ಐ., ೧೫, ಶಾ.ಸಂ. ೬೩೮

೨೮೪. ಕಲಬುರ್ಗಿ ಎಂ.ಎಂ.(ಸಂ), ಪೂರ್ವೋಕ್ತ, ಪು. ೬ ಶಾ.ಸಂ. ೭೭

೨೮೫. ಅದೇ., ಪು. ೨೨ ಶಾ.ಸಂ. ೯೪

೨೮೬. ಅದೇ., ಪು. ೬ ಶಾ.ಸಂ. ೮೬

೨೮೭. ಎಸ್.ಐ.ಐ., ೧೫, ಶಾ.ಸಂ. ೬೭೯

೨೮೮. ಎಸ್.ಐ.ಐ., ೧೫, ಶಾ.ಸಂ. ೨೫೦

೨೮೯. ಎಸ್.ಐ.ಐ., ೧೫, ಶಾ.ಸಂ. ೨೫೪

೨೯೦. ಎಸ್.ಐ.ಐ., ೧೫, ಶಾ.ಸಂ. ೨೫೮

೨೯೧. ಎಸ್.ಐ.ಐ., ೧೫, ಶಾ.ಸಂ. ೨೬೦

೨೯೨. ಎಸ್.ಐ.ಐ., ೧೫, ಶಾ.ಸಂ. ೨೫೭

೨೯೩. ಕಲಬುರ್ಗಿ ಎಂ.ಎಂ.(ಸಂ), ಪೂರ್ವೋಕ್ತ, ಪು. ೧೩-೧೪ ಶಾ.ಸಂ. ೫೩

೨೯೪. ಅದೇ., ಪು. ೨೪ ಶಾ.ಸಂ. ೧೦೧

೨೯೫. ಎಸ್.ಐ.ಐ., ೨೦, ಶಾ.ಸಂ. ೪೦೪

೨೯೬. ಕಲಬುರ್ಗಿ ಎಂ.ಎಂ.(ಸಂ), ಪೂರ್ವೋಕ್ತ, ಪು. ೩೫ ಶಾ.ಸಂ. ೫೭

೨೯೭. ಅದೇ., ಪು. ೨೫ ಶಾ.ಸಂ. ೧೩

೨೯೮. ಅದೇ., ಪು. ೬ ಶಾ.ಸಂ. ೩೨

೨೯೯. ಎಸ್.ಐ.ಐ., ೨೦, ಶಾ.ಸಂ. ೪೦೭

೩೦೦. ಎಸ್.ಐ.ಐ., ೧೫, ಶಾ.ಸಂ. ೧೧೭

□□□

ಅಧ್ಯಾಯ ನಾಲ್ಕು

ಶಾಸನಶಿಲ್ಪ ವೈವಿಧ್ಯತೆ

೪.೧ ಪೀಠಿಕೆ

ಸಂಸ್ಕೃತಿಯ ಅಧ್ಯಯನವನ್ನು ತಿಳಿಯುವ ಅಮೂಲ್ಯ ಆಕರಗಳಲ್ಲಿ ಶಾಸನ ಶಿಲ್ಪಗಳು ಒಂದು. ಶಿಲ್ಪವೆಂದರೆ ಒಂದು ವಾಸ್ತವಿಕ ಇಲ್ಲವೇ ಕಾಲ್ಪನಿಕ ಆಕೃತಿಯನ್ನು ಒಂದು ಮಾಧ್ಯಮದ ಮೂಲಕ ರೂಪಿಸುವ ಕಲೆಯೇ ಶಿಲ್ಪ.[೧] ಶಿಲ್ಪ ಮತ್ತು ಶಾಸನ ಶಿಲ್ಪಗಳು ಮೇಲ್ನೋಟಕ್ಕೆ ಒಂದೆಯಾದರೂ ಅವುಗಳ ಸೂಕ್ಷ್ಮತೆಯನ್ನು ಗಮನಿಸಿದಾಗ 'ಶಿಲ್ಪ' ವಿಶಾಲವಾದ ಅರ್ಥದಲ್ಲಿಯೂ, ಶಾಸನ ಶಿಲ್ಪಗಳು ಕೇವಲ ಶಾಸನಗಳಿಗೆ ಮಾತ್ರ ಸೀಮಿತವಾಗಿದೆ. ಶಾಸನ ಶಿಲ್ಪ ಅಂದರೆ ಶಾಸನಗಳ ಮೇಲಿರುವ ಉಬ್ಬುಶಿಲ್ಪಗಳ ಅಧ್ಯಯನ.[೨]

ಶಾಸನ ಶಿಲ್ಪದ ಪ್ರಾಚೀನತೆಯ ಬಗ್ಗೆ ಮಾನಸಾರ, ಮಯಮತ, ಅಂಶು ಮದ್ಭೇದಾಗಮ ಇನ್ನೂ ಮುಂತಾದ ಗ್ರಂಥಗಳಲ್ಲಿ ಉಬ್ಬುಶಿಲ್ಪದ ಬಗ್ಗೆ ಯಾವುದೇ ಮಾಹಿತಿಯನ್ನು ನಾವು ಕಾಣುವುದಿಲ್ಲ.[೩] ಶಿಲ್ಪಗಳಲ್ಲಿ ದುಂಡುಶಿಲ್ಪ ಮತ್ತು ಉಬ್ಬುಶಿಲ್ಪಗಳೆಂದು ವಿಭಾಗಿಸಲಾಗಿದೆ. ದುಂಡುಶಿಲ್ಪವನ್ನು ನಾಲ್ಕು ದಿಕ್ಕಿನಿಂದ ಯಾವ ಕಡೆಗಾದರೂ ತಿರುಗಿಸಿ ನೋಡಬಹುದು. ನೇರವಾಗಿ ಇದನ್ನು 'ಪೂರ್ಣ ಶಿಲ್ಪವೆಂತಲೂ' ಕರೆಯಲಾಗುತ್ತದೆ. ಅದೇ ರೀತಿ ಉಬ್ಬುಶಿಲ್ಪವನ್ನು ನೇರವಾಗಿ ನಿಂತು ನೋಡಬೇಕಾಗುತ್ತದೆ ಮತ್ತು ಈ ಶಿಲ್ಪವು ಒಂದು ಮೂಲವಸ್ತುವಿಗೆ ಅಂಟಿಕೊಂಡು ನಿಂತಿರುವ ಶಿಲ್ಪವಾಗಿರುತ್ತದೆ.[೪]

ಶಾಸನಶಿಲ್ಪ ತಯಾರಿಕೆಯನ್ನು ಮಾಡುವ ಸಂದರ್ಭದಲ್ಲಿ ಕಲಾಕಾರರು ಶಿಲೆ, ಮರ, ಲೋಹಗಳನ್ನು ಇತರೆ ಮಾಧ್ಯಮಗಳನ್ನು ಬಳಸಿಕೊಳ್ಳುತ್ತಾರೆ. ಅಂದರೆ ಶಿಲ್ಪಿಯ ಸಾಮರ್ಥ್ಯಕ್ಕೆ ತಕ್ಕಂತೆ ಶಾಸನಶಿಲ್ಪ ನಿರ್ಮಾಣವಾಗುತ್ತಿತ್ತು.[೫] ಶಾಸನಗಳಲ್ಲಿ ವೈವಿದ್ಯತೆಗಳನ್ನು ಕಂಡಂತೆ ಶಾಸನಶಿಲ್ಪಗಳಲ್ಲಿಯೂ ವೈವಿಧ್ಯತೆಗಳನ್ನು ಕಾಣಬಹುದಾಗಿದೆ. ಅಂದರೆ ಅವುಗಳ ಕಾಲದ ದೃಷ್ಟಿಯಿಂದ ಪ್ರದೇಶವಾರು, ಅರಸುಮನೆತನ, ವಸ್ತು, ವಿಷಯದ ದೃಷ್ಟಿಗಳಿಂದ ಶಾಸನ ಶಿಲ್ಪಗಳನ್ನು ಅಧ್ಯಯನ ಮಾಡಲಾಗುತ್ತದೆ. ಪ್ರಸ್ತುತ ಅಧ್ಯಯನ ಪ್ರದೇಶದಲ್ಲಿ ದಾನಶಾಸನ ಶಿಲ್ಪಗಳು, ವೀರಗಲ್ಲು ಶಿಲ್ಪಗಳು, ಮಾಸ್ತಿಗಲ್ಲು, ಗೋಸಹಸ್ರ ಶಾಸನ ಶಿಲ್ಪಗಳೆಂದು ವಿಭಾಗಿಸಿಕೊಂಡು ಅಧ್ಯಯನವನ್ನು ಮಾಡಲಾಗಿದೆ.[೬]

೪.೨ ದಾನಶಾಸನ ಶಿಲ್ಪಗಳು

ಶಾಸನಗಳಲ್ಲಿ ದಾನಕ್ಕೆ ತನ್ನದೇ ಆದ ವಿಶೇಷತೆ ಇದೆ. ಕೆಲವು ದಾನಗಳನ್ನು ಮಹಾದಾನಗಳು ಎಂದು ಹೇಳಲಾಗಿದೆ. ಅಗ್ನಿ ಪುರಾಣದಲ್ಲಿ ಹತ್ತು ವಿಧವಾದ ದಾನಗಳನ್ನು ಮತ್ತು ಇತರೇ ಪುರಾಣಗಳಲ್ಲಿ ಹದಿನಾರು ರೀತಿಯ ದಾನಗಳನ್ನು ಗುರ್ತಿಸಬಹುದು. ಅವುಗಳಲ್ಲಿ ಭೂಮಿ, ಕನ್ಯ, ಆನೆ, ವಧು, ಹಿರಣ್ಯಗರ್ಭ, ಕಲ್ಪವೃಕ್ಷ, ಗೋಸಹಸ್ರ, ಹೇಮಹಸ್ತರಥ, ವಿಶ್ವಚಕ್ರ, ಸಪ್ತಸಾಗರ, ರತ್ನಧೇನು ಮುಂತಾದ ದಾನಗಳನ್ನು ಗುರುತಿಸಲಾಗಿದೆ.[೭]

ಪ್ರಸ್ತುತ ದಾನಶಾಸನ ಶಿಲ್ಪಗಳಲ್ಲಿ ಶೈವದಾನ ಶಾಸನಶಿಲ್ಪಗಳು, ವೈಷ್ಣವ ದಾನಶಾಸನ ಶಿಲ್ಪಗಳು, ಜೈನದಾನ ಶಾಸನಶಿಲ್ಪಗಳೆಂದು ವಿಭಾಗಿಸಲಾಗಿದೆ.

೪.೨.೧ ಶೈವ ದಾನಶಾಸನ ಶಿಲ್ಪಗಳು

ವಿಶ್ವದ ಪ್ರಮುಖ ಧರ್ಮಗಳಲ್ಲಿ ಶೈವಧರ್ಮವು ಒಂದು. ಶಿವನನ್ನು ಲಿಂಗರೂಪದಲ್ಲಿ ಪೂಜಿಸಲಾಗುತ್ತಿತ್ತು. ಅಂದರೆ ವಿಷಯಕ್ಕೆ ಪುಷ್ಟಿಕರಿಸುವಂತಹ ಯಾವುದೇ ಶಾಸನಗಳು ನಮಗೆ ಲಭ್ಯವಿಲ್ಲ ಆದರೂ ಸಿಂಧೂ ಸಂಸ್ಕೃತಿಯ ಪಶುಪತಿ, ನಂದಿ, ನಾಟ್ಯ ವಿಗ್ರಹ ಇವೆಲ್ಲ ಶಿಲ್ಪಗಳನ್ನು ಶೈವಶಿಲ್ಪಗಳೆಂದು ಜೊತೆಗೆ ಇಲ್ಲಿನ ಶಿವಲಿಂಗ, ಗಡ್ಡದಾರಿಯಾದ ಯೋಗಿಯ ಮೂರ್ತಿಗಳು ಈ ವಿಷಯಕ್ಕೆ ಹೆಚ್ಚು ಒತ್ತನ್ನು ನೀಡುತ್ತವೆ.

ಕರ್ನಾಟಕದ ಶೈವದಾನ ಶಾಸನಗಳ ಜೊತೆಗೆ ಶಿಲ್ಪಗಳು ಹೆಚ್ಚು ಬೆಳವಣಿಗೆಯನ್ನು ಹತ್ತು ಮತ್ತು ಹನ್ನೊಂದನೇ ಶತಮಾನದಲ್ಲಿ ಗೋಚರಿಸುತ್ತವೆ. ಇದರ ಬೆಳವಣಿಗೆಗೆ ಕರ್ನಾಟಕದಲ್ಲಿ ಆಳಿದ ಮುಖ್ಯ ಅರಸು ಮನೆತನಗಳಾದ ಕದಂಬ, ಚಾಲುಕ್ಯ, ರಾಷ್ಟ್ರಕೂಟ, ವಿಜಯನಗರ ಹಾಗೂ ದಕ್ಷಿಣ ಪ್ರಾಂತ್ಯದ ರಾಜಮನೆತನಗಳಾದ ಚೋಳ, ಚೇರ, ಪಾಂಡ್ಯ, ಪಲ್ಲವರ ಮುಂತಾದ ರಾಜಮನೆತನಗಳ ಪ್ರೋತ್ಸಾಹದಲ್ಲಿ ಶೈವದಾನ ಶಾಸನಶಿಲ್ಪಗಳು ಹೆಚ್ಚು ಪ್ರಭುದ್ದಮಾನವಾಗಿ ಅವರ ಆಶ್ರಯದಲ್ಲಿ ಬೆಳವಣಿಗೆಯನ್ನು ಕಂಡವು.

ಮುಖ್ಯವಾಗಿ ದಾನಶಾಸನ ಶಿಲ್ಪಗಳಲ್ಲಿ ಶಿವಲಿಂಗ, ಆಕಳು ಮತ್ತು ಸೂರ್ಯ–ಚಂದ್ರರನ್ನ ಗುರುತಿಸಬಹುದಾಗಿದೆ.[೮] ಶಿವಲಿಂಗ ಚಿತ್ರಣ, ಶಿವಲಿಂಗದ ಜೊತೆ ಆಕಳು ಮತ್ತು ನಂದಿಯಶಿಲ್ಪ, ಮಂಟಪದಲ್ಲಿ ಶಿವಲಿಂಗ–ಭಕ್ತ ಮತ್ತು ನಂದಿಯಶಿಲ್ಪ, ಶಿವಲಿಂಗ ಭಕ್ತ ಆಕಳಶಿಲ್ಪ, ಮುಂತಾದವುಗಳನ್ನು ಕಾಣಬಹುದಾಗಿದೆ.

ಪ್ರಸ್ತುತ ಕುಂದಗೋಳ ತಾಲೂಕಿನ ಸಂಶಿಯ್ ಸದಾನಂದ ಫಕ್ಕೀರಪ್ಪ ಕುಂಬಿ ಅವರ ಮನೆಯ ಗೋಡೆಗೆ ನಿಲ್ಲಿಸಿರವುದು ದಾನಶಾಸನ ಶಿಲ್ಪವಾಗಿದೆ. ನಂದಿಯ ಕೊರಳಲ್ಲಿ ಗೆಜ್ಜೆಯ ಸರ ಇದೆ. ಬಲಭಾಗದಲ್ಲಿ ಹಸು ತನ್ನ ಕರುವಿಗೆ ಹಾಲನ್ನು ಕೊಡುತ್ತಿರುವ ದೃಶ್ಯವಿದೆ. ಇದರ ಪಕ್ಕದಲ್ಲಿ ಖಡ್ಗ ಇದೆ. ಕಲ್ಯಾಣ ಚಾಲುಕ್ಯರ ಶೈಲಿಯ ಮಂಟಪವಿದೆ. ಅದರಲ್ಲಿ ಕಿರೀಟವನ್ನು ಧರಿಸಿರುವ ಲಿಂಗವಿದೆ. ಜೊತೆಗೆ ಯತಿಯು ಅದಕ್ಕೆ ಪೂಜೆಯನ್ನು ಸಲ್ಲಿಸುತ್ತಿರುವ ಚಿತ್ರಣವಿದೆ. ಈ ಮಂಟಪ ಏಕತಲ ವಿನ್ಯಾಸವನ್ನು ಹೊಂದಿದ್ದು, ಮೇಲ್ಭಾಗದಲ್ಲಿ ಕಳಸವಿದೆ. ಜೊತೆಗೆ ಎಡಭಾಗಕ್ಕೆ ಸೂರ್ಯನನ್ನು ಹಾಗೂ ಬಲಭಾಗಕ್ಕೆ ಚಂದ್ರನ ಚಿತ್ರಣವಿದೆ. ಅದೇ ರೀತಿಯಾಗಿ ಗಂಗಾಧರೇಶ್ವರ[೧೦] ದೇವಾಲಯದ ಹಿಂಭಾಗದ ಭಿತ್ತಿಯಲ್ಲಿ ಮತ್ತೊಂದು ದಾನಶಾಸನಶಿಲ್ಪಿವಿದೆ. ಶಾಸನದ ಎಡಭಾಗದಲ್ಲಿ ಹಸುವು ತನ್ನ ಕರುವಿಗೆ ಹಾಲನ್ನು ಕೊಡುತ್ತಿರುವಂತೆ ಮತ್ತು ಒಬ್ಬ ಯತಿಯು ಶಿವಲಿಂಗಕ್ಕೆ ಅಭಿಷೇಕವನ್ನು ಮಾಡುತ್ತಿರುವ ಜೊತೆಗೆ ಶಿವಲಿಂಗದ ಉಬ್ಬುಶಿಲ್ಪವಿದೆ. ಬ್ರಹ್ಮಕಾಂತ, ವಿಷ್ಣುಕಾಂತ ಹಾಗೂ ರುದ್ರಕಾಂತ ಭಾಗಗಳು ಹಾಗೂ ಪಾಣಿವಟ್ಟಲು ಜಲಹರಿ ಸ್ಪಷ್ಟವಾಗಿವೆ. ಜೊತೆಗೆ ಬಲಭಾಗದಲ್ಲಿ

ನಂದಿಯಿದ್ದು, ಇದು ಕಾಲನ್ನು ಮುಂದಕ್ಕೆ ಚಾಚಿದಂತೆಯೂ, ಮತ್ತೊಂದು ಕಾಲನ್ನು ಮಡಚಿಕೊಂಡಂತೆ ಕುಳಿತಿದೆ. ಕೊರಳಲ್ಲಿ ಗೆಜ್ಜೆಸರವಿದೆ. ಹಾಗೂ ಎಡ-ಬಲಭಾಗದಲ್ಲಿ ಸೂರ್ಯ-ಚಂದ್ರರಿದ್ದಾರೆ.

ಚಿಕನೆರ್ತಿಯ[೧೧] ಮತ್ತೊಂದು ಶೈವ ದಾನಶಾಸನಶಿಲ್ಪವಿದ್ದು, ಇಲ್ಲಿ ಎಡ ಮತ್ತು ಬಲಭಾಗದಲ್ಲಿ ಹಸುಗಳು ಕರುವಿಗೆ ಹಾಲನ್ನು ಕೊಡುತ್ತಿರುವ ಚಿತ್ರಣವಿದೆ. ಎರಡೂ ಹಸುಗಳ ಕೊರಳಲ್ಲಿ ಗೆಜ್ಜೆಸರಗಳು ಇವೆ. ಹಸುಗಳ ಮಧ್ಯದಲ್ಲಿ ಕುಂಭವನ್ನು ಚಿತ್ರಿಸಿರುವುದು ಬಹಳ ಅಪರೂಪವಾಗಿವೆ. ಜೊತೆಗೆ ಶಾಸನದ ಮೇಲ್ಭಾಗದಲ್ಲಿ ಸೂರ್ಯ-ಚಂದ್ರರನ್ನು ಕಾಣುತ್ತೇವೆ. ಇನ್ನು ಬೆಳಗಲಿಯಲ್ಲಿ ಮತ್ತೊಂದು ದಾನ ಶಾಸನಶಿಲ್ಪವಿದ್ದು, ಮಂಟಪದಲ್ಲಿ ಶಿವಲಿಂಗವಿದೆ. ಇದಕ್ಕೆ ಯತಿ ತಲೆಬಾಗಿದ್ದಾನೆ. ಇಲ್ಲಿ ಎರಡು ಕಂಬಗಳು ದಪ್ಪವಾಗಿದ್ದು, ಅದಕ್ಕೆ ಹೊಂದಿಕೊಂಡಂತೆ ಎಡಭಾಗದಲ್ಲಿ ಹಸು ತನ್ನ ಕರುವಿಗೆ ಹಾಲನ್ನು ಕೊಡುತ್ತಿದೆ. ಬಲಭಾಗದಲ್ಲಿನ ಹಸುವು ತನ್ನ ಎಡಗಾಲನ್ನು ಮುಂದೆ ಚಾಚಿದ್ದು, ಬಲಗಾಲನ್ನು ಮಡಚಿದೆ. ಇದರ ಕೊರಳಲ್ಲಿ ದಪ್ಪನೆಯ ಗೆಜ್ಜೆಸರವಿದೆ. ಅದೇ ರೀತಿ ಮೇಲ್ಭಾಗದ ಕಂಬಗಳಿಗೆ ಹೊಂದಿಕೊಂಡಂತೆ ಪಟ್ಟಿಕೆ ಇದ್ದು, ಎಡ-ಬಲಗಳಲ್ಲಿ ಸೂರ್ಯ-ಚಂದ್ರನ ಶಿಲ್ಪ ಇದೆ. ಹಾಗೂ ಮಧ್ಯದಲ್ಲಿ ಗೋಪುರ ಇದೆ.

ಇನ್ನು ಬೆಳಗಲಿಯ[೧೨] ದಾನಶಾಸನ ಶಿಲ್ಪದಲ್ಲಿ, ಮಂಟಪದಲ್ಲಿ ಶಿವಲಿಂಗವಿದ್ದು, ಇದಕ್ಕೆ ಯತಿಯು ತಲೆಬಾಗಿ ನಮಸ್ಕಾರವನ್ನು ಮಾಡುತ್ತಿದ್ದಾನೆ. ಇಲ್ಲಿ ಎರಡೂ ಕಂಬಗಳು ದಪ್ಪವಾಗಿದ್ದು, ಅದಕ್ಕೆ ಹೊಂದಿಕೊಂಡಂತೆ ಕೆಳಭಾಗ ಮತ್ತು ಮೇಲ್ಭಾಗದಲ್ಲಿ ಅಡ್ಡ ಪಟ್ಟಿಕೆಗಳಿವೆ. ಜೊತೆಗೆ ಎಡಭಾಗದಲ್ಲಿ ಹಸುವು ತನ್ನ ಕರುವಿಗೆ ಹಾಲನ್ನು ಕೊಡುತ್ತಿದ್ದು, ತನ್ನ ಎಡಗಾಲನ್ನು ಮುಂದೆ ಚಾಚಿದ್ದು, ಬಲಗಾಲನ್ನು ಮಡಚಿಕೊಂಡಿದೆ. ಹಾಗೂ ಇದರ ಕೊರಳಲ್ಲಿ ದಪ್ಪನಾದ ಗೆಜ್ಜೆಸರವಿದೆ. ಅದೇ ರೀತಿಯಾಗಿ ಮೇಲ್ಭಾಗದ ಕಂಬಗಳಿಗೆ ಹೊಂದಿಕೊಂಡಂತೆ ಪಟ್ಟಿಕೆಯಿದ್ದು, ಎಡ-ಬಲಗಳಲ್ಲಿ ಸೂರ್ಯ ಮತ್ತು ಚಂದ್ರನನ್ನು ಗುರುತಿಸಬಹುದಾಗಿದೆ.

ಅದೇ ರೀತಿಯಾಗಿ ಕುರಡಿಕೇರಿಯ[೧೩] ಶಾಸನಶಿಲ್ಪದ ಮಧ್ಯದಲ್ಲಿ ಶಿವಲಿಂಗವಿದ್ದು, ಇದರ ಎಲ್ಲಾ ಭಾಗಗಳು ಸ್ಪಷ್ಟವಾಗಿ ಗೋಚರಿಸುತ್ತವೆ. ಈ ಶಿಲ್ಪದ ವಿಶೇಷವೆಂದರೆ ಎಡಭಾಗದಲ್ಲಿ ಯತಿಯು ಕುಂಭದಿಂದ ನೀರನ್ನು ಹಾಕುತ್ತಿದ್ದಾನೆ. ಇವನು ಜಡೆಯನ್ನು ಹಿಂಭಾಗದಲ್ಲಿ ಕಟ್ಟಿಕೊಂಡಿದ್ದು, ಉದ್ದವಾದ ಗಡ್ಡದಾರಿ ಜೊತೆಗೆ ಸೊಂಟಕ್ಕೆ ದಪ್ಪನಾದ ಬಟ್ಟೆ ತೊಟ್ಟಿದ್ದಾನೆ. ಅದೇ ರೀತಿಯಲ್ಲಿ ಬಲಭಾಗದಲ್ಲಿ ಮತ್ತೊಬ್ಬ ಯತಿಯು ಕೈಯಲ್ಲಿ ಧೂಪವನ್ನು ಹಿಡಿದುಕೊಂಡು ಆರತಿಯನ್ನು ಮಾಡುತ್ತಿದ್ದಾನೆ. ಜೊತೆಗೆ ಎಡಭಾಗದಲ್ಲಿ ಹಸುವು ತನ್ನ ಕರುವಿಗೆ ಹಾಲನ್ನು ಕೊಡುತ್ತಿದೆ. ಇನ್ನು ಬಲಭಾಗದಲ್ಲಿನ ಹಸುವು ಕುಳಿತುಕೊಂಡಿದೆ. ಇವುಗಳನ್ನು ಕೊರಳಲ್ಲಿ ಗೆಜ್ಜೆಸರಗಳನ್ನು ಕಾಣುತ್ತೇವೆ. ಅಲ್ಲದೇ ಮೇಲ್ಭಾಗದಲ್ಲಿ ಸೂರ್ಯ-ಚಂದ್ರರು ಕಾಣುತ್ತಾರೆ. ಅದೇ ರೀತಿಯಾಗಿ ಇನ್ನೂ ಅನೇಕ ಪ್ರದೇಶಗಳಲ್ಲಿ ಈ ರೀತಿಯ ದಾನಶಾಸನ ಶಿಲ್ಪಗಳು ಹಾಳಸಿದ್ದಾಪೂರ,[೧೪] ಧಾರವಾಡ,[೧೫] ಸಂಶಿ,[೧೬] ಕುಂದಗೋಳ,[೧೭] ಕಲ್ಲಾಪೂರ,[೧೮] ಸಂಶಿ,[೧೯] ಮುಗುದ,[೨೦] ಮುಗುದ,[೨೧] ಸಿಂಹನಹಳ್ಳಿ,[೨೨] ಹುಲಿಕೇರಿ,[೨೩] ಕಡಬಕಟ್ಟಿ,[೨೪] ತಲವಾಯಿ,[೨೫] ಮಜ್ಜಿಗುಡ್ಡ,[೨೬] ನಾವಳ್ಳಿ,[೨೭] ಅಮ್ಮಿನಭಾವಿ,[೨೮] ಕೊಟಬಾಗಿ,[೨೯] ಮಮ್ಮಿಗಟ್ಟಿ[೩೦]

ಕುಂದಗೋಳ,[೩೧ಅ] ಕುಂದಗೋಳ,[೩೨ಇ] ಮಾದನಬಾವಿ,[೩೩] ಬ್ಯಾಹಟ್ಟಿ,[೩೪] ಬೈರಿದೇವರಕೊಪ್ಪ,[೩೫] ಶಿರಗುಪ್ಪಿ,[೩೬] ಮೊರಬ,[೩೭ಅ] ಮೊರಬ,[೩೮ಅ] ಅಣ್ಣಿಗೇರಿ,[೩೯ಅ] ಅಣ್ಣಿಗೇರಿ,[೪೦ಅ] ಹುಬ್ಬಳ್ಳಿ,[೪೧ಅ] ಹುಬ್ಬಳ್ಳಿ,[೪೨ಅ] ಛಬ್ಬಿ,[೪೩] ದೇವರಗುಡಿಹಾಳ,[೪೪] ಕುರಡಿಕೇರಿ,[೪೫] ಸುಳ್ಳ,[೪೬] ಬೆಳಗಲಿ,[೪೭] ಭೈರಿದೇವರಕೊಪ್ಪ,[೪೮] ಪ್ರದೇಶಗಳಲ್ಲಿ ಕಂಡು ಬರುತ್ತವೆ.

೪.೨.೨ ವೈಷ್ಣವ ದಾನಶಾಸನ ಶಿಲ್ಪಗಳು

ವೈಷ್ಣವ ಧರ್ಮವು ಪುರಾತನ ಧರ್ಮಗಳಲ್ಲಿ ಒಂದಾಗಿದ್ದು, ಇದರ ಪ್ರಾಚೀನತೆಯನ್ನು ನೋಡಿದಾಗ ಕ್ರಿ.ಶ. ೨ನೇ ಶತಮಾನದಲ್ಲಿ ಅದರಲ್ಲೂ ದಕ್ಷಿಣ ಭಾರತದಲ್ಲಿ ಅಸ್ತಿತ್ವದಲ್ಲಿದ್ದುದರ ಬಗ್ಗೆ ಶಾತವಾಹನ ರಾಣಿ ನಾಗಮೂಲ ನಿಕಾಳ ದಾಖಲೆ ಇರುವುದು ನಾನಾಘಾಟ ಗುಹಾ ಶಾಸನದ ಆಧಾರವಾಗಿದೆ.[೪೯] ವೈಷ್ಣವ ಧರ್ಮದ ಶಾಸನಗಳ ಮೇಲೆ, ಶಿಲ್ಪದ ದೃಷ್ಟಿಯಿಂದ ನೋಡಿದಾಗ ಸಾಮಾನ್ಯವಾಗಿ ಶಂಖ, ಚಕ್ರ, ನಾಮದಶಿಲ್ಪ, ವೈಷ್ಣವ ದೇವರುಗಳ ಹಾಗೂ ಗರುಡ ಇನ್ನೂ ಮುಂತಾದ ಶಿಲ್ಪಗಳು ಕಂಡು ಬಂದಿವೆ.

ಶಂಖ, ಚಕ್ರ ಮತ್ತು ನಾಮದ ಶಿಲ್ಪ

ವೈಷ್ಣವ ಧರ್ಮದ ಸಂಕೇತವಾಗಿ, ಲಾಂಛನಗಳಾಗಿ ಹಾಗೂ ಆಯುಧಗಳಾಗಿ ಶಂಖ ಮತ್ತು ಚಕ್ರಗಳಿವೆ. ದೇವಾಲಯದ ಗರ್ಭಗೃಹದ ಬಾಗಿಲುಗಳ ಮೇಲೆ, ದೇವಾಲಯದ ಗೋಪುರದ ಮೇಲೆ, ಜೊತೆಗೆ ಪ್ರಭಾವಳಿಗಳಲ್ಲಿ ಇಂತಹ ಲಾಂಛನಗಳು ಕಂಡು ಬರುತ್ತವೆ. ವೈಷ್ಣವ ದಾನ ಶಾಸನಶಿಲ್ಪಗಳಲ್ಲಿ ಶಂಖ, ಚಕ್ರದ ಜೊತೆಗೆ ನಾಮವನ್ನು ಕೆತ್ತಲಾಗಿರುತ್ತದೆ. ಪ್ರಸ್ತುತ ಶಾಸನ ಶಿಲ್ಪಗಳು ಕುಂದಗೋಳ ತಾಲೂಕಿನ ತೀರ್ಥ[೫೦] ದೊರೆತಿದ್ದು, ಈ ಶಾಸನದ ಮೇಲೆ ಎರಡು ಪಟ್ಟಿಕೆಯನ್ನು ಕಾಣುತ್ತೇವೆ. ಕೆಳಹಂತದ ಪಟ್ಟಿಕೆಯಲ್ಲಿ ಶಂಖ, ಚಕ್ರವನ್ನು ಮಧ್ಯದಲ್ಲಿ ನಾಮವನ್ನು, ಮೇಲ್ಪಟ್ಟಿಕೆಯಲ್ಲಿ ಸೂರ್ಯ, ಚಂದ್ರ ಹಾಗೂ ಪದ್ಮವನ್ನು ಕಾಣುತ್ತೇವೆ. ಈ ರೀತಿಯ ಶಾಸನೋಕ್ತಶಿಲ್ಪಗಳು ಬೆಂಗೇರಿ,[೫೧] ಶಿರಗುಪ್ಪಿ,[೫೨] ಶಿಶುವಿನಹಳ್ಳಿ,[೫೩] ಗ್ರಾಮಗಳಲ್ಲಿ ಕಂಡು ಬರುತ್ತವೆ.

ವಾಮನ ಮುದ್ರೆಕಲ್ಲು

ಶೈವಶಿಲ್ಪಗಳಲ್ಲಿ ಲಿಂಗಮುದ್ರೆ ಕಲ್ಲುಗಳು ಕಂಡು ಬರುವಂತೆ ವೈಷ್ಣವ ಶಿಲ್ಪಗಳಲ್ಲಿ ವಾಮನ ಮುದ್ರೆಕಲ್ಲುಗಳು ಕಂಡು ಬರುತ್ತವೆ. ವೈಷ್ಣವರಿಗೆ ದಾನವನ್ನು ನೀಡಿದ ಭೂಮಿಯನ್ನು ಗುರುತಿಸಲು ನೆಡುತ್ತಿದ್ದ ಕಲ್ಲುಗಳೇ ವಾಮನಮುದ್ರೆ ಕಲ್ಲುಗಳಾಗಿವೆ. ಇನ್ನು ಶಿಲ್ಪದ ದೃಷ್ಟಿಯಿಂದ ನೋಡಲಾಗಿ ವಾಮನ ಮುದ್ರೆ ಕಲ್ಲಿನಲ್ಲಿ ಛತ್ರಿ ಹಿಡಿದ ಬ್ರಾಹ್ಮಣನ ಚಿತ್ರವಿರುತ್ತದೆ. ಇದು ಬ್ರಾಹ್ಮಣವೇಷದಲ್ಲಿ ವಿಷ್ಣುವು ಬಲಿ ಚಕ್ರವರ್ತಿಯ ಬಳಿ ದಾನವನ್ನು ಕೇಳುವುದರ ಸಂಕೇತ ಜೊತೆಗೆ ಎಡಗೈಯಲ್ಲಿ ಛತ್ರಿಯಿದ್ದು, ಬಲಗೈಯಲ್ಲಿ ಕಮಂಡಲವಿರುತ್ತದೆ. ಇಂತಹ ಶಿಲ್ಪಗಳು ಪ್ರಸ್ತುತ ಧಾರವಾಡ ಜಿಲ್ಲೆಯ ಶಿರಗುಪ್ಪಿ,[೫೪] ಶರೇವಾಡ,[೫೫] ಹುಬ್ಬಳ್ಳಿ,[೫೬]ಕಂಡುಬರುತ್ತದೆ.

೪.೨.೩ ಜೈನದಾನ ಶಾಸನಶಿಲ್ಪಗಳು

ಜೈನಧರ್ಮವು ಪ್ರಾಚೀನ ಧರ್ಮಗಳಲ್ಲಿ ಒಂದಾಗಿದೆ. ಕರ್ನಾಟಕದಲ್ಲಿ ಹೆಚ್ಚು ಜನಪ್ರಿಯ ಧರ್ಮ ಇದು. 'ಜೀವಿಸು ಜೀವಿಸಗೊಡು' ತತ್ವವು ಜೈನಧರ್ಮದ ಮುಖ್ಯ ಧ್ಯೇಯವಾಗಿದ್ದು, ಜೈನ ಗೃಹಸ್ಥರ ಷಟ್ಕರ್ಮಗಳಲ್ಲಿ ದಾನ ಪ್ರಮುಖವಾಗಿದೆ. ಇದರಲ್ಲಿ ಲೌಕಿಕ ಮತ್ತು ಪಾರಮಾರ್ಥಿಕ ದಾನವೆಂದು ಎರಡು ವಿಧಗಳಿವೆ. ಲೌಕಿಕ ದಾನದಲ್ಲಿ ದಯಾದತ್ತಿ, ಸಮಾನದತ್ತಿ, ಸಕಲದತ್ತಿ.[೫೭] ಪಾರಮಾರ್ಥಿಕ ದಾನದಲ್ಲಿ ಉತ್ತಮ, ಮಧ್ಯಮ, ಜಘನ್ಯ ಮತ್ತು ಕುಪಾತ್ರರೆಂದು ವಿಭಾಗಿಸಲಾಗಿದೆ.[೫೮]

ಜೈನ ಶಾಸನಶಿಲ್ಪದ ವೈಶಿಷ್ಟ್ಯತೆಯಿಂದ ನೋಡಲಾಗಿ ಸಾಮಾನ್ಯವಾಗಿ ತೀರ್ಥಂಕರನು ನಿಂತ ಅಥವಾ ಕುಳಿತ ಭಂಗಿಯಲ್ಲಿರುವ ಜೊತೆಗೆ ಖಡ್ಗಾಸನ ಅಥವಾ ಪರ್ಯಂಕಾಸನದಲ್ಲಿ ಧ್ಯಾನಸ್ಥನಾದ ಚಿತ್ರವಿರುತ್ತದೆ. ಮತ್ತು ಶಾಸನದ ಲಲಾಟದ ಎಡ ಹಾಗೂ ಬಲ ಭಾಗಗಳಲ್ಲಿ ಸೂರ್ಯ-ಚಂದ್ರರನ್ನು ಚಿತ್ರಿಸಲಾಗಿದೆ. ಜಿನಮೂರ್ತಿಯ ತಲೆಯ ಮೇಲೆ ಮುಕ್ಕೊಡೆಯನ್ನು ಹಾಗೂ ಎರಡೂ ಬದಿಗೂ ಚಾಮರಗಳನ್ನು ಪ್ರಾಣಿಗಳ ಚಿತ್ರಗಳನ್ನು ನಾವು ಗಮನಿಸಬಹುದಾಗಿದೆ. ಪ್ರಸ್ತುತ ಅಧ್ಯಯನ ಪ್ರದೇಶಗಳಲ್ಲಿ ಜೈನ ಶಾಸನಶಿಲ್ಪಗಳನ್ನು ಕುರಿತು ಚರ್ಚಿಸಲಾಗಿದೆ.

ಪ್ರಸ್ತುತ ಈ ಅಧ್ಯಯನ ಪ್ರದೇಶದಲ್ಲಿ ಹಲವಾರು ಜೈನಶಾಸನಶಿಲ್ಪಗಳಿದ್ದು, ಅವುಗಳನ್ನು ಇಲ್ಲಿ ದಾಖಲಿಸಲಾಗಿದೆ. ಕುಂದಗೋಳ ತಾಲೂಕಿನ ಶಿರೂರಿನ,[೫೯] ಅಂಗನವಾಡಿಯಲ್ಲಿ ಸುಪಾರ್ಶ್ವನಾಥನು ಕಾರ್ಯೋತ್ಸರ್ಗ ಭಂಗಿಯಲ್ಲಿ ನಿಂತಿದ್ದು, ನಿರಾಭರಣನಾಗಿದ್ದಾನೆ. ತಲೆಯ ಕೂದಲುಗಳು ಗುಂಗುರುಗಳ ರೀತಿಯಲ್ಲಿದ್ದು, ಕಿವಿಗಳು ಅಗಲವಾಗಿವೆ. ಕುತ್ತಿಗೆ ಮತ್ತು ಹೊಟ್ಟೆಯ ಬಳಿ ಅರ್ಧವೃತ್ತಾಕಾರದ ಗೆರೆಗಳು ಇವೆ. ಈತನ ದೇಹದ ಹಿಂಭಾಗದಲ್ಲಿ ನಾಗವು ಸುರುಳಿಯಾಕಾರವಾಗಿ ಸುತ್ತಿಕೊಂಡು ತಲೆಯ ಮೇಲೆ ತನ್ನ ಐದು ಹೆಡೆಯಗಳನ್ನು ಎತ್ತಿ ರಕ್ಷಣೆಯನ್ನು ನೀಡಿದಂತಿದೆ. ಸೂಪಾರ್ಶ್ವನಾಥನ ಇಕ್ಕೆಲಗಳಲ್ಲಿ ವರನಂದಿ ಯಕ್ಷ ಹಾಗೂ ಯಕ್ಷಿಣಿಯರ ಶಿಲ್ಪಗಳು ಇವೆ. ಯಕ್ಷ-ಯಕ್ಷಿಣಿಯರು ಚತುರ್ಭುಜಧಾರಿಗಳಾಗಿದ್ದು, ಆಯುಧಗಳನ್ನು ಮತ್ತು ಆಭರಣಗಳಿಂದ ಭೂಷಿತರಾಗಿದ್ದಾರೆ. ಈ ಶಿಲ್ಪದ ಸುತ್ತಲೂ ಸ್ಥಂಭ ಮಕರ ತೋರಣವಿದ್ದು, ಅದು ಸ್ವಲ್ಪ ಭಗ್ನಗೊಂಡಂತೆ ಕಾಣುತ್ತದೆ.

ಅಮ್ಮಿನಭಾವಿಯ[೬೦] ನೇಮಿನಾಥ ಬಸದಿಯಲ್ಲಿ ಚಂದ್ರನಾಥನ ಶಿಲ್ಪವಿದೆ. ಪದ್ಮಾಸನದಲ್ಲಿ ಕುಳಿತಿದ್ದು, ಈತನ ಕೂದಲುಗಳು ಗುಂಗುರ ರೀತಿಯಲ್ಲಿವೆ. ಕಿವಿಗಳು ಉದ್ದವಾಗಿವೆ. ತಲೆ ಹಿಂಭಾಗದಲ್ಲಿ ಪ್ರಭಾಮಂಡಲವಿದೆ. ಬೆನ್ನ ಹಿಂಭಾಗದಲ್ಲಿ ಆಸನವಿದ್ದು. ಇದನ್ನು ವ್ಯಾಳಿಗಳು ಹೊತ್ತಿವೆ. ಈ ವ್ಯಾಳಿಗಳ ಬಲಗಡೆ ಜೈನ ಗುರುಗಳು ಕುಳಿತಿದ್ದಾರೆ. ಎಡಗಡೆ ಇಬ್ಬರು ಶಿಷ್ಯರು ಕೈಮುಗಿದು ಕುಳಿತಿದ್ದಾರೆ. ಚಂದ್ರನಾಥನ ಹಿಂಭಾಗದಲ್ಲಿ ಅಂದರೆ ಭುಜಕ್ಕೆ ಸಮಾನಾಂತರವಾಗಿ ಚಾಮರಧಾರಿಯರಿದ್ದು, ತ್ರಿಭಂಗಿಯಲ್ಲಿ ನಿಂತಿದ್ದಾರೆ. ಮತ್ತು ಆಭರಣಗಳಿಂದ ಭೂಷಿತರಾಗಿದ್ದಾರೆ. ಹಾಗೆಯೇ ಮೇಲ್ಭಾಗದಲ್ಲಿ ಮುಕ್ಕೊಡೆಯಿದೆ. ಇದರ ಸುತ್ತಲೂ ಹೂ ಬಳ್ಳಿಗಳ ಅಲಂಕರಣವಿದೆ. ಮತ್ತು ಸಿಂಹಪೀಠದಲ್ಲಿ ಐದು ಸಿಂಹಗಳನ್ನು ಕಾಣುತ್ತೇವೆ.

ಮುತ್ತಗಿಯ[೬೧] ಜೈನ ಬಸದಿಯಲ್ಲಿ ನೇಮಿನಾಥನ ಶಿಲ್ಪವಿದ್ದು, ಕಾಯೋರ್ತ್ಸರ್ಗ ಭಂಗಿಯಲ್ಲಿ ನಿಂತಿದ್ದಾನೆ. ಸಂಪೂರ್ಣ ನಗ್ನನಾಗಿದ್ದು, ನಿರಾಭರಣನಾಗಿದ್ದಾನೆ. ತಲೆಯು ಗುಂಗುರು ಕೂದಲುಗಳಿಂದ ಕೂಡಿದ್ದು, ಕಿವಿಗಳು ಉದ್ದವಾಗಿವೆ. ಹಾಗೆಯೇ ಎದೆಯಭಾಗ ಮತ್ತು ಭುಜಗಳು ಅಗಲವಾಗಿದೆ. ಜೊತೆಗೆ ಮೊಣಕಾಲಿನ ಸುತ್ತ ವೃತ್ತಾಕಾರದ ಚಿನ್ಹೆಗಳು ಕಂಡುಬರುತ್ತವೆ. ಹಾಗೆಯೇ ತಲೆಯ ಹಿಂಭಾಗದಲ್ಲಿ ಮುಕ್ಕೊಡೆಯಿದ್ದು, ಇದು ಅಲಂಕಾರದಿಂದ ಕೂಡಿದೆ. ಜೊತೆಗೆ ಇದರ ಇಕ್ಕೆಲಗಳಲ್ಲಿ ಚೌರಿಗಳಿವೆ. ನೇಮಿನಾಥನ ಅಕ್ಕ-ಪಕ್ಕದಲ್ಲಿ ಯಕ್ಷ-ಯಕ್ಷಿಣಿಯರಿದ್ದು, ಇವರು ಸುಖಾಸೀನದಲ್ಲಿ ಕುಳಿತಿದ್ದಾರೆ. ಕೈಗಳಲ್ಲಿ ಆಯುಧಗಳನ್ನು ಹಿಡಿದಿದ್ದಾರೆ. ಅಲ್ಲದೇ ನೇಮಿನಾಥನ ಬದಿಗಳಲ್ಲಿ ಸ್ಥಂಭಗಳಿದ್ದು, ಇದರ ಮೇಲೆ ಪೂರ್ಣಕಳಸವನ್ನು ಹಾಗೂ ಮೇಲ್ಭಾಗದಲ್ಲಿ ಶ್ರೀವತ್ಸವ ಚಿನ್ಹೆಗಳನ್ನು ಕಾಣುತ್ತೇವೆ. ಹಾಗೆಯೇ ಈ ಶ್ರೀವತ್ಸವ ಚಿನ್ಹೆಯ ಮೇಲ್ಭಾಗದಲ್ಲಿ ವೃತ್ತಾಕಾರದ ಪದ್ಮದ ಅಲಂಕರಣೆ ಇರುವುದನ್ನು ಗುರುತಿಸಬಹುದಾಗಿದೆ. ಪಾದಪೀಠದಲ್ಲಿ ಶಾಸನವನ್ನು ಕಾಣುತ್ತೇವೆ. ಧಾರವಾಡ ಜಿಲ್ಲೆಯ ಮುಗುದ,[೬೨] ಕೋಳಿವಾಡ,[೬೩] ಛಬ್ಬಿ,[೬೪ಅ] ಛಬ್ಬಿ,[೬೫ಆ] ಛಬ್ಬಿ,[೬೬ಇ] ಛಬ್ಬಿ,[೬೭ಈ] ಬುಡರಸಿಂಗಿ,[೬೮] ಹಳೇಹುಬ್ಬಳ್ಳಿ,[೬೯] ಹುಬ್ಬಳ್ಳಿ,[೭೦] ಗುಡಗೇರಿ,[೭೧] ಬಾಗವಾಡ,[೭೨] ಶಿರೂರು,[೭೩] ಅದರಗುಂಚಿ,[೭೪] ಇನ್ನೂ ಅನೇಕ ಗ್ರಾಮಗಳಲ್ಲಿ ಇಂತಹ ಶಾಸನ ಶಿಲ್ಪಗಳು ಕಂಡು ಬರುತ್ತವೆ.

೪.೩ ವೀರಗಲ್ಲು ಶಿಲ್ಪಗಳು

ಯುದ್ದದಲ್ಲಿ ಹೋರಾಡಿ ಮಡಿದ ನಂತರ ಆತನ ಸ್ಮರಣೆಗಾಗಿ ನಿಲ್ಲಿಸಿದ ಶಿಲ್ಪಗಳೇ ವೀರಗಲ್ಲುಗಳು. ಇವು ಧಾರವಾಡ ಜಿಲ್ಲೆಯಾದಾದ್ಯಂತ ಹೇರಳವಾಗಿವೆ. ಇವುಗಳ ಶಿಲ್ಪಗಳನ್ನು ಶಾಸನಸಹಿತ ಶಿಲ್ಪಗಳು ಮತ್ತು ಶಾಸನರಹಿತ ಶಿಲ್ಪಗಳೆಂದು ಎರಡು ಭಾಗಗಳಿವೆ. ಶಾಸನವಿರಲಿ ಅಥವಾ ಇಲ್ಲದೇ ಇರಲಿ ವೀರಗಲ್ಲುಗಳನ್ನು ನಿಲ್ಲಿಸುವ ಉದ್ದೇಶ ಒಂದೇ ಆಗಿದ್ದಿತು. ಅಂದರೆ ಯುದ್ದದಲ್ಲಿ ಸೋಲುವುದು ಅಥವಾ ಗೆದ್ದು ಬರುವುದು ಎರಡಕ್ಕೂ ಸಮನ ಗೌರವವೂ ಆಗಿತ್ತು. ಅಂದರೆ ಮೃತ್ಯು ಕ್ಷಣಿಕ ದುಖಃತಂದರೆ ಸೋತು ಮಾನಭಂಗವಾದಾಗ ಅದು ದಿನನಿತ್ಯವೂ ದುಖಃವನ್ನು ತರುವಂತಹದ್ದಾಗಿರುತ್ತದೆ.

ವ್ಯಕ್ತಿ-ವ್ಯಕ್ತಿಗಳ ಹೋರಾಟ ಶಿಲ್ಪ, ವ್ಯಕ್ತಿ-ಪ್ರಾಣಿಗಳ ಹೋರಾಟ ಶಿಲ್ಪ, ಪ್ರಾಣಿ-ಪ್ರಾಣಿಗಳ ಹೋರಾಟ ಶಿಲ್ಪ ಮತ್ತು ವೀರಸ್ಥಂಭಗಳ ಶಿಲ್ಪ ಎಂದು ವಿಭಾಗಿಸಲಾಗಿದೆ. ಕರ್ನಾಟಕದಲ್ಲಿ ಲಿಪಿ ಇಲ್ಲದ ವೀರಗಲ್ಲುಗಳೇ ಹೆಚ್ಚು ಕಂಡು ಬಂದಿದ್ದು, ಪ್ರಸ್ತುತ ಧಾರವಾಡ ಜಿಲ್ಲೆಯ ಲಿಪಿ ಇಲ್ಲದೇ ಇರುವಂತಹ ವೀರಗಲ್ಲುಗಳೇ ಹೆಚ್ಚಿನ ಮಟ್ಟಿಗೆ ಇವೆ.

೪.೩.೧ ವ್ಯಕ್ತಿ-ವ್ಯಕ್ತಿ ಹೋರಾಟ ಶಿಲ್ಪಗಳು

ವ್ಯಕ್ತಿ-ವ್ಯಕ್ತಿ ಹೋರಾಡುತ್ತಿದ್ದ ಶಿಲ್ಪವು ಪ್ರಾಣ, ಆಸ್ತಿ, ಸ್ತ್ರೀ, ಗೋವುಗಳ ರಕ್ಷಣೆಗಳಿಗೋಸ್ಕರ ಶತ್ರುಗಳ ಜೊತೆ ಹೋರಾಡುತ್ತಿರುವಂತಹ ಶಿಲ್ಪಗಳನ್ನು ಗಮನಿಸಿದ್ದೇವೆ. ಒಟ್ಟಾರೆ ಅನ್ನದ ಋಣಕ್ಕಾಗಿ ತನ್ನ ಒಡೆಯನ, ಊರಿನ ಸ್ತ್ರೀಯರ, ಗೋವುಗಳ ರಕ್ಷಣೆಗೋಸ್ಕರ ವೈರಿಗಳ ವಿರುದ್ದ ಹೋರಾಡುವ ಶಿಲ್ಪಗಳನ್ನೇ ವ್ಯಕ್ತಿ-ವ್ಯಕ್ತಿಗಳ ಹೋರಾಟದ ಶಿಲ್ಪಗಳೆನ್ನಲಾಗುತ್ತಿದೆ. ಪ್ರಸ್ತುತ ಅಧ್ಯಯನದ ದೃಷ್ಟಿಯಿಂದ

ತುರುಗೋಳ್‌ಶಿಲ್ಪ, ಪೆಣ್ಬುಯಲ್‌ಶಿಲ್ಪ, ಊರಳಿವುಶಿಲ್ಪ, ಗಡಿಕಾಳಗ ಮತ್ತು ಕಳ್ಳರೊಡನೆ ಹೋರಾಟದ ಶಿಲ್ಪಗಳೆಂದು ವಿಭಾಗಿಸಿಕೊಂಡು ಅಧ್ಯಯನ ಮಾಡಲಾಗಿದೆ.

ತುರುಗೋಳ್

ಸಂಸ್ಕೃತದ 'ಗೋಗ್ರಹಣ' ಎಂಬ ಪದಕ್ಕೆ ಸಮಾನಾಂತರವಾಗಿ ತುರುಗೋಳ್ ಎಂಬ ಪದ ಬಳಕೆಯಲ್ಲಿದ್ದುದನ್ನು ಕಾಣುತ್ತೇವೆ. ವೈರಿಗಳನ್ನು, ಊರುಗಳನ್ನು, ಸ್ತ್ರೀಯರ ಮಾನ ರಕ್ಷಿಸುವುದು ಒಬ್ಬ ವೀರನ ಕರ್ತವ್ಯವಾಗಿದ್ದು, ಇಂತಹ ಸಂದರ್ಭದಲ್ಲಿ ಅವನು ಪ್ರಾಣವನ್ನು ಲೆಕ್ಕಿಸದೇ ಹೋರಾಡುತ್ತಿದ್ದರು ಇಂತಹ ವೀರರ ಸ್ಮರಣಾರ್ಥವಾಗಿ ನಿಲ್ಲಿಸಿದ ವೀರಗಲ್ಲುಗಳಲ್ಲಿ ಒಂದು ಕಡೆ ಗೋವುಗಳನ್ನು ಚಿತ್ರಿಸಲಾಗುತ್ತಿದ್ದು, ಇದನ್ನು ತುರುಗೋಳ್ ವೀರಗಲ್ಲುಗಳೆಂದು ಕರೆಯಲಾಗುತ್ತದೆ.

ಈ ರೀತಿಯ ಶಿಲ್ಪಗಳನ್ನು ಗುರುತಿಸುವುದು ಸುಲಭ ವೀರನು ಹೋರಾಟಕ್ಕೆ ಸನ್ನದ್ದನಾಗಿರುವುದರ ಜೊತೆಗೆ ಯಾವುದಾದರೊಂದು ಕಡೆ ದನಗಳು ನಿಂತಿರುವಂತೆ ಚಿತ್ರಿಸಿರುತ್ತಾರೆ. ನಂತರದ ಕಾಲಘಟ್ಟದಲ್ಲಿ ಎರಡು, ನಾಲ್ಕು, ಹಂತದವರೆಗೆ ಶಿಲ್ಪವಿದ್ದು ಹೋರಾಟದ ಹಂತದಲ್ಲಿ ದನಗಳು ಸಾಲಾಗಿ ನಿಂತಿರುವಂತೆ ಕಾಣುತ್ತೇವೆ.

ಪ್ರಸ್ತುತ ಅಧ್ಯಯನ ಪ್ರದೇಶದಲ್ಲಿ ಶಾಸನ ಸಹಿತ ಹಾಗೂ ಶಾಸನರಹಿತ ಶಿಲ್ಪಗಳಿವೆ. ಅವುಗಳನ್ನು ಇಲ್ಲಿ ಸೀಮಿತವಾಗಿ ಚರ್ಚಿಸಿ ಇನ್ನುಳಿದವುಗಳನ್ನು ಅಧ್ಯಾಯದ ಕೊನೆಯಲ್ಲಿ ಪಟ್ಟಿಮಾಡಲಾಗಿದೆ.

ಶಾಸನಸಹಿತ ಶಿಲ್ಪ ತಂಬೂರನಲ್ಲಿದ್ದು,[೨೫] ಇದು ಬಸವಣ್ಣನ ಗುಡಿಗೆ ಹೋಗುವ ದಾರಿಯಲ್ಲಿದೆ. ಇಲ್ಲಿ ವೀರ ಹಾಗೂ ಸೈನ್ಯ ಪರಿವಾರದವರು ವೈರಿಗಳ ವಿರುದ್ದ ಹೊರಾಡುತ್ತಿರುವ ದೃಶ್ಯವಿದ್ದು, ಬಲಗಡೆಯ ಕೈಯಲ್ಲಿ ಕತ್ತಿಯನ್ನು, ಎಡಗಡೆ ಕೈಯಲ್ಲಿ ಗುರಾಣಿಯನ್ನು ಹಿಡಿದಿದ್ದಾನೆ. ಇವನ ಎಡಭಾಗದಲ್ಲಿ ದನಗಳು ತದೇಕ ಚಿತ್ತದಿಂದ ತಮ್ಮ ಕಿವಿ ಹಾಗೂ ಬಾಲವನ್ನು ಏರಿಸಿಕೊಂಡು ನೋಡುತ್ತಿವೆ. ಜೊತೆಗೆ ದನಗಳನ್ನು ಅಪಹರಣ ಮಾಡಲುಬಂದ ಶತ್ರುಗಳು ಕೆಳಭಾಗದಲ್ಲಿ ಸತ್ತು ಬಿದ್ದಿರುವ ದೃಶ್ಯವಿದೆ.

ಗಬ್ಬೂರ[೨೬] ಆಂಜನೇಯ ದೇವಾಲಯದ ಮುಂಭಾಗದಲ್ಲಿ ಮತ್ತೊಂದು ಶಾಸನಶಿಲ್ಪ ಕಾಣಸಿಗುತ್ತದೆ. ಇದು ಮೂರು ದೃಶ್ಯಗಳಿಂದ ಕೂಡಿದ್ದು, ವೀರರು ಮತ್ತು ಆತನ ಸಹಚರರು ಕೈಯಲ್ಲಿ ಕತ್ತಿಯನ್ನು ಹಿಡಿದಿದ್ದು, ವೈರಿ ಪಡೆಯ ಜೊತೆಗೆ ಹೋರಾಡುತ್ತಿರುವ ದೃಶ್ಯವಿದೆ. ಇದರಲ್ಲಿ ಒಬ್ಬ ವೈರಿ ಕೆಳಗೆ ಬಿದ್ದು ಮರಣವನ್ನು ಹೊಂದಿದ್ದು, ಇವರಿಬ್ಬರ ಕೆಳಭಾಗದಲ್ಲಿ ಹಸುಗಳು ಚದುರಿವೆ. ಎರಡನೆ ಪಟ್ಟಿಕೆಯಲ್ಲಿ ಇಬ್ಬರು ಅಪ್ಸರೆಯರು ವೀರನನ್ನು ಕರೆದುಕೊಂಡು ಹೋಗುತ್ತಿದ್ದಾರೆ. ಬದಿಗಳಲ್ಲಿ ಚಾಮರಧಾರಿಯರಿದ್ದು, ಒಂದು ಕೈಯಲ್ಲಿ ಚಾಮರವನ್ನು ಮತ್ತೊಂದು ಕೈಯನ್ನು ಸೊಂಟದ ಮೇಲೆ ಇಟ್ಟುಕೊಂಡಿದ್ದಾರೆ. ಜೊತೆಗೆ ಅವರು ಒಂದು ಕಾಲನ್ನು ಹಿಂದಕ್ಕೆ ಮಾಡಿ ನಿಂತಿದ್ದಾರೆ. ಮತ್ತು ಇವರು ಕೇಶವನ್ನು ಮೇಲಕ್ಕೆತ್ತಿ ಕಟ್ಟಿದ್ದಾರೆ. ಒಟ್ಟಾರೆ ಶಿಲ್ಪದಲ್ಲಿ ವೀರನು

ಕಿರೀಟದಾರಿಯಾಗಿದ್ದು, ವೀರ ಹಾಗೂ ಅಪ್ಸರೆಯರು ಕಟಿವಸ್ತ್ರಧಾರಿಗಳಾಗಿದ್ದಾರೆ. ನೇರಿಗೆಗಳು ನೈಜರೀತಿಯಲ್ಲಿವೆ ಎಂಬಂತೆ ಕಾಣಿಸುತ್ತವೆ.

ಅಂಬಳ್ಳಿ[೭೭] ಪರಸಪ್ಪ ತಾಂಬೆ ಅವರ ಹೊಲದಲ್ಲಿ ಮತ್ತೊಂದು ಶಾಸನಶಿಲ್ಪವಿದ್ದು, ಇದು ನಾಲ್ಕು ಪಟ್ಟಿಕೆಯಿಂದ ಕೂಡಿದೆ. ಕೆಳಗಿನ ಪಟ್ಟಿಕೆಯಲ್ಲಿ ವೀರನು ಬಿಲ್ಲು-ಬಾಣಗಳನ್ನು ಹಿಡಿದುಕೊಂಡಿದ್ದು, ವೈರಿಗಳ ಜೊತೆ ಹೋರಾಡುತ್ತಿರುವ ದೃಶ್ಯವಿದೆ. ವೀರನ ಹಿಂಬದಿಯಲ್ಲಿ ಗೋವುಗಳು ಸಾಲಾಗಿ ನಿಂತುಕೊಂಡಿವೆ. ಇನ್ನು ಎರಡನೆಯ ಪಟ್ಟಿಕೆಯಲ್ಲಿ ವೀರನನ್ನು ಅಪ್ಸರೆಯರು ತಮ್ಮ ಭುಜಗಳ ಮೇಲೆ ಕೈ ಹಾಕಿಕೊಂಡು ದೇವಲೋಕಕ್ಕೆ ಕೊಂಡೊಯ್ಯುವಂತೆ, ಹಾರುತ್ತಿರುವಂತೆ ಚಿತ್ರಿಸಲಾಗಿದೆ. ಮೂರನೆಯ ಪಟ್ಟಿಕೆಯಲ್ಲಿ ವೀರನು ಪೀಠದ ಮೇಲೆ ಸುಖಾಸೀನನಾಗಿ ಕುಳಿತಿದ್ದಾನೆ. ಇವನ ತಲೆಯ ಮೇಲೆ ಕಿರೀಟವಿದ್ದುದಲ್ಲದೇ, ಆಭರಣಗಳಿಂದ ಭೂಷಿತನಾಗಿದ್ದಾನೆ. ಅದೇ ರೀತಿಯಾಗಿ ಇಕ್ಕೆಲಗಳಲ್ಲಿ ಚಾಮರಧಾರಿಯರಿದ್ದು, ಇವರು ತ್ರಿಭಂಗಿಯಲ್ಲಿ ನಿಂತಿದ್ದಾರೆ. ಇವರೂ ಸಹ ಆಭರಣಗಳನ್ನು ಧರಿಸಿರುವುದು ಕಂಡು ಬರುತ್ತದೆ. ಇನ್ನು ನಾಲ್ಕನೆಯ ಪಟ್ಟಿಕೆಯು ಚಿಕ್ಕದಾಗಿದ್ದು, ಮಂಟಪದಲ್ಲಿ ಶಿವಲಿಂಗ ಮತ್ತು ಎಡ-ಬಲಗಡೆಗಳಲ್ಲಿ ಸೂರ್ಯ-ಚಂದ್ರರನ್ನು ಕಾಣುತ್ತೇವೆ.

ಅದೇ ರೀತಿಯಾಗಿ ನವಲಗುಂದ ತಾಲೂಕಿನ ಶಿಶುವಿನಹಳ್ಳಿಯಲ್ಲಿ[೭೮] ನಾಲ್ಕು ಪಟ್ಟಿಕೆಯಿಂದ ಕೂಡಿದ ಶಾಸನ ಶಿಲ್ಪ ಇದೆ. ಕೆಳಗಿನ ಪಟ್ಟಿಕೆಯಲ್ಲಿ ವೀರನು ಬಿಲ್ಲು-ಬಾಣಗಳನ್ನು ಹಿಡಿದು ವೈರಿಗಳ ಜೊತೆ ಹೋರಾಡುತ್ತಿರುವ ದೃಶ್ಯವಿದ್ದು, ಹಿಂಬದಿಯಲ್ಲಿ ಗೋವುಗಳು ಇವನನ್ನು ತದೇಕ ಚಿತ್ತದಿಂದ ನೋಡುತ್ತಿವೆ. ಎರಡನೆಯ ಪಟ್ಟಿಕೆಯಲ್ಲಿ ವೀರನನ್ನು ಅಪ್ಸರೆಯರು ದೇವಲೋಕಕ್ಕೆ ಕರೆದೊಯ್ಯುತ್ತಿದ್ದು, ಇವರು ಒಂದು ಕೈಯಲ್ಲಿ ವೀರನನ್ನು ಹಿಡಿದುಕೊಂಡಿದ್ದು, ಮತ್ತೊಂದು ಕೈಯಲ್ಲಿ ಕುಂಭವನ್ನು ಹಿಡಿದುಕೊಂಡಿದ್ದಾರೆ. ಮೂರನೆಯ ಪಟ್ಟಿಕೆಯಲ್ಲಿ ವೀರನು ಪದ್ಮಾಸನದಲ್ಲಿ ಕುಳಿತಿದ್ದು, ತನ್ನ ಎರಡು ಕೈಗಳನ್ನು ತೊಡೆಗಳ ಮೇಲೆ ಇಟ್ಟುಕೊಂಡಿದ್ದಾನೆ. ಇವನ ಅಕ್ಕ-ಪಕ್ಕದಲ್ಲಿ ಅಪ್ಸರೆಯರು ತ್ರಿಭಂಗಿಯಲ್ಲಿ ನಿಂತಿದ್ದಾರೆ. ಇವರು ತಮ್ಮ ಎಡಗೈಯಲ್ಲಿ ಚೌರಿಯನ್ನು ಹಿಡಿದಿದ್ದರೆ, ಬಲಗೈಯನ್ನು ಸೊಂಟದ ಮೇಲಿಟ್ಟುಕೊಂಡಿದ್ದಾರೆ. ಇನ್ನು ಮೇಲ್ಭಾಗದ ಪಟ್ಟಿಕೆಯು ತ್ರಿಕೋನಾಕಾರದಲ್ಲಿದ್ದು, ಮಧ್ಯದ ಮಂಟಪದಲ್ಲಿ ಶಿವಲಿಂಗವಿದೆ. ಈ ಮಂಟಪದ ಎರಡೂ ಕಡೆ ವಿರುದ್ಧ ದಿಕ್ಕಿನಲ್ಲಿ ಕುಳಿತ ಸಿಂಹವ್ಯಾಳಿಗಳು ಕಂಡು ಬರುತ್ತವೆ. ಪ್ರಸ್ತುತ ಈ ಜಿಲ್ಲೆಯಲ್ಲಿ ಕಂಡು ಬರುವ ಶಾಸನೋಕ್ತ ವೀರಗಲ್ಲುಗಳಿಂದ ಕೂಡಿದ ಗ್ರಾಮಗಳೆಂದರೆ. ಎಲಿವಾಳ,[೭೯] ಎಲಿವಾಳ,[೮೦] ಬೆಣಚಿ,[೮೧] ಡೋರಿ,[೮೨] ಮಾವಳ್ಳಿ,[೮೩] ಕಲ್ಲಾಪೂರ,[೮೪] ಛಬ್ಬಿ,[೮೫] ಗಬ್ಬೂರು,[೮೬] ಮುಗುದ,[೮೭] ಅಣ್ಣಿಗೇರಿ,[೮೮] ಕಟ್ನೂರು,[೮೯] ವರೂರು,[೯೦] ಹಳೆತೆಗೂರು,[೯೧] ಬೆಳಗಲಿ,[೯೨] ಬ್ಯಾಹಟ್ಟಿ,[೯೩] ಛಬ್ಬಿ,[೯೪]ಪ್ರದೇಶಗಳಲ್ಲಿ ಕಂಡು ಬರುತ್ತವೆ.

ಊರಳಿವು

ಕಳ್ಳರು ಗೋವುಗಳನ್ನು ಕದ್ದು ಸ್ತ್ರೀಯರ ಮಾನಭಂಗಗೊಳಿಸಿ, ಊರನ್ನು ನಾಶಮಾಡುತ್ತಿದ್ದರು ಇದೇ ಊರಳಿವು ಅಥವಾ ಊರಿನನಾಶ.[೯೫] ಕೆಲವು ಸನ್ನಿವೇಶದಲ್ಲಿ ಒಂದೂರಿನಿಂದ ಮತ್ತೊಂದೂರಿನವರಿಗೆ ಯಾವುದೋ ಕಾರಣಕ್ಕಾಗಿ ಯುದ್ಧಗಳು ನಡೆಯುವಂತಹ ಸಂದರ್ಭವಿದ್ದಲ್ಲಿ

ಇಂತಹ ಸಮಯದಲ್ಲಿ ವೀರನಾದವನು ತನ್ನ ವೈರಿಯ ಜೊತೆ ವೀರಾವೇಶದಿಂದ ಹೋರಾಡಿ ತನ್ನ ಊರಿನ ಜನಗಳನ್ನು ರಕ್ಷಿಸುವುದು ಅವನ ಆದ್ಯ ಕರ್ತವ್ಯವಾಗಿದ್ದಿತು. ಇಂತಹ ಯುದ್ದಗಳಲ್ಲಿ ಮರಣ ಹೊಂದಿದವರ ನೆನಪಿಗಾಗಿ ನಿಲ್ಲಿಸಿದ ಸ್ಮಾರಕಗಳೇ ಊರಳಿವು ಸ್ಥಂಭಗಳಾಗಿವೆ.

ಇವುಗಳನ್ನು ವೀರಗಲ್ಲುಗಳಂತೆ, ಪೆಬ್ಬುಯಿಲ್ ಹಾಗೂ ತುರುಗೋಳಿನ ಶಿಲ್ಪಗಳಂತೆ ಗುರುತಿಸಲು ಕಷ್ಟಸಾಧ್ಯ, ಜೊತೆಗೆ ದೊರೆತ ಶಾಸನ ಪಾಠಗಳಿಂದ ಊರಳಿವಿನ ವಿಷಯ ತಿಳಿದು ಬರುತ್ತದೆ. ಪ್ರಸ್ತುತ ಕಲ್ಲೆ,[೯೬] ಗ್ರಾಮದಲ್ಲಿ ಈ ರೀತಿಯ ಶಾಸನ ರಹಿತ ಶಿಲ್ಪವು ಕಂಡು ಬರುತ್ತದೆ.

ಗಡಿಕಾಳಗ

ಪ್ರಾಚೀನ ಕಾಲದಿಂದಲೂ ಒಂದು ಊರಿನಿಂದ-ಇನ್ನೊಂದೂರಿನ ನಡುವೆ ಗಡಿಗಳ ಸಂಬಂಧ ಅಥವಾ ಸೀಮೆಯ ವಿಷಯವಾಗಿ ಅನೇಕ ಜಗಳಗಳಾಗುತ್ತಿದ್ದು, ಕೊನೆಗೆ ಹೊಡೆದಾಟದ ಹಂತಕ್ಕೆ ತಲುಪುತ್ತಿದ್ದ ಪ್ರಸಂಗಗಳು ಇವೆ. ಜೊತೆಗೆ ಆಡಳಿತದ ದೃಷ್ಟಿಯಿಂದ ಒಂದೊಂದು ಗ್ರಾಮವೂ ಸ್ವತಂತ್ರವಾಗಿದ್ದು, ಆಯಾ ಊರಿನ ಗಡಿಗಳ ಜನಗಳೇ ಹೊಡೆದಾಡುತ್ತಿದ್ದರು.[೯೭] ಕೆಲವು ಸಂದರ್ಭದಲ್ಲಿ ರಾಜ್ಯದ ಗಡಿ ವಿಷಯದಲ್ಲಿ ಭಿನ್ನಾಭಿಪ್ರಾಯಗಳು ಉದ್ಭವಿಸಿ ಯುದ್ದಗಳಾಗುತ್ತಿದ್ದವು. ಇಂತಹ ಯುದ್ದಗಳಲ್ಲಿ ವೀರಮರಣವನ್ನಪ್ಪಿದಾಗ ಅವರ ನೆನಪಿಗಾಗಿ ಅನೇಕ ಶಾಸನಗಳು ದೊರೆಯುತ್ತವೆ. ಇಂತಹ ಶಾಸನಗಳ ಶಿಲ್ಪಗಳನ್ನು ಗಡಿಕಾಳಗ ಶಾಸನಶಿಲ್ಪ ಎಂದು ಹೇಳುತ್ತೇವೆ. ಪ್ರಸ್ತುತ ಧಾರವಾಡ ಜಿಲ್ಲೆಗೆ ಸಂಬಂಧಿಸಿದ ಶಾಸನರಹಿತ ಶಿಲ್ಪಗಳು ತಂಬೂರು,[೯೮] ಎಲಿವಾಳ,[೯೯] ಗ್ರಾಮಗಳಲ್ಲಿ ದೊರೆತಿವೆ.

೪.೩.೨ ವ್ಯಕ್ತಿ-ಪ್ರಾಣಿಗಳ ಹೋರಾಟದ ಶಿಲ್ಪ

ಪ್ರಾಚೀನ ಕಾಲದಿಂದಲೂ ಮಾನವನು ಹಲವಾರು ಪ್ರಾಣಿಗಳನ್ನು ಬೇಟೆಯಾಡುತ್ತಿದ್ದನು ಎಂಬುದರ ಬಗ್ಗೆ ಕನ್ನಡ ಕಾವ್ಯಗಳಲ್ಲಿ ರಾಜರುಗಳು ಬೇಟೆಯಾಡುತ್ತಿರುವ ವಿಧಾನ ಮತ್ತು ನೈಪುಣ್ಯತೆಗಳ ಕುರಿತು ಉಲ್ಲೇಖಗಳಿವೆ.[೧೦೦] ಪ್ರಾಣಿಗಳು ಊರೊಳಗೆ ನುಗ್ಗಿ ಅಲ್ಲಿನ ಜನಗಳಿಗೆ ಅವರು ಬೆಳೆದ ಬೆಳೆಗಳಿಗೆ, ದನ ಕರುಗಳಿಗೆ ತೊಂದರೆಗಳನ್ನು ಕೊಡುತ್ತಿದ್ದವು ಆ ಪ್ರಾಣಿಗಳೊಡನೆ ಹೋರಾಟದಲ್ಲಿ ಮರಣವನ್ನಪ್ಪಿದಾಗ ಅವರ ನೆನಪಿಗಾಗಿ ನಿಲ್ಲಿಸಿದ ಶಾಸನಗಳು ದೊರೆಯುತ್ತವೆ. ಮುಖ್ಯವಾಗಿ ವ್ಯಕ್ತಿ-ಪ್ರಾಣಿಗಳ ಹೋರಾಟದ ಶಿಲ್ಪಗಳಲ್ಲಿ ವ್ಯಕ್ತಿಯು ಹಂದಿ, ಹುಲಿ, ಆನೆ ಇತರೆ ಪ್ರಾಣಿಗಳೊಂದಿಗೆ ಹೊರಾಡುತ್ತಿರುವಂತಹ ಶಿಲ್ಪಗಳನ್ನು ಇಲ್ಲಿ ದಾಖಲಿಸಲಾಗಿದೆ.

ಹುಲಿ ಬೇಟೆಶಿಲ್ಪ

ಮಾನವನಿಗಿಂತ ಬಲಿಷ್ಟವಾದ ಕ್ರೂರ ಪ್ರಾಣಿಗಳಲ್ಲಿ ಹುಲಿ ಒಂದಾಗಿದೆ. ಹುಲಿಯನ್ನು ಬೇಟೆಯಾಡಲು ಬಹಳ ಧೈರ್ಯಶಾಲಿಯಾಗಿರಬೇಕು. ಇಂತಹ ಬಲಿಷ್ಠ ಪ್ರಾಣಿಯೊಂದಿಗೆ ಹೋರಾಡಿ ವೀರ ಮರಣವನ್ನಪ್ಪಿದ ವಿಷಯ ವೀರಗಲ್ಲುಗಳಲ್ಲಿ ದೊರೆಯುತ್ತವೆ. ಪ್ರಸ್ತುತ ಈ ಅಧ್ಯಯನ ಪ್ರದೇಶದಲ್ಲಿ ಶಾಸನ ರಹಿತ ಶಿಲ್ಪಗಳು ಅಣ್ಣಿಗೇರಿ,[೧೦೧] ಕಂದಲಿ,[೧೦೨] ತಂಬೂರು,[೧೦೩] ಭೋಗೂರು,[೧೦೪] ಗ್ರಾಮಗಳಲ್ಲಿ ದೊರೆಯುತ್ತವೆ.

ಹಂದಿ ಬೇಟೆ ಶಾಸನಶಿಲ್ಪ

ರೈತನ ವೈರಿಯಾಗಿರುವಂತಹ ಈ ಹಂದಿಯು ರಾತ್ರಿಯ ವೇಳೆಯಲ್ಲಿ ಬೆಳೆಗಳಿಗೆ ನುಗ್ಗಿ ಅದನ್ನು ತಿನ್ನುತ್ತಿದ್ದಲ್ಲದೇ ಹೆಚ್ಚಾಗಿ ಬೆಳೆಯನ್ನು ನಾಶ ಮಾಡುತ್ತಿದ್ದವು. ಇಂತಹ ಸಂದರ್ಭದಲ್ಲಿ ಇದರ ಹಾವಳಿಯನ್ನು ತಡೆಯಲು ಅದರೊಟ್ಟಿಗೆ ಬೇಟೆಯಾಡಲು ಹೋಗಿ ಪ್ರಾಣ ಕಳೆದುಕೊಂಡ ವಿಷಯವನ್ನು ತಿಳಿಸುವ ಶಾಸನ ಶಿಲ್ಪಗಳೇ ಹಂದಿ ಬೇಟೆ ಶಾಸನಶಿಲ್ಪಗಳಾಗಿವೆ. ಪ್ರಸ್ತುತ ಈ ರೀತಿಯ ಶಾಸನ ರಹಿತ ಶಿಲ್ಪವು ಧಾರವಾಡ ತಾಲೂಕಿನ ಕಲ್ಲೂರ,[೧೦೫] ಹಿರೇಹೊನ್ನಳ್ಳಿ,[೧೦೬] ಗ್ರಾಮಗಳಲ್ಲಿ ಕಂಡು ಬರುತ್ತವೆ.

೪.೪ ಮಹಾಸತಿ ಶಿಲ್ಪಗಳು

ಲೌಕಿಕ ಬಲಿದಾನ ಶಾಸನಶಿಲ್ಪಗಳಲ್ಲಿ ಮಹಾಸತಿ ಶಿಲ್ಪಗಳು ಪ್ರಮುಖ ಸ್ಥಾನವನ್ನು ಪಡೆದುಕೊಂಡಿವೆ. ಪತಿಯು ಮಡಿದಾಗ ಅವನ ಸತಿಯೂ ಕೂಡಾ ಬೆಂಕಿಗೆ ಬಿದ್ದು ಪ್ರಾಣವನ್ನು ಅರ್ಪಿಸುವ ಅದರ ನೆನಪಿಗಾಗಿ ನಿಲ್ಲಿಸಿದ ಶಾಸನಶಿಲ್ಪಗಳೇ ಮಹಾಸತಿ ಶಿಲ್ಪಗಳಾಗಿವೆ. ಮಹಾಸತಿಯ ಅರ್ಥ, ಪ್ರಾಚೀನತೆ, ಆಚರಣೆ ಬಗ್ಗೆ ಅಧ್ಯಾಯ ಮೂರರಲ್ಲಿ ಚರ್ಚಿಸಲಾಗಿದ್ದು, ವೈವಿಧ್ಯತೆಯ ದೃಷ್ಟಿಯಿಂದ ಎರಡು ಭಾಗವಿದೆ. ಸಹಗಮನಶಿಲ್ಪ, ಅನುಗಮನಶಿಲ್ಪಗಳಾಗಿವೆ.

ಸಹಗಮನ ಶಿಲ್ಪ: ಪತಿಯು ಮರಣವನ್ನಪ್ಪಿದಾಗ ಅವನ ಜೊತೆಯಲ್ಲಿಯೇ ಚಿತೆಗೆ ಹಾರಿ ಪ್ರಾಣ ಬಿಡುತ್ತಿದ್ದ ಆಚರಣೆ ಸಹಗಮನ ಎಂದು ಹೇಳಲಾಗಿದೆ. ಪ್ರಸ್ತುತ ಅಧ್ಯಯನ ಪ್ರದೇಶದಲ್ಲಿ ಸಹಗಮನ ಶಿಲ್ಪಗಳಿವೆ.

ಅನುಗಮನ ಶಿಲ್ಪ: ಪತಿಯು ದೂರದಲ್ಲಿ ಮಡಿದ ಸುದ್ದಿಯನ್ನು ತಿಳಿದು ಚಿತೆಯನ್ನು ಏರ್ಪಡಿಸಿಕೊಂಡು ಪ್ರಾಣವನ್ನು ಬಿಡುವ ಪದ್ದತಿಯೇ ಅನುಗಮನ ಪದ್ದತಿಯಾಗಿದೆ. ಈ ಶಿಲ್ಪಗಳನ್ನು ಪೂರ್ಣಸತಿಶಿಲ್ಪ, ಪೂರ್ಣಸತಿ ಮತ್ತು ಇತರೆಶಿಲ್ಪ, ಇಬ್ಬರ ಸತಿಯರ ಪೂರ್ಣಶಿಲ್ಪ, ವೀರಮಹಾಸತಿಶಿಲ್ಪ, ಒಕ್ಕೈಮಾಸ್ತಿ, ಇಕ್ಕೈಮಾಸ್ತಿ, ಬಹುಕೈ ಮಾಸ್ತಿಶಿಲ್ಪಗಳಾಗಿವೆ. ಶಾಸನ ಸಹಿತ ಶಿಲ್ಪಗಳು ಭೈರಿದೇವರಕೊಪ್ಪ,[೧೦೭] ಕಟ್ನೂರು,[೧೦೮] ನೂಲ್ವಿ[೧೦೯] ಪ್ರದೇಶಗಳಾದರೆ, ಶಾಸನರಹಿತ ಶಿಲ್ಪಗಳು ಮನಗುಂಡಿ,[೧೧೦] ಕುಂದಗೋಳ,[೧೧೧] ಹಿರೇಹೊನ್ನಳ್ಳಿ,[೧೧೨] ಸೋಮನಕೊಪ್ಪ,[೧೧೩] ದ್ಯಾವನಕೊಪ್ಪ[೧೧೪] ಗಂಜೀಗಟ್ಟಿ[೧೧೫] ಮಡಕಿಹೊನ್ನಳ್ಳಿ,[೧೧೬] ಹಟಕಿನಾಳ,[೧೧೭] ಕಲ್ಲಾಪೂರ,[೧೧೮] ಪ್ರದೇಶದಲ್ಲಿ ಕಂಡು ಬರುತ್ತವೆ..

೪.೫ ಗೋಸಾಸ ಶಾಸನಶಿಲ್ಪಗಳು

ಪ್ರಾಚೀನ ಕಾಲಘಟ್ಟದಲ್ಲಿ ಗೋದಾನವು ಶ್ರೇಷ್ಠ ದಾನವಾಗಿದೆ. ಅವುಗಳು ಸಂಪತ್ತಿನ ಸಂಕೇತ ಗೋವುಗಳನ್ನು ದಾನ ಮಾಡಿದ ಸಂದರ್ಭದಲ್ಲಿ ನಿಲ್ಲಿಸುತ್ತಿದ್ದ ಶಾಸನಗಳ ಶಿಲ್ಪಗಳನ್ನೇ ಗೋಸಾಸ ಶಿಲ್ಪಗಳು.

ಗೋಸಾಸ ಶಾಸನದ ಬಗ್ಗೆ ಋಗ್ವೇದ, ಮತ್ಸ್ಯಪುರಾಣ ಮತ್ತು ಲಿಂಗಪುರಾಣದಲ್ಲಿ ಮಾಹಿತಿಗಳನ್ನು ನೀಡಲಾಗಿದೆ. ದಾನನೀಡುವ ವ್ಯಕ್ತಿ ಒಂದರೆಡು ದಿನಗಳ ಕಾಲ ಹಾಲನ್ನು ಸೇವಿಸಿ

ಉಪವಾಸವನ್ನು ಮಾಡಿ ಧ್ಯಾನ, ಹೋಮಗಳನ್ನು ಕೈಗೊಳ್ಳಬೇಕು. ಒಂದು ಬಲಿಷ್ಠವಾದ ಗೂಳಿಯನ್ನು ಎತ್ತರವಾದ ವೇದಿಕೆಯ ಮೇಲಿರಿಸಿ ಅದರೊಟ್ಟಿಗೆ ದಾನ ನೀಡಲು ತಂದಿರುವ ಒಂದು ಸಾವಿರ ಹಸುಗಳಲ್ಲಿ ಲಕ್ಷಣಗಳುಳ್ಳ ಹತ್ತು ಹಸುಗಳನ್ನು ಆರಿಸಿ ಅವುಗಳ ಕೊಂಬಿಗೆ ಚಿನ್ನದ ಕಳಸ, ವಸ್ತ್ರಾಭರಣಗಳಿಂದ ಅಲಂಕರಿಸಿ ಇವುಗಳ ಮಧ್ಯ ಬಂಗಾರದ ನಂದಿಯ ವಿಗ್ರಹವನ್ನಿಟ್ಟು ಅದಕ್ಕೆ ರೇಷ್ಮೆವಸ್ತ್ರ, ಸುಗಂಧ ದ್ರವ್ಯಗಳಿಂದ, ಹೂವುಗಳಿಂದ ಅಲಂಕರಿಸಿ ನಂತರ ದಾನ ನೀಡುವವನು ಸರ್ವಾಲಂಕಾರದಿಂದ ಕೈಯಲ್ಲಿ ಹೂವುಗಳೊಂದಿ ಹಸುಗಳಿಗೆ ಪುಣ್ಯನೀಡುವಂತೆ ಪ್ರಾರ್ಥಿಸುತ್ತಾನೆ. ಬ್ರಾಹ್ಮಣರ ಗುರುಗಳಿಗೆ ನಂದಿಕೇಶ್ವರನ ಪ್ರತಿಮೆಯನ್ನು ಜೊತೆಗೆ ಎರಡು ಅಥವಾ ಐದರಂತೆ ದಾನ ನೀಡಿ, ಒಂದು ದಿನ ಉಪವಾಸವನ್ನು ಮಾಡಿ ಶಿವನ ಆಶಿರ್ವಾದವನ್ನು ಮಾಡಿದ್ದಲ್ಲಿ, ಆಗ ಶಿವನು ಸ್ವರ್ಗದಲ್ಲಿರುವ ತಂದೆಯ, ತಾಯಿಯ ಕಡೆಯ ಹಿರಿಯರನ್ನು ಕಾಪಾಡುತ್ತಾನೆ ಎಂಬ ನಂಬಿಕೆಯಿದೆ.[೧೧೯]

ಸಾಮಾನ್ಯವಾಗಿ ಗೋಸಾಸ ಶಾಸನಶಿಲ್ಪಗಳಲ್ಲಿ ತಳಭಾಗ ಚೌಕಾಕಾರವಾಗಿದ್ದು, ಮೇಲ್ಭಾಗ ಅರ್ಧವೃತ್ತಾಕಾರವಾಗಿರುತ್ತದೆ. ಜೊತೆಗೆ ಪಂಚತಂತ್ರ ಕಥೆಯ ಚಿತ್ರಗಳು, ಹೂ, ಬಳ್ಳಿಗಳು, ಜೋಡೆತ್ತಿನಶಿಲ್ಪ, ಆನೆ, ಕಳಸ, ನೇಗಿಲು, ಕಮಲದ ಹೂ, ಇನ್ನೂ ಮುಂತಾದ ಚಿತ್ರಗಳನ್ನು ಕಾಣುತ್ತೇವೆ.

ಪ್ರಸ್ತುತ ಈ ಅಧ್ಯಯನ ಪ್ರದೇಶವಾದ ಧಾರವಾಡ ಜಿಲ್ಲೆಯಲ್ಲಿ ಇಂತಹ ಶಿಲ್ಪಗಳು ಅಣ್ಣಿಗೇರಿ,[೧೨೦] ಗುಡಗೇರಿ,[೧೨೧] ಮಾವಳ್ಳಿ,[೧೨೨] ಗ್ರಾಮಗಳಲ್ಲಿ ಕಂಡು ಬಂದಿದ್ದು, ಶಾಸನ ರಹಿತ ಶಿಲ್ಪಗಳನ್ನು ಅಧ್ಯಾಯದ ಕೊನೆಯಲ್ಲಿ ಕೊಡಲಾಗಿದೆ.

೪.೬ ನಿಷಿಧಿ ಶಾಸನಶಿಲ್ಪಗಳು

ಸನ್ಯಾಸನ ವಿಧಿಯಿಂದ ಮರಣವನ್ನಪ್ಪಿದಾಗ ಅವರ ನೆನಪಿಗಾಗಿ ನಿಲ್ಲಿಸಿದ ಸ್ಮಾರಕಗಳೇ ನಿಷಿಧಿಶಿಲ್ಪಗಳು. ಆಪತ್‌ಕಾಲದಲ್ಲಿ, ವೃದ್ಯಾಪ್ಯದಿಂದ, ಜರ್ಜರಿತನಾದರೆ, ಗುಣಪಡಿಸಲಾರದ ರೋಗದಿಂದ ಬಳಲುತ್ತಿದ್ದರೆ, ಬದುಕಿನ ಆಸೆ ಬತ್ತಿಹೋದಾಗ ಸಲ್ಲೇಖನ ವಿಧಾನದಿಂದ ಮರಣವನ್ನು ಆಹ್ವಾನಿಸುವುದೇ ಸಲ್ಲೇಖನ.[೧೨೩]

ನಿಷಿಧಿ ಶಾಸನಗಳ ಬಗ್ಗೆ ಅವುಗಳ ಪದನಿಷ್ಪತ್ತಿ, ಪ್ರಾಚೀನತೆ, ಸಂಪ್ರದಾಯ, ಶಾಸನಗಳ ಬಗ್ಗೆ ಅಧ್ಯಾಯ ನಾಲ್ಕರಲ್ಲಿ ಚರ್ಚಿಸಲಾಗಿದೆ. ಇನ್ನು ಶಿಲ್ಪದ ವೈಶಿಷ್ಟ್ಯತೆಯಿಂದ ಶಾಸನಸಹಿತ ನಿಷಿಧಿಶಿಲ್ಪಗಳು ಮತ್ತು ಶಾಸನರಹಿತ ನಿಷಿಧಿ ಶಿಲ್ಪಗಳೆಂದು ಅಧ್ಯಯನ ಮಾಡಲಾಗಿದೆ. ಸಾಮಾನ್ಯವಾಗಿ ನಿಷಿಧಿ ಶಾಸನಗಳ ಲಲಾಟಭಾಗದಲ್ಲಿ ಮುನಿಯೊಬ್ಬನು ಕುಳಿತ ಉಪದೇಶ ಮಾಡಿತ್ತಿರುವ ಮತ್ತು ಎದುರಿಗೆ ಮಂಡಿಯೂರಿ ಕುಳಿತ ವ್ಯಕ್ತಿಯ ಚಿತ್ರಣವಿರುತ್ತದೆ.

ಪ್ರಸ್ತುತ ಇಂತಹ ನಿಷಿಧಿ ಶಿಲ್ಪಗಳು ಹುಬ್ಬಳ್ಳಿ ತಾಲೂಕಿನ ಮಂಟೂರು[೧೨೪] ಗ್ರಾಮದ ವಲ್ಲಭೇಶ್ವರ ದೇವಸ್ಥಾನದ ಹಿಂಭಾಗದಲ್ಲಿ ಇದೆ. ಈ ಶಿಲ್ಪವು ಎರಡು ಪಟ್ಟಿಕೆಗಳಿಂದ ಕೂಡಿದ್ದು, ಮೊದಲನೆಯ ಪಟ್ಟಿಕೆಯ ಮಧ್ಯದಲ್ಲಿ ವ್ಯಾಸಪೀಠವಿದೆ. ಅದರ ಮೇಲೆ ಪುಸ್ತಕ ಇದೆ. ಈ

ವ್ಯಾಸಪೀಠದ ಎಡ-ಬದಿಗಳಲ್ಲಿ ಜೈನ ಮುನಿಯಿದ್ದು, ಇವನು ತನ್ನ ಬಲಗೈಯನ್ನು ಪುಸ್ತಕದ ಕಡೆ ತೋರಿಸಿ, ಎಡಗೈಯನ್ನು ತೊಡೆಯ ಮೇಲೆ ಇಟ್ಟು, ಸಲ್ಲೇಖನ ವ್ರತವನ್ನು ಉಪದೇಶಿಸುತ್ತಿರುವ ದೃಶ್ಯವಿದೆ. ಈ ಉಪದೇಶವನ್ನು ವ್ರತಾಧಾರಿಯು ಕೈಮುಗಿದು ಕುಳಿತಿಕೊಂಡು ಕೇಳುತ್ತಿದ್ದಾನೆ. ಮುಂದಿನ ಹಂತದಲ್ಲಿ ಜಿನನು ಪದ್ಮಾಸನದಲ್ಲಿ ಕುಳಿತಿದ್ದು, ಇವನ ಮೇಲ್ಭಾಗದಲ್ಲಿ ತ್ರಿಭಂಗಿಯಲ್ಲಿ ನಿಂತಿರುವುದು ವಿಶೇಷತೆಯಾಗಿದೆ. ನರೇಂದ್ರ,[೧೨೫] ಗರಗ,[೧೨೬] ಗ್ರಾಮಗಳಲ್ಲಿ ಇಂತಹ ನಿಷಿಧಿಶಿಲ್ಪಗಳು ದೊರೆತಿವೆ.

ಗರಗದ[೧೨೭] ಹೆಗ್ಗೆರೆಯ ದಂಡೆಯ ಮೇಲೆ ಈ ಶಾಸನನಿಷಿಧಿಶಿಲ್ಪ ಇದೆ. ಇದು ಎರಡು ಹಂತದ ಶಿಲ್ಪ ಪಟ್ಟಿಕೆಯಿಂದ ಕೂಡಿದ್ದು, ೮೭ ಸೆಂ.ಮೀ. ಎತ್ತರ ಮತ್ತು ೪೭ ಸೆಂ.ಮೀ. ಅಗಲವನ್ನು ಹೊಂದಿದೆ. ಮೇಲಿಕ ಪಟ್ಟಿಕೆಯಲ್ಲಿ ಜಿನಾಲಯದ ಪ್ರತಿರೂಪದಂತಿರುವ ತೀರ್ಥಂಕರನಿದ್ದು, ಅವನು ಪರ್ಯಂಕಾಸನದಲ್ಲಿ ಆಸೀನನಾಗಿದ್ದಾನೆ. ಈತನ ಶಿರಭಾಗದಲ್ಲಿ ಪ್ರಭಾಮಂಡಲವಿದ್ದು, ಇಕ್ಕೆಲಗಳಲ್ಲಿ ಹಿಡಿಸಹಿತ ಎರಡು ಚಾಮರಗಳಿವೆ. ಎರಡನೆಯ ಪಟ್ಟಿಕೆಯಲ್ಲಿ ಮುನಿ ವೀರಾಸನದಲ್ಲಿ ಆಸೀನರಾಗಿದ್ದು, ವ್ರತಧಾರಿಗೆ ವ್ರತವನ್ನು ಬೋಧಿಸುತ್ತಿದ್ದಾನೆ. ವ್ರತಧಾರಿಯು ಅಂಜಲಿ ಮುದ್ರೆಯನ್ನು ಹೊಂದಿದ್ದಾನೆ. ಇವರಿಬ್ಬರ ಮಧ್ಯದಲ್ಲಿ ಶ್ರುತಪೀಠ, ಕಮಂಡಲ ಕಾಣುತ್ತೇವೆ. ಮತ್ತು ಶಿಲೆಯ ಮೇಲ್ಭಾಗದಲ್ಲಿ ಸೂರ್ಯ ಮತ್ತು ಚಂದ್ರನನ್ನು ಕಂಡರಿಸಲಾಗಿದೆ.

ನರೇಂದ್ರ[೧೨೮] ಗ್ರಾಮದ ಪಶ್ಚಿಮಕ್ಕಿರುವ ಬೆಟ್ಟದಲ್ಲಿ ಈ ಶಿಲ್ಪವಿದೆ. ಇದು ಒಂದು ಹಂತದ ಶಿಲ್ಪ ಪಟ್ಟಿಕೆಯಿಂದ ಕೂಡಿದ್ದು, ಮಧ್ಯದಲ್ಲಿ ತೀರ್ಥಂಕರನು ಪರ್ಯಂಕಾಸನದಲ್ಲಿದ್ದಾನೆ. ಈತನ ಎಡ-ಬದಿಯಲ್ಲಿ ಸಮಭಂಗಿಯಲ್ಲಿ ಯಕ್ಷನು, ಚತುರ್ಭುಜಧಾರಿಯಾಗಿದ್ದಾನೆ. ಹಾಗೆಯೇ ಬಲಬದಿಯಲ್ಲಿ ಸಲ್ಲೇಖನ ವ್ರತಧಾರಿ ಕನಕಶಾಂತಿ ಮುನಿಗಳು ವೀರಾಸನದಲ್ಲಿ ಆಸೀನರಾಗಿದ್ದಾರೆ. ಇವರ ಹಿಂಭಾಗದಲ್ಲಿ ಅಂಜಲಿಮುದ್ರೆಯಲ್ಲಿ ಇಬ್ಬರು ಶ್ರಾವಕರನ್ನು ಕಾಣುತ್ತೇವೆ. ಉಳಿದಂತೆ ಸೂರ್ಯ-ಚಂದ್ರರನ್ನು ಗುರುತಿಸಬಹುದಾಗಿದೆ.

ವೀರಗಲ್ಲುಗಳು

ಕ್ರ.ಸಂ	ಶಿಲ್ಪ	ಗ್ರಾಮ	ತಾಲೂಕು	ಸ್ಥಳ	ಕಾಲ(ಕ್ರಿ.ಶ)
೧	ವೀರಗಲ್ಲು	ಅಳ್ನಾವರ	ಧಾರವಾಡ	ಕಲ್ಮೇಶ್ವರ ದೇವಾಲಯದ ಆವರಣ	೧೨
೨	ವೀರಗಲ್ಲು	ಅಳ್ನಾವರ	ಧಾರವಾಡ	ಕಲ್ಮೇಶ್ವರ ದೇವಾಲಯದ ಆವರಣ	೧೨
೩	ವೀರಗಲ್ಲು	ಅಳ್ನಾವರ	ಧಾರವಾಡ	ಕಲ್ಮೇಶ್ವರ ದೇವಾಲಯದ ಆವರಣ	೧೨
೪	ವೀರಗಲ್ಲು	ಅಳ್ನಾವರ	ಧಾರವಾಡ	ಕಲ್ಮೇಶ್ವರ ದೇವಾಲಯದ ಆವರಣ	೧೨
೫	ವೀರಗಲ್ಲು	ಅಳ್ನಾವರ	ಧಾರವಾಡ	ಬಂಡಿಯವರ ಮನೆಯ ಆವರಣ	೧೨

೬	ವೀರಗಲ್ಲು	ಅದರಗುಂಚಿ	ಹುಬ್ಬಳ್ಳಿ	ಹನುಮಂತ ದೇವಾಲಯ ಎದುರು	೧೩
೭	ವೀರಗಲ್ಲು	ಅಮ್ಮಿನಭಾವಿ	ಧಾರವಾಡ	ಜೈನ ಬಸದಿಯ ಪಕ್ಕ	೧೨
೮	ವೀರಗಲ್ಲು	ಅಗಸನಹಳ್ಳಿ	ಕಲಘಟಗಿ	ಕಲ್ಮೇಶ್ವರ ದೇವಾಲಯದ ಆವರಣ	೧೧
೯	ವೀರಗಲ್ಲು	ಅಹಟ್ಟಿ	ನವಲಗುಂದ	ಕಲ್ಮೇಶ್ವರ ದೇವಾಲಯದ ಆವರಣ	೧೧
೧೦	ವೀರಗಲ್ಲು	ಅಮ್ಮಿನಭಾವಿ	ಧಾರವಾಡ	ಈಶ್ವರ ದೇವಾಲಯದ ಮುಂಭಾಗ	೧೨
೧೧	ವೀರಗಲ್ಲು	ಇಂಗಳಗಿ	ಕುಂದಗೋಳ	ಊರ ಹೊರಗಡೆ	೧೬
೧೨	ವೀರಗಲ್ಲು	ಇಂಗಳಹಳ್ಳಿ	ಹುಬ್ಬಳ್ಳಿ	ಕಲ್ಮೇಶ್ವರ ದೇವಾಲಯದ ಆವರಣ	೧೧
೧೩	ವೀರಗಲ್ಲು	ಉಗ್ಗಿನಕೇರಿ	ಕಲಘಟಗಿ	ಕಂಪ್ಲಿಯವರ ಓಣಿ	೧೨
೧೪	ವೀರಗಲ್ಲು	ಉಮಚಗಿ	ಹುಬ್ಬಳ್ಳಿ	ಊರ ಮಧ್ಯ	೧೧
೧೫	ವೀರಗಲ್ಲು	ಉಮಚಗಿ	ಹುಬ್ಬಳ್ಳಿ	ಊರ ಮಧ್ಯ	೧೧
೧೬	ವೀರಗಲ್ಲು	ಉಮಚಗಿ	ಹುಬ್ಬಳ್ಳಿ	ಊರ ಮಧ್ಯ	೧೧
೧೭	ವೀರಗಲ್ಲು	ಉಮಚಗಿ	ಹುಬ್ಬಳ್ಳಿ	ಊರ ಮಧ್ಯ	೧೧
೧೮	ವೀರಗಲ್ಲು	ಎಲಿವಾಳ	ಕುಂದಗೋಳ	ಕಲ್ಮೇಶ್ವರ ದೇವಾಲಯದ ಆವರಣ	೧೨
೧೯	ವೀರಗಲ್ಲು	ಎಲಿವಾಳ	ಕುಂದಗೋಳ	ಕಲ್ಮೇಶ್ವರ ದೇವಾಲಯದ ಆವರಣ	೧೨
೨೦	ವೀರಗಲ್ಲು	ಎಲಿವಾಳ	ಕುಂದಗೋಳ	ಕಲ್ಮೇಶ್ವರ ದೇವಾಲಯದ ಆವರಣ	೧೨
೨೧	ವೀರಗಲ್ಲು	ಎಲಿವಾಳ	ಕುಂದಗೋಳ	ಕಲ್ಮೇಶ್ವರ ದೇವಾಲಯದ ಆವರಣ	೧೨
೨೨	ವೀರಗಲ್ಲು	ಕಲಕೇರಿ	ಧಾರವಾಡ	ಊರಮಧ್ಯದಲ್ಲಿ	೧೨
೨೩	ವೀರಗಲ್ಲು	ಕಡಪಟ್ಟಿ	ಕುಂದಗೋಳ	ಬಸವಣ್ಣೆಪ್ಪ ಕುಬಿಹಾಳ ಮನೆಹತ್ತಿರ	೧೩
೨೪	ವೀರಗಲ್ಲು	ಕಮಡೊಳ್ಳಿ	ಕುಂದಗೋಳ	ಕಲ್ಮೇಶ್ವರ ದೇ ಹಿಂಭಾಗದಲ್ಲಿ	೧೨
೨೫	ವೀರಗಲ್ಲು	ಕಮಡೊಳ್ಳಿ	ಕುಂದಗೋಳ	ಕಲ್ಮೇಶ್ವರ ದೇ ಹಿಂಭಾಗದಲ್ಲಿ	೧೨
೨೬	ವೀರಗಲ್ಲು	ಕಮಡೊಳ್ಳಿ	ಕುಂದಗೋಳ	ಕಲ್ಮೇಶ್ವರ ದೇ ಹಿಂಭಾಗದಲ್ಲಿ	೧೨

೨೭	ವೀರಗಲ್ಲು	ಕಲಕುಂಡಿ	ಕಲಘಟಗಿ	ಊರಿನ ಮುಂಭಾಗದಲ್ಲಿ	೧೧
೨೮	ವೀರಗಲ್ಲು	ಕಟಗಿನಹಾಳ	ಕಲಘಟಗಿ	ಕೆರೆದಂಡೆಯ ಹತ್ತಿರ	೧೨
೨೯	ವೀರಗಲ್ಲು	ಕಟ್ನೂರು	ಹುಬ್ಬಳ್ಳಿ	ಕಲ್ಮೇಶ್ವರ ದೇ. ಆವರಣ	೧೧
೩೦	ವೀರಗಲ್ಲು	ಕಲ್ಲೂರು	ಧಾರವಾಡ	ಹನುಮಂತ ದೇ ಮುಂಭಾಗ	೧೨
೩೧	ವೀರಗಲ್ಲು	ಕಲ್ಲೆ	ಧಾರವಾಡ	ಹನುಮಂತ ದೇ. ಹತ್ತಿರ	೧೨
೩೨	ವೀರಗಲ್ಲು	ಕುಂದಗೋಳ	ಕುಂದಗೋಳ	ಹನುಮಂತ ಗೋಡೆ	೧೨
೩೩	ವೀರಗಲ್ಲು	ಕುಯಿಬಾಳ	ಕುಂದಗೋಳ	ಮಸೀದಿಯ ಹತ್ತಿರ	೧೨
೩೪	ವೀರಗಲ್ಲು	ಕುಂಕೂರು	ಕುಂದಗೋಳ	ಕೆರೆಯ ಹತ್ತಿರ	೧೨
೩೫	ವೀರಗಲ್ಲು	ಕುಬಿಹಾಳ	ಕುಂದಗೋಳ	ಹನುಮಂತ ದೇ. ಎದುರು	೧೧
೩೬	ವೀರಗಲ್ಲು	ಕುಂಕೂರು	ಕುಂದಗೋಳ	ಕೆರೆಯ ಹತ್ತಿರ	೧೨
೩೭	ವೀರಗಲ್ಲು	ಕೊಂಗವಾಡ	ನವಲಗುಂದ	ಆಂಜನೇಯ ದೇ ಆವರಣ	೧೧
೩೮	ವೀರಗಲ್ಲು	ಕೂಟಬಾಗಿ	ಕಲಘಟಗಿ	ಕಲ್ಮೇಶ್ವರ ದೇ.ಆವರಣ	೧೧
೩೯	ವೀರಗಲ್ಲು	ಕೋಳಿವಾಡ	ಹುಬ್ಬಳ್ಳಿ	ಮಹಾಮಾಯಿ ದೇ ಬಲಭಾಗ	೧೨
೪೦	ವೀರಗಲ್ಲು	ಕೋಳಿವಾಡ	ಹುಬ್ಬಳ್ಳಿ	ಕಲ್ಮೇಶ್ವರ ದೇ.ಆವರಣ	೧೧
೪೧	ವೀರಗಲ್ಲು	ಕೋಳಿವಾಡ	ಹುಬ್ಬಳ್ಳಿ	ಹೊರಗಿನಮಠದ ಆವರಣ	೧೨
೪೨	ವೀರಗಲ್ಲು	ಕೋಳಿವಾಡ	ಹುಬ್ಬಳ್ಳಿ	ಪುರದಪ್ಪನ ಅಂಗಡಿಯ ಹತ್ತಿರ	೧೨
೪೩	ವೀರಗಲ್ಲು	ಕೋಳಿವಾಡ	ಹುಬ್ಬಳ್ಳಿ	ಪುರದಪ್ಪನ ಅಂಗಡಿಯ ಹತ್ತಿರ	೧೨
೪೪	ವೀರಗಲ್ಲು	ಕೋಟೂರು	ಧಾರವಾಡ	ಅಂಗನವಾಡಿಯ ಪಕ್ಕದಲ್ಲಿ	೧೪
೪೫	ವೀರಗಲ್ಲು	ಕೋಟೂರು	ಧಾರವಾಡ	ಅಂಗನವಾಡಿಯ ಪಕ್ಕದಲ್ಲಿ	೧೪
೪೬	ವೀರಗಲ್ಲು	ಕೊಂಕಣಕುರಹಟ್ಟಿ	ಕುಂದಗೋಳ	ಊರಮಧ್ಯದಲ್ಲಿ	೧೨
೪೭	ವೀರಗಲ್ಲು	ಕಂದಲಿ	ಕಲಘಟಗಿ	ಊರಿನ ಮಧ್ಯಭಾಗ	೧೩

೪೮	ವೀರಗಲ್ಲು	ಗರಗ	ಧಾರವಾಡ	ಕಲ್ಲಪ್ಪಜ್ಜನ ದೇ. ಮುಂದೆ	೧೬
೪೯	ವೀರಗಲ್ಲು	ಗರಗ	ಧಾರವಾಡ	ಕಲ್ಲಪ್ಪಜ್ಜನ ದೇ. ಮುಂದೆ	೧೬
೫೦	ವೀರಗಲ್ಲು	ಗರಗ	ಧಾರವಾಡ	ಕಲ್ಲಪ್ಪಜ್ಜನ ದೇ. ಗೋಡೆ	೧೬
೫೧	ವೀರಗಲ್ಲು	ಗರಗ	ಧಾರವಾಡ	ಗರಡಿಮನೆ ಹತ್ತಿರ	೧೨
೫೨	ವೀರಗಲ್ಲು	ಗಬ್ಬೂರು	ಹುಬ್ಬಳ್ಳಿ	ಕಲ್ಮೇಶ್ವರ ದೇ. ಮುಂಭಾಗ	೧೨
೫೩	ವೀರಗಲ್ಲು	ಗಬ್ಬೂರು	ಹುಬ್ಬಳ್ಳಿ	ಕಲ್ಮೇಶ್ವರ ದೇ. ಮುಂಭಾಗ	೧೨
೫೪	ವೀರಗಲ್ಲು	ಗುಡಿಸಾಗರ	ನವಲಗುಂದ	ಕಲ್ಮೇಶ್ವರ ದೇ. ಆವರಣ	೧೧
೫೫	ವೀರಗಲ್ಲು	ಛಬ್ಬಿ	ಹುಬ್ಬಳ್ಳಿ	ಬಸವೇಶ್ವರ ದೇ.ಆವರಣ	೧೨
೫೬	ವೀರಗಲ್ಲು	ಛಬ್ಬಿ	ಹುಬ್ಬಳ್ಳಿ	ಬಸವೇಶ್ವರ ದೇ.ಆವರಣ	೧೨
೫೭	ವೀರಗಲ್ಲು	ಜಾವೂರು	ನವಲಗುಂದ	ರಸ್ತೆಯ ಬದಿಯಲ್ಲಿ	೧೭
೫೮	ವೀರಗಲ್ಲು	ಡಿಂಬವಳ್ಳಿ	ಕಲಘಟಗಿ	ಕಲ್ಲಪ್ಪಘಟ್ಟ ಅವರ ಮನೆಮುಂದೆ	೧೨
೫೯	ವೀರಗಲ್ಲು	ತಾರಿಹಾಳ	ಹುಬ್ಬಳ್ಳಿ	ಕಲ್ಮೇಶ್ವರ ದೇ.ಹತ್ತಿರ	೧೨
೬೦	ವೀರಗಲ್ಲು	ತಂಬೂರು	ಕಲಘಟಗಿ	ಕಲ್ಮೇಶ್ವರ ದೇ.ಆವರಣ	೧೨
೬೧	ವೀರಗಲ್ಲು	ತಂಬೂರು	ಕಲಘಟಗಿ	ಬಸವೇಶ್ವರ ದೇ.ಆವರಣ	೧೧
೬೨	ವೀರಗಲ್ಲು	ತಂಬೂರು	ಕಲಘಟಗಿ	ಬಸವೇಶ್ವರ ದೇ.ಆವರಣ	೧೧
೬೩	ವೀರಗಲ್ಲು	ತಂಬೂರು	ಕಲಘಟಗಿ	ಬಸವೇಶ್ವರ ದೇ.ಆವರಣ	೧೧
೬೪	ವೀರಗಲ್ಲು	ತಂಬೂರು	ಕಲಘಟಗಿ	ಬಸವೇಶ್ವರ ದೇ.ಆವರಣ	೧೧
೬೫	ವೀರಗಲ್ಲು	ಧಾರವಾಡ	ಧಾರವಾಡ	ವಿದ್ಯಾರಣ್ಯ ಶಾಲೆಯ ಆವರಣ	೧೨
೬೬	ವೀರಗಲ್ಲು	ಧಾರವಾಡ	ಧಾರವಾಡ	ಉಳವಿಚನ್ನಬಸವೇಶ್ವರ ದೇ.	೧೨
೬೭	ವೀರಗಲ್ಲು	ದ್ಯಾವನಕೊಂಡ	ಕಲಘಟಗಿ	ವೀರಭದ್ರ ದೇ. ಆವರಣ	೧೨
೬೮	ವೀರಗಲ್ಲು	ದ್ಯಾವನಕೊಂಡ	ಕಲಘಟಗಿ	ವೀರಭದ್ರ ದೇ. ಪಕ್ಕದಲ್ಲಿ	೧೨

೬೯	ವೀರಗಲ್ಲು	ದುಮ್ಮವಾಡ	ಕಲಘಟಗಿ	ಕೆರೆಯ ದಂಡೆಯ ಮೇಲೆ	೧೧
೭೦	ವೀರಗಲ್ಲು	ದೇವನೂರು	ಕುಂದಗೋಳ	ಈಶ್ವರ ದೇ.ಆವರಣ	೧೩
೭೧	ವೀರಗಲ್ಲು	ದೇವಿಕೊಪ್ಪ	ಕಲಘಟಗಿ	ಸೀಗನಹಳ್ಳಿ ರಸ್ತೆಯ ಪಕ್ಕ	೧೨
೭೨	ವೀರಗಲ್ಲು	ದೇ.ಹುಬ್ಬಳ್ಳಿ	ಧಾರವಾಡ	ರಸ್ತೆಯ ಬದಿಯಲ್ಲಿ	೧೨
೭೩	ವೀರಗಲ್ಲು	ದೇ.ಹುಬ್ಬಳ್ಳಿ	ಧಾರವಾಡ	ರಸ್ತೆಯ ಪಕ್ಕದಲ್ಲಿ	೧೨
೭೪	ವೀರಗಲ್ಲು	ನವಲೂರು	ಧಾರವಾಡ	ಮಲ್ಲಿಕಾರ್ಜುನ ದೇ. ಆವರಣ	೦೨
೭೫	ವೀರಗಲ್ಲು	ನರೇಂದ್ರ	ಧಾರವಾಡ	ವೀರಭದ್ರೇಶ್ವರ ದೇ ಮುಂದೆ	೧೨
೭೬	ವೀರಗಲ್ಲು	ನಾವಳ್ಳಿ	ನವಲಗುಂದ	ಕಲ್ಮೇಶ್ವರ ದೇ ದಕ್ಷಿಣದಿಕ್ಕಿನಲ್ಲಿ	೧೨
೭೭	ವೀರಗಲ್ಲು	ನಾವಳ್ಳಿ	ನವಲಗುಂದ	ಕಲ್ಮೇಶ್ವರ ದೇ ದಕ್ಷಿಣದಿಕ್ಕಿನಲ್ಲಿ	೧೨
೭೮	ವೀರಗಲ್ಲು	ನಾವಳ್ಳಿ	ನವಲಗುಂದ	ಕಲ್ಮೇಶ್ವರ ದೇ ದಕ್ಷಿಣದಿಕ್ಕಿನಲ್ಲಿ	೧೨
೭೯	ವೀರಗಲ್ಲು	ನಾವಳ್ಳಿ	ನವಲಗುಂದ	ಕಲ್ಮೇಶ್ವರ ದೇ ದಕ್ಷಿಣದಿಕ್ಕಿನಲ್ಲಿ	೧೨
೮೦	ವೀರಗಲ್ಲು	ನೂಲ್ವಿ	ಹುಬ್ಬಳ್ಳಿ	ಕನ್ನಡ ಶಾಲೆಯ ಆವರಣ	೧೨
೮೧	ವೀರಗಲ್ಲು	ಬರದ್ವಾಡ	ಕುಂದಗೋಳ	ಮಾರುತಿ ದೇ. ಎದುರು	೧೨
೮೨	ವೀರಗಲ್ಲು	ಬಾಗವಾಡ	ಕುಂದಗೋಳ	ಮುರುಗೇಶ್ವರ ಮಠದ ಮುಂದೆ	೧೨
೮೩	ವೀರಗಲ್ಲು	ಬ್ಯಾಹಟ್ಟಿ	ಹುಬ್ಬಳ್ಳಿ	ಕಲ್ಮೇಶ್ವರ ದೇ. ಮುಂಭಾಗ	೧೨
೮೪	ವೀರಗಲ್ಲು	ಬೆನಕನಕಟ್ಟಿ	ಕುಂದಗೋಳ	ಊರ ಹೊರಗೆ	೧೨
೮೫	ವೀರಗಲ್ಲು	ಬೆಳಗಲಿ	ಹುಬ್ಬಳ್ಳಿ	ಊರಮಧ್ಯದಲ್ಲಿ	೧೨
೮೬	ವೀರಗಲ್ಲು	ಬೆಳವಟಗಿ	ನವಲಗುಂದ	ರಾಮಲಿಂಗೇಶ್ವರ ದೇ ಆವರಣ	೧೧
೮೭	ವೀರಗಲ್ಲು	ಬೆಳಹಾರ	ನವಲಗುಂದ	ಆಂಜನೇಯ ದೇ ಆವರಣ	೧೧
೮೮	ವೀರಗಲ್ಲು	ಬೆಂಗೇರಿ	ಹುಬ್ಬಳ್ಳಿ	ಕಲ್ಮೇಶ್ವರ ದೇ.ಮುಂಭಾಗ	೧೨
೮೯	ವೀರಗಲ್ಲು	ಬೆಳ್ಳಿಗಟ್ಟಿ	ಕುಂದಗೋಳ	ಊರ ಮಧ್ಯದಲ್ಲಿ	೧೪

೯೦	ವೀರಗಲ್ಲು	ಬೆಟ್ಟದೂರು	ಕಲಘಟಗಿ	ಕೊಪ್ಪದವರ ಓಣಿ	೧೨
೯೧	ವೀರಗಲ್ಲು	ಬೇಗೂರು	ಕಲಘಟಗಿ	ಹೊಂಡದ ಬಳಿ	೧೨
೯೨	ವೀರಗಲ್ಲು	ಭೋಗೂರು	ಧಾರವಾಡ	ಕಲ್ಮೇಶ್ವರ ದೇ.ಆವರಣ	೧೧
೯೩	ವೀರಗಲ್ಲು	ಮಳಲಿ	ಕುಂದಗೋಳ	ಊರ ಪೂರ್ವದಿಕ್ಕಿನ ಹೊಲದಲ್ಲಿ	೧೨
೯೪	ವೀರಗಲ್ಲು	ಮತ್ತಿಗಟ್ಟಿ	ಕುಂದಗೋಳ	ವೀರಭದ್ರೇಶ್ವರ ದೇ. ಎದರು	೧೨
೯೫	ವೀರಗಲ್ಲು	ಮಡಕಿಹೊನ್ನಳ್ಳಿ	ಕಲಘಟಗಿ	ಊರಮುಂದೆ	೧೨
೯೬	ವೀರಗಲ್ಲು	ಮಸಳಿಕಟ್ಟಿ	ಕಲಘಟಗಿ	ಊರಮುಂದೆ ಎತ್ತರವಾದ ದಿನ್ನೆ	೧೨
೯೭	ವೀರಗಲ್ಲು	ಮಂಗಳಗಟ್ಟಿ	ಧಾರವಾಡ	ಹಿ.ಪ್ರಾ. ಶಾಲೆಯ ಆವರಣ	೧೨
೯೮	ವೀರಗಲ್ಲು	ಮಂಗಳಗಟ್ಟಿ	ಧಾರವಾಡ	ಸರ್ದಾರ ಗದ್ದೆಯಲ್ಲಿ	೧೨
೯೯	ವೀರಗಲ್ಲು	ಮಂಟೂರು	ಹುಬ್ಬಳ್ಳಿ	ಹನುಮಂತ ದೇ ಮುಂದೆ	೧೦
೧೦೦	ವೀರಗಲ್ಲು	ಮುಳಮುತ್ತಲ	ಧಾರವಾಡ	ಗ್ರಾಮದೇವತೆಯ ಎದುರು	೧೧
೧೦೧	ವೀರಗಲ್ಲು	ಮುಗುದ	ಧಾರವಾಡ	ಕೆರೆಯ ದಂಡೆಯ ಮೇಲೆ	೧೬
೧೦೨	ವೀರಗಲ್ಲು	ಮುತ್ತಗಿ	ಕಲಘಟಗಿ	ಹೊಂಡದ ಬಳಿ	೧೨
೧೦೩	ವೀರಗಲ್ಲು	ಯಲಿವಾಳ	ಕುಂದಗೋಳ	ಕಲ್ಮೇಶ್ವರ ದೇ.ಪಕ್ಕದಲ್ಲಿ	೧೨
೧೦೪	ವೀರಗಲ್ಲು	ಯಲಿವಾಳ	ಕುಂದಗೋಳ	ಕಲ್ಮೇಶ್ವರ ದೇ.ಪಕ್ಕದಲ್ಲಿ	೧೨
೧೦೫	ವೀರಗಲ್ಲು	ಯಲಿವಾಳ	ಕುಂದಗೋಳ	ಮಠದ ಮಾಸ್ತರಮನೆ ಹತ್ತಿರ	೧೨
೧೦೬	ವೀರಗಲ್ಲು	ಯಲಿವಾಳ	ಕುಂದಗೋಳ	ದ್ಯಾಮವ್ವನ ಗುಡಿಯ ಹತ್ತಿರ	೧೨
೧೦೭	ವೀರಗಲ್ಲು	ಯರಗುಪ್ಪಿ	ಕುಂದಗೋಳ	ಬೀರೇಶ್ವರ ದೇವಾಲಯದ ಪಕ್ಕ	೧೬
೧೦೮	ವೀರಗಲ್ಲು	ಲೋಕೂರು	ಧಾರವಾಡ	ವೀರಭದ್ರ ದೇ. ಆವರಣ	೧೨
೧೦೯	ವೀರಗಲ್ಲು	ಶಲವಡಿ	ನವಲಗುಂದ	ಕಲ್ಮೇಶ್ವರ ದೇ. ಮುಂಭಾಗ	೧೨
೧೧೦	ವೀರಗಲ್ಲು	ಸಂಶಿ	ಕುಂದಗೋಳ	ದುರ್ಗಾದೇ. ಹತ್ತಿರ	೧೨

೧೧೧	ವೀರಗಲ್ಲು	ಹನುಮನಾಳ	ಧಾರವಾಡ	ಕಲ್ಮೇಶ್ವರ ದೇ.ಆವರಣ	೧೧
೧೧೨	ವೀರಗಲ್ಲು	ಹಸನಿ	ನವಲಗುಂದ	ಕಲ್ಮೇಶ್ವರ ದೇ.ಆವರಣ	೧೧
೧೧೩	ವೀರಗಲ್ಲು	ಹನುಮಾಪೂರ	ಕಲಘಟಗಿ	ಹಾಳಾದ ಊರಿನ ಮಧ್ಯ	೧೨
೧೧೪	ವೀರಗಲ್ಲು	ಹಿರೇಗುಂಜಳ	ಕುಂದಗೋಳ	ಹನುಮಂತ ದೇ. ಎದುರು	೧೨
೧೧೫	ವೀರಗಲ್ಲು	ಹಿರೇಹೊನ್ನಳ್ಳಿ	ಕಲಘಟಗಿ	ಊರ ಮಧ್ಯ	೧೪
೧೧೬	ವೀರಗಲ್ಲು	ಹಿರೇಗುಂಜಳ	ಕುಂದಗೋಳ	ಹನುಮಂತ ದೇ. ಎದುರು	೧೨
೧೧೭	ವೀರಗಲ್ಲು	ಹೆಬ್ಬಳ್ಳಿ	ಧಾರವಾಡ	ಊರಮಧ್ಯ	೧೨

ಮಾಸ್ತಿಕಲ್ಲು

ಕ್ರ.ಸಂ	ಶಿಲ್ಪ	ಗ್ರಾಮ	ತಾಲೂಕು	ಸ್ಥಳ	ಕಾಲ(ಕ್ರಿ.ಶ)
೧	ಮಾಸ್ತಿಕಲ್ಲು	ಉಣಕಲ್	ಹುಬ್ಬಳ್ಳಿ	ಗ್ರಾಮದ ಮಧ್ಯದಲ್ಲಿ	೧೨
೨	ಮಾಸ್ತಿಕಲ್ಲು	ಉಗ್ನಿಕೇರಿ	ಧಾರವಾಡ	ಗ್ರಾಮದ ಮಧ್ಯಭಾಗದಲ್ಲಿ	೧೨
೩	ಮಾಸ್ತಿಕಲ್ಲು	ಉಮಚಗಿ	ಹುಬ್ಬಳ್ಳಿ	ವ್ಹಿ.ಡಿ.ಪಾಟೀಲ್ ಮನೆ ಹಿತ್ತಲ	೧೪
೪	ಮಾಸ್ತಿಕಲ್ಲು	ಕವಲಗೇರಿ	ಧಾರವಾಡ	ಮಸೂದಿಯ ಹತ್ತಿರ	೧೨
೫	ಮಾಸ್ತಿಕಲ್ಲು	ಕಲಕೇರಿ	ಧಾರವಾಡ	ಬಸವಣ್ಣ ದೇ. ಆವರಣ	೧೫
೬	ಮಾಸ್ತಿಕಲ್ಲು	ಕಟ್ನೂರು	ಹುಬ್ಬಳ್ಳಿ	ಕಲ್ಮೇಶ್ವರ ದೇ. ಆವರಣ	೧೨
೭	ಮಾಸ್ತಿಕಲ್ಲು	ಕಲ್ಲಾಪೂರ	ಧಾರವಾಡ	ಬಸ್‌ನಿಲ್ದಾಣದ ಎಡಭಾಗ	೧೪
೮	ಮಾಸ್ತಿಕಲ್ಲು	ಕಲ್ಲಾಪೂರ	ಧಾರವಾಡ	ಬಸ್‌ನಿಲ್ದಾಣದ ಎಡಭಾಗ	೧೪
೯	ಮಾಸ್ತಿಕಲ್ಲು	ಕೋಟೂರು	ಧಾರವಾಡ	ಪ್ರಾರ್ಥಮಿಕ ಶಾಲೆ ಆವರಣ	೧೨
೧೦	ಮಾಸ್ತಿಕಲ್ಲು	ಕಂದಲಿ	ಕಲಘಟಗಿ	ಕಲ್ಮೇಶ್ವರ ದೇ. ಆವರಣ	೧೨
೧೧	ಮಾಸ್ತಿಕಲ್ಲು	ಕಂದಲಿ	ಕಲಘಟಗಿ	ಕಲ್ಮೇಶ್ವರ ದೇ. ಆವರಣ	೧೨
೧೨	ಮಾಸ್ತಿಕಲ್ಲು	ಕಂದಲಿ	ಕಲಘಟಗಿ	ಕಲ್ಮೇಶ್ವರ ದೇ ಆವರಣ	೧೨

೧೩	ಮಾಸ್ತಿಕಲ್ಲು	ಕುಂಕೂರು	ಕುಂದಗೋಳ	ಗ್ರಾಮದ ಮಧ್ಯದಲ್ಲಿ	೧೨
೧೪	ಮಾಸ್ತಿಕಲ್ಲು	ಕುಂದಗೋಳ	ಕುಂದಗೋಳ	ಹನುಮಂತ ದೇ.ಗೋಡೆ	೧೨
೧೫	ಮಾಸ್ತಿಕಲ್ಲು	ಗುಡಗೇರಿ	ಕುಂದಗೋಳ	ಊರ ಮಧ್ಯದಲ್ಲಿ	೧೨
೧೬	ಮಾಸ್ತಿಕಲ್ಲು	ಗುಡಿಸಾಗರ	ನವಲಗುಂದ	ಕಲ್ಮೇಶ್ವರ ದೇ. ಆವರಣ	೧೧
೧೭	ಮಾಸ್ತಿಕಲ್ಲು	ಗಂಜೀಗಟ್ಟಿ	ಕಲಘಟಗಿ	ಗ್ರಾಮದ ಮಧ್ಯದಲ್ಲಿ	೧೨
೧೮	ಮಾಸ್ತಿಕಲ್ಲು	ಛಬ್ಬಿ	ಹುಬ್ಬಳ್ಳಿ	ಗ್ರಾಮದ ಮಧ್ಯದಲ್ಲಿ	೧೩
೧೯	ಮಾಸ್ತಿಕಲ್ಲು	ಜುಂಜನಬೈಲು	ಕಲಘಟಗಿ	ದುರ್ಗಪ್ಪನವರ ಹೊಲದಲ್ಲಿ	೧೬
೨೦	ಮಾಸ್ತಿಕಲ್ಲು	ತರ್ಲಘಟ್ಟ	ಕುಂದಗೋಳ	ದ್ಯಾಮವ್ವನ ದೇ.ಹೊರಗೆ	೧೨
೨೧	ಮಾಸ್ತಿಕಲ್ಲು	ತಂಬೂರು	ಕಲಘಟಗಿ	ಗ್ರಾಮದ ಮಧ್ಯದಲ್ಲಿ	೧೩
೨೨	ಮಾಸ್ತಿಕಲ್ಲು	ದ್ಯಾವನಕೊಂಡ	ಕಲಘಟಗಿ	ಊರ ಮಧ್ಯ	೧೪
೨೩	ಮಾಸ್ತಿಕಲ್ಲು	ದುಮ್ಮವಾಡ	ಕಲಘಟಗಿ	ಗ್ರಾಮದ ಮಧ್ಯದಲ್ಲಿ	೧೨
೨೪	ಮಾಸ್ತಿಕಲ್ಲು	ದೇ.ಹುಬ್ಬಳ್ಳಿ	ಧಾರವಾಡ	ಗ್ರಾಮದ ರಸ್ತೆಯ ಪಕ್ಕ	೧೬
೨೫	ಮಾಸ್ತಿಕಲ್ಲು	ನವಲೂರು	ಹುಬ್ಬಳ್ಳಿ	ಹನುಮಂತ ದೇ.ಆವರಣ	೧೨
೨೬	ಮಾಸ್ತಿಕಲ್ಲು	ನೂಲ್ವಿ	ಹುಬ್ಬಳ್ಳಿ	ಗ್ರಾಮದ ಮಧ್ಯದಲ್ಲಿ	೧೨
೨೭	ಮಾಸ್ತಿಕಲ್ಲು	ಭೂಕೊಪ್ಪ	ಕುಂದಗೋಳ	ಗ್ರಾಮದ ಮಧ್ಯದಲ್ಲಿ	೧೨
೨೮	ಮಾಸ್ತಿಕಲ್ಲು	ಬೇಗೂರು	ಕಲಘಟಗಿ	ಊರ ಮಧ್ಯದಲ್ಲಿ	೧೪
೨೯	ಮಾಸ್ತಿಕಲ್ಲು	ಬೈರಿದೇವರಕೊಪ್ಪ	ಹುಬ್ಬಳ್ಳಿ	ಸಿದ್ದೇಶ್ವರ ದೇ.ಆವರಣ	೧೨
೩೦	ಮಾಸ್ತಿಕಲ್ಲು	ಮನಗುಂಡಿ	ಧಾರವಾಡ	ಕಲ್ಮೇಶ್ವರ ದೇ.ಮುಂಭಾಗ	೧೨
೩೧	ಮಾಸ್ತಿಕಲ್ಲು	ಮಡಕಿಹೊನ್ನಳ್ಳಿ	ಕಲಘಟಗಿ	ಗ್ರಾಮದ ಮಧ್ಯದಲ್ಲಿ	೧೨
೩೨	ಮಾಸ್ತಿಕಲ್ಲು	ಯರಗುಪ್ಪಿ	ಕುಂದಗೋಳ	ಊರ ಹೊರಗಿನ ಹೊಲದಲ್ಲಿ	೧೩
೩೩	ಮಾಸ್ತಿಕಲ್ಲು	ವರೂರು	ಹುಬ್ಬಳ್ಳಿ	ಗ್ರಾಮದ ಮಧ್ಯದಲ್ಲಿ	೧೨

೩೪	ಮಾಸ್ತಿಕಲ್ಲು	ಸತ್ತೂರು	ಧಾರವಾಡ	ಕಲ್ಮೇಶ್ವರ ದೇ.ಆವರಣ	೧೧
೩೫	ಮಾಸ್ತಿಕಲ್ಲು	ಸಿದ್ದಾಪುರ	ಧಾರವಾಡ	ಗ್ರಾಮದ ಪಕ್ಕದಲ್ಲಿ	೧೩
೩೬	ಮಾಸ್ತಿಕಲ್ಲು	ಸಂಶಿ	ಕುಂದಗೋಳ	ಫಕ್ಕೀರೇಶ್ವರ ದೇ. ಹತ್ತಿರ	೧೨
೩೭	ಮಾಸ್ತಿಕಲ್ಲು	ಸೋಮನಕೊಪ್ಪ	ಧಾರವಾಡ	ಗ್ರಾಮದ ಮಧ್ಯದಲ್ಲಿ	೧೨
೩೮	ಮಾಸ್ತಿಕಲ್ಲು	ಹಟಗಿನಹಾಳ	ಕಲಘಟಗಿ	ಕೆರೆಯ ಹತ್ತಿರ	೧೧
೩೯	ಮಾಸ್ತಿಕಲ್ಲು	ಹಿರೇಹೊನ್ನಳ್ಳಿ	ಕಲಘಟಗಿ	ಗ್ರಾಮದ ಮಧ್ಯದಲ್ಲಿ	೧೫
೪೦	ಮಾಸ್ತಿಕಲ್ಲು	ಹೊಲ್ತಿಕೋಟೆ	ಧಾರವಾಡ	ನಾಗೇಂದ್ರ ದೇ. ಆವರಣ	೧೨

ಗೋಸಾಸಗಲ್ಲುಗಳು

ಕ್ರಸಂ	ಶಿಲ್ಪ	ಗ್ರಾಮ	ತಾಲೂಕು	ಸ್ಥಳ	ಕಾಲ(ಕ್ರಿ.ಶ)
೧	ಗೋಸಾಸ	ಅಣ್ಣಿಗೇರಿ	ನವಲಗುಂದ	ಬನಶಂಕರಿ ದೇ. ಮುಂದೆ	೦೮
೨	ಗೋಸಾಸ	ಅಂಚಟಗೇರಿ	ಕಲಘಟಗಿ	ಊರ ಮಧ್ಯದಲ್ಲಿ	೧೩
೩	ಗೋಸಾಸ	ಕಲ್ಲಾಪೂರ	ಧಾರವಾಡ	ಕಲ್ಮೇಶ್ವರ ದೇ.ಎಡಭಾಗ	೧೪
೪	ಗೋಸಾಸ	ಕಾರ್ಲವಾಡ	ನವಲಗುಂದ	ಹನುಮಂತ ದೇ.ಹತ್ತಿರ	೦೯
೫	ಗೋಸಾಸ	ಕಿರೇಸೂರು	ಹುಬ್ಬಳ್ಳಿ	ಊರಕೆರೆಯ ಬಳಿ	೧೨
೬	ಗೋಸಾಸ	ಗಬ್ಬೂರು	ಹುಬ್ಬಳ್ಳಿ	ಊರ ಮುಂಭಾಗದಲ್ಲಿ	೧೨
೭	ಗೋಸಾಸ	ಗುಡಗೇರಿ	ಕುಂದಗೋಳ	ಪರ್ವತದೇವರ ಗುಡಿಯ ಪಕ್ಕ	೦೮
೮	ಗೋಸಾಸ	ಛಬ್ಬಿ	ಹುಬ್ಬಳ್ಳಿ	ಈಶ್ವರ ದೇ.ಎದುರು	೧೩
೯	ಗೋಸಾಸ	ದೇವಿಕೊಪ್ಪ	ಕಲಘಟಗಿ	ಸೀಗನಹಳ್ಳಿ ರಸ್ತೆಯ ಹತ್ತಿರ	೧೨
೧೦	ಗೋಸಾಸ	ನಾವಳ್ಳಿ	ನವಲಗುಂದ	ಕಲ್ಮೇಶ್ವರ ದೇ. ಪೂರ್ವಕ್ಕೆ	೧೨
೧೧	ಗೋಸಾಸ	ಬೆಳಗಲಿ	ಹುಬ್ಬಳ್ಳಿ	ಬಸವೇಶ್ವರ ದೇ. ಹಿಂಭಾಗ	೧೨
೧೨	ಗೋಸಾಸ	ಮಣಕವಾಡ	ನವಲಗುಂದ	ಕಲ್ಮೇಶ್ವರ ದೇ.ಹತ್ತಿರ	೦೯
೧೩	ಗೋಸಾಸ	ಮಲ್ಲಿಗವಾಡ	ಹುಬ್ಬಳ್ಳಿ	ಸೋಮೇಶ್ವರ ದೇ. ಮುಂಭಾಗ	೧೦


೧೪	ಗೋಸಾಸ	ಮುಗುದ	ಧಾರವಾಡ	ಹೆಗ್ಗೇರೆ ಬಳಿ	೧೨
೧೫	ಗೋಸಾಸ	ಮಂಟೂರು	ಹುಬ್ಬಳ್ಳಿ	ಕಲ್ಮೇಶ್ವರ ದೇ.ಆವರಣ	೧೨
೧೬	ಗೋಸಾಸ	ಶಿರೂರು	ನವಲಗುಂದ	ಕಲ್ಮೇಶ್ವರ ದೇ. ಮುಂಭಾಗ	೧೦
೧೭	ಗೋಸಾಸ	ಶಿಶ್ವಿನಹಳ್ಳಿ	ನವಲಗುಂದ	ಹನುಂತ ದೇ.ಮುಂದೆ	೦೯

ನಿಷಿಧಿ ಗಲ್ಲುಗಳು

ಕ್ರಸಂ	ಶಿಲ್ಪ	ಗ್ರಾಮ	ತಾಲೂಕು	ಸ್ಥಳ	ಕಾಲ(ಕ್ರಿ.ಶ)
೧	ನಿಷಿಧಿಗಲ್ಲು	ಅಣ್ಣಿಗೇರಿ	ನವಲಗುಂದ	ಬಸ್ತಿಕೇರಿ ಓಣಿಯಲ್ಲಿ	೧೨
೨	ನಿಷಿಧಿಗಲ್ಲು	ಅಳ್ನಾವರ	ಧಾರವಾಡ	ತಿಲಕನಗರ ಗಿರಣಿಯ ಹತ್ತಿರ	೧೨
೩	ನಿಷಿಧಿಗಲ್ಲು	ಕಿತ್ತೂರು	ನವಲಗುಂದ	ತಿರ್ಲಾಪುರ ಜಮೀನನಲ್ಲಿ	೧೨
೪	ನಿಷಿಧಿಗಲ್ಲು	ಗರಗ	ಧಾರವಾಡ	ಕೆರೆಯ ಬಲಭಾಗದಲ್ಲಿ	೧೨
೫	ನಿಷಿಧಿಗಲ್ಲು	ಗರಗ	ಧಾರವಾಡ	ಕೆರೆಯ ಎಡಭಾಗದಲ್ಲಿ	೧೨
೬	ನಿಷಿಧಿಗಲ್ಲು	ಛಬ್ಬಿ	ಹುಬ್ಬಳ್ಳಿ	ಊರ ಮಧ್ಯದಲ್ಲಿ	೧೩
೭	ನಿಷಿಧಿಗಲ್ಲು	ನರೇಂದ್ರ	ಧಾರವಾಡ	ಗುಡ್ಡದ ಮಠದ ದಿಬ್ಬದ ಮೇಲೆ	೧೨
೮	ನಿಷಿಧಿಗಲ್ಲು	ಮಂಟೂರು	ಹುಬ್ಬಳ್ಳಿ	ಮಲ್ಲಭೇಶ್ವರ ದೇ. ಹಿಂಭಾಗ	೧೨
೯	ನಿಷಿಧಿಗಲ್ಲು	ಮೊರಬ	ನವಲಗುಂದ	ಕಲೇಶ್ವರ ದೇ.ಹತ್ತಿರ	೧೨
೧೦	ನಿಷಿಧಿಗಲ್ಲು	ಸೈಬನಕೊಪ್ಪ	ಧಾರವಾಡ	ಹನುಮಂತ ದೇ. ಮುಂಭಾಗ	೧೨

ಶಾಸನಗಳ ಅಧ್ಯಯನವಾದರೆ ಅಷ್ಟೇಸಾಲದು ಶಾಸನಗಳ ಜೊತೆಗೆ ಶಾಸನಶಿಲ್ಪದ ಅಧ್ಯಯನವು ಅಷ್ಟೇ ಮಹತ್ವದ್ದಾಗಿದೆ. ಶಾಸನಶಿಲ್ಪಗಳಲ್ಲಿ ಶೈವದಾನ ಶಾಸನಶಿಲ್ಪಗಳೇ ಹೆಚ್ಚಾಗಿ ದೊರೆತಿವೆ. ಈ ಶಾಸನಶಿಲ್ಪಗಳು ಹುಬ್ಬಳ್ಳಿ, ನವಲಗುಂದ, ಕಲಘಟಗಿ, ಕುಂದಗೋಳ ಪ್ರದೇಶಗಳಲ್ಲಿ ಕಾಣಸಿಗುತ್ತವೆ. ಇದರ ಜೊತೆಗೆ ಶಾಸನರಹಿತ ಶಿಲ್ಪಗಳು ಈ ಭಾಗದಲ್ಲಿ ಕಂಡು ಬಂದಿವೆ. ಶಾಸನರಹಿತ ಮತ್ತು ಶಾಸನಸಹಿತ ಶಿಲ್ಪಗಳ ಪಟ್ಟಿಮಾಡಿ ಈ ಅಧ್ಯಾಯದ ಕೊನೆಯಲ್ಲಿ ನೀಡಲಾಗಿದೆ. ಚಿಕನರ್ತಿಯ ಶಾಸನಶಿಲ್ಪದಲ್ಲಿ ಮಧ್ಯದ ಕುಂಭದ ಕಲಾಕೃತಿ ಮಂಗಳಸೂಚಕವಾಗಿದ್ದುದು ವಿಶೇಷತೆಯಾಗಿದೆ. ಶಾಸನಶಿಲ್ಪದ ದೃಷ್ಟಿಯಿಂದ ಅವುಗಳ ಕಾಲಮಾನ, ಅರಸು ಮನೆತನ, ವಸ್ತು ವಿಷಯದ ದೃಷ್ಟಿಯಿಂದ ಮಹತ್ವದ್ದಾಗಿದೆ.

ಸ್ಮಾರಕ ಶಿಲ್ಪಗಳ ವೈವಿಧ್ಯತೆ



ಸ್ಮಾರಕ ಶಿಲ್ಪಗಳ ವೈವಿಧ್ಯತೆ

ವೀರಗಲ್ಲು	:	೧೧೨
ಮಾಸ್ತಿಗಲ್ಲು	:	೪೦
ಗೋಸಾಸಗಲ್ಲು	:	೧೭
ನಿಷಧಿಗಲ್ಲು	:	೧೦

ಅಡಿ ಟಿಪ್ಪಣಿಗಳು

೧. ಶಿವರಾಮ ಕಾರಂತ., ಭಾರತೀಯ ಶಿಲ್ಪ, ೧೯೭೫, ಪು. ೧

೨. ಪರಮಶಿವಮೂರ್ತಿ ಡಿ.ವಿ., ಕನ್ನಡ ಶಾಸನಶಿಲ್ಪಗಳು, ೧೯೯೯, ಪು. ೭

೩. ಅದೇ., ಪು. ೮

೪. ನರೇಗಲ್ಲ ಎಂ.ಎಸ್., ಗದಗ ಉತ್ತರ ಜಿಲ್ಲೆಯ ಶಾಸನಗಳು:ಒಂದು ಅಧ್ಯಯನ, ೨೦೦೯, ಪು. ೨೩೯

೫. ಭಟ್‌ಸೂರಿ ಕೆ.ಜಿ., ಹಾಡುವಳ್ಳಿ ಜೈನ ವಾಸ್ತು-ಮೂರ್ತಿಶಿಲ್ಪ, ೨೦೧೧, ಪು. ೬೮

೬ ಪರಮಶಿವಮೂರ್ತಿ ಡಿ.ವಿ., ಪೂರ್ವೋಕ್ತ, ಪು. ೫೫

೭ ಕಾಣೆ ಪಿ.ವಿ., ಹಿಸ್ಟರಿ ಆಫ್ ಧರ್ಮಶಾಸ್ತ್ರ, ೧೯೮೯, ಪು. ೮೬೯

೮. ಪರಮಶಿವಮೂರ್ತಿ ಡಿ.ವಿ., ಪೂರ್ವೋಕ್ತ, ಪು. ೬೦

೯. ಸುರೇಶ ಕ.ಹಾನಗಲ್ಲ., ಕುಂದಗೋಳ ತಾಲೂಕಿನ ಅಪರೂಪದ ಶಾಸನಶಿಲ್ಪಗಳು, ಶಾಸನ ಅಧ್ಯಯನ, ಸಂ. ೯, ಸಂ. ೧&೨, ೨೦೧೨, ಪು. ೧೨೬-೧೨೭

೧೦. ಅದೇ. ಪು. ೧೨೮

೧೧. ಅದೇ. ಪು. ೧೨೯

೧೨. ಕಲಬುರ್ಗಿ ಎಂ.ಎಂ.(ಸಂ), ಧಾರವಾಡ ಜಿಲ್ಲೆಯ ಶಾಸನಸೂಚಿ, ೧೯೭೪, ಪು. ೫ ಶಾ.ಸಂ. ೯

೧೩. ಅದೇ., ಪು. ೪

೧೪. ಕ್ಷೇತ್ರಕಾರ್ಯದಲ್ಲಿ ದೊರೆತಂತಹ ಶಾಸನೋಕ್ತ ಶಿಲ್ಪ.

೧೫. ಕಲಬುರ್ಗಿ ಎಂ.ಎಂ.(ಸಂ), ಪೂರ್ವೋಕ್ತ, ಪು. ೨ ಶಾ.ಸಂ. ೩೨

೧೬. ಸುರೇಶ ಕ.ಹಾನಗಲ್ಲ., ಪೂರ್ವೋಕ್ತ, ಪು. ೧೨೬

೧೭. ಅದೇ., ಪು. ೧೨೭

೧೮. ಕ್ಷೇತ್ರಕಾರ್ಯದಲ್ಲಿ ದೊರೆತಂತಹ ಶಿಲ್ಪ.

೧೯. ಸುರೇಶ ಕ.ಹಾನಗಲ್ಲ., ಪೂರ್ವೋಕ್ತ, ಪು. ೧೨೭

೨೦. ಎಸ್.ಐ.ಐ., ೧೧-ii, ಶಾ.ಸಂ. ೨೧೧

೨೧. ಎಸ್.ಐ.ಐ., ೧೧-ii, ಶಾ.ಸಂ. ೧೭೭

೨೨. ಎಸ್.ಐ.ಐ., ೧೫, ಶಾ.ಸಂ. ೭

೨೩. ಕ್ಷೇತ್ರಕಾರ್ಯದಲ್ಲಿ ದೊರೆತಂತಹ ಶಿಲ್ಪ.

೨೪. ಕ್ಷೇತ್ರಕಾರ್ಯದಲ್ಲಿ ದೊರೆತಂತಹ ಶಿಲ್ಪ.

೨೫. ಕ್ಷೇತ್ರಕಾರ್ಯದಲ್ಲಿ ದೊರೆತಂತಹ ಶಿಲ್ಪ.

೨೬. ಮಹದೇವ ಸಿ., ಕರ್ನಾಟಕ ದೇವಾಲಯ ಕೋಶ, ಧಾರವಾಡ ಜಿಲ್ಲೆ, ೨೦೦೬,ಪು. ೧೨೬

೨೭. ಎಸ್.ಐ.ಐ., ೧೧-ii, ಶಾ.ಸಂ. ೧೭೧

೨೮. ಎಸ್.ಐ.ಐ., ೧೧-ii, ಶಾ.ಸಂ. ೧೨೧

೨೯. ಎಸ್.ಐ.ಐ., ೧೫, ಶಾ.ಸಂ. ೧೯೫

೩೦. ಇ.ಐ., ೧೭, ಶಾ.ಸಂ. ೯

೩೧. ಸುರೇಶ ಕ.ಹಾನಗಲ್ಲ., ಪೂರ್ವೋಕ್ತ, ಪು. ೧೨೬

೩೨. ಅದೇ. ಪು. ೧೨೬

೩೩. ಎಸ್.ಐ.ಐ., ೧೬, ಶಾ.ಸಂ. ೧೬

೩೪. ಕಲಬುರ್ಗಿ ಎಂ.ಎಂ.(ಸಂ), ಪೂರ್ವೋಕ್ತ, ಪು. ೫ ಶಾ.ಸಂ. ೩೪

೩೫. ಅದೇ., ಪು. ೬ ಶಾ.ಸಂ. ೯

೩೬. ಎಸ್.ಐ.ಐ., ೧೫, ಶಾ.ಸಂ. ೧೧೭

೩೭. ಎಸ್.ಐ.ಐ., ೧೧-ii, ಶಾ.ಸಂ. ೧೮೬

೩೮. ಎಸ್.ಐ.ಐ., ೧೫, ಶಾ.ಸಂ. ೭೩೪

೩೯. ಎಸ್.ಐ.ಐ., ೧೫, ಶಾ.ಸಂ. ೨೨೪

೪೦. ಎಸ್.ಐ.ಐ., ೧೫, ಶಾ.ಸಂ. ೫೯

೪೧. ಹನುಮಾಕ್ಷಿ ಗೂಗಿ., ಹುಬ್ಬಳ್ಳಿ ತಾಲೂಕಿನ ಶಾಸನಗಳು, ೨೦೧೩, ಪು. ೧೭೦

೪೨. ಅದೇ., ಪು. ೧೭೦

೪೩. ಅದೇ., ಪು. ೧೭೦

೪೪. ಅದೇ., ಪು. ೧೬೮

೪೫. ಅದೇ., ಪು. ೧೪೪

೪೬. ಅದೇ., ಪು. ೧೩೮

೪೭. ಅದೇ., ಪು. ೧೪೧

೪೮. ಅದೇ., ಪು. ೧೩೪.

೪೯. ಪರಮಶಿವಮೂರ್ತಿ ಡಿ.ವಿ., ಪೂರ್ವೋಕ್ತ, ಪು. ೫೬

೫೦. ಸುರೇಶ ಕ.ಹಾನಗಲ್ಲ., ಪೂರ್ವೋಕ್ತ, ಪು. ೧೨೮

೫೧. ಜಯಮ್ಮ ಬಿ., ಧಾರವಾಡ ಜಿಲ್ಲೆಯ ಪುರಾತತ್ವ, ೨೦೧೦. ಪು. ೮೮

೫೨. ಎಸ್.ಐ.ಐ., ೧೫, ಶಾ.ಸಂ. ೩೧೮

೫೩. ಎಸ್.ಐ.ಐ., ೧೫, ಶಾ.ಸಂ. ೬೭೯

೫೪. ಕ್ಷೇತ್ರಕಾರ್ಯದಲ್ಲಿ ದೊರೆತ ಶಾಸನೋಕ್ತ ಶಿಲ್ಪ

೫೫. ಹನುಮಾಕ್ಷಿ ಗೂಗಿ., ಪೂರ್ವೋಕ್ತ, ಪು.೧೭೫

೫೬. ಅದೇ., ಪು. ೧೭೬

೫೭. ಪರಮಶಿವಮೂರ್ತಿ ಡಿ.ವಿ., ಪೂರ್ವೋಕ್ತ, ಪು. ೫೬

೫೮. ಕಾಣೆ ಪಿ.ವಿ., ಪೂರ್ವೋಕ್ತ, ಪು. ೮೩೭

೫೯. ಎಸ್.ಐ.ಐ., ೨೦, ಶಾ.ಸಂ. ೩೨೫

೬೦. ಕಲಬುರ್ಗಿ ಎಂ.ಎಂ.(ಸಂ), ಪೂರ್ವೋಕ್ತ, ಪು. ೧೫ ಶಾ.ಸಂ. ೭೦

೬೧. ಶ್ರೀನಿವಾಸ ಪಾಡಿಗಾರ., ಮುತ್ತಗಿ ಜೈನಪಾದಪೀಠ ಶಾಸನ, ಸಮಾಜ ವಿಜ್ಞಾನಗಳ ನಿಕಾಯ, ಧಾರವಾಡ. ಸಂ. ೨೩. ಪು. ೧೨-೧೨

೬೨. ಎಸ್.ಐ.ಐ., ೧೧-ii, ಶಾ.ಸಂ. ೭೮

೬೩. ಕರ್ನಾಟಕ ಪ್ರಾಚ್ಯವಸ್ತು ಸಂಗ್ರಹಾಲಯ, ಧಾರವಾಡ ಮೂಜಿಯಂನಲ್ಲಿದೆ.

೬೪. ಕರ್ನಾಟಕ ಪ್ರಾಚ್ಯವಸ್ತು ಸಂಗ್ರಹಾಲಯ, ಧಾರವಾಡ ಮೂಜಿಯಂನಲ್ಲಿದೆ.

೬೫. ಕಲಬುರ್ಗಿ ಎಂ.ಎಂ.(ಸಂ), ಪೂರ್ವೋಕ್ತ, ಪು. ೫ ಶಾ.ಸಂ. ೨೬

೬೬. ಅದೇ., ಪು. ೫ ಶಾ.ಸಂ. ೨೪

೬೭. ಅದೇ., ಪು. ೫ ಶಾ.ಸಂ. ೧೬

೬೮. ಅದೇ., ಪು. ೫ ಶಾ.ಸಂ. ೧೪

೬೯. ಅದೇ., ಪು. ೭ ಶಾ.ಸಂ. ೩೫

೭೦. ಅದೇ., ಪು. ೭ ಶಾ.ಸಂ. ೩೯

೭೧. ಅದೇ., ಪು. ೩೫ ಶಾ.ಸಂ. ೧೧೦

೭೨. ಕ್ಷೇತ್ರ ಕಾರ್ಯದಲ್ಲಿ ದೊರೆತ ಶಾಸನೋಕ್ತ ಶಿಲ್ಪವಾಗಿದೆ.

೭೩. ಕಲಬುರ್ಗಿ ಎಂ.ಎಂ.(ಸಂ), ಪೂರ್ವೋಕ್ತ, ಪು. ೩೫ ಶಾ.ಸಂ. ೯೮

೭೪. ಹನುಮಾಕ್ಷಿ ಗೂಗಿ., ಪೂರ್ವೋಕ್ತ, ಪು. ೧೬೩

೭೫. ಕಲಬುರ್ಗಿ ಎಂ.ಎಂ.(ಸಂ), ಪೂರ್ವೋಕ್ತ, ಪು. ೨೫ ಶಾ.ಸಂ. ೪೦೭

೭೬. ಅದೇ., ಪು. ೫ ಶಾ.ಸಂ. ೨೭

೭೭. ಅದೇ., ಪು. ೧ ಶಾ.ಸಂ. ೮೮

೭೮. ಎಸ್.ಐ.ಐ., ೧೫, ಶಾ.ಸಂ. ೫೯೦

೭೯. ಎಸ್.ಐ.ಐ., ೨೦, ಶಾ.ಸಂ. ೩೨೮

೮೦. ಎಸ್.ಐ.ಐ., ೨೦, ಶಾ.ಸಂ. ೩೨೯

೮೧. ಕ್ಷೇತ್ರ ಕಾರ್ಯದಲ್ಲಿ ದೊರೆತ ಶಾಸನರಹಿತ ಶಿಲ್ಪವಾಗಿದೆ.

೮೨. ಕ್ಷೇತ್ರ ಕಾರ್ಯದಲ್ಲಿ ದೊರೆತ ಶಾಸನರಹಿತ ಶಿಲ್ಪವಾಗಿದೆ.

೮೩. ಕಲಬುರ್ಗಿ ಎಂ.ಎಂ.(ಸಂ), ಪೂರ್ವೋಕ್ತ, ಪು. ೨೫ ಶಾ.ಸಂ. ೪೭

೮೪. ಕ್ಷೇತ್ರ ಕಾರ್ಯದಲ್ಲಿ ದೊರೆತ ಶಾಸನರಹಿತ ಶಿಲ್ಪವಾಗಿದೆ.

೮೫. ಕ್ಷೇತ್ರ ಕಾರ್ಯದಲ್ಲಿ ದೊರೆತ ಶಾಸನರಹಿತ ಶಿಲ್ಪವಾಗಿದೆ.

೮೬. ಕಲಬುರ್ಗಿ ಎಂ.ಎಂ.(ಸಂ), ಪೂರ್ವೋಕ್ತ, ಪು. ೫ ಶಾ.ಸಂ. ೨೭

೮೭. ಎಸ್.ಐ.ಐ., ೧೫, ಶಾ.ಸಂ. ೫೫೩

೮೮. ಎಸ್.ಐ.ಐ., ೧೧-ii, ಶಾ.ಸಂ. ೩೨

೮೯. ಕಲಬುರ್ಗಿ ಎಂ.ಎಂ.(ಸಂ), ಪೂರ್ವೋಕ್ತ, ಪು. ೪ ಶಾ.ಸಂ. ೪೩

೯೦. ಹನುಮಾಕ್ಷಿ ಗೂಗಿ., ಪೂರ್ವೋಕ್ತ, ಪು. ೩೬

೯೧. ಅದೇ., ಪು. ೩೧-೩೨

೯೨. ಅದೇ., ಪು. ೩೫

೯೩. ಅದೇ., ಪು. ೩೭

೯೪. ಅದೇ., ಪು. ೩೦

೯೫. ಚಿದಾನಂದಮೂರ್ತಿ ಎಂ., ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ, ೨೦೦೮, ಪು. ೩೧೪

೯೬. ಕಲಬುರ್ಗಿ ಎಂ.ಎಂ.(ಸಂ), ಪೂರ್ವೋಕ್ತ, ಪು. ೩೧ ಶಾ.ಸಂ. ೪೪೯

೯೭. ಇ.ಕ. ಸಂ.೮. ನಂ. ೧೭೫

೯೮. ಕನ್ನಡ ಸಂಶೋಧನಾ ಸಂಸ್ಥೆ ಧಾರವಾಡ.(ಕೆ.ಆರ್.ಐ)

೯೯. ಕ್ಷೇತ್ರ ಕಾರ್ಯದಲ್ಲಿ ದೊರೆತ ಶಾಸನರಹಿತ ಶಿಲ್ಪವಾಗಿದೆ.

೧೦೦. ಚಿದಾನಂದಮೂರ್ತಿ ಎಂ., ಪೂರ್ವೋಕ್ತ, ಪು. ೩೧೭

೧೦೧. ಎಸ್.ಐ.ಐ., ೧೫, ಶಾ.ಸಂ. ೨೧೬

೧೦೨. ಕ್ಷೇತ್ರ ಕಾರ್ಯದಲ್ಲಿ ದೊರೆತ ಶಾಸನರಹಿತ ಶಿಲ್ಪವಾಗಿದೆ.

೧೦೩. ಕ್ಷೇತ್ರ ಕಾರ್ಯದಲ್ಲಿ ದೊರೆತ ಶಾಸನರಹಿತ ಶಿಲ್ಪವಾಗಿದೆ.

೧೦೪. ಕ್ಷೇತ್ರ ಕಾರ್ಯದಲ್ಲಿ ದೊರೆತ ಶಾಸನರಹಿತ ಶಿಲ್ಪವಾಗಿದೆ.

೧೦೫. ಕ್ಷೇತ್ರ ಕಾರ್ಯದಲ್ಲಿ ದೊರೆತ ಶಾಸನರಹಿತ ಶಿಲ್ಪವಾಗಿದೆ.

೧೦೬. ಕ್ಷೇತ್ರ ಕಾರ್ಯದಲ್ಲಿ ದೊರೆತ ಶಾಸನರಹಿತ ಶಿಲ್ಪವಾಗಿದೆ.

೧೦೭. ಹನುಮಾಕ್ಷಿ ಗೂಗಿ., ಪೂರ್ವೋಕ್ತ, ಪು. ೩೦

೧೦೮. ಅದೇ., ಪು. ೩೯

೧೦೯. ಅದೇ., ಪು. ೨೮

೧೧೦. ಎಸ್.ಐ.ಐ., ೧೫, ಶಾ.ಸಂ. ೬೫೧

೧೧೧. ಎಸ್.ಐ.ಐ., ೧೫, ಶಾ.ಸಂ. ೩೭೮

೧೧೨. ಷಡಕ್ಷರಯ್ಯ ರು.ಮ., ಕಲಘಟಗಿ ಪ್ರದೇಶದಲ್ಲಿ ವಿಜಯನಗರ ಮತ್ತು ವಿಜಯನಗರೋತ್ತ ಕಾಲದ ಶಿಲ್ಪಗಳು, ವಿಜಯನಗರ ಅಧ್ಯಯನ, ೨೦೦೩ ಸಂ. ೯ ಪು. ೯೫-೧೦೯

೧೧೩. ಅದೇ. ಪು. ೧೩೮

೧೧೪. ಅದೇ. ಪು. ೧೩೯

೧೧೫. ಅದೇ. ಪು. ೧೪೦

೧೧೬. ಅದೇ. ಪು. ೧೪೧

೧೧೭. ಅದೇ. ಪು. ೧೪೧

೧೧೮. ಕ್ಷೇತ್ರಕಾರ್ಯದಲ್ಲಿ ದೊರೆತಂತಹ ಶಾಸನರಹಿತ ಶಿಲ್ಪ

೧೧೯. ನರೇಗಲ್ ಎಂ.ಎಸ್., ಪೂರ್ವೋಕ್ತ, ಪು. ೨೪೭

೧೨೦. ಎಸ್.ಐ.ಐ., ೧೧-ii, ಶಾ.ಸಂ. ೫

೧೨೧. ಎಸ್.ಐ.ಐ., ೨೦, ಶಾ.ಸಂ. ೧೨

೧೨೨. ಕಲಬುರ್ಗಿ ಎಂ.ಎಂ.(ಸಂ), ಪೂರ್ವೋಕ್ತ, ಪು. ೨೫ ಶಾ.ಸಂ. ೪೦೪

೧೨೩. ನರೇಗಲ್ ಎಂ.ಎಸ್., ಪೂರ್ವೋಕ್ತ, ಪು. ೨೪೮

೧೨೪. ಜಯಮ್ಮ ಬಿ., ಪೂರ್ವೋಕ್ತ, ಪು. ೨೭೪

೧೨೫. ಕಲಬುರ್ಗಿ ಎಂ.ಎಂ.(ಸಂ), ಪೂರ್ವೋಕ್ತ, ಪು. ೫೯–೬೦ ಶಾ.ಸಂ. ೪೨

೧೨೬. ಎಸ್.ಐ.ಐ., ೧೫, ಶಾ.ಸಂ. ೬೧೦

೧೨೭. ಅಪ್ಪಣ್ಣ ಎನ್.ಹಂಜೆ., ಪೂರ್ವೋಕ್ತ, ೨೦೦೮, ಪು. ೧೦೨

೧೨೮. ಅದೇ., ಪು. ೧೦೩

□□□

ಅಧ್ಯಾಯ ಐದು

ಶಾಸನೋಕ್ತ ದೇವಾಲಯಗಳು

೫.೧ ಪೀಠಿಕೆ

ಪ್ರಾಚೀನ ಕಾಲದಿಂದ ಇಂದಿನವರೆಗೂ ದೇವಾಲಯಗಳು ಜನರ ಲೌಕಿಕ ಮತ್ತು ಆಧ್ಯಾತ್ಮಿಕ ಪ್ರಗತಿಗಳಿಗೆ ಒಂದು ಸಾಧನ ಕೇಂದ್ರ, ದೇವಾಲಯ ಸಂಸ್ಕೃತ ಶಬ್ದವಾಗಿದ್ದು, ಇದರಲ್ಲಿ ಎರಡು ಶಬ್ದಗಳಿವೆ. ಒಂದು ದೇವ. ಇನ್ನೊಂದು ಆಲಯ. ಅಂದರೆ ದೇವರ ಮನೆ, ದೇವರ ಆಲಯ, ದೇವರ ಕಟ್ಟಡ ಅಂದರೆ ದೇವರು ಇರತಕ್ಕ ಸ್ಥಾನ ಎಂದು ಅರ್ಥ.[೧] ದೇವಾಲಯಗಳು ಮಾನವನ ಬದುಕಿನಲ್ಲಿ ಮಹತ್ತರವಾದ ಪಾತ್ರವನ್ನು ವಹಿಸಿದ್ದಲ್ಲದೇ ಇವು ಸಾಮೂಹಿಕ ಪೂಜೆ, ಪ್ರಾರ್ಥನೆಗಳನ್ನು ಸಲ್ಲಿಸಲು ಅನುಕೂಲವಾಗಿರುವ ಒಂದು ತಾಣವಾಗಿವೆ. ಒಟ್ಟಾರೆ ಇವು ಸಮಾಜದ ಧಾರ್ಮಿಕ ಶ್ರದ್ಧೆ ಹಾಗೂ ಭಕ್ತಿಯ ಪ್ರತೀಕ. ಜೊತೆಗೆ ನಮ್ಮ ಭವ್ಯ ಸಂಸ್ಕೃತಿಯ ಪರಂಪರೆಯ ನಾಡಿಯನ್ನು ಹಿಡಿದು ನಡೆಸುತ್ತಿರುವಂತಹ ಸಾಂಸ್ಕೃತಿಕ ನೆಲೆಗಳಾಗಿವೆ.[೨]

ಮಾನವನು ತನ್ನ ಪ್ರಾಪಂಚಿಕ ಸುಖವನ್ನು ಪಡೆಯಲು, ಜಗತ್ತಿನ ಸೃಷ್ಟಿಕರ್ತ ಹಾಗೂ ನಿಯಂತ್ರಕನಾದ ದೇವರ ಬಳಿ ಹೋಗಲು ಸರಿಯಾದ ಮಾರ್ಗವನ್ನು ತೋರಿಸುವಂತೆ, ಆತನನ್ನು ಧ್ಯಾನಿಸಲು, ಮನಸ್ಸಿಗೆ ಶಾಂತತೆ ಪಡೆಯಲು ದೇವಾಲಯಗಳು ಅವಶ್ಯಕ.[೩]

ದೇವಾಲಯಗಳ ಉಗಮ ಮತ್ತು ಬೆಳವಣಿಗೆ

ಶಿಲಾಯುಗದ ಮಾನವನು ಪ್ರಕೃತಿಯ ಒಂದು ಭಾಗ. ಮಳೆ, ಗುಡುಗು, ಸಿಡಿಲು, ಹುಟ್ಟು, ಸಾವುಗಳು ನಿಸರ್ಗದ ನಿಯಮಗಳೆಂದು ಅರಿಯದೇ ಭೀತಿಗೊಂಡನು. ಪ್ರಕೃತಿಯ ಬಗ್ಗೆ ಭಯ ಮತ್ತು ಆಶ್ಚರ್ಯವುಂಟಾಯಿತು. ಈ ಎಲ್ಲಾ ಬದಲಾವಣೆಗಳ ಹಿಂದೆ ಯಾವುದೇ ಒಂದು ಅನಂತ ಹಾಗೂ ಅಗೋಚರ ಶಕ್ತಿಯಿದೆ ಎಂದು ನಂಬಿ, ಅದಕ್ಕೆ ಒಂದು ರೂಪವನ್ನು ಕೊಟ್ಟನು. ಆ ರೂಪಗಳ ರಕ್ಷಣಾರ್ಥವಾಗಿ ನೈಸರ್ಗಿಕ ಗುಹಾಲಯಗಳನ್ನು ಪ್ರಾರಂಭದ ಕಾಲಘಟ್ಟಗಳಲ್ಲಿ ಬಳಸಿಕೊಂಡರು. ಹಾಗಾಗಿ ಆಲಯಗಳನ್ನು ನಿರ್ಮಿಸಲು ಪ್ರಾರಂಭಿಸಿದನು, ಈ ಪರಿಕಲ್ಪನೆಯೇ ದೇವಾಲಯಗಳ ನಿರ್ಮಾಣಕ್ಕೆ ನಾಂದಿಯಾಯಿತು.[೪]

ಪ್ರಾರಂಭದಲ್ಲಿ ದೇವರ ಪ್ರತಿಮೆಯನ್ನು ಪ್ರತಿಷ್ಠಾಪಿಸಲು ಒಂದು ವೇದಿಕೆ ಸ್ಥಾಪಿಸಿ, ನಂತರದ ಕಾಲಘಟ್ಟದಲ್ಲಿ ಪೂಜಾವಿಧಿ-ವಿಧಾನಗಳು ಹಾಗೂ ಆಚರಣೆಗಳು ಹೆಚ್ಚಿದಂತೆ ರಕ್ಷಣೆಗಾಗಿ ದೇವಾಲಯಗಳು ಹೆಚ್ಚು ವಿಸ್ತಾರತೆಯನ್ನು ಪಡೆದುಕೊಂಡವು. ಮಾನವನು ಗುಹಾಂತರ ದೇವಾಲಯಗಳನ್ನು ನಿರ್ಮಿಸಿದ್ದ ಬಗ್ಗೆ "ಮಂಡಗಪಟ್ಟುವಿನ ಲಕ್ಷತಾಯನದ" ಶಾಸನವು ಉಲ್ಲೇಖಿಸಿದೆ.[೫] ಇದರ ಪ್ರಾಚೀನತೆಯ ಉಲ್ಲೇಖವು ಕ್ರಿ.ಪೂ. ೨ನೆಯ ಶತಮಾನದಲ್ಲಿನ ಹೆಲಿಯೋಡೋರಸ್‌ನು ಪ್ರತಿಷ್ಠಾಪಿಸಿದ ಗರುಡ ಸ್ತಂಭ ಶಾಸನದಿಂದ ತಿಳಿಯುತ್ತದೆ.[೬] ಇದು ವೈಷ್ಣವ ಪರಂಪರೆಯ

ವಾಸುದೇವನ ದೇವಾಲಯವಾಗಿದೆ. ಇನ್ನು ಕರ್ನಾಟಕದಲ್ಲಿ ಇದರ ಪ್ರಾಚೀನತೆಗೆ ಸಂಬಂಧಪಟ್ಟಂತೆ ಕ್ರಿ.ಶ. ೧ನೇ ಶತಮಾನದ ಅಂಕೋಲ ಬಳಿಯ ಬೋಳೆಯಲ್ಲಿ ಇಟ್ಟಿಗೆಯಿಂದ ನಿರ್ಮಾಣವಾದ ದೇವಾಲಯ ಪತ್ತೆಯಾಗಿದೆ.[೭] ಜೊತೆಗೆ ಕ್ರಿ.ಶ. ೨ನೇ ಶತಮಾನದಲ್ಲಿ ನವಲಗುಂದ ತಾಲೂಕಿನ ವಾಸದಲ್ಲಿದ್ದ ಶಿವಾಲಯದ ಶಾಸನವು ಉಲ್ಲೇಖಿತವಾಗಿದೆ.[೮] ಹೀಗೆ ದೇವಾಲಯಗಳ ನಿರ್ಮಾಣಕ್ಕೆ ಹಾಗೂ ಬೆಳವಣಿಗೆಗೆ ಪ್ರಯೋಗಶೀಲತೆಯ ದೃಷ್ಟಿಯಿಂದ ಕನ್ನಡ ನಾಡು ತನ್ನದೇ ಆದ ನೆಲ, ಜಲ, ಶಿಲಾ ಸಂಪನ್ಮೂಲಗಳ ಜೊತೆಗೆ ಭೌಗೋಳಿಕ, ರಾಜಕೀಯ ಪರಿಸರ, ಆರ್ಥಿಕ, ಸಾಮಾಜಿಕ ಮತ್ತು ಜನಪದರ ಹೊಂದಾಣಿಕೆಯ ಮನೋಭಾವ, ಅಳವಡಿಕೆಯ ಆಶಯ, ನೆರೆ-ಹೊರೆಯವರ ಸಂಬಂಧ-ಸಂಪರ್ಕಗಳ ಪರಿಣಾಮವಾಗಿ ಭಾರತದಲ್ಲಿ ವೈವಿಧ್ಯಮಯವಾದ ವಾಸ್ತುಶೈಲಿ ಮತ್ತು ವಿನ್ಯಾಸಗಳನ್ನು ಕಾಣುತ್ತೇವೆ. ಇವುಗಳನ್ನು ಅರಿಯಲು ಬಾದಾಮಿ ಚಲುಕ್ಯರ ಮನೆತನಕ್ಕೆ ಮೊರೆ ಹೋಗಬೇಕಾಗುತ್ತದೆ. ಕಾರಣ ಶಿಲಾಸಾಮಗ್ರಿಗಳ ಲಭ್ಯತೆ, ಶಿಲ್ಪಿಗಳ ಕೈಚಳಕ, ಧರ್ಮಸ್ಫೂರ್ತಿ, ರಾಜಾಶ್ರಯ, ಇನ್ನೂ ಮುಂತಾದ ಅಂಶಗಳನ್ನು ನಾವು ಗಮನಿಸಬಹುದಾಗಿದೆ. ನಂತರದ ಕಾಲಘಟ್ಟದಲ್ಲಿ ಆಳ್ವಿಕೆ ಮಾಡಿದ ರಾಷ್ಟ್ರಕೂಟರು, ಕಲ್ಯಾಣ ಚಾಲುಕ್ಯರು, ದೋರಸಮುದ್ರದ ಹೊಯ್ಸಳರು, ವಿಜಯನಗರದ ಜೊತೆಗೆ ಸಮಕಾಲೀನ ಸಾಮಂತ ಮನೆತನಗಳು ತಮ್ಮದೇ ಆದ ಕೊಡುಗೆಯನ್ನು ನೀಡಿದ್ದಾರೆ.

ವಾಸ್ತು ಕೃತಿಗಳು

೬೪ ಕಲೆಗಳಲ್ಲಿ ದೇವಾಲಯಗಳ ನಿರ್ಮಾಣವೂ ಒಂದು. ಇವುಗಳನ್ನು ಎಲ್ಲಿ, ಹೇಗೆ ಕಟ್ಟಬೇಕು, ಯಾವ-ವಿಧಿ-ವಿಧಾನಗಳಿರಬೇಕು ಎಂಬುದನ್ನು ನಿರ್ದೇಶಿಸಲು ಹಲವಾರು ಗ್ರಂಥಗಳು ಮಾಹಿತಿಯನ್ನು ನೀಡುತ್ತವೆ. ವೈದಿಕ ಸಾಹಿತ್ಯ, ಬೌದ್ಧ ಸಾಹಿತ್ಯ, ಮಹಾಕಾವ್ಯಗಳು, ಪುರಾಣಗಳು ಜೊತೆಗೆ ಆಗಮಗಳು, ಕೌಟಿಲ್ಯನ ಅರ್ಥಶಾಸ್ತ್ರ, ಬಾಣನ ಹರ್ಷಚರಿತ, ಶೂದ್ರಕನ ಮೃಚ್ಛಕಟಿಕ, ಅಮರಕೋಶ, ಹೂಯನ್‌ತ್ಸಾಂಗ್‌ನ ಬರವಣಿಗೆಗಳು. ವಾಸ್ತು ಕಲೆಯ ಬಗ್ಗೆ ವಿವರಣೆಗಳಿವೆ.[೯] ಹಾಗೆಯೇ ಕಾಮಿಕಾಗಮ, ಕಾಶ್ಯಪಶಿಲ್ಪ, ಶಿಲ್ಪರತ್ನ ಮೊದಲಾದ ಕೃತಿಗಳು, ಭೌಗೋಳಿಕ ಹಿನ್ನೆಲೆಯನ್ನಾಧರಿಸಿ ಮತ್ತು ವಿಮಾನಾರ್ಚಕಲ್ಪ, ದೀಪ್ತಾಗಮ, ಮಯಮತ ಕೃತಿಗಳು ದೇವಾಲಯಗಳ ರಚನಾವಿನ್ಯಾಸದ ಆಧಾರದ ಮೇಲೆ ಹಾಗೂ ಶಿಖರದ ಶೈಲಿಯ ವಿಭಿನ್ನ ರೀತಿಯಲ್ಲಿ ವರ್ಗೀಕರಿಸಿ ಅವುಗಳ ಬಗ್ಗೆ ಮಾಹಿತಿಯನ್ನು ನೀಡಿವೆ.

ದೇವಾಲಯಗಳ ಪ್ರಭೇದಗಳು

ಕಾವೇರಿ ನದಿಯಿಂದ ಗೋದಾವರಿ ನದಿಯವರೆಗೂ ವಿಶಾಲವಾಗಿರುವಂತಹ ಈ ನಾಡಿನಲ್ಲಿ ದೇವಾಲಯಗಳ ನಿರ್ಮಾಣ ವೈವಿಧ್ಯಮಯವಾಗಿ ಬೆಳೆದಿವೆ. ಇದಕ್ಕೆ ಪ್ರಾಕೃತಿಕ ಪರಿಸರ, ಜನರ ಅಭಿರುಚಿ, ಅರಸರುಗಳ ಪ್ರೋತ್ಸಾಹ, ಆಶ್ರಯ, ಅನುದಾನ, ಶಿಲ್ಪಿಗಳ ಮನೋಧರ್ಮ ಮತ್ತು ಕೈಚಳಕ ಈ ಅಂಶಗಳ ಹಿನ್ನೆಲೆಯಲ್ಲಿ ಈ ದೇವಾಲಯಗಳು ಸ್ಥಳೀಯ ಪ್ರಭೇದಗಳನ್ನು ಬೆಳೆಸಿಕೊಂಡವು.[೧೦] ತತ್ಪರಿಣಾಮವಾಗಿ ವಿಭಿನ್ನ ರೀತಿಯ, ಶೈಲಿಯ ದೇವಾಲಯಗಳು ಈ

ನಾಡಿನಲ್ಲಿ ಕಾಣುತ್ತವೆ. ಪ್ರಸ್ತುತ ಇದ್ದ ದೇವಾಲಯಗಳ ವಾಸ್ತು ಪ್ರಕಾರದ ಶೈಲಿಗಳಲ್ಲಿ ದ್ರಾವಿಡ, ನಾಗರ, ವೇಸರ ಶೈಲಿಗಳ ಕುರಿತು ದೇವಾಲಯಗಳ ಪ್ರಭೇದಗಳಿವೆ.

ದ್ರಾವಿಡ ಶೈಲಿ

ದಕ್ಷಿಣ ಭಾರತದ ಶೈಲಿಯನ್ನು ದಾಕ್ಷಿಣಾತ್ಯ ಶೈಲಿ ಎಂದು ಕರೆಯಲಾಗುತ್ತದೆ. ಇದರ ಬಗ್ಗೆ ಅಜಿತಾಗಮ, ಕಾಮಿಕಾಗಮಗಳಲ್ಲಿ ಉಲ್ಲೇಖಗಳಿವೆ. ಅಜಿತಾಗಮ ಕೃತಿಯಲ್ಲಿ ಕಂಠದಿಂದ ಮೇಲಕ್ಕೆ ಅಷ್ಟಾಶ್ರವಾಗಿರುವುದು ದ್ರಾವಿಡ ಶೈಲಿ.[೧೧] ಈ ದೇವಾಲಯಗಳು ಮೂಲದಿಂದ ಸ್ತೂಪಿಯವರೆಗೆ ಆರು ಅಥವಾ ಎಂಟು ಕೋನವಾಗಿರುವುದು. ಕೆಳಗೆ ಆರು ಅಥವಾ ಎಂಟು ಕೋನಗಳು, ಕಂಠದಿಂದ ಮೇಲಕ್ಕೆ ಆರು ಅಥವಾ ಎಂಟು ಕೋನವಾಗಿರುವುದು ಈ ಶೈಲಿಯ ದೇವಾಲಯಗಳ ಪ್ರಮುಖ ಲಕ್ಷಣಗಳಾಗಿವೆ.[೧೨] ಜೊತೆಗೆ ದೇವಾಲಯಗಳ ಶಿಖರಗಳು ಮೇಲಕ್ಕೆ ಹೋದಂತೆ ಕ್ರಮೇಣ ಸಣ್ಣದಾಗುತ್ತ ಮಧ್ಯದಲ್ಲಿ ಅಂತಸ್ತುಗಳಿರುತ್ತವೆ. ಪ್ರತಿಯೊಂದು ಅಂತಸ್ತನ್ನು ವಿಭಾಗಿಸುವ ದುಂಡು ಕಪೋತಗಳು ಹಾಗೂ ಮೇಲ್‌ಸ್ಥಲಗಳ ಸುತ್ತಲೂ ಇಕ್ಕಟ್ಟಾದ ತೆರೆದ ಅಂಕಣಗಳು ಈ ಶೈಲಿಯ ದೇವಾಲಯಗಳ ಪ್ರಮುಖ ಲಕ್ಷಣಗಳಾಗಿವೆ.[೧೩] ಈ ಲಕ್ಷಣಗಳುಳ್ಳ ದೇವಾಲಯಗಳು ಮಹಾಕೂಟ, ಬಾದಾಮಿ, ಶ್ರವಣಬೆಳಗೊಳ, ಎಲ್ಲೋರಾಗಳಲ್ಲಿವೆ.

ನಾಗರಶೈಲಿ

ಭೂಮಿಯಿಂದ ಸ್ತೂಪಿಯವರೆಗೆ ಚತರಸ್ರವಾಗಿರುವುದನ್ನು ನಾಗರಶೈಲಿ ಎಂದು ಅಜಿತಾಗಮ ಕೃತಿಯಲ್ಲಿ ಹೇಳಲಾಗಿದೆ.[೧೪] ಇದು ಕೆಳಗಿನಿಂದ ಮೇಲಕ್ಕೆ ಹೋದಂತೆ ಬಾಗಿದ ರಚನೆಯಾಗಿರುವುದನ್ನು ಕಾಣುತ್ತೇವೆ. ಆದ್ದರಿಂದ ಇದನ್ನು ರೇಖಾನಾಗರಶೈಲಿ ಎಂತಲೂ ಕರೆಯಲಾಗಿದೆ. ಈ ರೀತಿಯ ಶೈಲಿಗಳುಳ್ಳ ದೇವಾಲಯಗಳು ಊರ್ಧ್ವಮುಖ ಕ್ರಮದಲ್ಲಿ ಪೀಠ, ಜಂಘ(ಭಿತ್ತಿ), ಶಿಖರ, ಆಮಲಕ, ಕಳಶಗಳಿರುವುದಲ್ಲದೇ, ಶಿಖರದ ಮೂಲೆಗಳಲ್ಲಿ ಹಂತ-ಹಂತವಾಗಿ ಮುಂದುವರೆಯುವ ಕೂಟದಂತಹ ರಚನೆಯಿರುತ್ತದೆ. ಈ ರೀತಿಯ ದೇವಾಲಯಗಳ ಮೇಲ್ಭಾಗ ಶಿಖರದ ಕೇಂದ್ರಬಿಂದುವಿನತ್ತ ಬಾಗಿದಂತಿರುವ ಚತುರಸ್ರವಾದ ಲಂಬವಿನ್ಯಾಸಗಳನ್ನು ಗುರುತಿಸಬಹುದಾಗಿದೆ. ಜೊತೆಗೆ ಶಿಖರದ ತುದಿಯಲ್ಲಿ ಚಪ್ಪಟೆ, ವೃತ್ತಾಕಾರದ ಮತ್ತು ಅಂಚುಗಳನ್ನು ಅರೆಗೊಳವಿನಾಕಾರದಲ್ಲಿ ಕಂಡರಿಸಿದ ಆಮಲಕವಿರುತ್ತದೆ. ಈ ಎಲ್ಲ ರೀತಿಯ ಲಕ್ಷಣಗಳನ್ನು ಹೊಂದಿರುವ ದೇವಾಲಯಗಳು, ಬಾದಾಮಿ, ಪಟ್ಟದಕಲ್ಲು ಸ್ಥಳಗಳಲ್ಲಿ ಕಂಡುಬರುತ್ತವೆ.

ವೇಸರಶೈಲಿ

ಭಾರತೀಯ ದೇವಾಲಯಗಳ ವಾಸ್ತುಶೈಲಿಯಲ್ಲಿ ವೇಸರಶೈಲಿಯೂ ಒಂದು. ಈ ಪದವು ಸಂಸ್ಕೃತದಿಂದ ಬಂದದ್ದು. ವೇಸರ ಎಂದರೆ 'ಹೇಸರಗತ್ತಿ' ಅಥವಾ 'ಮಿಶ್ರತಳಿಯ ಪ್ರಾಣಿ' ಅಂದರೆ ಒಂದು ಮಿಶ್ರ ಶೈಲಿ ಎಂದಾಗುತ್ತದೆ.[೧೫] ನಾಗರ ಮತ್ತು ದ್ರಾವಿಡ ಶೈಲಿಗಳ ಮಿಶ್ರಣ ವೇಸರಶೈಲಿ. ಇದು ವಿಂಧ್ಯಾ ಪರ್ವತದಿಂದ-ಕೃಷ್ಣಾನದಿಯವರೆಗೆ ಹರಡಿಕೊಂಡಿದೆ ಎಂಬುದು ಸ್ಟೆಲ್ಲಾಕ್ರಾಮರಿಶ್ ಅವರ ಅಭಿಪ್ರಾಯ.[೧೬] ಇದರ ಲಕ್ಷಣಗಳ ಅಜಿತಾಗಮ ಕೃತಿಯಲ್ಲಿ ಕಂಠದಿಂದ

ಮೇಲಕ್ಕೆ ವೃತ್ತಾಕಾರವಾಗಿರುತ್ತದೆ ಎಂದೂ, ಕಾಶ್ಯಪಶಿಲ್ಪ ಕೃತಿಯ ಪ್ರಕಾರ ಕಂಠ ಹಾಗೂ ಶಿಖರ ಭಾಗ ವೃತ್ತಾಕಾರವಾಗಿರುತ್ತದೆ. ಅದೇ ರೀತಿ ಮಾನಸಾರ ಕೃತಿಯಲ್ಲಿ ಕೆಳಭಾಗ ಕಂಠದಿಂದ ಮೇಲಕ್ಕೆ ಚತುರಸ್ರ ರಚನೆಯೇ ವೇಸರಶೈಲಿ.[೧೬] ಈ ರೀತಿಯ ಲಕ್ಷಣಗಳುಳ್ಳ ಶೈಲಿಗಳು ಪಟ್ಟದಕಲ್ಲು, ಬೆಂಗಳೂರು, ಕಂಬದಹಳ್ಳಿಯಲ್ಲಿ ಕಾಣಬಹುದಾಗಿದೆ.

೫.೨. ಶೈವ ದೇವಾಲಯಗಳು

ಪ್ರಪಂಚದ ಧರ್ಮಗಳಲ್ಲಿ ಶೈವ ಧರ್ಮವೂ ಒಂದಾಗಿದೆ. ಇದರ ಪ್ರಾಚೀನತೆಯನ್ನು ನಾವು ಸಿಂಧೂ ನಾಗರಿಕತೆಯ ಹರಪ್ಪ, ಮಹೆಂಜೋದಾರೋ, ಕಾಲಿಬಂಗಾನ್ ಮುಂತಾದ ನೆಲೆಗಳಲ್ಲಿ ಕಾಣುತ್ತೇವೆ. ಶಿವಲಿಂಗವನ್ನು ಹೋಲುವಂತಹ ಕುರುಹುಗಳು, ಪಶುಪತಿ ಮುದ್ರೆಗಳು ದೊರೆತಿವೆ. ಜೊತೆಗೆ ಇವುಗಳ ಬಗ್ಗೆ ವೈದಿಕ ಸಾಹಿತ್ಯ ಮಹಾಕಾವ್ಯಗಳು ಹಾಗೂ ಪುರಾಣಗಳಲ್ಲಿ ಶೈವ ಧರ್ಮದ ಪ್ರಾಚೀನತೆಯನ್ನು ಗುರುತಿಸಬಹುದು. ಹಾಗೆಯೇ ಈ ಧರ್ಮದ ಧಾರ್ಮಿಕ ನಿರ್ಮಾಣಗಳು ಶಾತವಾಹನ, ಚುಟು, ಇಕ್ಷ್ವಾಕು ಅರಸು ಮನೆತನಗಳ ಆಳ್ವಿಕೆಯ ಕಾಲಾವಧಿಯಿಂದೀಚೆಗೆ ಕಂಡುಬರುತ್ತವೆ.[೧೮] ಕರ್ನಾಟಕದಲ್ಲಿ ಕ್ರಿ.ಶ.ಸು. ೩ನೇ ಶತಮಾನದ ಶಾಸನೋಕ್ತ ಶೈವ ದೇವಾಲಯವು ನರಗುಂದ ತಾಲೂಕಿನ ವಾಸನ ಮತ್ತು ಶಿಕಾರಿಪುರ ತಾಲೂಕಿನ ಮಳವಳ್ಳಿಯ ದೇವಾಲಯಗಳಾಗಿವೆ.[೧೯] ನಂತರದ ಕಾಲಘಟ್ಟದಲ್ಲಿ ಆಳ್ವಿಕೆ ಮಾಡಿದ ಬನವಾಸಿ ಕದಂಬರು, ಬಾದಾಮಿ ಚಲುಕ್ಯರು, ರಾಷ್ಟ್ರಕೂಟರು, ಕಲ್ಯಾಣದ ಚಾಲುಕ್ಯರು, ಹೊಯ್ಸಳರು, ವಿಜಯನಗರದ ಅರಸರು, ಜೊತೆಗೆ ಮಹಾಮಂಡಳೇಶ್ವರರು ಇತರೆ ಮನೆತನಗಳ ಆಶ್ರಯ-ಪ್ರೋತ್ಸಾಹದಿಂದ ಈ ಧರ್ಮದ ದೇವಾಲಯಗಳು ಪ್ರಗತಿಯನ್ನು ಕಂಡವೆಂದು ಹೇಳಬಹುದು.

ಪ್ರಸ್ತುತ ಧಾರವಾಡ ಜಿಲ್ಲೆಯಲ್ಲಿ ೬೮ ಶಾಸನೋಕ್ತ ಶೈವ ದೇವಾಲಯಗಳಲ್ಲಿ ಪ್ರಮುಖವಾದ ದೇವಾಲಯಗಳ ವಾಸ್ತುಶೈಲಿಯನ್ನು ಅವಲೋಕನ ಮಾಡಲಾಗಿದೆ.

೧. ಕಲ್ಮಠ ದೇವಾಲಯ

ಗ್ರಾಮ	: ಗುಡಿಗೇರಿ	**ಸ್ಥಳ**	: ಗ್ರಾಮದ ಮಧ್ಯೆ
ತಾಲೂಕು	: ಕುಂದಗೋಳ	**ಕಾಲ**	: ೧೧ನೇ ಶತಮಾನ
ಶೈಲಿ	: ಕಲ್ಯಾಣ ಚಾಲುಕ್ಯ	**ವಸ್ತು**	: ಕಪ್ಪುಶಿಲೆ

ಕುಂದಗೋಳದಿಂದ ಆಗ್ನೇಯಕ್ಕೆ ೨೬ ಕಿ.ಮೀ. ದೂರದಲ್ಲಿರುವ, ಗುಡಗೇರಿಯ ಊರಮಧ್ಯದಲ್ಲಿ ಎರಡು ದೇವಾಲಯ ಕಂಡುಬರುತ್ತವೆ. ಮೊದಲನೆಯ ದೇವಾಲಯವು ಉತ್ತರಾಭಿಮುಖವಾಗಿದ್ದು, ಗರ್ಭಗೃಹ ಮತ್ತು ನವರಂಗವನ್ನು ಹೊಂದಿದೆ. ಗರ್ಭಗೃಹವು ಚೌಕಾಕಾರವಾಗಿದ್ದು, ಮಧ್ಯ ಶಿವಲಿಂಗವಿದೆ. ಇದರ ಪ್ರವೇಶ ದ್ವಾರವು ತ್ರಿಶಾಖಾಲಂಕಾರನಿಂದ ಕೂಡಿದ್ದು ಲಲಾಟದಲ್ಲಿ ಗಜಲಕ್ಷ್ಮಿಯ ಚಿತ್ರವನ್ನು ಬಿಂಬಿಸುತ್ತದೆ. ಇದಕ್ಕೆ ಹೊಂದಿಕೊಂಡಂತೆ ನವರಂಗದ ಮಧ್ಯದಲ್ಲಿ ನಾಲ್ಕು ಕಂಬಗಳಿವೆ. ಈ ಕಂಬಗಳು ಚೌಕಾಕಾರದ ಪೀಠ, ಕಾಂಡ ಮತ್ತು ಬೋಧಿಗೆಗಳಿಂದ ಕೂಡಿದೆ.

ಎರಡನೆಯ ದೇವಾಲಯವು ಪೂರ್ವಾಭಿಮುಖವಾಗಿದ್ದು, ಇಂದು ಕೇವಲ ನವರಂಗವನ್ನು ಮಾತ್ರ ಇದೆ. ಈ ನವರಂಗದಲ್ಲಿ ನಾಲ್ಕು ಸ್ತಂಭಗಳಿವೆ, ಇವುಗಳು ಪೀಠ, ಚೌಕ, ವೃತ್ತಾಕಾರದ ದಿಂಡಗಳು, ಘಂಟಾಕಾರ, ಕಲಶ ಮತ್ತು ಸರಳ ಬೋಧಿಗೆಯಿಂದ ಕೂಡಿರುವುದನ್ನು ಕಾಣುತ್ತೇವೆ.[೨೦]

೨. ಸಿದ್ದೇಶ್ವರ ದೇವಾಲಯ

ಗ್ರಾಮ	:	ಸಿದ್ಧೇಶ್ವರ	**ಸ್ಥಳ**	:	ಗ್ರಾಮದ ಹೊರಭಾಗದಲ್ಲಿ
ತಾಲೂಕು	:	ಧಾರವಾಡ	**ಕಾಲ**	:	೧೦ನೇ ಶತಮಾನ
ಶೈಲಿ	:	ಕಲ್ಯಾಣ ಚಾಲುಕ್ಯ	**ವಸ್ತು**	:	ಕಪ್ಪುಶಿಲೆ

ಧಾರವಾಡದಿಂದ ವಾಯುವ್ಯಕ್ಕೆ ೨೦ ಕಿ.ಮೀ. ದೂರದಲ್ಲಿರುವ ಸಿದ್ದೇಶ್ವರ ಗ್ರಾಮದ ಸಿದ್ದೇಶ್ವರ ದೇವಾಲಯವು, ಗ್ರಾಮದ ಹೊರಭಾಗದಲ್ಲಿ ಈ ದೇವಾಲಯವಿದೆ. ಈ ದೇವಾಲಯವು ಸಂಪೂರ್ಣವಾಗಿ ಶಿಥಿಲಾವಸ್ಥೆಯಲ್ಲಿ ಇದೆ. ದೇವಾಲಯವು ಗರ್ಭಗೃಹ, ಅಂತರಾಳ, ನವರಂಗವನ್ನು ಒಳಗೊಂಡಿದೆ. ಗರ್ಭಗೃಹದಲ್ಲಿ ಆಧುನಿಕ ಶಿವಲಿಂಗವಿದೆ. ಇದರ ಪ್ರವೇಶ ದ್ವಾರವು ಪಂಚಾಶಾಖೆಗಳಿಂದ ಕೂಡಿರುವುದಲ್ಲದೇ, ಇಲ್ಲಿ ಸ್ತಂಭಶಾಖೆ ಬಿಟ್ಟರೆ ಉಳಿದವು ಸರಳವಾಗಿವೆ. ಹಾಗೆಯೇ ದ್ವಾರಬಂಧದ ಮೇಲೆ ಉದ್ದನೆಯ ಕಪೋತ ಇದೆ.

ಗರ್ಭಗೃಹಕ್ಕೆ ಹೊಂದಿಕೊಂಡಂತೆ ಅಂತರಾಳವಿದ್ದು, ಎಡಬದಿಗೆ ಸ್ವತಂತ್ರವಾದ ಕಂಬವಿದೆ. ಇದು ಪೀಠ, ಕಾಂಡದಲ್ಲಿ ಚೌಕವೃತ್ತಾಕಾರದಲ್ಲಿ ಪಿಂಡಗಳು, ಚೌಕಕಲಶ, ಫಲಕ ಮತ್ತು ಸರಳ ಬೋಧಿಗೆಯಲ್ಲಿವೆ. ಹಾಗೆಯೇ ಉತ್ತರ ಮತ್ತು ದಕ್ಷಿಣ ದಿಕ್ಕುಗಳಿಗೂ ಗರ್ಭಗೃಹಗಳಿದ್ದು, ಈಗ ಅವುಗಳ ಭಿತ್ತಿ ಬಿದ್ದಿರುವುದರಿಂದ ಗರ್ಭಗೃಹಗಳಂತೆ ಕಂಡುಬರುವುದಿಲ್ಲ. ಗರ್ಭಗೃಹಗಳಿಗೆ ಹೊಂದಿಕೊಂಡಂತೆ ಒಂದು ನವರಂಗವಿದ್ದು, ಇದರ ಮಧ್ಯೆ ನಾಲ್ಕು ಕಂಬಗಳು ಕಾಣುತ್ತೇವೆ. ಇವು ಪೀಠ, ಚೌಕ ವೃತ್ತಾಕಾರದ ದಿಂಡುಗಳು, ಚೌಕ ಮತ್ತು ಬೋಧಿಗೆಯಲ್ಲಿರುವ ಬ್ರಹ್ಮಕಾಂತವನ್ನು ಗುರುತಿಸಬಹುದಾಗಿದೆ.

ಗರ್ಭಗೃಹದ ಹಿಂಬದಿಯ ಭಿತ್ತಿಯಲ್ಲಿ ಆಯತಾಕಾರದ ದೇವಕೋಷ್ಠವಿದ್ದು, ಇಲ್ಲಿ ಯಾವುದೇ ವಿಗ್ರಹ ಕಂಡುಬರುವುದಿಲ್ಲ. ಪ್ರಾಯಶಃ ಇಲ್ಲಿ ಸಪ್ತಮಾತೃಕೆಯ ಶಿಲ್ಪ ಇದ್ದಿರಬೇಕು. ಜೊತೆಗೆ ದೇವಾಲಯದ ಹೊರಭಾಗದಲ್ಲಿ ನಾಲ್ಕು ಶಿವಲಿಂಗ ಪೀಠಗಳು, ನಾಲ್ಕು ನಂದಿಯ ಶಿಲ್ಪಗಳು ಮತ್ತು ಭಗ್ನಗೊಂಡ ಸ್ತಂಭಗಳನ್ನು ಕಾಣುತ್ತೇವೆ.[೨೧]

೩. ಉತ್ತರಕುಮಾರ ದೇವಾಲಯ

ಗ್ರಾಮ	:	ತಂಬೂರು	**ಸ್ಥಳ**	:	ಗ್ರಾಮದ ಹೊರಭಾಗದಲ್ಲಿ
ತಾಲೂಕು	:	ಕಲಘಟಗಿ	**ಕಾಲ**	:	೧೦ನೇ ಶತಮಾನ
ಶೈಲಿ	:	ಕದಂಬ ನಾಗರಶೈಲಿ	**ವಸ್ತು**	:	ಕಪ್ಪುಶಿಲೆ

ಕಲಘಟಗಿಯಿಂದ ದಕ್ಷಿಣಕ್ಕೆ ೧೧ ಕಿ.ಮೀ. ಅಂತರದಲ್ಲಿ ತಂಬೂರು ಗ್ರಾಮ ಇದೆ. ಈ ಗ್ರಾಮದ ಹೊರೆಗೆ ದಿಬ್ಬದ ಮೇಲೆ ಈ ದೇವಾಲಯವಿದೆ. ಪೂರ್ವಾಭಿಮುಖವಾಗಿರುವ ಈ ದೇವಾಲಯದಲ್ಲಿ ಗರ್ಭಗೃಹ ಮತ್ತು ತೆರೆದ ಅರ್ಧಮಂಟಪವಿದೆ. ಗರ್ಭಗೃಹವು ಚೌಕಾಕಾರವಾಗಿದ್ದು, ಮಧ್ಯದಲ್ಲಿ ಶಿವಲಿಂಗವಿದೆ. ಹಾಗೆಯೇ ಒಳಭಿತ್ತಿಯ ಮೂಲೆಯಲ್ಲಿ ನಾಲ್ಕು ಅರ್ಧಗಂಬಗಳಿದ್ದು, ಮೇಲ್ಛಾವಣಿಯಲ್ಲಿ ಅರಳಿದ ಕಮಲದ ಚಿತ್ರಣ ಇದೆ. ಗರ್ಭಗೃಹದ ಪ್ರವೇಶ ದ್ವಾರದಲ್ಲಿ ಶಾಖೆಗಳಿದ್ದು, ಲಲಾಟದಲ್ಲಿ ಲಕ್ಷ್ಮಿಯನ್ನು ಕಾಣುತ್ತೇವೆ. ಗರ್ಭಗೃಹಕ್ಕೆ ಹೊಂದಿಕೊಂಡಂತೆ ಅರ್ಧಮಂಟವಿದ್ದು, ಈ ಕಂಬಗಳು ಪೀಠ, ಕಾಂಡದಲ್ಲಿ ನೀಳ ಹಾಗೂ ಉತ್ತರ ಭಾಗದಲ್ಲಿ ಕೆಳಗಡೆ ಮತ್ತು ಮೇಲೆ ಎರಡು ಚೌಕಗಳು ಮಧ್ಯದಲ್ಲಿ ಅನೇಕ ಪಟ್ಟಿಕೆಗಳನ್ನು ಗುರುತಿಸಬಹುದು. ಅಲ್ಲದೇ ದೇವಾಲಯದ ಹೊರಭಿತ್ತಿಯು ಸರಳವಾಗಿದ್ದು, ಗರ್ಭಗೃಹದ ಮೇಲೆ ಕದಂಬನಾಗರ ರೀತಿಯ ಶಿಖರವಿದೆ. ಆದರೆ ಶಿಖರದ ಮೇಲಿನ ಭಾಗವು ಹಾಳಾಗಿದೆ.[೨]

೪. ಕಲ್ಲೇಶ್ವರ ದೇವಾಲಯ

ಗ್ರಾಮ : ಸಂಗಮೇಶ್ವರ **ಸ್ಥಳ** : ಗ್ರಾಮದ ಹೊರಭಾಗದಲ್ಲಿ

ತಾಲೂಕು : ಕಲಘಟಗಿ **ಕಾಲ** : ೧೧ನೇ ಶತಮಾನ

ಶೈಲಿ : ಕಲ್ಯಾಣ ಚಾಲುಕ್ಯ **ವಸ್ತು** : ಕಪ್ಪುಶಿಲೆ

ಕಲಘಟಗಿಯಿಂದ ಪಶ್ಚಿಮಕ್ಕೆ ೧೦ ಕಿ.ಮೀ. ದೂರದಲ್ಲಿ ಈ ದೇವಾಲಯವು, ಗರ್ಭಗೃಹ, ಅಂತರಾಳ ಮತ್ತು ನವರಂಗವನ್ನು ಹೊಂದಿದೆ. ಗರ್ಭಗೃಹವು ಚೌಕಾಕಾರವಾಗಿದ್ದು, ಮಧ್ಯದಲ್ಲಿ ವೃತ್ತಾಕಾರದ ಶಿವಲಿಂಗವಿದೆ. ಇಲ್ಲಿನ ಪ್ರವೇಶ ದ್ವಾರವು ತ್ರಿಶಾಖಾಲಂಕಾರದಿಂದ ಕೂಡಿದ್ದು, ರತ್ನಪಟ್ಟಿಕೆ, ಅರೆಗಂಬ, ಲತಾಸುರುಳಿಗಳಿಂದ ಕೂಡಿದೆ. ಹಾಗೆಯೇ ಲಲಾಟ ಪಟ್ಟಿಕೆಯಲ್ಲಿ ಗಜಲಕ್ಷ್ಮಿ ಶಿಲ್ಪವಿದೆ. ಪೇದ್ಯ ಭಾಗದಲ್ಲಿ ಶೈವ ದ್ವಾರಪಾಲಕ ಮತ್ತು ಸ್ತ್ರೀಯರಿದ್ದಾರೆ. ಮುಂಭಾಗದಲ್ಲಿ ಎರಡು ಸ್ತಂಭಗಳಿವೆ. ಇದು ತೆರೆದ ಅರ್ಧಮಂಟಪದಂತಿದೆ. ಸ್ತಂಭಗಳು ಪೀಠ, ಚೌಕ, ಅಷ್ಟಮುಖ, ಚೌಕ, ಕಲಶ ಮತ್ತು ಸರಳಬೋಧಿಗೆಯನ್ನು ಕಾಣುತ್ತೇವೆ. ಜೊತೆಗೆ ಅಷ್ಟಮುಖದಿಂಡಿನ ಪ್ರಾರಂಭ, ಮಧ್ಯ ಮತ್ತು ಅಂತ್ಯ ಭಾಗದಲ್ಲಿ ಅಡ್ಡಗೆರೆಗಳು ಅಲಂಕಾರಗಳನ್ನು ನೋಡಬಹುದಾಗಿದೆ.

ಅಂತರಾಳದ ಗೋಡೆಗಳಲ್ಲಿ ಅರೆಗಂಬಗಳಿದ್ದು, ಇವುಗಳು ಬಹುತೇಕ ಪಾರ್ವತಿ ಕಲ್ಯಾಣವನ್ನು ಸೂಚಿಸುವ ಮತ್ತು ಒಂದು ಕಡೆ ಶೈವಧರ್ಮಕ್ಕೆ ಸಂಬಂಧಿಸಿದ, ಮತ್ತೊಂದು ಕಡೆ ವೈಷ್ಣವ ಧರ್ಮಕ್ಕೆ ಸಂಬಂಧಿಸಿದ ಶಿಲ್ಪಗಳನ್ನು ಕಾಣುತ್ತೇವೆ. ಬಹುಶಃ ಈ ದೇವಾಲಯವು ಧರ್ಮಸಮನ್ವಯವನ್ನು ಸೂಚಿಸುವಂತಿದೆ. ಹಾಗೆಯೇ ಅಂತರಾಳದ ಮುಂಭಾಗ ನಾಲ್ಕು ಕಂಬಗಳಿಂದ ಕೂಡಿದ ನವರಂಗವಿದ್ದು, ಈ ಕಂಬಗಳು ಪೀಠ, ಕಾಂಡದಲ್ಲಿ ಚೌಕ, ಬಹುಮುಖದಿಂಡು, ಚೌಕ, ಕಲಶ ಮತ್ತು ಸರಳ ಬೋಧಿಗೆಗಳಿಂದ ಕೂಡಿದೆ. ಬಹುಮುಖದಿಂಡಿನ ಮಧ್ಯಭಾಗದಲ್ಲಿ ಅಷ್ಟಮುಖಗಳ ಪಟ್ಟಿಕೆ ಇದ್ದು, ಇದರಲ್ಲಿ ಗೆರೆಗಳು ಮತ್ತು ಪುಷ್ಪಗಳ ಅಲಂಕಾರವನ್ನು ಕಾಣುತ್ತೇವೆ. ನವರಂಗದ ಮುಂದಿನ ಎರಡು ಕಂಬಗಳಲ್ಲಿ ಕಾರ್ತಿಕೇಯ, ಭೈರವ, ಸರಸ್ವತಿ ಮತ್ತು ಸಪ್ತಮಾತೃಕೆಯರ ಬಿಡಿ

ಶಿಲ್ಪಗಳು ಇವೆ. ಈ ದೇವಾಲಯದಲ್ಲಿ ವಿಶೇಷವಾಗಿ ಶಿವಪಾರ್ವತಿಯ ಕಲ್ಯಾಣದ ಕಥಾನಕ ಶಿಲ್ಪಗಳು, ಅಂತರಾಳ ಮತ್ತು ನವರಂಗದ ಕಂಬಗಳಲ್ಲಿ ಕಂಡುಬರುವುದು ಬಹಳ ವಿಶೇಷತೆಯಿಂದ ಕೂಡಿದವುಗಳಾಗಿವೆ.[೨೩]

೫. ರಾಮೇಶ್ವರ ದೇವಾಲಯ

ಗ್ರಾಮ	: ಕಮಡೊಳ್ಳಿ	**ಸ್ಥಳ**	: ಗ್ರಾಮದ ಹೊರಭಾಗದಲ್ಲಿ
ತಾಲೂಕು	: ಕುಂದಗೋಳ	**ಕಾಲ**	: ೧೧ನೇ ಶತಮಾನ
ಶೈಲಿ	: ಕಲ್ಯಾಣ ಚಾಲುಕ್ಯ	**ವಸ್ತು**	: ಕಪ್ಪುಶಿಲೆ

ಕುಂದಗೋಳದಿಂದ ದಕ್ಷಿಣಕ್ಕೆ ೧೦ ಕಿ.ಮೀ. ದೂರದಲ್ಲಿ ರಾಮೇಶ್ವರ ದೇವಾಲಯ ಇದೆ. ಪೂರ್ವಾಭಿಮುಖವಾಗಿರುವ ಈ ದೇವಾಲಯ ಪಂಚರಥ ಮಾದರಿಯಲ್ಲಿದೆ. ತಿರ್ಯಭಿಮುಖವಾಗಿ ಗರ್ಭಗೃಹ, ಅಂತರಾಳ ಮತ್ತು ನವರಂಗವನ್ನು ಒಳಗೊಂಡಿದೆ. ಗರ್ಭಗೃಹದ ಮಧ್ಯದಲ್ಲಿ ಶಿವಲಿಂಗವಿದ್ದು, ಪ್ರವೇಶದ್ವಾರ ಪಂಚಶಾಖೆಗಳಿಂದ ಕೂಡಿದೆ. ಇದರ ಮುಂಭಾಗದಲ್ಲಿ ಅಂತರಾಳವಿದ್ದು, ಎರಡು ಸ್ತಂಭಗಳು ಇವೆ. ಈ ಸ್ತಂಭಗಳು ಪೀಠ, ಕಾಂಡ, ಕಲಶ, ಫಲಕ ಬೋಧಿಗೆಯನ್ನು ಒಳಗೊಂಡಿದ್ದು, ಎರಡು ಮಕರಗಳ ಬಾಯಿಂದ ಹೊರಟ ಸುರುಳಿಯಾಕಾರದ ತೋರಣ ಇದೆ. ಈ ತೋರಣವು ತುಂಬಾ ದೊಡ್ಡದಾಗಿದ್ದು, ಮೇಲ್ಭಾಗದಲ್ಲಿ ಅಷ್ಟದಿಕ್ಪಾಲಕರ ಮತ್ತು ಕೆಳಭಾಗದಲ್ಲಿ ಬ್ರಹ್ಮ, ನಟರಾಜ ಮತ್ತು ವಿಷ್ಣುವಿನ ಕಿರುಶಿಲ್ಪಗಳಿವೆ.

ಅಂತರಾಳಕ್ಕೆ ಹೊಂದಿಕೊಂಡಂತೆ ನವರಂಗವಿದ್ದು, ಭಿತ್ತಿಯಲ್ಲಿ ಹನ್ನೆರಡು ಅರೆಗಂಬಗಳನ್ನು ಮತ್ತು ಮಧ್ಯದಲ್ಲಿ ನಾಲ್ಕು ಕಂಬಗಳು ಇವೆ. ಈ ಸ್ತಂಭಗಳು ಶ್ರೀಕಾರ ಶೈಲಿಯಲ್ಲಿದ್ದು, ವಿತಾನದಲ್ಲಿ ಅರಳಿದ ಪದ್ಮವಿದೆ. ಜೊತೆಗೆ ನವರಂಗದಲ್ಲಿ ಎರಡು ಆಧುನಿಕ ದೇವಕೋಷ್ಠಗಳಿದ್ದು, ಒಂದರಲ್ಲಿ ರಾಮ, ಲಕ್ಷ್ಮಣ ಮತ್ತು ಗಣೇಶನ ಉಬ್ಬುಶಿಲ್ಪವಿದೆ. ನವರಂಗಕ್ಕೆ ಹೊಂದಿಕೊಂಡಂತೆ, ಗರ್ಭಗೃಹದ ಅಭಿಮುಖವಾಗಿ ರಚಿಸಿದ ಒಂದು ಗರ್ಭಗೃಹವಿದ್ದು, ಅಲ್ಲಿ ಶಿವಲಿಂಗವನ್ನು ಪ್ರತಿಷ್ಠಾಪಿಸಿ ಕಟ್ಟಡ ಆಧುನೀಕರಣವಾಗಿದೆ.[೨೪]

೬. ಶಂಭುಲಿಂಗ ದೇವಾಲಯ

ಗ್ರಾಮ	: ಕುಂದುಗೋಳ	**ಸ್ಥಳ**	: ಪೇಟೆಯ ಮಧ್ಯೆದಲ್ಲಿ
ತಾಲೂಕು	: ಕುಂದಗೋಳ	**ಕಾಲ**	: ೧೧ನೇ ಶತಮಾನ
ಶೈಲಿ	: ಕಲ್ಯಾಣ ಚಾಲುಕ್ಯ	**ವಸ್ತು**	: ಕಪ್ಪುಶಿಲೆ

ಹುಬ್ಬಳ್ಳಿಯಿಂದ ಆಗ್ನೇಯಕ್ಕೆ ಸುಮಾರು ೧೫ ಕಿ.ಮೀ. ದೂರದಲ್ಲಿರುವ ಈ ದೇವಾಲಯವು, ಗರ್ಭಗೃಹ, ಅಂತರಾಳ ಮತ್ತು ರಂಗಮಂಟಪ ಇದೆ. ಗರ್ಭಗೃಹವು ಚೌಕಾಕಾರವಾಗಿದ್ದು, ಮಧ್ಯದಲ್ಲಿ ವೃತ್ತಾಕಾರದ ಶಿವಲಿಂಗವಿದೆ. ಇದರ ಪ್ರವೇಶ ದ್ವಾರವು ಆರು ಅಲಂಕೃತ ಶಾಖೆಗಳನ್ನು ಹೊಂದಿದ್ದು, ಅದರಲ್ಲಿ ರತ್ನಪಟ್ಟಿ, ಲತಾಸುರುಳಿ, ವಾದ್ಯಗಾರ, ಸ್ತಂಭ, ಹೂ ಬಳ್ಳಿ ಹಾಗೂ

ಪದ್ಮಗಳನ್ನು ಒಳಗೊಂಡಿದೆ. ಲಲಾಟಪಟ್ಟಿಕೆಯಲ್ಲಿ ಗಜಲಕ್ಷ್ಮಿ ಇದೆ. ಇದರ ಇಕ್ಕೆಲಗಳಲ್ಲಿ ಬಾಳೆದಿಂಡಿನ ಅಲಂಕರಣವಿದೆ. ಲಲಾಟ ಪಟ್ಟಿಕೆಯ ಮೇಲೆ ಕಪೋತವಿದ್ದು, ಇದಕ್ಕೆ ಹೊಂದಿಕೊಂಡಂತೆ ಪಂಚ ದ್ರಾವಿಡ ಕಿರುದ್ವಿತಲ ವಿಮಾನಗಳಿವೆ. ಇದರ ಕೆಳತಲದ ಮಧ್ಯದಲ್ಲಿ ಭೈರವ, ಕೊನೆಗೆ ಸ್ತ್ರೀ ಶಿಲ್ಪಗಳಿವೆ.

ಇದಕ್ಕೆ ಹೊಂದಿಕೊಂಡಂತೆ ಮೂರು ಅಂಕಣಗಳಿಂದ ಕೂಡಿದ ಆಯತಾಕಾರದ ಅಂತರಾಳವಿದೆ. ಇಲ್ಲಿ ಎರಡು ದೇವಕೋಷ್ಠಗಳಿದ್ದು, ಒಂದರಲ್ಲಿ ಗಣೇಶ ಇನ್ನೊಂದರಲ್ಲಿ ಪಾರ್ವತಿಯ ಉಬ್ಬುಶಿಲ್ಪವಿದೆ. ಅಂತರಾಳದ ಪ್ರವೇಶ ದ್ವಾರವು ತ್ರಿಶಾಖಾಲಂಕಾರದಿಂದ ಆವೃತವಾಗಿದೆ. ಲಲಾಟ ಪಟ್ಟಿಕೆಯಲ್ಲಿ ಗಣೇಶನನ್ನು ಬಿಂಬಿಸಲಾಗಿದೆ. ಹಾಗೆಯೇ ಲಲಾಟದ ಬದಿಯಲ್ಲಿ ಬಾಳೆದಿಂಡಿನ ಅಲಂಕಾರವಿದ್ದು, ಈ ತೋರಣದ ಮಧ್ಯದಲ್ಲಿ ಲಕ್ಷ್ಮಣ, ರಾಮ, ಸೀತೆಯರ ಶಿಲ್ಪಗಳನ್ನು ಕಾಣುತ್ತೇವೆ. ಅಂತರಾಳಕ್ಕೆ ಹೊಂದಿಕೊಂಡಂತೆ ಸಭಾಮಂಟಪವಿದ್ದು, ಇದು ಪಂಚ ಪ್ರವೇಶದ್ವಾರವನ್ನು ಹೊಂದಿದೆ ಎಂದು ಗೆರಾಲ್ಡ್‌ರವರು ಸೂಚಿಸಿದ್ದಾರೆ. ಅದೇ ರೀತಿ ಈ ಸಭಾಮಂಟಪದಲ್ಲಿ ೨೪ ದೊಡ್ಡ ಹಾಗೂ ೨೮ ಚಿಕ್ಕ ಸ್ತಂಭಗಳು ಇವೆ. ಈ ಸ್ತಂಭಗಳು ಶ್ರೀಕಾರ ಮಾದರಿಯಲ್ಲಿದ್ದು, ಪೀಠ, ಚೌಕ, ಘಂಟಾಕೃತಿ, ಕಲಶ, ಫಲಕ ಮತ್ತು ಸರಳ ಬೋಧಿಗೆಯಿಂದ ಆವೃತವಾಗಿದೆ. ಈ ಸಭಾಮಂಟಪದ ಸುತ್ತಲೂ ಕಕ್ಷಾಸನವಿದ್ದು, ಇಲ್ಲಿ ೨೮ ಚಿಕ್ಕ ಸ್ತಂಭಗಳನ್ನು ಕಾಣುತ್ತೇವೆ. ಈ ಸಭಾಮಂಟಪದ ಪ್ರತಿ ಅಂಕಣದಲ್ಲಿಯೂ ಒಂದು, ಮೂರು, ಒಂಬತ್ತು, ಪದ್ಮಗಳ ಅಲಂಕಾರವಿದ್ದು, ವಿತಾನದ ಮಧ್ಯಭಾಗದಲ್ಲಿ ಅಪಸ್ಮಾರನ ಮೇಲೆ ನರ್ತಿಸುವ ನಟರಾಜನನ್ನು ಗುರುತಿಸಬಹುದಾಗಿದೆ. ಇವನ ಸುತ್ತಲೂ ಅಷ್ಟದಿಕ್ಪಾಲಕರಾಗಿದ್ದು, ಅವರು ತಮ್ಮ ವಾಹನದ ಮೇಲಿರುವುದನ್ನು ಕಾಣುತ್ತೇವೆ. ಮೂರು ಶಿವಲಿಂಗ ಮತ್ತು ಒಂದು ಸಪ್ತಮಾತೃಕೆ ಇದ್ದು ಅಂತರಾಳದ ಅಭಿಮುಖಕ್ಕೆ ನಂದಿಯನ್ನು ಪ್ರತಿಷ್ಠಾಪಿಸಲಾಗಿದೆ.

ದೇವಾಲಯದ ಹೊರಭಾಗವು ಜೀರ್ಣೋದ್ಧಾರವಾಗಿದ್ದು, ಅಧಿಷ್ಠಾನ, ಭಿತ್ತಿ, ಕಪೋತ, ಹಾರ ಮತ್ತು ಆಧುನಿಕ ಕಾಲದ ಶಿಖರವಿದೆ. ಅಧಿಷ್ಠಾನ, ಉಪಾನ, ಜಗತಿ, ಕುಮುದ, ಮಕರಪಟ್ಟಿಕಾ ಮತ್ತು ಕಪೋತ ಭಾಗಗಳನ್ನು ಒಳಗೊಂಡಿದೆ. ಮಕರಪಟ್ಟಿಕೆಯಲ್ಲಿ ದೇವ-ದೇವತೆಯರ ಚಿತ್ರಗಳಿವೆ. ಭಿತ್ತಿಯಲ್ಲಿ ಭದ್ರ-ಸಲಿಲಾಂತರಗಳಿದ್ದು, ಭದ್ರದಲ್ಲಿ ಕೋಷ್ಠ ಪಂಜರ ಮತ್ತು ಸಲಿಲಾಂತರದಲ್ಲಿ ಸ್ತಂಭ ಪಂಜರಗಳಿವೆ ಮತ್ತು ಭಿತ್ತಿಯ ಮೇಲ್ಭಾಗದಲ್ಲಿ ಕಪೋತ ಆಹಾರ ಭಾಗಗಳಲ್ಲಿದ್ದು, ಆಧುನಿಕ ರೀತಿಯ ಶಿಖರವಿದೆ. ಇನ್ನೂ ಕಕ್ಷಾಸನ ಮಂಚಬಂಧ ಅಧಿಷ್ಠಾನವನ್ನು ಹೊಂದಿದ್ದು, ಉಪಾನ, ಜಗತಿ, ಗಳ, ಕಪೋತ ಭಾಗಗಳಿವೆ. ಗಳದಲ್ಲಿ ಪುಷ್ಪದ ಅಲಂಕರಣವಿದೆ ಮತ್ತು ಮಕರಪಟ್ಟಿಕೆಯ ಮೇಲೆ ದೇವ-ದೇವತೆಯರ ಚಿತ್ರಗಳಿವೆ. ಪ್ರಸ್ತುತ ದೇವಾಲಯದ ಸುತ್ತಲೂ ಪ್ರಾಂಗಣವಿದ್ದು, ಅಲ್ಲಿ ಶಾಲೆಗಳು ನಡೆಯುತ್ತಿವೆ. ಈ ದೇವಾಲಯದ ಪ್ರವೇಶದ್ವಾರ ಸರಳ ಪಂಚಶಾಖೆಗಳಿವೆ. ಲಲಾಟದಲ್ಲಿ ಗಣೇಶ ಶಿಲ್ಪವಿದೆ. ಈ ದೇವಾಲಯದ ಉತ್ತರಾಂಗದಲ್ಲಿ ಪಂಚ ದ್ರಾವಿಡ ದ್ವಿತಲಾ ವಿಮಾನಗಳಿದ್ದು, ಕೆಳತಲ ಮತ್ತು ಬದಿಗಳಲ್ಲಿ ದೇವ-ದೇವತೆಯರ ಕಿರುಶಿಲ್ಪಗಳಿವೆ. ಈ ಶಿಲ್ಪಗಳಿಗೆ ಪ್ರಭಾವಳಿ ಅಲಂಕರಣ ಇದೆ.[೨೫]

೨. ಅಮೃತೇಶ್ವರ ದೇವಾಲಯ

ಗ್ರಾಮ	: ಅಣ್ಣಿಗೇರಿ	ಸ್ಥಳ	: ಗ್ರಾಮದ ಮಧ್ಯದಲ್ಲಿ
ತಾಲೂಕು	: ನವಲಗುಂದ	ಕಾಲ	: ೧೧ನೇ ಶತಮಾನ
ಶೈಲಿ	: ಕಲ್ಯಾಣ ಚಾಲುಕ್ಯ	ವಸ್ತು	: ಕಪ್ಪುಶಿಲೆ

ನವಲಗುಂದದಿಂದ ದಕ್ಷಿಣಕ್ಕೆ ೧೯ ಕಿ.ಮೀ. ದೂರದಲ್ಲಿ ಈ ದೇವಾಲಯ ಇದೆ. ಪೂರ್ವಾಭಿಮುಖವಾಗಿರುವ ಈ ದೇವಾಲಯ ಗರ್ಭಗೃಹ, ಅಂತರಾಳ, ನವರಂಗ ಮತ್ತು ಮಹಾಮಂಟಪವನ್ನು ಒಳಗೊಂಡಿದೆ. ಗರ್ಭಗೃಹ ಚೌಕಾಕಾರವಾಗಿದ್ದು, ಮಧ್ಯದಲ್ಲಿ ಶಿವಲಿಂಗವಿದೆ. ಜೊತೆಗೆ ವಿತಾನದಲ್ಲಿ ಸುಂದರವಾದ ಪದ್ಮದ ಅಲಂಕರಣ ಇದೆ. ಪ್ರವೇಶದ್ವಾರವು ಪಂಚಶಾಖೆಗಳಿಂದ ಕೂಡಿದ್ದು, ಲಲಾಟಬಿಂಬದಲ್ಲಿ ಗಜಲಕ್ಷ್ಮಿಯ ಉಬ್ಬು ಚಿತ್ರಣವಿದೆ. ಇದಕ್ಕೆ ಹೊಂದಿಕೊಂಡಂತೆ ಅಂತರಾಳವಿದ್ದು, ವಿತಾನದಲ್ಲಿ ಪದ್ಮವಿದೆ. ಹಾಗೆಯೇ ಅಂತರಾಳದಲ್ಲಿ ಪಾರ್ವತಿಯ ಶಿಲ್ಪವಿದ್ದು, ಈಕೆಯ ಕಿರೀಟದಲ್ಲಿ ಶಿವಲಿಂಗವನ್ನು ತೋರಿಸಿರುವುದು ವಿಶೇಷವಾಗಿದೆ ಮತ್ತು ಇದರ ಪ್ರವೇಶದ್ವಾರವು ಪಂಚಶಾಖ ಅಲಂಕರಣದಿಂದ ಕೂಡಿದ್ದು, ಲಲಾಟದಲ್ಲಿ ಪದ್ಮದ ಅಲಂಕರಣ ಮತ್ತು ಗಜಸಾಲು ಇದೆ. ಅಂತರಾಳಕ್ಕೆ ಹೊಂದಿಕೊಂಡಂತೆ ನವರಂಗವಿದ್ದು, ಇಲ್ಲಿ ನಾಲ್ಕು ಕಂಬಗಳಿವೆ ಹಾಗೂ ಭಿತ್ತಿಯಲ್ಲಿ ೧೨ ಅರೆಕಂಬಗಳಿವೆ. ನವರಂಗದ ನಾಲ್ಕು ಸ್ತಂಭಗಳು ಪೀಠ, ಪಾದ, ದಿಂಡು, ಚೌಕ, ಕಲಶ, ಫಲಕ ಮತ್ತು ಸರಳ ಬೋಧಿಗೆಯಿಂದ ಕೂಡಿವೆ. ಜೊತೆಗೆ ವೃತ್ತಾಕಾರದ ದಿಂಡಿನಲ್ಲಿ ಪದ್ಮ ಮತ್ತು ರತ್ನಪಟ್ಟಿಕೆಗಳನ್ನು ಕಾಣುತ್ತೇವೆ. ನವರಂಗಕ್ಕೆ ಎರಡು ಪ್ರವೇಶದ್ವಾರಗಳಿದ್ದು, ಒಂದು ಮಹಾಮಂಟಪಕ್ಕೆ ಹೊಂದಿಕೊಂಡಿದ್ದರೆ ಮತ್ತೊಂದು ದೇವಾಲಯದ ಮುಖ್ಯ ಪ್ರವೇಶ ದ್ವಾರವಾಗಿದೆ. ಮಹಾಮಂಟಪಕ್ಕೆ ಹೊಂದಿಕೊಂಡಿರುವ, ನವರಂಗದ ದ್ವಾರಬಂಧ ನವಶಾಖಾಲಂಕಾರದಿಂದ ಕೂಡಿದೆ. ಈ ಶಾಖೆಗಳಲ್ಲಿ ಲಲಾಟಪಟ್ಟಿಕೆಯಲ್ಲಿಯೂ ಹರಡಿವೆ. ಉತ್ತರಾಂಗದಲ್ಲಿ ವ್ಯಾಳಿ, ಹಂಸ, ಗಜಸಾಲುಗಳಿದ್ದು, ಇವುಗಳ ಮೇಲೆ ದಶರುದ್ರನ ಕೆತ್ತನೆಯಿದೆ. ಹಾಗೆಯೇ ಎರಡು ಸ್ತಂಭಗಳ ಮಧ್ಯ ಶಿವನ ೧೧ ಸ್ಥಾನಿಕ ಶಿಲ್ಪಗಳಿವೆ. ಜೊತೆಗೆ ದ್ವಾರಬಂಧದಲ್ಲಿ ಕುಸುರಿ ಕೆತ್ತನೆಯಿದೆ. ನವರಂಗಕ್ಕೆ ಹೊಂದಿಕೊಂಡಂತೆ ಮಹಾಮಂಟಪವಿದ್ದು, ಇದು ಮೂರು ಪ್ರವೇಶದ್ವಾರಗಳನ್ನು ಹೊಂದಿವೆ. ಈ ಮಹಾಮಂಟಪದ ಮಧ್ಯೆ ನಾಲ್ಕು ಕಂಬಗಳು ಒಂದೇ ರೀತಿಯಲ್ಲಿವೆ. ಈ ಸ್ತಂಭಗಳು ಪೀಠ, ಪಾದ, ದಿಂಡು, ಚೌಕ, ಕಲಶ, ಫಲಕ ಮತ್ತು ಸರಳ ಬೋಧಿಗೆಗಳಿಂದ ಕೂಡಿವೆ. ಅಲ್ಲದೆ ದಿಂಡಿನಲ್ಲಿ ಬಹುಮುಖಗಳಿದ್ದು, ಪ್ರತಿ ಮುಖದಲ್ಲಿ ದಳಗಳು ಕಂಡುಬರುತ್ತವೆ. ಹಾಗೆಯೇ ಉಳಿದ ಇಪ್ಪತ್ತೆರಡು ಕಂಬಗಳು ಘಂಟಾಕೃತಿಯ ಕಂಬಗಳೇ ಆಗಿದ್ದರೂ ಅಲಂಕರಣಯಲ್ಲಿ ಒಂದಕ್ಕೊಂದು ಭಿನ್ನವಾಗಿವೆ. ಮಹಾಮಂಟಪದ ಉತ್ತರದ ದ್ವಾರಬಂಧವು ತ್ರಿಶಾಖಾಲಂಕಾರದಿಂದ ಕೂಡಿದೆ. ಇಕ್ಕೆಲಗಳಲ್ಲಿ ಜಾಲಾಂಧ್ರಗಳಿವೆ. ದಕ್ಷಿಣ ಪ್ರವೇಶ ದ್ವಾರ ಪಂಚಶಾಖಾಲಂಕಾರದಿಂದ ಕೂಡಿದ್ದು, ಲಲಾಟಪಟ್ಟಿಕೆಯಲ್ಲಿ ಸ್ಥಾನಿಕ ವಿಷ್ಣುವಿನ ಚಿತ್ರವಿದೆ. ಪೂರ್ವ ಪ್ರವೇಶ ದ್ವಾರವು ಪಂಚಶಾಖಾಲಂಕಾರದಿಂದ ಕೂಡಿದ್ದು, ಲಲಾಟಪಟ್ಟಿಕೆಯಲ್ಲಿ ಗಜಲಕ್ಷ್ಮಿ ಚಿತ್ರಣವಿದೆ. ಹಾಗೆಯೇ

ಉತ್ತರಾಂಗದಲ್ಲಿ ಪಂಚಕಿರುಶಿಖರಗಳಿದ್ದು, ಕೆಳಭಾಗದಲ್ಲಿ ಸರಸ್ವತಿ, ಗಣೇಶ, ಶಿವ, ಬ್ರಹ್ಮ, ವಿಷ್ಣುವಿನ ಶಿಲ್ಪಗಳಿವೆ. ದೇವಾಲಯದ ಊರ್ಧ್ವಮುಖವನ್ನು ನೋಡಿದಾಗ, ಅಧಿಷ್ಠಾನದಲ್ಲಿ ಉಪಾನ, ಜಗತಿ, ಪದ್ಮಕುಮುದ, ಮಕರಪಟ್ಟಿಕಾ ವೇದಿಕೆಗಳನ್ನು ಕಾಣುತ್ತೇವೆ. ಹಾಗೆಯೇ ಮಕರಪಟ್ಟಿಕೆಯಲ್ಲಿ ವ್ಯಾಳಿಗಳ ಮಧ್ಯೆ ಸರಸ್ವತಿ, ಪಾರ್ವತಿ, ಗಣೇಶ, ನೃತ್ಯ ಸ್ತ್ರೀ ಇನ್ನೂ ಮುಂತಾದ ಭಗ್ನಗೊಂಡಿರುವ ಶಿಲ್ಪಗಳು ಇವೆ. ಹಾಗೆಯೇ ಗರ್ಭಗೃಹದ ಮೇಲಿನ ಶಿಖರವು ನಾಲ್ಕು ತಲಗಳನ್ನು ಹೊಂದಿದ್ದು, ಪ್ರತಿಯೊಂದು ತಲವು ಅಲಂಕೃತವಾಗಿವೆ. ಜೊತೆಗೆ ಈ ಶಿಖರ ಶಾಲಾಲಂಕಾರದಿಂದ ಕೂಡಿದ್ದು, ಪ್ರತಿಯೊಂದು ತಲದ ಶಾಲದ ಕೆಳಗೆ ತೋರಣವನ್ನು ಮತ್ತು ತೋರಣದ ಕೆಳಗೆ ವಿಮಾನಗಳನ್ನು ಅಳವಡಿಸಲಾಗಿದೆ. ಈ ಶಿಖರದ ನಾಶಿಕಗಳಲ್ಲಿ ಅನೇಕ ದೇವ-ದೇವತೆಗಳ ಮತ್ತು ಪಂಜರಗಳಲ್ಲಿ ಶಿವನ ಅವತಾರಗಳ ಶಿಲ್ಪಗಳಿವೆ. ನವರಂಗದ ಬಾಹ್ಯ ಭಿತ್ತಿಯಲ್ಲಿ ಭದ್ರ-ಸಲಲಿತಾಂತರಗಳಿದ್ದು, ಭದ್ರದಲ್ಲಿ ಕೋಷ್ಠ ಪಂಜರವನ್ನು ಮತ್ತು ಸಲಲಿತಾಂತರದಲ್ಲಿ ಸ್ತಂಭ ಪಂಜರಗಳಿವೆ. ಸ್ತಂಭ ಪಂಜರಗಳಿಗೆ ಮಕರ ತೋರಣಗಳಿದ್ದು, ಭಿತ್ತಿಯ ಮೇಲೆ ಕಪೋತ, ಮಕರಪಟ್ಟಿಕಾ, ಹಾರಗಳು ಇವೆ. ಈ ಹಾರಗಳಲ್ಲಿ ಅನೇಕ ರೀತಿಯ ಕಿರುಶಿಲ್ಪಗಳಿವೆ. ಬೃಹದಾಕಾರದ ಗಣೇಶನ ಶಿಲ್ಪವನ್ನು ದ್ವಾರಬಂಧದಲ್ಲಿ ಕಾಣುತ್ತೇವೆ. ಈ ದೇವಾಲಯದ ಪ್ರವೇಶದ್ವಾರ ದಕ್ಷಿಣ ದಿಕ್ಕಿಗಿದ್ದು, ಪಂಚಶಾಖೆಗಳಿಂದ ಕೂಡಿದೆ. ಲಲಾಟಬಿಂಬದಲ್ಲಿ ಗಜಲಕ್ಷ್ಮಿಯ ಉಬ್ಬು ಕೆತ್ತನೆಯಿದೆ. ಉತ್ತರಾಂಗದಲ್ಲಿ ಪಂಚಶಿಖರಗಳ ಕೆತ್ತನೆಯಿದೆ, ಮುಖಮಂಟಪವು ಚೌಕಾಕಾರವಾಗಿದ್ದು, ಇಲ್ಲಿ ಆರು ಸ್ತಂಭಗಳು ಇವೆ. ಅಲ್ಲದೇ ಈ ಸ್ತಂಭಗಳಲ್ಲಿ, ಎರಡು ಸ್ತಂಭ ಅಷ್ಟಕೋನಾಕೃತಿಯ ಘಂಟಾಕೃತಿಯಲ್ಲಿಯೂ ಮತ್ತೆರಡು ಅಷ್ಟಕೋನಾಕೃತಿಯ ಸ್ತಂಭಗಳಿವೆ. ಹಾಗೆಯೇ ಸ್ವಲ್ಪ ದಪ್ಪವಾಗಿವೆ. ಅದೇ ರೀತಿ ಇನ್ನೆರಡು ಸ್ಥಂಭಗಳು ಚೌಕ, ದಿಂಡು, ಘಂಟಾಕಾರ ಕಲಶಗಳನ್ನು ಹೊಂದಿದ್ದು, ಇವು ಎತ್ತರದಲ್ಲಿದ್ದ ಕಕ್ಷಾಸನದ ಮೇಲಿವೆ. ಮುಖಮಂಟಪದ ಮೇಲ್ಛಾವಣೆಯು ಇಳಿಜಾರಾಗಿದ್ದು, ಮೇಲಿನ ಮೂಲೆಗಳಲ್ಲಿ ಕೂಟ, ಪಂಜರಗಳು ಇವೆ.

ದೇವಾಲಯ ಸುತ್ತಲೂ ಪ್ರಾಂಗಣವಿದ್ದು, ಭಗ್ನಗೊಂಡ ಸಿಂಹದ ಶಿಲ್ಪವಿದೆ. ಪ್ರಾಂಗಣದ ದಕ್ಷಿಣಕ್ಕೆ ದ್ವಾರಮಂಟವಿದ್ದು, ಇದು ದೇವಾಲಯದ ಪ್ರವೇಶ ದ್ವಾರದಿಂದ ಸ್ವಲ್ಪ ದೂರದಲ್ಲಿದೆ ಮತ್ತು ಎರಡೂ ಪ್ರವೇಶ ದ್ವಾರಗಳು ನೇರದಲ್ಲಿದ್ದು, ದ್ವಾರಮಂಟಪದಲ್ಲಿ ಒಟ್ಟು ೧೬ ಸ್ತಂಭಗಳಿವೆ. ಈ ಎಲ್ಲಾ ಸ್ತಂಭಗಳು ವಿವಿಧ ರೀತಿಯಲ್ಲಿದ್ದು, ಇವುಗಳು ದ್ವಾರಮಂಟಪಕ್ಕೆ ನಂತರದ ಕಾಲಘಟ್ಟದಲ್ಲಿ ಸೇರ್ಪಡೆಗೊಂಡಿರುವ ಸಾಧ್ಯತೆ ಇದೆ.[೬]

೮. ಮಲ್ಲಿಕಾರ್ಜುನ ದೇವಾಲಯ

ಗ್ರಾಮ	: ದೇವರಗುಡಿಹಾಳ	**ಸ್ಥಳ**	: ಕೆರೆ ಮುಂಭಾಗ
ತಾಲೂಕು	: ಹುಬ್ಬಳ್ಳಿ	**ಕಾಲ**	: ೧೧ನೇ ಶತಮಾನ
ಶೈಲಿ	: ಕಲ್ಯಾಣ ಚಾಲುಕ್ಯ	**ವಸ್ತು**	: ಕಪ್ಪುಶಿಲೆ

ಹುಬ್ಬಳ್ಳಿಯಿಂದ ಆಗ್ನೇಯಕ್ಕೆ ೧೩ ಕಿ.ಮೀ. ದೂರದಲ್ಲಿ ಮಲ್ಲಿಕಾರ್ಜುನ ದೇವಾಲಯ ಇದೆ. ಈ ದೇವಾಲಯ ಪೂರ್ವಾಭಿಮುಖವಾಗಿದ್ದು, ಗರ್ಭಗೃಹ, ಅರ್ಧಮಂಟಪ ಮತ್ತು ಸಭಾಮಂಟಪವನ್ನು ಹೊಂದಿದೆ. ಗರ್ಭಗೃಹವು ಚೌಕಾಕಾರದಿಂದ ಕೂಡಿದ್ದು, ಮಧ್ಯದಲ್ಲಿ ಶಿವಲಿಂಗವಿದೆ. ಇದರ ಪ್ರವೇಶದ್ವಾರ ಸಣ್ಣದಾಗಿದ್ದು, ಬಾಗಿಲುವಾಡದಲ್ಲಿ ಅರ್ಧಕಂಬಗಳು ಅಲಂಕರಣದಿಂದ ಕೂಡಿವೆ. ದ್ವಾರಬಂಧದ ಲಲಾಟದಲ್ಲಿ ಗಜಲಕ್ಷ್ಮಿಯನ್ನು ಕಾಣುತ್ತೇವೆ. ಹಾಗೆಯೇ ಗರ್ಭಗೃಹ ಮತ್ತು ಅರ್ಧಮಂಟಪವು ಜೀರ್ಣೋದ್ಧಾರಗೊಂಡಿದೆ. ಅರ್ಧಮಂಟಪಕ್ಕೆ ಹೊಂದಿಕೊಂಡಂತೆ ಸಭಾಮಂಟಪವಿದ್ದು, ಚೌಕಾಕಾರದ ಕಲ್ಲಿನ ಸ್ತಂಭಗಳಿವೆ. ತೊಲೆಗಳನ್ನು ಇತ್ತೀಚೆಗೆ ನಿರ್ಮಿಸಲಾಗಿದೆ. ಸಭಾಮಂಟಪಕ್ಕೆ ಪೂರ್ವ ಮತ್ತು ದಕ್ಷಿಣ ದಿಕ್ಕುಗಳಲ್ಲಿ ಪ್ರವೇಶದ್ವಾರಗಳು ಇದ್ದು, ಪೂರ್ವದಿಕ್ಕಿನ ಚಾವಣಿಯಲ್ಲಿ ನಾಗಬಂಧಶಿಲ್ಪ ಕಂಡುಬಂದರೆ, ದಕ್ಷಿಣ ದಿಕ್ಕಿನಲ್ಲಿ ಕಾರ್ತಿಕೇಯ, ಗಣಪತಿ ಮತ್ತು ನಾಗಶಿಲ್ಪಗಳು ಗೂಡುಗಳಲ್ಲಿವೆ. ಪ್ರಸ್ತುತ ಇವು ಭಗ್ನಗೊಂಡಿವೆ.

ದೇವಾಲಯದ ಊರ್ಧ್ವಭಾಗದಲ್ಲಿ ಅಧಿಷ್ಠಾನ, ಅದರಲ್ಲಿ ಜಗತಿ, ಪ್ರತಿ, ಉಪಾನ, ಕಂಠ, ಕುಮುದ ಮತ್ತು ಕಪೋತ ಭಾಗಗಳು ಕಂಡು ಬರುತ್ತವೆ ಮತ್ತು ಭಿತ್ತಿಯು ಸಪಾಟಾಗಿದ್ದು, ಜೀರ್ಣೋದ್ಧಾರಗೊಂಡಿದೆ.[೨೭]

೯. ಕಲ್ಲೇಶ್ವರ ದೇವಾಲಯ

ಗ್ರಾಮ	: ಬ್ಯಾಹಟ್ಟಿ	**ಸ್ಥಳ**	: ಚಾವಡಿ
ತಾಲೂಕು	: ಹುಬ್ಬಳ್ಳಿ	**ಕಾಲ**	: ೧೧ನೇ ಶತಮಾನ
ಶೈಲಿ	: ಕಲ್ಯಾಣ ಚಾಲುಕ್ಯ	**ವಸ್ತು**	: ಕಪ್ಪುಶಿಲೆ

ಹುಬ್ಬಳ್ಳಿಯಿಂದ ೧೦ ಕಿ.ಮೀ. ದೂರದಲ್ಲಿ ಕಲ್ಲೇಶ್ವರ ದೇವಾಲಯುವಿದೆ. ಪೂರ್ವಾಭಿಮುಖವಾಗಿರುವ ಈ ದೇವಾಲಯವು ಗರ್ಭಗೃಹ, ಅಂತರಾಳ ಮತ್ತು ನವರಂಗವನ್ನು ಹೊಂದಿದೆ. ಗರ್ಭಗೃಹವು ಚೌಕಾಕಾರವಾಗಿದ್ದು, ಮಧ್ಯದಲ್ಲಿ ಪ್ರಾಚೀನಲಿಂಗ ಮತ್ತು ಇತ್ತೀಚಿನ ನಂದಿಯ ಶಿಲ್ಪವಿದೆ. ಇದರ ಪ್ರವೇಶದ್ವಾರವು ಸರಳತೆಯಿಂದ ಕೂಡಿದೆ. ಇದಕ್ಕೆ ಹೊಂದಿಕೊಂಡಂತೆ ಅಂತರಾಳವಿದ್ದು, ಇದರ ಮಧ್ಯದಲ್ಲಿ ನಂದಿಯ ಶಿಲ್ಪವಿದೆ. ಮುಂದೆ ನವರಂಗವಿದೆ. ಇಲ್ಲಿನ ಸ್ತಂಭಗಳು ಚೌಕಾಕಾರ ಮತ್ತು ಬಹುಮುಖಗಳಿಂದ ಕೂಡಿದ್ದು, ಅಲಂಕರಣೆಯನ್ನು ಹೊಂದಿವೆ. ದೇವಾಲಯದ ಬಲಭಾಗದಲ್ಲಿ ವಿಶಾಲವಾದ ಹಜಾರವಿದ್ದು, ಭಗ್ನಗೊಂಡಿರುವ ಲಿಂಗಗಳನ್ನು ಮತ್ತು ನಂದಿಯ ಶಿಲ್ಪಗಳನ್ನು ಕಾಣುತ್ತೇವೆ.[೨೮]

೧೦. ಭವಾನಿಶಂಕರ ದೇವಾಲಯ

ಗ್ರಾಮ	: ಹಳೇ ಹುಬ್ಬಳ್ಳಿ	**ಸ್ಥಳ**	: ದತ್ತ ಮಂದಿರದ ಬಳಿ
ತಾಲೂಕು	: ಹುಬ್ಬಳ್ಳಿ	**ಕಾಲ**	: ೧೨ನೇ ಶತಮಾನ
ಶೈಲಿ	: ಕಲ್ಯಾಣ ಚಾಲುಕ್ಯ	**ವಸ್ತು**	: ಕಪ್ಪುಶಿಲೆ

ಧಾರವಾಡದಿಂದ ಆಗ್ನೇಯಕ್ಕೆ ೨೦ ಕಿ.ಮೀ. ದೂರದಲ್ಲಿ ಭವಾನಿಶಂಕರ ದೇವಾಲಯ ಇದೆ. ಪೂರ್ವಾಭಿಮುಖವಾಗಿರುವ ಈ ದೇವಾಲಯ ತ್ರಿಕುಟಾಚಲ ಮಾದರಿಯಲ್ಲಿದೆ. ಮೂರು ಗರ್ಭಗೃಹಗಳಿಗೆ ಹೊಂದಿಕೊಂಡಂತೆ ಮೂರ ತೆರೆದ ಅಂತರಾಳಗಳಿದ್ದು, ಒಂದೇ ನವರಂಗವು ಇದೆ. ಈ ಮೂರು ಗರ್ಭಗೃಹಗಳಲ್ಲಿ ಪಶ್ಚಿಮ ದಿಕ್ಕಿನ ಗರ್ಭಗೃಹವೇ ಪ್ರಧಾನವಾಗಿದ್ದು, ಪೀಠದ ಮೇಲೆ ಸಮಭಂಗಿಯಲ್ಲಿ ನಾರಾಯಣನ ಶಿಲ್ಪ ಇದೆ. ಈ ಶಿಲ್ಪದ ಸುತ್ತಲೂ ಮಕರ ತೋರಣವಿದ್ದು, ವಿಷ್ಣುವಿನ ದಶಾವತಾರದ ಚಿತ್ರಗಳು ಇವೆ. ಇನ್ನೂ ದಕ್ಷಿಣ ಭಾಗದ ಅಂತರಾಳದಲ್ಲಿ ಶಿವಲಿಂಗಕ್ಕೆ ಅಭಿಮುಖವಾಗಿ ಕುಳಿತ ನಂದಿಶಿಲ್ಪ, ಬದಿಗೆ ಸಪ್ತಮಾತೃಕೆಯರ ಪಟ್ಟಿಕೆಯಿದೆ. ಹಾಗೆಯೇ ನವರಂಗದ ಮಧ್ಯ ನಾಲ್ಕು ಕಂಬಗಳಿದ್ದು, ಇವು ಪೀಠ, ಪಾದ, ದಿಂಡು, ಘಂಟಾಕಾರದ ಕಲಶ, ಫಲಕ ಮತ್ತು ಸರಳ ಬೋಧಿಗಳಿಂದ ಆವೃತ್ತವಾಗಿದೆ. ನವರಂಗದ ಭಿತ್ತಿಯಲ್ಲಿ ೧೨ ಕರೆಕಂಬಗಳಿವೆ. ಒಟ್ಟಾರೆ ಮೂರು ಗರ್ಭಗೃಹಗಳಿಗೆ ಮೂರು ವಿಮಾನಗಳಿದ್ದು, ಮುಖ್ಯ ಗರ್ಭಗೃಹದ ಮೇಲಿರುವ ವಿಮಾನ ಉಳಿದೆಡೆಗಿಂತ ಸ್ವಲ್ಪ ದೊಡ್ಡದಾಗಿದೆ. ಜೊತೆಗೆ ಮೂರು ವಿಮಾನಗಳಿಗೆ ಹೊಂದಿಕೊಂಡಂತೆ ಮೂರು ಸುಕನಾಸಿಗಳಿರುವುದನ್ನು ಕಾಣುತ್ತೇವೆ. ಈ ಎಲ್ಲ ದೇವಾಲಯದ ಪ್ರವೇಶದ್ವಾರವು ಪಂಚಶಾಖೆಗಳಿಂದ ಅಂಲಕಾರವಾಗಿರುವುದನ್ನು ನೋಡಬಹುದಾಗಿದೆ. ಒಟ್ಟಾರೆ ಈ ದೇವಾಲಯವನ್ನು ವಿಷ್ಣು, ಮಹೇಶ್ವರ ಮತ್ತು ಸೂರ್ಯ ದೇವರುಗಳಿಗೆ ನಿರ್ಮಿತವಾದ ದೇವಾಲಯವಾಗಿದ್ದು, ಇದೊಂದು ತ್ರೈಪುರುಷ ದೇವಾಲಯ ಎನ್ನಬಹುದು.[೯]

೧೧. ಬಸವಣ್ಣ ದೇವಾಲಯ

ಗ್ರಾಮ	: ತಂಬೂರು	**ಸ್ಥಳ**	: ಗ್ರಾಮದ ಮಧ್ಯದಲ್ಲಿ
ತಾಲೂಕು	: ಕಲಘಟಗಿ	**ಕಾಲ**	: ೧೨ನೇ ಶತಮಾನ
ಶೈಲಿ	: ಕಲ್ಯಾಣ ಚಾಲುಕ್ಯ	**ವಸ್ತು**	: ಕಪ್ಪುಶಿಲೆ

ಕಲಘಟಗಿಯಿಂದ ದಕ್ಷಿಣಕ್ಕೆ ೧೧ ಕಿ.ಮೀ. ಅಂತರದಲ್ಲಿ ತಂಬೂರು ಗ್ರಾಮ ಇದೆ. ಗ್ರಾಮದ ಮಧ್ಯದಲ್ಲಿ ಬಸವಣ್ಣನ ದೇವಾಲಯವಿದೆ. ಪೂರ್ವಾಭಿಮುಖವಾಗಿರುವ ಈ ದೇವಾಲಯ ಗರ್ಭಗೃಹ, ಅಂತರಾಳ ಮತ್ತು ನಂದಿ ಮಂಟಪವನ್ನು ಒಳಗೊಂಡಿದೆ. ಗರ್ಭಗೃಹವು ಚೌಕಕಾರವಾಗಿದ್ದು, ಮಧ್ಯದಲ್ಲಿ ಶಿವಲಿಂಗವಿದೆ. ಗರ್ಭಗೃಹದ ಪ್ರವೇಶ ದ್ವಾರವು ಪಂಚಶಾಖೆಗಳಿಂದ ಕೂಡಿದ್ದು, ಲಲಾಟದಲ್ಲಿ ಸರಸ್ವತಿಯನ್ನು ಕಾಣುತ್ತೇವೆ. ಹಾಗೆಯೇ ಉತ್ತರಾಂಗದಲ್ಲಿ ಒಂದೇ ಸಾಲಿನಲ್ಲಿ ಪಂಚಶಿಖರಗಳಿದ್ದು, ಇಲ್ಲಿ ಬ್ರಹ್ಮ, ಗಣೇಶ, ನಟರಾಜ, ಸೂರ್ಯ ಮತ್ತು ವಿಷ್ಣುವಿನ ಶಿಲ್ಪಗಳನ್ನು ಗುರುತಿಸಬಹುದು. ಗರ್ಭಗೃಹಕ್ಕೆ ಹೊಂದಿಕೊಂಡಂತೆ ತೆರೆದ ನಾಲ್ಕು ಅರ್ಧಗಂಬಗಳಿಂದ ಕೂಡಿದ ಅಂತರಾಳವಿದೆ. ಈ ಅಂತರಾಳಕ್ಕೆ ಹೊಂದಿಕೊಂಡಂತೆ ನವರಂಗವಿದ್ದು, ಒಳಭಿತ್ತಿಯಲ್ಲಿ ೧೦ ಅರ್ಧಗಂಬಗಳಿವೆ. ನವರಂಗದ ಮಧ್ಯದಲ್ಲಿನ ನಾಲ್ಕು ಸ್ಥಂಬಗಳು ಪೀಠ, ಚೌಕಾಕಾರ ಘಂಟಾಕಾರ ಸರಳಬೋಧಿಗೆಯಿದ್ದು, ಮಧ್ಯ ಪದ್ಮ ಮತ್ತು ಕಿರುವೃತ್ತಾಕಾರದ ಪಟ್ಟಿಕೆಗಳಿವೆ. ಹಾಗೆಯೇ ಘಂಟಾಕಾರ ಮತ್ತು ಬೋಧಿಗೆಯ ಮಧ್ಯ ಕಳಸ ಭಾಗ ಇದೆ. ಸಭಾಮಂಟಪದ

ಮೇಲೆ ಭುವನೇಶ್ವರಿಯಲ್ಲಿ ವೃತ್ತಾಕಾರದ ಪದ್ಮವಿದ್ದು, ಅದರ ಸುತ್ತ ಮತ್ತೆ ಎಂಟು ಕಿರು ದ್ವಿದಳ ಪದ್ಮಗಳ ಅಲಂಕರಣವಿದೆ. ಹಾಗೆಯೇ ನವರಂಗಕ್ಕೆ ಹೊಂದಿಕೊಂಡಂತೆ ನಂದಿಮಂಟಪವಿದ್ದು, ಇದರ ಮಧ್ಯ ಆಭರಣಗಳಿಂದ ಅಲಂಕರಿಸಲ್ಪಟ್ಟ ನಂದಿಯನ್ನು ಪ್ರತಿಷ್ಠಾಪಿಸಲಾಗಿದೆ. ಜೊತೆಗೆ ಈ ದೇವಾಲಯಕ್ಕೆ ಪೂರ್ವ ಮತ್ತು ದಕ್ಷಿಣ ದಿಕ್ಕುಗಳಿಗೆ ಪ್ರವೇಶದ್ವಾರಗಳಿದ್ದು, ಅದರಲ್ಲಿ ಮುಖ್ಯದ್ವಾರ ದಕ್ಷಿಣ ದಿಕ್ಕಿಗಿದೆ. ಈ ಪ್ರವೇಶದ್ವಾರವು ಪಂಚಶಾಖೆಗಳಿಂದ ಕೂಡಿದ್ದು ಲಲಾಟದಲ್ಲಿ ಗಜಲಕ್ಷ್ಮಿಯನ್ನು ಕಾಣುತ್ತೇವೆ. ಹಾಗೆಯೇ ದೇವಾಲಯದ ಪ್ರವೇಶಕ್ಕೆ ಸೋಪಾನವಿದೆ. ಇನ್ನೂ ದೇವಾಲಯದ ಅಧಿಷ್ಠಾನವು ಕಪೋತಬಂಧ ಮಾದರಿಯಲ್ಲಿದೆ. ಅಧಿಷ್ಠಾನದಲ್ಲಿ ಉಪಾನ, ಜಗತಿ ಪದ್ಮ, ತ್ರಿಪಟ್ಟಕುಮುದ ಕಪೋತ ಭಾಗಗನ್ನೊಳಗೊಂಡಿದ್ದು, ದೇವಾಲಯವನ್ನು ಪಂಚರಥ ಮಾದರಿಯಲ್ಲಿ ನಿರ್ಮಾಣ ಮಾಡಲಾಗಿದೆ. ಭಿತ್ತಿಯ ಮೇಲೆ ಕಪೋತವು ಸರಳವಾಗಿದೆ. ದಂತಪಟ್ಟಿಕಾ, ಹಾರ ಭಾಗಗಳು ದೇವಾಲಯದ ಸುತ್ತಲೂ ಇವೆ. ಹಾರದ ಮೇಲೆ ಗರ್ಭಗೃಹಕ್ಕೆ ದ್ರಾವಿಡ ದ್ವಿತಲ ವಿಮಾನವಿದ್ದು, ಇಲ್ಲಿ ಕೂಟ, ಪಂಜರ, ಶಾಲಗಳಿವೆ. ಈ ಶಾಲಗಳಲ್ಲಿ ನಾಸಿಗಳು ಕಂಡುಬರುತ್ತವೆ. ಈ ವಿಮಾನದ ಮೂರು ದಿಕ್ಕಿನಲ್ಲಿ ನಾಸಿಗಳಿದ್ದು, ದಕ್ಷಿಣ ದಿಕ್ಕಿನ ನಾಸಿಯಲ್ಲಿ ವಿಷ್ಣು, ನಟರಾಜ ಮತ್ತು ದೇವತೆಯನ್ನು ಪಶ್ಚಿಮ ದಿಕ್ಕಿಗೆ ಶಿವ, ಸರಸ್ವತಿಯನ್ನು ಉತ್ತರ ದಿಕ್ಕಿಗೆ ಬ್ರಹ್ಮ ಮತ್ತು ಉಗ್ರದೇವತೆಯ ಶಿಲ್ಪಗಳು ಇವೆ. ಹಾಗೆಯೇ ವಿಮಾನಕ್ಕೆ ಹೊಂದಿಕೊಂಡಂತೆ ಅಂತರಾಳದ ಮೇಲೆ ಸುಕನಾಸಿ ಇದ್ದು, ಅಲ್ಲಿ ನಟರಾಜನ ಚಿತ್ರ ಕಂಡುಬರುತ್ತದೆ. ಒಟ್ಟಾರೆ ಈ ದೇವಾಲಯ ವಾಸ್ತುಶಿಲ್ಪ ದೃಷ್ಟಿಯಿಂದ ಮಹತ್ವವನ್ನು ಪಡೆದಿದೆ.[೨೦]

೧೨. ಕಲ್ಮೇಶ್ವರ ದೇವಾಲಯ

ಗ್ರಾಮ	: ಕಾಮಧೇನು	**ಸ್ಥಳ**	: ಗ್ರಾಮದ ಹೊರ ಭಾಗದಲ್ಲಿ
ತಾಲೂಕು	: ಕಲಘಟಗಿ	**ಕಾಲ**	: ೧೨ನೇ ಶತಮಾನ
ಶೈಲಿ	: ಕಲ್ಯಾಣ ಚಾಲುಕ್ಯ	**ವಸ್ತು**	: ಕಪ್ಪುಶಿಲೆ

ಕಲಘಟಗಿಯಿಂದ ನೈರುತ್ಯಕ್ಕೆ ಸುಮಾರು ೧೦ ಕಿ.ಮೀ. ದೂರದಲ್ಲಿ ಕಲ್ಮೇಶ್ವರ ದೇವಾಲಯವಿದ್ದು, ಪೂರ್ವಾಭಿಮುಖವಾಗಿದೆ. ಈ ದೇವಾಲಯ ಗರ್ಭಗೃಹ, ಅಂತರಾಳ, ನಂದಿಮಂಟಪ ಮತ್ತು ಸಭಾಮಂಟಪಗಳನ್ನೊಳಗೊಂಡಿದೆ. ಗರ್ಭಗೃಹವು ಚೌಕಾಕಾರವಾಗಿದ್ದು, ಮಧ್ಯ ಶಿವಲಿಂಗವಿದೆ. ಪ್ರವೇಶ ದ್ವಾರವು ಸರಳವಾಗಿದ್ದು, ಛತ್ತಿನಲ್ಲಿ ಕಮಲದ ಅಲಂಕರಣವಿದೆ. ಇದಕ್ಕೆ ಹೊಂದಿಕೊಂಡಂತೆ ಅಂತರಾಳವಿದ್ದು, ಇದರ ವಿತಾನದಲ್ಲಿ ಒಂಬತ್ತು ಪದ್ಮಗಳ ಅಲಂಕರಣವಿದೆ. ಇದರ ಪ್ರವೇಶದ್ವಾರವು ತ್ರಿಶಾಖಾಲಂಕಾರದಿಂದ ಕೂಡಿದ್ದು, ಲಲಾಟಪಟ್ಟಿಕೆ ಸರಳವಾಗಿದೆ. ಜೊತೆಗೆ ಬದಿಗಳಲ್ಲಿ ಅಡ್ಡವಾದ ಮೂರು ಸರಳ ಶಾಖಾಪಟ್ಟಿಕೆಗಳಿದ್ದು, ಉತ್ತರಾಂಗದಲ್ಲಿ ಮಕರ ತೋರಣವಿದೆ. ಈ ತೋರಣದ ಮಧ್ಯದಲ್ಲಿ ತ್ರಿಮೂರ್ತಿಗಳ ಮೂರ್ತಿಶಿಲ್ಪ ಸಮಭಂಗಿಯಲ್ಲಿದೆ. ಹಾಗೆಯೇ ಇದರ ದ್ವಾರಬಂಧದ ಬದಿಗಳಲ್ಲಿ ಕಮಲಲಾಂಕೃತವಾಗಿರುವಂತಹ ಜಾಲಾಂಧ್ರಗಳನ್ನು ಕಾಣುತ್ತೇವೆ. ಇದಕ್ಕೆ ಹೊಂದಿಕೊಂಡಂತೆ ಆಯತಾಕಾರದ ನಂದಿಮಂಟಪವಿದ್ದು, ಇಲ್ಲಿ ನಾಲ್ಕು ದೇವಕೋಷ್ಠಗಳು ಕಂಡುಬರುತ್ತವೆ. ಕ್ರಮವಾಗಿ

ಇಲ್ಲಿ ಸಪ್ತಮಾತೃಕೆ, ಗಣೇಶ, ಮಹಿಷಾಸುರಮರ್ದಿನಿ. ವಿಷ್ಣುವಿನ ಶಿಲ್ಪಗಳು ಇರುವುದನ್ನು ಕಾಣುತ್ತೇವೆ.

ನಂದಿಮಂಟಪಕ್ಕೆ ಹೊಂದಿಕೊಂಡಂತೆ ಸಭಾಮಂಟಪವಿದ್ದು, ಇದು ಮೂರು ಪ್ರವೇಶದ್ವಾರಗಳಿವೆ. ಮಧ್ಯದಲ್ಲಿ ನಾಲ್ಕು ಸ್ತಂಭಗಳಿದ್ದು, ಪೀಠ, ಪಾದ, ದಿಂಡು, ಚೌಕ, ಕಲಶ, ಫಲಕ ಮತ್ತು ಸರಳ ಬೋದಿಗೆಗಳಿಂದ ಕೂಡಿವೆ. ಜೊತೆಗೆ ದಿಂಡಿನಲ್ಲಿ ಪದ್ಮ ಮತ್ತು ರತ್ನಪಟ್ಟಿಕೆಗಳಿವೆ. ಸಭಾಮಂಟಪದ ಸುತ್ತಲೂ ಇರುವ ಕಕ್ಷಾಸನದಲ್ಲಿ ೨೨ ಕಿರುಸ್ತಂಭಗಳಿದ್ದು, ಇವುಗಳು ಪೀಠ, ದಿಂಡು, ಕಲಶ ಮತ್ತು ಸರಳ ಬೋಧಿಗೆಗಳಿಂದ ಕೂಡಿವೆ. ಇನ್ನು ದೇವಾಲಯದ ಅಧಿಷ್ಠಾನದಲ್ಲಿ ಉಪಾನ, ಜಗತಿ, ಕುಮುದ, ದಂತಪಟ್ಟಿಕಾ ಮತ್ತು ಕಪೋತ ಭಾಗಗಳಿವೆ. ಜೊತೆಗೆ ಭಿತ್ತಿಯಲ್ಲಿ ಭದ್ರ ಮತ್ತು ಉಪಭದ್ರ, ಕರ್ಣಗಳನ್ನು ಕಾಣುತ್ತೇವೆ. ಈ ಭದ್ರಭಾಗದಲ್ಲಿ ಮೂರು ದೇವಕೋಷ್ಠಗಳಿದ್ದು, ಇವು ಎರಡು ಅಂತಸ್ತಿನಲ್ಲಿರುವುದು ವಿಶೇಷ. ಇನ್ನು ಉಪಭದ್ರಭಾಗದಲ್ಲಿ ಸ್ತಂಭ ಪಂಜರ, ಕರ್ಣ ಭಾಗದಲ್ಲಿ ಕೋಷ್ಠ ಪಂಜರಗಳಿವೆ. ಹೆಚ್ಚಿನಮಟ್ಟಿಗೆ ಈ ಭಾಗದ ದೇವಾಲಯಗಳಲ್ಲಿ ಸ್ತಂಭ ಪಂಜರಗಳಿಗೆ ತೋರಣದ ಅಲಂಕರಣಗಳಿದ್ದರೆ, ಆ ಅಲಂಕರಣೆ ಈ ದೇವಾಲಯದಲ್ಲಿ ಇಲ್ಲ. ಸಭಾಮಂಟಪದ ಅಧಿಷ್ಠಾನವು ಮಂಚಬಂಧ ಮಾದರಿಯಲ್ಲಿದ್ದು, ಇಲ್ಲಿ ಉಪಾನ, ಜಗತಿ ಮತ್ತು ಕಪೋತಗಳಿಂದ ಕೂಡಿದೆ. ಹಾಗೆಯೇ ಕಪೋತದಲ್ಲಿ ದಂತಪಟ್ಟಿಕಾ ಇದ್ದು, ತಳಭಾಗದಲ್ಲಿ ಪುಷ್ಪಗಳ ಅಲಂಕರಣೆಯನ್ನು ಕಾಣುತ್ತೇವೆ. ಕಪೋತ ಮೇಲಿನ ಕಿರುಸ್ತಂಭಗಳು ನಾಗರಶೈಲಿಯ ಶಿಖರಗಳಿಂದ ಕೂಡಿದ್ದು, ಶಿಖರಗಳ ಮಧ್ಯ ವ್ಯಾಳಿಗಳು ಇವೆ. ಇವುಗಳ ಮೇಲಿನ ಪಟ್ಟಿಕೆ ಅಲಂಕಾರತೆ ಸರಳಾಗಿವೆ.[೫೧]

೧೩. ಸಿದ್ಧೇಶ್ವರ ದೇವಾಲಯ

ಗ್ರಾಮ : ಕುಂದಗೋಳ **ಸ್ಥಳ** : ಗ್ರಾಮದ ಹೊರ ಭಾಗದಲ್ಲಿ

ತಾಲೂಕು : ಕುಂದಗೋಳ **ಕಾಲ** : ೧೨ನೇ ಶತಮಾನ

ಶೈಲಿ : ಕಲ್ಯಾಣ ಚಾಲುಕ್ಯ **ವಸ್ತು** : ಕಪ್ಪುಶಿಲೆ

ಕುಂದಗೋಳದಿಂದ ಆಗ್ನೇಯಕ್ಕೆ ೧೦ ಕಿ.ಮೀ. ದೂರದಲ್ಲಿ ಸಿದ್ಧೇಶ್ವರ ದೇವಾಲಯವಿದೆ. ಪೂರ್ವಾಭಿಮುಖವಾಗಿರುವ ಈ ದೇವಾಲಯ ಗರ್ಭಗೃಹ, ಅಂತರಾಳ ಮತ್ತು ಸಭಾಮಂಟಪವನ್ನು ಹೊಂದಿದೆ. ಗರ್ಭಗೃಹ ಚೌಕಾಕಾರವಾಗಿದ್ದು, ಮಧ್ಯದಲ್ಲಿ ಶಿವಲಿಂಗವಿದೆ. ಇದರ ಪ್ರವೇಶದ್ವಾರವು ತ್ರಿಶಾಖೆಗಳಿಂದ ಕೂಡಿದ್ದು, ಲಲಾಟ ಪಟ್ಟಿಕೆಯಲ್ಲಿ ಗಜಲಕ್ಷ್ಮಿಯ ಚಿತ್ರಣವಿದೆ. ಇದಕ್ಕೆ ಹೊಂದಿಕೊಂಡಂತೆ ಅಂತರಾಳವಿದ್ದು, ಇಲ್ಲಿನ ಎರಡು ಸ್ತಂಭಗಳ ಮೇಲೆ ಕುಸುರಿ ಕೆತ್ತನೆಯುಳ್ಳ ಮಕರ ತೋರಣವಿದ್ದು, ಇವುಗಳಲ್ಲಿ ರಂಧ್ರಗಳನ್ನು ಕೊರೆಯಲಾಗಿದೆ. ಈ ರಂಧ್ರಗಳಲ್ಲಿ ಬ್ರಹ್ಮ, ಶಿವ ಮತ್ತು ವಿಷ್ಣುವಿನ ಕಿರುಶಿಲ್ಪಗಳು ಸಮಭಂಗಿಯಲ್ಲಿವೆ. ಸ್ತಂಭಗಳ ಇಕ್ಕೆಲಗಳಲ್ಲಿ ಅಷ್ಟಕೋನಾಕೃತಿಯ ಜಾಲಾಂಧ್ರಗಳಿದ್ದು, ವಿತಾನದಲ್ಲಿ ಅರಳಿದ ಪದ್ಮವಿದೆ. ಅಂತರಾಳಕ್ಕೆ ಹೊಂದಿಕೊಂಡಂತೆ ನಾಲ್ಕು ಸ್ತಂಭಗಳುಳ್ಳ ನವರಂಗವಿದ್ದು, ಮಧ್ಯದಲ್ಲಿ ಕುಳಿತ ನಂದಿ ಇದೆ. ಇದರ ಪ್ರವೇಶದ್ವಾರವು ಪಂಚಶಾಖಾಲಂಕಾರದಿಂದ

ಕೂಡಿದ್ದು, ಲಲಾಟ ಪಟ್ಟಿಕೆಯಲ್ಲಿ ಗಜಲಕ್ಷ್ಮಿಯ ಚಿತ್ರಣವಿದೆ. ಗಜಗಳು ತಮ್ಮ ಮುಂದಿನ ಎರಡು ಕಾಲುಗಳನ್ನು ಮೇಲೆತ್ತಿ ತಮ್ಮ ಸೊಂಡಿಲಿನಿಂದ ನೀರನ್ನು ತೆಗೆದುಕೊಂಡು ಲಕ್ಷ್ಮಿಗೆ ಅಭಿಷೇಕ ಮಾಡುತ್ತಿವೆ.

ಇದರ ಉತ್ತರಾಗಂದಲ್ಲಿ ಪಂಚಶಿಖರಗಳಿದ್ದು, ಒಂದು ದ್ರಾವಿಡ ಮಾದರಿಯಲ್ಲಿದ್ದರೆ, ಮತ್ತೆರಡು ಶಿಖರಗಳು ಲತಿನ ರೇಖಾನಾಗರ ಮಾದರಿಯಲ್ಲಿರುವುದು ಇದೊಂದು ವಿಶೇಷತೆ. ನವರಂಗಕ್ಕೆ ಹೊಂದಿಕೊಂಡಂತೆ ಸಭಾಮಂಟಪವಿದ್ದು, ಇಲ್ಲಿ ೨೬ ಸ್ತಂಭಗಳಿವೆ. ಇಲ್ಲಿನ ಸ್ತಂಭಗಳಲ್ಲಿ ಮೂರು ಪ್ರಕಾರಗಳಿದ್ದು, ಇದರಲ್ಲಿ ಮಧ್ಯದ ನಾಲ್ಕು ಸ್ತಂಭಗಳು ಪೀಠ, ಕಾಂಡದಲ್ಲಿ ಚೌಕ ವೃತ್ತಾಕಾರದ ದಿಂಡುಗಳು, ಘಂಟಾಕೃತಿ, ಕಲಶ ಮತ್ತು ಸರಳಬೋಧಿಗೆಯಿಂದ ಕೂಡಿವೆ. ಹಾಗೆಯೇ ಈ ಸ್ತಂಭಗಳ ಸುತ್ತ ಆರು ಸ್ತಂಭಗಳಿದ್ದು, ಇವು ಭಿನ್ನತೆಯಿಂದ ಕೂಡಿವೆ. ಇಲ್ಲಿನ ಸ್ತಂಭಗಳು ಪೀಠ, ಕಾಂಡದಲ್ಲಿ ವೃತ್ತ, ಘಂಟಾಕೃತಿ, ಕಲಶ, ಫಲಕ ಮತ್ತು ಸರಳಬೋಧಿಗೆಯಿಂದ ಕೂಡಿದವುಗಳಾಗಿವೆ. ಜೊತೆಗೆ ಇಲ್ಲಿನ ಸ್ತಂಭಗಳು ಪೀಠದಿಂದ ,ಕಾಂಡದ ತುದಿಯವರೆಗೂ ನೀಳಚೂಪಕೋನಗಳನ್ನು ಹೊಂದಿವೆ.

ಭಿತ್ತಿಯ ಮೂಲೆಯಲ್ಲಿ ೧೬ ಅರೆಸ್ತಂಭಗಳಿದ್ದು, ಇವುಗಳು ವೃತ್ತಾಕಾರದ ಕಲಶ, ಫಲಕ ಮತ್ತು ಸರಳ ಬೋಧಿಗೆಗಳಿಂದ ಕೂಡಿವೆ. ಸಭಾಮಂಟಪಕ್ಕೆ ಮೂರು ಪ್ರವೇಶದ್ವಾರಗಳಿದ್ದು, ಪ್ರಸ್ತುತ ದಕ್ಷಿಣದ ಪ್ರವೇಶದ್ವಾರವನ್ನು ಮುಚ್ಚಲಾಗಿದೆ. ಜೊತೆಗೆ ಉತ್ತರ ಮತ್ತು ಪೂರ್ವದ ದಿಕ್ಕುಗಳಿಗೆ ಪ್ರವೇಶದ್ವಾರಗಳಿದ್ದು, ವಿತಾನದಲ್ಲಿ ಅರಳಿದ ಒಂಬತ್ತು ಪದ್ಮಗಳ ಅಲಂಕರಣೆಯಿದೆ. ಈ ದೇವಾಲಯಕ್ಕೆ ಪ್ರವೇಶದ್ವಾರವು ಪೂರ್ವದಿಕ್ಕಿಗಿದ್ದು, ಇದರ ದ್ವಾರಬಂಧವು ಪಂಚಶಾಖೆಗಳಿಂದ ಕೂಡಿದೆ. ಜೊತೆಗೆ ಲಲಾಟ ಪಟ್ಟಿಕೆಯಲ್ಲಿ ಗಜಲಕ್ಷ್ಮಿಯ ಚಿತ್ರಗಳಿವೆ ಮತ್ತು ದೇವಾಲಯದ ಬಾಹ್ಯಭಿತ್ತಿಯು ಸಂಪೂರ್ಣ ಜೀರ್ಣೋದ್ಧಾರವಾಗಿದೆ.[೨]

೧೪. ನಾಗಲಿಂಗೇಶ್ವರ ದೇವಾಲಯ

ಗ್ರಾಮ : ಗಂಜೀಗಟ್ಟಿ | **ಸ್ಥಳ** : ಗ್ರಾಮದ ಹೊರ ಭಾಗದಲ್ಲಿ

ತಾಲೂಕು : ಕಲಘಟಗಿ | **ಕಾಲ** : ೧೨ನೇ ಶತಮಾನ

ಶೈಲಿ : ಕಲ್ಯಾಣ ಚಾಲುಕ್ಯ | **ವಸ್ತು** : ಕಪ್ಪುಶಿಲೆ

ಕಲಘಟಗಿಯಿಂದ ನೈರುತ್ಯಕ್ಕೆ ಸುಮಾರು ೧೨ ಕಿ.ಮೀ. ದೂರದಲ್ಲಿ ನಾಗಲಿಂಗೇಶ್ವರ ದೇವಾಲಯವಿದೆ. ಪೂರ್ವಾಭಿಮುಖವಾಗಿರುವ ಈ ದೇವಾಲಯ ಗರ್ಭಗೃಹ, ಅಂತರಾಳ ಮತ್ತು ನವರಂಗವನ್ನು ಒಳಗೊಂಡಿದೆ. ಗರ್ಭಗೃಹ ಚೌಕಾಕಾರವಾಗಿದ್ದು, ಮಧ್ಯದಲ್ಲಿ ಶಿವಲಿಂಗವಿದೆ. ಇದರ ದ್ವಾರಬಂಧ ಪಂಚಶಾಖೆಗಳಿಂದ ಕೂಡಿದ್ದು, ಲಲಾಟ ಪಟ್ಟಿಕೆಯು ಸಪಾಟಾಗಿದೆ. ಹಾಗೆಯೇ ಉತ್ತರಾಂಗದಲ್ಲಿ ಪುಷ್ಪದಗಳು ಇವೆ. ಗರ್ಭಗೃಹಕ್ಕೆ ಹೊಂದಿಕೊಂಡಂತೆ ಅಂತರಾಳವಿದ್ದು, ವಿತಾನದಲ್ಲಿ ಪದ್ಮದ ಅಲಂಕರಣೆಯಿದೆ. ಇದರ ದ್ವಾರಬಂಧ ಸರಳವಾಗಿದ್ದು, ಎರಡು ಸಾಲಿನ

ಚೌಕಾಕಾರದ ಜಾಲಾಂಧ್ರಗಳಿವೆ ಹಾಗೂ ಇದರ ಪಕ್ಕದಲ್ಲೇ ಎರಡು ದೇವಕೋಷ್ಠಗಳಿದ್ದು, ಒಂದರಲ್ಲಿ ಗಣೇಶ ಮತ್ತು ಇನ್ನೊಂದರಲ್ಲಿ ಸೂರ್ಯನ ಮೂರ್ತಿಗಳು ಇವೆ. ಇದಕ್ಕೆ ಹೊಂದಿಕೊಂಡಂತೆ ನಾಲ್ಕು ಕಂಬಗಳುಳ್ಳ ನವರಂಗವಿದ್ದು, ಮಧ್ಯದಲ್ಲಿ ವೃತ್ತಾಕಾರದ ನಾಟ್ಯ ವೇದಿಕೆಯನ್ನು ಕಾಣುತ್ತೇವೆ. ಇಲ್ಲಿನ ಕಂಬಗಳು ಪೀಠ, ಪಾದ, ಅಷ್ಟಮುಖ, ಚೌಕ, ಕಲಶ, ಫಲಕ ಮತ್ತು ಸರಳ ಬೋಧಿಗೆಗಳಿಂದ ಕೂಡಿದೆ.

ದೇವಾಲಯದ ಹೊರಭಾಗ ಅಧಿಷ್ಠಾನದಲ್ಲಿ ಉಪಾನ, ಜಗತಿ, ಚೂಪು ಕುಮುದ ಮತ್ತು ಕಪೋತ ಭಾಗಗಳು ಒಳಗೊಂಡಿವೆ. ಭಿತ್ತಿಯಲ್ಲಿ ಭದ್ರ ಸಲಿಲಾಂತರಗಳಿದ್ದು, ಭದ್ರದಲ್ಲಿ ಕೋಷ್ಠ ಪಂಜರವನ್ನೂ ಮತ್ತು ಸಲಿಲಾಂತರದಲ್ಲಿ ಸ್ತಂಭ ಪಂಜರಗಳನ್ನು ಕಾಣುತ್ತೇವೆ. ಸ್ತಂಭ ಪಂಜರಗಳಿಗೆ ತೋರಣದ ಅಂಲಕರಣವಿದ್ದು, ತೋರಣದ ಮಧ್ಯ ಸಲಿಲಾಂತರದಲ್ಲಿ ಸ್ತಂಭ ಪಂಜರಗಳನ್ನು ಕಾಣುತ್ತೇವೆ. ಸ್ತಂಭ ಪಂಜರಗಳಿಗೆ ತೋರಣದ ಅಲಂಕರಣವಿದ್ದು, ತೋರಣದ ಮಧ್ಯ ಪುಷ್ಪಗಳು ಕಂಡುಬರುತ್ತವೆ. ಹಾಗೆಯೇ ಭಿತ್ತಿಯ ಮೇಲೆ ಕಪೋತ ಭಾಗವಿದ್ದು, ಇದರ ಮೇಲೆ ಶಿಖರವಿದೆ. ಈಗ ಅದು ಸಂಪೂರ್ಣ ನಾಶವಾಗಿರುವುದನ್ನು ಕಾಣುತ್ತೇವೆ.[೩೩]

೧೫. ಕಲ್ಮೇಶ್ವರ ದೇವಾಲಯ

ಗ್ರಾಮ	: ಅಳ್ನಾವರ	**ಸ್ಥಳ**	: ಗ್ರಾಮದ ಮಧ್ಯದಲ್ಲಿ
ತಾಲೂಕು	: ಧಾರವಾಡ	**ಕಾಲ**	: ೧೨ನೇ ಶತಮಾನ
ಶೈಲಿ	: ಕಲ್ಯಾಣ ಚಾಲುಕ್ಯ	**ವಸ್ತು**	: ಕಪ್ಪುಶಿಲೆ

ಧಾರವಾಡದಿಂದ ಪಶ್ಚಿಮಕ್ಕೆ ೨೫ ಕಿ.ಮೀ. ದೂರದಲ್ಲಿ ಕಲ್ಮೇಶ್ವರ ದೇವಾಲಯವಿದೆ. ಈ ದೇವಾಲಯ ತಳವಿನ್ಯಾಸ ಗರ್ಭಗೃಹ, ಅಂತರಾಳ ಮತ್ತು ವಿಶಾಲವಾದ ನವರಂಗವನ್ನು ಒಳಗೊಂಡಿದೆ. ಗರ್ಭಗೃಹ ಚೌಕಾಕಾರವಾಗಿದ್ದು, ಮಧ್ಯದಲ್ಲಿ ವೃತ್ತಪಟ್ಟಿಕೆಗಳ ಪೀಠವುಳ್ಳ ಶಿವಲಿಂಗವಿದೆ. ಇದರ ದ್ವಾರಬಂಧ ಪಂಚಶಾಖೆಗಳಿಂದ ಕೂಡಿದ್ದು, ಅದರಲ್ಲಿ ತ್ರಿಶಾಖೆಗಳು ಲಲಾಟಬಿಂಬದಲ್ಲಿದೆ. ಲಲಾಟ ಪಟ್ಟಿಕೆಯಲ್ಲಿ ಲಕ್ಷ್ಮಿ ಇದ್ದು, ಮೇಲ್ಭಾಗದಲ್ಲಿ ಕೀರ್ತಿಮುಖವಿದೆ. ಹಾಗೆಯೇ ಲಕ್ಷ್ಮಿಯ ಬದಿಗಳಲ್ಲಿ ಗಜಗಳನ್ನು ತೋರಿಸಿರುವುದು ವಿಶೇಷವಾಗಿದೆ. ಉತ್ತರಾಂಗದಲ್ಲಿ ಅಪರೂಪದ ಮಾದರಿಯ ಪಂಚ ಕಿರುಶಿಖರಗಳಿದ್ದು, ಮೊದಲ ಮತ್ತು ಕೊನೆಯ ಶಿಖರಗಳು ಒಂದೇ ರೀತಿಯ ಲಕ್ಷಣಗಳನ್ನು ಹೊಂದಿದೆ. ಗರ್ಭಗೃಹಕ್ಕೆ ಹೊಂದಿಕೊಂಡಂತೆ ಅಂತರಾಳವಿದ್ದು, ಅಂತರಾಳದ ವಿತಾನದಲ್ಲಿ ಅರಳಿದ ಪದ್ಮಮಂಡಲ ಇದೆ. ಹಾಗೆಯೇ ಈ ಪದ್ಮ ವಿತಾನದ ಸುತ್ತಲೂ ಅಷ್ಟದಿಕ್ಪಾಲಕರ ಕೆತ್ತನೆಯಿದ್ದು, ಅವುಗಳನ್ನು ವೃತ್ತಾಕಾರದ ಪಟ್ಟಿಕೆಯ ಒಳಗಡೆ ಚಿತ್ರಿಸಿರುವುದು ವಿಶೇಷವಾಗಿದೆ. ಅಂತರಾಳದ ಪ್ರವೇಶದ್ವಾರವು ಪಂಚಶಾಖಾಲಂಕೃತವಾಗಿದ್ದು, ಲಲಾಟಬಿಂಬದಲ್ಲಿ ಗಜಲಕ್ಷ್ಮಿಯನ್ನು ಚಿತ್ರಿಸಲಾಗಿದೆ. ಉತ್ತರಾಂಗದಲ್ಲಿ ತ್ರಿಮೂರ್ತಿಗಳ ಕೆತ್ತನೆಯಿದೆ. ಈ ಚಿತ್ರಣದ ಇಕ್ಕೆಲಗಳಲ್ಲಿ ಎರಡು ಮಕರಗಳು ಇವೆ. ಹಾಗೆಯೇ ದ್ವಾರಬಂಧದ ಪಕ್ಕದಲ್ಲಿ ಎರಡು ಸಾಲಿನ ಜಾಲಾಂಧ್ರಗಳಿದ್ದು, ಇವು ಚೌಕಾಕಾರವಾಗಿವೆ. ಜೊತೆಗೆ ಇವುಗಳಲ್ಲಿ ಪದ್ಮಗಳಿದ್ದು, ಅವು ಭಗ್ನಗೊಂಡಂತಿವೆ. ಅಂತರಾಳಕ್ಕೆ

ಹೊಂದಿಕೊಂಡಂತೆ ನಾಲ್ಕು ಕಂಬಗಳುಳ್ಳ ನವರಂಗವಿದ್ದು, ಈ ಕಂಬಗಳು ಪೀಠ, ಕಾಂಡದಲ್ಲಿ ಚೌಕ ಅಷ್ಟಮುಖದಿಂಡು, ಚೌಕ, ಕಲಶ ಮತ್ತು ಸರಳ ಬೋದಿಗೆಯಿಂದ ಕೂಡಿವೆ. ಆದರೆ ಈಗ ಕೇವಲ ನಾಲ್ಕು ಸ್ತಂಭಗಳು ಉಳಿದಿದ್ದು, ಮೇಲ್ಛಾವಣಿಯು ಆಧುನಿಕ ಹೆಂಚಿನಿಂದ ಆವೃತವಾಗಿವೆ.[೩೪]

೧೬. ಕಲ್ಮತ ದೇವಾಲಯ

ಗ್ರಾಮ : ಅಣ್ಣಿಗೇರಿ **ಸ್ಥಳ** : ಗ್ರಾಮದ ಮಧ್ಯದಲ್ಲಿ

ತಾಲೂಕು : ನವಲಗುಂದ **ಕಾಲ** : ೧೨ನೇ ಶತಮಾನ

ಶೈಲಿ : ಕಲ್ಯಾಣ ಚಾಲುಕ್ಯ **ವಸ್ತು** : ಕಪ್ಪುಶಿಲೆ

ನವಲಗುಂದದಿಂದ ದಕ್ಷಿಣಕ್ಕೆ ೧೯ ಕಿ.ಮೀ. ದೂರದಲ್ಲಿ ಈ ದೇವಾಲಯ ಇದೆ. ಪೂರ್ವಾಭಿಮುಖವಾಗಿರುವ ಈ ದೇವಾಲಯವು, ತಳವಿನ್ಯಾಸದಲ್ಲಿ ಗರ್ಭಗೃಹ, ಅಂತರಾಳ, ನವರಂಗವನ್ನು ಹೊಂದಿದೆ. ಗರ್ಭಗೃಹವು ಚೌಕಾಕಾರವಾಗಿದ್ದು, ಮಧ್ಯಭಾಗದಲ್ಲಿ ವೃತ್ತಾಕಾರದ ಶಿವಲಿಂಗ ಕಂಡುಬರುತ್ತದೆ. ಇದರ ಪ್ರವೇಶದ್ವಾರವು ಪಂಚಶಾಖೆಗಳಿಂದ ಕೂಡಿದ್ದು, ಎರಡು ಶಾಖೆಗಳು ಲಲಾಟದಲ್ಲಿ ಹರಡಿವೆ. ಜೊತೆಗೆ ಇಳಿಬಿದ್ದಂತೆ ವೃತ್ತ ಪಟ್ಟಿಕೆಗಳನ್ನು ಲಲಾಟದಲ್ಲಿ ಎದ್ದು ಕಾಣುವಂತೆ ಚಿತ್ರಿಸಲಾಗಿದೆ. ವೃತ್ತದ ಪಟ್ಟಿಕೆಗಳು ಬಾಳೆದಿಂಡಿನ ಅಲಂಕರಣೆಗಳಿಂದ ಕೂಡಿದ್ದು, ಸ್ವಲ್ಪ ಭಗ್ನಗೊಂಡಿವೆ. ಉತ್ತರಾಂಗದಲ್ಲಿ ಪಂಚಶಿಖರಗಳಿದ್ದು, ಇವುಗಳಲ್ಲಿ ಮೂರು ದ್ರಾವಿಡ, ಎರಡು ರೇಖಾನಾಗರ ಶೈಲಿಯ ಶಿಖರಗಳಾಗಿವೆ. ಗರ್ಭಗೃಹಕ್ಕೆ ಹೊಂದಿಕೊಂಡಂತೆ ಅಂತರಾಳವಿದ್ದು, ಇದರ ಪ್ರವೇಶದ್ವಾರವು ತ್ರಿಶಾಖೆಗಳಿಂದ ಕೂಡಿವೆ. ಜೊತೆಗೆ ಪೇದ್ಯಭಾಗ ಮತ್ತು ಲಲಿಟಾಪಟ್ಟಿಕೆ ಸರಳವಾಗಿದ್ದು, ಈ ದ್ವಾರಬಂಧದ ಇಕ್ಕೆಲಗಳಲ್ಲಿ ಪದ್ಮಾಲಂಕಾರದ ಎರಡು ಸಾಲಿನ ಜಾಲಾಂಧ್ರಗಳಿವೆ. ಅಲ್ಲದೇ ಇದರ ಬದಿಗಳಲ್ಲಿ ಅರೆಗಂಬಗಳನ್ನು ಕಾಣುತ್ತೇವೆ. ಅಂತರಾಳಕ್ಕೆ ಹೊಂದಿಕೊಂಡಂತೆ ನವರಂಗವಿದ್ದು, ಅಲ್ಲಿ ನಾಲ್ಕು ಕಂಬಗಳನ್ನು ಕಾಣುತ್ತೇವೆ. ಇವು ಪೀಠ, ಕಾಂಡದಲ್ಲಿ ಚೌಕ, ವೃತ್ತಾಕಾರದ ಪಟ್ಟಿಕೆಗಳು, ಘಂಟಾಕಾರದ ಕಲಶ, ಫಲಕ ಮತ್ತು ಸರಳಬೋಧಿಗೆಯಿಂದ ಕೂಡಿವೆ. ಹಾಗೆಯೇ ಕಂಬಗಳ ಮಧ್ಯ ನಾಟ್ಯವೇದಿಕೆಯನ್ನು ಕಾಣುತ್ತೇವೆ. ನವರಂಗದಲ್ಲಿ ಎಂಟು ದೇವಕೋಷ್ಠಗಳಿದ್ದು, ಇವುಗಳ ಪ್ರವೇಶದ್ವಾರಗಳು ಪಂಚಶಾಖೆಗಳಿಂದ ಕೂಡಿವೆ. ಜೊತೆಗ ಇವುಗಳ ಮೇಲೆ ದ್ರಾವಿಡ ವಿಮಾನವನ್ನು ಕಾಣುತ್ತೇವೆ. ನವರಂಗಕ್ಕೆ ಪೂರ್ವ, ಉತ್ತರ ಮತ್ತು ದಕ್ಷಿಣ ಭಾಗಗಳಿಂದ ಪ್ರವೇಶ ದ್ವಾರಗಳಿದ್ದು, ಪೂರ್ವದಿಕ್ಕಿನ ಪ್ರವೇಶ ದ್ವಾರವು ತ್ರಿಶಾಖೆಗಳಿಂದ ಕೂಡಿದ್ದಲ್ಲದೇ, ಎರಡೂ ದ್ವಾರದ ಇಕ್ಕೆಲಗಳಲ್ಲಿ ಜಾಲಾಂಧ್ರಗಳಿವೆ. ಇಲ್ಲಿ ಲಲಾಟ ಪಟ್ಟಿಕೆ, ಪೇದ್ಯಭಾಗ ಸರಳವಾಗಿವೆ. ಜೊತೆಗೆ ಲಲಾಟಬದಿಯಲ್ಲಿ ಬಾಳೆದಿಂಡಿನ ಅಲಂಕರಣೆಯಿದ್ದು, ಅದರ ಮೇಲೆ ಕಪೋತವನ್ನು ಕಾಣುತ್ತೇವೆ.

ಹಾಗೆಯೇ ದೇವಾಲಯದ ಊರ್ಧ್ವಮುಖವನ್ನು ನೋಡಿದಾಗ ಅದು ಜೀರ್ಣೋದ್ಧಾರವಾಗಿದೆ. ಆದರೆ ಅಧಿಷ್ಠಾನವು ಮಾತ್ರ ಯಥಾಸ್ಥಿತಿಯಲ್ಲಿದ್ದು, ಅಧಿಷ್ಠಾನದಲ್ಲಿ ಉಪಾನ, ಜಗತಿ, ಕುಮುದ, ದಂತಪಟ್ಟಿಕಾ, ಕಪೋತಗಳಿವೆ. ಅಲ್ಲದೇ ಭಿತ್ತಿಯಲ್ಲಿ ಕುಡ್ಯಸ್ತಂಭಗಳನ್ನು ಕಾಣುತ್ತೇವೆ. ಜೊತೆಗೆ

ದೇವಾಲಯಕ್ಕೆ ಅಭಿಮುಖವಾಗಿ ಬೃಹದಾಕಾರದ ನಂದಿಯ ಶಿಲ್ಪವಿದ್ದು, ಈ ದೇವಾಲಯಕ್ಕೆ ಸಂಬಂಧಿಸಿದ ಇತರೇ ಅವಶೇಷಗಳು ಸುತ್ತಲೂ ಕಂಡುಬರುತ್ತವೆ.[೫೫].

೧೭. ಕಲ್ಮೇಶ್ವರ ದೇವಾಲಯ

ಗ್ರಾಮ	: ನಾವಳ್ಳಿ	**ಸ್ಥಳ**	: ಗ್ರಾಮದ ಹೊರಗೆ
ತಾಲೂಕು	: ನವಲಗುಂದ	**ಕಾಲ**	: ೧೨ನೇ ಶತಮಾನ
ಶೈಲಿ	: ಕಲ್ಯಾಣ ಚಾಲುಕ್ಯ	**ವಸ್ತು**	: ಕಪ್ಪುಶಿಲೆ

ನವಲಗುಂದದಿಂದ ಪೂರ್ವಕ್ಕೆ ೧೩ ಕಿ.ಮೀ. ಅಂತರದಲ್ಲಿ ಕಲ್ಮೇಶ್ವರ ದೇವಾಲಯವಿದೆ. ಪೂರ್ವಾಭಿಮುಖವಾಗಿರುವ ಈ ದೇವಾಲಯವು, ಗರ್ಭಗೃಹ, ಅಂತರಾಳ ಮತ್ತು ನವರಂಗದಿಂದ ಕೂಡಿದೆ. ಗರ್ಭಗೃಹವು ಚೌಕಾಕಾರವಾಗಿದ್ದು, ಮಧ್ಯದಲ್ಲಿ ಪೀಠ ಇಲ್ಲದ ವೃತ್ತಾಕಾರದ ಶಿವಲಿಂಗವನ್ನು ಕಾಣುತ್ತೇವೆ. ಒಳಭಿತ್ತಿಯಲ್ಲಿ ಮೂರು ಕಡೆ ಕಪೋತಪಟ್ಟಿಕೆ ಇದೆ. ಜೊತೆಗೆ ಭುವನೇಶ್ವರಿ ಇದೆ. ಇದರಲ್ಲಿ ಅರಳಿದ ಪದ್ಮದ ಅಲಂಕರಣೆ ಇದೆ. ಹಾಗೆಯೇ ಲಲಾಟಪಟ್ಟಿಕೆಯಲ್ಲಿ ಗಜಲಕ್ಷ್ಮಿಯ ಶಿಲ್ಪ ಇದೆ. ಗರ್ಭಗೃಹಕ್ಕೆ ಹೊಂದಿಕೊಂಡಂತೆ ಅಂತರಾಳವಿದ್ದು, ಇದರ ಪ್ರವೇಶದ್ವಾರವು ಸರಳತೆಯಿಂದ ಕೂಡಿದ್ದಲ್ಲದೇ, ಎರಡು ಸಾಲಿನ ಜಾಲಾಂಧ್ರಗಳನ್ನು ಅಳವಡಿಸಲಾಗಿದೆ. ಇದಕ್ಕೆ ಹೊಂದಿಕೊಂಡಂತೆ ನವರಂಗವಿದ್ದು, ಇಲ್ಲಿ ನಾಲ್ಕು ಕಂಬಗಳನ್ನು ಕಾಣುತ್ತೇವೆ. ಈ ಕಂಬಗಳು ಪೀಠ, ಪಾದ, ವೃತ್ತಾಕಾರದ ದಿಂಡುಗಳು, ಘಂಟಾಕಾರ ಕಳಶ, ಫಲಕ ಮತ್ತು ಸರಳ ಬೋಧಿಗೆಯಿಂದ ಕೂಡಿದವುಗಳಾಗಿವೆ. ನವರಂಗದಲ್ಲಿ ನಾಲ್ಕು ದೇವಕೋಷ್ಠಗಳಿದ್ದು, ಕ್ರಮವಾಗಿ, ವಿಷ್ಣು, ಶಿವಲಿಂಗ, ಮಹಿಷಾಸುರಮರ್ಧಿನಿ ಮತ್ತು ವಿಷ್ಣುವಿನ ಶಿಲ್ಪಗಳು ಕಂಡುಬರುತ್ತದೆ. ಹಾಗೆಯೇ ಇವುಗಳ ಪ್ರವೇಶದ್ವಾರಗಳು ಪಂಚಶಾಖೆಗಳಿಂದ ಕೂಡಿದ್ದು, ಲಲಾಟಪಟ್ಟಿಕೆಯ ಮೇಲೆ ಕಪೋತವನ್ನೂ, ಅದರ ಮೇಲೆ ದ್ರಾವಿಡ ವಿಮಾನವನ್ನು ಕಾಣುತ್ತೇವೆ. ನವರಂಗದ ಎರಡು ಕಂಬಗಳ ಮಧ್ಯ ಶಿವಲಿಂಗವನ್ನು ಮತ್ತು ನಾಲ್ಕು ಕಂಬಗಳ ಮಧ್ಯ ನಾಟ್ಯವೇದಿಕೆಯನ್ನು ಗುರುತಿಸಬಹುದಾಗಿದೆ.

ನವರಂಗಕ್ಕೆ ಪೂರ್ವ ಮತ್ತು ದಕ್ಷಿಣ ದಿಕ್ಕುಗಳಿಗೆ ಎರಡು ಪ್ರವೇಶ ದ್ವಾರಗಳಿದ್ದು, ಮುಖ್ಯದ್ವಾರವು ದಕ್ಷಿಣಕ್ಕೆ ಇದೆ. ಈ ದ್ವಾರವು ಸಪ್ತಶಾಖಾಲಂಕಾರದಿಂದ ಕೂಡಿದ್ದು, ಮೊದಲ ನಾಲ್ಕು ಶಾಖೆಗಳು ಮಾತ್ರ ಅಲಂಕರಣೆಗಳಿಂದ ಕೂಡಿದೆ. ಜೊತೆಗೆ ಅವುಗಳಲ್ಲಿ ಪುಷ್ಪದಳ ಮತ್ತು ಬಳ್ಳಿಯಾಕಾರದ ಅರ್ಧಗಂಭಗಳಿವೆ. ಇನ್ನು ಲಲಾಟಬಿಂಬದಲ್ಲಿ ಆಸೀನ ಸರಸ್ವತಿಯ ಚಿತ್ರವಿದ್ದು, ಬದಿಗಳಲ್ಲಿ ಇಳಿಬಿದ್ದ ಬಾಳೆದಿಂಡಿನ ಅಲಂಕರಣೆ ಇದೆ. ಇನ್ನು ಪೂರ್ವದಿಕ್ಕಿನ ಪ್ರವೇಶದ್ವಾರವು ಪಂಚಶಾಖೆಗಳಿಂದ ಕೂಡಿದೆ.

ಇನ್ನು ದೇವಾಲಯದ ಅಧಿಷ್ಠಾನದಲ್ಲಿ ಉಪಾನ, ಜಗತಿ, ಚೂಪು ಕುಮುದ, ಕಂಠ, ಕಪೋತದಲ್ಲಿ ದಂತಪಟ್ಟಿಕೆ ಇದೆ. ದೇವಾಲಯ ಭಿತ್ತಿಯು ಸಪಾಟಾಗಿದ್ದು, ಶಿಖರದ ಮೂರು ಕಡೆಯಲ್ಲಿ ಆರು ಪಂಜರಗಳಿವೆ. ಹಾಗೆಯೇ ಶಿಖರದ ಮುಂದೆ ಸುಕನಾಸಿಯಿದ್ದು, ಪಂಜರದಲ್ಲಿ ನಟರಾಜನ ಶಿಲ್ಪವನ್ನು ಗುರುತಿಸಬಹುದಾಗಿದೆ.[೫೬]

೧೮. ಸೋಮೇಶ್ವರ ದೇವಾಲಯ

ಗ್ರಾಮ	: ಮಲ್ಲಿಗವಾಡ	**ಸ್ಥಳ**	: ಗ್ರಾಮದ ಮಧ್ಯದಲ್ಲಿ
ತಾಲೂಕು	: ಹುಬ್ಬಳ್ಳಿ	**ಕಾಲ**	: ೧೨ನೇ ಶತಮಾನ
ಶೈಲಿ	: ಕದಂಬನಾಗರ	**ವಸ್ತು**	: ಕಪ್ಪುಶಿಲೆ

ಹುಬ್ಬಳ್ಳಿಯಿಂದ ಪೂರ್ವಕ್ಕೆ ೩೦ ಕಿ.ಮೀ. ಅಂತರದಲ್ಲಿ ಸೋಮೇಶ್ವರ ದೇವಾಲಯವಿದೆ. ಪೂರ್ವಾಭಿಮುಖವಾಗಿರುವ ಈ ದೇವಾಲಯ ಗರ್ಭಗೃಹ, ಅಂತರಾಳ ಮತ್ತು ನವರಂಗವನ್ನು ಹೊಂದಿದೆ. ಗರ್ಭಗೃಹವು ಚೌಕಾಕಾರವಾಗಿದ್ದು, ಮಧ್ಯದಲ್ಲಿ ಶಿವಲಿಂಗವಿದೆ. ಭಿತ್ತಿಯು ನಾಲ್ಕು ಚೌಕ ಮೂಲೆಗಂಬಗಳನ್ನು ಹೊಂದಿದೆ. ವಿತಾನದಲ್ಲಿ ಪದ್ಮದ ಅಲಂಕರಣೆಯನ್ನು ಕಾಣುತ್ತೇವೆ. ಇದಕ್ಕೆ ಹೊಂದಿಕೊಂಡಂತೆ ಅಂತರಾಳವಿದ್ದು, ಶಿವಲಿಂಗಕ್ಕೆ ಅಭಿಮುಖವಾಗಿ ಕುಳಿತ ನಂದಿಯನ್ನು ಪ್ರತಿಷ್ಠಾಪಿಸಲಾಗಿದೆ. ಹಾಗೆಯೇ ಅಂತರಾಳದ ದ್ವಾರದ ಇಕ್ಕೆಲಗಳಲ್ಲಿ ಎರಡು ಸಾಲಿನ ಜಾಲಾಂಧ್ರಗಳಿದ್ದು, ಜಾಲಾಂಧ್ರಗಳ ಬದಿಯಲ್ಲಿ ನೀಳವಾದ ಅರೆಗಂಬಗಳಿವೆ.

ಅಂತರಾಳಕ್ಕೆ ಹೊಂದಿಕೊಂಡಂತೆ ನವರಂಗವಿದ್ದು, ಮಧ್ಯದಲ್ಲಿ ನಾಲ್ಕು ಸ್ತಂಭಗಳು ಇವೆ. ಈ ಸ್ತಂಭಗಳು ಪೀಠ, ಚೌಕ, ಬಹುಮುಖ ದಿಂಡು, ಚೌಕ, ಕಲಶ, ಫಲಕ ಮತ್ತು ಸರಳ ಬೋಧಿಗೆಯಿಂದ ಕೂಡಿದೆ. ಇವುಗಳ ಮಧ್ಯ ನಾಟ್ಯ ವೇದಿಕೆಯನ್ನು ಕಾಣುತ್ತೇವೆ. ಹಾಗೆಯೇ ನವರಂಗದಲ್ಲಿ ನಾಲ್ಕು ದೇವಕೋಷ್ಠಗಳಿದ್ದು, ಅಲ್ಲಿ ಯಾವುದೇ ವಿಗ್ರಹಗಳು ಕಂಡುಬರುವುದಿಲ್ಲ. ಇದರ ಪ್ರವೇಶದ್ವಾರವು ಪಂಚಶಾಖೆಗಳಿಂದ ಕೂಡಿದ್ದು, ಅವುಗಳು ಸರಳವಾಗಿವೆ. ಜೊತೆಗೆ ನವರಂಗಕ್ಕೆ ಹೊಂದಿಕೊಂಡಂತೆ ಉತ್ತರ ಮತ್ತು ದಕ್ಷಿಣ ದಿಕ್ಕುಗಳಲ್ಲಿ ಎರಡು ಗರ್ಭಗೃಹಗಳಿವೆ. ಅದರಲ್ಲಿ ಉತ್ತರ ಗರ್ಭಗೃಹವು ಖಾಲಿ ಇದ್ದರೆ, ದಕ್ಷಿಣ ಗರ್ಭಗೃಹದಲ್ಲಿ ಶಿವಲಿಂಗವಿದೆ.

ದೇವಾಲಯದ ಮುಂಭಾಗದಲ್ಲಿ ಆಧುನಿಕ ಮುಖಮಂಟಪವಿದೆ. ಈ ದೇವಾಲಯದ ಬಾಹ್ಯಭಿತ್ತಿ ಜೀರ್ಣೋದ್ಧಾರಗೊಂಡಿದೆ ಹಾಗೆಯೇ ದೇವಾಲಯದ ಮೇಲೆ ಕದಂಬ ನಾಗರಶಿಖರವಿದ್ದು, ಈ ಶಿಖರದಲ್ಲಿ ಆರು ತಲಗಳು, ಸ್ತೂಪಿ ಒಳಗೊಂಡಿದೆ.[೩೭]

೧೯. ಸೋಮಲಿಂಗ ದೇವಾಲಯ

ಗ್ರಾಮ	: ಹಸರಂಬಿ	**ಸ್ಥಳ**	: ಗ್ರಾಮದ ಹೊರಗೆ
ತಾಲೂಕು	: ಕಲಘಟಗಿ	**ಕಾಲ**	: ೧೨ನೇ ಶತಮಾನ
ಶೈಲಿ	: ಕಲ್ಯಾಣ ಚಾಲುಕ್ಯ	**ವಸ್ತು**	: ಕಪ್ಪುಶಿಲೆ

ಕಲಘಟಗಿಯಿಂದ ವಾಯುವ್ಯಕ್ಕೆ ೧೫ ಕಿ.ಮೀ. ದೂರದಲ್ಲಿ ಸೋಮಲಿಂಗೇಶ್ವರ ದೇವಾಲಯವಿದೆ. ಪ್ರಸ್ತುತ ಈ ದೇವಾಲಯ ಸಂಪೂರ್ಣ ಶಿಥಿಲಾವಸ್ಥೆಯಲ್ಲಿದೆ. ಪೂರ್ವಾಭಿಮುಖವಾಗಿರುವ ಈ ದೇವಾಲಯವು ಗರ್ಭಗೃಹ, ಅಂತರಾಳ ಮತ್ತು ನವರಂಗವನ್ನು ಹೊಂದಿದೆ. ಗರ್ಭಗೃಹ ಚೌಕಾಕಾರವಾಗಿದ್ದು, ಮಧ್ಯದಲ್ಲಿ ಶಿವಲಿಂಗವಿದೆ. ಪ್ರವೇಶ ದ್ವಾರವು ಸರಳವಾಗಿದೆ. ಗರ್ಭಗೃಹಕ್ಕೆ

ಹೊಂದಿಕೊಂಡಂತೆ ಅಂತರಾಳವಿದೆ. ಅಂತರಾಳದ ಪ್ರವೇಶದಲ್ಲಿ ಒಂದು ಪಟ್ಟಿಯ ಜಾಲಾಂಧ್ರವಿದೆ. ಇನ್ನು ಅಂತರಾಳಕ್ಕೆ ಹೊಂದಿಕೊಂಡಂತೆ ನವರಂಗವಿದ್ದು, ಭಿತ್ತಿಯಲ್ಲಿ ೧೨ ಅರೆಗಂಬಗಳು ಮತ್ತು ಮಧ್ಯದಲ್ಲಿ ನಾಲ್ಕು ಗಂಬಗಳು ಇವೆ. ಈ ಮಧ್ಯದ ಕಂಬಗಳು ಪೀಠ, ಪಾದ, ಅಷ್ಟಮುಖ ದಿಂಡು, ಚೌಕ, ಕಲಶ, ಫಲಕ ಮತ್ತು ಸರಳ ಬೋಧಿಗೆಯಿಂದ ಕೂಡಿದವುಗಳಾಗಿವೆ. ನವರಂಗದ ಭಿತ್ತಿಯಲ್ಲಿ ಅಂತರಾಳದ ದ್ವಾರಬಂಧದ ಬದಿಗಳಲ್ಲಿ ಎರಡು ದೇವಕೋಷ್ಠಗಳಿದ್ದು, ಕ್ರಮವಾಗಿ ವಿಷ್ಣು ಮತ್ತು ಮಹಿಷಮರ್ದಿನಿಯ ಶಿಲ್ಪಗಳು ಇವೆ. ದೇವಾಲಯದ ಮುಖ್ಯ ಪ್ರವೇಶದ್ವಾರ ಸರಳವಾಗಿದ್ದು, ಇದರ ಬಾಹ್ಯಭಾಗ ನಂತರದ ಕಾಲಘಟ್ಟಗಳಲ್ಲಿ ಜೀರ್ಣೋದ್ಧಾರಗೊಂಡಿರುವುದನ್ನು ಕಾಣುತ್ತೇವೆ.[೩೮]

೨೦. ರಾಮಲಿಂಗೇಶ್ವರ ದೇವಾಲಯ

ಗ್ರಾಮ	: ಮಿಶ್ರಿಕೋಟೆ	**ಸ್ಥಳ**	: ಗ್ರಾಮದ ಹೊರಗೆ
ತಾಲೂಕು	: ಕಲಘಟಗಿ	**ಕಾಲ**	: ೧೨ನೇ ಶತಮಾನ
ಶೈಲಿ	: ಕಲ್ಯಾಣ ಚಾಲುಕ್ಯ	**ವಸ್ತು**	: ಕಪ್ಪುಶಿಲೆ

ಕಲಘಟಗಿಯಿಂದ ನೈರುತ್ಯಕ್ಕೆ ಸುಮಾರು ೧೧ ಕಿ.ಮೀ. ದೂರದಲ್ಲಿ ರಾಮಲಿಂಗೇಶ್ವರ ದೇವಾಲಯವಿದೆ. ಪೂರ್ವಾಭಿಮುಖವಾಗಿರುವ ಈ ದೇವಾಲಯ ಗರ್ಭಗೃಹ, ಅಂತರಾಳ ಮತ್ತು ನವರಂಗವನ್ನು ಹೊಂದಿದೆ. ಗರ್ಭಗೃಹವು ಚೌಕಾಕಾರವಾಗಿದ್ದು, ಮಧ್ಯದಲ್ಲಿ ಶಿವಲಿಂಗವನ್ನು ಕಾಣುತ್ತೇವೆ. ಇದರ ಪ್ರವೇಶದ್ವಾರವು ತ್ರಿಶಾಖಾಲಂಕಾರದಿಂದ ಕೂಡಿದ್ದು, ಅವು ಸರಳವಾಗಿವೆ. ಇದಕ್ಕೆ ಹೊಂದಿಕೊಂಡಂತೆ ತೆರೆದ ಅಂತರಾಳವಿದ್ದು, ನಾಲ್ಕು ಚೌಕ ಮೂಲೆಗಂಬಗಳಿವೆ. ಇದಕ್ಕೆ ಹೊಂದಿಕೊಂಡಂತೆ ನವರಂಗವಿದ್ದು, ಭಿತ್ತಿಯಲ್ಲಿ ೧೨ ಅರ್ಧಗಂಭಗಳಿವೆ. ಹಾಗೆಯೇ ಮಧ್ಯದಲ್ಲಿ ನಾಲ್ಕು ಸ್ತಂಭಗಳಿದ್ದು, ಅವುಗಳು ಪೀಠ, ಕಾಂಡದಲ್ಲಿ ಚೌಕ, ವೃತ್ತಾಕಾರದ ದಿಂಡುಗಳು, ಘಂಟಾಕೃತಿಯ ಕಲಶ, ಫಲಕ ಮತ್ತು ಸರಳ ಬೋಧಿಗೆಯನ್ನು ಕಾಣುತ್ತೇವೆ. ಹಾಗೆಯೇ ಸ್ತಂಭದ ಕೆಳಗೆ ಚೌಕ ಭಾಗದಲ್ಲಿ ನಾಲ್ಕು ಕಡೆ ಉಬ್ಬು ಚಿತ್ರಗಳನ್ನು ಕಾಣುತ್ತೇವೆ. ನವರಂಗದಲ್ಲಿ ಒಂಬತ್ತು ದೇವಕೋಷ್ಟಗಳಿದ್ದು, ಅದರಲ್ಲಿ ಆರು ದೇವಕೋಷ್ಠಗಳಲ್ಲಿ ಕ್ರಮವಾಗಿ ಮಹಿಷಮರ್ಧಿನಿ, ಸಪ್ತಮಾತೃಕೆಯರು, ಸೂರ್ಯ, ಸರಸ್ವತಿ, ವರಾಹ, ಕಾರ್ತಿಕೇಯ ಶಿಲ್ಪಗಳಿವೆ. ನವರಂಗದ ಮಧ್ಯ ನಂದಿಯ ಶಿಲ್ಪವಿದೆ. ಪೂರ್ವ ಮತ್ತು ದಕ್ಷಿಣ ದಿಕ್ಕುಗಳಿಗೆ ಪ್ರವೇಶದ್ವಾರಗಳಿದ್ದು, ನಂತರ ಪೂರ್ವದಿಕ್ಕಿನ ಪ್ರವೇಶದ್ವಾರವನ್ನು ಮುಚ್ಚಲಾಗಿದೆ. ಜೊತೆಗೆ ದಕ್ಷಿಣ ದಿಕ್ಕಿನ ಪ್ರವೇಶದ್ವಾರವು ಪಂಚಶಾಖಾಲಂಕಾರದಿಂದ ಒಳಗೊಂಡಿದೆ. ದ್ವಾರಬಂಧದ ಮೇಲ್ಭಾಗದಲ್ಲಿ ಕಮಾನಿನಾಕಾರದ ಗೂಡು ಇದೆ.

ದೇವಾಲಯದ ಹೊರಭಾಗದಲ್ಲಿ ಅಧಿಷ್ಠಾನವು ಮೂಲ ರೂಪದಲ್ಲಿರುವುದನ್ನು ಕಾಣುತ್ತೇವೆ. ಅಧಿಷ್ಠಾನದಲ್ಲಿ ಉಪಾನ, ಜಗತಿ, ಪದ್ಮ, ತ್ರಿಪಟ್ಟ ಕುಮುದ, ಕಪೋತ ಭಾಗಗಳಿದ್ದು, ಭಿತ್ತಿ ಭಾಗವು ಸಂಪೂರ್ಣವಾಗಿ ಜೀರ್ಣೋದ್ಧಾರಗೊಂಡಿದೆ.[೩೯]

೨೧. ಶಂಭುಲಿಂಗೇಶ್ವರ ದೇವಾಲಯ

ಗ್ರಾಮ : ಹೆಬ್ಬಳ್ಳಿ **ಸ್ಥಳ** : ಗ್ರಾಮದ ಮಧ್ಯದಲ್ಲಿ

ತಾಲೂಕು : ಕಲಘಟಗಿ **ಕಾಲ** : ೧೨ನೇ ಶತಮಾನ

ಶೈಲಿ : ಕಲ್ಯಾಣ ಚಾಲುಕ್ಯ **ವಸ್ತು** : ಕಪ್ಪುಶಿಲೆ

ಧಾರವಾಡದಿಂದ ಪೂರ್ವಕ್ಕೆ ೧೨ ಕಿ.ಮೀ. ದೂರದಲ್ಲಿ ಶಂಭುಲಿಂಗ ದೇವಾಲಯವಿದೆ. ಪೂರ್ವಾಭಿಮುಖವಾಗಿರುವ ಈ ದೇವಾಲಯದ ತಳವಿನ್ಯಾಸ ಗರ್ಭಗೃಹ, ಅಂತರಾಳ, ನವರಂಗವನ್ನು ಹೊಂದಿದೆ. ಗರ್ಭಗೃಹವು ಚೌಕಾಕಾರದಿಂದ ಕೂಡಿದ್ದು, ಮಧ್ಯದಲ್ಲಿ ಶಿವಲಿಂಗವಿದೆ. ಪ್ರವೇಶದ್ವಾರವು ತ್ರಿಶಾಖಾಲಂಕಾರದಿಂದ ಕೂಡಿದ್ದು, ಶಾಖೆಗಳು ಸರಳವಾಗಿವೆ. ಲಲಾಟದಲ್ಲಿ ಗಣೇಶನಮೂರ್ತಿ ಇದೆ. ಜೊತೆಗೆ ಉತ್ತರಾಂಗದಲ್ಲಿ ವ್ಯಾಳಿಗಳಿವೆ. ಇದಕ್ಕೆ ಹೊಂದಿಕೊಂಡಂತೆ ಅಂತರಾಳವಿದ್ದು, ಪ್ರವೇಶದ್ವಾರದಲ್ಲಿ ಸ್ತಂಭ ಪಟ್ಟಿಕೆ ಇದೆ. ಹಾಗೆಯೇ ಇದರ ಬದಿಯಲ್ಲಿ ಒಂದೇ ಸಾಲಿನ ಜಾಲಾಂಧ್ರವಿದ್ದು, ಅಂತರಾಳವು ಜೀರ್ಣೋದ್ಧಾರವಾಗಿರುವುದನ್ನು ಗುರುತಿಸಬಹುದು. ಇದಕ್ಕೆ ಹೊಂದಿಕೊಂಡಂತೆ ನವರಂಗವಿದ್ದು, ಮಧ್ಯದಲ್ಲಿ ನಾಲ್ಕು ಸ್ತಂಭಗಳಿವೆ. ಈ ಸ್ತಂಭಗಳು ಪೀಠ, ಚೌಕ, ಬಹುಮುಖ ಪಟ್ಟಿಕೆಗಳು, ಚೌಕ, ಕಲಶ, ಫಲಕ ಮತ್ತು ಸರಳಬೋಧಿಗೆಯಿಂದ ಕೂಡಿವೆ. ನವರಂಗದಲ್ಲಿ ನಾಲ್ಕು ದೇವಕೋಷ್ಟಗಳಿದ್ದು ಕ್ರಮವಾಗಿ ಸತಿ-ಪತಿ, ಮಹಿಷಮರ್ಧಿನಿ, ಕಾಳಿ ಶಿಲ್ಪಗಳಿವೆ. ಈ ದೇವಕೋಷ್ಠಕಗಳ ಅಧಿಷ್ಠಾನ ಮತ್ತು ದ್ರಾವಿಡ ವಿಮಾನಗಳನ್ನು ಹೊಂದಿವೆ. ದೇವಾಲಯದ ಪ್ರವೇಶದ್ವಾರವು ಸರಳವಾಗಿದ್ದು, ಪೇದ್ಯ ಭಾಗದಲ್ಲಿ ಶೈವದ್ವಾರಪಾಲಕರನ್ನು ಕಾಣುತ್ತೇವೆ. ಜೊತೆಗೆ ಲಲಾಟಬಿಂಬದಲ್ಲಿ ಗಜಲಕ್ಷ್ಮಿಯ ಚಿತ್ರವಿದೆ.[೪೦]

೨೨. ಸೋಮೇಶ್ವರ ದೇವಾಲಯ

ಗ್ರಾಮ : ಧಾರವಾಡ **ತಾಲೂಕು** : ಧಾರವಾಡ

ಸ್ಥಳ : ಶ್ರೀ ಧರ್ಮಸ್ಥಳ ಇಂಜನಿಯರಿಂಗ್ ಮುಂಭಾಗ ಕಾಲೇಜು, **ಕಾಲ** : ೧೨ನೇ ಶತಮಾನ

ಶೈಲಿ : ಕಲ್ಯಾಣ ಚಾಲುಕ್ಯ **ವಸ್ತು** : ಕಪ್ಪುಶಿಲೆ

ಪೂರ್ವಾಭಿಮುಖವಾಗಿರುವ ಈ ದೇವಾಲಯವು ಗರ್ಭಗೃಹ, ಪ್ರವೇಶದ್ವಾರ ಮತ್ತು ನವರಂಗವನ್ನು ಹೊಂದಿವೆ. ಗರ್ಭಗೃಹವು ಚೌಕಾಕಾರದಿಂದ ಕೂಡಿದ್ದು, ಮಧ್ಯದಲ್ಲಿ ಶಿವಲಿಂಗವಿದೆ. ಇದರ ಪ್ರವೇಶದ್ವಾರ ಪಂಚಶಾಖೆಗಳಿಂದ ಕೂಡಿದ್ದು, ಸ್ತಂಭ ಶಾಖೆಗಳನ್ನು ಬಿಟ್ಟರೆ ಉಳಿದವು ಸರಳವಾಗಿವೆ. ಆದರೆ ಎರಡು ಶಾಖೆಗಳು ಲಲಾಟಪಟ್ಟಿಕೆಯಲ್ಲಿ ಹರಡಿದ್ದು, ಲಲಾಟಬಿಂಬದಲ್ಲಿ ಕೇವಲ ಲಕ್ಷ್ಮಿಯನ್ನು ತೋರಿಸಿರುವುದು ವಿಶೇಷ. ಹಾಗೆಯೇ ಇದರ ದ್ವಾರದ ಮೇಲ್ಭಾಗದಲ್ಲಿ ಕಪೋತವನ್ನು ಕಾಣುತ್ತೇವೆ. ಗರ್ಭಗೃಹ ಪ್ರವೇಶದ್ವಾರದ ಬಲಮೂಲೆಯಲ್ಲಿ ಮತ್ತು ಕಲ್ಯಾಣ ಚಾಲುಕ್ಯರ ಕಾಲದ, ಬ್ರಹ್ಮಸೂತ್ರವಿರುವ ಶಿವಲಿಂಗವು ಇದೆ. ಇದಕ್ಕೆ ಹೊಂದಿಕೊಂಡಂತೆ

ಅಂತರಾಳವಿದ್ದು, ಮಧ್ಯದಲ್ಲಿ ಕುಳಿತ ನಂದಿ ಇದೆ. ಆದರೆ ಈಗ ಉತ್ತರ ಮತ್ತು ದಕ್ಷಿಣ ದಿಕ್ಕುಗಳಿಗೆ ಎರಡು ದ್ವಾರಗಳನ್ನು ಅಳವಡಿಸಲಾಗಿದ್ದು, ಇದರ ಮೇಲ್ಭಾವಣಿ ಕಮಾನಿನಾಕಾರವಾಗಿದೆ. ಅಂತರಾಳಕ್ಕೆ ಹೊಂದಿಕೊಂಡಂತೆ ನವರಂಗವಿದ್ದು, ಮಧ್ಯದಲ್ಲಿ ನಾಲ್ಕು ಸ್ತಂಭಗಳನ್ನು ಮತ್ತು ಭಿತ್ತಿಯಲ್ಲಿ ೧೨ ಅರೆಗಂಬಗಳನ್ನು ಕಾಣುತ್ತೇವೆ. ಮಧ್ಯದ ನಾಲ್ಕು ಸ್ತಂಭಗಳು ಪೀಠ, ಕಾಂಡದಲ್ಲಿ ಚೌಕ, ಬಹುಮುಖ, ಅಷ್ಟಮುಖ ಪಟ್ಟಿಕೆಗಳು, ಚೌಕ, ಕಲಶ, ಫಲಕ ಮತ್ತು ಬೋಧಿಗೆಯನ್ನು ಹೊಂದಿವೆ. ವಿತಾನದಲ್ಲಿ ಅರಳಿದ ಪದ್ಮದ ಅಲಂಕರಣೆ ಇದೆ. ಇನ್ನು ದೇವಾಲಯದ ಪ್ರವೇಶದ್ವಾರವು ಸರಳವಾಗಿದ್ದು, ದೇವಾಲಯದ ಮುಂದೆ ಆಧುನಿಕವಾಗಿ ನಿರ್ಮಿಸಿದ ಅರ್ಧಮಂಟಪವಿದೆ. ಈ ದೇವಾಲಯದ ಬಾಹ್ಯಭಿತ್ತಿಯು ಜೀರ್ಣೋದ್ಧಾರವಾಗಿದೆ.[೯೧]

೨೩. ಬಸವಣ್ಣ ದೇವಾಲಯ

ಗ್ರಾಮ	: ದೇವನೂರು	**ಸ್ಥಳ**	: ಗ್ರಾಮದ ಹೊರಗೆ
ತಾಲೂಕು	: ಕುಂದಗೋಳ	**ಕಾಲ**	: ೧೨ನೇ ಶತಮಾನ
ಶೈಲಿ	: ಕಲ್ಯಾಣ ಚಾಲುಕ್ಯ	**ವಸ್ತು**	: ಕಪ್ಪುಶಿಲೆ

ಪೂರ್ವಾಭಿಮುಖವಾಗಿರುವ ದೇವಾಲಯವು ಗರ್ಭಗೃಹ ಮತ್ತು ಅಂತರಾಳವನ್ನು ಹೊಂದಿದೆ. ಗರ್ಭಗೃಹವು ಚೌಕಾಕಾರವಾಗಿದ್ದು, ಮಧ್ಯದಲ್ಲಿ ಶಿವಲಿಂಗವಿದೆ. ಇದರ ದ್ವಾರಬಂಧ ತ್ರಿಶಾಖೆಗಳಿಂದ ಕೂಡಿದ್ದು, ಅವು ಸರಳವಾಗಿವೆ. ಲಲಾಟಪಟ್ಟಿಕೆಯಲ್ಲಿ ಲಕ್ಷ್ಮಿಯ ಚಿತ್ರವಿದೆ. ಲಲಾಟಬಿಂಬದ ಬದಿಗಳಲ್ಲಿ ಬಾಳೆದಿಂಡಿನ ಅಲಂಕರಣವಿದ್ದು, ಇದರ ಮೇಲೆ ಕಪೋತವಿದೆ. ಉತ್ತರಾಂಗದಲ್ಲಿ ಪಂಚಶಿಖರಗಳನ್ನು ತೋರಿಸಲಾಗಿದೆ. ಇಲ್ಲಿ ಮೂರು ಶಿಖರಗಳು ಉಲ್ಲೇಖಿತವಾಗಿದ್ದು, ಅವುಗಳು ರೇಖಾನಾಗರ ಶೈಲಿಗಳಿಂದ ಕೂಡಿವೆ.

ಗರ್ಭಗೃಹಕ್ಕೆ ಹೊಂದಿಕೊಂಡಂತೆ ನವರಂಗವಿದ್ದು, ಪ್ರವೇಶದ್ವಾರವು ತ್ರಿಶಾಖೆಗಳಿಂದ ಕೂಡಿದೆ. ಈ ಶಾಖೆಗಳು ಸರಳವಾಗಿದ್ದು, ಲಲಾಟಪಟ್ಟಿಕೆ ಸರಳವಾಗಿರುವುದನ್ನು ಕಾಣುತ್ತೇವೆ. ಉತ್ತರಾಂಗದಲ್ಲಿ ನಾಲ್ಕು ರತ್ನಪಟ್ಟಿಕೆಗಳಿದ್ದು, ತೋರಣದ ಅಲಂಕರಣೆಯನ್ನು ಬಿಡಿಸಲಾಗಿದೆ. ದ್ವಾರಬಂಧದ ಇಕ್ಕೆಲಗಳಲ್ಲಿ ಚೌಕಾಕಾರದ ಗೂಡುಗಳಿದ್ದು, ಇವು ಎರಡು ಸಾಲಿನ ಜಾಲಾಂಧ್ರಗಳಿಂದ ಕೂಡಿದೆ. ಜಾಲಾಂಧ್ರಗಳ ಇಕ್ಕೆಲಗಳಲ್ಲಿ ನೀಳ ಅರೆಗಂಬಗಳನ್ನು ಕಾಣುತ್ತೇವೆ. ಇದಕ್ಕೆ ಹೊಂದಿಕೊಂಡಂತೆ ಬಲಗಡೆಗೆ ದೇವಕೋಷ್ಠಕವಿದ್ದು, ಅದರಲ್ಲಿ ನಂದಿಯ ವಿಗ್ರಹವಿದೆ. ದೇವಕೋಷ್ಟಕಕ್ಕೆ ದ್ರಾವಿಡ ಮಾದರಿಯ ವಿಮಾನವಿದೆ. ಈ ದೇವಾಲಯದ ಬಾಹ್ಯಭಿತ್ತಿಯು ಹಾಳಾಗಿವೆ.[೯೨]

೨೪. ಪುರದ ವೀರಭದ್ರೇಶ್ವರ ದೇವಾಲಯ

ಗ್ರಾಮ	: ಅಣ್ಣಿಗೇರಿ	**ಸ್ಥಳ**	: ಪುರಸಭೆ ಹಿಂಭಾಗ
ತಾಲೂಕು	: ನವಲಗುಂದ	**ಕಾಲ**	: ೧೨ನೇ ಶತಮಾನ
ಶೈಲಿ	: ಕದಂಬನಾಗರ	**ವಸ್ತು**	: ಕಪ್ಪುಶಿಲೆ

ನವಲಗುಂದದಿಂದ ಆಗ್ನೇಯಕ್ಕೆ ೨೫ ಕಿ.ಮೀ. ದೂರದಲ್ಲಿ ಈ ದೇವಾಲಯವಿದೆ. ಪೂರ್ವಾಭಿಮುಖವಾಗಿರುವ ಈ ದೇವಾಲಯ ಗರ್ಭಗೃಹ, ಅಂತರಾಳ, ನವರಂಗವನ್ನು ಹೊಂದಿದೆ. ಗರ್ಭಗೃಹವು ಚೌಕಾಕಾರವಾಗಿದ್ದು, ಶಿವಲಿಂಗದ ಪೀಠದ ಮೇಲೆ ವೀರಭದ್ರನ ಶಿಲ್ಪವನ್ನು ಪ್ರತಿಷ್ಠಾಪಿಸಲಾಗಿದೆ. ಇದಕ್ಕೆ ಹೊಂದಿಕೊಂಡಂತೆ ನಾಲ್ಕು ಚೌಕಾಕಾರದ ಮೂಲೆಗಂಬಗಳನ್ನು ಕಾಣುತ್ತೇವೆ. ಪ್ರವೇಶದ್ವಾರವು ಚತುರ್‌ಶಾಖೆಗಳಿಂದ ಕೂಡಿದೆ. ಈ ಶಾಖೆಯಲ್ಲಿ ಕೆಳಗಿನಿಂದ ಮೇಲಕ್ಕೆ ಮುಂಚಾಚಿದ ಪಟ್ಟಿಕೆಯ ಮೇಲೆ ಒಂದರ ಮೇಲೆ ಒಂದರಂತೆ ವಿವಿಧ ರೀತಿಯಲ್ಲಿ ಆರು ವ್ಯಕ್ತಿಗಳು ನಿಂತಿರುವ ಶಾಖೆಗಳಿರುವುದು ವಿಶೇಷವಾಗಿದೆ. ಸ್ತಂಭ ಶಾಖೆಯು ಪೂರ್ವಕಲಶಗಳ ಅಲಂಕರಣೆಯನ್ನು ಹೊಂದಿದ್ದು, ಲಲಾಟಪಟ್ಟಿಕೆಯಲ್ಲಿ ಜಗಲಕ್ಷ್ಮಿಯ ಚಿತ್ರಣವನ್ನು ಹೊಂದಿದೆ. ಉತ್ತರಾಂಗದಲ್ಲಿ ಪಂಚಶಿಖರಗಳಿದ್ದು, ಪೇದ್ಯಭಾಗದಲ್ಲಿ ದ್ವಾರಪಾಲಕ ಸ್ತ್ರೀಯರ ಚಿತ್ರವಿದೆ. ಅಂತರಾಳಕ್ಕೆ ಹೊಂದಿಕೊಂಡಂತೆ ನವರಂಗವಿದ್ದು, ಇಲ್ಲಿ ನಾಲ್ಕು ಸ್ತಂಭಗಳಿವೆ. ಇವು ಪೀಠ, ಪಾದ, ಉಂಗುರಾಕಾರದ ಎರಡು ಅಷ್ಟಪಟ್ಟಿಕೆಗಳು, ಚೌಕ, ಕಲಶ, ಫಲಕ ಮತ್ತು ಸರಳಬೋಧಿಗೆಯಿಂದ ಕೂಡಿವೆ. ಜೊತೆಗೆ ಕೆಳಗಿನ ಅಷ್ಟಪಟ್ಟಿಕೆಯಲ್ಲಿ ಪದ್ಮದಳಗಳಿದ್ದರೆ, ಮೇಲಿನ ಅಷ್ಟಪಟ್ಟಿಕೆಯಲ್ಲಿ ಬಳ್ಳಿಗಳ ಅಲಂಕರಣವಿದೆ. ಚೌಕಭಾಗದ ನಾಲ್ಕು ಮುಖಗಳಲ್ಲಿ ಪೂರ್ಣ ಕಲಶಗಳ ಚಿತ್ರಣವಿರುವುದು ಅಪರೂಪವಾಗಿದ್ದು, ಈ ಸ್ತಂಭಗಳ ಕೆಳಗಿನ ಪಾದಪಟ್ಟಿಕೆಯಲ್ಲಿ ನಾಲ್ಕು ಮುಖಗಳಿವೆ. ಈ ರೀತಿಯ ಸ್ತಂಭಗಳ ತಲಾ ಒಂದು ನಾಲ್ಕು ಮುಖಗಳ ಮೇಲೆ ಚಿತ್ರಿಸಿರುವುದು ಬಹಳ ಅಪರೂಪವಾದುದಾಗಿದೆ. ನವರಂಗದ ಮಧ್ಯದಲ್ಲಿ ಕುಳಿತ ನಂದಿಯ ಶಿಲ್ಪವಿದ್ದು, ವಿತಾನದಲ್ಲಿ ಅರಳಿದ ಪದ್ಮವಿದೆ.

ನವರಂಗಕ್ಕೆ ಪೂರ್ವ ಮತ್ತು ಉತ್ತರ ದಿಕ್ಕುಗಳಿಗೆ ಎರಡು ಪ್ರವೇಶದ್ವಾರಗಳಿದ್ದು, ಇವುಗಳಲ್ಲಿ ಪೂರ್ವದಿಕ್ಕಿನ ಪ್ರವೇಶದ್ವಾರ ಪಂಚಶಾಖೆಗಳಿಂದ ಕೂಡಿದ್ದು, ಉತ್ತರದಿಕ್ಕಿನ ಪ್ರವೇಶದ್ವಾರ ಸರಳವಾಗಿದೆ. ಹಾಗೆಯೇ ಇದರ ದ್ವಾರಬಂಧದ ಒಳಭಾಗದ ವಿತಾನದಲ್ಲಿ ನಾಗಮಂಡಲದ ಅಲಂಕರಣೆ ಇದೆ. ಇನ್ನು ದೇವಾಲಯದ ಊರ್ಧ್ವ ಭಾಗದಲ್ಲಿ ಅಧಿಷ್ಠಾನ, ಇದರಲ್ಲಿ ಉಪಾನ, ಜಗತಿ, ತ್ರಿಪಟ್ಟ ಕುಮುದ, ಕಪೋತ ಭಾಗಗಳಿವೆ. ಭಿತ್ತಿಯು ಸರಳವಾಗಿದ್ದು, ಗರ್ಭಗೃಹದ ಹಿಂಬದಿಯ ಭಿತ್ತಿ ಮತ್ತು ದಕ್ಷಿಣದ ಭಿತ್ತಿಯಲ್ಲಿ ಎರಡು ಚಿಕ್ಕ ದೇವಕೋಷ್ಠಗಳು ಕಂಡುಬರುತ್ತವೆ. ದಕ್ಷಿಣದಿಕ್ಕಿನ ದೇವಕೋಷ್ಠದಲ್ಲಿ ಭೈರವನ ವಿಗ್ರಹ ಮತ್ತು ಪಶ್ಚಿಮ ದಿಕ್ಕಿನ ದೇವಕೋಷ್ಠಕದಲ್ಲಿ ಕುಳಿತ ನಂದಿಯ ಶಿಲ್ಪಗಳಿವೆ. ಹಾಗೆಯೇ ಭಿತ್ತಿಯ ಮೇಲೆ ಹಾರವಿದ್ದು, ಹಾರಭಾಗದಲ್ಲಿ ಶಿವನ ಲೀಲಾಮೂರ್ತಿಗಳು ಇವೆ. ದಕ್ಷಿಣ ಭಾಗದಲ್ಲಿ ಹಂಸ, ಪುಷ್ಪ, ಗಜ, ಸಪ್ತಮಾತೃಕೆ, ನಂದೀಶ, ವೀರಭದ್ರ, ವರುಣ, ಶಿವ, ಕಾರ್ತಿಕೇಯ ಇನ್ನೂ ಮುಂತಾದ ಚಿತ್ರಗಳಿವೆ. ಹಾಗೆಯೇ ದಕ್ಷಿಣ ದಿಕ್ಕಿನ ಭಿತ್ತಿಯಲ್ಲಿ ೧೫-೨೦ ಮಿಥುನ ಶಿಲ್ಪಗಳು ಕಂಡು ಬರುತ್ತವೆ. ಇವುಗಳು ವಿಜಯನಗರ ಕಾಲಘಟ್ಟಕ್ಕೆ ಸೇರಿದ ಶಿಲ್ಪಗಳಾಗಿವೆ. ದೇವಾಲಯದ ಶಿಖರವು ಕದಂಬ ನಾಗರಶೈಲಿಯದ್ದಾಗಿದೆ.[೪೩]

೨೫. ಕಲ್ಲೇಶ್ವರ ದೇವಾಲಯ

ಗ್ರಾಮ : ಕಟ್ನೂರು
ಸ್ಥಳ : ಗ್ರಾಮದ ಹೊರಭಾಗದಲ್ಲಿ
ತಾಲೂಕು : ಹುಬ್ಬಳ್ಳಿ
ಕಾಲ : ೧೨ನೇ ಶತಮಾನ
ಶೈಲಿ : ಕದಂಬನಾಗರ
ವಸ್ತು : ಕಪ್ಪುಶಿಲೆ

ಹುಬ್ಬಳ್ಳಿಯಿಂದ ದಕ್ಷಿಣಕ್ಕೆ ೧೦ ಕಿ.ಮೀ. ದೂರದಲ್ಲಿ ಕಲ್ಮೇಶ್ವರ ದೇವಾಲಯವಿದೆ. ಪೂರ್ವಾಭಿಮುಖವಾಗಿರುವ ಈ ದೇವಾಲಯ ಗರ್ಭಗೃಹ, ಅಂತರಾಳ ಮತ್ತು ತೆರೆದ ನವರಂಗವನ್ನು ಕಾಣುತ್ತೇವೆ. ಗರ್ಭಗೃಹವು ಚೌಕಾಕಾರವಾಗಿದ್ದು, ಮಧ್ಯದಲ್ಲಿ ಶಿವಲಿಂಗವಿದೆ. ಗರ್ಭಗೃಹಕ್ಕೆ ಹೊಂದಿಕೊಂಡಂತೆ ಅಂತರಾಳವಿದ್ದು, ಇದರ ಪ್ರವೇಶದ್ವಾರ ತ್ರಿಶಾಖೆಗಳಿಂದ ಕೂಡಿದೆ. ಈ ಶಾಖೆಗಳಲ್ಲಿ ಸ್ತಂಭಗಳು ಸರಳವಾಗಿದ್ದು, ಲಲಾಟದಲ್ಲಿ ಗಣೇಶ ಶಿಲ್ಪ ಕಂಡುಬರುತ್ತದೆ. ಹಾಗೆಯೇ ಉತ್ತರಾಂಗದಲ್ಲಿ ದ್ರಾವಿಡ ಶೈಲಿಯ ಪಂಚ ಕಿರುಶಿಖರಗಳು ಇವೆ. ದ್ವಾರಬಂಧದ ಇಕ್ಕೆಲಗಳಲ್ಲಿ ಜಾಲಾಂಧ್ರಗಳಿದ್ದು, ಬಲಬದಿಯ ಜಾಲಾಂಧ್ರ ಪೂರ್ತಿ ಹಾಳಾಗಿದೆ. ಆದರೆ ಎಡಬದಿಯ ಜಾಲಾಂಧ್ರ ಎರಡು ಸಾಲುಗಳಿಂದ ಕೂಡಿದೆ. ಈ ಜಾಲಾಂಧ್ರದ ಗೂಡಿನಲ್ಲಿ ಪದ್ಮದ ಅಲಂಕರಣೆ ಇದ್ದು, ಬದಿಗಳಲ್ಲಿ ಅರೆಗಂಬಗಳು ಕಂಡುಬರುತ್ತವೆ. ಅಂತರಾಳಕ್ಕೆ ಹೊಂದಿಕೊಂಡಂತೆ ನವರಂಗವಿದ್ದು, ಇಲ್ಲಿ ನಾಲ್ಕು ಕಂಬಗಳಿವೆ. ಈ ಕಂಬಗಳು, ಪೀಠ, ಚೌಕ ಬಹುಮುಖಪಟ್ಟಿಕೆ, ಆಯತಾಕಾರ, ಕಲಶ, ಫಲಕ ಮತ್ತು ಸರಳ ಬೋಧಿಗೆಯಿಂದ ಕೂಡಿವೆ. ಈ ನವರಂಗದಲ್ಲಿ ನಾಲ್ಕು ದೇವಕೋಷ್ಠಗಳಿದ್ದು, ಇವುಗಳು ಅಧಿಷ್ಠಾನ, ದ್ವಾರಬಂಧ ಮತ್ತು ಶಿಖರಗಳಿಂದ ಕೂಡಿದೆ. ನವರಂಗಕ್ಕೆ ಪೂರ್ವ, ಉತ್ತರ, ದಕ್ಷಿಣ ದಿಕ್ಕುಗಳಿಂದ ಪ್ರವೇಶ ದ್ವಾರಗಳಿದ್ದು, ಇದರ ಸುತ್ತಲೂ ಕಕ್ಷಾಸನವಿದೆ. ಈ ದೇವಾಲಯದ ಹೊರಭಾಗದಲ್ಲಿ ಅಧಿಷ್ಠಾನ, ಉಪಾನ, ಜಗತಿ, ತ್ರಿಪಟ್ಟಕುಮುದ, ಕಪೋತ ಭಾಗಗಳನ್ನು ಒಳಗೊಂಡಿದೆ. ಭಿತ್ತಿ ಮತ್ತು ಶಿಖರಗಳು ಜೀರ್ಣೋದ್ಧಾರಗೊಂಡಿದೆ.[೪೪]

೨೬. ಶಂಭುಲಿಂಗೇಶ್ವರ ದೇವಾಲಯ

ಗ್ರಾಮ : ತುಪ್ಪದಕುರಹಟ್ಟಿ
ಸ್ಥಳ : ಗ್ರಾಮದ ಮಧ್ಯಭಾಗದಲ್ಲಿ
ತಾಲೂಕು : ನವಲಗುಂದ
ಕಾಲ : ೧೨ನೇ ಶತಮಾನ
ಶೈಲಿ : ಕಲ್ಯಾಣ ಚಾಲುಕ್ಯ
ವಸ್ತು : ಕಪ್ಪುಶಿಲೆ

ನವಲಗುಂದದಿಂದ ಈಶಾನ್ಯಕ್ಕೆ ೧೫ ಕಿ.ಮೀ. ದೂರದಲ್ಲಿ ಈ ದೇವಾಲಯ ಇದೆ. ಪೂರ್ವಾಭಿಮುಖವಾಗಿರುವ ದೇವಾಲಯ, ಗರ್ಭಗೃಹ, ಅಂತರಾಳ, ನವರಂಗವನ್ನು ಹೊಂದಿದೆ. ಗರ್ಭಗೃಹವು ಚೌಕಾಕಾರವಾಗಿದ್ದು, ಮಧ್ಯದಲ್ಲಿ ಬ್ರಹ್ಮಸೂತ್ರವುಳ್ಳ ಶಿವಲಿಂಗವಿದೆ. ಗರ್ಭಗೃಹದ ಪ್ರವೇಶದ್ವಾರ ತ್ರಿಶಾಖೆಗಳಿಂದ ಕೂಡಿದ್ದು, ಸರಳವಾಗಿದೆ. ಹಾಗೆಯೇ ಲಲಾಟಪಟ್ಟಿಕೆಯಲ್ಲಿ ಗಜಲಕ್ಷ್ಮಿಯ ಚಿತ್ರವಿದ್ದು, ಬದಿಗಳಲ್ಲಿ ಇಳಿಬಿದ್ದ ಬಾಳೆದಿಂಡಿನ ಅಲಂಕರಣೆಯನ್ನು ಕಾಣುತ್ತೇವೆ. ಇದಕ್ಕೆ ಹೊಂದಿಕೊಂಡಂತೆ ಅಂತರಾಳವಿದ್ದು, ಇದರ ಮಧ್ಯದಲ್ಲಿ ಕುಳಿತ ನಂದಿಯ ಶಿಲ್ಪವಿದೆ. ಅಂತರಾಳದ

ಪ್ರವೇಶದ್ವಾರವು ಸರಳತೆಯಿಂದ ಕೂಡಿದ್ದು, ದ್ವಾರಬಂಧದ ಇಕ್ಕೆಲಗಳಲ್ಲಿ ಮೂರು ಸಾಲಿನ ಜಾಲಾಂಧ್ರಗಳನ್ನು ಅಳವಡಿಸಲಾಗಿದೆ. ಈ ಜಾಲಾಂಧ್ರಗಳ ಬದಿಯಲ್ಲಿ ನೀಳ ಅರೆಗಂಭಗಳನ್ನು ಕಾಣುತ್ತೇವೆ. ಜೊತೆಗೆ ದ್ವಾರಬಂಧದ ಮೇಲೆ ಕಪೋತವಿದ್ದು, ಉತ್ತರಾಂಗದಲ್ಲಿ ಎರಡು ಸಾಲಿನ ಒಂಬತ್ತು ಚಿಕ್ಕ-ಚಿಕ್ಕ ಗೂಡುಗಳಿಂದ ಕೂಡಿದ ಅಲಂಕರಣೆ ಇದೆ.

ಅಂತರಾಳಕ್ಕೆ ಹೊಂದಿಕೊಂಡಂತೆ ನವರಂಗವಿದೆ. ನವರಂಗದಲ್ಲಿ ಎರಡು ದೇವಕೋಷ್ಠಗಳಿದ್ದು, ಇಲ್ಲಿ ಯಾವುದೇ ಮೂರ್ತಿಗಳು ಕಂಡು ಬರುವುದಿಲ್ಲ. ನವರಂಗದ ಮುಂದೆ ಅರ್ಧ ಮಂಟಪವಿದೆ. ಅರ್ಧಮಂಟಪದ ಬಲಬದಿಯ ಗೂಡಿನಲ್ಲಿ ತೀರ್ಥಂಕರ ಮತ್ತು ಎಡಭಾಗದಲ್ಲಿ ಶಿವಲಿಂಗವಿದೆ. ಈ ದೇವಾಲಯದ ಹೊರಭಾಗವು ಸಂಪೂರ್ಣ ಜೀರ್ಣೋದ್ಧಾರಗೊಂಡಿದ್ದು, ಹೊರ ಆವರಣದಲ್ಲಿ ಭಗ್ನಗೊಂಡಿರುವ ಸಪ್ತಮಾತೃಕೆ ಶಿಲ್ಪವಿದೆ.[೪೫]

೨೭. ಸಿದ್ಧರಾಮೇಶ್ವರ ದೇವಾಲಯ

ಗ್ರಾಮ : ವರೂರ — **ಸ್ಥಳ** : ಗ್ರಾಮದ ಮಧ್ಯಭಾಗದಲ್ಲಿ

ತಾಲೂಕು : ಹುಬ್ಬಳ್ಳಿ — **ಕಾಲ** : ೧೨ನೇ ಶತಮಾನ

ಶೈಲಿ : ಕಲ್ಯಾಣ ಚಾಲುಕ್ಯ — **ವಸ್ತು** : ಕಪ್ಪುಶಿಲೆ

ಹುಬ್ಬಳ್ಳಿಯಿಂದ ಆಗ್ನೇಯಕ್ಕೆ ೧೮ ಕಿ.ಮೀ. ದೂರದಲ್ಲಿ ಸಿದ್ಧರಾಮೇಶ್ವರ ದೇವಾಲಯವಿದೆ. ಪೂರ್ವಾಭಿಮುಖವಾಗಿರುವ ಈ ದೇವಾಲಯ ಗರ್ಭಗೃಹ, ಅಂತರಾಳ ಮತ್ತು ನವರಂಗವನ್ನು ಹೊಂದಿದೆ. ಗರ್ಭಗೃಹವು ಚೌಕಾಕಾರವಾಗಿದ್ದು, ಮಧ್ಯ ಪೀಠದ ಮೇಲೆ ಪಾದುಕೆ ಇದೆ. ವಿತಾನದಲ್ಲಿ ಅರಳಿದ ಪದ್ಮದ ಅಲಂಕರಣೆಯಿದೆ. ಗರ್ಭಗೃಹದ ದ್ವಾರವು ತ್ರಿಶಾಖೆಗಳಿಂದ ಕೂಡಿದ್ದು, ಸರಳವಾಗಿದೆ. ಜೊತೆಗೆ ಶಾಖೆಗಳು ಲಲಾಟಪಟ್ಟಿಕೆಯಲ್ಲಿ ಚದುರಿವೆ. ಗರ್ಭಗೃಹಕ್ಕೆ ಹೊಂದಿಕೊಂಡಂತೆ ಅಂತರಾಳವಿದೆ. ಇದರ ಪ್ರವೇಶದ್ವಾರ ತ್ರಿಶಾಖೆಗಳಿಂದ ಕೂಡಿದ್ದು, ಶಾಖೆಗಳು ಲಲಾಟದಲ್ಲಿಯೂ ಹರಡಿವೆ. ಜೊತೆಗೆ ಲಲಾಟಬಿಂಬ ಮತ್ತು ಪೇದ್ಯಭಾಗ ಸರಳವಾಗಿರುವುದನ್ನು ಕಾಣುತ್ತೇವೆ. ಇನ್ನು ಅಂತರಾಳದ ಮುಂದೆ ನವರಂಗವಿದ್ದು, ಅಲ್ಲಿ ನಾಲ್ಕು ಸ್ತಂಭಗಳಿವೆ. ಸ್ತಂಭಗಳು ಪೀಠ, ಕಾಂಡದಲ್ಲಿ ಚೌಕ, ಬಹುಮುಖ ಚೌಕ, ಕಲಶ, ಫಲಕ ಮತ್ತು ಸರಳ ಬೋಧಿಗೆಯಿಂದ ಕೂಡಿವೆ. ಈ ನವರಂಗದ ಭಿತ್ತಿಯಲ್ಲಿ ಹನ್ನೆರಡು ಅರೆಗಂಭಗಳು ಕಂಡು ಬರುತ್ತವೆ. ದೇವಾಲಯ ಸಂಪೂರ್ಣ ಜೀರ್ಣೋದ್ಧಾರಗೊಂಡಿದೆ.[೪೬]

೨೮. ಕಲ್ಲೇಶ್ವರ ದೇವಾಲಯ

ಗ್ರಾಮ : ಮುಕ್ಕಲ್ಲು — **ಸ್ಥಳ** : ಹೊಂಡದ ಬಳಿ

ತಾಲೂಕು : ಕಲಘಟಗಿ — **ಕಾಲ** : ೧೨ನೇ ಶತಮಾನ

ಶೈಲಿ : ಕಲ್ಯಾಣ ಚಾಲುಕ್ಯ — **ವಸ್ತು** : ಕಪ್ಪುಶಿಲೆ

ಕಲಘಟಗಿಯಿಂದ ದಕ್ಷಿಣಕ್ಕೆ ೧೩ ಕಿ.ಮೀ. ದೂರದಲ್ಲಿ ಕಲ್ಲೇಶ್ವರ ದೇವಾಲಯವಿದೆ. ಪೂರ್ವಾಭಿಮುಖವಾಗಿರುವ ಈ ದೇವಾಲಯ, ಗರ್ಭಗೃಹ ಮತ್ತು ಸಭಾಮಂಟಪವನ್ನು ಹೊಂದಿದೆ. ಗರ್ಭಗೃಹ ಚೌಕಾಕಾರವಾಗಿದ್ದು, ಮಧ್ಯದಲ್ಲಿ ಶಿವಲಿಂಗವಿದೆ. ಪ್ರವೇಶದ್ವಾರವು ಸರಳವಾಗಿದೆ. ಗರ್ಭಗೃಹಕ್ಕೆ ಹೊಂದಿಕೊಂಡಂತೆ ಸಭಾಮಂಟಪವಿದ್ದು, ಅಲ್ಲಿ ನಾಗಶಿಲ್ಪಗಳು ಇವೆ. ಇದರ ಛಾವಣಿ ಹಂಚಿನಿಂದ ಹಾಕಿ ನವೀಕರಿಸಲ್ಪಟ್ಟಿದೆ. ದೇವಾಲಯದ ಗೋಡೆಯನ್ನು ಮಣ್ಣಿನಿಂದ ನಿರ್ಮಿಸಿದ್ದು, ಮೇಲೆ ಸಿಮೆಂಟಿನ ಲೇಪನವಿದೆ. ಜೊತೆಗೆ ಗರ್ಭಗೃಹದ ಮೇಲಿನ ಶಿಖರವು ಸಿಮೆಂಟಿನಿಂದ ಕೂಡಿದ್ದಾಗಿದ್ದು, ಸಂಪೂರ್ಣ ಜೀರ್ಣೋದ್ಧಾರಗೊಂಡಿದೆ. ಹಾಗೆಯೇ ದೇವಾಲಯದ ಆವರಣದಲ್ಲಿ ದೇವಾಲಯಕ್ಕೆ ಸಂಬಂಧಿಸಿದ ಅವಶೇಷಗಳು ಇವೆ.[೪೭]

೨೯. ಮಲ್ಲಿಕಾರ್ಜುನ ದೇವಾಲಯ

ಗ್ರಾಮ : ಹುಣಸಿಕಟ್ಟೆ **ಸ್ಥಳ** : ಊರಿನ ಹೊರಭಾಗದಲ್ಲಿ

ತಾಲೂಕು : ಕಲಘಟಗಿ **ಕಾಲ** : ೧೨ನೇ ಶತಮಾನ

ಶೈಲಿ : ಕಲ್ಯಾಣ ಚಾಲುಕ್ಯ **ವಸ್ತು** : ಕಪ್ಪುಶಿಲೆ

ಕಲಘಟಗಿಯಿಂದ ಆಗ್ನೇಯಕ್ಕೆ ೧೦ ಕಿ.ಮೀ. ದೂರದಲ್ಲಿ ಮಲ್ಲಿಕಾರ್ಜುನ ದೇವಾಲಯವಿದೆ. ಪೂರ್ವಾಭಿಮುಖವಾಗಿರುವ ಈ ದೇವಾಲಯ ಗರ್ಭಗೃಹ, ಅಂತರಾಳ ಮತ್ತು ಸಭಾಮಂಟಪವನ್ನು ಹೊಂದಿದೆ. ಗರ್ಭಗೃಹವು ಚೌಕಾಕಾರವಾಗಿದ್ದು, ಮಧ್ಯದಲ್ಲಿ ಶಿವಲಿಂಗವಿದೆ. ಇದರ ಪ್ರವೇಶದ್ವಾರವು ಸರಳ ರಚನೆಯಿಂದ ಕೂಡಿದ್ದು, ದ್ವಾರದ ಲಲಾಟಬಿಂಬದಲ್ಲಿ ಬ್ರಹ್ಮನ ಉಬ್ಬುಶಿಲ್ಪವಿದೆ. ಗರ್ಭಗೃಹಕ್ಕೆ ಹೊಂದಿಕೊಂಡಂತೆ ಅಂತರಾಳವಿದ್ದು, ಇಲ್ಲಿ ಭಗ್ನಗೊಂಡಿರುವ ಎರಡು ನಂದಿ ಮತ್ತು ವಿಷ್ಣುವಿನ ಶಿಲ್ಪವಿದೆ. ಈ ದೇವಾಲಯವು ಸಂಪೂರ್ಣ ಜೀರ್ಣೋದ್ಧಾರಗೊಂಡಿದ್ದು, ದೇವಾಲಯದ ಆವರಣದಲ್ಲಿ ಸ್ತಂಭ ಮತ್ತಿತರ ವಸ್ತು ಅವಶೇಷಗಳು ಕಂಡುಬರುತ್ತದೆ. ಜೊತೆಗೆ ದೇವಾಲಯದ ಮುಂಭಾಗದಲ್ಲಿ ಸುಮಾರು ೧೫ ಅಡಿ ಎತ್ತರದ ಶಿಲಾಸ್ತಂಭವನ್ನು ಅಳವಡಿಸಲಾಗಿದೆ.[೪೮]

೩೦. ಮಲ್ಲಿಕಾರ್ಜುನ ದೇವಾಲಯ

ಗ್ರಾಮ : ನರೇಂದ್ರ **ಸ್ಥಳ** : ಕುಂಬಾಪುರ ಮಹಲ್

ತಾಲೂಕು : ಧಾರವಾಡ **ಕಾಲ** : ೧೨ನೇ ಶತಮಾನ

ಶೈಲಿ : ಕಲ್ಯಾಣ ಚಾಲುಕ್ಯ **ವಸ್ತು** : ಕಪ್ಪುಶಿಲೆ

ಧಾರವಾಡದಿಂದ ವಾಯುವ್ಯಕ್ಕೆ ಸುಮಾರು ೭ ಕಿ.ಮೀ. ದೂರದಲ್ಲಿ ಮಲ್ಲಿಕಾರ್ಜುನ ದೇವಾಲಯವಿದೆ. ಪೂರ್ವಾಭಿಮುಖವಾಗಿರುವ ಈ ದೇವಾಲಯ, ಗರ್ಭಗೃಹವನ್ನು ಮಾತ್ರ ಹೊಂದಿದೆ. ಗರ್ಭಗೃಹದಲ್ಲಿ ಶಿವಲಿಂಗವನ್ನು ಕಾಣುತ್ತೇವೆ. ಇದರ ಪಕ್ಕದಲ್ಲಿ ಲಿಂಗದ ರುದ್ರ ಭಾಗವಿದೆ. ಹಾಗೆಯೇ ಇದರ ಬಾಗಿಲುವಾಡಗಳಲ್ಲಿ ಅರ್ಧಸ್ತಂಭಗಳ ರಚನೆಯಿದ್ದು, ದೇವಾಲಯ ಸಂಪೂರ್ಣವಾಗಿ ಜೀರ್ಣೋದ್ಧಾರಗೊಂಡಿದೆ. ಹೊರಗೋಡೆಯನ್ನು ಸಿಮೆಂಟಿನಿಂದ ಮುಚ್ಚಿದ್ದು,

ಗರ್ಭಗೃಹದ ಮೇಲೆ ಆರ್.ಸಿ.ಸಿ. ಛಾವಣಿಯನ್ನು ಹಾಕಲಾಗಿದೆ. ಮತ್ತು ದೇವಾಲಯದ ಆವರಣದಲ್ಲಿ ಇತ್ತೀಚಿನ ನಂದಿಶಿಲ್ಪ ಇಲ್ಲಿ ಇಡಲಾಗಿದೆ.[೪೯]

೩೧. ವೀರಭದ್ರ ದೇವಾಲಯ

ಗ್ರಾಮ : ಭೋಕ್ಯಾಪುರ **ಸ್ಥಳ** : ಕೆರೆಯ ಪಕ್ಕದಲ್ಲಿ

ತಾಲೂಕು : ಧಾರವಾಡ **ಕಾಲ** : ೧೨ನೇ ಶತಮಾನ

ಶೈಲಿ : ಕಲ್ಯಾಣ ಚಾಲುಕ್ಯ **ವಸ್ತು** : ಕಪ್ಪುಶಿಲೆ

ಪೂರ್ವಾಭಿಮುಖವಾಗಿರುವ ಈ ದೇವಾಲಯ ಗರ್ಭಗೃಹ, ಅರ್ಧಮಂಟಪ ಮತ್ತು ನವರಂಗವನ್ನು ಹೊಂದಿದೆ. ಗರ್ಭಗೃಹವು ಚೌಕಾಕಾರದಿಂದ ಕೂಡಿದ್ದು, ಮಧ್ಯದಲ್ಲಿ ಶಿವಲಿಂಗವಿದ್ದು, ಹಿಂಭಾಗದಲ್ಲಿ ವೀರಭದ್ರನ ಶಿಲ್ಪ ಇದೆ. ಗರ್ಭಗೃಹದ ದ್ವಾರ ಸರಳ ರೀತಿಯಿಂದ ಕೂಡಿದ್ದು, ಗರ್ಭಗೃಹಕ್ಕೆ ಹೊಂದಿಕೊಂಡಂತೆ ಅರ್ಧಮಂಟಪವಿದ್ದು ಇಲ್ಲಿ ಭಗ್ನಗೊಂಡ ನಂದಿಶಿಲ್ಪವಿದೆ. ಅರ್ಧಮಂಟಪದ ಮುಂಭಾಗದಲ್ಲಿ ನವರಂಗವಿದ್ದು, ಇಲ್ಲಿನ ಸ್ತಂಭಗಳು ಚೌಕ ಮತ್ತು ಅಷ್ಟಮುಖ ರಚನೆಗಳಿಂದ ಕೂಡಿವೆ.

ದೇವಾಲಯದ ಹೊರಭಾಗವು ಸಂಪೂರ್ಣ ಜೀರ್ಣೋದ್ಧಾರಗೊಂಡಿದೆ. ಗೋಡೆಯನ್ನು ಕಾಡುಗಲ್ಲು ಮತ್ತು ಮಣ್ಣಿನಿಂದ ನಿರ್ಮಿಸಿ, ಅದರ ಮೇಲೆ ಸಿಮೆಂಟ್‌ನ್ನು ಹಾಕಿರುವುದನ್ನು ಕಾಣುತ್ತೇವೆ.[೫೦]

೩೨. ಬಸವೇಶ್ವರ ದೇವಾಲಯ

ಗ್ರಾಮ : ಅರೆಕುರಹಟ್ಟಿ **ಸ್ಥಳ** : ಊರ ಮಧ್ಯದಲ್ಲಿ

ತಾಲೂಕು : ನವಲಗುಂದ **ಕಾಲ** : ೧೨ನೇ ಶತಮಾನ

ಶೈಲಿ : ಕಲ್ಯಾಣ ಚಾಲುಕ್ಯ **ವಸ್ತು** : ಕಪ್ಪುಶಿಲೆ

ನವಲಗುಂದದಿಂದ ಪಶ್ಚಿಮಕ್ಕೆ ಸುಮಾರು ೭ ಕಿ.ಮೀ. ದೂರದಲ್ಲಿ ಬಸವೇಶ್ವರ ದೇವಾಲಯವಿದೆ. ಪೂರ್ವಾಭಿಮುಖವಾಗಿರುವ ಈ ದೇವಾಲಯ ಗರ್ಭಗೃಹ ಮತ್ತು ಸಭಾಮಂಟಪವನ್ನು ಹೊಂದಿದೆ. ಗರ್ಭಗೃಹವು ಚೌಕಾಕಾರವಾಗಿದ್ದು, ಮಧ್ಯದಲ್ಲಿ ಶಿವಲಿಂಗವಿದೆ. ಆದರೆ ಗರ್ಭಗೃಹ ಬಿದ್ದು ಹೋಗಿದೆ. ಇನ್ನೂ ಇದಕ್ಕೆ ಹೊಂದಿಕೊಂಡಂತೆ ಸಭಾಮಂಟಪವಿದ್ದು, ಇದು ಸಹ ಭಗ್ನಗೊಂಡಿದ್ದಲ್ಲದೇ ಮಧ್ಯದಲ್ಲಿ ನಂದಿಯ ಶಿಲ್ಪವನ್ನು ಕಾಣುತ್ತೇವೆ. ಒಟ್ಟಾರೆ ಈ ದೇವಾಲಯ ಜೀರ್ಣೋದ್ಧಾರಗೊಂಡಿದ್ದು, ಮಾಳಿಗೆಯನ್ನು ಕಟ್ಟಡದ ರೀತಿಯಲ್ಲಿ ನಿರ್ಮಿಸಲಾಗಿದೆ.[೫೧]

೩೩. ಮಲ್ಲಿಕಾರ್ಜುನ ದೇವಾಲಯ

ಗ್ರಾಮ : ದೇವರಗುಡಿಹಾಳ **ಸ್ಥಳ** : ಕೆರೆಯ ಮುಂಭಾಗ

ತಾಲೂಕು : ಹುಬ್ಬಳ್ಳಿ **ಕಾಲ** : ೧೨ನೇ ಶತಮಾನ

ಶೈಲಿ : ಕಲ್ಯಾಣ ಚಾಲುಕ್ಯ **ವಸ್ತು** : ಕಪ್ಪುಶಿಲೆ

ಹುಬ್ಬಳ್ಳಿಯಿಂದ ಆಗ್ನೇಯಕ್ಕೆ ಸುಮಾರು ೧೩ ಕಿ.ಮೀ. ದೂರದಲ್ಲಿ, ಮಲ್ಲಿಕಾರ್ಜುನ ದೇವಾಲಯವಿದೆ. ಪೂರ್ವಾಭಿಮುಖವಾಗಿರುವ ಈ ದೇವಾಲಯ ಗರ್ಭಗೃಹ, ಅರ್ಧಮಂಟಪ ಮತ್ತು ಸಭಾಮಂಟಪವನ್ನು ಹೊಂದಿದೆ. ಗರ್ಭಗೃಹವು ಚೌಕಾಕಾರವಾಗಿದ್ದು, ಮಧ್ಯದಲ್ಲಿ ಶಿವಲಿಂಗವಿದೆ. ಇದರ ಬಾಗಿಲುವಾಡಗಳಲ್ಲಿ ಅರ್ಧಕಂಭಗಳಿದ್ದು, ಲಲಾಟಬಿಂಬದಲ್ಲಿ ಗಜಲಕ್ಷ್ಮಿ ಶಿಲ್ಪವಿದೆ. ಇತ್ತೀಚೆಗೆ ಗರ್ಭಗೃಹ ಮತ್ತು ಅರ್ಧಮಂಟಪವನ್ನು ಜೀರ್ಣೋದ್ಧಾರ ಮಾಡಲಾಗಿದೆ. ಸಭಾಮಂಟಪಕ್ಕೆ ಪೂರ್ವ ಮತ್ತು ದಕ್ಷಿಣ ದಿಕ್ಕುಗಳಿಂದ ಪ್ರವೇಶದ್ವಾರಗಳಿದ್ದು, ಇಲ್ಲಿನ ಸ್ತಂಭಗಳನ್ನು ಮತ್ತು ತೊಲೆಗಳನ್ನು ಇತ್ತೀಚೆಗೆ ನಿರ್ಮಿಸಲಾಗಿದೆ. ಪೂರ್ವದಿಕ್ಕಿನ ಚಾವಣಿಯಲ್ಲಿ ನಾಗಬಂಧ ಶಿಲ್ಪಗಳಿವೆ. ಹಾಗೆಯೇ ಇದರ ಗೂಡುಗಳಲ್ಲಿ ಭಗ್ನಗೊಂಡಿರುವ ಕಾರ್ತಿಕೇಯ, ಗಣಪತಿ ಮತ್ತು ನಾಗಶಿಲ್ಪಗಳಿವೆ. ಅದೇ ರೀತಿ ದೇವಾಲಯದ ಅಧಿಷ್ಠಾನವು ಜಗತಿ, ಪ್ರತಿ, ಉಪಾನ, ಕಂಠ, ಕುಮುದ, ಕಪೋತ ಭಾಗಗಳನ್ನು ಹೊಂದಿದೆ. ಆದರೆ ದೇವಾಲಯದ ಭಿತ್ತಿಯು ಸಂಪೂರ್ಣವಾಗಿ ಜೀರ್ಣೋದ್ಧಾರಗೊಂಡಿದೆ.[೨]

೩೪. ಚಂದ್ರಮೌಳೇಶ್ವರ ದೇವಾಲಯ

ಗ್ರಾಮ	: ಉಣಕಲ್	**ಸ್ಥಳ**	: ಗ್ರಾಮದ ಮಧ್ಯದಲ್ಲಿ
ತಾಲೂಕು	: ಹುಬ್ಬಳ್ಳಿ	**ಕಾಲ**	: ೧೨ನೇ ಶತಮಾನ
ಶೈಲಿ	: ಕಲ್ಯಾಣ ಚಾಲುಕ್ಯ	**ವಸ್ತು**	: ಕಪ್ಪುಶಿಲೆ

ಹುಬ್ಬಳ್ಳಿಯಿಂದ ವಾಯುವ್ಯಕ್ಕೆ ಸುಮಾರು ೪ ಕಿ.ಮೀ. ದೂರದಲ್ಲಿ, ಚಂದ್ರಮೌಳೇಶ್ವರ ದೇವಾಲಯವಿದೆ. ಪೂರ್ವಾಭಿಮುಖವಾಗಿರುವ ದೇವಾಲಯ ಗರ್ಭಗೃಹ, ಪ್ರದಕ್ಷಿಣಾಪಥ ಅದಕ್ಕೆ ಹೊಂದಿಕೊಂಡಂತೆ ನಾಲ್ಕು ಮುಖಮಂಟಪವಿದೆ. ಪೂರ್ವದಿಕ್ಕಿನ ಮುಖಮಂಟಪಕ್ಕೆ ಸಭಾಮಂಟಪವಿದೆ. ಚತುರ್ಮುಖ ವಿನ್ಯಾಸವನ್ನು ಈ ದೇವಾಲಯ ಹೊಂದಿದೆ. ಗರ್ಭಗೃಹದ ಮಧ್ಯ ಚತುರ್ಮುಖ ಶಿವಲಿಂಗವಿದೆ. ದೇವಾಲಯಕ್ಕೆ ಪ್ರದಕ್ಷಿಣಾಪಥ ಇದ್ದು, ನಾಲ್ಕು ದಿಕ್ಕುಗಳಲ್ಲಿ ನಾಲ್ಕು ದ್ವಾರಬಂಧಗಳಿವೆ. ಪ್ರತಿಯೊಂದು ದ್ವಾರಬಂಧವು ಪಂಚಶಾಖಾಲಂಕಾರದಿಂದ ಕೂಡಿವೆ.

ಗರ್ಭಗೃಹದ ಪೂರ್ವದ್ವಾರಬಂಧದಲ್ಲಿ ರತ್ನಶಾಖೆ, ಸ್ತಂಭಶಾಖೆ, ಕಿನ್ನರ/ವಿದ್ಯಾಧರ ಶಾಖೆ ಪದ್ಮದಳ ಶಾಖೆಗಳಿವೆ. ಕುಬೇರ, ಸ್ತ್ರೀ, ಶೈವದ್ವಾರಪಾಲ, ನದಿದೇವತೆಗಳನ್ನು ಮತ್ತು ದ್ವಾರಬಂಧದ ಮೂರು ಶಾಖೆಗಳು ಲಲಾಟಪಟ್ಟಿಯಲ್ಲೂ ಹರಡಿದ್ದು, ಲಲಾಟಬಿಂಬದಲ್ಲಿ ಗಜಲಕ್ಷ್ಮಿಯ ಚಿತ್ರಣವಿದೆ. ಅದೇ ರೀತಿ ದಕ್ಷಿಣ ದ್ವಾರಬಂಧದ ಶಾಖೆಗಳಲ್ಲಿ ರತ್ನ, ಸ್ತಂಭ ಕಿನ್ನರ ಪದ್ಮದಳಗಳಿವೆ. ಲಲಾಟಬಿಂಬದಲ್ಲಿ ಸರಸ್ವತಿಯ ಚಿತ್ರವಿದ್ದು, ಇದರ ಪಕ್ಕದಲ್ಲಿ ಬಾಳೆದಿಂಡಿನಾಕೃತಿಯಲ್ಲಿ ಅಲಂಕರಣವನ್ನು ಕಾಣುತ್ತೇವೆ. ಸ್ತಂಭದಲ್ಲಿ ಪೂರ್ವಕಂಭಗಳಿದ್ದು, ಪೇದ್ಯ ಭಾಗದಲ್ಲಿ ದ್ವಿಭುಜದ್ವಾರಪಾಲ, ಕಾಮ-ರತಿ ಮತ್ತು ನದಿದೇವತೆಗಳು ಕಂಡುಬರುತ್ತವೆ. ಪಶ್ಚಿಮ ದ್ವಾರಬಂಧ ಪೂರ್ವ ದಿಕ್ಕಿನ ದ್ವಾರಬಂಧದಂತೆಯೇ ಇದ್ದು, ಲಲಾಟಬಿಂಬದಲ್ಲಿ ಗಜಲಕ್ಷ್ಮಿಯ ಚಿತ್ರಣವಿದೆ. ಇನ್ನು ಉತ್ತರ ದ್ವಾರಬಂಧ ಪೂರ್ವದಿಕ್ಕಿನ ದ್ವಾರಬಂಧದಂತೆಯೇ ಇದ್ದು, ಲಲಾಟಬಿಂಬದಲ್ಲಿ ಸರಸ್ವತಿಯ ಚಿತ್ರವಿದೆ. ಹಾಗೆಯೇ ಬದಿಗಳಲ್ಲಿ ಬಾಳೆದಿಂಡಿನ ಅಲಂಕರಣೆಯನ್ನು ಕಾಣುತ್ತೇವೆ.

ಗರ್ಭಗೃಹಕ್ಕೆ ಹೊಂದಿಕೊಂಡಂತೆ ಉತ್ತರ, ದಕ್ಷಿಣ ಮತ್ತು ಪಶ್ಚಿಮ ದಿಕ್ಕಿಗೆ ಮುಖಮಂಟಪವಿದ್ದು, ಇದರ ಪ್ರವೇಶದ್ವಾರಗಳು ಒಂದೇ ರೀತಿಯಲ್ಲಿವೆ. ಈ ದ್ವಾರಬಂಧಗಳು ಪಂಚಶಾಖೆಗಳಿಂದ ಕೂಡಿದ್ದು, ಶಾಖೆಗಳಲ್ಲಿ ರತ್ನ, ಹೂ ಬಳ್ಳಿ, ಸ್ತಂಭ ಮತ್ತು ಪದ್ಮಗಳಿವೆ. ದ್ವಾರದ ಮೇಲೆ ಕಪೋತವಿದ್ದು, ದ್ವಾರದ ಇಕ್ಕೆಲಗಳಲ್ಲಿ ಮೂರು ಸಾಲಿನ ಜಾಲಾಂಧ್ರಗಳಿವೆ. ಜಾಲಾಂಧ್ರಗಳು ವೃತ್ತಾಕಾರದಿಂದ ಕೂಡಿದ್ದು, ಮಧ್ಯ ರತ್ನಗಳ ಅಲಂಕರಣೆ ಇದೆ.

ದೇವಾಲಯದ ಊರ್ಧ್ವಭಾಗದಲ್ಲಿ ಅಧಿಷ್ಠಾನ ಮತ್ತು ಭಿತ್ತಿಗಳಷ್ಟೇ ಕಂಡು ಬರುತ್ತವೆ. ಶಿಖರಭಾಗ ಹಾಳಾಗಿರುವುದನ್ನು ಕಾಣುತ್ತೇವೆ. ಅಧಿಷ್ಠಾನ, ಉಪಾನ, ಜಗತಿ, ಕಂಠ, ತ್ರಿಪಟ್ಟಕುಮುದ, ಮಕರಪಟ್ಟಿಕಾ ಮತ್ತು ವೇದಿಕಾ ಭಾಗಗಳನ್ನೊಳಗೊಂಡಿದೆ. ದೇವಾಲಯದ ಕಕ್ಷಾಸನದಲ್ಲಿ ಉಪಾನ, ಜಗತಿ, ಪದ್ಮ, ಕಂಠವೇದಿಕಾ ಭಾಗಗಳಿದ್ದು, ಹೊರಭಾಗದಲ್ಲಿ ಅನೇಕ ಶಿಲ್ಪಗಳು ಭಗ್ನಗೊಂಡ ಸ್ಥಿತಿಯಲ್ಲಿವೆ. ಹಾಗೆಯೇ ಭಿತ್ತಿಯು ಅಧಿಷ್ಠಾನದ ಎರಡು ಪಟ್ಟು ಎತ್ತರವಿದ್ದು, ಭಿತ್ತಿಯಲ್ಲಿ ಭದ್ರ ಸಲಿತಾಂತರಗಳಿವೆ. ಭದ್ರ ಸಲಿಲಾಂತರದಲ್ಲಿ ಸ್ತಂಭ ಪಂಜರ, ಕೋಷ್ಠ ಪಂಜರಗಳಿವೆ. ಸ್ತಂಭ ಪಂಜರದ ಮೇಲೆ ತೋರಣದ ಅಲಂಕರಣವನ್ನು ಕಾಣುತ್ತೇವೆ. ಭಿತ್ತಿಯಲ್ಲಿ ದೇವ-ದೇವತೆಯರ ಶಿಲ್ಪಗಳಿದ್ದು, ಇವು ವಿವಿಧ ಭಂಗಿಯಲ್ಲಿವೆ. ಭಿತ್ತಿಯ ಮೇಲೆ ಕಪೋತ, ಮಕರ ಪಟ್ಟಿಕಾ ಇದೆ ಮತ್ತು ಹಾರದಲ್ಲಿ ಶಾಲಕೂಟಗಳಿದ್ದು, ಇವುಗಳಲ್ಲಿಯೂ ಸಹ ಅನೇಕ ದೇವ-ದೇವತೆಯರ ಶಿಲ್ಪಗಳಿವೆ.[೫೩]

೫.೩. ವೈಷ್ಣವ ದೇವಾಲಯಗಳು

೧. ನಾರಾಯಣ ದೇವಾಲಯ

ಗ್ರಾಮ : ಯರಗುಪ್ಪಿ — **ಸ್ಥಳ** : ಗ್ರಾಮದ ಹೊರಗೆ

ತಾಲೂಕು : ಕುಂದಗೋಳ — **ಕಾಲ** : ೧೨ನೇ ಶತಮಾನ

ಶೈಲಿ : ಕಲ್ಯಾಣ ಚಾಲುಕ್ಯ — **ವಸ್ತು** : ಕಪ್ಪುಶಿಲೆ

ಕುಂದಗೋಳದಿಂದ ಈಶಾನ್ಯಕ್ಕೆ ೧೦ ಕಿ.ಮೀ. ದೂರದಲ್ಲಿ ನಾರಾಯಣ ದೇವಾಲಯವಿದೆ. ದೇವಾಲಯ ಗರ್ಭಗೃಹ, ಅಂತರಾಳ, ನವರಂಗ ಮತ್ತು ಆಧುನಿಕ ಮುಖಮಂಟಪ ಒಳಗೊಂಡಿದೆ. ಗರ್ಭಗೃಹ ಚೌಕಾಕಾರವಾಗಿದ್ದು, ಮಧ್ಯದಲ್ಲಿ ನಾರಾಯಣ ಶಿಲ್ಪವಿದೆ. ಸಮಭಂಗಿಯಲ್ಲಿ ನಿಂತ ನಾರಾಯಣನಿಗೆ ಒಂದು ಕೈಯನ್ನು ಸೊಂಟದ ಮೇಲೆ ಇದೆ. ಕೈಯಲ್ಲಿ ಶಂಖ, ಚಕ್ರ, ಗಧೆಯನ್ನು ಹಿಡಿದಿದ್ದಾನೆ. ಪೀಠದಲ್ಲಿ ವಿಷ್ಣುವಿನ ವಾಹನವಾದ ಗರುಡನನ್ನು ಕಾಣಬಹುದು. ಗರ್ಭಗೃಹದ ಭಿತ್ತಿಯಲ್ಲಿ ಆರು ಅರೆಗಂಬಗಳಿದ್ದು, ವಿತಾನದಲ್ಲಿ ಅರಳಿದ ಪದ್ಮವಿದೆ. ಇದರ ಪ್ರವೇಶದ್ವಾರ ಪಂಚಶಾಖೆಗಳಿಂದ ಕೂಡಿದ್ದು, ಇವುಗಳಲ್ಲಿ ತ್ರಿಶಾಖೆಗಳು ಲಲಾಟದಲ್ಲಿ ಹರಡಿರುವುದನ್ನು ಕಾಣಬಹುದಾಗಿದೆ. ಗರ್ಭಗೃಹಕ್ಕೆ ಹೊಂದಿಕೊಂಡಂತೆ ಅಂತರಾಳವಿದೆ. ಮುಂಭಾಗದಲ್ಲಿ ಎರಡು ಸ್ತಂಭಗಳ ಮೇಲೆ ಮಕರ ತೋರಣವಿದೆ. ಈ ಸ್ತಂಭಗಳಲ್ಲಿ ಪೀಠ, ಪಾದ, ವೃತ್ತಾಕಾರದ

ದಿಂಡುಗಳು, ಘಂಟಾಕಾರ, ಕಲಶ, ಫಲಕಗಳಿವೆ. ಈ ಘಂಟಾಕಾರ ಎಲೆಗಳಲ್ಲಿ ಅಲಂಕರಣವಿದ್ದು, ಮಕರಗಳ ಬಾಯಿಯಿಂದ ಹೊರಟ ಕಮಲದ ಮೊಗ್ಗಿನ ಅಲಂಕರಣವನ್ನು ಕಾಣುತ್ತೇವೆ. ಇವುಗಳ ಮಧ್ಯದಲ್ಲಿ ಬ್ರಹ್ಮ, ವಿಷ್ಣು, ಮಹೇಶ್ವರರ ಚಿತ್ರಗಳಿವೆ. ಮುಂಭಾಗದ ಪಟ್ಟಿಕೆಯ ಮೇಲೆ ಅವರುಗಳ ವಾಹನ ಹಂಸ, ಗರುಡ, ನಂದಿಯನ್ನು ತೋರಿಸಲಾಗಿದೆ. ಹಾಗೆಯೇ ನಂದಿಯ ಬದಿಯಲ್ಲಿ ಚೇಳನ್ನು ತೋರಿಸಿರುವುದು ವಿಶೇಷವಾಗಿದೆ. ಅಂತರಾಳಕ್ಕೆ ಹೊಂದಿಕೊಂಡಂತೆ ನವರಂಗವಿದೆ. ಇದರ ಮಧ್ಯ ನಾಲ್ಕು ಸ್ತಂಭಗಳಿವೆ. ಪೀಠ, ಪಾದ, ವೃತ್ತಾಕಾರದ ದಿಂಡುಗಳು, ಘಂಟಾಕಾರ ಕಲಶ, ಫಲಕ ಮತ್ತು ಸರಳ ಬೋಧಿಗೆ ಇದೆ. ದಿಂಡಿನಲ್ಲಿ ರತ್ನ, ಘಂಟಾಕಾರದಲ್ಲಿ ಎಲೆಗಳ ಅಲಂಕರಣವಿದೆ. ಹಾಗೆಯೇ ವಿತಾನದಲ್ಲಿ ಅರಳಿದ ಪದ್ಮವಿದೆ. ದೇವಾಲಯದ ಪ್ರವೇಶದ್ವಾರವು ತ್ರಿಶಾಖೆಗಳಿಂದ ಕೂಡಿದ್ದು, ಪದ್ಮ, ಲತಾ, ಬಳ್ಳಿಗಳ ಅಲಂಕರಣವಿದೆ. ದೇವಾಲಯದ ಮುಂಭಾಗದಲ್ಲಿ ಆಧುನಿಕ ಮುಖಮಂಟಪವನ್ನು ಕಾಣುತ್ತೇವೆ.[೫೪]

೨. ರಂಗನಾಥ ದೇವಾಲಯ

ಗ್ರಾಮ	: ದೇವರ ಹುಬ್ಬಳ್ಳಿ	**ಸ್ಥಳ**	: ಗ್ರಾಮದ ಹೊರಭಾಗದಲ್ಲಿ
ತಾಲೂಕು	: ಧಾರವಾಡ	**ಕಾಲ**	: ೧೨ನೇ ಶತಮಾನ
ಶೈಲಿ	: ಕಲ್ಯಾಣ ಚಾಲುಕ್ಯ	**ವಸ್ತು**	: ಕಪ್ಪುಶಿಲೆ

ಧಾರವಾಡದಿಂದ ನೈರುತ್ಯಕ್ಕೆ ೧೨ ಕಿ.ಮೀ. ದೂರದಲ್ಲಿ ರಂಗನಾಥಸ್ವಾಮಿ ದೇವಾಲಯವಿದೆ. ಪೂರ್ವಾಭಿಮುಖವಾದ ಈ ದೇವಾಲಯ ಗರ್ಭಗೃಹ, ಅಂತರಾಳ ಮತ್ತು ನವರಂಗವನ್ನು ಒಳಗೊಂಡಿದೆ. ಗರ್ಭಗೃಹವು ಚೌಕಾಕಾರವಾಗಿದ್ದು, ಮಧ್ಯದಲ್ಲಿ ಕೇಶವನು ಸಮಭಂಗಿಯಲ್ಲಿ ನಿಂತಿದ್ದಾನೆ. ಚತುರ್ಭುಜಧಾರಿಯಾದ ಇವನು ಪದ್ಮ, ಶಂಖ, ಚಕ್ರ, ಗದೆಯನ್ನು ಹಿಡಿದುಕೊಂಡಿದ್ದಾನೆ. ಗರ್ಭಗೃಹದ ಪ್ರವೇಶದ್ವಾರವು ಪಂಚಶಾಖೆಗಳಿಂದ ಕೂಡಿದ್ದು, ಅದರಲ್ಲಿ ಎರಡು ಶಾಖೆಗಳು ಲಲಾಟದಲ್ಲಿ ಹರಡಿವೆ. ಈ ಲಲಾಟದಲ್ಲಿ ವಿಷ್ಣುವಿನ ಚಿತ್ರ ಮತ್ತು ಪೇದ್ಯ ಭಾಗದಲ್ಲಿ ದ್ವಾರಪಾಲಕ ಮತ್ತು ಸ್ತ್ರೀಯರ ಚಿತ್ರಗಳು ಕಂಡುಬರುತ್ತವೆ. ಗರ್ಭಗೃಹಕ್ಕೆ ಹೊಂದಿಕೊಂಡಂತೆ ಅಂತರಾಳವಿದೆ. ಇಲ್ಲಿ ನಾಲ್ಕು ಮೂಲೆಗಂಬಗಳನ್ನು ಹೊಂದಿದ್ದು, ಅಂತರಾಳದ ವಿತಾನದಲ್ಲಿ ಅರಳಿದ ಪದ್ಮದ ಅಲಂಕರಣವಿದೆ. ಇದರ ಪ್ರವೇಶದ್ವಾರ ಸ್ತಂಭಶಾಖೆಯನ್ನು ಹೊಂದಿದ್ದು, ಲಲಾಟದಲ್ಲಿ ಪದ್ಮದ ಅಲಂಕರಣೆಯಿದೆ. ಹಾಗೆಯೇ ಲಲಾಟಪಟ್ಟಿಕೆಯ ಮೇಲೆ ಕಪೋತವಿದೆ. ಉತ್ತರಾಂಗದಲ್ಲಿ ಐದು ಕಿರು ಶಿಖರಗಳಿದ್ದು, ಈ ಶಿಖರಗಳು ರೇಖಾನಾಗರ ಶೈಲಿಯಲ್ಲಿವೆ.

ಅಂತರಾಳಕ್ಕೆ ಹೊಂದಿಕೊಂಡಂತೆ ನವರಂಗವಿದೆ. ಇಲ್ಲಿ ದೇವಕೋಷ್ಠಕಗಳಿದ್ದು, ಗಣೇಶ ಮತ್ತು ಮಹಿಷಮರ್ಧಿನಿಯ ಶಿಲ್ಪಗಳು ಕಂಡುಬರುತ್ತವೆ. ಈ ನವರಂಗದ ವಿತಾನದಲ್ಲಿ ಅರಳಿದ ಪದ್ಮದ ಅಲಂಕರಣೆಯಿದೆ. ಇದರ ಪ್ರವೇಶದ್ವಾರವು ಸರಳತೆಯಿಂದ ಕೂಡಿದೆ ಹಾಗೂ ಈ ದೇವಾಲಯದ ಮುಂಭಾಗದಲ್ಲಿ ಪುಷ್ಕರಣಿ ಇದೆ.[೫೫]

೩. ವೀರನಾರಾಯಣ ದೇವಾಲಯ

ಗ್ರಾಮ	: ಕೋಳಿವಾಡ	ಸ್ಥಳ	: ಗ್ರಾಮದ ಮಧ್ಯದಲ್ಲಿ
ತಾಲೂಕು	: ಹುಬ್ಬಳ್ಳಿ	ಕಾಲ	: ೧೨ನೇ ಶತಮಾನ
ಶೈಲಿ	: ಕಲ್ಯಾಣ ಚಾಲುಕ್ಯ	ವಸ್ತು	: ಕಪ್ಪುಶಿಲೆ

ಹುಬ್ಬಳ್ಳಿಯಿಂದ ಪೂರ್ವಕ್ಕೆ ೩೯ ಕಿ.ಮೀ. ದೂರದಲ್ಲಿ ವೀರನಾರಾಯಣ ದೇವಾಲಯವಿದೆ. ಪೂರ್ವಾಭಿಮುಖವಾಗಿರುವ ದೇವಾಲಯ ಗರ್ಭಗೃಹ. ಅಂತರಾಳ ಮತ್ತು ನವರಂಗ ಒಳಗೊಂಡಿದೆ. ಗರ್ಭಗೃಹ ಚೌಕಾಕಾರವಾಗಿದ್ದು, ಮಧ್ಯದ ಪೀಠದಲ್ಲಿ ವಿಷ್ಣು ಸಮಭಂಗಿಯಲ್ಲಿ ನಿಂತಿದ್ದಾನೆ. ಗರ್ಭಗೃಹದ ಪ್ರವೇಶದ್ವಾರವು ಸರಳವಾಗಿದೆ. ಸರಳ ಲಲಾಟಬಿಂಬದಲ್ಲಿ "ಶ್ರೀ" ಎಂಬ ಆಧುನಿಕ ಹಿಂದಿ ಅಕ್ಷರವಿದೆ. ಹಾಗೆಯೇ ಬದಿಗಳಲ್ಲಿ ಬಾಳೆದಿಂಡಿನ ಅಲಂಕರಣೆ ಕಂಡುಬರುತ್ತದೆ. ಇದಕ್ಕೆ ಹೊಂದಿಕೊಂಡಂತೆ ಅಂತರಾಳವಿದೆ. ಇದರ ದ್ವಾರಬಂಧದಲ್ಲಿ ತ್ರಿಶಾಖೆಗಳು ಕಂಡುಬರುತ್ತವೆ. ಸರಳವಾದ ಉಬ್ಬಿದ ಲಲಾಟಪಟ್ಟಿಕೆ ಇದ್ದು, ಇದರ ಬದಿಗಳಲ್ಲಿ ಬಾಳೆದಿಂಡಿನ ಅಲಂಕರಣವಿದೆ. ದ್ವಾರಬಂಧದ ಇಕ್ಕೆಲಗಳಲ್ಲಿ ಮೂರು ಸಾಲಿನ ಜಾಲಾಂಧ್ರಗಳಿದ್ದು, ಇವುಗಳ ಗೂಡಿನಲ್ಲಿ ಪದ್ಮಗಳ ಅಲಂಕರಣೆಗಳಿವೆ. ಅಂತರಾಳಕ್ಕೆ ಹೊಂದಿಕೊಂಡಂತೆ ನವರಂಗವಿದ್ದು, ಆದರೆ ಇಂದು ಪಾಳುಬಿದ್ದಿದೆ. ಆದರೆ ಇದಕ್ಕೆ ಸಂಬಂಧಿಸಿದ ಸ್ತಂಭಗಳು ದೇವಾಲಯದ ಆವರಣ ಮತ್ತು ಮಹಾಮಾಯಿ ದೇವಸ್ಥಾನದ ಮುಂಭಾಗದಲ್ಲಿ ಕಂಡುಬರುತ್ತವೆ. ಇನ್ನು ದೇವಾಲಯದ ಊರ್ಧ್ವಮುಖವು ಜೀರ್ಣೋದ್ಧಾರಗೊಂಡಿರುವುದನ್ನು ಕಾಣುತ್ತೇವೆ.[೫೬]

೫.೪. ಜೈನ ಬಸದಿಗಳು

೧. ಜೈನ ಬಸದಿ

ಗ್ರಾಮ	: ಗುಡಗೇರಿ	ಸ್ಥಳ	: ಗ್ರಾಮದ ಮಧ್ಯದಲ್ಲಿ
ತಾಲೂಕು	: ಕುಂದಗೋಳ	ಕಾಲ	: ೧೨ನೇ ಶತಮಾನ
ಶೈಲಿ	: ಕಲ್ಯಾಣ ಚಾಲುಕ್ಯ	ವಸ್ತು	: ಕಪ್ಪುಶಿಲೆ

ಕುಂದಗೋಳದಿಂದ ಆಗ್ನೇಯಕ್ಕೆ ಸುಮಾರು ೨೬ ಕಿ.ಮೀ. ದೂರದಲ್ಲಿ ಜೈನ ಬಸದಿ ಇದೆ. ಪೂರ್ವಾಭಿಮುಖವಾಗಿರುವ ಈ ಬಸದಿ ಗರ್ಭಗೃಹ, ಅಂತರಾಳ, ನವರಂಗ ಮತ್ತು ಮುಖಮುಂಟಪಗಳನ್ನು ಒಳಗೊಂಡಿದೆ. ಗರ್ಭಗೃಹವು ಚೌಕಾಕಾರವಾಗಿದ್ದು, ಮಧ್ಯದಲ್ಲಿ ಮಹಾವೀರನು ಪದ್ಮಾಸನದಲ್ಲಿದ್ದಾನೆ. ಪ್ರವೇಶದ್ವಾರವು ಪಂಚಶಾಖೆಗಳಿಂದ ಕೂಡಿದೆ. ಲಲಾಟಪಟ್ಟಿಕೆ ಸರಳವಾಗಿದೆ. ಗರ್ಭಗೃಹಕ್ಕೆ ಹೊಂದಿಕೊಂಡಂತೆ ಆಯತಾಕಾರದ ಅಂತರಾಳವಿದೆ. ಇದರ ಬಲಭಾಗದಲ್ಲಿ ಆದಿನಾಥ, ಎಡಭಾಗದಲ್ಲಿ ಪದ್ಮಾವತಿಯ ಶಿಲ್ಪಗಳಿವೆ. ಇದರ ದ್ವಾರವು ಸರಳವಾಗಿದ್ದು, ಇಲ್ಲಿ ಆಧುನಿಕವಾಗಿ ನಿರ್ಮಿಸಿದ ಹನ್ನೊಂದು ಗೂಡುಗಳು ಕಂಡುಬರುತ್ತವೆ.

ಅಂತರಾಳಕ್ಕೆ ಹೊಂದಿಕೊಂಡಂತೆ ನವರಂಗವಿದ್ದು, ಮಧ್ಯದಲ್ಲಿ ನಾಲ್ಕು ಸ್ತಂಭಗಳಿವೆ. ಭಿತ್ತಿಯಲ್ಲಿ ಅಲ್ಲಲ್ಲಿ ೧೨ ಅರ್ಧ ಸ್ತಂಭಗಳಿವೆ. ಮಧ್ಯದ ಸ್ತಂಭಗಳು ಪೀಠ, ಕಾಂಡದಲ್ಲಿ ಚೌಕ, ವೃತ್ತಾಕಾರದ ದಿಂಡುಪಟ್ಟಿಕೆಗಳು, ಘಂಟಾಕಾರ, ಕಲಶ, ಫಲಕ ಮತ್ತು ಸರಳಬೋಧಿಗೆ ಇದೆ. ವಿತಾನದಲ್ಲಿ ಅರಳಿದ ಪದ್ಮ ಅಲಂಕರಣೆ ಇದೆ. ಇದರ ದ್ವಾರಬಂಧ ತ್ರಿಶಾಖೆಗಳನ್ನು ಹೊಂದಿದ್ದು, ಎಡಭಾಗದ ಮೂರನೆಯ ಶಾಖೆಯು ಪದ್ಮಗಳಿಂದ ಕೂಡಿದೆ. ಈ ಶಾಖೆಯು ಲಲಾಟಬಿಂಬದಲ್ಲಿ ಹರಡಿದ್ದು, ಮಧ್ಯ ಗಜಲಕ್ಷ್ಮಿ ಶಿಲ್ಪವಿದೆ. ಉತ್ತರಾಂಗದಲ್ಲಿ ಬಳ್ಳಿಯಾಕಾರದಿಂದ ಕೂಡಿದ ಕಮಾನಿನ ಅಲಂಕಾರವಿದೆ. ಹಾಗೆಯೇ ಪೇದ್ಯಭಾಗದಲ್ಲಿ ಸ್ತ್ರೀಯರ ಮತ್ತು ದ್ವಾರಪಾಲಕರ ಶಿಲ್ಪಗಳಿದ್ದು, ಇವುಗಳನ್ನು ಅಲಂಕಾರಯುಕ್ತ ಗೂಡುಗಳಲ್ಲಿ ಇಡಲಾಗಿದೆ. ಇದರ ಮುಂಭಾಗದಲ್ಲಿ ಆಧುನಿಕವಾಗಿ ನಿರ್ಮಿಸಿದ ಮುಖಮಂಟಪವಿದೆ.[೫೭]

೨. ಜೈನ ಬಸದಿ

ಗ್ರಾಮ	: ಅಣ್ಣಿಗೇರಿ	**ಸ್ಥಳ**	: ಗ್ರಾಮದ ಮಧ್ಯದಲ್ಲಿ
ತಾಲೂಕು	: ನವಲಗುಂದ	**ಕಾಲ**	: ೧೨ನೇ ಶತಮಾನ
ಶೈಲಿ	: ಕದಂಬನಾಗರ	**ವಸ್ತು**	: ಕಪ್ಪುಶಿಲೆ

ನವಲಗುಂದಿಂದ ದಕ್ಷಿಣಕ್ಕೆ ೧೯ ಕಿ.ಮೀ. ದೂರದಲ್ಲಿ ಈ ಬಸದಿ ಇದೆ. ಪೂರ್ವಾಭಿಮುಖವಾಗಿರುವ ಈ ಬಸದಿ ಗರ್ಭಗೃಹ, ಅಂತರಾಳ, ನವರಂಗ, ಸಭಾಮಂಟಪ ಹಾಗೂ ಮುಖಮಂಟಪಗಳನ್ನು ಒಳಗೊಂಡಿದೆ. ಗರ್ಭಗೃಹ ಚೌಕಾಕಾರವಾಗಿದ್ದು, ಮಧ್ಯದಲ್ಲಿ ಪಾರ್ಶ್ವನಾಥನ ಶಿಲ್ಪವಿದೆ. ಅಂತರಾಳ ಮತ್ತು ನವರಂಗಕ್ಕೆ ಹೊಂದಿಕೊಂಡಂತೆ ಸಭಾಮಂಟಪವಿದೆ. ಇದು ಹನ್ನೆರಡು ಅರೆಗಂಬಗಳನ್ನು ಮತ್ತು ಮಧ್ಯ ನಾಲ್ಕು ಸ್ತಂಭಗಳಿಂದ ಕೂಡಿದ್ದು, ಮಧ್ಯ ಸ್ತಂಭಗಳು, ಪೀಠ, ವೃತ್ತಾಕಾರದ ಪಟ್ಟಿಕೆಗಳು, ಘಂಟಾಕಾರ, ಕಲಶ, ಫಲಕ ಮತ್ತು ಸರಳಬೋಧಿಗೆಯಲ್ಲಿವೆ. ಅಲ್ಲದೆ ಸುತ್ತಲಿನ ೧೨ ಅರೆಗಂಬಗಳೂ ಸಹ ಪೀಠ, ಬಹುಮುಖ ದಿಂಡು, ಫಲಕ ಮತ್ತು ಸರಳಬೋಧಿಗೆಗಳಿಂದ ಕೂಡಿವೆ. ಸಭಾಮಂಟಪಕ್ಕೆ ಪೂರ್ವ, ಉತ್ತರ ಮತ್ತು ದಕ್ಷಿಣ ದಿಕ್ಕುಗಳಿಂದ ಮೂರು ಪ್ರವೇಶ ದ್ವಾರಗಳಿದ್ದು, ಈ ಎಲ್ಲಾ ಪ್ರವೇಶದ್ವಾರಗಳಿಗೂ ಮುಖಮಂಟಪಗಳು ಕಂಡುಬರುತ್ತದೆ. ಈ ಬಸದಿಗೆ ಪೂರ್ವದಿಕ್ಕೇ ಮುಖ್ಯ ಪ್ರವೇಶದ್ವಾರವಾಗಿದೆ. ಇವುಗಳ ದ್ವಾರಬಂಧ ಸರಳತೆಯಿಂದ ಕೂಡಿವೆ. ಜೊತೆಗೆ ಲಲಾಟದಲ್ಲಿ ಜೀನಬಿಂಬವನ್ನು ಕಾಣುತ್ತೇವೆ. ಈ ಮುಖಮಂಟಪದ ಮುಂಭಾಗದಲ್ಲಿ ಸೋಪಾನ ಮತ್ತು ತಾಳವಾರವಿದೆ. ಅಲ್ಲದೇ ಉತ್ತರ ಮತ್ತು ದಕ್ಷಿಣ ದಿಕ್ಕಿನ ಪ್ರವೇಶದ್ವಾರಗಳು ಪಂಚಶಾಖೆಗಳಿಂದ ಕೂಡಿವೆ. ಹಾಗೆಯೇ ಲಲಾಟಪಟ್ಟಿಕೆಯ ಬದಿಯಲ್ಲಿ ಬಾಳೆದಿಂಡಿನ ಅಲಂಕರಣೆ ಇದ್ದು, ದ್ವಾರಬಂಧದ ಮೇಲೆ ಕಪೋತ ಇದೆ. ಈ ಎಲ್ಲಾ ಮುಖಮಂಟಪಗಳು ಆಯತಾಕಾರ ಮತ್ತು ಅಷ್ಟಮುಖಗಳ ಸ್ತಂಭಗಳಿಂದ ಕೂಡಿದೆ. ಜೊತೆಗೆ ಮಂಟಪಗಳಿಗೂ ಸೋಪಾನ ಮತ್ತು ತಾಳವಾರಗಳಿವೆ. ಅಲ್ಲದೇ ಪ್ರತಿ ಮುಖಮಂಟಪಕ್ಕೂ ಕಕ್ಷಾಸನ ಕಂಡು ಬರುತ್ತದೆ.

ದೇವಾಲಯದ ಹೊರಭಾಗ ಅಧಿಷ್ಠಾನ, ಭಿತ್ತಿಯನ್ನೊಳಗೊಂಡಿದ್ದು, ಜೀರ್ಣೋದ್ಧಾರಗೊಂಡಿದೆ. ಆದರೆ ಸಭಾಮಂಟಪ ಮತ್ತು ಮುಖಮಂಟಪದ ಅಧಿಷ್ಠಾನ ಮೂಲ ಸ್ವರೂಪದಲ್ಲಿದೆ. ಇನ್ನು ಗರ್ಭಗೃಹದ ಮೇಲೆ ಕದಂಬ ನಾಗರ ಶಿಖರವಿದೆ. ಪ್ರತಿ ಅರ್ಧಮಂಟಪದ ಮೇಲೆಯೂ ಗೋಪುರಗಳನ್ನು ಕಾಣುತ್ತೇವೆ.[೫೮]

೩. ದೊಡ್ಡೇಶ್ವರ ದೇವಾಲಯ

ಗ್ರಾಮ : ಅದರಗುಂಚಿ	**ಸ್ಥಳ** : ಊರ ಮಧ್ಯೆ
ತಾಲೂಕು : ಹುಬ್ಬಳ್ಳಿ	**ಕಾಲ** : ೧೨ನೇ ಶತಮಾನ
ಶೈಲಿ : ಕಲ್ಯಾಣ ಚಾಲುಕ್ಯ	**ವಸ್ತು** : ಕಪ್ಪುಶಿಲೆ

ಹುಬ್ಬಳ್ಳಿಯಿಂದ ಆಗ್ನೇಯಕ್ಕೆ ೯ ಕಿ.ಮೀ. ದೂರದಲ್ಲಿ ದೊಡ್ಡೇಶ್ವರ ದೇವಾಲಯವಿದೆ. ದಕ್ಷಿಣಾಭಿಮುಖವಾಗಿರುವ ಈ ದೇವಾಲಯ ಗರ್ಭಗೃಹ, ಅಂತರಾಳ ಮತ್ತು ಸಭಾಮಂಟಪವನ್ನು ಹೊಂದಿದೆ. ಗರ್ಭಗೃಹ ಚೌಕಾಕಾರದಿಂದ ಕೂಡಿದ್ದು, ಸಿಂಹಲಾಂಛನವಿರುವ ಪೀಠದ ಮೇಲೆ ಪದ್ಮಾಸನದಲ್ಲಿ ಕುಳಿತ ಮಹಾವೀರನ ಶಿಲ್ಪವಿದೆ. ಈ ಪೀಠದಲ್ಲಿ ಮೂರು ಸಿಂಹಗಳು ಕಂಡುಬರುತ್ತವೆ. ಪ್ರವೇಶದ್ವಾರವು ಸರಳತೆಯಿಂದ ಕೂಡಿದ್ದು, ಮಧ್ಯದಲ್ಲಿ ನಿಂತಿರುವ ಗಣಪತಿಯ ಶಿಲ್ಪವಿದೆ. ಇದಕ್ಕೆ ಹೊಂದಿಕೊಂಡಂತೆ ಅಂತರಾಳವಿದೆ. ಇದರ ಪ್ರವೇಶದ್ವಾರವು ಮರದಿಂದ ಕೂಡಿದ್ದು, ಅಲ್ಲಿ ಸೂಕ್ಷ್ಮ ರೀತಿಯ ಅಲಂಕರಣೆಗಳಿವೆ. ಲಲಾಟಬಿಂಬದಲ್ಲಿ ಗಣಪತಿ, ಶಿವಪಾರ್ವತಿ ಮತ್ತು ಅವರ ವಾಹನಗಳನ್ನು ಬಿಂಬಿಸಲಾಗಿದೆ. ಇದಕ್ಕೆ ಹೊಂದಿಕೊಂಡಂತೆ ಸಭಾಮಂಟಪವಿದ್ದು, ಮುಂಭಾಗದಲ್ಲಿ ಕಮಾನುಗಳ ರೀತಿಯಲ್ಲಿ ಅಲಂಕರಣೆ ಮಾಡಲಾಗಿದೆ. ಗರ್ಭಗೃಹದಲ್ಲಿ ನೈರುತ್ಯ ಮೂಲೆಯಲ್ಲಿ ದೊಡ್ಡ ಲಿಂಗವನ್ನು ಪ್ರತಿಷ್ಠಾಪಿಸಿದ್ದು, ಪೂರ್ವಕ್ಕೆ ಬಾಗಿಲನ್ನು ಮಾಡಲಾಗಿದೆ. ಈ ಲಿಂಗಕ್ಕೆ ಅಭಿಮುಖವಾಗಿ ನಂದಿಯ ಶಿಲ್ಪವಿದೆ.[೫೯]

೪. ಶಾಂತಿನಾಥ ಬಸದಿ

ಗ್ರಾಮ : ಛಬ್ಬಿ	**ಸ್ಥಳ** : ಊರ ಮಧ್ಯ
ತಾಲೂಕು : ಹುಬ್ಬಳ್ಳಿ	**ಕಾಲ** : ೧೨ನೇ ಶತಮಾನ
ಶೈಲಿ : ಕಲ್ಯಾಣ ಚಾಲುಕ್ಯ	**ವಸ್ತು** : ಕಪ್ಪುಶಿಲೆ

ಹುಬ್ಬಳ್ಳಿಯಿಂದ ಆಗ್ನೇಯಕ್ಕೆ ೧೬ ಕಿ.ಮೀ. ದೂರದಲ್ಲಿ ಶಾಂತಿನಾಥ ಬಸದಿ ಇದೆ. ಈ ಬಸದಿಯು ಪೂರ್ವಾಭಿಮುಖವಾಗಿದ್ದು, ಗರ್ಭಗೃಹ, ಸಭಾಮಂಟಪ ಮತ್ತು ಮುಖಮಂಟಪವನ್ನು ಹೊಂದಿದೆ. ಅಲ್ಲದೇ ಇದು ದಿಗಂಬರ ಪಂಥಕ್ಕೆ ಸೇರಿದ್ದಾಗಿದೆ. ಗರ್ಭಗೃಹವು ಚೌಕಾಕಾರವಾಗಿದ್ದು, ಶಾಂತಿನಾಥನ ಮೂರ್ತಿ ಇದೆ. ಅಕ್ಕ-ಪಕ್ಕದಲ್ಲಿ ಮೂರು ತೀರ್ಥಂಕರ ಶಿಲ್ಪಗಳು ಕಂಡುಬರುತ್ತವೆ. ಬಸದಿಯು ಜೀರ್ಣೋದ್ಧಾರಗೊಂಡಿವೆ.[೬೦]

೫.೫. ಶಾಕ್ತ ದೇವಾಲಯಗಳು

೧. ಬನಶಂಕರಿ ದೇವಾಲಯ

ಗ್ರಾಮ	: ಅಮರಗೋಳ	ಸ್ಥಳ	: ಗ್ರಾಮ ಮಧ್ಯದಲ್ಲಿ
ತಾಲೂಕು	: ಹುಬ್ಬಳ್ಳಿ	ಕಾಲ	: ೧೨ನೇ ಶತಮಾನ
ಶೈಲಿ	: ದ್ರಾವಿಡ ಮತ್ತು ನಾಗರ	ವಸ್ತು	: ಹಳದಿ, ಕೆಂಪು, ಮರಳುಶಿಲೆ

ಹುಬ್ಬಳ್ಳಿಯಿಂದ ವಾಯುವ್ಯಕ್ಕೆ ೧೨ ಕಿ.ಮೀ. ದೂರದಲ್ಲಿ ಬನಶಂಕರಿ ದೇವಾಲಯವಿದೆ. ಪೂರ್ವಾಭಿಮುಖವಾಗಿರುವ ಈ ದೇವಾಲಯ ದ್ವಿಕೂಟ ಮಾದರಿಯಲ್ಲಿದೆ. ಗರ್ಭಗೃಹ ಚೌಕಾಕಾರವಾಗಿದ್ದು, ಮಧ್ಯದಲ್ಲಿ ಬನಶಂಕರಿ ಶಿಲ್ಪವಿದೆ. ಇದರ ಪ್ರವೇಶದ್ವಾರವು ಆರು ಶಾಖೆಗಳಿಂದ ಕೂಡಿದ್ದು, ಲಲಾಟಬಿಂಬದಲ್ಲಿ ಗಜಲಕ್ಷ್ಮಿಯ ಶಿಲ್ಪವಿದೆ. ದಕ್ಷಿಣ ಮುಖವಾಗಿರುವ ಗರ್ಭಗೃಹ ಚೌಕಾಕಾರವಾಗಿದ್ದು, ಮಧ್ಯದಲ್ಲಿ ಶಿವಲಿಂಗವಿದೆ. ಇದರ ಪ್ರವೇಶ ದ್ವಾರವೂ ಸಹ ಆರು ಶಾಖೆಗಳಿಂದ ಕೂಡಿದೆ. ಲಲಾಟಬಿಂಬದಲ್ಲಿ ಅಲಂಕಾರವಿಲ್ಲದೆ ಸಪಾಟಾಗಿದೆ. ಎರಡೂ ಗರ್ಭಗೃಹಗಳ ಮುಂಭಾಗದಲ್ಲಿ ಅಂತರಾಳಗಳಿದ್ದು, ಇದಕ್ಕೆ ಹೊಂದಿಕೊಂಡಂತೆ ಸಭಾಮಂಟಪವಿದೆ. ಸಭಾಮಂಟಪದಲ್ಲಿ ನಾಲ್ಕು ಸ್ಥಂಬಗಳಿದ್ದು, ಇವು ಕಲ್ಯಾಣ ಚಾಲುಕ್ಯರ ಶೈಲಿಯಲ್ಲಿವೆ. ಅಲ್ಲದೇ ಈ ಸ್ತಂಭಗಳು ಪೀಠ, ಪಾದ, ವೃತ್ತಾಕಾರದ ಎರಡು ಪಟ್ಟಿಕೆಗಳು, ಚೌಕ, ಕಲಶ, ಫಲಕ ಮತ್ತು ಸರಳಬೋಧಿಗೆಯಿಂದ ಕೂಡಿವೆ. ಕಂಬಗಳಲ್ಲಿ ನಟರಾಜ, ಬ್ರಹ್ಮ, ಶಿವ, ಗಣೇಶ, ಭೂ ವರಾಹ, ನಾಟ್ಯ ಚಾಮುಂಡಿ, ವಿಷ್ಣು, ಭೈರವ, ದುರ್ಗಾ, ಲಕ್ಷ್ಮಿ ಇನ್ನೂ ಮುಂತಾದ ಶಿಲ್ಪಗಳಿವೆ.

ದೇವಾಲಯದ ಹೊರಭಾಗದ ಅಧಿಷ್ಠಾನವು ಖುರಕ, ಪದ್ಮದಲ, ಕುಮುದ, ಕಪೋತ ಮತ್ತು ಮಕರಪಟ್ಟಿಕೆಗಳಿಂದ ಕೂಡಿದೆ. ಜಂಘಾ ಭಾಗವು ಭದ್ರ, ಉಪಭದ್ರ, ಕರ್ಣ, ಕುಡ್ಯಸ್ತಂಭ, ಕೂಟಸ್ತಂಭ, ಕೋಷ್ಠಪಂಜರವನ್ನು ಒಳಗೊಂಡಿದೆ.

ನಂತರದಲ್ಲಿ ಸೇರಿಸಲಾಗಿರುವ ಉತ್ತರ ಅಂತರಾಳ ಹಾಗೂ ಗರ್ಭಗೃಹಗಳು ಅಧಿಷ್ಠಾನದಲ್ಲಿ ಕುಂಭ, ಕಲಶದಂತಿರುವ ವೃತ್ತಕುಮುದ, ನಾಸಿಗಳುಳ್ಳ ಕಪೋತವಿದೆ. ಮತ್ತು ಜಂಘಾ ಭಾಗದಲ್ಲಿ ವಿಶಾಲ ರಥ-ಪ್ರತಿರಥ ಇವೆ. ಆದರೆ ಕುಡ್ಯಸ್ತಂಭಗಳಿಲ್ಲ. ಹಾರದಂತೆ ಕಾಣುವ ಭಾಗದಲ್ಲಿ ಲತಿನಶಿಖರಗಳ ಸಾಲು ಇದೆ. ಮೂಲ ದೇವಾಲಯದ ಮೂರು ಗೋಡೆಗಳಲ್ಲಿ ಅಲಂಕೃತವಾದ ದೇವಕೋಷ್ಠಗಳಿದ್ದು, ತೋರಣಗಳಿಂದ ಕೂಡಿದೆ. ಮುಖ್ಯವಾಗಿ ಕರ್ನಾಟಕ ದ್ರಾವಿಡ ಮತ್ತು ನಾಗರ ಶೈಲಿಯನ್ನು ಬೆಸೆಯುವಂತೆ ಮಾಡಿರುವುದು ಗಮನಾರ್ಹ.[೬೧]

೨. ಬನಶಂಕರಿ ದೇವಾಲಯ

ಗ್ರಾಮ	: ಅಣ್ಣಿಗೇರಿ	ಸ್ಥಳ	: ಗ್ರಾಮ ಹೊರಭಾಗದಲ್ಲಿ
ತಾಲೂಕು	: ನವಲಗುಂದ,	ಕಾಲ	: ೧೨ನೇ ಶತಮಾನ
ಶೈಲಿ	: ಕಲ್ಯಾಣ ಚಾಲುಕ್ಯ	ವಸ್ತು	: ಕಪ್ಪುಶಿಲೆ


ನವಲಗುಂದದಿಂದ ದಕ್ಷಿಣಕ್ಕೆ ೧೯ ಕಿ.ಮೀ. ದೂರದಲ್ಲಿ ಈ ದೇವಾಲಯವಿದೆ. ಪೂರ್ವಾಭಿಮುಖವಾಗಿರುವ ಈ ದೇವಾಲಯವು ತ್ರಿಕುಟಾಚಲ ಮಾದರಿಯಲ್ಲಿದೆ. ಈ ದೇವಾಲಯದ ತಳವಿನ್ಯಾಸ ಗರ್ಭಗೃಹ, ಅಂತರಾಳ ಮತ್ತು ನವರಂಗ ಹೊಂದಿದೆ. ಗರ್ಭಗೃಹವು ಚೌಕಾಕಾರವಾಗಿದ್ದು, ಪೀಠದ ಮೇಲೆ ಬನಶಂಕರಿಯ ಶಿಲ್ಪವನ್ನು ಪ್ರತಿಷ್ಠಾಪಿಸಲಾಗಿದೆ. ಮೂಲತಃ ಈ ಪೀಠವು ಶಿವಲಿಂಗ ಪೀಠವಾಗಿದ್ದಿರಬಹುದು. ಪ್ರವೇಶದ್ವಾರವು ಪಂಚಶಾಖೆಗಳಿಂದ ಕೂಡಿದ್ದು, ಉಬ್ಬಿದ ಲಲಾಟಬಿಂಬದಲ್ಲಿ ಗಜಲಕ್ಷ್ಮಿ ಪದ್ಮಾಸನದಲ್ಲಿದೆ. ಲಲಾಟದ ಬದಿಗಳಲ್ಲಿ ಬಾಳೆದಿಂಡಿನ ಅಲಂಕರಣೆಗಳು ಮೇಲಿನ ಉತ್ತರಾಂಗದ ಕಪೋತ ಪಟ್ಟಿಯಿಂದ ಇಳಿಬಿದ್ದಿದೆ. ಈ ರೀತಿಯ ಲಕ್ಷಣಗಳು ವಿರಳವಾಗಿ ಕಾಣುತ್ತೇವೆ. ಹಾಗೆಯೇ ಗರ್ಭಗೃಹದ ಭುವನೇಶ್ವರಿಯಲ್ಲಿ ಅರಳಿದ ಒಂಬತ್ತು ಪದ್ಮದ ಅಲಂಕರಣೆಯಿದೆ. ಇದಕ್ಕೆ ಹೊಂದಿಕೊಂಡಂತೆ ಅಂತರಾಳವಿದ್ದು, ತ್ರಿಶಾಖೆಗಳಿಂದ ಕೂಡಿದೆ. ಹಾಗೆಯೇ ದ್ವಾರಬಂಧದ ಇಕ್ಕೆಲಗಳಲ್ಲಿ ನಾಲ್ಕು ಸಾಲಿನ ಜಾಲಾಂಧ್ರಗಳಿದ್ದು, ಮಧ್ಯ ಪಟ್ಟಿಕೆಗಳಲ್ಲಿ ಪದ್ಮಗಳ ಅಲಂಕರಣೆಯಿದೆ. ದ್ವಾರಬಂಧ ಮತ್ತು ಜಾಲಾಂಧ್ರಗಳಿಗೆ ಹೊಂದಿಕೊಂಡಂತೆ ಅರೆಗಂಬಗಳಿದ್ದು, ಮೇಲ್ಭಾಗದಲ್ಲಿ ಮಕರ ತೋರಣವಿದೆ. ಮಧ್ಯ ಬ್ರಹ್ಮ, ವಿಷ್ಣು ಮತ್ತು ಮಹೇಶ್ವರನ ಮೂರ್ತಿಶಿಲ್ಪಗಳಿವೆ.

ಉತ್ತರ ಮತ್ತು ದಕ್ಷಿಣ ದಿಕ್ಕಿನ ಗರ್ಭಗೃಹಗಳು ಚೌಕಾಕಾರವಾಗಿದ್ದು, ನಾಲ್ಕು ಚೌಕ ಮೂಲೆಗಂಬಗಳಿವೆ. ಉತ್ತರ ದಿಕ್ಕಿನ ಗರ್ಭಗೃಹದ ಪ್ರವೇಶದ್ವಾರ ತ್ರಿಶಾಖಾಲಂಕಾರದಿಂದ ಕೂಡಿದ್ದು, ಲಲಾಟಪಟ್ಟಿಕೆಯಲ್ಲಿ ಗಜಲಕ್ಷ್ಮಿ ಶಿಲ್ಪವಿದೆ. ಹಾಗೆಯೇ ದಕ್ಷಿಣ ದಿಕ್ಕಿನ ಪ್ರವೇಶದ್ವಾರ ಪಂಚಶಾಖೆಗಳಿಂದ ಕೂಡಿದೆ. ಹಾಗೂ ಇದರ ಶಾಖೆಗಳು ಸರಳವಾಗಿವೆ. ಮೂರು ಗರ್ಭಗೃಹಗಳಿಗೆ ಹೊಂದಿಕೊಂಡಂತೆ ಒಂದೇ ನವರಂಗವಿದ್ದು, ಭಿತ್ತಿಯಲ್ಲಿ ಹನ್ನೆರಡು ಅರೆಗಂಭಗಳು ಮತ್ತು ಮಧ್ಯೆದಲ್ಲಿ ನಾಲ್ಕು ಸ್ತಂಭಗಳು ಇವೆ. ಸ್ತಂಭಗಳು ಪೀಠ, ಕಾಂಡದಲ್ಲಿ ಚೌಕ, ಬಳೆಗಳಾಕಾರ, ಘಂಟಾಕಾರ ಕಲಶ, ಫಲಕ ಮತ್ತು ಬೋಧಿಗೆಯನ್ನು ಹೊಂದಿವೆ. ನವರಂಗದಲ್ಲಿ ಪ್ರವೇಶದ್ವಾರವು ತ್ರಿಶಾಖಾಲಂಕಾರದಿಂದ ಕೂಡಿದ್ದು, ಮೇಲೆ ಸರಳ ಲಲಾಟ ಪಟ್ಟಿಕೆಯಿದೆ. ಮತ್ತೆ ಎರಡು ದೇವಕೋಷ್ಠಗಳಿದ್ದು, ಇಲ್ಲಿ ಯಾವುದೇ ಶಿಲ್ಪಗಳು ಕಂಡುಬರುವುದಿಲ್ಲ. ಆದರೆ ಈ ದೇವಕೋಷ್ಠಕಗಳು ದ್ರಾವಿಡ ದ್ವಿತಲ ವಿಮಾನವನ್ನು ಹೊಂದಿದೆ.

ದೇವಾಲಯದ ಊರ್ಧ್ವಭಾಗದಲ್ಲಿ ಅಧಿಷ್ಠಾನ ಇದ್ದು, ಈ ಅಧಿಷ್ಠಾನ ಉಪಾನ, ಜಗತಿ, ಪದ್ಮ, ಚೂಪು ಕುಮುದ ಒಳಗೊಂಡಿದೆ. ಭಿತ್ತಿಯ ಹೊರಭಾಗ ಸಂಪೂರ್ಣ ಪಾಳುಬಿದ್ದಿದೆ. ಮೂರು ಗರ್ಭಗೃಹಗಳಿಗೆ ಮೂರು ಅಂತರಾಳ ಮತ್ತು ನವರಂಗ ಮೇಲೆ ಒಟ್ಟು ಐದು ಆಧುನಿಕ ಶಿಖರಗಳಿದ್ದು, ಅವು ಇತ್ತೀಚಿಗೆ ಜೀರ್ಣೋದ್ಧಾರವಾಗಿವೆ.[೨]

ಒಟ್ಟಾರೆ ಇರುವ ಶೈವದೇವಾಲಯ, ವೈಷ್ಣವ ದೇವಾಲಯ, ಶಾಕ್ತ ದೇವಾಲಯಗಳು ಮತ್ತು ಜೈನ ಬಸದಿಗಳ ಪಟ್ಟಿಯನ್ನು ಅನುಬಂಧದಲ್ಲಿ ನೀಡಲಾಗಿದ್ದು, ಇವು ಶೈವ, ವೈಷ್ಣವ, ಶಾಕ್ತ, ಜೈನ ಪಂಥಗಳ ಅಸ್ತಿತ್ವಕ್ಕೆ ಸಾಕ್ಷಿಯಾಗಿವೆ. ದಾಕ್ಷಿಣಾತ್ಯ, ನಾಗರ, ಕದಂಬನಾಗರ ಶಿಖರಗಳು ಇಲ್ಲಿ ಹೆಚ್ಚಾಗಿ ಕಂಡು ಬರುತ್ತವೆ. ಉಣಕಲ್ಲಿನ ಚಂದ್ರಮೌಳೇಶ್ವರ ದೇವಾಲಯ ಸರ್ವತೋಭದ್ರ ಮಾದರಿಯಲ್ಲಿದೆ. ಸಭಾಮಂಟಪದ ದ್ವಾರಬಾಗಿಲುಗಳಲ್ಲಿ ಪಂಚಶಾಖೆಗಳಿರುವುದು ಸಾಮಾನ್ಯ ಲಕ್ಷಣಗಳಾಗಿವೆ. ಮೂರು ಮತ್ತು ನವಶಾಖೆ ದ್ವಾರಬಂಧಗಳು ಅತೀ ಕಡಿಮೆ ಪ್ರಮಾಣದಲ್ಲಿ ಕಾಣಸಿಗುತ್ತವೆ.

ಶಾಸನೋಕ್ತ ದೇವಾಲಯಗಳು



ದೇವಾಲಯಗಳ ವೈವಿಧ್ಯತೆ

ಶೈವ ದೇವಾಲಯಗಳು	:	೬೮
ವೈಷ್ಣವ ದೇವಾಲಯಗಳು	:	೦೫
ಜೈನ ಬಸದಿಗಳು	:	೨೨
ಶಾಕ್ತ ದೇವಾಲಯಗಳು	:	೦೩

ಅಡಿಟಿಪ್ಪಣಿಗಳು

೧. ರಾಮಚಂದ್ರರಾವ್ ಎಸ್.ಕೆ., ಗುಡಿ ಜನರ ಜೀವನಾಡಿ, ೧೯೯೪, ಪು. ೧.

೨. ಚಿದಾನಂದಮೂರ್ತಿ ಎಂ., ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ, ೧೯೭೯, ಪು. ೧೭೫-೧೭೬.

೩. ರಾಮಯ್ಯಂಗಾರ್ ಎಚ್.ಕೆ., ಕೆಲವು ಧಾರ್ಮಿಕ ಕರ್ತವ್ಯಗಳು, ೧೯೯೯, ಪು. ೭೭-೮೦.

೪. ಅಪರ್ಣಾ ಕೂ.ಸ., ದೇವಾಲಯ ವಾಸ್ತುಶಿಲ್ಪ, ೧೯೯೯, ಪು. ೧.

೫. ಢಾಕೆ ಎಂ.ಎ. ಅವರು ೧೯೧೭, ಈ ಮಾಹಿತಿಯನ್ನು ಮೊದಲು ಬೆಳಕಿಗೆ (Indian Temple forms in Karnataka Inscription) ತಂದಿದ್ದಾರೆ. ತರುವಾಯ ಪ್ರಭಾಕರ ಎಂ.ಎನ್. (ದೇವಾಲಯ ವಾಸ್ತು ಚಂದ್ರಿಕೆ, ೨೦೦೦) ಮೊದಲಾದವರು ಈ ದಿಶೆಯಲ್ಲಿ ಮತ್ತಷ್ಟು ಮಾಹಿತಿಗಳನ್ನು ಸಂಗ್ರಹಿಸಿದ್ದಾರೆ.

೬ ಅದೇ. ಪು. ೧೨.

೭ ಕರ್ಮವೀರ ವಾರಪತ್ರಿಕೆ (ಫೆಬ್ರವರಿ-೧), ೨೦೦೧, ಪು. ೬೯.

೮. ಸುಂದರ ಅ. (ಸಂ), ಕರ್ನಾಟಕ ಚರಿತ್ರೆ, ಸಂ. ೧, ೧೯೯೭, ಪು. ೩೧೪.

೯. ಅಪರ್ಣಾ ಕೂ.ಸ., ಪೂರ್ವೋಕ್ತ, ಪು. ೪.

೧೦. ರಘುನಾಥಭಟ್ ಎಚ್.ಎಸ್., ಪ್ರಾಚೀನ ಕರ್ನಾಟಕ ವಾಸ್ತುಶಿಲ್ಪ ಕಲೆ, ಕನಕಸಿರಿ (ಕನಕಪುರದಲ್ಲಿ ಜರುಗಿದ ೬೭ನೆಯ ಕನ್ನಡ ಸಾಹಿತ್ಯ ಸಮ್ಮೇಳನದ ಸಂಸ್ಕರಣ ಸಂಚಿಕೆ-೧೯೯೯), ಪು. ೫೬೪.

೧೧. ನಾಯಕ ಹಾ.ಮಾ.(ಸಂ), ಕನ್ನಡ ವಿಷಯ ವಿಶ್ವಕೋಶ, ಇತಿಹಾಸ ಮತ್ತು ಪುರಾತತ್ವ, ಕುವೆಂಪು ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾಲಯ, ೨೦೦೯, ಪು. ೯೪೫.

೧೨. ಪ್ರಭಾಕರ ಎಂ.ಎನ್., ದೇವಾಲಯ ವಾಸ್ತುಚಂದ್ರಿಕೆ, ೨೦೦೦, ಪು. ೪೧-೪೨.

೧೩. ಢಾಕೆ. ಎಂ.ಎ., ಪೂರ್ವೋಕ್ತ, ಪು. ೧೪.

೧೪. ಅಪರ್ಣಾ ಕೂ.ಸ., ಪೂರ್ವೋಕ್ತ, ಪು. ೬೭.

೧೫. ನಾಯಕ ಹಾ.ಮಾ.(ಸಂ), ಪೂರ್ವೋಕ್ತ, ಪು. ೯೫೦.

೧೬. ಢಾಕೆ. ಎಂ.ಎ., ಪೂರ್ವೋಕ್ತ, ಪು. ೨೧.

೧೭. ಅದೇ., ಪು. ೨೨.

೧೮. ಕಡಪಟ್ಟಿ ಎಂ.ಎನ್., ಪ್ರಾಚೀನ ಕರ್ನಾಟಕದಲ್ಲಿ ಶೈವಧರ್ಮ(ಅಪ್ರಕಟಿತ ಪಿಎಚ್.ಡಿ. ಮಹಾಪ್ರಬಂಧ), ೨೦೦೫, ಪ್ರಾಚೀನ ಇತಿಹಾಸ ಮತ್ತು ಶಾಸನಶಾಸ್ತ್ರ ವಿಜ್ಞಾನ ವಿಭಾಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ಪು. ೧೧-೩೨.

೧೯. ಅದೇ. ಪು. ೩೭.

೨೦. ಮಹದೇವ ಸಿ., ಕರ್ನಾಟಕ ದೇವಾಲಯ ಕೋಶ–ಧಾರವಾಡ ಜಿಲ್ಲೆ, ೨೦೦೬, ಪು. ೪೬.

೨೧. ಜಯಮ್ಮ ಬಿ., ಧಾರವಾಡ ಜಿಲ್ಲೆಯ ಪುರಾತತ್ವ, ೨೦೧೦, ಪು. ೧೨೨–೧೨೩.

೨೨. ಢಾಕೆ ಎಂ.ಎ., ಎನ್‌ಸೈಕ್ಲೋಪಿಡಿಯಾ ಆಫ್ ಇಂಡಿಯನ್ ಟೆಂಪಲ್ ಆರ್ಕ್ವಿಟೆಕ್ಚರ್ ಸೌತ್ ಇಂಡಿಯಾ ಅಪ್ಪರ್ ದ್ರಾವಿಡದಾಸ್ ಲೆಟರ್‌ಫೇಸ್, ೧೯೯೬, ಪು. ೪೫೯.

೨೩. ಜಯಮ್ಮ ಬಿ., ಪೂರ್ವೋಕ್ತ, ಪು. ೧೨೩.

೨೪. ಗೆರಾಲ್ಡ್, ಚಾಲುಕ್ಯ ಆರ್ಕಿಟೆಕ್ಚರ್, ೨೦೦೩, ಪು. ೪೨೬.

೨೫. ಗೆರಾಲ್ಡ್, ಪೂರ್ವೋಕ್ತ, ಪು. ೪೫೯.

೨೬. ಢಾಕೆ ಎಂ.ಎ., ಪೂರ್ವೋಕ್ತ, ಪು. ೧೧೦.

೨೭. ಸುರೇಶ ಕರಿಬಸಪ್ಪ ಹಾನಗಲ್ಲ, ಹುಬ್ಬಳ್ಳಿ ತಾಲೂಕಿನ ಶಾಸನಗಳು ಮತ್ತು ದೇವಾಲಯಗಳು (ಅಪ್ರಕಟಿತ ಎಂ.ಫಿಲ್. ಪ್ರಬಂಧ), ೨೦೧೦, ಶಾಸನಶಾಸ್ತ್ರ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ಪು. ೯೮.

೨೮. ಮಹದೇವ ಸಿ., ಪೂರ್ವೋಕ್ತ, ಪು. ೬೩.

೨೯. ಗೆರಾಲ್ಡ್, ಪೂರ್ವೋಕ್ತ, ಪು. ૩૫೦.

೩೦. ಢಾಕೆ ಎಂ.ಎ., ಪೂರ್ವೋಕ್ತ, ಪು. ೬೩.

೩೧. ಶಾಂತಕುಮಾರಿ ಎಸ್.ಎಲ್., ಕಾಮಧೇನು ಒಂದು ಅಧ್ಯಯನ, ಕರ್ನಾಟಕ ಭಾರತಿ, ಸಂಪುಟ ೨೨, ಸಂಚಿಕೆ ೧ ಮತ್ತು ೨ ,೧೯೮೯, ಪು. ೧೩೩.

೩೨. ಜಯಮ್ಮ ಬಿ., ಪೂರ್ವೋಕ್ತ, ೨೦೦೬, ಪು. ೧೫೧

೩೩. ಅದೇ. ಪು. ೧೫೩-೧೫೫

೩೪. ಅದೇ. ಪು. ೧೫೫-೧೫೬.

೩೫. ಮಹದೇವ ಸಿ., ಪೂರ್ವೋಕ್ತ, ಪು. ೧೧೮-೧೧೯.

೩೬. ಹಳ್ಳಿಕೇರಿ ಎಫ್.ಟಿ. (ಸಂ), ನಮ್ಮೂರ ನಾವಳ್ಳಿ, ೨೦೦೭, ಪು. ೧೧-೧೫.

೩೭. ಸುರೇಶ ಕರಿಬಸಪ್ಪ ಹಾನಗಲ್ಲ, ಪೂರ್ವೋಕ್ತ, ಪು. ೧೬೦.

೩೮. ಜಯಮ್ಮ ಬಿ., ಪೂರ್ವೋಕ್ತ, ಪು. ೧೬೦-೧೬೧.

೩೯. ಅದೇ. ಪೂರ್ವೋಕ್ತ, ಪು. ೧೬೨-೧೬೩.

೪೦. ಕೃಷ್ಣಾಜಿ ಗು. ನಾಡಗೀರ್, ಧಾರವಾಡ ತಾಲೂಕಿನ ಮಧ್ಯಭಾಗದ ಶಿಲ್ಪಕಲಾ ಇತಿಹಾಸ ಸಮೀಕ್ಷೆ, ಎಂ.ಎ. ಅಂತಿಮ ವರ್ಷದ ಸಂಪ್ರಬಂಧ, ೧೯೯೧-೯೨, ಪ್ರಾಚೀನ ಭಾರತೀಯ ಇತಿಹಾಸ ಮತ್ತು ಶಾಸನಶಾಸ್ತ್ರ ವಿಭಾಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ಪು. ೮೭-೮೮.

೪೧. ಜಯಮ್ಮ ಬಿ., ಪೂರ್ವೋಕ್ತ, ಪು. ೧೬೪-೧೬೫.

೪೨. ಶಕುಂತಲಾ ಎಸ್. ನಾಯಕ್, ಕುಂದಗೋಳ ಪ್ರದೇಶದ ಪುರಾತತ್ವ, ಅಪ್ರಕಟಿತ ಎಂ.ಫಿಲ್. ಪ್ರಬಂಧ, ೨೦೦೨, ಪ್ರಾಚೀನ ಭಾರತೀಯ ಇತಿಹಾಸ ಮತ್ತು ಶಾಸನಶಾಸ್ತ್ರ ವಿಭಾಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ಪು. ೨೦-೨೧.

೪೩. ಮುಳಗುಂದ ಕೆ.ಎಚ್., ಅಣ್ಣಿಗೇರಿ ಅಮೃತೇಶ್ವರ ದೇವಾಲಯ ಒಂದು ಅಧ್ಯಯನ, ಎಂ.ಎ. ಅಂತಿಮ ವರ್ಷದ ಸಂಪ್ರಬಂಧ, ೧೯೯೧-೯೨, ಪ್ರಾಚೀನ ಭಾರತೀಯ ಇತಿಹಾಸ ಮತ್ತು ಶಾಸನಶಾಸ್ತ್ರ ವಿಭಾಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ಪು. ೨೯-೩೯.

೪೪. ಮಹದೇವ ಸಿ., ಪೂರ್ವೋಕ್ತ, ಪು. ೧೬೨-೧೬೩.

೪೫. ಸುರೇಶ ಸಂ. ಮೇಟಿ, ನವಲಗುಂದ ತಾಲೂಕಿನ ಆಯ್ದು ಹದಿನೈದು ಹಳ್ಳಿಗಳ ಪುರಾತತ್ವ ಅನ್ವೇಷಣೆ, ಎಂ.ಎ. ಅಂತಿಮ ವರ್ಷದ ಸಂಪ್ರಬಂಧ, ೨೦೦೨ ಪ್ರಾಚೀನ ಭಾರತೀಯ ಇತಿಹಾಸ ಮತ್ತು ಶಾಸನಶಾಸ್ತ್ರ ವಿಭಾಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ಪು. ೭೭-೭೯.

೪೬. ಜಯಮ್ಮ ಬಿ., ಪೂರ್ವೋಕ್ತ, ಪು. ೧೭೧.

೪೭. ಮಹದೇವ ಸಿ., ಪೂರ್ವೋಕ್ತ, ಪು. ೨೫.

೪೮. ಅದೇ. ಪು. ೩೩.

೪೯. ಕೃಷ್ಣಾಜಿ ನಾಡಗೀರ್, ಪೂರ್ವೋಕ್ತ, ಪು. ೯೦-೯೧.

೫೦. ಮಹದೇವ ಸಿ., ಪೂರ್ವೋಕ್ತ, ಪು. ೯೩-೯೪.

೫೧. ಯಲ್ಲಣ್ಣ ಕೆ., ನವಲಗುಂದ ತಾಲೂಕಿನ ಶಾಸನಗಳು ಮತ್ತು ದೇವಾಲಯಗಳು(ಅಪ್ರಕಟಿತ ಎಂ.ಫಿಲ್. ಪ್ರಬಂಧ), ೨೦೦೮, ಶಾಸನಶಾಸ್ತ್ರ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ಪು. ೮೮-೮೯.

೫೨. ಮಹದೇವ ಸಿ., ಪೂರ್ವೋಕ್ತ, ಪು. ೧೭೪.

೫೩. ಢಾಕೆ ಎಂ.ಎ., ಪೂರ್ವೋಕ್ತ, ಪು. ೧೬೦.

೫೪. ಹಂಜೆ ಎ.ಎನ್., ಯರಗುಪ್ಪಿಯ ಕೇಶವದೇವಾಲಯ, ವಾಸ್ತುಶಿಲ್ಪ ಶಾಸನ, ಕರ್ನಾಟಕ ಲೋಚನ ಷಣ್ಮಾಷಿಕ ಪತ್ರಿಕೆ, ಸಂ. ೧೮, ಸಂ. ೧, ಪು. ೨೧.

೫೫. ಜಯಮ್ಮ ಬಿ., ಪೂರ್ವೋಕ್ತ, ಪು. ೧೭೩-೧೭೪.

೫೬ ಸುರೇಶ ಕರಿಬಸಪ್ಪ ಹಾನಗಲ್ಲ, ಪೂರ್ವೋಕ್ತ, ಪು. ೮೮-೮೯.

೫೭ ಜಯಮ್ಮ ಬಿ., ಪೂರ್ವೋಕ್ತ, ಪು. ೧೭೫-೧೭೬.

೫೮. ಢಾಕೆ ಎಂ.ಎ., ಪೂರ್ವೋಕ್ತ, ಪು. ೧೬೬.

೫೯. ಸುರೇಶ ಕರಿಬಸಪ್ಪ ಹಾನಗಲ್ಲ, ಪೂರ್ವೋಕ್ತ, ಪು. ೯೦-೯೧.

೬೦. ಮಹದೇವ ಸಿ., ಪೂರ್ವೋಕ್ತ, ಪು. ೧೫೯-೧೬೦.

೬೧. ಢಾಕೆ ಎಂ.ಎ., ಪೂರ್ವೋಕ್ತ, ಪು. ೧೧೦.

೬೨. ಷಡಕ್ಷರಯ್ಯ ರು.ಮ. ನವಿಲುಗರಿ, ಪು. ೨೧.

□□□

ಅಧ್ಯಾಯ ಆರು

ಮೂರ್ತಿಶಿಲ್ಪ

೬.೧ ಪೀಠಿಕೆ

ಇತಿಹಾಸ ಪೂರ್ವ ಯುಗದಿಂದಲೂ ಕರ್ನಾಟಕದಲ್ಲಿ ಮೂರ್ತಿಶಿಲ್ಪಕ್ಕೆ ಪ್ರತ್ಯೇಕವಾದ ಇತಿಹಾಸವಿದೆ. ೬೪ ಕಲೆಗಳಲ್ಲಿ ಶಿಲ್ಪಕಲೆಯೂ ಒಂದಾಗಿದ್ದು. ಈ ಪರಂಪರೆ ಪ್ರಾಚೀನ ಕಾಲದಿಂದ ಇಂದಿನವರೆಗೂ ಮುಂದುವರೆದಿದೆ.[೧] ಇಂದಿಗೂ ಮೂರ್ತಿಶಿಲ್ಪಗಳನ್ನು ಆಗಮಗಳ ಹಿನ್ನೆಲೆಯಲ್ಲಿ ಮಾಡಲಾಗುವುದು. ಒಂದು ವಾಸ್ತವಿಕ ಅಥವಾ ಕಾಲ್ಪನಿಕ ಆಕೃತಿಯನ್ನು ಯಾವುದಾದರೊಂದು ಶಿಲ್ಪವನ್ನೋ ಅಥವಾ ಲೋಹಗಳ ಮಾಧ್ಯಮದ ಮುಖಾಂತರವಾಗಿ ರಚಿಸುವ ಒಂದು ಕಲೆಯೆ ಶಿಲ್ಪ ಎಂದೂ ಹೇಳುವುದಾಗಿದೆ. ದೇವಾನುದೇವತಾ ವಿಗ್ರಹಗಳಿಗೆ ಮೂರ್ತಿಶಿಲ್ಪ ಎಂಬ ಪರ್ಯಾಯ ಪದವಾಗಿ ಬಳಕೆಯಲ್ಲಿರುವುದನ್ನು ಕಾಣುತ್ತೇವೆ.[೨]

ಶಿಲ್ಪಿಯಾದವನು ಯಾವುದೇ ಒಂದು ಮೂರ್ತಿಯನ್ನು ರಚಿಸಬೇಕಾದರೆ ಅವನಿಗೆ ಆ ಶಿಲ್ಪದ ಉದ್ದ, ಅಗಲ, ದಪ್ಪಗಳ ಮಾನಗಳ ಪರಿಚಯವಿರಬೇಕು.[೩] ಅಲೆಮಾರಿ ಜೀವನವನ್ನು ನಡೆಸುತ್ತಿದ್ದ ಮಾನವನು ಒಂದು ಕಡೆ ನೆಲೆನಿಂತಾಗ ಪ್ರಕೃತಿಯಲ್ಲಾಗುವ ಬದಲಾವಣೆಯನ್ನು ಕಂಡು ಕಣ್ಣಿಗೆ ಕಾಣದ ಯಾವುದೋ ಒಂದು ಅಗೋಚರ ಶಕ್ತಿ ಇದೆ ಎಂದು ನಂಬಿ ಅವುಗಳಿಗೆ ಸಂಕೇತವಾಗಿ ಮನುಷ್ಯನ ಆಕಾರವನ್ನು ಕೊಟ್ಟು ಪೂಜಿಸ ತೊಡಗಿದನು.[೪] ಹೀಗೆ ದೇವರ ಪ್ರತೀಕವಾದ ಮೂರ್ತಿ ಪೂಜೆಯು ತನ್ನದೇ ಆದ ಪ್ರಾಮುಖ್ಯತೆಯನ್ನು ಪಡೆದುಕೊಂಡಿದೆ, ಜೊತೆಗೆ ಅವುಗಳ ರಕ್ಷಣೆಗೋಸ್ಕರವೆಂದೇ ದೇವಾಲಯಗಳು ನಿರ್ಮಾಣವಾಗ ತೊಡಗಿದವು. ದೇವಾಲಯ ಹೃದಯವಾದರೆ, ಗರ್ಭಗೃಹದೊಳಗಿನ ಮೂರ್ತಿಶಿಲ್ಪ ದೇವಾಲಯದ ಉಸಿರು.[೫] ಪ್ರಾಚೀನ ಕಾಲದಿಂದಲೂ ಮೂರ್ತಿಶಿಲ್ಪದ ಇತಿಹಾಸ ವಾಸ್ತು ಶಿಲ್ಪಕ್ಕಿಂತ ಮೊದಲೇ ಇರುವುದು ಗಮನಿಸಬೇಕಾದ ಅಂಶ.

ಸಿಂಧೂ ನಾಗರೀಕತೆಯ ಸಂಸ್ಕೃತಿಯಲ್ಲಿ ದೊರೆತ ಶಿಲ್ಪಗಳೇ ಭಾರತೀಯ ಶಿಲ್ಪಶಾಸ್ತ್ರದ ಪ್ರಾರಂಭದ. ಶಿಲ್ಪಗಳ ಆರಾಧನೆ ವೈದಿಕ ಕಾಲಘಟ್ಟದಲ್ಲಿ ಸಾರ್ವಜನಿಕವಾಗಿ ಪ್ರಚಲಿತದಲ್ಲಿರಲಿಲ್ಲ, ನಂತರದ ಕಾಲಘಟ್ಟದಲ್ಲಿ ಆರ್ಯರು ಅನಾರ್ಯರು(ದ್ರಾವಿಡರು) ದೈವಗಳನ್ನು ಪರಿಗ್ರಹಿಸಿ ಅವುಗಳಿಗೆ ಒಂದೊಂದು ರೂಪವನ್ನು ನೀಡಿದರು.[೬] ಹೀಗೆ ವೈದಿಕ ಪ್ರಭಾವವನ್ನು ಅಳವಡಿಸಿಕೊಂಡ ಶಿಲ್ಪಶಾಸ್ತ್ರಗಳು ಚತುರ್‌ದೇವತೆಗಳನ್ನು ಪರಿವಾರ ದೇವತೆಗಳೆಂದು ಒಪ್ಪಿ ಅವುಗಳನ್ನು ತಯಾರಿಸುವ ವಿಧಿ–ವಿಧಾನಗಳನ್ನು ರೂಪಿಸಿದವು.

ಭಾರತದ ಚಾರಿತ್ರಿಕ ಯುಗದಲ್ಲಿ ಪ್ರಪ್ರಥಮವಾಗಿ ದೊರೆತಿರುವ ಶಿಲ್ಪವು ಮೌರ್ಯರ ಕಾಲದ್ದಾಗಿದೆ.[೭] ನಂತರ ಬಂದ ಶಾತವಾಹನರ ಕಾಲದಲ್ಲಿ ಸ್ವಲ್ಪಮಟ್ಟಿಗೆ ಶಿಲ್ಪಕಲೆಯ ಬಗ್ಗೆ

ವಿವರಗಳು ದೊರೆತಿವೆ. ಗುಪ್ತರ ಕಾಲದಲ್ಲಿ ಹಲವು ಶಿಲ್ಪಗಳು ಮಾರ್ಪಾಟನ್ನು ಹೊಂದಿರುವುದಲ್ಲದೇ ಅವುಗಳ ಅಂಗೋಪಾಂಗಗಳ ಪ್ರಮಾಣ ದೇಹದಲ್ಲಿ ನಾವಿನ್ಯತೆ, ಗಾಂಭೀರ್ಯಭಾವ, ನವರಸಗಳ ಜೊತೆಗೆ ಪ್ರಶಾಂತತೆಗಳ ಅಭಿವ್ಯಕ್ತಿಗಳು ವ್ಯಕ್ತವಾಗಿರುವುದನ್ನು ಗುರುತಿಸಬಹುದಾಗಿದೆ.[೮] ಬಾದಾಮಿ ಚಾಲುಕ್ಯರ ಮನೆತನದ ಕಾಲಾವಧಿಯಲ್ಲಿ ಈ ಮೂರ್ತಿಶಿಲ್ಪ ಕಲೆಯು ಉನ್ನತ ಸ್ಥಿತಿಯನ್ನು ತಲುಪಿತು. ನಂತರ ಕಾಲಘಟ್ಟದಲ್ಲಿ ಆಳ್ವಿಕೆಗೆ ಬಂದ ಪ್ರತಿಯೊಂದು ಅರಸುಮನೆತನಗಳೂ ವಿವಿಧ ಧರ್ಮಗಳಿಗೆ ಆಶ್ರಯನೀಡಿ ಆಯಾ ಧರ್ಮದ ಮೂರ್ತಿಶಿಲ್ಪಗಳು ಬೆಳೆದು ಬಂದಿವೆ.

೬.೧.೧ ಶಿಲ್ಪಗಳಲ್ಲಿ ಆಸನಗಳು

ಆಸನವೆಂದರೆ ಕುಳಿತಿರುವುದು, ಶಿಲ್ಪಗಳಲ್ಲಿ ಹಲವು ವಿಧಗಳಲ್ಲಿ ಕುಳಿತು ಕೊಳ್ಳುವುದು ಲೋಕರೂಢಿ ಇದೆಯಾದರೂ ಸಾತ್ವಿಕ, ರಾಜಸ, ತಾಮಸ.[೯] ಈ ಭಾವದ ಆಸನಗಳನ್ನು ಗುರುತಿಸಲಾಗಿದ್ದು, ಅವುಗಳಲ್ಲಿ ವ್ಯತ್ಯಾಸವಿದೆ. ದಾಕ್ಷಿಣಾತ್ಯ ಶಿಲ್ಪಶಾಸ್ತ್ರಗಳು ಉಲ್ಲೇಖಿಸುವಂತೆ ಶಿಲ್ಪಗಳಲ್ಲಿ ಸ್ಥಾನಿಕ, ಆಸೀನ, ಶಯನ ಮತ್ತು ಯಾನಕ ಎಂಬ ಪ್ರಭೇಧವನ್ನು ಗುರುತಿಸಬಹುದು.[೧೦] ಕತ್ತು, ತಲೆ, ದೇಹ ಒಂದೇ ನೇರವಾಗಿರುವ ಮೂರ್ತಿಶಿಲ್ಪಗಳೇ ಸ್ಥಾನಿಕ ಮೂರ್ತಿಶಿಲ್ಪಗಳಾಗಿದ್ದು, ಸ್ಥಾನಿಕ ಭಂಗಿಯಲ್ಲಿ ಚಕ್ರಪ್ರಧಾನ ಜೊತೆಗೆ ವಿಷ್ಣುವಿನ ಕೆಲವು ಅವತಾರ ಶಿಲ್ಪಗಳು, ದೇವಿ ಮತ್ತು ಭಕ್ತನ ಶಿಲ್ಪಗಳನ್ನು ಉದಾಹರಿಸಬಹುದಾಗಿದೆ. ಈ ಮೂರ್ತಿಶಿಲ್ಪಗಳು ಸಮಭಂಗಿ, ದ್ವಿಭಂಗಿ, ತ್ರಿಭಂಗಿ, ಅತಿಭಂಗಿ, ನೃತ್ಯ ಇನ್ನೂ ಮುಂತಾದ ಭಂಗಿಗಳನ್ನು ಗುರುತಿಸಬಹುದಾಗಿದೆ.[೧೧] ಆಸೀನ ಭಂಗಿಯಲ್ಲಿ ಶಿವನಶಿಲ್ಪಗಳು, ದಕ್ಷಿಣಾಮೂರ್ತಿ, ನರಸಿಂಹ, ಲಕ್ಷ್ಮಿನಾರಾಯಣ, ಮೈಲಾರಲಿಂಗೇಶ್ವರ ವಿಷ್ಣು ಹಾಗೂ ಜೈನಪರಂಪರೆಯ ಇಪ್ಪತ್ನಾಲ್ಕು ಜನ ತೀರ್ಥಂಕರರ ಮತ್ತು ಗಣಪತಿ, ಗಜಲಕ್ಷ್ಮಿ, ಸಪ್ತಮಾತೃಕೆಯರು ಇನ್ನೂ ಮುಂತಾದ ಶಿಲ್ಪಗಳನ್ನು ನೋಡಬಹುದಾಗಿದೆ. ಮೇಲ್ಕಂಡ ಈ ಶಿಲ್ಪಗಳು ಯೋಗಾಸನ, ಸಿಂಹಾಸನ, ಭದ್ರಾಸನ, ಆಲಿಡ್ಯಾಸನ, ಪದ್ಮಾಸನ, ಅನಂತಾಸನ, ವೀರಾಸನ, ಸುಖಾಸನ, ವಾಮಲಲಿತಾಸನ, ಪ್ರಲಮಬಾಸನ ಭಂಗಿಯಲ್ಲಿರುತ್ತವೆ.[೧೨] ಶಯನ ಎಂದರೆ ಮಲಗಿರುವುದು ಎಂದರ್ಥ ವಿಶೇಷವಾಗಿ ವಿಷ್ಣುವಿನ ಅಪಸ್ಮಾರ ಪುರುಷ, ಬುದ್ದನ ಮೂರ್ತಿಗಳನ್ನು ಗುರುತಿಸಬಹುದಾಗಿದೆ. ಶಯನ ಶಿಲ್ಪಗಳಲ್ಲಿ ಯೋಗಶಯನ, ಭೋಗಶಯನ, ವೀರಶಯನ, ವೈವಿದ್ಯತೆ ಇದೆ. ಅದೇ ರೀತಿ ಜೈನ ಪರಂಪರೆಯ ಶಿಲ್ಪಗಳಲ್ಲಿ ಸಾಮಾನ್ಯವಾಗಿ ಪದ್ಮಾಸನ, ಕಾರ್ಯೋತ್ಸರ್ಗ/ವಿಸರ್ಗ/ಖಡ್ಗಾಸನ ಭಂಗಿಗಳು ಕಂಡು ಬರುತ್ತವೆ.[೧೩]

೬.೧.೨ ಶಿಲ್ಪಗಳಲ್ಲಿ ಆಭರಣಗಳು

ಶಿಲ್ಪಗಳನ್ನು ಅಲಂಕರಿಸುವ ಪದ್ಧತಿಯು ಪ್ರಾಚೀನ ಪರಂಪರೆಯಿಂದಲೂ ಬೆಳೆದು ಬಂದ ಒಂದು ಸಂಪ್ರದಾಯವಾಗಿದೆ. ಶಿಲ್ಪಗಳಲ್ಲಿ ಯಾವುದೇ ಒಂದು ಅಸಾಧಾರಣವಾದ ಶಕ್ತಿ ಇದೆ ಹಾಗಾಗಿ ಶಿಲ್ಪಶಾಸ್ತ್ರ ಗ್ರಂಥಗಳು ಶಿಲ್ಪಗಳು ಸರ್ವಾಂಗಗಳಿಂದ ವಸ್ತ್ರಾಭರಣಗಳಿಂದಲೂ ಭೂಷಿತವಾಗಿರಬೇಕೆಂದು ತಿಳಿಸುತ್ತವೆ.[೧೪] ಹಾಗಾಗಿಯೇ ದೇವತಾ ಶಿಲ್ಪಗಳಲ್ಲಿ ಕಿರೀಟ, ಜಟಾಮುಕುಟ, ಪ್ರಸಾರಿತ ಜಟಾಶಿರಸ್ತ್ರಕ, ಅಗ್ನಿಕೇಶ, ಧರ್ಮಿಲ, ಮಕರಕುಂಡಲ, ಪತ್ರಕುಂಡಲ, ರತ್ನಕುಂಡಲ,

ರತ್ನಮಾಲೆ, ಮಣಿಸರ, ಕಂಠಹಾರ, ಶ್ರೀವತ್ಸವ, ಉದರಬಂಧ, ರತ್ನಾಂಗುಲಿಕೆಗಳು, ಪಾದಜಾಲಕಗಳು, ಭುಜಂಗವಲಯ, ಊರದಾಮ, ಮಣಿಬಂಧ, ಸ್ಕಂದಮೂಲ, ಕೇಯೂರ, ಚನ್ನವೀರ, ಕಟಿಬಂಧ, ಕಂಕಣ, ಊರುದಾಮ, ಮಣಿಬಂಧ, ರತ್ನಾಂಗುಲಿಯುಕೆಗಳು, ಪಾದಜಾಲಕಗಳು, ಭುಜಂಗವಲಯ, ವೈಜಯಂತಿ, ಪ್ರಭಾಮಂಡಲ, ಪತ್ರಪಟ್ಟಿರತ್ನಪಟ್ಟಿ, ಕುಚಬಂಧ, ಬೆರಳುಂಗುರಗಳು, ಕೊರಳಸರಗಳು ಇನ್ನೂ ಮುಂತಾದ ಆಭರಣಗಳನ್ನು ಗುರುತಿಸಬಹುದಾಗಿದೆ. ಹಾಗೆಯೆ ಜೈನಪರಂಪರೆಯಲ್ಲಿ ದಿಗಂಬರ ತೀರ್ಥಂಕರರ ಶಿಲ್ಪಗಳಿಗೆ ಯಾವುದೇ ಆಭರಣಗಳು ಕಂಡು ಬರುವುದಿಲ್ಲ ಆದರೆ ಯಕ್ಷ-ಯಕ್ಷಿಯರ ಮತ್ತು ಶ್ವೇತಾಂಬರ ಪಂಥದದಲ್ಲಿನ ತೀರ್ಥಂಕರ ಶಿಲ್ಪಗಳಿಗೆ ವಸ್ತ್ರಾಭರಣಗಳಿವೆ.[೧೫]

೬.೧.೩ ಶಿಲ್ಪಗಳಲ್ಲಿ ಆಯುಧಗಳು

ಮೂರ್ತಿಶಿಲ್ಪಗಳಲ್ಲಿ ವಿಭಿನ್ನ ರೀತಿಯ ಆಯುಧಗಳು ಪ್ರಧಾನವಾಗಿವೆ. ಮುಖ್ಯವಾಗಿ ಸಾತ್ವಿಕ, ವೀರ, ಶಾಂತ ಶಿಲ್ಪಗಳಲ್ಲಿ ಎರಡರಿಂದ ನಾಲ್ಕು ಕೈಗಳಿರುತ್ತವೆ. ಉಗ್ರ ಸಂಹಾರ ತಾಮಸ ಶಿಲ್ಪಗಳಲ್ಲಿ ಹತ್ತರಿಂದ ಹದಿನಾರು ಕೈಗಳಿರುತ್ತವೆ. ರಜತ, ತಾಮಸ ಶಿಲ್ಪಗಳ ಕೈಗಳಲ್ಲಿ ಆರ ರಿಂದ ಎಂಟು ಕೈಗಳಿರುವುದನ್ನು ಗುರುತಿಸಬಹುದು. ಎಲ್ಲಾ ಶಿಲ್ಪಗಳ ಕೈಗಳಲ್ಲಿ ಶಂಖ, ಚಕ್ರ, ಗಧಾ, ತ್ರಿಶೂಲ, ಡಮರು, ಟಂಕ, ಶೂಲ, ಖಟ್ವಂಗ, ಅಂಕುಶ, ಖಡ್ಗ, ಧನಸ್ಸು, ಬಾಣ, ನೇಗಿಲು, ಅಗ್ನಿ ಇನ್ನೂ ಮುಂತಾದ ಆಯುಧಗಳನ್ನು ಕಾಣಬಹುದಾಗಿದೆ.[೧೬]

ಪ್ರತಿಯೊಂದು ಮೂರ್ತಿಶಿಲ್ಪಗಳಲ್ಲೂ ನಿರ್ದಿಷ್ಟವಾದ ಮತ್ತು ವಿಭಿನ್ನ ರೀತಿಯ ಶಕ್ತಿ ಗುಣಗಳು ಇರುವಿಕೆಯನ್ನು ಉಲ್ಲೇಖಿಸಬಹುದಾಗಿದೆ. ಶಿವನಿಗೆ ತ್ರಿಶೂಲ, ಡಮರು, ಅಗ್ನಿ, ಗಣಪತಿ, ಅಂಕುಶ, ಪಾಲ, ಕಾರ್ತಿಕೇಯನಿಗೆ ಶೂಲ, ಟಂಕ, ವಜ್ರ, ಬಲರಾಮನಿಗೆ ನೇಗಿಲು, ಪರಶುರಾಮನಿಗೆ ಪರಶು, ವಿಷ್ಣುವಿಗೆ ಶಂಖ, ಚಕ್ರ, ಗದೆ, ಪದ್ಮ, ಬ್ರಹ್ಮನಿಗೆ ಕಮಂಡಲ, ಅಕ್ಷಮಾಲೆ, ರಾಮನಿಗೆ ಬಿಲ್ಲು, ಬಾಣ, ಲಕ್ಷ್ಮಿಗೆ ಪದ್ಮ, ಸರಸ್ವತಿಗೆ ವೀಣೆ, ಅಕ್ಷಮಾಲೆ ಹೀಗೆ ಆಯುಧಗಳಲ್ಲಿ ಪ್ರತ್ಯೇಕವಾದ ಮೂರ್ತಿರೂಪ ಕೊಟ್ಟಿದ್ದು, ಅವುಗಳಿಗೆ ಆಯುಧ ಪುರುಷರೆಂದು ಹೇಳಲಾಗಿದೆ.[೧೭] ವೈಷ್ಣವಾಗಮ ಮತ್ತು ಶೈವಾಗಮಗಳಲ್ಲಿ ಈ ಆಯುಧಗಳಿಗೆ ಪ್ರತ್ಯೇಕವಾದ ಆಧ್ಯಾತ್ಮಿಕ ಅರ್ಥವನ್ನು ಕಲ್ಪಿಸಿದೆ. ಶಿವ ದೇವಾಲಯಗಳಲ್ಲಿ ತ್ರಿಶೂಲ, ವಿಷ್ಣುವಿನ ದೇವಾಲಯಗಳಲ್ಲಿ ಚಕ್ರ, ಕಾರ್ತಿಕೇಯ ದೇವಾಲಯಗಳಲ್ಲಿ ಶಕ್ತಿ, ಹೀಗೆ ಆಯುಧ ಪುರುಷನಾಗಿ ಪೂಜಿಸಲಾಗುತ್ತಿವೆ.[೧೮] ಈ ಮೇಲ್ಕಂಡ ಅಯುಧಗಳು ತನ್ನದೇ ಆದ ವೈವಿಧ್ಯತೆಯಿಂದ ಕೂಡಿದ್ದು, ತ್ರಿಶೂಲ ತಮೋಗುಣವನ್ನು, ಖಡ್ಗ ಶೌರ್ಯವನ್ನು, ಪರಶು ದೈವ ಶಕ್ತಿಯನ್ನು, ಪಾಶು ತ್ರಿಗುಣಾತ್ಮಕವಾದ ಬಂಧನವನ್ನು, ಗದಾ ಅಧರ್ಮಿನಾಶಕ ಶಕ್ತಿಯನ್ನು, ಅಂಕುಶ ಆತ್ಮನಿಗೆ ಬೇಕಾದುದನ್ನು ಆರಿಸಿಕೊಳ್ಳುವ ಶಕ್ತಿಯನ್ನು, ಶಂಖ ಅಜ್ಞಾನನಾಶಕ ಶಕ್ತಿಯನ್ನು, ಚಕ್ರ ಕಾಲಚಕ್ರವನ್ನು, ಬಾಣಗಳು ಕರ್ಮೇಂದ್ರಿಯ ಜ್ಞಾನೇಂದ್ರಿಯಗಳನ್ನು ಸೂಚಿಸುತ್ತವೆ.[೧೯]

೬.೧.೪ ಲಾಂಛನಗಳು

ಪ್ರಾಚೀನ ಕಾಲದಿಂದಲೂ ಎಲ್ಲಾ ಶಿಲ್ಪಗಳಿಗೂ ವಾಹನಗಳು ಅಥವಾ ಲಾಂಛನಗಳನ್ನು ಕಾಣುತ್ತೇವೆ. ಶಿವನಿಗೆ ನಂದಿ, ಗಣಪತಿಗೆ ಮೂಷಿಕ, ಕಾರ್ತಿಕೇಯನಿಗೆ ನವಿಲು, ಮೈಲಾರಲಿಂಗನಿಗೆ

ಕುದುರೆ, ದತ್ತಾತ್ರೇಯನಿಗೆ ನಾಯಿ, ವಿಷ್ಣುವಿಗೆ ಗರುಡ, ಬ್ರಹ್ಮನಿಗೆ ಹಂಸ, ಲಕ್ಷ್ಮೀಗೆ ಪದ್ಮ, ಸರಸ್ವತಿಗೆ ನವಿಲು, ಬ್ರಾಹ್ಮಿಗೆ ಹಂಸ, ವರಾಹಿಗೆ ಮಹಿಷ, ಕೌಮಾರಿಗೆ ಮಯೂರ, ಇಂದ್ರಾಣಿಗೆ ಗಜ, ಚಾಮುಂಡಿಗೆ ನರಿ, ಹೀಗೆ ಇನ್ನೂ ಅನೇಕ ವಾಹನಗಳನ್ನು ನಾವು ಗುರುತಿಸಬಹುದಾಗಿದೆ. ಶಿವನಿಗೆ ಜಟಾಮಂಡಲ ಮತ್ತು ಚಂದ್ರ, ವಿಷ್ಣುವಿಗೆ ಶ್ರೀವತ್ಸ ಮತ್ತು ಜೈನಧರ್ಮದ ೨೪ ಜನ ತೀರ್ಥಂಕರರಿಗೆ ಬೇರೆ ಬೇರೆ ರೀತಿಯ ಲಾಂಛನಗಳನ್ನು ನೋಡಬಹುದಾಗಿದೆ. ಒಟ್ಟಾರೆ ಶಿಲ್ಪಶಾಸ್ತ್ರದಲ್ಲಿ ೪೦೦ ಕ್ಕೂ ಹೆಚ್ಚು ಕೃತಿಗಳು ದೊರೆತಿದ್ದರೂ ಈಗ ಅವುಗಳು ಬೆರಳೆಣಿಕೆಯಷ್ಟಿವೆ.[೨೦]

ಪ್ರಸ್ತುತ ಧಾರವಾಡ ಜಿಲ್ಲೆಯ ಪ್ರದೇಶದಲ್ಲಿ ಬೌದ್ಧ, ಶೈವ, ಶಾಕ್ತ, ವೈಷ್ಣವ, ಜೈನಪಂಥಗಳ ಶಿಲ್ಪಗಳು ಕಂಡು ಬಂದಿದ್ದು, ಅವುಗಳ ಪ್ರತಿಮಾ ಲಕ್ಷಣಗಳನ್ನು ಇಲ್ಲಿ ಚರ್ಚಿಸಲಾಗಿದೆ.

೬.೨. ಬೌದ್ಧ ಮೂರ್ತಿಶಿಲ್ಪ

ಪ್ರಾಚೀನ ಕಾಲದಿಂದಲೂ ಕರ್ನಾಟಕದಲ್ಲಿ ಬೌದ್ಧಧರ್ಮವು ಮಹತ್ವದ ಸ್ಥಾನವನ್ನು ಪಡೆದಿದೆ. ಇದರ ಕುರುಹುಗಳು ನಮಗೆ ಚಿತ್ರದುರ್ಗ ಜಿಲ್ಲೆಯ ಸಿದ್ಧಾಪುರ, ಜಟಿಂಗರಾಮೇಶ್ವರ, ಬ್ರಹ್ಮಗಿರಿ, ಮಸ್ಕಿ ಮತ್ತು ಕೊಪ್ಪಳದಲ್ಲಿ ದೊರೆತಿದೆ. ಈ ಧರ್ಮದಲ್ಲಿ ಹೀನಯಾನ, ಮಹಾಯಾನ ಮತ್ತು ವಜ್ರಯಾನ ಎಂಬ ಮೂರು ಪಂಥಗಳನ್ನು ಕಾಣುತ್ತೇವೆ. ಮಹಾಯಾನ ಪಂಥವು ಸುಖೋಪಾಸಕರಾಗಿದ್ದರಲ್ಲದೇ ಅವರು ಗುಟ್ಟಾಗಿ ತಾಂತ್ರಿಕ ಪದ್ಧತಿಗಳನ್ನು ರೂಪಿಸಿಕೊಂಡರು ಹೀಗಾಗಿ ಈ ಪಂಥವು ಕೆಲವೊಂದು ತಾಂತ್ರಿಕ ಧರ್ಮವಾಗಿ ಉದಯಿಸಿ ನಂತರ ಕಾಲಘಟ್ಟದಲ್ಲಿ ವಜ್ರಯಾನ ಪಂಥವಾಗಿ ಉಗಮಗೊಂಡಿತು.

ವಜ್ರಯಾನ ಪಂಥದಲ್ಲಿ ಹೆಣ್ಣಿಗೆ ಪ್ರಾತಿನಿಧ್ಯ ಇದ್ದುದರಿಂದ ಧ್ಯಾನಿ ಬುದ್ಧನಿಗೆ ಶಕ್ತಿ ದೇವತೆಗಳನ್ನು ಕಲ್ಪಿಸಿದರು. ಇದರಲ್ಲಿ ಆಯ್ದ ಅಥವಾ ತಾರಾ ಎಂಬ ಶಕ್ತಿದೇವತೆ ಪ್ರಮುಖವಾಗಿದ್ದಾಳೆ. ತಾರಾಭಗವತಿಯ ಆರಾಧನೆ ಮತ್ತು ಶಿಲ್ಪಗಳನ್ನು ಕರ್ನಾಟಕದ ಬಳ್ಳಿಗಾವೆ ಮತ್ತು ಕೋಳಿವಾಡ ಪ್ರದೇಶಗಳಲ್ಲಿ ಕಂಡು ಬರುತ್ತವೆ. ಪ್ರಸ್ತುತ ಈ ಅಧ್ಯಯನ ಧಾರವಾಡ ಜಿಲ್ಲೆಗೆ ಸೀಮಿತವಾಗಿದೆ.

ಶಿಲ್ಪ	:	ತಾರಾಭಗವತಿ
ಸ್ಥಳ	:	ಕೋಳಿವಾಡ
ತಾಲೂಕು	:	ಹುಬ್ಬಳ್ಳಿ
ಕಾಲಮಾನ	:	ಕ್ರಿ.ಶ. ೬ನೇ ಶತ
ವಸ್ತು	:	ಕಪ್ಪುಶಿಲೆ

ಸವ್ಯಲಲಿತಾಸನದ ಭಂಗಿಯಲ್ಲಿ ಪದ್ಮಪೀಠದ ಮೇಲೆ ಕುಳಿತಿದ್ದಾಳೆ. ಶಿರಭಾಗವು ಮುರಿದಿದ್ದು, ಬಲಗಡೆಯ ಪ್ರಭಾವಳಿಯ ಅರ್ಧಭಾಗ ಮಾತ್ರ ನಮಗೆ ಕಂಡು ಬರುತ್ತದೆ. ಜೊತೆಗೆ ಪ್ರಭಾವಳಿಯಲ್ಲಿ ಅನೇಕ ಚಿಕ್ಕ ಚಿತ್ರಗಳನ್ನು ಗುರುತಿಸಬಹುದಾಗಿದೆ. ಆಕೆಯ ಎರಡು ಕೈಗಳು ಮುರಿದಿದ್ದು,

ಬಲಗೈಯಲ್ಲಿ ಕಮಲವನ್ನು ಹಿಡಿದಿದ್ದಾಳೆ. ಅಲ್ಲದೇ ಕೊರಳಲ್ಲಿ ಹಾರ, ಯಜ್ಞೋಪವೀತ, ಎರಡು ಕಾಲುಗಳಲ್ಲಿ ಕಾಲ್ಗಡಗ ಪಾದಪೀಠದ ಕೆಳಗಿನ ಭಾಗದಲ್ಲಿ ನಾಗರಿ ಲಿಪಿ ಕಂಡು ಬರುತ್ತದೆ. ಪ್ರಸ್ತುತ ಈ ಶಿಲ್ಪವನ್ನು ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡದ ಡಾ. ಆರ್.ಸಿ. ಹಿರೇಮಠ ಕನ್ನಡ ಅಧ್ಯಯನ ಪೀಠದಲ್ಲಿ ಇಡಲಾಗಿದೆ.[೨೧]

ಶಿಲ್ಪ	:	ಬೌದ್ಧ ಆಯಕಸ್ಥಂಭ
ಸ್ಥಳ	:	ಕೋಳಿವಾಡ
ತಾಲೂಕು	:	ಹುಬ್ಬಳ್ಳಿ
ಕಾಲಮಾನ	:	ಕ್ರಿ.ಶ. ೬ನೇ ಶತ
ವಸ್ತು	:	ಕಪ್ಪುಶಿಲೆ

ಊರಿನ ಬಸ್ ನಿಲ್ದಾಣದ ಬಳಿ ಬೌದ್ಧ ಅಯಕಸ್ಥಂಭವಿದೆ. ಇದು ಮಧ್ಯಕಾಲೀನ ಕಾಲಘಟ್ಟದಲ್ಲಿ ಬೌದ್ದ ವಿಹಾರವಾಗಿತ್ತು ಎಂಬ ಅಂಶ ತಿಳಿದು ಬರುತ್ತದೆ. ಕಾರಣ ಈ ಒಂದು ಆಯಕ ಸ್ತಂಭದಲ್ಲಿ ನಾಲ್ಕು ಮುಖಗಳಿದ್ದು, ಆನೆ, ಕುದುರೆ, ಬುದ್ಧ ಮುಂತಾದ ಚಿತ್ರಗಳಿವೆ. ಅಲ್ಲದೇ ಈ ಸ್ಥಳದಲ್ಲಿ ವಿಹಾರ ಕಟ್ಟಡಗಳ ಇನ್ನಿತರೆ ಪುರಾವೆಗಳು ಉತ್ಖನನ ಮಾಡಿದಲ್ಲಿ ಈ ನೆಲದಲ್ಲಿ ದೊರೆಯುವ ಸಾಧ್ಯತೆ ಇದೆ.[೨೨]

೬.೩ ಶೈವ ಶಿಲ್ಪಗಳು

೬.೩.೧ ಶಿವಲಿಂಗಗಳು

ಶೈವ ಪಂಥದಲ್ಲಿ ಶಿವನಿಗೆ ಪ್ರಮುಖ ಸ್ಥಾನ. ತ್ರಿಮೂರ್ತಿಗಳಲ್ಲಿ ಮೂರನೆಯವನಾದ ಶಿವ, ಪ್ರಳಯ ಕತೃನಾಗಿದ್ದಾನೆ.[೨೩] ಶೈವ ಪರಂಪರೆಯ ಪ್ರಾಚೀನತೆಯನ್ನು ನೋಡಿದರೆ. ಸಿಂಧೂ ನಾಗರೀಕತೆಯ ಹರಪ್ಪಾ, ಮಹೊಂಜೋದಾರೊ ಮತ್ತು ಕಾಲಿಬಂಗನ್ ನೆಲೆಗಳಲ್ಲಿ ದೊರೆತ ಮಣ್ಣಿನಮುದ್ರಿಕೆಗಳ ಮೇಲೆ ಪಶುಪತಿಯ ಚಿತ್ರಗಳು ನಮಗೆ ದೊರೆಯುತ್ತವೆ. ವೈದಿಕ ಸಾಹಿತ್ಯದಲ್ಲಿ ಶಿವನ ಉಲ್ಲೇಖವನ್ನು ಕಾಣುತ್ತೇವೆ.[೨೪] ಕರ್ನಾಟಕದಲ್ಲಿ ಇದರ ಪ್ರಾಚೀನತೆಯನ್ನು ನೋಡಲಾಗಿ ಕಾರವಾರ ಜಿಲ್ಲೆಯ ಅಂಕೋಲ ಬಳಿಯ ಬೋಲೆ ಮತ್ತು ಮಹಾಕೂಟದಲ್ಲಿರುವ ಶಿವಲಿಂಗಗಳು ಶೈವ ಶಿಲ್ಪಗಳಿಗೆ ಸಾಕ್ಷಿಯಾಗಿವೆ.[೨೫] ಲಿಂಗಗಳಲ್ಲಿ ಸ್ಥಿರ, ಚರ, ಚರಾಚರ ಮತ್ತು ಬಾಣಲಿಂಗಗಳಿವೆ.[೨೬] ಶಿಲ್ಪಶಾಸ್ತ್ರಗಳಲ್ಲಿ ಸ್ಥೂಲಲಿಂಗ, ಭದ್ರಲಿಂಗ, ಭಾರಲಿಂಗ, ಸ್ಥಂಭಲಿಂಗ, ಸ್ವಯಂಭೂಲಿಂಗ, ಪೃಥ್ವಿಲಿಂಗ, ತೇಜೋಲಿಂಗ ಇತರೆ ಅನೇಕ ಲಿಂಗಗಳ ಬಗ್ಗೆ ದಾಖಲೆಗಳಿವೆ.[೨೭] ಶಿವನನ್ನು ಮೂರ್ತಿರೂಪಕ್ಕಿಂತ ಅಮೂರ್ತವಾದ ಲಿಂಗರೂಪದಲ್ಲೇ ಹೆಚ್ಚಿನ ಮಟ್ಟಿಗೆ ಆರಾಧಿಸುವ ಸಂಪ್ರದಾಯವಿದೆ.[೨೮] ಈತನ ಆಯುಧಗಳು ಶೂಲ, ತ್ರಿಶೂಲ, ಖಟ್ವಾಂಗ ಮುಂತಾದವುಗಳಾಗಿವೆ. ಶಿವಲಿಂಗಗಳನ್ನು ರತ್ನ, ಶಿಲೆ, ಲೋಹ, ಕಾಷ್ಟ(ಮರ), ಇತರೆ ವಸ್ತುಗಳಿಂದ ನಿರ್ಮಿಸಲಾಗುತ್ತಿದೆ. ಜೊತೆಗೆ ಲಿಂಗಗಳಲ್ಲಿ

ಶಿಲಾವರ್ಣಭೇಧಗಳಿದ್ದು ಬಿಳಿಶಿಲೆ, ರತ್ನಶಿಲೆ, ಕಪ್ಪುಶಿಲೆ, ಹಳದಿಶಿಲೆ, ಅಮೃತಶಿಲೆಗಳಿಂದ ಪೂಜಿಸಿದರೆ ಶ್ರೇಷ್ಠ ಎಂದು ಶಾಸ್ತ್ರಗಳಲ್ಲಿ ಸೂಚಿಸಲಾಗಿದೆ. ಪ್ರಾಚೀನ ಕಾಲದ ಲಿಂಗಗಳು ಪೀಠ ರಹಿತವಾಗಿದ್ದು, ನಂತರದ ಕಾಲಘಟ್ಟದಲ್ಲಿ ಪೀಠ, ಪಾಣಿವಟ್ಟಲು, ಜಲಹರಿ ಮತ್ತು ಬ್ರಹ್ಮಸೂತ್ರವುಳ್ಳ ಲಿಂಗಗಳು ಕಾಣಸಿಗುತ್ತವೆ. ಶಿವಲಿಂಗದಲ್ಲಿ ಕೆಳಗಿನ ಭಾಗವು ಚೌಕಾಕಾರವಾಗಿದ್ದು, ಅದನ್ನು ಬ್ರಹ್ಮಭಾಗವೆಂತಲೂ, ಅಧ್ಯಭಾಗ ಅಷ್ಟಭುಜಾಕಾರವಾಗಿದ್ದು, ಅದನ್ನು ವಿಷ್ಣುಭಾಗವೆಂತಲೂ, ವೃತ್ತಾಕೃತಿಯನ್ನು ರುದ್ರ ಭಾಗವೆಂಬ ಕಲ್ಪನೆ ಇದೆ.[೨೯] ಒಟ್ಟಾರೆ ಶಿವನನ್ನು ಮೂರ್ತಿರೂಪಕ್ಕಿಂತ ಅಮೂರ್ತವಾದ ಲಿಂಗರೂಪದಲ್ಲಿಯೇ ಹೆಚ್ಚಿನ ಮಟ್ಟಿಗೆ ಶಿವನ ಸಂಕೇತವಾಗಿ ತೋರಿಸಿರುತ್ತಾರೆ.

ಪ್ರಸ್ತುತ ಇಂತಹ ಶಿವಲಿಂಗಗಳು ಧಾರವಾಡ ಪ್ರದೇಶಗಳಲ್ಲಿ ಕಂಡು ಬಂದಿದ್ದು, ಅವುಗಳಲ್ಲಿ ಕೆಲವೊಂದನ್ನು ಮಾತ್ರ ಪರಿಚಯಿಸುವ ಪ್ರಯತ್ನ ಮಾಡಲಾಗಿದೆ. ಇನ್ನುಳಿದ ಶಿವಲಿಂಗಗಳ ಪಟ್ಟಿಯನ್ನು ಅಧ್ಯಾಯದ ಕೊನೆಯಲ್ಲಿ ನೀಡಲಾಗಿದೆ.

ಶಿಲ್ಪ	:	ಶಿವಲಿಂಗ
ಸ್ಥಳ	:	ಚಂದ್ರಮೌಳೇಶ್ವರ ದೇವಾಲಯ(ಉಣಕಲ್)
ತಾಲೂಕು	:	ಹುಬ್ಬಳ್ಳಿ
ಕಾಲಮಾನ	:	೧೨ನೇ ಶತಮಾನ
ವಸ್ತು	:	ಕಪ್ಪುಶಿಲೆ

ಈ ದೇವಾಲಯದ ಗರ್ಭಗೃಹದಲ್ಲಿ ಎರಡು ಲಿಂಗವಿದ್ದು, ಒಂದು ಚೌಕಪೀಠದ ಮೇಲೆ ಇದೆ. ಅದರ ಹಿಂಭಾಗದಲ್ಲಿ ವೃತ್ತಾಕಾರ ಪಾಣಿಪೀಠದ ಮೇಲೆ ಚತುರ್ಮುಖ ಲಿಂಗವಿದ್ದು, ಇದು ನಾಲ್ಕು ಮುಖಗಳನ್ನು ಹೊಂದಿದೆ, ಪೂರ್ವಕ್ಕೆ ತತ್ಪುರು, ದಕ್ಷಿಣಕ್ಕೆ ಅಘೋರ, ಪಶ್ಚಿಮಕ್ಕೆ ಸದ್ಯೋಜಾತ ಮತ್ತು ಉತ್ತರಕ್ಕೆ ವಾಯುದೇವನ ಮುಖಗಳನ್ನು ತೋರಿಸಿರುವುದು ಬಹಳ ಅಪರೂದ ಶಿಲ್ಪವಾಗಿದೆ.[೩೦]

ಶಿಲ್ಪ	:	ಶಿವಲಿಂಗ
ಸ್ಥಳ	:	ಶಂಭುಲಿಂಗ ದೇವಾಲಯ(ಕುಂದಗೋಳ)
ತಾಲೂಕು	:	ಕುಂದಗೋಳ
ಕಾಲಮಾನ	:	೧೨ ಶತಮಾನ
ವಸ್ತು	:	ಕಪ್ಪುಶಿಲೆ

ಗರ್ಭಗೃಹದ ಮಧ್ಯಪೀಠದಲ್ಲಿ ಶಿವಲಿಂಗವಿದ್ದು, ಇದು ಅತ್ಯಂತ ಹೊಳಪುಳ್ಳ ಕಪ್ಪುಶಿಲೆಯ ಪಾಣಿಪೀಠ ಭಾಗವನ್ನು ಹಾಗೂ ಕೆಂಪು ಶಿಲೆಯ ಅಂಡಾಕಾರದ ಯೋನಿಪೀಠವನ್ನು ಹೊಂದಿದೆ.

ಲಿಂಗದ ಮೇಲೆ ಅಭಿಷೇಕ ಮಾಡಿದ ನೀರು ಹೊರಬರಲು ಅಲ್ಲಿಂದ ಜಲಹರಿ ಇದೆ. ಇದು ತೆರೆದ ಸಣ್ಣ ಕಾಲುವೆ ಅಧಿಷ್ಠಾನದ ಮುಂದೆ ಹೋಗಿ ಹೊರಚಾಚಿದಂತಿದೆ.[೩೧]

ಶಿಲ್ಪ : ಶಿವಲಿಂಗ

ಸ್ಥಳ : ಕಲ್ಮೇಶ್ವರ ದೇವಾಲಯದ ಗರ್ಭಗೃಹ
(ಹಾರೋಬೆಳವಡಗಿ)

ತಾಲೂಕು : ಧಾರವಾಡ

ಕಾಲಮಾನ : ೧೨ನೇ ಶತಮಾನ

ವಸ್ತು : ಕಪ್ಪುಶಿಲೆ

ಈಶ್ವರ ಲಿಂಗವು ಜಗಲಿಯ ಮೇಲೆ ಪೂರ್ವಾಭಿಮುಖವಾಗಿದೆ. ಇದರ ಎತ್ತರ ೩೦.ಸೆಂ.ಮೀ ಇದೆ. ಅಗಲವು ೬೦.ಸೆಂ.ಮೀ ಇದೆ.ಹಾಗೆಯೇ ಈ ಶಿವಲಿಂಗ ಬ್ರಹ್ಮಭಾಗ, ವಿಷ್ಣುಭಾಗ ಮತ್ತು ರುಧ್ರಭಾಗ ಒಳಗೊಂಡಿದೆ ಜೊತೆಗೆ ಪಾಣಿವಟ್ಟಲು ಮತ್ತು ಜಲಹರಿ ಇದೆ.[೩೨]

ಶಿಲ್ಪ : ಶಿವಲಿಂಗ

ಸ್ಥಳ : ಬಸವೇಶ್ವರ ದೇವಾಲಯದ ಗರ್ಭಗೃಹ
(ತುಪ್ಪದ ಕುರಹಟ್ಟಿ)

ತಾಲೂಕು : ನವಲಗುಂದ

ಕಾಲಮಾನ : ೯ನೇ ಶತಮಾನ

ವಸ್ತು : ಕಪ್ಪುಶಿಲೆ

ಕರ್ನಾಟಕದಲ್ಲೇ ಕಂಚಿನ ಶಿಲ್ಪಗಳಲ್ಲೇ ಅತ್ಯಂತ ಅಪರೂಪದ ಕಂಚಿನ ಚತುರ್ಮುಖಶಿವ ದೊರೆತಿದೆ. ೬೯ ಸೆಂ.ಮೀ. ಅಗಲ ಮತ್ತು ೫೧ ಸೆಂ.ಮೀ ಎತ್ತರ ಅಳತೆಯಿಂದ ಕೂಡಿದ್ದು, ಜಟಾಮುಕುಟ, ಕುತ್ತಿಗೆಯಲ್ಲಿ ವಿಭಿನ್ನಸರಗಳು, ಕುಂಡಲಿ, ಉದರಪಟ್ಟಿ, ಸೊಂಟಪಟ್ಟಿ ಆಭರಣಗಳನ್ನು ಕಾಣಬಹುದಾಗಿದೆ. ಪದ್ಮಾಸನದಲ್ಲಿ ಕುಳಿತ ಇವನಿಗೆ ಮೂರು ಕೈಗಳು ಮುರಿದಿವೆ, ಸದ್ಯ ಇದು ಮೈಸೂರಿನ ಪುರಾತತ್ವ ವಿಭಾಗದಲ್ಲಿ ರಕ್ಷಣೆ ಪಡೆದಿದೆ.[೩೩]

೬.೩.೨ ನಂದಿಶಿಲ್ಪಗಳು

ಶೈವ ಧರ್ಮದಲ್ಲಿ ಶಿವನಿಗೆ ಪ್ರಾತಿನಿದ್ಯ ಕಲ್ಪಿಸಿದಂತೆ ಅಷ್ಟೇ ಮಹತ್ವವನ್ನು ಶಿವನ ವಾಹನವಾದ ನಂದಿಗೂ ನೀಡಲಾಗಿದೆ. ಈತನನ್ನು ಪ್ರತ್ಯೇಕವಾಗಿ ಪೂಜಿಸುವ ಪರಂಪರೆ ಪ್ರಾಚೀನ ಕಾಲದಿಂದಲೂ ಕಾಣಬಹುದಾಗಿದೆ. ಪುರಾಣಗಳಲ್ಲಿ ನಂದಿಶಿಲ್ಪದ ಬಗ್ಗೆ ಪ್ರಸ್ತಾಪಗಳಿದ್ದು, ನಂದಿಯ ಬೆನ್ನಮೇಲೆ ಡುಬ್ಬ ವೃತ್ತಾಕಾರಾದವಾಗಿದ್ದು, ಅದು ಮುಂದಣ ಕಾಲದಲ್ಲಿ ಲಿಂಗದೊಂದಿಗೆ

ತಾದಾತ್ಮ್ಯವನ್ನು ಪಡೆಯಿತು. ಲಿಂಗಾಕಾರದ ಡುಬ್ಬ ಬೆನ್ನ ಮೇಲಿರುವುದರಿಂದ ನಂದಿಯೂ ಕೂಡ ಶಿವಲಿಂಗ ಎಂದೆನಿಸಿಕೊಳ್ಳುತ್ತದೆ. ನಂತರದ ಕಾಲಘಟ್ಟದಲ್ಲಿ ಶಿವನ ಜಟಾಮುಕುಟ, ಜಟಾಭಾರಗಳೂ ಆ ಡುಬ್ಬಿನ ರೂಪಾಂತರಗಳೇ ಆಗಿರಬಹುದೆಂದು ಎಸ್.ಕೆ. ರಾಮಚಂದ್ರರಾವ್ ರವರ ಅಭಿಪ್ರಾಯ.[೩೪] ಮುಂದೆ ಅಂದರೆ ಪ್ರತಿ ಶೈವ ಧರ್ಮದ ದೇವಾಲಯಗಳ ಗರ್ಭಗೃಹದಲ್ಲಿ ಪ್ರಧಾನ ದೇವರಾಗಿ, ಶಿವಲಿಂಗಕ್ಕೆ ಅಭಿಮುಖವಾಗಿಯೂ, ಅಂತರಾಳದಲ್ಲಿ ಅಥವಾ ಸಭಾಮಂಟಪದಲ್ಲಿ ನಂದಿಯನ್ನು ಪ್ರತಿಷ್ಠಾಪಿಸಿರುತ್ತಾರೆ. ಈ ಶಿಲ್ಪಗಳಲ್ಲಿ ಸಾಮಾನ್ಯವಾಗಿ ಹಣೆಯಲ್ಲಿ ಕುಚ್ಚಿನ ಪದಕ, ಕತ್ತಿನ ಘಂಟೆಸರ, ಉದರ ಪಟ್ಟಿಕೆ ಮೊದಲಾದ ವಸ್ತ್ರಾಭರಣಗಳಿಂದ ಅಲಂಕೃತವಾಗಿರುತ್ತವೆ. ಪ್ರಸ್ತುತ ಅಧ್ಯಯನದ ಈ ಪ್ರದೇಶದಲ್ಲಿ ಈ ರೀತಿಯ ಶಿಲ್ಪಗಳನ್ನು ಕಾಣಬಹುದಾಗಿದೆ.

ಶಿಲ್ಪ	:	ನಂದಿ
ಸ್ಥಳ	:	ದೊಡ್ಡಪ್ಪ ದೇವಾಲಯದಲ್ಲಿ(ಅದರಗುಂಚಿ)
ತಾಲೂಕು	:	ಹುಬ್ಬಳ್ಳಿ
ಕಾಲಮಾನ	:	೧೨ನೇ ಶತಮಾನ
ವಸ್ತು	:	ಕಪ್ಪುಶಿಲೆ

ಚೌಕಾಕಾರದ ಪೀಠದ ಮೇಲಿರುವ ಈ ನಂದಿಯ ಶಿಲ್ಪವು ಎಡಗಾಲನ್ನು ಮುಂದೆ ಮಡಚಿದೆ, ತನ್ನ ಎಡಗಾಲನ್ನು ಒಳಕ್ಕೆ ಎಳೆದುಕೊಂಡಿದ್ದು ಗೋಚರಿಸುತ್ತದೆ. ಈ ನಂದಿಯ ಶಿಲ್ಪದ ಕೊರಳಲ್ಲಿ ಘಂಟಾಸರ, ಗಗ್ಗರಿ ಆಭರಣಗಳು ಕಂಡು ಬರುತ್ತದೆ.

ಶಿಲ್ಪ	:	ನಂದಿ
ಸ್ಥಳ	:	ಹಳೇ ಅಮೃತೇಶ್ವರ ದೇವಾಲಯ (ಅಣ್ಣಿಗೇರಿ)
ತಾಲೂಕು	:	ನವಲಗುಂದ
ಕಾಲಮಾನ	:	೧೩ನೇ ಶತಮಾನ
ವಸ್ತು	:	ಕಪ್ಪುಶಿಲೆ

ಹಳೇ ಅಮೃತೇಶ್ವರ ದೇವಾಲಯದ ಮುಂಭಾಗದಲ್ಲಿ, ವೃತ್ತಾಕಾರದ ಕಲ್ಲಿನ ಕಂಬದ ಮೇಲೆ ಈ ಶಿಲ್ಪ ಇರುವುದು ವಿಶೇಷವಾಗಿದೆ. ನಂದಿ ಶಿಲ್ಪವಿರುವ ಈ ಕಂಬವು ದುಂಡಾಗಿ ತಿರುಗಣೆಯಿಂದ ಕಡೆದಿದ್ದು, ಕಂಬದ ಕೆಳಭಾಗದಲ್ಲಿ ತೃಟಿತ ಶಾಸನವಿದೆ. ಅದರ ಮೇಲ್ಭಾಗದಲ್ಲಿ ಸೂರ್ಯ ಚಂದ್ರರ ಕೆತ್ತನೆ ಇದ್ದು, ಅದರ ಕೆಳಭಾಗದಲ್ಲಿ ಶಿವಲಿಂಗ ಮತ್ತು ಅದರ ಅಕ್ಕ-ಪಕ್ಕದಲ್ಲಿ ಚಿಕ್ಕ ನಂದಿಯ ಮೂರ್ತಿಗಳಿವೆ.[೩೭]

ಶಿಲ್ಪ : ನಂದಿ

ಸ್ಥಳ : ಊರಿನ ಮಧ್ಯ(ಮಡಕಲಕಟ್ಟಿ)

ತಾಲೂಕು : ಧಾರವಾಡ

ಕಾಲಮಾನ : ೧೨ನೇ ಶತಮಾನ

ವಸ್ತು : ಕಪ್ಪುಶಿಲೆ

ಉತ್ತರ ದಿಕ್ಕಿಗೆ ಮುಖವಾಗಿರುವ ಈ ನಂದಿಯು, ಆಯತಾಕಾರ ಪೀಠದ ಮೇಲೆ ಇದೆ. ಇದರ ಎತ್ತರ ೧೪೫ ಸೆಂ.ಮೀ. ಅಗಲ ೭೦ ಸೆಂ.ಮೀ. ಇದ್ದು, ಮುಂದಿನ ಎಡಗಾಲನ್ನು ಮುಂದಕ್ಕೂ, ಬಲಗಾಲನ್ನು ತನ್ನ ಒಳಗಡೆ ಮಡಚಿಕೊಂಡಿದೆ. ಮತ್ತು ಇದರ ಕೊರಳಲ್ಲಿ, ಕೊರಳಹಾರ, ಗೆಜ್ಜೆಸರ ಮತ್ತು ಕಾಲಗೆಜ್ಜೆ ಸರವನ್ನೂ ಮತ್ತು ಹಣೆಪಟ್ಟಿಯನ್ನು ಹೊಂದಿದೆ.[೩೮]

೬.೩.೩ ಭೈರವನ ಶಿಲ್ಪಗಳು

ಶಿವನ ಸಂಹಾರ ರೂಪದ ಶಿಲ್ಪಗಳಲ್ಲಿ ಭೈರವ ಶಿಲ್ಪವೂ ಒಂದು. ಶಿವಪುರಾಣ, ವಿಷ್ಣುಧರ್ಮೋತ್ತರ ಪುರಾಣ ಮತ್ತು ಸಾಹಿತ್ಯದಲ್ಲಿ ಉಲ್ಲೇಖವಿದೆ. ಭೈರವನೆಂದರೆ ಭಯಾನಕ ಭೂತ, ಪ್ರೇತಗಳ ಉಚ್ಚಾಟನೆಗೆಂದು ಭೈರವನನ್ನು ಇಂದಿಗೂ ಪೂಜಿಸುವ ವಾಡಿಕೆ ಇದ್ದು, ಕೈಗಳಲ್ಲಿ ಕಪಾಲವನ್ನು ದಂಡಪಾಣಿಯಾಗಿ ಹಿಡಿದು, ಸರ್ಪವನ್ನು ಯಜ್ಞೋಪವೀತವನ್ನು ಧರಿಸಿರುತ್ತಾನೆ. ಯಾಗವನ್ನು ನಾಶಪಡಿಸುವ ಈತನನ್ನು ಕ್ಷೇತ್ರಪಾಲಕನೆಂದು ಕರೆಯಲಾಗಿದೆ. ವರ್ತುಲಾಕಾರದ ಹಳದಿ ಕಣ್ಣು, ರುಂಡಮಾಲೆ ಧರಿಸಿದ್ದಾನೆ. ಶಾರದಾ ತಿಲಕ ತಂತ್ರ ಕೃತಿಯಲ್ಲಿ ಮೂರು ಪ್ರಭೇಧಗಳಿದ್ದು, ಸಾತ್ವಿಕ ರೂಪದಲ್ಲಿ ಭೈರವನು ದ್ವಿಭುಜನಾಗಿ, ದಿಗಂಬರನಾಗಿಯೂ, ಹಸನ್ಮುಖಿಯಾಗಿರುತ್ತಾನೆ. ಜೊತೆಗೆ ನಾಯಿ ಇರುತ್ತದೆ. ರಾಜಸಿಕ ರೂಪದಲ್ಲಿ ಭೈರವನು ಚತುರ್ಭುಜಧಾರಿಯಾಗಿ, ತಾಮಸಿಕ ರೂಪದಲ್ಲಿ ಅಷ್ಟಭುಜಧಾರಿಯಾಗಿ ಕೊರಳಲ್ಲಿ ರುಂಡಮಾಲೆ ಇದೆ.[೩೯] ಭೈರವನ ರೂಪದಲ್ಲಿ ತ್ರಿಪುರಾಂತಕ ಭೈರವ, ಬೇತಾಲ ಭೈರವ, ಅಗ್ನಿ ಭೈರವ, ಕಾಲ ಭೈರವ, ಭೀಮರೂಪ ಭೈರವ ಎಂಬ ವೈವಿಧ್ಯತೆಗಳು ಇವೆ.[೪೦] ಪ್ರಸ್ತುತ ಅಧ್ಯಯನ ಪ್ರದೇಶದ ವ್ಯಾಪ್ತಿಯಲ್ಲಿ ಭೈರವನ ಶಿಲ್ಪಗಳನ್ನು ಗುರುತಿಸಬಹುದಾಗಿದೆ. ಅವುಗಳಲ್ಲಿ ಕೆಲವೊಂದವುಗಳನ್ನು ಇಲ್ಲಿ ಚರ್ಚಿಸಲಾಗಿದ್ದು, ಇನ್ನುಳಿದವುಗಳ ಬಗ್ಗೆ ಅಧ್ಯಾಯದ ಕೊನೆಯಲ್ಲಿ ಪಟ್ಟಿಯನ್ನು ನೀಡಲಾಗಿದೆ.

ಶಿಲ್ಪ : ಭೈರವ

ಸ್ಥಳ : ಹನುಮಂತ ದೇವಾಲಯದ ಪಕ್ಕದಲ್ಲಿ(ಶಿರಗುಪ್ಪಿ)

ತಾಲೂಕು : ಹುಬ್ಬಳ್ಳಿ

ವಸ್ತು : ಕಪ್ಪುಶಿಲೆ

ಕಾಲಮಾನ : ೧೨ನೇ ಶತಮಾನ

ನಗ್ನವಾಗಿ ತ್ರಿಭಂಗಿಯಲ್ಲಿ ಭೈರವನು ನಿಂತಿದ್ದು, ಅಷ್ಟಭುಜವನ್ನು ಹೊಂದಿದ್ದಾನೆ. ಕ್ರಮವಾಗಿ ಈತನ ಕೈಗಳಲ್ಲಿ ಖಡ್ಗ, ಕೊಡಲಿ, ತ್ರಿಶೂಲ, ಡಮರು, ಕಪಾಲ ಹಿಡಿದಿದ್ದಾನೆ. ಇವನ ಕೂದಲೆಲ್ಲಾ ಗಂಟು-ಗಂಟಾಗಿ ಊರ್ಧ್ವವಾಗಿವೆ ಮತ್ತು ಕೆಳಗಿನ ಕೊನೆಯ ಎಡಗೈಯಲ್ಲಿ ಕತ್ತರಿಸಿದ ರುಂಡವನ್ನು ಹಿಡಿದಿದ್ದು, ಅದರಿಂದ ಬೀಳುವ ರಕ್ತವನ್ನು ನಾಯಿ ನೋಡುತ್ತಲಿದೆ. ಜೊತೆಗೆ ಉಪವೀತ, ಕಂಠಹಾರ, ಉದರಬಂಧ, ಕಂಕಣ, ಪಾದರಸ ಆಭರಣಗಳನ್ನು ಧರಿಸಿದ್ದು, ಕೆಳಗಡೆ ನೃತ್ಯಾರ್ತಿಯರು, ಕನ್ಯೆಯರು, ಪೀಠದಲ್ಲಿ ನಂದಿ ಇತರೆ ಶಿಲ್ಪಗಳ ಕೆತ್ತನೆ ಇದೆ.[೯೧]

ಶಿಲ್ಪ : ಭೈರವ

ಸ್ಥಳ : ಬಸವಣ್ಣ ದೇವಾಲಯದ ಗೋಡೆ ಮೇಲಿದೆ(ಬೆಟದೂರು)

ತಾಲೂಕು : ಕುಂದಗೋಳ

ಕಾಲಮಾನ : ೧೧ನೇ ಶತಮಾನ

ವಸ್ತು : ಕಪ್ಪುಶಿಲೆ

ತ್ರಿಭಂಗಿಯಲ್ಲಿ ನಗ್ನವಾಗಿ ನಿಂತಿರುವ ಭೈರವನು, ನಾಲ್ಕು ಕೈಗಳನ್ನು ಹೊಂದಿದ್ದಾನೆ. ಕ್ರಮವಾಗಿ ಖಡ್ಗ, ಡಮರು, ತ್ರಿಶೂಲ ಮತ್ತು ಕಪಾಲವನ್ನು ಹಿಡಿದುಕೊಂಡಿದ್ದಾನೆ. ಮತ್ತು ಕಿರೀಟ ಮುಕುಟ, ಕರ್ಣಕುಂಡಲ, ಕಂಠಹಾರ, ಯಜ್ಞೋಪವೀತ, ರುಂಡಮಾಲೆ, ಕಾಲ್ಗಡಗ, ಕೈಗಡಗ, ಕಟಿವಸ್ತ್ರ ಮತ್ತು ಪಾದರಕ್ಷೆಗಳನ್ನು ಧರಿಸಿದ್ದಾನೆ. ತಲೆಯಿಂದ ತೊಡೆಯವರೆಗೆ ರುಂಡಮಾಲೆ ಇದೆ. ಕೇಶವನ್ನು ಕೇದಿಗೆಯಿಂದ ಹೆಣೆದ ಪ್ರಭಾವಳಿಯಿದೆ. ಸುತ್ತಲೂ ತೊಡೆಗಳಲ್ಲಿ ಹಾವುಗಳಿದ್ದು, ಸುತ್ತಲೂ ಲತಾಸುರುಳಿಯಿಂದ ಅಲಂಕರಿಸಲಾಗಿದೆ.[೯೨]

ಶಿಲ್ಪ : ಭೈರವ

ಸ್ಥಳ : ಊರಮಧ್ಯದಲ್ಲಿ(ತುಪ್ಪದ ಕುರಹಟ್ಟಿ)

ತಾಲೂಕು : ನವಲಗುಂದ

ಕಾಲಮಾನ : ೧೦ನೇ ಶತಮಾನ

ವಸ್ತು : ಕಪ್ಪುಶಿಲೆ

ಸುಖಾಸನದಲ್ಲಿ ನಗ್ನವಾಗಿ ಕುಳಿತಿರುವ ಭೈರವನು, ಚತುರ್ಭುಜಧಾರಿಯಾಗಿದ್ದು, ಕೈಗಳಲ್ಲಿ ಕತ್ತಿ, ಡಮರು, ತ್ರಿಶೂಲ ಮತ್ತು ಕಪಾಲಗಳಿವೆ. ಕೇಶಾಲಂಕಾರವು ಕೇದಿಗೆಯಂತೆ ಹೆಣೆದಿರುವ ಪ್ರಭಾವಳಿ ಇದೆ. ಕೊರಳಲ್ಲಿ ರುಂಡಮಾಲೆ, ಸರ್ವಾಭರಣಗಳಿಂದ ಭೂಷಿತನಾಗಿದ್ದಾನೆ. ಮತ್ತು ಪೀಠದಲ್ಲಿ ಶವದ ಚಿತ್ರಣವಿದ್ದು, ಅದರ ಮುಂದೆ ನಾಯಿಯು ಕಂಡು ಬರುತ್ತದೆ.[೯೩]

ಶಿಲ್ಪ : ಭೈರವ

ಸ್ಥಳ : ಮಲ್ಲಿಕಾರ್ಜುನ ದೇವಾಲಯದ ಒಳಪೀಠದ ಮೇಲೆ (ನರೇಂದ್ರ)

ತಾಲೂಕು : ಧಾರವಾಡ

ಕಾಲಮಾನ : ೧೬ನೇ ಶತಮಾನ

ವಸ್ತು : ಕಪ್ಪುಶಿಲೆ

ಪದ್ಮಾಸನದಲ್ಲಿ ಕುಳಿತಿರುವ ಭೈರವನಿದ್ದು, ನಾಲ್ಕು ಕೈಗಳು ಇವೆ. ಕ್ರಮವಾಗಿ ಖಡ್ಗ, ಡಮರು, ತ್ರಿಶೂಲ ಮತ್ತು ಅಂಗೈ ಮೇಲೆ ಪಾನಪಾತ್ರೆಯನ್ನು ಹಿಡಿದಿದ್ದಾನೆ. ಕೀರ್ತಿಮುಖವನ್ನು ಹೊಂದಿರುವ ಈತನು ತಲೆಗೆ ಕಿರೀಟ, ಚಕ್ರಕುಂಡಲ, ಕೊರಳಲ್ಲಿ ಹಾರ ಮತ್ತು ಕಾಲಲ್ಲಿ ಕಾಲ್ಗಡಗವನ್ನು ಗುರುತಿಸಬಹುದಾಗಿದೆ.[೪೪]

೬.೩.೪ ಕಾರ್ತಿಕೇಯ ಶಿಲ್ಪಗಳು

ಶಿವನ ಪರಿವಾರದಲ್ಲಿ ಕಾರ್ತಿಕೇಯನಿಗೆ ವಿಶೇಷವಾದ ಸ್ಥಾನವಿದೆ. ಈತನ ಹುಟ್ಟಿನ ಬಗ್ಗೆ ರಾಮಾಯಣದ ಬಾಲಕಾಂಡ ಮತ್ತು ಮಹಾಭಾರತದ ವನಪರ್ವತ, ತಿರುಮುರುಗರುಪ್ಪಡೆ, ಶಿಲಪ್ಪದಿಗಾರಂ ಗ್ರಂಥದಲ್ಲಿ ಪ್ರಸ್ತಾಪವಿದೆ.[೪೫] ಶಿವನ ಮುಖಗಳಿಂದ ಹೊರಹೊಮ್ಮಿದ ಆರು ಕಳೆಗಳ ತೇಜಸ್ಸನ್ನು ಅಗ್ನಿ ಮತ್ತು ವಾಯು ತೆಗೆದುಕೊಂಡು ಹೋಗಿ "ಶರವಣ" ಸರೋವರದಲ್ಲಿರಿಸಿದ್ದರಿಂದ ಅದು 'ಶರವಣಭವ'ವಾಯಿತು. ಅಲ್ಲಿ ಆರು ಜನ ಕೃತಿಕೆಯರು ಅದನ್ನು ಬೆಳೆಸಿದ್ದರಿಂದ ಕಾರ್ತಿಕೇಯನಾದನು. ಇವನ ಪ್ರಪ್ರಥಮ ರೂಪ ಮುರುಗನ್. ಪಾರ್ವತಿ ಮುರುಗನನ್ನು ಶರವಣ ಸರೋವರದಲ್ಲಿ ನೋಡಿ ಅವನು ಆರು ಕಳೆಗಳನ್ನು ಅಪ್ಪಿಕೊಂಡಾಗ ಅವನು ಸ್ಕಂದ ರೂಪವನ್ನು ಪಡೆದುಕೊಂಡನು. ನಂತರ ಶಿವ–ಪಾರ್ವತಿಯರು ತಮ್ಮ ಮಧ್ಯನಿಲ್ಲಿಸಿಕೊಂಡು ಹಾಲುಣಿಸಿದಾಗ ಅವನು ಸೋಮಸ್ಕಂದನಾದನು. ಪಾರ್ವತಿಯ ಸೂಪುರದಿಂದ ಒಂಭತ್ತು ಜನ ವೀರರು ಮಗುವಿನ ಬಂಟರಾಗಿ ಅವನ ರಕ್ಷಕರಾದರು. ಲೋಕಕಂಟಕನಾದ ಅಸುರ ತಾರಕನೊಂದಿಗೆ ಆರು ದಿನದ ಮಗುವಾದ ಕುಮಾರ ತನ್ನ ಬಂಟರೊಂದಿಗೆ ಹೋರಾಡಿ ತಾರಕನನ್ನು ವಜ್ರಾಯುಧದಿಂದ ಸಂಹರಿಸಿದನು. ಮತ್ತು ತಾರಕನ ತಮ್ಮನಾದ ಶೂರಪದ್ಮನೊಂದಿಗೆ ಘೋರಯುದ್ಧ ನಡೆಯಿತು. ಈ ಯುದ್ಧದಲ್ಲಿ ಶೂರಪದ್ಮನು ಮಾವಿನರೂಪ ತಳೆದು ಅವಿತುಕೊಂಡಾಗ ಕುಮಾರನು ತನ್ನ ಮೇಲಾಯುಧದಿಂದ ಆ ಮರವನ್ನು ಸೀಳಿದಾಗ ಅಸುರನ ಮೈ ಇಬ್ಭಾಗವಾಗಿ ಒಂದು ಭಾಗ ನವಿಲಿನಂತೆ ಇನ್ನೊಂದು ಭಾಗ ಕೋಳಿಯಂತೆ ಕಾಣಿಸಿಕೊಂಡವು ಮುಂದೆ ಕುಮಾರನು ನವಿಲನ್ನು ತನ್ನ ಧ್ವಜವನ್ನಾಗಿ ಮಾಡಿಕೊಂಡನು.[೪೬] ಕಾರ್ತಿಕೇಯನಿಗೆ ದಕ್ಷಿಣ ಭಾರತದಲ್ಲಿ ವಿವಿಧ ಹೆಸರುಗಳಿಂದ ಪೂಜಿಸಲಾಗುತ್ತಿದೆ. ಮುರುಗ, ಕಾರ್ತಿಕೇಯ, ಶೇಯೋನ್, ಸೇನಾನಿ, ಶವಗುರು, ದೇಶಿಕ, ಗುಹ, ಬಾಲಸ್ವಾಮಿ, ಗುರುಗುಹ.[೪೭] ಹೆಸರುಗಳನ್ನು ಗುರಿತಿಸಬಹುದಾಗಿದೆ. ಕಾರ್ತಿಕೇಯ

ಶಿಲ್ಪಗಳ ಪ್ರತಿಮಾ ಲಕ್ಷಣಗಳಿಗೆ ಸಂಬಂಧಿಸಿದಂತೆ ಈತನಿಗೆ ಆರು ತಲೆಗಳಿದ್ದಾಗ ಹನ್ನೆರಡು ಕೈಗಳಿರುತ್ತವೆ. ಹಾಗೆಯೆ ಚತುರ್ಭುಜ ಶಿಲ್ಪಗಲ್ಲಿ ಎಡಗೈಯಲ್ಲಿ ವಜ್ರಾಯುಧ, ಬಲಗೈಯಲ್ಲಿ ಶಕ್ತಾಯುಧ ಇರುತ್ತವೆ. ಚತುರ್ಭುಜಧಾರಿಯಾಗಿದ್ದು, ಒಂಟಿಯಾಗಿ ಸ್ಥಾನಿಕ ಭಂಗಿಯಲ್ಲಿದ್ದರೆ ಅದು ರಾಜಸಿಕ ಶಿಲ್ಪವೆಂದೂ, ಆಸೀನ ಭಂಗಿಯಲ್ಲಿ ದ್ವಿಭುಜಗಳಿದ್ದ ಸಂದರ್ಭದಲ್ಲಿ ಶಿಲ್ಪವು ಸಾತ್ವಿಕ ಶಿಲ್ಪವೆಂದೂ, ಮತ್ತು ಮಯೂರರೂಢಾನಾಗಿ ಆರು, ಎಂಟು, ಅಥವಾ ಹನ್ನೆರಡು ಭುಜಗಳಿದ್ದ ಸಂದರ್ಭದಲ್ಲಿ ಅದು ತಾಮಸಶಿಲ್ಪವೆಂದೂ ಗುರುತಿಸಲಾಗಿದೆ.[೪೮]

ಪ್ರಸ್ತುತ ಧಾರವಾಡ ಜಿಲ್ಲೆಯ ಕಂಡು ಬರುವ ಈ ಶಿಲ್ಪಗಳನ್ನು ಅಧ್ಯಾಯದ ಕೊನೆಯಲ್ಲಿ ನೀಡಲಾಗಿದೆ.

೬.೩.೫ ವೀರಭದ್ರನ ಶಿಲ್ಪಗಳು

ಶಿವನ ಹಲವು ರೂಪಗಳಲ್ಲಿ ವೀರಭದ್ರನೂ ಒಬ್ಬ. ಪರ್ವತರಾಜನಾದ ದಕ್ಷನು ಯಜ್ಞವನ್ನು ಮಾಡಲು ನಿರ್ಧರಿಸಿ ಆ ಯಜ್ಞಕ್ಕೆ ಮಗಳಾದ ದಾಕ್ಷಾಯಣಿ ಮತ್ತು ಅಳಿಯ ಶಿವನನ್ನು ಮಾತ್ರ ಕರೆಯದೆ ಉಳಿದ ಎಲ್ಲಾ ದೇವ-ದೇವತೆಯರಿಗೆ ಆಹ್ವಾನವಿತ್ತನು. ಯಜ್ಞ ಪ್ರಾರಂಭವಾಗಲು ದಾಕ್ಷಾಯಣಿಯು ತನ್ನತಂದೆಯಿಂದ ಆಹ್ವಾನ ಬರದೆ ಇದ್ದರೂ ಶಿವನನ್ನು ಕಾಡಿ ಬೇಡಿ ಅವನ ಸಮ್ಮತಿಯಂತೆ ಆಗಮಿಸುತ್ತಾಳೆ. ಆಗ ತಂದೆಯ ವರ್ತನೆಯಿಂದ ಮನನೊಂದು ದಾಕ್ಷಾಣಿಯು ಅಲ್ಲೇ ನಡೆಯುವ ಯಜ್ಞಕುಂಡದಲ್ಲಿ ಹಾರಿ ಪ್ರಾಣ ಬಿಡುತ್ತಾಳೆ. ಈ ವಿಷಯವನ್ನು ತಿಳಿದ ಶಿವನು ತನ್ನ ಜಡೆಯನ್ನು ನೆಲಕಪ್ಪಳಿಸಲು ಆಗ ವೀರಭದ್ರನು ಜನ್ಮತಾಳಿ ಆ ದಕ್ಷನ ಯಜ್ಞವನ್ನು ಧ್ವಂಸಮಾಡಿ ಅವನ ಶಿರಚ್ಛೇಧನ ಮಾಡುತ್ತಾನೆ. ಆಗ ದಕ್ಷನ ಪತ್ನಿಯಾದ ವೀರಾಣಿಯು ತನ್ನ ಪತಿಯನ್ನು ಬದುಕಿಸುವಂತೆ ಅಂಗಲಾಚಿದಾಗ ವೀರಭದ್ರನು ಅಲ್ಲಿಯೇ ಇದ್ದ ಟಗರಿನ ಮುಖವೊಂದನ್ನು ಅವನ ಶರೀರಕ್ಕೆ ಸೇರ್ಪಡಿಸಿ ಜೀವದಾನವನ್ನು ನೀಡುತ್ತಾನೆ. ಹೀಗೆಯೇ ವೀರಭದ್ರನ ಹಿನ್ನೆಲೆಯನ್ನು ನಾವು ವೈದಿಕ ಸಾಹಿತ್ಯ, ಲಿಂಗ, ಸ್ಕಂದ, ಮತ್ಸ್ಯ, ವಿಷ್ಣು, ವಾಯು, ಶಿವ, ಬ್ರಹ್ಮಾಂಡ, ಭಾಗವತ ಪುರಾಣಗಳಲ್ಲಿ, ಮಹಾಭಾರತದಲ್ಲೂ ಉಲ್ಲೇಖಿತವಾಗಿದೆ.[೪೯]

ಕರ್ನಾಟಕದಲ್ಲಿ ವೀರಭದ್ರನ ಪ್ರಥಮ ಉಲ್ಲೇಖ ಹಾವೇರಿ ತಾಲೂಕಿನ ಕೋಳೂರದ ಕ್ರಿ.ಶ. ೧೦೪೫ರ ಶಾಸನದಲ್ಲಿ ದಾಖಲಾತಿಯಾಗಿದ್ದು, ನಂತರ ವಿಜಯನಗರ ಕಾಲಘಟ್ಟದಲ್ಲೂ ಇದು ಹೆಚ್ಚು ಮನ್ನಣೆಯನ್ನು ಪಡೆದುಕೊಂಡಿತು.[೫೦] ಮೂರ್ತಿಶಿಲ್ಪದ ವೈಶಿಷ್ಟ್ಯತೆಯ ದೃಷ್ಟಿಯಿಂದ ಸಾಮಾನ್ಯವಾಗಿ ವೀರಭದ್ರನು ವೀರಾಸನದಲ್ಲಿ ಅಥವಾ ಸಮಭಂಗಿಯಲ್ಲಿ ನಿಂತಿರುತ್ತಾನೆ. ನಾಲ್ಕು ಭುಜಗಳಿದ್ದು, ಕೈಯಲ್ಲಿ ಬಿಲ್ಲು, ಗದಾ, ಖಡ್ಗ, ಕೊರಳಲ್ಲಿ ರುಂಡಮಾಲೆ, ಹಾವಿನಿಂದ ಮಾಡಿದ ಯಜ್ಞೋಪವೀತ, ನಾಗಬಂಧ ಮತ್ತು ಕಾಲಲ್ಲಿ ಪಾದರಕ್ಷೆಯನ್ನು ಧರಿಸಿದ್ದು, ಮುಖಚರ್ಯ ಭಯಾನಕರವಾಗಿರುತ್ತದೆ. ಮತ್ತು ಈತನ ಎಡಬದಿಯಲ್ಲಿ ಟಗರಿನ ತಲೆ ಹೊಂದಿದ್ದು ದಕ್ಷನು ಅಂಜಲಿ ಮುದ್ರೆಯಲ್ಲಿ ನಿಂತಿದ್ದಾನೆ.

ಪ್ರಸ್ತುತ ಈ ಅಧ್ಯಯನದಲ್ಲಿ ಕೆಲವೊಂದು ಮೂರ್ತಿಶಿಲ್ಪಗಳ ಬಗ್ಗೆ ಚರ್ಚಿಸಿದ್ದು, ಇನ್ನುಳಿದವುಗಳನ್ನು ಅಧ್ಯಾಯದ ಕೊನೆಯಲ್ಲಿ ನೀಡಲಾಗಿದೆ.

ಶಿಲ್ಪ	:	ವೀರಭದ್ರ
ಸ್ಥಳ	:	ದೇವಾಲಯದ ಗರ್ಭಗೃಹ(ಹುಬ್ಬಳ್ಳಿ)
ತಾಲೂಕು	:	ಹುಬ್ಬಳ್ಳಿ
ಕಾಲಮಾನ	:	೧೬ನೇ ಶತಮಾನ
ವಸ್ತು	:	ಕಪ್ಪುಶಿಲೆ

ಚೌಕಾಕಾರದ ಪೀಠದ ಮೇಲೆ ನಿಂತಿರುವ ವೀರಭದ್ರನು, ಚತುರ್ಭುಜವನ್ನು ಹೊಂದಿದ್ದಾನೆ. ಕೈಗಳಲ್ಲಿ ಗುರಾಣಿ, ಕತ್ತಿ, ಬಿಲ್ಲು ಮತ್ತು ಬಾಣಗಳನ್ನು ಹಿಡಿದಿದ್ದಾನೆ. ಜಟಾಧಾರಿಯಾದ ಇವನು ಕರ್ಣ ಕುಂಡಲ, ಯಜ್ಞೋಪವೀತ, ಕೇಯೂರ, ಕಂಕಣ, ಕಡಗ, ಕಟಿವಸ್ತ್ರ, ಕಾಲ್ಗಡಗ ಮುಂತಾದ ಆಭರಣಗಳನ್ನು ಧರಿಸಿರುವುದು ಕಂಡು ಬರುತ್ತದೆ.[೫೧]

ಶಿಲ್ಪ	:	ವೀರಭದ್ರ
ಸ್ಥಳ	:	ಕಲ್ಮೇಶ್ವರ ದೇವಾಲಯದ ಗರ್ಭಗೃಹ(ಯರಗುಪ್ಪಿ)
ತಾಲೂಕು	:	ಕುಂದಗೋಳ
ಕಾಲಮಾನ	:	೧೨ನೇ ಶತಮಾನ
ವಸ್ತು	:	ಕಪ್ಪು ಶಿಲೆ

ತ್ರಿಭಂಗಿಯಲ್ಲಿ ನಿಂತಿರುವ ವೀರಭದ್ರನು ಚತುರ್ಭುಜಧಾರಿಯಾಗಿದ್ದು, ಖಡ್ಗ, ಬಾಣ, ಬಿಲ್ಲು, ಖೇಟಕ, ಆಯುಧಗಳನ್ನು ಹಿಡಿದಿದ್ದಾನೆ. ಮತ್ತು ಕಂಠಹಾರ, ಕರ್ಣಕುಂಡಲ, ತೋಳ್ಬಂದಿ, ಕಟಿವಸ್ತ್ರ, ಕಾಲ್ಗಡಗ ಇನ್ನೂ ಮುಂತಾದ ಆಭರಣಗಳನ್ನು ಧರಿಸಿದ್ದಾನೆ. ಈ ವಿಗ್ರಹವು ಸಿಂಹಗಳುಳ್ಳ ಪೀಠದ ಮೇಲೆ ಪ್ರತಿಷ್ಠಾಪಿಸಿದ್ದನ್ನು ಕಾಣಬಹುದಾಗಿದೆ.[೫೨]

೬.೩.೬ ಗಾಣಪತ್ಯ ಶಿಲ್ಪಗಳು

ಶಿವ-ಪಾರ್ವತಿಯರ ಮಗನಾದ ಗಣಪತಿಯು ಗಜಮುಖನಾದ ಇತಿಹಾಸ ಅಪೂರ್ವವಾದದ್ದು, ಎಲ್ಲರಿಗೂ ತಿಳಿದೇ ಇದೆ. ಇವನ ಹುಟ್ಟಿನ ಬಗ್ಗೆ ಹಲವಾರು ದಂತ ಕಥೆಗಳಿವೆ. ಪುರಾಣಗಳಲ್ಲಿ, ಆಗಮಶಾಸ್ತ್ರಗಳಲ್ಲಿ, ಬ್ರಾಹ್ಮಣಸೂತ್ರದಲ್ಲಿ, ಧರ್ಮಶಾಸ್ತ್ರಗಳಲ್ಲಿ ಉಲ್ಲೇಖಗಳನ್ನು ಗುರ್ತಿಸಬಹುದಾಗಿದೆ. ಹಿಮಪರ್ವತದಲ್ಲಿ ಕಾಮಕೇಳಿಯಲ್ಲಿ ಗಜಗಳ ಮಿಥುನವನ್ನು ಕಂಡ ಶಿವ-ಪಾರ್ವತಿಯರು ತಾವು ಕ್ರೀಡಿಸಬೇಕೆಂದು ಅಲೌಕಿಖ ಆಸೆಯ ಫಲವಾಗಿ ಜನಿಸಿದವನೇ ಗಣೇಶ ಎಂದು ಆಗಮದಲ್ಲಿ ಉಲ್ಲೇಖಿಸಿದೆ.[೫೩]

ವೈದಿಕ ಸಂಪ್ರದಾಯದ ಅನೇಕ ದೇವತೆಗಳಂತೆ ಹಿಂದೂಗಳ ಆದಿ ದೇವಗಳದಲ್ಲಿ ಗಣೇಶನೂ ಒಬ್ಬನಾಗಿದ್ದಾನೆ. ಶಿವನ ಪುತ್ರನಾಗಿ, ಬುದ್ಧಿಶೀಲ ಬೃಹಸ್ಪತಿಯಾಗಿದ್ದನು. ವೈದಿಕ ದೇವತೆಗಳೇ ಪುರಾಣಕಾಲದ ಗಜಮುಖ, ವಿನಾಯಕ ಎಂಬುದು ವಿದ್ವಾಂಸರುಗಳ ಅಭಿಮತವಾಗಿದೆ.[೩೪] ಪ್ರಾಚೀನ ಕಾಲಘಟ್ಟದಲ್ಲಿ ಶೂದ್ರರು ಗಣೇಶನನ್ನು ಆರಾಧಿಸುತ್ತಿದ್ದರು. ನಂತರದಲ್ಲಿ ಬ್ರಾಹ್ಮಣರು, ಶಂಕರಾಚಾರ್ಯರರು ಗಾಣಪತ್ಯರೆಂಬ ಉಗ್ರಪಂಥದವರು ಈತನ ಆರಾಧನೆಯನ್ನು ಮಾಡತೊಡಗಿದರು. ಪ್ರಸ್ತುತ ಇಂದು ಎಲ್ಲಾ ಪಂಗಡಗಳು ಈತನನ್ನ ಆರಾಧಿಸುತ್ತಿದ್ದಾರೆ.[೩೫]

ಪ್ರಾರಂಭದ ಕಾಲಘಟ್ಟದಲ್ಲಿ ಗಣೇಶನ ಶಿಲ್ಪಗಳಿಗೆ ಯಾವುದೇ ಅಲಂಕಾರಗಳು ಇಲ್ಲದೇ ನಿರಾಭರಣವಾಗಿದ್ದು, ನಂತರದ ಕಾಲಘಟ್ಟದಲ್ಲಿ ಕರಂಡ ಮಕುಟ, ಜಟಾಮುಕುಟ, ರತ್ನಮಕುಟಾ, ರತ್ನಹಾರಗಳು, ಯೂಪವೀತ, ಕಂಠಹಾರ, ನಾಗಯಜ್ಞೋಪವೀತ ಇನ್ನೂ ಮುಂತಾದ ಅಭರಣಗಳಿಂದ ಶೋಭಿಸತೊಡಗಿದನು, ಮೂರ್ತಿಶಿಲ್ಪದ ವೈಶಿಷ್ಠತೆಯ ದೃಷ್ಠಿಯಿಂದ ಗಣೇಶನನ್ನು ನೋಡಲಾಗಿ ಸ್ಥಾನಿಕ ಶಿಲ್ಪಗಳಲ್ಲಿ ಸಮಭಂಗಿ, ದ್ವಿಭಂಗಿ ಮತ್ತು ತ್ರಿಭಂಗಿಯಲ್ಲಿರುವುದನ್ನು ಗುರುತಿಸಬಹುದಾಗಿದೆ. ಸೊಂಡಿಲು ಎಡಗಡೆ ಅಥವಾ ಬಲಗಡೆ ತಿರುಗಿರುತ್ತದೆ. ಈತನ ನಾಲ್ಕು, ಎಂಟು, ಹನ್ನೆರಡು ಅಥವಾ ಹದಿನಾರು ಕೈಗಳು ಇರುತ್ತವೆ. ಕೈಯಲ್ಲಿ ಮೊದಕ, ಅಂಕುಶ, ಪಾಶ, ಪರಶು, ಬಿಲ್ಲು, ದಂತ, ವಲಯ, ಗದಾ, ಸರ್ಪ, ಪುಷ್ಪ, ಸೊಂಟಕ್ಕೆ ಹುಲಿಯ ಚರ್ಮ, ಇತ್ಯಾದಿ ಆಭರಣಗಳನ್ನು ಧರಿಸಿರುತ್ತಾನೆ.[೩೬]

ಜೊತೆಗೆ ಗಣೇಶನ ವಿವಿಧ ರೂಪಗಳಲ್ಲಿ ಬಾಲಗಣಪತಿ, ತರುಣಗಣಪತಿ, ಭಕ್ತಗಣಪತಿ, ವೀರಗಣಪತಿ, ಶಕ್ತಿಗಣಪತಿ, ಸಿದ್ಧಿಗಣಪತಿ ಹೀಗೆ ಮೂವತ್ತೆರಡು ರೀತಿಯ ಸ್ವರೂಪಗಳನ್ನು ತೋರಿಸಲಾಗಿದೆ.[೩೭] ಪ್ರಸ್ತುತ ಅಧ್ಯಯನ ಪ್ರದೇಶದಲ್ಲಿ ಗಣೇಶನ ಮೂರ್ತಿಶಿಲ್ಪಗಳು ಕಂಡು ಬಂದಿವೆ, ಕೆಲವುಗಳನ್ನು ಚರ್ಚಿಸಿದ್ದು, ಇನ್ನುಳಿದವುಗಳನ್ನು ಅಧ್ಯಾಯದ ಕೊನೆಯಲ್ಲಿ ನೀಡಲಾಗಿದೆ.

ಶಿಲ್ಪ	:	ಗಣೇಶ
ಸ್ಥಳ	:	ಭವಾನಿ ಶಂಕರ ದೇವಾಲಯ(ಹುಬ್ಬಳ್ಳಿ)
ತಾಲೂಕು	:	ಹುಬ್ಬಳ್ಳಿ
ಕಾಲಮಾನ	:	ಕ್ರಿ.ಶ. ೧೨ ಶತ
ವಸ್ತು	:	ಕಪ್ಪುಶಿಲೆ

ಸೂರ್ಯನ ಬಿಂಬವಿರುವ ಪೀಠದ ಮೇಲೆ, ಸುಖಾಸನದಲ್ಲಿ ಆಸೀನನಾಗಿದ್ದಾನೆ. ಚತುರ್ಭುಜಧಾರಿಯಾದ ಈತನು ದಂತ, ಪರಶು, ಅಂಕುಶ, ಮೋದಕ ಹಿಡಿದಿದ್ದಾನೆ, ಸೊಂಡಿಲಿನಿಂದ ಮೋದಕವನ್ನು ತೆಗೆದುಕೊಳ್ಳುತ್ತಿರುವಂತೆಯೂ, ಸೊಂಡಿಲಿನ ಬಲಗಡೆ ಏಕದಂತನ ಇರುವಿಕೆಯನ್ನು ಕಾಣಬಹುದಾಗಿದೆ. ಕಿರೀಟ, ಅಗಲವಾದ ಕಿವಿ, ಮುತ್ತಿನ ಅಲಂಕರಣ, ಭುಜಬಂಧ, ಕಂಕಣ, ಕಿಂಕಿಣಿ, ಯಜ್ಞೋಪವೀತ, ಉದರಬಂಧ, ಕಡಗ ಇನ್ನೂ ಮುಂತಾದ ಅಭರಣಗಳನ್ನು ಕಾಣುತ್ತೇವೆ.[೩೮]

ಶಿಲ್ಪ	:	ಗಣೇಶ
ಸ್ಥಳ	:	ಊರ ನಡುವೆ(ಗುಡಿಸಾಗರ)
ತಾಲೂಕು	:	ನವಲಗುಂದ
ಕಾಲಮಾನ	:	೧೨ನೇ ಶತಮಾನ
ವಸ್ತು	:	ಕಪ್ಪುಶಿಲೆ

ಅಸೀನ ಭಂಗಿಯಲ್ಲಿ ಈ ಮೂರ್ತಿಯು ಚೌಕಪೀಠದ ಮೇಲೆ ಕುಳಿತಿದ್ದಾನೆ. ಚತುರ್ಭುಜಧಾರಿಯಾದ ಈತನು ಶಂಖ, ತ್ರಿಶೂಲ, ಖಡ್ಗ, ಮೋದಕವನ್ನು ಹಿಡಿದುಕೊಂಡಿದ್ದಾನೆ. ಅಲ್ಲದೇ ಕರಂಡ ಮುಕುಟ, ಕರ್ಣ ಕುಂಡಲ, ಕೊರಳಹಾರ, ತೋಳ್ಬಂದಿ, ಉದರಬಂಧ ಇನ್ನೂ ಮುಂತಾದ ಆಭರಣಗಳಿಂದ ಭೂಷಿತನಾಗಿದ್ದಾನೆ. ಜೊತೆಗೆ ಪೀಠದ ಕೆಳಭಾಗದಲ್ಲಿ ಗಣಪತಿಯ ವಾಹನವಾದ ಮೂಷಿಕ ಇದೆ. ಮತ್ತು ಗಣಪತಿ ಬಲಭಾಗದಲ್ಲಿ ಎರಡು ನಾಗದೇವರ ಶಿಲ್ಪವನ್ನೂ, ಎಡಭಾಗದಲ್ಲಿ ವಿಷ್ಣುವಿನ ಮೂರ್ತಿಯು ಕಂಡು ಬರುತ್ತದೆ.[೫೯]

ಶಿಲ್ಪ	:	ಗಣೇಶ
ಸ್ಥಳ	:	ವೀರಭದ್ರ ದೇವಾಲಯದ ಬಲಭಾಗ (ಕುರುಡಾಪುರ)
ತಾಲೂಕು	:	ಧಾರವಾಡ
ಕಾಲಮಾನ	:	೧೪ನೇ ಶತಮಾನ

ಪೀಠದ ಮೇಲೆ ಕುಳಿತಿರುವ ಈ ವಿಗ್ರಹವು, ಚತುರ್ಭುಜವನ್ನು ಹೊಂದಿದೆ. ಕೈಗಳಲ್ಲಿ ಹಾವು, ಕೊಡಲಿ, ಅಭಯಹಸ್ತ, ಮೋದಕ ಪಾತ್ರೆ ಕಂಡು ಬರುತ್ತದೆ. ಕೊರಳಲ್ಲಿ ಹಾರ, ಯಜ್ಞೋಪವೀತ ಇನ್ನೂ ಮುಂತಾದ ಆಭರಣಗಳನ್ನು ಗುರುತಿಸಬಹುದಾಗಿದೆ. ಅಲ್ಲದೇ ಕೆಳಗೆ ಅಕ್ಕ-ಪಕ್ಕದಲ್ಲಿ ನಾಗ, ಲಿಂಗ ಮತ್ತು ಸಣ್ಣ ಗಣಪತಿ ಶಿಲ್ಪವನ್ನು ಗುರುತಿಸಬಹುದಾಗಿದೆ.[೬೦]

೬.೪ ಶಾಕ್ತ ಶಿಲ್ಪಗಳು

೬.೪.೧ ಪೀಠಿಕೆ

ಕನ್ನಡ ನಾಡಿನಲ್ಲಿ ಶಕ್ತಿಯ ವಿವಿಧ ರೂಪಗಳು ಕ್ರಿ.ಶ. ೬ನೇ ಶತಮಾನದಲ್ಲಿ ಕಾಣಿಸಿಕೊಂಡವು. ಆದರೆ ಇದರ ಪ್ರಾಚೀನತೆಯನ್ನು ಋಗ್ವೇದದಲ್ಲಿ ಆದಿತೆ, ಸರಸ್ವತಿ, ಪೃಥ್ವಿ, ರಾತ್ರಿ, ಉಷನ್, ಹೀಗೆ ಉಲ್ಲೇಖಗಳಿದ್ದು, ಮಾರ್ಕಂಡೆಯ ಪುರಾಣದಲ್ಲಿ ೨೦೦ ಶ್ಲೋಕಗಳನ್ನು ಮತ್ತು 'ಶ್ರೀ ವಿದ್ಯಾವರ್ಣವ' ತಂತ್ರದಲ್ಲಿ ೮೫ ದೇವತಾ ಶಿಲ್ಪಗಳ ವಿವಿಧ ರೀತಿಯ ಪ್ರತಿಮಾ ಲಕ್ಷಣಗಳನ್ನು ಗುರುತಿಸಲಾಗಿದೆ. ಜನ ಜೀವನಾಡಿನಲ್ಲಿ ಸೇರಿ ಹೋಗಿದ್ದ ಮಾತೃದೇವತಾರಾಧನೆಯ ಪ್ರಭಾವ ಇಂದಿಗೂ ಉಳಿದು

ಬಂದಿದೆ. ಸಮಸ್ತ ಸೃಷ್ಟಿಗೆ ಶಕಿಯೇ ಮೂಲವಾಗಿದ್ದು, ಈ ಶಕ್ತಿಯೇ ದೇವಿ ಎಂಬುದು ಜನ ಸಾಮಾನ್ಯರಲ್ಲಿ ಬೇರು ಬಿಟ್ಟಿವೆ.[೬೧]

ದೇವಿಯ ಉಗಮದ ಬಗ್ಗೆ ಹಲವಾರು ಐತಿಹ್ಯವಿದ್ದು, ದಕ್ಷಬ್ರಹ್ಮನು ತನ್ನ ಮಗಳಾದ ದಾಕ್ಷಾಯಿಣಿ ಮತ್ತು ಅಳಿಯ ಶಿವನನ್ನು ಆಮಂತ್ರಿಸದೇ ಯಜ್ಞವನ್ನು ಕೈಗೊಂಡನು, ಆದರೆ ಈ ಯಜ್ಞಮಂಟಪಕ್ಕೆ ದಾಕ್ಷಾಯಣಿಯು ಹೋದಾಗ ದಕ್ಷಬ್ರಹ್ಮನು ಇವಳನ್ನು ಅವಮಾನಿಸುತ್ತಾನೆ. ಕೂಡಲೇ ಅವಳು ಯಜ್ಞಕುಂಡದಲ್ಲೇ ಹಾರಿ ಪ್ರಾಣವನ್ನು ಬಿಡುತ್ತಾಳೆ. ಈ ವಿಷಯವನ್ನು ತಿಳಿದ ಶಿವನು ತನ್ನ ಪತ್ನಿಯ ಶವವನ್ನು ಹೊತ್ತುಕೊಂಡು ದಿಕ್ಕೆಟ್ಟು ತಿರುಗುತ್ತಿರುವಾಗ ಅವನನ್ನು ಸಮಾಧಾನ ಪಡಿಸಲು ವಿಷ್ಣುವು ಆ ಶವವನ್ನು ಪ್ರವೇಶಿಸಿ ಹಲವಾರು ಭಾಗಗಳಾಗಿ ತುಂಡರಿಸಿದನು. ಹೀಗೆ ತುಂಡರಿಸಲ್ಪಟ್ಟ ದೇಹದ ಭಾಗಗಳು ವಿವಿಧ ಶಕ್ತಿ ಪೀಠಗಳಾದವಲ್ಲದೇ ಆರಾಧನೆಯ ಮುಖ್ಯ ಕೇಂದ್ರಗಳಾಗಿ ೧೦೮ ಶಕ್ತಿತೀರ್ಥಗಳಾದ ಬಗ್ಗೆ ಶಾಸ್ತ್ರಗಳಲ್ಲಿ ಉಲ್ಲೇಖಿತವಾಗಿದೆ.[೬೨]

ಹೀಗೆ ಆ ಶಕ್ತಿ ಹಲವಾರು ರೀತಿಯ ಅವತಾರಗಳಲ್ಲಿ ಮಹಿಷಮರ್ಧಿನಿ, ಗಜಲಕ್ಷ್ಮಿ, ಸಪ್ತಮಾತೃಕೆ, ಸರಸ್ವತಿ, ಕಾಳಿ ಇತರೆ ವಿವಿಧ ರೀತಿಯ ಹೆಸರುಗಳಿಂದ ಆರಾಧನೆಯನ್ನು ಮಾಡಲಾಗುತ್ತದೆ. ಪ್ರಸ್ತುತ ಧಾರವಾಡ ಜಿಲ್ಲೆಗೆ ಒಳಪಡುವ ಶಾಕ್ತ ಶಿಲ್ಪಗಳ ಪ್ರತಿಮಾ ಲಕ್ಷಣಗಳ ಪ್ರಸ್ತಾವನೆಯನ್ನು ಮಾಡಲಾಗಿದೆ.

೬.೪.೨ ಮಹಿಷಾಸುರ ಮರ್ಧಿನಿ

ಶಾಕ್ತ ಪರಂಪರೆಯಲ್ಲಿ ಮಹಿಷಾಸುರ ಮರ್ಧಿನಿಗೆ ವಿಶೇಷ ಸ್ಥಾನವನ್ನು ಕೊಡಲಾಗಿದೆ. ಪುರಾಣಗಳಲ್ಲಿ ಹಲವಾರು ಐತಿಹ್ಯಗಳನ್ನು ಗುರುತಿಸಬಹುದಾಗಿದೆ. ಸ್ಕಂದ ಪುರಾಣದ ಪ್ರಕಾರ ಗೌರಿಯು ಅರುಣಾಚಲದಲ್ಲಿ ಚುಟುಕುಗಳ ರಕ್ಷಣೆಯ ಧರ್ಮಕಾರ್ಯದಲ್ಲಿ ನಿರತಳಾಗಿದ್ದಾಗ ಮಹಿಷನು ಸೈನ್ಯ ಸಮೇತನಾಗಿ ಅಲ್ಲಿಗೆ ಬಂದಾಗ ಆಕೆಯ ಸೌಂದರ್ಯಕ್ಕೆ ಮರುಳಾಗಿ ಆಕೆಯನ್ನು ಮದುವೆಯಾಗಲು ಬಯಸಿದನು. ಆಕೆ ನಿರಾಕರಿಸಿದಾಗ ಮಾಯಾಪಾಶದಿಂದ ಮಹಿಷನು ಚತುರೋಕ್ತಿಯಿಂದ ಒಲಿಸಿಕೊಳ್ಳಲು ಮುಂದಾದಾಗ ಇವರಿಬ್ಬರ ನಡುವೆ ಯುದ್ಧ ನಡೆಯಿತು ಆಗ ಆಕೆ ದುರ್ಗಾರೂಪವನ್ನು ತಾಳಿ ಮಹಿಷನನ್ನು ಸಂಹರಿಸಿದಳು.[೬೩] ಎಂಬ ವಿವರಣೆ ಇದೆ. ಮತ್ತೊಂದು ಐತಿಹ್ಯದ ಪ್ರಕಾರ ಮಹಿಷನು ಸ್ತ್ರೀಯನ್ನು ಬಿಟ್ಟು ದೇವ ಗಂಧರ್ವರಾದಿಯಾಗಿ ಯಾರಿಂದಲೂ ಮರಣ ಬರಬಾರದೆಂಬ ವರವನ್ನು ಪಡೆಯುತ್ತಾನೆ. ಆಗ ಮೂರು ಲೋಕಗಳನ್ನು ವಶಪಡಿಸಿಕೊಂಡು ದೇವತೆಗಳು ತಮ್ಮ ಶಕ್ತಿ ಹೀನ ವೀರ್ಯತನಕ್ಕೆ ನಾಚಿಕೆ ಪಟ್ಟು ಅದನ್ನು ಹೊರಹಾಕಲಾಗಿ ಅದು ಒಂದುಗೂಡಿ ಸುಂದರ ಹೆಣ್ಣಿನರೂಪ ತಳೆಯಿತು. ಶಿವನಿಂದ ತ್ರಿಶೂಲ, ವಿಷ್ಣುವಿನಿಂದ ಚಕ್ರ, ಯಮನಿಂದ ಕೆದರಿದ ಜಟಾರಾಶಿ, ಇತರರಿಂದ ಸೂಕ್ತ ಆಯುಧಗಳನ್ನು ಪಡೆದಳು, ಜೊತೆಗೆ ಹಿಮವಂತನಿಂದ ಸಿಂಹವನ್ನು ವಾಹನವಾಗಿ ಪಡೆದು ದುಷ್ಟ ಮಹಿಷಾಸುರನನ್ನು ಸಂಹರಿಸದಳು.[೬೪]

ಮಹಿಷಾಸುರ ಮರ್ಧಿನಿಯ ಬಗ್ಗೆ ಋಗ್ವೇದದ ೧೦ನೇ ಮಂಡಲದಲ್ಲಿ, ಭಾಗವತ ಪುರಾಣದಲ್ಲಿ ವಿವಿಧ ರೀತಿಯ ವರ್ಣನೆಗಳಿವೆ.[೬೫] ಶಾಸನಗಳಲ್ಲಿ ವಿದ್ಯಾವಾಹಿನಿ, ಮಹಾಮುನಿದೇವತೆ ಎಂದು ಹೇಳಲಾಗಿದ್ದು, ವಧುಕೈಭಟರೆಂಬ ದೈತ್ಯರ ನಾಶಕ್ಕಾಗಿ ತಮೋಗುಣ ಮಹಾಕಾಳಿಯಾಗಿ, ಇಂದ್ರಾದಿ ದೇವತೆಗಳ ರಜೋಗುಣದ ಮಹಾಲಕ್ಷ್ಮಿ ರೂಪವನ್ನು ತಾಳಿ ಮಹಿಷಾಸುರನನ್ನು ಸಂಹರಿಸಿ ಮಹಿಷಮರ್ಧಿನಿಯಾದಳು. ಶುಂಭ, ನಿಶಂಭರೆಂಬ ರಕ್ಕಸರನ್ನ ಅವರ ಸೇನಾಧಿಪತಿಗಳಾದ ಚಂಡ, ಮುಂಡ ಮತ್ತು ರಕ್ತ ಬೀಜಾಸುರನನ್ನ ಸಂಹರಿಸಲು ಚಾಮುಂಡಿಯಾದಳು. ಹೀಗೆ ದುರ್ಗೆ ತನ್ನ ಸಂಹಾರ ಕಾರ್ಯದಲ್ಲಿ ಒಂಭತ್ತು ರೂಪಗಳಿಂದ ನವದುರ್ಗೆಯಾದಳು ಎಂಬ ಪ್ರತೀತಿ ಇದೆ.

ಇನ್ನೂ ಮೂರ್ತಿಶಿಲ್ಪದ ವೈಶಿಷ್ಟತೆಯಿಂದ ನೋಡಲಾಗಿ, ಸ್ಥಾನಿಕ ಭಂಗಿಯಲ್ಲಿನ ಶಿಲ್ಪಗಳಲ್ಲಿ ನಾಲ್ಕು ಕೈಗಳಲ್ಲಿ ಬಾಣ, ಶೂಲ, ಖಡ್ಗ, ಚಕ್ರ, ಶಂಖ, ಧನಸ್ಸು, ಖೇಠಕ ಆಯುಧಗಳಿವೆ. ದಶಭುಜಧಾರಿಯಾಗಿದ್ದಾಗ ತ್ರಿಶೂಲ, ಖಡ್ಗ, ಶಕ್ತಾಯುಧ, ಬಿಲ್ಲು, ಪಾಶ, ಅಂಕುಶ, ಪರಶು ಮತ್ತು ಘಂಟೆಗಳನ್ನು ಹಿಡಿದುಕೊಂಡಿದ್ದಾಳೆ. ಮೂರು ಕಣ್ಣುಗಳನ್ನು ಹೊಂದಿದ್ದು, ಅವು ನೀಲೋತ್ಪಲದಂತಿವೆ. ಇವಳ ಜಟಾಮುಕುಟದಲ್ಲಿರುವ ಚಂದ್ರನಂತೆ ಗೋಚರಿಸುತ್ತಾಳೆ. ಆಕಾಶ ಹೂವಿನ ಬಣ್ಣ ಹೊಂದಿದ್ದಾಳೆ. ತ್ರಿಭಂಗಿಯಲ್ಲಿರುವ ಇವಳು ಎಡಗಾಲನ್ನು ಕೋಣನ ತಲೆ ಮೇಲೆ ಬಲಗಾಲನ್ನು ಹಿಂದೆ ಇರುವ ಸಿಂಹದ ಮೇಲಿಟ್ಟಿರುವುದನ್ನು ಕಾಣುತ್ತೇವೆ.[೬೬] ವಿಷ್ಣುಧರ್ಮೋತ್ತರ ಪುರಾಣದಲ್ಲಿ ಚಂಡಿಕಾ ಎಂದು ಮಹಿಷಮರ್ಧಿನಿಯನ್ನು ಕರೆಯಲಾಗಿದೆ. ಇವಳು ಬಂಗಾರದ ಬಣ್ಣದಿಂದ ಕೂಡಿರುವ ಸಿಟ್ಟಿನ ಮುಖಚರ್ಯವನ್ನು ಹೊಂದಿದ್ದಾಳೆ. ಹಾಗೆಯೇ ಮಹಿಷರೂಪವನ್ನು ತಾಳಿಬಂದು ರಾಕ್ಷಸನನ್ನು ಮರ್ಧನಮಾಡಿ ಮಹಿಷಾಸುರಮರ್ಧಿನಿ ಎಂದು ಕರೆಸಿಕೊಂಡಿದ್ದಾಳೆ.

ಪ್ರಸ್ತುತ ಈ ಅಧ್ಯಯನ ಪ್ರದೇಶದಲ್ಲಿ ಈ ರೀತಿಯ ಶಿಲ್ಪಗಳನ್ನು ಗುರುತಿಸಬಹುದಾಗಿದ್ದು, ಅವುಗಳಲ್ಲಿ ಕೆಲವೊಂದು ಶಿಲ್ಪಗಳ ಬಗ್ಗೆ ಮಾಹಿತಿ ನೀಡಿದ್ದು, ಉಳಿದವುಗಳನ್ನು ಅಧ್ಯಾಯದ ಕೊನೆಯಲ್ಲಿ ಪಟ್ಟಿ ನೀಡಲಾಗಿದೆ.

ಶಿಲ್ಪ	:	ಮಹಿಷಾಸುರಮರ್ಧಿನಿ
ಸ್ಥಳ	:	ಊರಮಧ್ಯ(ಬುಡರಸಿಂಗಿ)
ತಾಲೂಕು	:	ಹುಬ್ಬಳ್ಳಿ
ಕಾಲಮಾನ	:	೧೨ನೇ ಶತಮಾನ
ವಸ್ತು	:	ಕಪ್ಪುಶಿಲೆ

ತ್ರಿಭಂಗಿಯಲ್ಲಿರುವ ಮಹಿಷಾಸುರಮರ್ಧಿನಿಯು, ಚತುರ್ಭುಜಧಾರಿಯಾಗಿದ್ದಾಳೆ. ಇವಳು ಶಂಖ, ಭರ್ಚಿ, ತ್ರಿಶೂಲ ಹಿಡಿದುಕೊಂಡಿದ್ದಾಳೆ. ಹಾಗೆಯೇ ಇವಳು ಕಿರೀಟ ಮುಕುಟ, ಕರ್ಣಕುಂಡಲ, ಕಂಠಹಾರ, ಮಣಿಸರ, ಕೈಬಳೆ, ಕಾಲ್ಗಡಗಳನ್ನು ಧರಿಸಿರುವುದನ್ನು ಕಾಣುತ್ತೇವೆ.[೬೭]

ಶಿಲ್ಪ : ಮಹಿಷಾಸುಮರ್ಧಿನಿ

ಸ್ಥಳ : ಗ್ರಾಮದೇವತೆಯ ಗರ್ಭಗೃಹದಲ್ಲಿ(ಕರ್ಲವಾಡ)

ತಾಲೂಕು : ನವಲಗುಂದ

ಕಾಲಮಾನ : ೧೩ನೇ ಶತಮಾನ

ವಸ್ತು : ಕಪ್ಪುಶಿಲೆ

ತ್ರಿಭಂಗಿಯಲ್ಲಿ ನಿಂತಿರುವ ಈ ಶಿಲ್ಪಕ್ಕೆ ನಾಲ್ಕು ಕೈಗಳಿವೆ. ಬಲಗೈಯಲ್ಲಿ ತ್ರಿಶೂಲ ಮತ್ತು ಅದರಿಂದ ಅಸುರರನ್ನು ತಿವಿಯುತ್ತಿದ್ದು, ಬಲ ಮೇಲಿನ ಕೈಯಲ್ಲಿ ಚಕ್ರ, ಎಡ ಮೇಲಿನ ಕೈಯಲ್ಲಿ ಶಂಖ ಹಾಗೂ ಎಡ ಕೆಳಗೈಯಿಂದ ಮಹಿಷನಿಂದ ಹೊರಬರುತ್ತಿರುವ ಅಸುರನ ತಲೆಯನ್ನು ಒತ್ತಿ ಹಿಡಿದಿರುವುದನ್ನು ಕಾಣುತ್ತೇವೆ. ಕಟಿವಸ್ತ್ರವನ್ನು ಧರಿಸಿದ ಇವಳು ಕೊರಳಹಾರ, ಪತ್ರಕುಂಡಲ, ಭುಜಹಾರ, ತೋಳ್ಬಂಧಿ, ಕಂಕಣಗಳು, ಕೈಗಡಗ ಮತ್ತು ಕಾಲ್ಗಡಗಗಳನ್ನು ಧರಿಸಿದ್ದಾಳೆ.[೮]

ಶಿಲ್ಪ : ಮಹಿಷಾಸುರಮರ್ಧಿನಿ

ಸ್ಥಳ : ದೇವಾಲಯದ ಹೊರಗಿನ ಭಾಗ(ಮುಗುದ)

ತಾಲೂಕು : ಧಾರವಾಡ

ಕಾಲಮಾನ : ೧೩ನೇ ಶತಮಾನ

ವಸ್ತು : ಕಪ್ಪುಶಿಲೆ

ದ್ವಿ ಭಂಗಿಯಲ್ಲಿ ನಿಂತಿರುವ ಇವಳು, ರಾಮಲಿಂಗೇಶ್ವರ ದೇವಸ್ಥಾನದ ಗರ್ಭಗೃಹದ ಹೊರಭಾಗದಲ್ಲಿದೆ. ರುಂಡ ಭಾಗವು ಮುಕ್ಕಾದಂತೆ ಇದೆ. ಇವಳು ಚತುರ್ಭುಜವನ್ನು ಹೊಂದಿದ್ದು, ಒಂದನೇ ಬಲಗೈಯಲ್ಲಿ ಗದೆಯನ್ನು ಎರಡು ಮತ್ತು ಮೂರನೇ ಕೈಗಳು ತೃಟವಾಗಿದ್ದು, ನಾಲ್ಕನೇ ಕೈಯಲ್ಲಿ ಮಹಿಷಾಸುರನ ಮುಖ ಹಿಡಿದು ಬಗ್ಗಿಸಿದ್ದಾಳೆ. ಹಾಗೂ ಅವಳ ಬಳಿ ಖಡ್ಗವನ್ನು ಹಿಡಿದ ಅಸುರರನ್ನು ಕಾಣುತ್ತೇವೆ.[೯]

ಶಿಲ್ಪ : ಮಹಿಷಾಸುರಮರ್ಧಿನಿ

ಸ್ಥಳ : ರಾಮಲಿಂಗೇಶ್ವರ ದೇವಾಲಯದ ದೇವಕೋಷ್ಠದಲ್ಲಿ (ಮಿಶ್ರಿಕೋಟೆ)

ತಾಲೂಕು : ಕಲಘಟಗಿ

ಕಾಲಮಾನ : ೧೨ನೇ ಶತಮಾನ

ತ್ರಿಭಂಗಿಯಲ್ಲಿ ಇರುವ ಈ ಶಿಲ್ಪವು ಅಷ್ಟಭುಜವನ್ನು ಹೊಂದಿದ್ದಾಳೆ. ಕ್ರಮವಾಗಿ ಕೈಯಲ್ಲಿ ತ್ರಿಶೂಲ, ಬಾಣ, ಶಂಖ, ಚಕ್ರ, ಗುರಾಣಿ ಮುಂತಾದ ಆಯುಧಗಳನ್ನು ಹಿಡಿದಿದ್ದಾಳೆ. ಒಂದು

ಕೈಯಲ್ಲಿ ಹಿಡಿದ ತ್ರಿಶೂಲದಿಂದ ಮಹಿಷನ ತಲೆಯನ್ನು ತಿವಿದಿದ್ದಾಳೆ. ಕೊರಳಹಾರ, ಪತ್ರ ಕುಂಡಲ, ತೋಳ್ಬಂಧಿ ಮುಂತಾದ ಆಭರಣಗಳನ್ನು ಗುರುತಿಸಿಬಹುದಾಗಿದೆ.[೭೦]

೬.೪.೩ ಗಜಲಕ್ಷ್ಮಿ

ಗಜಲಕ್ಷ್ಮಿ ವೈಷ್ಣವಿ ಮಾತ್ರವಾಗಿರದೇ ಗ್ರಾಮ ದೇವತೆಯಾಗಿಯೂ ಪೂಜಿಸಲ್ಪಡುತ್ತಾಳೆ. ಗಜಲಕ್ಷ್ಮಿಯನ್ನು 'ಬಾದುಬ್ಬೆ' ಎಂದು ಕರೆಯುವ ವಾಡಿಕೆ ಇದೆ. ಗಜಲಕ್ಷ್ಮಿಯ ಬಗ್ಗೆ ವೈದಿಕ ಸಾಹಿತ್ಯ, ವಿಷ್ಣುಧರ್ಮೋತ್ತರ ಪುರಾಣ, ಋಗ್ವೇದದ ಶ್ರೀಸೂಕ್ತ ಮತ್ತು ಪತ್ಥ್ಸ ಪುರಾಣಗಳಲ್ಲಿ ಇದರ ಬಗ್ಗೆ ಉಲ್ಲೇಖಗಳನ್ನು ಗುರುತಿಸಬಹುದಾಗಿದೆ. ಕ್ರಿಪೂ. ೨ನೇ ಶತಮಾನದಲ್ಲಿ ಬೌದ್ಧ ವ್ಯಾಪಾರಿಗಳಿಂದ ಗಜಲಕ್ಷ್ಮಿಯನ್ನು ಶಿಲ್ಪದಲ್ಲಿ ತೋರಿಸುವ ಪರಂಪರೆ ಪ್ರಾರಂಭವಾಗಿದ್ದು, ಕರ್ನಾಟಕದಲ್ಲಿ ಬಾದಾಮಿ ಚಾಲುಕ್ಯರ ಒಂದನೇ ಮತ್ತು ಎರಡನೇ ಗುಹೆಗಳ ಕಂಬಗಳ ಮೇಲೆ ಮತ್ತು ಪಟ್ಟದಕಲ್ಲಿನ ಪಾಪನಾಥ ದೇವಾಲಯದಲ್ಲಿ ಈ ರೀತಿಯ ಶಿಲ್ಪಗಳು ಕಂಡು ಬರುತ್ತವೆ.[೭೧]

ಮೂರ್ತಿಶಿಲ್ಪದ ವೈಶಿಷ್ಯತೆಯಿಂದ ನೋಡಲಾಗಿ ಹೆಚ್ಚಿನ ಮಟ್ಟಿನ ಗಜಲಕ್ಷ್ಮಿ ಶಿಲ್ಪಗಳು ಪದ್ಮಪೀಠದ ಮೇಲೆ ಪದ್ಮಾಸನದ ಮೇಲೆ ಆಸೀನಳಾಗಿರುತ್ತಾಳೆ. ಕೈಗಳಲ್ಲಿ ಶಂಖ ಮತ್ತು ಪದ್ಮಗಳಿದ್ದು, ಇಕ್ಕೆಲಗಳಲ್ಲಿ ಎರಡು ಆನೆಗಳು ತಮ್ಮ ಸೊಂಡಿಲುಗಳಿಂದ ಕುಂಭಗಳನ್ನು ಹಿಡಿದುಕೊಂಡು ಅಭಿಷೇಕವನ್ನು ಮಾಡಿತ್ತಿರುವಂತೆ ತೋರಿಸಲಾಗಿರುತ್ತದೆ. ಈ ಮೇಲಿನ ಆಯುಧಗಳಿಂದ ಲಕ್ಷ್ಮಿಗೂ ಅಧಿಪತಿಯಾದ ಕುಬೇರನಿಗೂ ಇರುವ ಸಂಬಂಧ ಧ್ವನಿತವಾಗುತ್ತದೆ. ಕೆಲವೊಂದು ಗಜಲಕ್ಷ್ಮಿ ಶಿಲ್ಪಗಳಲ್ಲಿ ಈಕೆಯ ಪಾರ್ಶ್ವಗಳಲ್ಲಿ ಸಾಮಾನ್ಯವಾಗಿ ಶಂಖನಿಧಿ ಹಾಗೂ ಗಂಧರ್ವರ ಶಿಲ್ಪಗಳನ್ನು ತೋರಿಸಲಾಗಿರುತ್ತದೆ. ಪ್ರಸ್ತುತ ಅಧ್ಯಯನ ಪ್ರದೇಶದಲ್ಲಿ ಕಂಡು ಬಂದಿದ್ದು, ಅವುಗಳಲ್ಲಿ ಕೆಲವುಗಳನ್ನು ಚರ್ಚಿಸಿದ್ದು, ಇನ್ನುಳಿದವುಗಳನ್ನು ಅಧ್ಯಾಯದ ಕೊನೆಯಲ್ಲಿ ನೀಡಲಾಗಿದೆ.

ಶಿಲ್ಪ : ಗಜಲಕ್ಷ್ಮಿ

ಸ್ಥಳ : ಬಸ್ ನಿಲ್ದಾಣದ ಬಳಿ(ಕೋಳಿವಾಡ)

ತಾಲೂಕು : ಹುಬ್ಬಳ್ಳಿ

ಕಾಲಮಾನ : ೧೩ನೇ ಶತಮಾನ

ವಸ್ತು : ಕಪ್ಪುಶಿಲೆ

ಗಜಲಕ್ಷ್ಮಿಯು ಪರ್ಯಾಂಕಾಸನದಲ್ಲಿ ಕುಳಿತಿದ್ದು, ಎರಡೂ ಕೈಗಳಲ್ಲಿ ಪದ್ಮದ ಮೊಗ್ಗುಗಳನ್ನು ಹಿಡಿದಿದ್ದಾಳೆ. ಇವಳು ಕಿರೀಟ, ಪತ್ರಕುಂಡಲ, ಕಂಕಣ ಆಭರಣಗಳನ್ನು ಧರಿಸಿದ್ದಾಳೆ. ಇವಳ ಬದಿಯಲ್ಲಿ ಎರಡು ಆನೆಗಳು ಕುಂಬಗಳನ್ನು ಎತ್ತಿಹಿಡಿದ್ದಿದ್ದು, ಈ ಎರಡು ಆನೆಗಳ ಮೇಲ್ಭಾಗದಲ್ಲಿ ಮತ್ತೆರಡು ಆನೆಗಳಿದ್ದು ಇವು ಗಜಲಕ್ಷ್ಮಿಗೆ ಜಲಾಭಿಷೇಕ ಮಾಡುತ್ತವೆ. ಅಲ್ಲದೇ ಈ ಶಿಲ್ಪ ಪಟ್ಟಿಕೆಗಳಲ್ಲಿ ಎರಡು ಭಾಗಗಳಿದ್ದು, ಮೊದಲ ಭಾಗದಲ್ಲಿ ಗಜಲಕ್ಷ್ಮಿ ಅದರ ಪಕ್ಕದಲ್ಲಿ ಪುರುಷ ವ್ಯಕ್ತಿಗಳಿರುವುದನ್ನು ಕಾಣುತ್ತವೆ.[೭೨]

ಪದ್ಮಾಸನದಲ್ಲಿ ಕುಳಿತ ಗಜಲಕ್ಷ್ಮಿಯ ಬದಿಯಲ್ಲಿ ಆನೆಗಳು ನಿಂತಿವೆ. ಅವುಗಳು ತಮ್ಮ ಸೊಂಡಿಲಿನಿಂದ ಕುಂಬಗಳನ್ನು ಹಿಡಿದುಕೊಂಡು ಅಭಿಷೇಕವನ್ನು ಮಾಡುತ್ತಿವೆ. ಅಲ್ಲದೆ ಶಿಲ್ಪ ಫಲಕದ ಮೇಲೆ ಅರ್ಧವೃತ್ತಾಕಾರದ ಸುತ್ತಲೂ ಲತಾ ಸುರುಳಿ ಇದ್ದು, ಮಧ್ಯಕೀರ್ತಿಮುಖವಿದೆ. ಆದರೆ ಪೀಠದಲ್ಲಿ ಶಾಸನವಿದ್ದು, ಈ ಶಿಲ್ಪವನ್ನು ಬಾದುಬ್ಬೆ ಎಂದು ಹೇಳಲಾಗಿದೆ.[೭೫]

೬.೪.೪ ಸಪ್ತಮಾತೃಕೆಯರು

ಪರಿವಾರ ದೇವತೆಗಳಲ್ಲಿ ಸಪ್ತಮಾತೃಕೆಯರು ವೈಶಿಷ್ಟ್ಯಪೂರ್ಣ ಸ್ಥಾನವನ್ನು ಪಡೆದಿದ್ದು, ಕನ್ನಿಯರೆಂದು, ಅಮ್ಮನವರೆಂದು ಪ್ರಸಿದ್ಧಿಯಾಗಿದ್ದಾರೆ. ಇದರ ಪ್ರಾಚೀನತೆಯನ್ನು ನೋಡಿದರೆ ಋಗ್ವೇದದಲ್ಲಿ ಅಗ್ನಿಗೆ ಏಳು ಜನ ತಾಯಂದಿರಿದ್ದು, ಅವರೇ ಸಪ್ತಮಾತೃಕೆಯರು ಶಿವನ ಬಾಯಿಯಿಂದ ಬಂದ ಜ್ವಾಲೆಯ ಮೂಲಕ ಜನಿಸಿದ ಯೋಗೀಶ್ವರಿ, ಇತರೆ ದೇವತೆಗಳಿದ್ದರೆಂದು ವರಾಹ ಪುರಾಣದಲ್ಲಿದೆ. ಮತ್ತು ಶುಂಭ–ನಿಶುಂಭರನ್ನು ಸಂಹರಿಸಲು ಹೊರಟಾಗ ಕಾರ್ತಿಕೇಯ, ಬ್ರಹ್ಮ, ವಿಷ್ಣು, ಮತ್ತು ಇಂದ್ರರಿಂದ ಇತರೆ ಎಂಟು ಜನಶಕ್ತಿಯರು ಸೃಷ್ಟಿಯಾದರೆಂದು ಮಾರ್ಕಂಡೇಯ ಪುರಾಣದಲ್ಲಿ ಉಲ್ಲೇಖಿಸಲಾಗಿದೆ. ಸುಪ್ರಭೇಧಾಗಮದಲ್ಲಿ ಬ್ರಹ್ಮನು ನಿರ್ರಿತನನ್ನು ಸಂಹರಿಸಲು ಏಳು ಜನ ಮಾತೃಕೆಯರನ್ನು ಸೃಷ್ಟಿಸಿದನೆಂದಿದೆ.[೭೬]

ಬೃಹಸಂಹಿತೆಯ ವ್ಯಾಖ್ಯಾನಕಾರ ಉತ್ಪಲನು ಬ್ರಾಹ್ಮಿ, ವೈಷ್ಣವಿ, ರೌದ್ರಿ, ಕೌಮಾರಿ, ಐಂದ್ರಿ, ಯಮಿ, ವಾರುಣಿ, ಕೌಬೇರಿ ಎಂಬ ಮಾತೃಕೆಯರನ್ನು ಉಲ್ಲೇಖಿಸುತ್ತಾನೆ. ಹಾಗೆಯೇ ಕಾಳಿಕಾ ದೇವಿಯ ಶರೀರದ ವಿವಿಧ ಭಾಗಗಳಿಂದ ಸಪ್ತಮಾತೃಕೆಯರು ಜನಿಸಿದರೆಂದು, ಕೆಲವೊಮ್ಮೆ ಏಳು, ಎಂಟು, ಒಂಭತ್ತು ಮತ್ತು ಹದಿನಾರು ಎಂದೂ ಹೇಳಲಾಗುತ್ತಿದೆ.[೭೭]

ಇನ್ನೂ ಮೂರ್ತಿಶಿಲ್ಪದ ವೈಶಿಷ್ಠತೆಯ ದೃಷ್ಟಿಯಿಂದ ನೋಡಿದರೆ ರೂಪಧ್ಯಾನ, ರತ್ನಾವಳಿ.[೭೮] ಮುಂತಾದ ಕೃತಿಗಳಲ್ಲಿ ಪ್ರತಿಮಾ ಲಕ್ಷಣಗಳ ಬಗ್ಗೆ ವಿವರಿಸಲಾಗಿದೆ. ಚತುರ್ಮುಖವುಳ್ಳ ಬ್ರಾಹ್ಮಿಗೆ ಆರುಕೈಗಳಿದ್ದು, ಎರಡು ಕೈಗಳು ವರದ ಮತ್ತು ಅಭಯ ಮುದ್ರೆಗಳಿಂದ ಕೂಡಿದ ಪಾಶ, ಸ್ರುವ, ಪುಸ್ತಕ, ಕಮಂಡಲವನ್ನು ಹೊಂದಿದೆ. ಇವಳ ವಾಹನ ಹಂಸ. ವರಾಹಿ ವರಾಹ ಮುಖವನ್ನು ಹೊಂದಿದ್ದು, ಹನ್ನೆರಡು ಕೈಗಳಿರುತ್ತವೆ. ಇವಳ ವಾಹನ ಮಹಿಷ. ಇನ್ನು ಕೌಮಾರಿಗೆ ಆರು ಮುಖಗಳಿದ್ದು, ಹನ್ನೆರಡು ಕೈಗಳಿರುತ್ತವೆ. ಇವುಗಳಲ್ಲಿ ಎರಡು ವರದ ಮತ್ತು ಅಭಯ ಮುದ್ರೆಯಲ್ಲಿದ್ದು, ಶಕ್ತಿ, ದಂತ, ಪತಾಕೆ, ಪರಶು, ಬಾಣ, ಕುಕ್ಕುಟ, ಪದ್ಮ, ಗಂಟೆ ಇರುತ್ತವೆ. ಇವಳ ವಾಹನ ಮಯೂರಿ. ವೈಷ್ಣವಿಗೆ ಆರು ಕೈಗಳಿದ್ದು, ಅವುಗಳಲ್ಲಿ ಎರಡು ವರದ ಮತ್ತು ಅಭಯ ಮುದ್ರೆಯಲ್ಲಿವೆ. ಕೈಗಳಲ್ಲಿ ಗದೆ, ಪದ್ಮ, ಚಕ್ರ, ಶಂಖ, ಆಯುಧಗಳಿರುತ್ತವೆ. ಗರುಡ ಇವಳ ವಾಹನ. ಸಾವಿರ ಕಣ್ಣುಗಳಿರುವ ಇಂದ್ರಾಣಿಗೆ ಆರು ಕಣ್ಣುಗಳಿದ್ದು, ಮುಂದಿನ ಕೈಗಳಲ್ಲಿ ವರದ ಮತ್ತು ಅಭಯ ಮುದ್ರೆಗಳಿವೆ. ಸೂತ್ರ, ವಜ್ರ, ಪಾತ್ರೆ, ಪದ್ಮಗಳಿದ್ದು, ಇವಳ ವಾಹನ ಗಜ. ಇನ್ನು ಮಹೇಶ್ವರಿಗೆ ಐದು ಮುಖ, ಮೂರು ಕಣ್ಣುಗಳು, ಹತ್ತು ಕೈಗಳಿದ್ದು ಅವುಗಳಲ್ಲಿ ಒಂದು ವರದ ಮುದ್ರೆಯಲ್ಲಿದೆ. ಖಡ್ಗ, ಚಕ್ರ, ಚಾಮರ, ಒನಕೆ, ಖೇಟಕ, ದಂತ, ಪಾಶ, ಪರಶು, ಬಿಲ್ಲು ಇತ್ಯಾದಿ ಆಯುಧಗಳನ್ನು ಹಿಡಿದುಕೊಂಡಿರುತ್ತಾಳೆ.

ಇನ್ನು ಬ್ರಾಹ್ಮಿಯ ಬಲಬದಿಯಲ್ಲಿ ವೀರಭದ್ರನನ್ನೂ ಮತ್ತು ಅವನ ವಾಹನ ನಂದಿ ಹಾಗೂ ಚಾಮುಂಡಿಯ ಎಡಬದಿಯಲ್ಲಿ ಗಣೇಶನನ್ನು ಮತ್ತು ಅವನ ವಾಹನ ಮೂಷಿಕನನ್ನು ಕಾಣಬಹುದಾಗಿದೆ. ಕೆಲವೊಂದು ಸಂದರ್ಭದಲ್ಲಿ ಯೋಗೀಶ್ವರಿಯು ದ್ವಿಭುಜಧಾರಿಯಾಗಿದ್ದು, ಒಂದು ಕೈಯನ್ನು ತೊಡೆಯ ಮೇಲೆ ಇರುವಂತೆಯೂ ಮತ್ತೊಂದು ಕೈ ಫಲವನ್ನು ಹಿಡಿದಿರುವಂತೆ ಶಿಲ್ಪಪಟ್ಟಿಕೆಯಲ್ಲಿ ಚಿತ್ರಿಸಿರುತ್ತಾರೆ. ಈ ಶಿಲ್ಪಗಳೆಲ್ಲವೂ ಸವ್ಯಲಲಿತಾಸನ ಅಥವಾ ಸುಖಾಸನದಲ್ಲಿ ಆಸೀನವಾಗಿರುವಂತೆಯೂ, ಹಾಗೆಯೇ ಅವರವರ ಪಾದಪೀಠದಲ್ಲಿ ಅವರುಗಳ ವಾಹನಗಳನ್ನು ಗುರುತಿಸಬಹುದಾಗಿದೆ.

ಇನ್ನೂ ಸಪ್ತಮಾತೃಕೆಯರುಗಳು ಒಂದೊಂದು ಗುಣಗಳನ್ನು ಹೊಂದಿದ್ದು, ಬ್ರಾಹ್ಮಿ–ಕಾಮ, ಮಾಹೇಶ್ವರಿ– ಕ್ರೋಧ, ಕೌಮಾರಿ–ಲೋಭ, ವೈಷ್ಣವಿ–ಮೋಹ, ಇಂದ್ರಾಣಿ–ಮಾತ್ಸರ್ಯ, ವರಾಹಿ–ಮದ, ಚಾಮುಂಡಿ–ಪಾಪ ಈ ಗುಣಗಳ ಬಗ್ಗೆ ನಾವು 'ವರಾಹ ಪುರಾಣ' ಮತ್ತು 'ತಂತ್ರ ರಾಜತಂತ್ರ' ಗಳಲ್ಲಿ ವರ್ಣನೆಗಳನ್ನು ಗುರುತಿಸಬಹುದಾಗಿದೆ.[೭೯]

ಪ್ರಸ್ತುತ ಅಧ್ಯಯನ ಪ್ರದೇಶದಲ್ಲಿ ಈ ರೀತಿಯ ಶಿಲ್ಪಗಳು ಇದ್ದು, ಅವುಗಳಲ್ಲಿ ಕೆಲವೊಂದು ಶಿಲ್ಪಗಳ ಪ್ರತಿಮಾ ಲಕ್ಷಣಗಳನ್ನು ಚರ್ಚಿಸಲಾಗಿದ್ದು, ಇನ್ನುಳಿದ ಶಿಲ್ಪಗಳನ್ನು ಅಧ್ಯಾಯದ ಕೊನೆಯಲ್ಲಿ ನೀಡಲಾಗಿದೆ.

ಶಿಲ್ಪ	:	ಸಪ್ತಮಾತೃಕೆಯರು
ಸ್ಥಳ	:	ಕಲ್ಮೇಶ್ವರ ದೇವಾಲಯದ ಬಳಿ(ಗಬ್ಬೂರು)
ತಾಲೂಕು	:	ಹುಬ್ಬಳ್ಳಿ
ಕಾಲಮಾನ	:	೧೨ನೇ ಶತಮಾನ
ವಸ್ತು	:	ಕಪ್ಪುಶಿಲೆ

ಈ ಶಿಲ್ಪ ಪಟ್ಟಿಕೆಯಲ್ಲಿ ಬ್ರಾಹ್ಮಿ, ಮಹೇಶ್ವರಿ, ವೈಷ್ಣವಿ, ವರಾಹಿ, ಇಂದ್ರಾಣಿ, ಚಾಮುಂಡಿ ಶಿಲ್ಪಗಳು ಕಂಡು ಬರುತ್ತವೆ. ಬ್ರಾಹ್ಮಿಯ ಬಲಕ್ಕೆ ವೀಣಾಪಾಣಿ ವೀರಭದ್ರನನ್ನು, ಚಾಮುಂಡಿಯ ಎಡಕ್ಕೆ ಗಣೇಶನ ಶಿಲ್ಪಗಳಿವೆ. ಇವರೆಲ್ಲರೂ ಲಲಿತಾಸನದಲ್ಲಿ ತಮ್ಮ ವಾಹನದ ಮೇಲೆ ಬಲಗಾಲಿಟ್ಟು ಕುಳಿತಿದ್ದಾರೆ. ಗಣೇಶ ಮಾತ್ರ ಸುಖಾಸನದಲ್ಲಿದ್ದಾನೆ. ಚತುರ್ಭುಜಧಾರಿಗಳಾಗಿರುವ ಇವರು ಕೈಗಳಲ್ಲಿ ವಿಭಿನ್ನ ಆಯುಧಗಳನ್ನು ಹಿಡಿದಿದ್ದಾರೆ. ಇವರು ಧರಿಸಿರುವ ಕಿರೀಟಗಳು ಉದ್ದವಾಗಿ ಕಂಡು ಬರುವುದಲ್ಲದೇ, ಪತ್ರಕುಂಡಲ, ಹಾರ, ಫಲ, ಕಂಠಿ, ಉಪವೀತ, ಕಂಕಣ, ಕಿಂಕಿಣಿ ಇನ್ನೂ ಮುಂತಾದ ಆಭರಣಗಳನ್ನು ಧರಿಸಿದ್ದು, ತಮ್ಮ–ತಮ್ಮ ವಾಹನಗಳ ಮೇಲೆ ಕಾಲನ್ನು ಇಟ್ಟಿರುವುದು ಸಾಮಾನ್ಯ ಲಕ್ಷಣಗಳಾಗಿವೆ.[೮೦]

ಶಿಲ್ಪ	:	ಸಪ್ತಮಾತೃಕೆಯರು
ಸ್ಥಳ	:	ಕೆರೆಯ ದಂಡೆಯ ಮೇಲೆ(ತುಪ್ಪದ ಕುರಹಟ್ಟಿ)

ತಾಲೂಕು : ನವಲಗುಂದ

ಕಾಲಮಾನ : ೧೦ನೇ ಶತಮಾನ

ವಸ್ತು : ಕಪ್ಪುಶಿಲೆ

ಈ ಶಿಲ್ಪ ಪಟ್ಟಿಕೆಯು ೨೮ ಸೆಂ.ಮೀ. ಎತ್ತರ, ೧೨೦ ಸೆಂ.ಮೀ. ಅಗಲ ಹೊಂದಿದ್ದು, ಕ್ರಮವಾಗಿ ವೀರಭದ್ರ, ಬ್ರಾಹ್ಮಿ, ಮಹೇಶ್ವರಿ, ಕೌಮಾರಿ, ವೈಷ್ಣವಿ, ವರಾಹಿ, ಇಂದ್ರಾಣಿ, ಚಾಮುಂಡಿ, ಗಣಪತಿ ಶಿಲ್ಪಗಳು ಇದ್ದು, ಕೆಳಭಾಗದಲ್ಲಿ ಕ್ರಮವಾಗಿ ಅವರುಗಳ ವಾಹನಗಳಾದ ಹಂಸ, ನಂದಿ, ನವಿಲು, ಗರುಡ, ನಾಗ, ಗಜ, ಗೂಗೆ, ಮೂಷಿಕ ವಾಹನಗಳನ್ನು ಗುರುತಿಸಬಹುದಾಗಿದೆ.[೮೧]

ಶಿಲ್ಪ : ಸಪ್ತಮಾತೃಕೆಯರು

ಸ್ಥಳ : ನಾಗಲಿಂಗೇಶ್ವರ ದೇವಾಲಯ(ಶಿರೂರು)

ತಾಲೂಕು : ಕುಂದಗೋಳ

ಕಾಲಮಾನ : ೧೨ನೇ ಶತಮಾನ

ವಸ್ತು : ಕಪ್ಪುಶಿಲೆ

ಈ ಸಪ್ತಮಾತೃಕೆಯರು ಒಂದೇ ಶಿಲಾಪಟ್ಟಿಕೆಯಲ್ಲಿದ್ದು, ಇದರಲ್ಲಿ ಒಂಭತ್ತು ವಿಗ್ರಹಗಳು ಕಂಡು ಬರುತ್ತವೆ. ಅಲ್ಲದೇ ವೀಣಾಪಾಣಿ ವೀರಭದ್ರ, ಬ್ರಾಹ್ಮಿ, ವೈಷ್ಣವಿ, ಮಹೇಶ್ವರಿ, ಕೌಮಾರಿ, ವರಾಹಿ, ಇಂದ್ರಾಣಿ, ಚಾಮುಂಡಿ, ಗಣೇಶ ಹೀಗೆ ಒಟ್ಟು ಒಂಭತ್ತು ಮೂರ್ತಿಗಳಿದ್ದು, ವಿಭಿನ್ನ ರೀತಿಯ ಆಭರಣಗಳಿಂದ ಭೂಷಿತರಾಗಿದ್ದಾರೆ.[೮೨]

ಶಿಲ್ಪ : ಸಪ್ತಮಾತೃಕೆಯರು

ಸ್ಥಳ : ದೇವಾಲಯದ ಗರ್ಭಗೃಹ(ಮುಗುದ)

ತಾಲೂಕು : ಧಾರವಾಡ

ಕಾಲಮಾನ : ೧೨ನೇ ಶತಮಾನ

ವಸ್ತು : ಕಪ್ಪುಶಿಲೆ

ಒಂದೇ ಪಟ್ಟಿಯಲ್ಲಿರುವ ಈ ಶಿಲ್ಪಗಳು ಕ್ರಮವಾಗಿ, ಎಡದಿಂದ ಬಲಕ್ಕೆ ವೀಣಾಪಾಣಿ ವೀರಭದ್ರ, ಬ್ರಾಹ್ಮಿ, ಮಹೇಶ್ವರಿ, ವೈಷ್ಣವಿ, ಕೌಮಾರಿ, ವರಾಹಿ, ಇಂದ್ರಾಣಿ, ಚಾಮುಂಡಿ ಹಾಗೂ ಗಣಪತಿಯನ್ನು ಕಾಣುತ್ತೇವೆ. ಇವುಗಳು ವಿಭಿನ್ನ ರೀತಿಯ ಆಭರಣ ಹಾಗೂ ಆಯುಧಗಳನ್ನು ಹಿಡಿದಿದ್ದು, ವೀರಭದ್ರನನ್ನು ಹೊರತುಪಡಿಸಿ ಉಳಿದವರು ಸುಖಾಸನದಲ್ಲಿ ಕುಳಿತಿದ್ದಾರೆ.[೮೩]

೬.೪.೫ ಸರಸ್ವತಿ

ಸರಸ್ವತಿಯನ್ನು ವೈದಿಕ ಸಾಹಿತ್ಯದಲ್ಲಿ ವಾಗ್ವೇದಿ ಭಾರತೀ, ಮೇದಾವಿ ಎಂದು, ಋಗ್ವೇದದಲ್ಲಿ ನದಿದೇವತೆ, ಬುದ್ದಿದಾಯಿನಿ ಎಂದು ಉಲ್ಲೇಖಿಸಲ್ಪಟ್ಟಿದೆ.[೮೪] ಇವಳಿಗೆ ನೀಲಕಂಠೆ, ಚಂದ್ರಶೇಖರಿ, ತ್ರಿವೇಣಿ, ಪದ್ಮಾಸನಸ್ಥೆ, ಪುಸ್ತಕ ಧಾರಿಣಿ, ಅಕ್ಷಮಾಲ ಹೆಸರುಗಳಿಂದಲೂ ಕರೆಯಲಾಗುತ್ತಿದ್ದಿತು. ಐತಿಹ್ಯದ ಪ್ರಕಾರ ವಿಷ್ಣುವಿಗೆ ಸರಸ್ವತಿ, ಲಕ್ಷ್ಮಿ ಮತ್ತು ಗಂಗಾ ಎಂಬ ಪತ್ನಿಯರಿದ್ದು, ವಿಷ್ಣುವಿನ ಪ್ರೀತಿಯನ್ನು ಹೆಚ್ಚಾಗಿ ಪಡೆಯಲು ಗಂಗಾ ಮತ್ತು ಸರಸ್ವತಿಗೆ ಸ್ಪರ್ಧೆ ಏರ್ಪಟ್ಟಾಗ ಲಕ್ಷ್ಮಿಯು ಅವರ ಜಗಳ ಬಿಡಿಸಲು ಬಂದಾಗ ಸರಸ್ವತಿ ಲಕ್ಷ್ಮಿಗೆ ಗಿಡವಾಗೆಂದು ಶಾಪವಿತ್ತಳು ಆಗ ಇವರನ್ನು ಸಮಾಧಾನ ಪಡಿಸಲು ವಿಷ್ಣುವು ಸರಸ್ವತಿಯ ಒಂದು ಅಂಶದಿಂದ ಭೂಲೋಕದಲ್ಲಿ ನದಿಯಾಗಿಯೂ, ಹಾಗೂ ಬ್ರಹ್ಮನ ಮಡದಿಯಾಗಿ ಗಂಗೆ ಒಂದಂಶದಿಂದ ಭೂಲೋಕದಲ್ಲಿ ನದಿಯಾಗಿ ಹಾಗೆಯೇ ಶಿವನ ಮಡದಿಯಾಗಿರು ಎಂದು, ಲಕ್ಷ್ಮಿಯ ಒಂದಂಶದಿಂದ ತುಳಸಿ ಗಿಡವಾಗಿಯೂ ತನ್ನ ಪತ್ನಿಯಾಗಿರುವಂತೆ ಸಲಹೆಯನ್ನು ಮಾಡಿದನು. ಹೀಗೆ ವೈದಿಕ ಯುಗದಲ್ಲಿ ಸರಸ್ವತಿಯ ಉಲ್ಲೇಖಗಳನ್ನು ಗುರುತಿಸಬಹುದಾಗಿದೆ.[೮೫]

ಇನ್ನು ಮೂರ್ತಿಶಿಲ್ಪದ ವೈಶಿಷ್ಟ್ಯತೆಯನ್ನು ನೋಡಿದಾಗ, ವಿಷ್ಣು ಧರ್ಮೋತ್ತರ ಪುರಾಣದಲ್ಲಿ ಈಕೆಯನ್ನು ಚಂದ್ರಮುಖಿಯಾಗಿಯೂ, ಸಮಪಾದದಲ್ಲಿ ನಿಂತಿರುವಂತೆ, ನಾಲ್ಕು ಕೈಗಳಲ್ಲಿ, ಬಲ ಕೈಗಳಲ್ಲಿ ಪುಸ್ತಕ, ಅಕ್ಷಮಾಲೆ ಮತ್ತು ಎಡ ಎರಡು ಕೈಗಳಲ್ಲಿ ಚಕ್ರ ಮತ್ತು ಕಮಂಡಲ ಇರುವಂತೆ ಉಲ್ಲೇಖಿಸಲಾಗಿದೆ. ರೂಪಮಂಡನ ಕೃತಿಯಲ್ಲಿ ಸಾತ್ವಿಕ ರೂಪದಲ್ಲಿದ್ದು, ಕರಂಡಮುಕುಟ, ಪ್ರಭಾಮಂಡಲವಿದೆ. ನಾಲ್ಕು ಕೈಗಳಲ್ಲಿ ಅಕ್ಷಮಾಲ, ವೀಣೆ, ಪುಸ್ತಕ, ಪದ್ಮಗಳಿಂದ ಕೂಡಿರುತ್ತದೆ. ಪಂಚರಾತ್ರಾಗಮದಲ್ಲಿ ಶ್ವೇತಕಮಲದ ಮೇಲೆ ಸವ್ಯಲಲಿತಾಸನ ಇಲ್ಲವೆ ಸುಖಾಸನದಲ್ಲಿ ಆಸೀನಳಾಗಿರುತ್ತಾಳೆ, ಈಕೆಗೆ ಮೂರು ಕಣ್ಣುಗಳಿದ್ದು, ಹಂಸವು ಇವಳ ವಾಹನವಾಗಿರುತ್ತದೆ. ಆರು ಕೈಗಳ ವೀಣಾಪಾಣಿ ಸರಸ್ವತಿ, ಎಂಟು ಕೈಗಳ ನೃತ್ಯ ಸರಸ್ವತಿಯ ಶಿಲ್ಪಗಳು ಹೊಯ್ಸಳ ಆಳ್ವಿಕೆಯ ಕಾಲಘಟ್ಟದ ಕೆಲವು ದೇವಾಲಯಗಳಲ್ಲಿ ಗುರುತಿಸಬಹುದಾಗಿದೆ.[೮೬]

೬.೫ ವೈಷ್ಣವ ಮೂರ್ತಿಶಿಲ್ಪಗಳು

ತ್ರಿಮೂರ್ತಿಗಳಲ್ಲಿ ವಿಷ್ಣು ಎರಡನೆಯವನಾಗಿದ್ದು, ಬ್ರಹ್ಮಸೃಷ್ಟಿದ ವಸ್ತುವನ್ನು ರಕ್ಷಿಸುವುದು ಈತನ ಕರ್ತವ್ಯ, ವೈಷ್ಣವ ಧರ್ಮದಲ್ಲಿ ಭಾಗವತ ಪಂಥವೂ ಒಂದು ಪ್ರಮುಖವಾಗಿದ್ದು, ಇದರ ಅನುಯಾಯಿಗಳು ಕ್ರಿ.ಪೂ. ಕೊನೆಯ ಮತ್ತು ಕ್ರಿಸ್ತಾ ನಂತರದ ಮೊದಲ ಶತಮಾನಗಳಲ್ಲಿ ವೈಷ್ಣವ ಕುಲದ ಪಂಚವೀರರನ್ನು ವಾಸುದೇವ ಪ್ರದ್ಯುನ್ನು, ಸಾಂಬ, ಅನಿರುದ್ದ ಮೂರ್ತಿರೂಪದಿಂದ ಆರಾಧಿಸುತ್ತಿದ್ದ ಅಂಶವು ಪುರಾತತ್ವ ಕುರುಹುಗಳಿಂದ ಸ್ಪಷ್ಟವಾಗುತ್ತದೆ.[೮೭] ಕ್ರಿ.ಪೂ. ೨ನೇ ಶತಮಾನದಿಂದ ಕ್ರಿ.ಶ. ೫ನೇ ಶತಮಾನದವರೆಗೂ ದಕ್ಷಿಣ ಭಾರತದಲ್ಲಿ ಈ ಪಂಚವೀರ ಆರಾಧನೆ.[೮೮] ಪ್ರಚಲಿತವಿದ್ದು, ಮುಂದೆ ಬನವಾಸಿ ಕದಂಬರ, ತಲಕಾಡಿನ ಗಂಗರ ಕಾಲಕ್ಕಾಗಲೇ ಇನ್ನಷ್ಟು ಈ ಧರ್ಮ ವ್ಯಾಪಕತೆಯನ್ನು ಪಡೆದುಕೊಂಡಿತು ಎಂಬುದನ್ನು ಸಮಕಾಲೀನ ಶಾಸನಗಳಲ್ಲಿ ವಿಷ್ಣುವಿನ ವಿವಿಧ

ರೂಪಗಳನ್ನು ವಿವರಿಸಲಾಗಿದೆ.[೮೯] ಬಾದಾಮಿ ಚಾಲುಕ್ಯರ ಮನೆತನದ ಪ್ರಾರಂಭದ ಅರಸರು ವಿಷ್ಣುವಿನ ಅನುಯಾಯಿಗಳಾಗಿದ್ದರು. ಅವರು ರಚಿಸಿದ ಅನೇಕ ಗುಹಾ ಮತ್ತು ರಾಚನಿಕ ದೇವಾಲಯಗಳಲ್ಲಿ ವಿಷ್ಣುವಿನ ವಿವಿಧ ಅವತಾರ ಶಿಲ್ಪಗಳನ್ನು ಕಾಣಬಹುದಾಗಿದೆ. ಹೀಗೆ ಮುಂದೆ ಆಳ್ವಿಕೆ ಮಾಡಿದಂತಹ ರಾಜ ಮನೆತನಗಳು, ವೈಷ್ಣವ ಧರ್ಮಕ್ಕೆ ಪ್ರೋತ್ಸಾಹವನ್ನು ನೀಡಿರುವ ಬಗ್ಗೆ ಅನೇಕ ಶಾಸನ ಮತ್ತು ಸ್ಮಾರಕಗಳಿಂದ ತಿಳಿಯುತ್ತದೆ.

ವಿಷ್ಣುವಿನ ರೂಪಗಳು ಅಸಂಖ್ಯ ಅವನ ೨೪ ರೂಪಗಳ ಬಗ್ಗೆ ಕುರಿತು ರೂಪಮಂಡನ ಕೃತಿಯಲ್ಲಿ ಅವನ ವಿವಿಧ ಹೆಸರುಗಳು ಮತ್ತು ಆಯುಧಗಳ ಪ್ರಸ್ತಾಪವಿದೆ.[೯೦] ದುಷ್ಟರಿಂದ ಲೋಕವನ್ನು ರಕ್ಷಿಸಲು ಇವನು ಹಲವಾರು ಅವತಾರಗಳನ್ನು ಪಡೆದನು. ಶತಪಥ ಬ್ರಾಹ್ಮಣದ ಪ್ರಕಾರ, ಇವನು ಮತ್ಸ್ಯ, ಕೂರ್ಮ, ವರಾಹ, ನರಸಿಂಹ, ವಾಮನ, ಪರಶುರಾಮ, ಕೃಷ್ಣ, ಕಲ್ಕಿ, ಬುದ್ಧ, ರಾಮ ಹೀಗೆ ಈ ಅವತಾರಗಳ ಉಲ್ಲೇಖವಿದೆ.[೯೨] ವಿಷ್ಣುವಿನ ಶಿಲ್ಪಗಳು ಸಾಮಾನ್ಯವಾಗಿ ಸಮಭಂಗಿಯಲ್ಲಿರುತ್ತಿದ್ದು, ಚತುರ್ಭುಜಧಾರಿಯಾಗಿದ್ದಾಗ ಶಂಖ, ಚಕ್ರ, ಪದ್ಮ ಮತ್ತು ಗಧೆ ಅಯುಧಗಳಿರುತ್ತವೆ. ಈ ಆಯುಧಗಳು ಸ್ಥಾಲಪಲ್ಲಟವಾದಂತೆ ವಿಷ್ಣುವಿನ ೨೪ ರೂಪಗಳು ಬದಲಾಗುತ್ತವೆ. ಕಿರೀಟಮುಕುಟ, ಹಾರ, ಕಂಠಿಸರ, ಉದರಬಂಧ, ಉದ್ದನೆಯ ವೈಜಯಂತಿಮಾಲೆ, ಕೇಯೂರ, ಕಂಕಣ, ಕಿಂಕಿಣಿ, ಪಾದಸರ ಮುಂತಾದ ಆಭರಣಗಳಿರುತ್ತವೆ. ಮತ್ತು ಶಿಲ್ಪದ ಇಕ್ಕೆಲಗಳಲ್ಲಿ ಶ್ರೀದೇವಿ ಭೂದೇವಿಯರಿರುತ್ತಾರೆ. ಇವನ ವಾಹನ ಗರುಡವಾಗಿದೆ.[೯೩]

ಅ.ಸಂ	ಶಿಲ್ಪಗಳು	ಬಲ.ಹಿಂ.ಕೈ	ಎಡ.ಹಿಂ.ಕ್ಯ	ಎಡ.ಮುಂ.ಕೈ	ಬಲ.ಮುಂ.ಕೈ
೧.	ನಾರಾಯಣ	ಪದ್ಮ	ಗದಾ	ಚಕ್ರ	ಶಂಖ
೨.	ಮಾಧವ	ಚಕ್ರ	ಶಂಖ	ಪದ್ಮ	ಗದಾ
೩	ಗೋವಿಂದ	ಗದಾ	ಪದ್ಮ	ಶಂಖ	ಚಕ್ರ
೪.	ವಿಷ್ಣು	ಪದ್ಮ	ಶಂಖ	ಚಕ್ರ	ಗದಾ
೫.	ಮಧುಸೂಧನ	ಶಂಖ	ಪದ್ಮ	ಗದಾ	ಚಕ್ರ
೬.	ತ್ರಿವಿಕ್ರಮ	ಗದಾ	ಚಕ್ರ	ಶಂಖ	ಪದ್ಮ
೭.	ವಾಮನ	ಚಕ್ರ	ಗದಾ	ಪದ್ಮ	ಶಂಖ
೮.	ಶ್ರೀಧರ	ಚಕ್ರ	ಗದಾ	ಶಂಖ	ಪದ್ಮ
೯.	ಹೃಷಿಕೇಶ	ಚಕ್ರ	ಪದ್ಮ	ಶಂಖ	ಗದಾ
೧೦.	ಪದ್ಮನಾಭ	ಪದ್ಮ	ಚಕ್ರ	ಗದಾ	ಶಂಖ
೧೧.	ದಾಮೋದರ	ಶಂಖ	ಗದಾ	ಚಕ್ರ	ಪದ್ಮ

೧೨.	ಸಂಕರ್ಷಣ	ಶಂಖ	ಪದ್ಮ	ಚಕ್ರ	ಗದಾ
೧೩.	ವಾಸುದೇವ	ಶಂಖ	ಚಕ್ರ	ಪದ್ಮ	ಗದಾ
೧೪.	ಪದ್ಯುಮ್ನ	ಶಂಖ	ಗದಾ	ಪದ್ಮ	ಚಕ್ರ
೧೫.	ಅನರುದ್ದ	ಗದಾ	ಶಂಖ	ಪದ್ಮ	ಚಕ್ರ
೧೬.	ಪುರುಷೋತ್ತಮ	ಪದ್ಮ	ಶಂಖ	ಗದಾ	ಚಕ್ರ
೧೭.	ಅಧೋಕ್ಷಜ	ಗದಾ	ಶಂಖ	ಚಕ್ರ	ಪದ್ಮ
೧೮.	ನರಸಿಂಹ	ಪದ್ಮ	ಗದಾ	ಶಂಖ	ಚಕ್ರ
೧೯.	ಅಚ್ಚುತ	ಪದ್ಮ	ಚಕ್ರ	ಶಂಖ	ಗದಾ
೨೦.	ಜನಾರ್ಧನ	ಚಕ್ರ	ಶಂಖ	ಗದಾ	ಪದ್ಮ
೨೧.	ಉಪೇಂದ್ರ	ಗದಾ	ಚಕ್ರ	ಪದ್ಮ	ಶಂಖ
೨೨.	ಹರಿ	ಚಕ್ರ	ಪದ್ಮ	ಗದಾ	ಶಂಖ
೨೩.	ಕೃಷ್ಣ	ಗದಾ	ಪದ್ಮ	ಚಕ್ರ	ಶಂಖ

ಪ್ರಸ್ತುತ ಧಾರವಾಡ ಜಿಲ್ಲೆಯಲ್ಲಿ ಕಂಡು ಬರುವ ಇಂತಹ ಶಿಲ್ಪಗಳಲ್ಲಿ ಕೆಲವೊಂದು ಪ್ರಮುಖ ಶಿಲ್ಪಗಳ ಪ್ರತಿಮಾ ಲಕ್ಷಣಗಳ ಕುರಿತು ಚರ್ಚಿಸಲಾಗಿದ್ದು, ಇನ್ನುಳಿದ ಶಿಲ್ಪಗಳನ್ನು ಅಧ್ಯಾಯದ ಕೊನೆಯಲ್ಲಿ ನೀಡಲಾಗಿದೆ.

ಶಿಲ್ಪ : ದತ್ತಾತ್ರೆಯ

ಸ್ಥಳ : ಊರಮಧ್ಯ(ಕೋಳಿವಾಡ)

ತಾಲೂಕು : ಹುಬ್ಬಳ್ಳಿ

ಕಾಲಮಾನ : ೧೨ನೇ ಶತಮಾನ

ವಸ್ತು : ಕಪ್ಪುಶಿಲೆ

ದತ್ತಾತ್ರೇಯ ದೇವಾಲಯದ ಗರ್ಭಗೃಹದಲ್ಲಿ ಈ ಶಿಲ್ಪವಿದ್ದು, ಅದು ಮೂರು ತಲೆ, ಮತ್ತು ಅಷ್ಟಭುಜಗಳನ್ನು ಹೊಂದಿರುವ ಈ ಶಿಲ್ಪದ ಕೈಗಳಲ್ಲಿ ಗದಾ, ತ್ರಿಶೂಲ, ಅಕ್ಷಮಾಲೆ, ಡಮರು ಮತ್ತು ಚಕ್ರವನ್ನು ಕಾಣಬಹುದಾಗಿದೆ. ದತ್ತಾತ್ರಯನನ್ನು ಬ್ರಹ್ಮ, ವಿಷ್ಣು, ಮಹೇಶ್ವರರ ರೂಪದಲ್ಲಿರುವ ತ್ರಿಮೂರ್ತಿಗಳೆಂದು ಕರೆಯಲಾಗುತ್ತದೆ. ಈ ಶಿಲ್ಪವು ಪೀಠದಲ್ಲಿ ಹಂಸ, ನಂದಿ ಮತ್ತು ಗರುಡವಿದೆ. ಮತ್ತು ದತ್ತಾತ್ರೇಯನ ಹಿಂಭಾಗದಲ್ಲಿ ನಂದಿಯನ್ನು ಕಾಣುವುದು ವಿಶೇಷವಾಗಿದೆ.[೪]

ಶಿಲ್ಪ : ಜನಾರ್ಧನ

ಸ್ಥಳ : ಕಲ್ಮೇಶ್ವರ ದೇವಾಲಯದ ಬಲಗಡೆ(ನರೇಂದ್ರ)

ತಾಲೂಕು : ಧಾರವಾಡ

ಕಾಲಮಾನ : ೧೫ನೇ ಶತಮಾನ

ವಸ್ತು : ಕಪ್ಪುಶಿಲೆ

ಸಮಪಾದ ಭಂಗಿಯಲ್ಲಿ ನಿಂತಿರುವ ಈ ಶಿಲ್ಪವು, ಚತುರ್ಭುಜವನ್ನು ಹೊಂದಿದ್ದಾನೆ. ಅಲ್ಲದೇ ಒಂದನೇ ಕೈಯಲ್ಲಿ ಪದ್ಮ, ಎರಡನೆ ಕೈಯಲ್ಲಿ ಚಕ್ರ, ಮುರನೇ ಕೈಯಲ್ಲಿ ಶಂಖ, ನಾಲ್ಕನೇ ಕೈಯಲ್ಲಿ ಗಧೆ ಹಿಡಿದಿದ್ದಾನೆ. ಇನ್ನು ತಲೆಗೆ ಕಿರೀಟ, ಕೊರಳಲ್ಲಿ ಹಾರ, ಚಕ್ರಕುಂಡಲ, ಕಾಲಲ್ಲಿ ಕಾಲ್ಗಡಗ ಆಭರಣಗಳನ್ನು ಧರಿಸಿದ್ದಾನೆ. ಮೂರ್ತಿಯ ಬಲಗಾಲ ಪಕ್ಕದಲ್ಲಿ ನೃತ್ಯ ಮಾಡುತ್ತಿರುವ ಶಿಲ್ಪ, ಎಡಗಡೆ ಕುಳಿತಿರುವ ಗರುಡನ ಶಿಲ್ಪವನ್ನು ಕಾಣಬಹುದಾಗಿದೆ.[೯೫]

ಶಿಲ್ಪ : ಅನಂತಶಯನ

ಸ್ಥಳ : ಲಕ್ಷ್ಮೀ ಅನಂತಶಯನ ದೇವಾಲಯದ ಗರ್ಭಗೃಹ (ಕುಂಕೂರು)

ತಾಲೂಕು : ಕುಂದಗೋಳ

ಕಾಲಮಾನ : ೧೧ನೇ ಶತಮಾನ

ವಸ್ತು : ಕಪ್ಪುಶಿಲೆ

ವಿಷ್ಣುವು ಆದಿಶೇಷನ ಮೇಲೆ ಶಯನ ಭಂಗಿಯಲ್ಲಿ ಯೋಗನಿದ್ರೆಯಲ್ಲಿದ್ದು, ಚತುರ್ಭುಜವನ್ನು ಹೊಂದಿದ್ದಾನೆ. ಈತನು ಶಂಖ, ಚಕ್ರವನ್ನು ಹಿಡಿದುಕೊಂಡಿದ್ದಾನೆ. ಬಲ ಹಿಂದಿನ ಕೈಯಲ್ಲಿ ತಲೆಗೆ ಆಸರೆಯಾಗಿ ಹಿಡಿದಿದ್ದು, ಇನ್ನೊಂದು ಕೈಯನ್ನು ತೊಡೆಯ ಮೇಲೆ ಇಟ್ಟಿದ್ದಾನೆ. ಹಾಗೆಯೇ ಇವನು ಕಿರೀಟ ಮಕುಟ, ಪತ್ರ ಕುಂಡಲ, ತೋಳ್ಬಂದಿ, ಕಟಿವಸ್ತ್ರ ಹಾಗೂ ವೈಜಯಂತಿ ಹಾರವನ್ನು ಧರಿಸಿದ್ದಾನೆ. ಶ್ರೀದೇವಿ, ಭೂ ದೇವಿಯರು ವಿಷ್ಣುವಿನ ಕಾಲನ್ನು ಒತ್ತುತ್ತಿದ್ದಾರೆ.[೯೬]

ಶಿಲ್ಪ : ವಿಷ್ಣು

ಸ್ಥಳ : ಊರ ಮಧ್ಯದಲ್ಲಿ(ಗುಡಿಸಾಗರ)

ತಾಲೂಕು : ನವಲಗುಂದ

ಕಾಲಮಾನ : ೧೨ನೇ ಶತಮಾನ

ವಸ್ತು : ಕಪ್ಪುಶಿಲೆ

ದೊಡ್ಡಗಾತ್ರದಿಂದ ಕೂಡಿರುವ ಈ ಶಿಲ್ಪಕ್ಕೆ, ಎರಡು ಕೈಗಳಿವೆ. ಕ್ರಮವಾಗಿ ಶಂಕ, ಚಕ್ರ, ಗಧೆ ಹಾಗೂ ಪದ್ಮವನ್ನು ಕಾಣುತ್ತೇವೆ. ಕೊರಳಲ್ಲಿ ಮಣಿಸರ, ಕರ್ಣಕುಂಡಲ, ಕೈಬಳೆ, ಕಾಲ್ಗಡಗ ಇನ್ನೂ ಮುಂತಾದ ಆಭರಣಗಳನ್ನು ಧರಿಸಿರುತ್ತಾನೆ. ವಿಷ್ಣುವಿನ ಹಿಂದೆ ಸುಂದರ ಕೆತ್ತನೆಯಿಂದ ಕೂಡಿದ ಪ್ರಭಾವಳಿ ಇದೆ. ಅಲ್ಲದೇ ವಿಷ್ಣುವಿನ ವಿಗ್ರಹದ ಪಕ್ಕದಲ್ಲಿ ಎರಡು ನಾಗದೇವರ ಶಿಲ್ಪ ಮತ್ತು ಗಣಪತಿಯ ಮೂರ್ತಿಯನ್ನು ಕಾಣುತ್ತೇವೆ.[೯೬]

೬.೬ ಜೈನ ಮೂರ್ತಿಶಿಲ್ಪಗಳು

ಸಿಂಧೂ ನಾಗರೀಕತೆಯ, ಮಹಂಜೋದಾರೋ ನೆಲೆಯ ಉತ್ಖನನದಲ್ಲಿ ನಗ್ನವಾಗಿರುವ ಮತ್ತು ಕಾರ್ಯೋತ್ಸರ್ಗದಲ್ಲಿರುವ ಧ್ಯಾನಮಗ್ನ ಶಿಲ್ಪ ದೊರೆತಿದೆ. ಈ ಶಿಲ್ಪದ ಶಿರದ ಮೇಲೆ ತ್ರಿರತ್ನ ಸೂಚಕವಾಗಿ ತ್ರಿಶಾಲಾಕೃತಿಯಿದೆ. ಈ ಶಿಲ್ಪವನ್ನು ವಿದ್ವಾಂಸರು ೧ನೇ ತೀರ್ಥಂಕರ ವೃಷಭನಾಥನೆಂದು ತರ್ಕಿಸುತ್ತಾರೆ. ಕ್ರಿ.ಪೂ. ೫ನೇ ಶತಮಾನದ ನಂತರದ ಕಾಲಘಟ್ಟದಲ್ಲಿ ಶಿಲ್ಪಗಳ ಪ್ರತಿಷ್ಠಾಪನೆ, ಪೂಜಾ ಕಾರ್ಯಗಳು ಆರಂಭವಾದವು ಎಂಬುದನ್ನು ಖಾರವೇಲನ ಹಾಥಿಗುಂಪಾ ಶಾಸನವು ಇದಕ್ಕೆ ಪುಷ್ಠಿಯನ್ನು ನೀಡಿದೆ. ಜೈನ ತೀರ್ಥಂಕರರು ಬ್ಯಾಹ್ಯ ಸೌಂದರ್ಯಕ್ಕಿಂತ, ಆಂತರಿಕ ಸೌಂದರ್ಯಕ್ಕೆ ಹೆಚ್ಚು ಮಹತ್ವವನ್ನು ನೀಡಿದರು. ಹೀಗಾಗಿ ಆತ್ಮದ ಪರಿಶುದ್ಧತೆಯನ್ನು ಹೊರತರುವ ಹಾಗೂ ಆತ್ಮದ ಉನ್ನತಿಗಾಗಿ ವ್ಯವಹಾರಿಕ ಮತ್ತು ಸುಮಧುರವಾದ ಹಿನ್ನೆಲೆಯನ್ನು ಏರ್ಪಡಿಸುವುದು, ಜೈನ ಸಾಹಿತ್ಯ, ಕಲೆಯ ಮತ್ತು ಮೂರ್ತಿಶಿಲ್ಪದ ಪ್ರಧಾನ ಉದ್ದೇಶ.[೯೮]

ಮೂರ್ತಿಶಿಲ್ಪದ ವೈಶಿಷ್ಟ್ಯತೆಯ ದೃಷ್ಟಿಯಿಂದ ಜೈನ ಮೂರ್ತಿಶಿಲ್ಪದಲ್ಲಿ ದ್ರುವಬೇರು ಮತ್ತು ಚಲಬೇರು ಎಂಬ ಪ್ರಭೇದಗಳಿವೆ. ಈ ಜಿನ ಬಿಂಬಗಳನ್ನು ಕೆಂಪು, ಬಿಳಿ, ಕಪ್ಪು, ಹಸಿರು, ಬಣ್ಣದ ಶಿಲೆಗಳಿಂದ ನಿರ್ಮಿಸುವುದು ಶ್ರೇಷ್ಠವಾದುದಾಗಿದೆ.[೯೯] ಜೈನಾಗಮಗಳ ಪ್ರಕಾರ ವಜ್ರಾಸನ, ವೀರಾಸನ, ಕುಕ್ಕುಟಾಸನ ಮೊದಲಾದ ಆಸನಗಳಿದ್ದು, ಪದ್ಮಾಸನ ಎಂಬ ಆಸನ ಮೋಕ್ಷವನ್ನು ಸಾಧಿಸಲು ತುಂಬಾ ಉಪಯುಕ್ತವಾಗಿದೆ.[೧೦೦] ಜಿನ ಪ್ರತಿಮೆಗಳು ಶಾಂತರೂಪವೂ, ಪ್ರಸನ್ನ, ಗಾಂಭೀರ್ಯ, ಮಧ್ಯಸ್ಥ ರೂಪಗಳನ್ನು ಹೊಂದಿದ್ದು, ೨೪ ತೀರ್ಥಂಕರರು ವಿಭಿನ್ನ ರೀತಿಯ ಅಂಶಗಳಲ್ಲಿ ವ್ಯತ್ಯಾಸವನ್ನು ಕಾಣುತ್ತೇವೆ. ಅಂದರೆ ಅವರ ಲಾಂಛನ, ಎತ್ತರ, ಬಣ್ಣ ಮತ್ತು ಯಕ್ಷ-ಯಕ್ಷಿಯರು, ಚಾಮರಧಾರಿಯರು ಕಂಡು ಬರುತ್ತಾರೆ. ಪೀಠಗಳಲ್ಲಿ ವ್ಯತ್ಯಾಸಗಳು ಕಂಡು ಬರುತ್ತವೆ. ದಿಗಂಬರ ಪಂಥದ ಸಂಹಿತೆಗಳ ಪ್ರಕಾರ ವರ್ತಮಾನ ಕಾಲದ ೨೪ ತೀರ್ಥಂಕರರ ಸಹಚರರ ಮತ್ತು ಲಾಂಛನ, ಯಕ್ಷ-ಯಕ್ಷಿಯರು ಹೀಗಿವೆ.[೧೦೧]

ಅ.ಸಂ.	ತೀರ್ಥಂಕರರು	ಲಾಂಛನಗಳು	ಯಕ್ಷ	ಯಕ್ಷಿಯರು
೧	ವೃಷಭನಾಥ	ಎತ್ತು	ಗೋಮುಖ	ಚಕ್ರೇಶ್ವರಿ
೨	ಅಜಿತನಾಥ	ಆನೆ	ಮಹಾಯಕ್ಷ	ರೋಹಿಣಿ
೩	ಶಂಭುನಾಥ	ಕುದುರೆ	ತ್ರಿಮುಖ	ಪ್ರಜ್ಞಪ್ತಿ

೪	ಅಭಿನಂದನಾಥ	ಮಂಗ	ಯಕ್ಷೇಶ್ವರಿ	ವಜ್ರಶಂಖಲಾ
೫	ಸುಮತಿನಾಥ	ಚಕ್ರವಾಕ ಪಕ್ಷಿ	ತುಂಬರು	ಪುರುಷದತ್ತ
೬	ಪದ್ಮಪ್ರಭನಾಥ	ಕಮಲ	ಕುಸುಮಾವರ	ಮನೋವೇಗ
೭	ಸುಪಾರ್ಶ್ವನಾಥ	ಸ್ವಸ್ತಿಕ	ವರನಂದಿ	ಕಾಳಿ
೮	ಚಂದ್ರಪ್ರಭನಾಥ	ಚಂದ್ರ	ಶ್ಯಾಮ	ಜ್ವಾಲಾಮಾಲಿನಿ
೯	ಪುಷ್ಪದಂತನಾಥ	ಮೊಸಳೆ	ಅಜಿತ	ಮಹಾಕಾಳಿ
೧೦	ಶೀತಲನಾಥ	ಕಲ್ಪವೃಕ್ಷ	ಬ್ರಹ್ಮ	ಮಾನವಿ
೧೧	ಶ್ರೇಯೊಂಸನಾಥ	ಖಡ್ಗಮೃಗ	ಈಶ್ವರ	ಗೌರಿ
೧೨	ವಾಸುಪೂಜ್ಯನಾಥ	ಕೋಣ	ಕುಮಾರ	ಗಾಂಧಾರ
೧೩	ವಿಮಲನಾಥ	ಹಂದಿ	ಷಣ್ಮುಖ	ವೈರೂಟಿ
೧೪	ಅನಂತನಾಥ	ಕರಡಿ	ಪಾತಾಲ	ಅನಂತಮತಿ
೧೫	ಧರ್ಮನಾಥ	ವಜ್ರ	ಕಿನ್ನರ	ಮಾನಸಿ
೧೬	ಶಾಂತಿನಾಥ	ಜಿಂಕೆ	ಗರುಡ	ಮಹಾಮಾನಸಿ
೧೭	ಕುಂಥನಾಥ	ಕುರಿ	ಗಂಧರ್ವ	ಜಯೆ
೧೮	ಅರನಾಥ	ಮೀನು	ಮಹೇಂದ್ರ	ವಿಜಯ
೧೯	ಮಲ್ಲಿನಾಥ	ಕುಂಭ	ಕುಬೇರ	ಅಪರಾಜಿತೆ
೨೦	ಮುನಿಸುವ್ರತನಾಥ	ಆಮೆ	ವರುಣ	ಬಹುರೂಪಿಣಿ
೨೧	ನೇಮಿನಾಥ	ನೀಲಕಮಲ	ವಿದ್ಯುತ್ಪ್ರಭ	ಚಾಮುಂಡಿ
೨೨	ನೇಮಿನಾಥ	ಶಂಖ	ಸರ್ವಾಹ್ಣ	ಕೂಷ್ಮಾಂಡಿನಿ
೨೩	ಪಾರ್ಶ್ವನಾಥ	ಸರ್ಪ	ಧರಣೇಂದ್ರ	ಪದ್ಮಾವತಿ
೨೪	ಮಹಾವೀರ	ಸಿಂಹ	ಮಾತಂಗ	ಸಿದ್ಧಾಯಿನಿ

ಪ್ರಸ್ತುತ ಧಾರವಾಡ ಜಿಲ್ಲೆಯಲ್ಲಿ ಅನೇಕ ಜೈನ ಮೂರ್ತಿಶಿಲ್ಪಗಳು ಕಂಡು ಬಂದಿದ್ದು, ಅವುಗಳಲ್ಲಿ ಕೆಲವೊಂದವುಗಳನ್ನು ಚರ್ಚಿಸಿದ್ದು, ಉಳಿದವುಗಳನ್ನು ಅಧ್ಯಾಯದ ಕೊನೆಯಲ್ಲಿ ನೀಡಲಾಗಿದೆ.

ಶಿಲ್ಪ	:	ಚೌವ್ಹೀಸ ತೀರ್ಥಂಕರ
ಸ್ಥಳ	:	ಗ್ರಾಮದಮಧ್ಯ(ಬುಡರಸಿಂಗಿ)
ತಾಲೂಕು	:	ಹುಬ್ಬಳ್ಳಿ
ಕಾಲಮಾನ	:	೧೨ನೇ ಶತಮಾನ
ವಸ್ತು	:	ಕಪ್ಪುಶಿಲೆ

ಪೀಠದ ಮೇಲೆ ವೃಷಭನಾಥ ಕಾರ್ಯೋತ್ಸರ್ಗ ಭಂಗಿಯಲ್ಲಿದ್ದಾನೆ. ಭುಜಗಳು ಅಗಲವಾಗಿದ್ದು, ಕಾಲುಗಳು ನೀಳವಾಗಿವೆ. ಅಲ್ಲದೇ ಕುತ್ತಿಗೆ ಮತ್ತು ಹೊಟ್ಟೆಯ ಬಳಿ ಅರ್ಧವೃತ್ತಾಕಾರದ ಗೆರೆಗಳಿವೆ. ತಲೆಯ ಕೂದಲುಗಳು ಗುಂಗುರಾಗಿವೆ. ಈತನು ನಿರಾಭರಣನಾಗಿದ್ದಾನೆ. ತಲೆಯ ಹಿಂಭಾಗದಲ್ಲಿ ಪ್ರಭಾಮಂಡಲವಿದ್ದು, ಅದರ ಮೇಲೆ ಅಲಂಕಾರಿಕ ಛತ್ರಿಯಿದೆ. ತಲೆಯ ಸಮಭಾಗಕ್ಕೆ ಪ್ರಭಾಮಂಡಲದ ಇಕ್ಕೆಲಗಳಲ್ಲಿ ಯಕ್ಷ-ಯಕ್ಷಿಣಿಯರು ಚೌರಿಯನ್ನು ಹಿಡಿದು ನಿಂತಿದ್ದಾರೆ. ಶಿಲ್ಪದ ಸುತ್ತಲೂ ಸ್ಥಂಭ ಪ್ರಭಾವಳಿಯಿದೆ. ಈ ಪ್ರಭಾವಳಿಯಲ್ಲಿ ಎರಡು ಸ್ಥಂಭಗಳ ಕೆಳಭಾಗದಲ್ಲಿ ಇಪ್ಪತ್ಮೂರು ತೀರ್ಥಂಕರರು ಪದ್ಮಾಸನದಲ್ಲಿ ಕುಳಿತಿರುವುದನ್ನು ಗುರುತಿಸಲಾಗಿದೆ.[೧೦೨]

ಶಿಲ್ಪ	:	ಚೌವ್ಹೀಸ ತೀರ್ಥಂಕರ
ಸ್ಥಳ	:	ಅಂಗನವಾಡಿ ಕೇಂದ್ರ(ಶಿರೂರು)
ತಾಲೂಕು	:	ಕುಂದಗೋಳ
ಕಾಲಮಾನ	:	೧೨ನೇ ಶತಮಾನ
ವಸ್ತು	:	ಕಪ್ಪುಶಿಲೆ

ಸಮಪಾದ ಭಂಗಿಯಲ್ಲಿ ನಿಂತಿರುವ ಆದಿನಾಥನು, ಚೌವ್ಹೀಸ್ ತೀರ್ಥಂಕರರ ಮಧ್ಯದಲ್ಲಿದ್ದಾನೆ. ಶಿರೋಭಾಗದ ಹಿಂಭಾಗದಲ್ಲಿ ಪ್ರಭಾಮಂಡಲವಿದೆ. ತಲೆಯ ಮೇಲ್ಭಾಗದಲ್ಲಿ ಮುಕ್ಕೊಡೆಯಿದೆ. ಸುತ್ತಲೂ ಅರ್ಧಪದ್ಮಾಸನದಲ್ಲಿ ಕುಳಿತ ಇಪ್ಪತ್ಮೂರು ಜನ ತೀರ್ಥಂಕರರು ಕಾಣುತ್ತಾರೆ. ಹಾಗೆಯೇ ಕೆಳಭಾಗದ ಇಕ್ಕೆಲಗಳಲ್ಲಿ ಆದಿ ತೀರ್ಥಂಕರನ ಯಕ್ಷ-ಗೋಮುಖ-ಯಕ್ಷಿಣಿಯಾದ ಚಕ್ರೇಶ್ವರಿಯನ್ನು ಕಾಣುತ್ತೇವೆ.[೧೦೩]

ಶಿಲ್ಪ	:	ಪಾರ್ಶ್ವನಾಥ
ಸ್ಥಳ	:	ಬಸ್ತಿ ಓಣಿಯಲ್ಲಿ (ಅಣ್ಣಿಗೇರಿ)
ತಾಲೂಕು	:	ನವಲಗುಂದ
ಕಾಲಮಾನ	:	೧೨ನೇ ಶತಮಾನ
ವಸ್ತು	:	ಕಪ್ಪುಶಿಲೆ

ಗರ್ಭಗೃಹದಲ್ಲಿ ಪಾರ್ಶ್ವನಾಥನ ಶಿಲ್ಪವಿದೆ. ಈತನು ಪದ್ಮಾಸನದಲ್ಲಿ ಮತ್ತು ಯೋಗ ಮುದ್ರೆಯಲ್ಲಿ ಕುಳಿತಿದ್ದಾನೆ. ತಲೆಯ ಮೇಲಿನ ಛತ್ರಿಯನ್ನು ತೋರಣದಿಂದ ಅಲಂಕರಿಸಲಾಗಿದೆ. ಮತ್ತು ಭುಜದ ಬದಿಗಳಲ್ಲಿ ಸೇವಕರು ಮಕರ ಸ್ಥಂಭಗಳ ಮೇಲೆ ನಿಂತಿರುವುದನ್ನು ಕಾಣುತ್ತೇವೆ.[೧೦೪]

ಶಿಲ್ಪ : ಚಂದ್ರಪ್ರಭನಾಥ

ಸ್ಥಳ : ನೇಮಿನಾಥ ಜಿನಾಲಯ(ಅಮ್ಮಿನಭಾವಿ)

ತಾಲೂಕು : ಧಾರವಾಡ

ಕಾಲಮಾನ : ೧೧ನೇ ಶತಮಾನ

ವಸ್ತು : ಕಪ್ಪುಶಿಲೆ

ಚಂದ್ರಪ್ರಭನಾಥನು ಪದ್ಮಾಸನದಲ್ಲಿ ಮತ್ತು ಯೋಗಮುದ್ರೆಯಲ್ಲಿ ಕುಳಿತಿದ್ದಾನೆ. ಅಲ್ಲದೇ ತಲೆಯ ಮೇಲಿನ ಛತ್ರಿಯನ್ನು ತೋರಣದಿಂದ ಅಲಂಕರಿಸಲಾಗಿದ್ದು, ಪೀಠದಲ್ಲಿ ಸಿಂಹಗಳಿವೆ. ಭುಜದ ಬದಿಗಳಲ್ಲಿ ಸೇವಕರು ಮತ್ತು ಮಕರ ಸ್ಥಂಭಗಳ ಮೇಲೆ ಕಾಣುತ್ತೇವೆ. ಅಲ್ಲದೇ ಪಾದಪೀಠದಲ್ಲಿ ಶಾಸನವಿದ್ದು, ಚಂದ್ರನಾಥ ಭಟ್ಟಾರಕ ಶಿಲ್ಪ, ಪ್ರತಿಷ್ಠಾಪಿಸಿದ ಬಗ್ಗೆ ಉಲ್ಲೇಖವಿದೆ.

ಶಿಲ್ಪ : ನೇಮಿನಾಥ

ಸ್ಥಳ : ಅಂಗನವಾಡಿ ಬಳಿ(ದೇವಿಕೊಪ್ಪ ತಾಂಡಾ)

ತಾಲೂಕು : ಕಲಘಟಗಿ

ಕಾಲಮಾನ : ೧೨ನೇ ಶತಮಾನ

ವಸ್ತು : ಕಪ್ಪುಶಿಲೆ

ಅಂಗನವಾಡಿ ಬಳಿ ನೇಮಿನಾಥ ಸ್ಥಂಭವು ಇದ್ದು, ಇದು ಎತ್ತರವಾದ ಸ್ಥಂಭವಾಗಿದೆ. ಇದರ ಮೇಲ್ಭಾಗದಲ್ಲಿರುವ ಗೂಡಿನಲ್ಲಿ ಶಂಖದ ಮೇಲೆ ನೇಮಿನಾಥನು ಕಾಯೋ೯ತ್ಸರ್ಗ ಭಂಗಿಯಲ್ಲಿ ನಿಂತಿದ್ದು, ಇದು ಬಹಳ ಅಪರೂಪವಾದ ಶಿಲ್ಪವಾಗಿದೆ. ನೇಮಿನಾಥನ ಶಿಲ್ಪದ ಕೆಳಗೆ ಗೋವೆ ಕದಂಬರ ಕಾಲದ ಶಾಸನವಿದೆ.

"ಮೂರ್ತಿಶಿಲ್ಪ ಪಟ್ಟಿಕೆ ಅಕಾರಾದಿಯಾಗಿ"

ಶಿವಲಿಂಗಗಳು

ಕ್ರ.ಸಂ	ಶಿಲ್ಪ	ಗ್ರಾಮ	ತಾಲೂಕು	ಸ್ಥಳ	ಕಾಲ(ಕ್ರಿ.ಶ)
೧	ಶಿವಲಿಂಗ	ಅಮ್ಮಿನಭಾವಿ	ಧಾರವಾಡ	ಮಲ್ಲಿಕಾರ್ಜುನ ದೇ.	೧೦
೨	ಶಿವಲಿಂಗ	ಅಮ್ಮಿನಭಾವಿ	ಧಾರವಾಡ	ಈಶ್ವರ ದೇವಾಲಯ	೧೨

೩	ಶಿವಲಿಂಗ	ಅಮ್ಮಿನಭಾವಿ	ಧಾರವಾಡ	ಕಲ್ಮೇಶ್ವರ ದೇವಾಲಯ	೧೦
೪	ಶಿವಲಿಂಗ	ಇಂಗಳಗಿ	ಕುಂದಗೋಳ	ಕಲ್ಮೇಶ್ವರ ದೇವಾಲಯ	೧೨
೫	ಶಿವಲಿಂಗ	ಉಣಕಲ್	ಹುಬ್ಬಳ್ಳಿ	ಚಂದ್ರಮೌಳೇಶ್ವರ ದೇ	೧೨
೬	ಶಿವಲಿಂಗ	ಉಪ್ಪಿನಬೆಟಗೇರಿ	ಧಾರವಾಡ	ಕಲ್ಮೇಶ್ವರ ದೇ	೧೦
೭	ಶಿವಲಿಂಗ	ಕಮಡೊಳ್ಳಿ	ಕುಂದಗೋಳ	ಕಲ್ಮೇಶ್ವರ ದೇ	೧೨
೮	ಶಿವಲಿಂಗ	ಕಮಡೊಳ್ಳಿ	ಕುಂದಗೋಳ	ರಾಮೇಶ್ವರ ದೇ.ಗರ್ಭಗೃಹ	೧೦
೯	ಶಿವಲಿಂಗ	ಕಲ್ಲೆ	ಧಾರವಾಡ	ಈಶ್ವರ ದೇವಾಲಯ	೦೯
೧೦	ಶಿವಲಿಂಗ	ಕಲ್ಲೆ	ಧಾರವಾಡ	ಕಲ್ಮೇಶ್ವರ ದೇವಾಲಯ	೦೯
೧೧	ಶಿವಲಿಂಗ	ಕರಡಿಗುಡ್ಡ	ಧಾರವಾಡ	ಮಲ್ಲಿಕಾರ್ಜುನ ದೇ	೧೨
೧೨	ಶಿವಲಿಂಗ	ಕಬ್ಬೆನೂರು	ಧಾರವಾಡ	ಕಲ್ಮೇಶ್ವರ ದೇವಾಲಯ	೧೦
೧೩	ಶಿವಲಿಂಗ	ಕನಕೂರು	ಧಾರವಾಡ	ಮಲ್ಲಿಕಾರ್ಜುನ ದೇ	೧೨
೧೪	ಶಿವಲಿಂಗ	ಕಂದಲಿ	ಕಲಘಟಗಿ	ಕಲ್ಮೇಶ್ವರ ದೇ.ಗರ್ಭಗೃಹ	೧೨
೧೫	ಶಿವಲಿಂಗ	ಕಾಲವಾಡ	ನವಲಗುಂದ	ಪಂಚಲಿಂಗೇಶ್ವರ ದೇ	೧೫
೧೬	ಶಿವಲಿಂಗ	ಕಿತ್ತೂರು	ನವಲಗುಂದ	ಈಶ್ವರ ದೇ.ಗರ್ಭಗೃಹ	೧೫
೧೭	ಶಿವಲಿಂಗ	ಕುಮಾರಕೊಪ್ಪ	ನವಲಗುಂದ	ಈಶ್ವರ ದೇ.ಗರ್ಭಗೃಹ	೧೫
೧೮	ಶಿವಲಿಂಗ	ಕುಯಿಬಾಳ	ಕುಂದಗೋಳ	ಕಲ್ಮೇಶ್ವರ ದೇ.ಗರ್ಭಗೃಹ	೧೦
೧೯	ಶಿವಲಿಂಗ	ಕುಂದಗೋಳ	ಕುಂದಗೋಳ	ಶಂಭುಲಿಂಗೇಶ್ವರ ದೇ	೧೧
೨೦	ಶಿವಲಿಂಗ	ಗುಡಗೇರಿ	ಕುಂದಗೋಳ	ಕಲ್ಮಠ ದೇ.ಆವರಣ	೧೧
೨೧	ಶಿವಲಿಂಗ	ತಿಮ್ಮಾಪುರ	ಧಾರವಾಡ	ಈಶ್ವರ ದೇವಾಲಯ	೧೧
೨೨	ಶಿವಲಿಂಗ	ತಿರ್ಲಾಪೂರ	ನವಲಗುಂದ	ಪುರದೇಶ್ವರ ದೇ.ಬಲಗಡೆ	೧೨
೨೩	ಶಿವಲಿಂಗ	ತುಪ್ಪದಕುರಹಟ್ಟಿ	ನವಲಗುಂದ	ಊರ ಮಧ್ಯದಲ್ಲಿ	೦೯
೨೪	ಶಿವಲಿಂಗ	ಧಾರವಾಡ	ಧಾರವಾಡ	ಎಸ್.ಪಿ.ಆಫೀಸ್ ಹತ್ತಿರ	೧೦
೨೫	ಶಿವಲಿಂಗ	ದುಮ್ಮವಾಡ	ಕಲಘಟಗಿ	ಗ್ರಾಮದ ಮಧ್ಯದಲ್ಲಿ	೧೨
೨೬	ಶಿವಲಿಂಗ	ದೇವರಗುಡಿಹಾಳ	ಹುಬ್ಬಳ್ಳಿ	ಮಲ್ಲಿಕಾರ್ಜುನ ದೇ	೧೨

೨೭	ಶಿವಲಿಂಗ	ನವಲಗುಂದ	ನವಲಗುಂದ	ಮಂಜುನಾಥ ನಗರ	೧೨
೨೮	ಶಿವಲಿಂಗ	ನರೇಂದ್ರ	ಧಾರವಾಡ	ಈಶ್ವರ ದೇವಾಲಯ	೧೩
೨೯	ಶಿವಲಿಂಗ	ನಾಗರಹಳ್ಳಿ	ನವಲಗುಂದ	ಈಶ್ವರ ದೇ.ಗರ್ಭಗೃಹ	೧೫
೩೦	ಶಿವಲಿಂಗ	ನಿಗದಿ	ಧಾರವಾಡ	ಹನುಮಂತ ದೇ.ಆವರಣ	೧೨
೩೧	ಶಿವಲಿಂಗ	ನಿಗದಿ	ಧಾರವಾಡ	ಕಲ್ಲಪ್ಪಜ್ಜನ ದೇ.ಆವರಣ	೧೨
೩೨	ಶಿವಲಿಂಗ	ಪುಡಗಲಕಟ್ಟಿ	ಧಾರವಾಡ	ಕಲ್ಮೇಶ್ವರ ದೇವಾಲಯ	೧೧
೩೩	ಶಿವಲಿಂಗ	ಬ್ಯಾಹಟ್ಟಿ	ಹುಬ್ಬಳ್ಳಿ	ಈಶ್ವರ ದೇ.ಗರ್ಭಗೃಹ	೧೨
೩೪	ಶಿವಲಿಂಗ	ಬೆಟದೂರು	ಕುಂದಗೋಳ	ಕಲ್ಮೇಶ್ವರ ದೇವಾಲಯ	೧೨
೩೫	ಶಿವಲಿಂಗ	ಮರೇವಾಡ	ಧಾರವಾಡ	ರಾಮಲಿಂಗೇಶ್ವರ ದೇ.	೧೨
೩೬	ಶಿವಲಿಂಗ	ಮನಗುಂಡಿ	ಧಾರವಾಡ	ಈಶ್ವರ ದೇ.ಆವರಣ	೧೨
೩೭	ಶಿವಲಿಂಗ	ಮಲ್ಲಿಗವಾಡ	ಹುಬ್ಬಳ್ಳಿ	ಸೋಮೇಶ್ವರ ದೇ.	೧೧
೩೮	ಶಿವಲಿಂಗ	ಮುಳಮುತ್ತಲ	ಧಾರವಾಡ	ಈಶ್ವರ ದೇವಾಲಯ	೧೨
೩೯	ಶಿವಲಿಂಗ	ಮುಗುದ	ಧಾರವಾಡ	ಈಶ್ವರ ದೇವಾಲಯ	೧೪
೪೦	ಶಿವಲಿಂಗ	ಯರಗುಪ್ಪಿ	ಕುಂದಗೋಳ	ನಾರಾಯನ ದೇ.ನವರಂಗ	೧೦
೪೧	ಶಿವಲಿಂಗ	ಯಲಿವಾಳ	ಕುಂದಗೋಳ	ಕಲ್ಮೇಶ್ವರ ದೇವಾಲಯ	೧೨
೪೨	ಶಿವಲಿಂಗ	ಯಮನೂರು	ನವಲಗುಂದ	ಈಶ್ವರ ದೇ.ಗರ್ಭಗೃಹ	೧೨
೪೩	ಶಿವಲಿಂಗ	ಯಾದವಾಡ	ಧಾರವಾಡ	ಕಲ್ಮೇಶ್ವರ ದೇವಾಲಯ	೧೧
೪೪	ಶಿವಲಿಂಗ	ಯಾದವಾಡ	ಧಾರವಾಡ	ರಾಮಲಿಂಗೇಶ್ವರ ದೇ	೧೫
೪೫	ಶಿವಲಿಂಗ	ಶಿರಗುಪ್ಪಿ	ಹುಬ್ಬಳ್ಳಿ	ಊರ ಮಧ್ಯ	೧೧
೪೬	ಶಿವಲಿಂಗ	ಶಿರೂರು	ಕುಂದಗೋಳ	ಕಲ್ಮೇಶ್ವರ ದೇ.ಗರ್ಭಗೃಹ	೦೮
೪೭	ಶಿವಲಿಂಗ	ಹನುಮನಾಳ	ಧಾರವಾಡ	ರಾಮಲಿಂಗೇಶ್ವರ ದೇ	೧೫
೪೮	ಶಿವಲಿಂಗ	ಹಾರೋಬೆಳವಡಗಿ	ಧಾರವಾಡ	ಕಲ್ಮೇಶ್ವರ ದೇವಾಲಯ	೧೨
೪೯	ಶಿವಲಿಂಗ	ಹಿರೇನೆರ್ತಿ	ಕುಂದಗೋಳ	ಕಲ್ಮೇಶ್ವರ ದೇ.ಗರ್ಭಗೃಹ	೦೮
೫೦	ಶಿವಲಿಂಗ	ಹುಬ್ಬಳ್ಳಿ	ಹುಬ್ಬಳ್ಳಿ	ಭವಾನಿಶಂಕರ ದೇ.ಗರ್ಭಗೃಹ	೧೨
೫೧	ಶಿವಲಿಂಗ	ಹೆಬ್ಬಳ್ಳಿ	ಧಾರವಾಡ	ಶಂಭುಲಿಂಗ ದೇ	೧೪

ಭೈರವ ಶಿಲ್ಪಗಳು

ಕ್ರಸಂ	ಶಿಲ್ಪ	ಗ್ರಾಮ	ತಾಲೂಕು	ಸ್ಥಳ	ಕಾಲ(ಕ್ರಿ.ಶ)
೧	ಭೈರವ	ಅಮರಗೋಳ	ಹುಬ್ಬಳ್ಳಿ	ಬನಶಂಕರಿ ದೇವಾಲಯ	೧೨
೨	ಭೈರವ	ಅಳ್ನಾವರ	ಧಾರವಾಡ	ಕಲ್ಮೇಶ್ವರ ದೇ.ಆವರಣ	೧೨
೩	ಭೈರವ	ಅಗಡಿ	ಹುಬ್ಬಳ್ಳಿ	ಕಲ್ಮೇಶ್ವರ ದೇ.ಆವರಣ	೧೨
೪	ಭೈರವ	ಅಮ್ಮಿನಭಾವಿ	ಧಾರವಾಡ	ಕಲ್ಮೇಶ್ವರ ದೇ. ಮುಂಭಾಗ	೧೧
೫	ಭೈರವ	ಅಮ್ಮಿನಭಾವಿ	ಧಾರವಾಡ	ಕಲ್ಮೇಶ್ವರ ದೇ. ಮುಂಭಾಗ	೧೧
೬	ಭೈರವ	ಉಗ್ಗಿನಕೇರಿ	ಕಲಘಟಗಿ	ಕಂಪ್ಲಿಯವರ ಓಣಿಯಲ್ಲಿ	೧೨
೭	ಭೈರವ	ಉಪ್ಪಿನಬೆಟಗೇರಿ	ಧಾರವಾಡ	ಊರಮಧ್ಯ	೧೨
೮	ಭೈರವ	ಕನಕೂರು	ಧಾರವಾಡ	ಕಲ್ಮೇಶ್ವರ ದೇ. ಆವರಣ	೧೨
೯	ಭೈರವ	ಕಲಘಟಗಿ	ಕಲಘಟಗಿ	ಬಸದಿಯ ಪಕ್ಕ	೧೨
೧೦	ಭೈರವ	ಕಂದಲಿ	ಕಲಘಟಗಿ	ಕಲ್ಮೇಶ್ವರ ದೇ.ಆವರಣ	೧೨
೧೧	ಭೈರವ	ಕುಂಕೂರು	ಕುಂದಗೋಳ	ಹನುಮಂತ ದೇ. ಗರ್ಭಗೃಹ	೧೫
೧೨	ಭೈರವ	ಕುಂಕೂರು	ಕಲಘಟಗಿ	ದೇವತವ್ವನ ಸ್ಥಳದಲ್ಲಿ	೧೧
೧೩	ಭೈರವ	ಕುಂದಗೋಳ	ಕುಂದಗೋಳ	ಗಂಗಾಧರೇಶ್ವರ ದೇವಾಲಯ	೧೨
೧೪	ಭೈರವ	ಕುಂದಗೋಳ	ಕುಂದಗೋಳ	ಹರಿಹರೇಶ್ವರ ದೇವಾಲಯ	೧೩
೧೫	ಭೈರವ	ಕುಂದಗೋಳ	ಕುಂದಗೋಳ	ವೀರಭದ್ರೇಶ್ವರ ದೇ. ಗರ್ಭಗೃಹ	೧೨
೧೬	ಭೈರವ	ಕಾಮಧೇನು	ಕಲಘಟಗಿ	ಊರಿನ ಮುಂದೆ	೧೧
೧೭	ಭೈರವ	ಗರಗ	ಧಾರವಾಡ	ಕಲ್ಮೇಶ್ವರ ದೇ.ಆವರಣ	೧೨
೧೮	ಭೈರವ	ಗಂಜೀಗಟ್ಟಿ	ಕಲಘಟಗಿ	ನಾಗಲಿಂಗೇಶ್ವರ ದೇ. ಭಿತ್ತಿ	೧೨
೧೯	ಭೈರವ	ಗುಡಗೇರಿ	ಕುಂದಗೋಳ	ಬಸದಿಯ ಬಾಗಿಲುವಾಡದಲ್ಲಿ	೧೨
೨೦	ಭೈರವ	ಜುಂಜುನಬೈಲು	ಕಲಘಟಗಿ	ದುರ್ಗಪ್ಪನವರ ಹೊಲದ ಹತ್ತಿರ	೧೧
೨೧	ಭೈರವ	ತಲವಾಯಿ	ಧಾರವಾಡ	ಕಲ್ಮೇಶ್ವರ ದೇ.ಮುಂಭಾಗ	೧೧
೨೨	ಭೈರವ	ತಲೆ ಮೊರಬ	ನವಲಗುಂದ	ಕಲ್ಮೇಶ್ವರ ದೇ.ಆವರಣ	೧೨

೪೭	ಭೈರವ	ಸಂಗಮೇಶ್ವರ	ಕಲಘಟಗಿ	ಕಲ್ಮೇಶ್ವರ ದೇ. ನವರಂಗದಲ್ಲಿ	೧೨
೪೮	ಭೈರವ	ಹಸರಂಬಿ	ಕಲಘಟಗಿ	ಊರಿನ ಪಶ್ಚಿಮ ಹೊಲದಲ್ಲಿ	೧೧
೪೯	ಭೈರವ	ಹನುಮನಕೊಪ್ಪ	ಧಾರವಾಡ	ಕಲ್ಮೇಶ್ವರ ದೇ.ಆವರಣ	೧೧
೫೦	ಭೈರವ	ಹನುಮನಾಳ	ಧಾರವಾಡ	ಕಲ್ಮೇಶ್ವರ ದೇ. ಮುಂಭಾಗ	೧೧
೪೯	ಭೈರವ	ಹಾರೊಬೆಳವಡಗಿ	ಧಾರವಾಡ	ಹನುಮಂತ ದೇ. ಆವರಣ	೧೨

ಕಾರ್ತಿಕೇಯ ಶಿಲ್ಪಗಳು

ಕ್ರಸಂ	ಶಿಲ್ಪ	ಗ್ರಾಮ	ತಾಲೂಕು	ಸ್ಥಳ	ಕಾಲ(ಕ್ರಿ.ಶ)
೧	ಕಾರ್ತಿಕೇಯ	ಅರವಟಗಿ	ಧಾರವಾಡ	ಬೆಟ್ಟದ ಮೇಲೆ	೧೧
೨	ಕಾರ್ತಿಕೇಯ	ಕಂದಲಿ	ಕಲಘಟಗಿ	ಕಲ್ಮೇಶ್ವರ ದೇ.ಆವರಣ	೧೨
೩	ಕಾರ್ತಿಕೇಯ	ಕಾಮಧೇನು	ಕಲಘಟಗಿ	ಸ್ವಯಂಭೂ ದೇ. ಆವರಣ	೧೨
೪	ಕಾತೀಕೇಯ	ಕಿರೇಸೂರ	ಹುಬ್ಬಳ್ಳಿ	ಊರಿನ ಹಿಂಭಾಗದಲ್ಲಿ	೧೨
೫	ಕಾರ್ತಿಕೇಯ	ಕೊಟಬಾಗಿ	ಕಲಘಟಗಿ	ಕಲ್ಮೇಶ್ವರ ದೇ.ಆವರಣ	೧೧
೬	ಕಾರ್ತಿಕೇಯ	ಗಾಮನಗಟ್ಟಿ	ಧಾರವಾಡ	ಕಲ್ಮೇಶ್ವರ ದೇ.ಆವರಣ	೧೧
೭	ಕಾರ್ತಿಕೇಯ	ಜುಂಜನಬೈಲು	ಕಲಘಟಗಿ	ದುರ್ಗಪ್ಪನವರ ಹೊಲದಲ್ಲಿ	೧೧
೮	ಕಾರ್ತಕೇಯ	ತೆಗೂರು	ಧಾರವಾಡ	ಹನುಮಂತ ದೇ. ಆವರಣ	೧೪
೯	ಕಾರ್ತಿಕೇಯ	ದೇವರಗುಡಿಹಾಳ	ಹುಬ್ಬಳ್ಳಿ	ಮಲ್ಲಿಕಾರ್ಜುನ ದೇ. ಆವರಣ	೧೧
೧೦	ಕಾರ್ತಿಕೇಯ	ಗಾಮನಗಟ್ಟಿ	ಕಲಘಟಗಿ	ಊರಮಧ್ಯದಲ್ಲಿ	೧೧
೧೧	ಕಾರ್ತಿಕೇಯ	ಮರೇವಾಡ	ಧಾರವಾಡ	ಊರಮಧ್ಯ	೧೨
೧೨	ಕಾರ್ತಿಕೇಯ	ಮಿಶ್ರಿಕೋಟಿ	ಕಲಘಟಗಿ	ಹೊಂಡದ ಹತ್ತಿರ	೧೧
೧೩	ಕಾರ್ತಿಕೇಯ	ಮುಗುದ	ಧಾರವಾಡ	ರಾಮಲಿಂಗೇಶ್ವರ ದೇವಾಲಯ	೧೨
೧೪	ಕಾರ್ತಿಕೇಯ	ಸುಳ್ಳ	ಹುಬ್ಬಳ್ಳಿ	ಕಲ್ಮೇಶ್ವರ ದೇ.ಆವರಣ	೧೧
೧೫	ಕಾರ್ತಿಕೇಯ	ಸಂಗಮೇಶ್ವರ	ಕಲಘಟಗಿ	ಕಲ್ಮೇಶ್ವರ ದೇ. ನವರಂಗದಲ್ಲಿ	೧೨
೧೬	ಕಾರ್ತಿಕೇಯ	ಹುಲಿಕೇರಿ	ಧಾರವಾಡ	ಕಲ್ಮೇಶ್ವರ ದೇ.ಆವರಣ	೧೧

ವೀರಭದ್ರೇಶ್ವರ ಶಿಲ್ಪಗಳು

ಕ್ರಸಂ	ಶಿಲ್ಪ	ಗ್ರಾಮ	ತಾಲೂಕು	ಸ್ಥಳ	ಕಾಲ(ಕ್ರಿ.ಶ)
೧	ವೀರಭದ್ರೇಶ್ವರ	ಅಮರಗೋಳ	ಹುಬ್ಬಳ್ಳಿ	ಕಲ್ಮೇಶ್ವರ ದೇ.ಆವರಣ	೧೨
೨	ವೀರಭದ್ರೇಶ್ವರ	ಅದರಗುಂಚಿ	ಹುಬ್ಬಳ್ಳಿ	ವೀರಭದ್ರೇಶ್ವರ ದೇವಾಲಯ	೧೩
೩	ವೀರಭದ್ರೇಶ್ವರ	ಉಪ್ಪಿನ ಬೆಟಗೇರಿ	ಧಾರವಾಡ	ವೀರಭದ್ರೇಶ್ವರ ದೇವಾಲಯ	೧೩
೪	ವೀರಭದ್ರೇಶ್ವರ	ಕಲಘಟಗಿ	ಕಲಘಟಗಿ	ವೀರಭದ್ರೇಶ್ವರ ದೇವಾಲಯ	೧೬
೫	ವೀರಭದ್ರೇಶ್ವರ	ಕುರುಡಾಪುರ	ಧಾರವಾಡ	ದೇವಾಲಯದ ದಕ್ಷಿಣಕ್ಕೆ	೧೩
೬	ವೀರಭದ್ರೇಶ್ವರ	ಗಂಜೀಗಟ್ಟಿ	ಕಲಘಟಗಿ	ನಾಗಲಿಂಗೇಶ್ವರ ದೇ ಆವರಣ	೧೬
೭	ವೀರಭದ್ರೇಶ್ವರ	ಜ.ಬಸವನಕೊಪ್ಪ	ಕಲಘಟಗಿ	ವೀರಭದ್ರೇಶ್ವರ ದೇವಾಲಯ	೧೬
೮	ವೀರಭದ್ರೇಶ್ವರ	ತರ್ಲಘಟ್ಟ	ಕುಂದಗೋಳ	ಊರಿನ ಮಧ್ಯದಲ್ಲಿ	೧೫
೯	ವೀರಭದ್ರೇಶ್ವರ	ತಿರ್ಲಾಪೂರ	ನವಲಗುಂದ	ಊರ ಮಧ್ಯದಲ್ಲಿ	೧೨
೧೦	ವೀರಭದ್ರೇಶ್ವರ	ದ್ಯಾವನಕೊಂಡ	ಕಲಘಟಗಿ	ವೀರಭದ್ರೇಶ್ವರ ದೇವಾಲಯ	೧೬
೧೧	ವೀರಭದ್ರೇಶ್ವರ	ದುಮ್ಮನವಾಡ	ಕಲಘಟಗಿ	ವೀರಭದ್ರೇಶ್ವರ ದೇವಾಲಯ	೧೨
೧೨	ವೀರಭದ್ರೇಶ್ವರ	ನರೇಂದ್ರ	ಧಾರವಾಡ	ವೀರಭದ್ರೇಶ್ವರ ದೇವಾಲಯ	೧೩
೧೩	ವೀರಭದ್ರೇಶ್ವರ	ನರೇಂದ್ರ	ಧಾರವಾಡ	ವೀರಭದ್ರೇಶ್ವರ ದೇವಾಲಯ	೧೨
೧೪	ವೀರಭದ್ರೇಶ್ವರ	ನೂಲ್ವಿ	ಹುಬ್ಬಳ್ಳಿ	ವೀರಭದ್ರೇಶ್ವರ ದೇವಾಲಯ	೧೨
೧೫	ವೀರಭದ್ರೇಶ್ವರ	ಬಲ್ಲರವಾಡ	ಕಲಘಟಗಿ	ಹನುಮಂತ ದೇ.ಆವರಣ	೧೫
೧೬	ವೀರಭದ್ರೇಶ್ವರ	ಬೆಟದೂರು	ಕುಂದಗೋಳ	ವೀರಭದ್ರೇಶ್ರರ ದೇ. ಗರ್ಭಗೃಹ	೧೨
೧೭	ವೀರಭದ್ರೇಶ್ವರ	ಬೆಳವಟಗಿ	ನವಲಗುಂದ	ವೀರಭದ್ರೇಶ್ವರ ದೇವಾಲಯ	೧೪
೧೮	ವೀರಭದ್ರೇಶ್ವರ	ಮತ್ತಿಗಟ್ಟಿ	ಕುಂದಗೋಳ	ವೀರಭದ್ರೇಶ್ವರ ದೇವಾಲಯ	೧೨
೧೯	ವೀರಭದ್ರೇಶ್ವರ	ಯರಗುಪ್ಪಿ	ಕುಂದಗೋಳ	ಕಲ್ಮೇಶ್ವರ ದೇ. ಗರ್ಭಗೃಹ	೧೨
೨೦	ವೀರಭದ್ರೇಶ್ವರ	ಲೊಕೂರು	ಧಾರವಾಡ	ವೀರಭದ್ರೇಶ್ವರ ದೇವಾಲಯ	೧೪
೨೧	ವೀರಭದ್ರೇಶ್ವರ	ವರೂರು	ಹುಬ್ಬಳ್ಳಿ	ವೀರಭದ್ರೇಶ್ವರ ದೇವಾಲಯ	೧೨
೨೨	ವೀರಭದ್ರೇಶ್ವರ	ಶಲವಡಿ	ನವಲಗುಂದ	ವೀರಭದ್ರೇಶ್ವರ ದೇವಾಲಯ	೧೨

೨೩	ವೀರಭದ್ರೇಶ್ವರ	ಶಿರೂರು	ಕುಂದಗೋಳ	ಕಲ್ಮೇಶ್ವರ ದೇ. ಗರ್ಭಗೃಹ	೧೫
೨೪	ವೀರಭದ್ರೇಶ್ವರ	ಸುಳ್ಳ	ಹುಬ್ಬಳ್ಳಿ	ವೀರಭದ್ರೇಶ್ವರ ದೇವಾಲಯ	೧೪
೨೫	ವೀರಭದ್ರೇಶ್ವರ	ಹಾರೋಬೆಳವಡಗಿ	ಧಾರವಾಡ	ವೀರಭದ್ರೇಶ್ವರ ದೇವಾಲಯ	೧೨

ಗಣೇಶನ ಶಿಲ್ಪಗಳು

ಕ್ರಸಂ	ಶಿಲ್ಪ	ಗ್ರಾಮ	ತಾಲೂಕು	ಸ್ಥಳ	ಕಾಲ(ಕ್ರಿ.ಶ)
೧	ಗಣೇಶ	ಅಮರಗೋಳ	ಹುಬ್ಬಳ್ಳಿ	ಕಲ್ಮೇಶ್ವರ ದೇ.ಆವರಣ	೧೨
೨	ಗಣೇಶ	ಅಳ್ನಾವರ	ಧಾರವಾಡ	ಕಲ್ಮೇಶ್ವರ ದೇ. ಆವರಣ	೧೩
೩	ಗಣೇಶ	ಉಣಕಲ್	ಹುಬ್ಬಳ್ಳಿ	ಚಂದ್ರಮೌಳೇಶ್ವರ ದೇ.ಶಿಖರ	೧೨
೪	ಗಣೇಶ	ಕಮಡೊಳ್ಳಿ	ಕುಂದಗೋಳ	ರಾಮಲಿಂಗೇಶ್ವರ ದೇವಾಲಯ	೧೨
೫	ಗಣೇಶ	ಕರಡಿಗುಡ್ಡ	ಧಾರವಾಡ	ಮಲ್ಲಿಕಾರ್ಜುನ ದೇ. ಆವರಣ	೧೨
೬	ಗಣೇಶ	ಕುಂದಗೋಳ	ಕುಂದಗೋಳ	ಶಂಭುಲಿಂಗ ದೇ.ಅಂತರಾಳ	೧೨
೭	ಗಣೇಶ	ಕಾಮಧೇನು	ಕಲಘಟಗಿ	ಕಲ್ಮೇಶ್ವರ ದೇವಾಲಯದ ಹತ್ತಿರ	೧೪
೮	ಗಣೇಶ	ಕುಯಿಬಾಳ	ಕುಂದಗೋಳ	ಮಸೀದಿಯ ಹತ್ತಿರ	೧೨
೯	ಗಣೇಶ	ಕುರುಡಾಪುರ	ಧಾರವಾಡ	ವೀರಭದ್ರೇಶ್ವರ ದೇ.ಕಮಾನನಲ್ಲಿ	೧೪
೧೦	ಗಣೇಶ	ಕುಂಕೂರು	ಕುಂದಗೋಳ	ಊರ ಹೊರವಲಯದಲ್ಲಿದೆ	೧೨
೧೧	ಗಣೇಶ	ಕೊಡ್ಲಿವಾಡ	ಕುಂದಗೋಳ	ವೀರಭದ್ರ ದೇ. ಎದುರು	೦೯
೧೨	ಗಣೇಶ	ಕೊಟಬಾಗಿ	ಧಾರವಾಡ	ಊರ ಮಧ್ಯದಲ್ಲಿ	೧೨
೧೩	ಗಣೇಶ	ಗರಗ	ಧಾರವಾಡ	ಹನುಮಂತ ದೇ. ಆವರಣ	೧೪
೧೪	ಗಣೇಶ	ಗರಗ	ಧಾರವಾಡ	ಕಲ್ಮೇಶ್ವರ ದೇ.ಆವರಣ	೧೫
೧೫	ಗಣೇಶ	ಗರಗ	ಧಾರವಾಡ	ಈಶ್ವರ ದೇ. ಹತ್ತಿರ	೧೪
೧೬	ಗಣೇಶ	ಗುಡಿಸಾಗರ	ನವಲಗುಂದ	ಊರ ನಡುವೆ ಇದೆ	೧೨
೧೭	ಗಣೇಶ	ತಂಬೂರು	ಕಲಘಟಗಿ	ಬಸವೇಶ್ವರ ದೇ.ಆವರಣ	೧೩
೧೮	ಗಣೇಶ	ತುಪ್ಪದ ಕುರಹಟ್ಟಿ	ನವಲಗುಂದ	ಗ್ರಾಮಪಂಚಾಯತಿ ಹತ್ತಿರ	೧೨
೧೯	ಗಣೇಶ	ದೇವರ ಹುಬ್ಬಳ್ಳಿ	ಧಾರವಾಡ	ಊರ ಅಗಸಿಯ ಬಳಿ	೧೨

೨೦	ಗಣೇಶ	ನಿಗದಿ	ಧಾರವಾಡ	ಹನುಮಂತ ದೇ.ಗರ್ಭಗೃಹ	೧೩
೨೧	ಗಣೇಶ	ನವಲಗುಂದ	ನವಲಗುಂದ	ವಿನಾಯಕ ಪೇಟೆ	೧೩
೨೨	ಗಣೇಶ	ನವಲೂರು	ಹುಬ್ಬಳ್ಳಿ	ಮಲ್ಲಿಕಾರ್ಜುನ ದೇ.ಆವರಣ	೧೩
೨೩	ಗಣೇಶ	ಬೆನಕನಕಟ್ಟಿ	ಕಲಘಟಗಿ	ಬೆಳಕಿನ ಗುಡಿಯ ಆವರಣ	೧೩
೨೪	ಗಣೇಶ	ಬೆಟದೂರು	ಕುಂದಗೋಳ	ರಸ್ತೆಯ ಬದಿಯಲ್ಲಿ	೧೦
೨೫	ಗಣೇಶ	ಬಾಡ	ಧಾರವಾಡ	ಊರ ಮಧ್ಯದಲ್ಲಿ	೧೨
೨೬	ಗಣೇಶ	ಬುಡರಸಿಂಗಿ	ಹುಬ್ಬಳ್ಳಿ	ಊರ ಮಧ್ಯದಲ್ಲಿ	೧೨
೨೭	ಗಣೇಶ	ಮನಗುಂಡಿ	ಧಾರವಾಡ	ಕಲ್ಮೇಶ್ವರ ದೇ. ಒಳಭಾಗ	೧೧
೨೮	ಗಣೇಶ	ಮುತ್ತಗಿ	ಕಲಘಟಗಿ	ರಾಮಲಿಂಗೇಶ್ವರ ದೇವಾಲಯ	೧೨
೨೯	ಗಣೇಶ	ಲೋಕೂರು	ಧಾರವಾಡ	ಊರ ಮಧ್ಯದಲ್ಲಿ	೧೨
೩೦	ಗಣೇಶ	ಹಳೇ ಹುಬ್ಬಳ್ಳಿ	ಹುಬ್ಬಳ್ಳಿ	ಭವಾನಿ ಶಂಕರ ದೇವಾಲಯ	೧೨
೩೧	ಗಣೇಶ	ಹಳ್ಳಿಕೇರಿ	ಧಾರವಾಡ	ಊರ ಮಧ್ಯದಲ್ಲಿ	೧೬
೩೨	ಗಣೇಶ	ಹಾಳಸಿದ್ದಾಪೂರ	ಧಾರವಾಡ	ಈಶ್ವರ ದೇ. ಎಡಭಾಗದಲ್ಲಿ	೧೩

ಸೂರ್ಯ ಶಿಲ್ಪಗಳು

ಕ್ರಸಂ	ಶಿಲ್ಪ	ಗ್ರಾಮ	ತಾಲೂಕು	ಸ್ಥಳ	ಕಾಲ(ಕ್ರಿ.ಶ)
೧	ಸೂರ್ಯ	ಅಳ್ನಾವರ	ಧಾರವಾಡ	ಕಲ್ಮೇಶ್ವರ ದೇ. ಆವರಣ	೧೨
೨	ಸೂರ್ಯ	ಅಮರಗೋಳ	ಹುಬ್ಬಳ್ಳಿ	ಬನಶಂಕರಿ ದೇ. ನವರಂಗ	೧೨
೩	ಸೂರ್ಯ	ಅಹಟ್ಟಿ	ನವಲಗುಂದ	ಕಲ್ಮೇಶ್ವರ ದೇ. ಆವರಣ	೧೨
೪	ಸೂರ್ಯ	ಕಂದಲಿ	ಕಲಘಟಗಿ	ಕಲ್ಮೇಶ್ವರ ದೇ. ಆವರಣ	೧೨
೫	ಸೂರ್ಯ	ಕಾಮಧೇನು	ಕಲಘಟಗಿ	ಊರ ಮಧ್ಯದಲ್ಲಿ	೧೧
೬	ಸೂರ್ಯ	ಕುಂಕೂರು	ಕುಂದಗೋಳ	ಹನುಮಂತ ದೇ. ಗರ್ಭಗೃಹ	೧೦
೭	ಸೂರ್ಯ	ಕೊಟಬಾಗಿ	ಕಲಘಟಗಿ	ಕಲ್ಮೇಶ್ವರ ದೇ. ಹೊರಭಾಗ	೧೧
೮	ಸೂರ್ಯ	ಜುಂಜನಬೈಲು	ಕಲಘಟಗಿ	ದುರುಗಪ್ಪನವರ ಹೊಲದಲ್ಲಿ	೧೨
೯	ಸೂರ್ಯ	ತುಪ್ಪದ ಕುರಹಟ್ಟಿ	ನವಲಗುಂದ	ಕಲ್ಮೇಶ್ವರ ದೇವಾಲಯದಲ್ಲಿ	೧೦

೧೦	ಸೂರ್ಯ	ತೇಗೂರು	ಧಾರವಾಡ	ಹನುಮಂತ ದೇ. ಮುಂಭಾಗ	೧೪
೧೧	ಸೂರ್ಯ	ತಂಬೂರು	ಕಲಘಟಗಿ	ಕಲ್ಮೇಶ್ವರ ದೇ. ಆವರಣ	೧೧
೧೨	ಸೂರ್ಯ	ನವಲೂರು	ಹುಬ್ಬಳ್ಳಿ	ದ್ಯಾಮಮ್ಮನ ಗುಡಿ.ಆವರಣ	೧೨
೧೩	ಸೂರ್ಯ	ನಾವಳ್ಳಿ	ನವಲಗುಂದ	ಕಲ್ಮೇಶ್ವರ ದೇ. ಹೊರಭಾಗ	೧೧
೧೪	ಸೂರ್ಯ	ನೂಲ್ವಿ	ಹುಬ್ಬಳ್ಳಿ	ವಿಷ್ಣು ದೇ. ಮುಂಭಾಗ	೧೨
೧೫	ಸೂರ್ಯ	ಬೀರವಳ್ಳಿ	ಕಲಘಟಗಿ	ಹೊಂಡದ ಬಳಿ	೧೧
೧೬	ಸೂರ್ಯ	ಬೇಲೂರ	ಧಾರವಾಡ	ಕಲ್ಮೇಶ್ವರ ದೇ. ಹೊರಭಾಗ	೧೧
೧೭	ಸೂರ್ಯ	ಮಿಶ್ರಿಕೋಟೆ	ಕಲಘಟಗಿ	ಊರ ಪಶ್ಚಿಮದ ಹೊಲ	೧೧
೧೮	ಸೂರ್ಯ	ಮುಗುದ	ಧಾರವಾಡ	ಊರ ಮಧ್ಯದಲ್ಲಿ	೧೨
೧೯	ಸೂರ್ಯ	ಯರಗುಪ್ಪಿ	ಕುಂದಗೋಳ	ನಾರಾಯಣ ದೇ. ಅಂತರಾಳ	೧೦
೨೦	ಸೂರ್ಯ	ಶಿರೂರು	ಕುಂದಗೋಳ	ಕಲ್ಮೇಶ್ವರ ದೇ. ಆವರಣ	೧೧
೨೧	ಸೂರ್ಯ	ಹಸರಂಬಿ	ಕಲಘಟಗಿ	ಹೊಂಡದ ಬಳಿ	೧೧
೨೧	ಸೂರ್ಯ	ಹಾರೋಬೆಳವಡಗಿ	ಧಾರವಾಡ	ಕಲ್ಮೇಶ್ವರ ದೇ. ಆವರಣ	೧೨

ಉಮಾಮಹೇಶ್ವರ

ಕ್ರ.ಸಂ	ಶಿಲ್ಪ	ಗ್ರಾಮ	ತಾಲೂಕು	ಸ್ಥಳ	ಕಾಲ(ಕ್ರಿ.ಶ)
೧	ಉಮಾಮಹೇಶ್ವರ	ಅಣ್ಣಿಗೇರಿ	ನವಲಗುಂದ	ಅಮೃತೇಶ್ವರ ದೇ ಹೊರಭಿತ್ತಿ	೧೨
೨	ಉಮಾಮಹೇಶ್ವರ	ಕಾಮಧೇನು	ಕಲಘಟಗಿ	ಸ್ವಯಂಭೂ ದೇವಾಲಯದಲ್ಲಿ	೧೨
೩	ಉಮಾಮಹೇಶ್ವರ	ಕುರಡಿಕೇರಿ	ಕಲಘಟಗಿ	ಈಶ್ವರ ದೇವಾಲಯದ ಆವರಣ	೧೨
೪	ಉಮಾಮಹೇಶ್ವರ	ಕುಂಕೂರು	ಕುಂದಗೋಳ	ಊರ ಹೊರಗಿನ ಬಯಲಿನಲ್ಲಿ	೧೧
೫	ಉಮಾಮಹೇಶ್ವರ	ಕುಂದಗೋಳ	ಕುಂದಗೋಳ	ಶಂಭುಲಿಂಗೇಶ್ವರ ದೇ. ಅಂತರಾಳ	೧೨
೬	ಉಮಾಮಹೇಶ್ವರ	ಕೋಟೂರು	ಧಾರವಾಡ	ಕಲ್ಮೇಶ್ವರ ದೇ. ಹೊರಭಾಗ	೧೨
೭	ಉಮಾಮಹೇಶ್ವರ	ಕೋಳಿವಾಡ	ಹುಬ್ಬಳ್ಳಿ	ಹನುಮಂತ ದೇ. ಪಕ್ಕದಲ್ಲಿ	೧೨
೮	ಉಮಾಮಹೇಶ್ವರ	ಗಂಜೀಗಟ್ಟಿ	ಕಲಘಟಗಿ	ದುರ್ಗಾದೇವಾಲಯದಬಳಿ	೧೨
೯	ಉಮಾಮಹೇಶ್ವರ	ಗಾಮನಗಟ್ಟಿ	ಧಾರವಾಡ	ಈಶ್ವರ ಮಂದಿರದಲ್ಲಿ	೧೨

೧೦	ಉಮಾಮಹೇಶ್ವರ	ಛಬ್ಬಿ	ಹುಬ್ಬಳ್ಳಿ	ಕಾಳಮ್ಮ ದೇ.ಆವರಣ	೧೩
೧೧	ಉಮಾಮಹೇಶ್ವರ	ಜುಂಜನಬೈಲು	ಕಲಘಟಗಿ	ದುರ್ಗಪ್ಪನವರ ಹೊಲ	೧೨
೧೨	ಉಮಾಮಹೇಶ್ವರ	ತಂಬೂರು	ಕಲಘಟಗಿ	ಬಸವಣ್ಣ ದೇ.ಆವರಣ	೧೨
೧೩	ಉಮಾಮಹೇಶ್ವರ	ನವಲಗುಂದ	ನವಲಗುಂದ	ಅಮೃತೇಶ್ವರ ದೇ.ಆವರಣ	೧೨
೧೪	ಉಮಾಮಹೇಶ್ವರ	ನಾವಳ್ಳಿ	ನವಲಗುಂದ	ಕಲ್ಮೇಶ್ವರ ದೇ. ಆವರಣ	೧೨
೧೫	ಉಮಾಮಹೇಶ್ವರ	ಬೆಟದೂರು	ಕುಂದಗೋಳ	ಊರ ಮಧ್ಯದಲ್ಲಿ	೧೨
೧೬	ಉಮಾಮಹೇಶ್ವರ	ಬೋಗೂರು	ಧಾರವಾಡ	ಕಲ್ಮೇಶ್ವರ ದೇ. ಆವರಣ	೧೨
೧೭	ಉಮಾಮಹೇಶ್ವರ	ಮರೇವಾಡ	ಧಾರವಾಡ	ಊರಮಧ್ಯ	೧೨
೧೮	ಉಮಾಮಹೇಶ್ವರ	ಮುಗುದ	ಧಾರವಾಡ	ರಾಮಲಿಂಗೇಶ್ವರ ದೇವಾಲಯ	೧೨
೧೯	ಉಮಾಮಹೇಶ್ವರ	ಮುತ್ತಗಿ	ಕಲಘಟಗಿ	ರಾಮಲಿಂಗೇಶ್ವರ. ದೇ. ಆವರಣ	೧೨
೨೦	ಉಮಾಮಹೇಶ್ವರ	ಶಿರೂರು	ಕುಂದಗೋಳ	ನಾಗೇಶ್ವರ ದೇ. ಸಭಾಮಂಟಪ	೧೨
೧೯	ಉಮಾಮಹೇಶ್ವರ	ಸಂಗಮೇಶ್ವರ	ಕಲಘಟಗಿ	ಕಲ್ಮೇಶ್ವರ ದೇ.ಆವರಣ	೧೨
೨೦	ಉಮಾಮಹೇಶ್ವರ	ಸುಳ್ಳ	ಹುಬ್ಬಳ್ಳಿ	ಕಲ್ಮೇಶ್ವರ ದೇ.ಆವರಣ	೧೨
೨೧	ಉಮಾಮಹೇಶ್ವರ	ಹುಬ್ಬಳ್ಳಿ	ಹುಬ್ಬಳ್ಳಿ	ಭವಾನಿಶಂಕರ ದೇ. ಆವರಣ	೧೩
೨೨	ಉಮಾಮಹೇಶ್ವರ	ಹೆಬ್ಬಳ್ಳಿ	ಧಾರವಾಡ	ಶಂಭುಲಿಂಗೇಶ್ವರ ದೇ. ಅಂತರಾಳ	೧೨
೨೩	ಉಮಾಮಹೇಶ್ವರ	ಹೆಬ್ಬಳ್ಳಿ	ಧಾರವಾಡ	ಶಂಭುಲಿಂಗೇಶ್ವರ ದೇ. ಗೋಡೆ	೧೨

ಶಾಕ್ತ ಶಿಲ್ಪಗಳು

ಮಹಿಷಾಸುರಮರ್ಧಿನಿ

ಕ್ರ.ಸಂ	ಶಿಲ್ಪ	ಗ್ರಾಮ	ತಾಲೂಕು	ಸ್ಥಳ	ಕಾಲ(ಕ್ರಿ.ಶ)
೧	ಮಹಿಷಾಸುರಮರ್ಧಿನಿ	ಅಳ್ನಾವರ	ಧಾರವಾಡ	ಕಲ್ಮೇಶ್ವರ ದೇ.	೧೨
೨	ಮಹಿಷಾಸುರಮರ್ಧಿನಿ	ಅಗ್ರಹಾರತಿಮ್ಮಸಾಗರ	ಹುಬ್ಬಳ್ಳಿ	ರಾಮಲಿಂಗೇಶ್ವರ ದೇ	೧೧
೩	ಮಹಿಷಾಸುರಮರ್ಧಿನಿ	ಉಣಕಲ್	ಹುಬ್ಬಳ್ಳಿ	ಚಂದ್ರಮೌಳೇಶ್ವರ ದೇ	೧೨
೪	ಮಹಿಷಾಸುರಮರ್ಧಿನಿ	ಉಪ್ಪಿನಬೆಟಗೇರಿ	ಧಾರವಾಡ	ಊರಮಧ್ಯ	೧೨
೫	ಮಹಿಷಾಸುರಮರ್ಧಿನಿ	ಕರ್ಲವಾಡ	ನವಲಗುಂದ	ಗ್ರಾಮದೇವತೆಯ ಗರ್ಭಗೃಹ	೧೦

೬	ಮಹಿಷಾಸುರಮರ್ಧಿನಿ	ಕರಡಿಗುಡ್ಡ	ಧಾರವಾಡ	ಊರಮಧ್ಯ	೧೨
೭	ಮಹಿಷಾಸುರಮರ್ಧಿನಿ	ಕನಕೂರು	ಧಾರವಾಡ	ಊರಮಧ್ಯ	೧೨
೮	ಮಹಿಷಾಸುರಮರ್ಧಿನಿ	ಕಂದಲಿ	ಕಲಘಟಗಿ	ಕಲ್ಮೇಶ್ವರ ದೇವಾಲಯ	೧೨
೯	ಮಹಿಷಾಸುರಮರ್ಧಿನಿ	ಕಡಪಟ್ಟಿ	ಕುಂದಗೋಳ	ಬಸವಣ್ಣ ದೇವಾಲಯ	೧೨
೧೦	ಮಹಿಷಾಸುರಮರ್ಧಿನಿ	ಕನಕೂರು	ಧಾರವಾಡ	ಕನಕಮ್ಮ ದೇವಾಲಯ	೧೨
೧೧	ಮಹಿಷಾಸುರಮರ್ಧಿನಿ	ಕಾಮಧೇನು	ಕಲಘಟಗಿ	ಕಲ್ಮೇಶ್ವರ ದೇವಾಲಯ	೧೨
೧೨	ಮಹಿಷಾಸುರಮರ್ಧಿನಿ	ಕುಂದಗೋಳ	ಕುಂದಗೋಳ	ಬಸವಣ್ಣ ದೇವಾಲಯ	೧೨
೧೩	ಮಹಿಷಾಸುರಮರ್ಧಿನಿ	ಕುಂಬಾರಕಣವಿ	ಧಾರವಾಡ	ಗ್ರಾಮದ ಮಧ್ಯದಲ್ಲಿ	೧೨
೧೪	ಮಹಿಷಾಸುರಮರ್ಧಿನಿ	ಕುಂಬಾರಕೊಪ್ಪ	ಧಾರವಾಡ	ಊರ ಹೊರಭಾಗ	೧೧
೧೫	ಮಹಿಷಾಸುರಮರ್ಧಿನಿ	ಕೊಡ್ಲಿವಾಡ	ಕುಂದಗೋಳ	ವೀರಭದ್ರೇಶ್ವರ ದೇವಾಲಯ	೧೦
೧೬	ಮಹಿಷಾಸುರಮರ್ಧಿನಿ	ಕೋಳಿವಾಡ	ಹುಬ್ಬಳ್ಳಿ	ಮಹಾಮಾಯಿ ದೇವಾಲಯ	೧೧
೧೭	ಮಹಿಷಾಸುರಮರ್ಧಿನಿ	ಕೋಟೂರು	ಧಾರವಾಡ	ಊರಮಧ್ಯ	೧೩
೧೮	ಮಹಿಷಾಸುರಮರ್ಧಿನಿ	ಗರಗ	ಧಾರವಾಡ	ಕಲ್ಮೇಶ್ವರ ದೇವಾಲಯ	೧೨
೧೯	ಮಹಿಷಾಸುರಮರ್ಧಿನಿ	ಗಂಗಿವಾಳ	ಕಲಘಟಗಿ	ಮಲ್ಲಿಕಾರ್ಜುನ ದೇವಾಲಯ	೧೧
೨೦	ಮಹಿಷಾಸುರಮರ್ಧಿನಿ	ಚಿಕ್ಕ ಹರಕುಣಿ	ಕುಂದಗೋಳ	ಊರ ಮುಂಭಾಗ	೧೨
೨೧	ಮಹಿಷಾಸುರಮರ್ಧಿನಿ	ತಂಬೂರು	ಧಾರವಾಡ	ಊರಮಡ್ಡಿ ಮೇಲೆ	೧೧
೨೨	ಮಹಿಷಾಸುರಮರ್ಧಿನಿ	ತಂಬೂರು	ಕಲಘಟಗಿ	ಬಸವಣ್ಣ ದೇವಾಲಯ	೧೨
೨೩	ಮಹಿಷಾಸುರಮರ್ಧಿನಿ	ಧಾರವಾಡ	ಧಾರವಾಡ	ಸೋಮೇಶ್ವರ ದೇವಾಲಯ	೧೧
೨೪	ಮಹಿಷಾಸುರಮರ್ಧಿನಿ	ದೇವರಹುಬ್ಬಳ್ಳಿ	ಧಾರವಾಡ	ಬಸವಣ್ಣ ದೇವಾಲಯ	೧೨
೨೫	ಮಹಿಷಾಸುರಮರ್ಧಿನಿ	ನವಲಗುಂದ	ನವಲಗುಂದ	ದುರ್ಗಾದೇವಾಲಯ	೧೨
೨೬	ಮಹಿಷಾಸುರಮರ್ಧಿನಿ	ನಾವಳ್ಳಿ	ನವಲಗುಂದ	ಕಲ್ಮೇಶ್ವರ ದೇವಾಲಯ	೧೨
೨೭	ಮಹಿಷಾಸುರಮರ್ಧಿನಿ	ನೂಲ್ವಿ	ಹುಬ್ಬಳ್ಳಿ	ಉಡಚವ್ವನ ದೇವಾಲಯ	೧೨
೨೮	ಮಹಿಷಾಸುರಮರ್ಧಿನಿ	ಪಡೆಸೂರು	ನವಲಗುಂದ	ಬಸವಣ್ಣ ದೇವಾಲಯ	೧೧
೨೯	ಮಹಿಷಾಸುರಮರ್ಧಿನಿ	ಪುರ	ಧಾರವಾಡ	ಕಾಡಿನ ನಡುವೆ	೧೧

೩೦	ಮಹಿಷಾಸುರಮರ್ಧಿನಿ	ಬೆಳವಟಗಿ	ನವಲಗುಂದ	ಊರಮಧ್ಯ	೧೧
೩೧	ಮಹಿಷಾಸುರಮರ್ಧಿನಿ	ಬ್ಯಾಹಟ್ಟಿ	ಹುಬ್ಬಳ್ಳಿ	ಪಂಚಾಯತಿಯ ಬಳಿ	೧೨
೩೨	ಮಹಿಷಾಸುರಮರ್ಧಿನಿ	ಬುಡರಸಿಂಗಿ	ಹುಬ್ಬಳ್ಳಿ	ಊರ ಮಧ್ಯದಲ್ಲಿ	೧೨
೩೩	ಮಹಿಷಾಸುರಮರ್ಧಿನಿ	ಮರೇವಾಡ	ಧಾರವಾಡ	ಬಸವೇಶ್ವರ ದೇ. ಆವರಣ	೧೨
೩೪	ಮಹಿಷಾಸುರಮರ್ಧಿನಿ	ಮನಗುಂಡಿ	ಧಾರವಾಡ	ಕಲ್ಲಜ್ಜನ ದೇವಾಲಯ	೧೧
೩೫	ಮಹಿಷಾಸುರಮರ್ಧಿನಿ	ಮಿಶ್ರಿಕೋಟೆ	ಕಲಘಟಗಿ	ರಾಮಲಿಂಗ ದೇ.	೧೨
೩೬	ಮಹಿಷಾಸುರಮರ್ಧಿನಿ	ಮುಗುದ	ಧಾರವಾಡ	ರಾಮಲಿಂಗ ದೇ.	೧೨
೩೭	ಮಹಿಷಾಸುರಮರ್ಧಿನಿ	ಮುಗುದ	ಧಾರವಾಡ	ರಾಮಲಿಂಗ ದೇವಾಲಯ	೧೧
೩೮	ಮಹಿಷಾಸುರಮರ್ಧಿನಿ	ಲೋಕೂರು	ಧಾರವಾಡ	ಬಸವೇಶ್ವರ ದೇವಾಲಯ	೧೧
೩೯	ಮಹಿಷಾಸುರಮರ್ಧಿನಿ	ಶಿರೂರು	ಕುಂದಗೋಳ	ಮರಿಯಮ್ಮ ದೇವಾಲಯ	೧೨
೪೦	ಮಹಿಷಾಸುರಮರ್ಧಿನಿ	ಶಿರೂರು	ಕುಂದಗೋಳ	ಕೆರೆಯ ದಂಡೆಯ ಮೇಲೆ	೦೮
೪೧	ಮಹಿಷಾಸುರಮರ್ಧಿನಿ	ಸಂಗಮೇಶ್ವರ	ಕಲಘಟಗಿ	ಕಲ್ಮೇಶ್ವರ ದೇವಾಲಯ	೧೨
೪೨	ಮಹಿಷಾಸುರಮರ್ಧಿನಿ	ಹಸರಂಬಿ	ಕಲಘಟಗಿ	ಸೋಮೇಶ್ವರ ದೇವಾಲಯ	೧೨
೪೩	ಮಹಿಷಾಸುರಮರ್ಧಿನಿ	ಹಾರೋಬೆಳವಡಗಿ	ಧಾರವಾಡ	ಬಸ್‌ನಿಲ್ದಾಣದ ಬಳಿ	೧೧
೪೪	ಮಹಿಷಾಸುರಮರ್ಧಿನಿ	ಹೆಬ್ಬಳ್ಳಿ	ಧಾರವಾಡ	ಶಂಭುಲಿಂಗ ದೇವಾಲಯ	೧೧
೪೫	ಮಹಿಷಾಸುರಮರ್ಧಿನಿ	ಹಂಗರಕಿ	ಧಾರವಾಡ	ಊರ ಮುಂಭಾಗದಲ್ಲಿ	೧೩

ಗಜಲಕ್ಷ್ಮಿ ಶಿಲ್ಪಗಳು

ಕ್ರ.ಸಂ	ಶಿಲ್ಪ	ಗ್ರಾಮ	ತಾಲೂಕು	ಸ್ಥಳ	ಕಾಲ(ಕ್ರಿ.ಶ)
೧	ಗಜಲಕ್ಷ್ಮಿ	ಅಮ್ಮಿನಭಾವಿ	ಧಾರವಾಡ	ಕಲ್ಮೇಶ್ವರ ದೇ. ಲಲಾಟದಲ್ಲಿ	೧೨
೨	ಗಜಲಕ್ಷ್ಮಿ	ಅಗಸನಹಳ್ಳಿ	ಧಾರವಾಡ	ಗದಿಗೆಪ್ಪನವರ ಹಿತ್ತಲ	೧೨
೩	ಗಜಲಕ್ಷ್ಮಿ	ಅಳ್ನಾವರ	ಧಾರವಾಡ	ಕಲ್ಮೇಶ್ವರ ದೇವಾಲಯದ ಲಲಾಟ	೧೨
೪	ಗಜಲಕ್ಷ್ಮಿ	ಅಣ್ಣೀಗೇರಿ	ನವಲಗುಂದ	ಬನಶಂಕರಿ ದೇ.ಬಾಗಿಲುವಾಡ	೧೨
೫	ಗಜಲಕ್ಷ್ಮಿ	ಅಮರಗೋಳ	ಹುಬ್ಬಳ್ಳಿ	ಬನಶಂಕರಿ ದೇ. ಲಲಾಟ	೧೨

೬	ಗಜಲಕ್ಷ್ಮಿ	ಅಮರಗೋಳ	ನವಲಗುಂದ	ಬನ್ನಿಮರದ ಕೆಳಗೆ	೧೨
೭	ಗಜಲಕ್ಷ್ಮಿ	ಉಪ್ಪಿನಬೆಟಗೇರಿ	ಧಾರವಾಡ	ಊರ ಹೊರಭಾಗ	೧೨
೮	ಗಜಲಕ್ಷ್ಮಿ	ಕಂದಲಿ	ಕಲಘಟಗಿ	ಕಲ್ಮೇಶ್ವರ ದೇವಾಲಯದ ಆವರಣ	೧೧
೯	ಗಜಲಕ್ಷ್ಮಿ	ಕಣ್ಣೂರು	ನವಲಗುಂದ	ಆಂಜನೇಯ ದೇ.ಮುಂಭಾಗ	೧೧
೧೦	ಗಜಲಕ್ಷ್ಮಿ	ಕಿತ್ತೂರು	ನವಲಗುಂದ	ಹನುಮಂತ ದೇ.ಆವರಣ	೧೪
೧೧	ಗಜಲಕ್ಷ್ಮಿ	ಕಿರೇಸೂರು	ಹುಬ್ಬಳ್ಳಿ	ಊರ ಕೆರೆಯ ಬಳಿ	೧೨
೧೨	ಗಜಲಕ್ಷ್ಮಿ	ಕುಂದಗೋಳ	ಕುಂದಗೋಳ	ಶಿವಾನಂದ ಬಾ.ಪ್ರೌ.ಶಾಲೆಯ	೧೦
೧೩	ಗಜಲಕ್ಷ್ಮಿ	ಕೋಳಿವಾಡ	ಹುಬ್ಬಳ್ಳಿ	ಬಸ್ ನಿಲ್ದಾಣದ ಬಳಿ	೧೧
೧೪	ಗಜಲಕ್ಷ್ಮಿ	ಗುಡಿಸಾಗರ	ನವಲಗುಂದ	ಆಂಜನೇಯ ದೇ. ಮುಂಭಾಗ	೧೧
೧೫	ಗಜಲಕ್ಷ್ಮಿ	ಗುಡಗೇರಿ	ಕುಂದಗೋಳ	ಬಸದಿಯ ನವರಂಗದ ದ್ವಾರ	೧೨
೧೬	ಗಜಲಕ್ಷ್ಮಿ	ಚಿಲಕವಾಡ	ಧಾರವಾಡ	ಕಲ್ಮೇಶ್ವರ ದೇವಾಲಯದ ಆವರಣ	೧೧
೧೭	ಗಜಲಕ್ಷ್ಮಿ	ಛಬ್ಬಿ	ಹುಬ್ಬಳ್ಳಿ	ಕಲ್ಮೇಶ್ವರ ದೇವಾಲಯದ ಬಲಭಾಗ	೧೦
೧೮	ಗಜಲಕ್ಷ್ಮಿ	ತಂಬೂರು	ಕಲಘಟಗಿ	ಬಸವೇಶ್ವರ ದೇ.ಬಾಗಿಲುವಾಡ	೧೨
೧೯	ಗಜಲಕ್ಷ್ಮಿ	ತಲೆಮೊರಬ	ನವಲಗುಂದ	ಊರ ಮಧ್ಯದಲ್ಲಿ	೧೨
೨೦	ಗಜಲಕ್ಷ್ಮಿ	ಧಾರವಾಡ	ಧಾರವಾಡ	ಛಬ್ಬಿಯಿಂದ ತಂದಿಡಲಾಗಿದೆ	೧೧
೨೧	ಗಜಲಕ್ಷ್ಮಿ	ನಾವಳ್ಳಿ	ನವಲಗುಂದ	ಕಲ್ಮೇಶ್ವರ ದೇವಾಲಯದ ಆವರಣ	೧೧
೨೨	ಗಜಲಕ್ಷ್ಮಿ	ಬಲ್ಲರವಾಡ	ನವಲಗುಂದ	ಕೆರೆ ಹತ್ತಿರದಲ್ಲಿದೆ	೧೪
೨೩	ಗಜಲಕ್ಷ್ಮಿ	ಬ್ಯಾಹಟ್ಟಿ	ಹುಬ್ಬಳ್ಳಿ	ಬಸವೇಶ್ವರ ದೇ. ಮುಂಭಾಗ	೧೧
೨೪	ಗಜಲಕ್ಷ್ಮಿ	ಬೆಟದೂರು	ಕುಂದಗೋಳ	ರಸ್ತೆಯ ಬಲಬದಿಯಲ್ಲಿ	೮
೨೫	ಗಜಲಕ್ಷ್ಮಿ	ಬೆಳಹಾರ	ಹುಬ್ಬಳ್ಳಿ	ಆಂಜನೇಯ ದೇ. ಮುಂಭಾಗ	೧೧
೨೬	ಗಜಲಕ್ಷ್ಮಿ	ಬೆಳವಟಗಿ	ನವಲಗುಂದ	ಗ್ರಾಮದ ಮಧ್ಯದಲ್ಲಿ	೧೨
೨೭	ಗಜಲಕ್ಷ್ಮಿ	ಬೆಳಗಲಿ	ಹುಬ್ಬಳ್ಳಿ	ಕಲ್ಲಪ್ಪನ ಗುಡಿಯ ಮುಂದೆ	೧೨
೨೮	ಗಜಲಕ್ಷ್ಮಿ	ಭೋಗೂರು	ಧಾರವಾಡ	ಕಲ್ಮೇಶ್ವರ ದೇವಾಲಯದ ಆವರಣ	೧೧
೨೯	ಗಜಲಕ್ಷ್ಮಿ	ಮಲ್ಲಿಗವಾಡ	ಹುಬ್ಬಳ್ಳಿ	ಸೋಮೇಶ್ವರ ದೇ. ಮುಂಭಾಗ	೧೨

೩೦	ಗಜಲಕ್ಷ್ಮಿ	ಮರೇವಾಡ	ಧಾರವಾಡ	ಊರ ಮಧ್ಯ	೧೨
೩೧	ಗಜಲಕ್ಷ್ಮಿ	ಮಣಕವಾಡ	ನವಲಗುಂದ	ಮೃತ್ಯುಂಜಯ ಮಠದ ಆವರಣ	೧೨
೩೨	ಗಜಲಕ್ಷ್ಮಿ	ಮನಗುಂಡಿ	ಧಾರವಾಡ	ಸಿದ್ದೇಶ್ವರ ದೇವಾಲಯದ ಅವರಣ	೧೧
೩೩	ಗಜಲಕ್ಷ್ಮಿ	ಮಿಶ್ರೀಕೋಟೆ	ಕಲಘಟಗಿ	ರಾಮಲಿಂಗೇಶ್ವರ ದೇ.ನವರಂಗ	೧೨
೩೪	ಗಜಲಕ್ಷ್ಮಿ	ರೊಟ್ಟಿಗವಾಡ	ಕುಂದಗೋಳ	ಕಲ್ಮೇಶ್ವರ ದೇವಾಲಯದ ಹಿಂದೆ	೧೦
೩೫	ಗಜಲಕ್ಷ್ಮಿ	ಶಲವಡಿ	ನವಲಗುಂದ	ಕಲ್ಮೇಶ್ವರ ದೇ. ಆವರಣ	೧೧
೩೬	ಗಜಲಕ್ಷ್ಮಿ	ಶರೇವಾಡ	ನವಲಗುಂದ	ಊರಮಧ್ಯದಲ್ಲಿ	೧೧
೩೭	ಗಜಲಕ್ಷ್ಮಿ	ಶಿರೂರು	ಕುಂದಗೋಳ	ಬಸವೇಶ್ವರ ದೇ.ಆವರಣ	೧೦
೩೮	ಗಜಲಕ್ಷ್ಮಿ	ಶಿಶ್ವಿನಹಳ್ಳಿ	ನವಲಗುಂದ	ಊರಮಧ್ಯದಲ್ಲಿ	೧೨
೩೯	ಗಜಲಕ್ಷ್ಮಿ	ಸೂಳಿಗಟ್ಟಿ	ಕಲಘಟಗಿ	ಊರಮಧ್ಯದಲ್ಲಿ	೧೧
೪೦	ಗಜಲಕ್ಷ್ಮಿ	ಹಾಳುಕುಸುಗಲ್	ನವಲಗುಂದ	ಊರಮಧ್ಯದಲ್ಲಿ	೧೨

ಸಪ್ತಮಾತೃಕೆ ಶಿಲ್ಪಗಳು

ಕ್ರಸಂ	ಶಿಲ್ಪ	ಗ್ರಾಮ	ತಾಲೂಕು	ಸ್ಥಳ	ಕಾಲ(ಕ್ರಿ.ಶ)
೧	ಸಪ್ತಮಾತೃಕೆ	ಅಣ್ಣಿಗೇರಿ	ನವಲಗುಂದ	ಹನುಮಂತ ದೇ. ಆವರಣ	೯
೨	ಸಪ್ತಮಾತೃಕೆ	ಅರೆಕುರಹಟ್ಟಿ	ನವಲಗುಂದ	ಊರಮಧ್ಯ	೧೨
೩	ಸಪ್ತಮಾತೃಕೆ	ಅರಳಿಹೊಂಡ	ಕಲಘಟಗಿ	ಹೊಂಡದ ಬಳಿ	೧೨
೪	ಸಪ್ತಮಾತೃಕೆ	ಇಂಗಳಹಳ್ಳಿ	ಹುಬ್ಬಳ್ಳಿ	ಊರಮಧ್ಯದಲ್ಲಿ	೮
೫	ಸಪ್ತಮಾತೃಕೆ	ಕಲ್ಲೆ	ಧಾರವಾಡ	ಹುನಮಂತ ದೇ. ಆವರಣ	೧೨
೬	ಸಪ್ತಮಾತೃಕೆ	ಕರಡಿಗುಡ್ಡ	ಧಾರವಾಡ	ಬೇವಿನ ಮರದಡಿ	೧೨
೭	ಸಪ್ತಮಾತೃಕೆ	ಕಮಡೊಳ್ಳಿ	ಕುಂದಗೋಳ	ರಾಮೇಶ್ವರ ದೇ. ಆವರಣ	೧೧
೮	ಸಪ್ತಮಾತೃಕೆ	ಕಾಮಧೇನು	ಕಲಘಟಗಿ	ಸ್ವಯಂಭೂ ದೇವಾಲಯ	೧೧
೯	ಸಪ್ತಮಾತೃಕೆ	ಕುಂಕೂರು	ಕುಂದಗೋಳ	ಊರ ನಡುವೆ	೧೧
೧೦	ಸಪ್ತಮಾತೃಕೆ	ಕುಂಕೂರು	ಕುಂದಗೋಳ	ಊರಿನ ಬಯಲಿನಲ್ಲಿ	೧೧
೧೧	ಸಪ್ತಮಾತೃಕೆ	ಕೊಡ್ಲಿವಾಡ	ಕುಂದಗೋಳ	ವೀರಭದ್ರೇಶ್ವರ ದೇ. ಆವರಣ	೧೦

೧೨	ಸಪ್ತಮಾತೃಕೆ	ಕೊಟಬಾಗಿ	ಧಾರವಾಡ	ಕಲ್ಮೇಶ್ವರ ದೇ.ಹತ್ತಿರ	೧೧
೧೩	ಸಪ್ತಮಾತೃಕೆ	ಕೋಗಿಲಗೇರಿ	ಧಾರವಾಡ	ಊರ ಮಧ್ಯದಲ್ಲಿ	೧೩
೧೪	ಸಪ್ತಮಾತೃಕೆ	ಕೋಟೂರು	ಧಾರವಾಡ	ಮಲ್ಲಿಕಾರ್ಜುನ ದೇ. ಆವರಣ	೧೧
೧೫	ಸಪ್ತಮಾತೃಕೆ	ಕೋಳಿವಾಡ	ಹುಬ್ಬಳ್ಳಿ	ದುರ್ಗಾದೇವಾಲಯದ ಎದುರು	೧೧
೧೬	ಸಪ್ತಮಾತೃಕೆ	ಕೋಳಿವಾಡ	ಹುಬ್ಬಳ್ಳಿ	ಸರ್ಕಾರಿ ವಸ್ತುಸಂಗ್ರಹಾಲಯ	೧೨
೧೭	ಸಪ್ತಮಾತೃಕೆ	ಗಬ್ಬೂರು	ಹುಬ್ಬಳ್ಳಿ	ಊರಮಧ್ಯದಲ್ಲಿ	೧೨
೧೮	ಸಪ್ತಮಾತೃಕೆ	ಗುಡಿಸಾಗರ	ನವಲಗುಂದ	ಮಲ್ಲೇಶ್ವರ ದೇ. ಆವರಣ	೧೧
೧೯	ಸಪ್ತಮಾತೃಕೆ	ಗುಡಗೇರಿ	ಕುಂದಗೋಳ	ಕುಸುಮಲಿಂಗೇಶ್ವರ ದೇ. ಹತ್ತಿರ	೧೧
೨೦	ಸಪ್ತಮಾತೃಕೆ	ಜೀರಗವಾಡ	ಧಾರವಾಡ	ಬಸವೇಶ್ವರ ದೇ.ಹತ್ತಿರ	೧೧
೨೧	ಸಪ್ತಮಾತೃಕೆ	ಜುಂಜನಬೈಲು	ಕಲಘಟಗಿ	ದುರ್ಗಪ್ಪನವರ ಹೊಲ	೧೧
೨೨	ಸಪ್ತಮಾತೃಕೆ	ತಲವಾಯಿ	ಧಾರವಾಡ	ಕಲ್ಮೇಶ್ವರ ದೇ. ಆವರಣ	೧೨
೨೩	ಸಪ್ತಮಾತೃಕೆ	ತಡಕೋಡ	ಧಾರವಾಡ	ಸಿದ್ದೇಶ್ವರ ದೇ. ಆವರಣ	೧೧
೨೪	ಸಪ್ತಮಾತೃಕೆ	ತುಪ್ಪದ ಕುರಹಟ್ಟಿ	ನವಲಗುಂದ	ಕೆರೆಯ ದಂಡೆಯ ಮೇಲೆ	೧೦
೨೫	ಸಪ್ತಮಾತೃಕೆ	ತಂಬೂರು	ಕಲಘಟಗಿ	ಬಸವೇಶ್ವರ ದೇ. ಆವರಣ	೧೨
೨೬	ಸಪ್ತಮಾತೃಕೆ	ಧಾರವಾಡ	ಧಾರವಾಡ	ಎಸ್.ಪಿ.ಆಫೀಸ್ ಹತ್ತಿರ	೧೨
೨೭	ಸಪ್ತಮಾತೃಕೆ	ಧಾರವಾಡ	ಧಾರವಾಡ	ಆಂಜನೇಯ ದೇ.ಆವರಣ	೧೧
೨೮	ಸಪ್ತಮಾತೃಕೆ	ಧಾರವಾಡ	ಧಾರವಾಡ	ಸೋಮೇಶ್ವರ ದೇವಾಲಯ	೧೨
೨೯	ಸಪ್ತಮಾತೃಕೆ	ದೇವನೂರು	ಕುಂದಗೋಳ	ಬಸವೇಶ್ವರ ದೇ. ಆವರಣ	೧೨
೩೦	ಸಪ್ತಮಾತೃಕೆ	ನರೇಂದ್ರ	ಧಾರವಾಡ	ಬಸವೇಶ್ವರ. ದೇ. ಆವರಣ	೧೨
೩೧	ಸಪ್ತಮಾತೃಕೆ	ನವಲಗುಂದ	ನವಲಗುಂದ	ದುರ್ಗಾಗುಡಿಯ ಮುಂದೆ	೧೨
೩೨	ಸಪ್ತಮಾತೃಕೆ	ನವಲೂರು	ಧಾರವಾಡ	ಮಲ್ಲಿಕಾರ್ಜುನ ದೇ. ಆವರಣ	೧೧
೩೩	ಸಪ್ತಮಾತೃಕೆ	ನೀರಸಾಗರ	ಕಲಘಟಗಿ	ಕಲ್ಲಪ್ಪನ ಜಮೀನು	೧೩
೩೪	ಸಪ್ತಮಾತೃಕೆ	ಬೀರವಳ್ಳಿ	ಕಲಘಟಗಿ	ಹೊಂಡದ ಬಳಿ	೧೧
೩೫	ಸಪ್ತಮಾತೃಕೆ	ಬೆಳಗಲಿ	ಹುಬ್ಬಳ್ಳಿ	ಊರಮಧ್ಯ	೧೨
೩೬	ಸಪ್ತಮಾತೃಕೆ	ಬೇಗೂರು	ಕಲಘಟಗಿ	ಹೊಂಡದ ಬಳಿ	೧೧

೩೭	ಸಪ್ತಮಾತೃಕೆ	ಬೊಕ್ಯಾಪುರ	ಧಾರವಾಡ	ವೀರಭದ್ರ ದೇ. ಆವರಣ	೧೧
೩೮	ಸಪ್ತಮಾತೃಕೆ	ಮರೇವಾಡ	ಧಾರವಾಡ	ಶನಿ ದೇವಾಲಯದ ಮುಂಭಾಗ	೧೨
೩೯	ಸಪ್ತಮಾತೃಕೆ	ಮನಗುಂಡಿ	ಧಾರವಾಡ	ಕಲ್ಮೇಶ್ವರ ದೇ.ಹತ್ತಿರ	೧೦
೪೦	ಸಪ್ತಮಾತೃಕೆ	ಮಳಲಿ	ಕುಂದಗೋಳ	ಮಾರುತಿ ದೇ. ಆವರಣ	೧೨
೪೧	ಸಪ್ತಮಾತೃಕೆ	ಮಿಶ್ರಿಕೋಟೆ	ಕಲಘಟಗಿ	ಹೊಂಡದ ಬಳಿ	೧೧
೪೨	ಸಪ್ತಮಾತೃಕೆ	ಮುಗುದ	ಧಾರವಾಡ	ರಾಮಲಿಂಗೇಶ್ವರ ದೇ. ಆವರಣ	೧೨
೪೩	ಸಪ್ತಮಾತೃಕೆ	ಮುತ್ತಗಿ	ಧಾರವಾಡ	ರಾಮಲಿಂಗೇಶ್ವರ ದೇ. ಆವರಣ	೧೨
೪೪	ಸಪ್ತಮಾತೃಕೆ	ಮುಕ್ಕಲು	ಕಲಘಟಗಿ	ಹೊಂಡದ ಬಳಿ	೧೧
೪೫	ಸಪ್ತಮಾತೃಕೆ	ಯರಗುಪ್ಪಿ	ಕುಂದಗೋಳ	ಶಂಕರಲಿಂಗ ದೇ. ಹತ್ತಿರ	೧೧
೪೬	ಸಪ್ತಮಾತೃಕೆ	ಶಲವಡಿ	ನವಲಗುಂದ	ಕಪಿಲೇಶ್ವರ ದೇ. ಮಧ್ಯ	೧೨
೪೭	ಸಪ್ತಮಾತೃಕೆ	ಶಿರೂರು	ಕುಂದಗೋಳ	ನಾಗಲಿಂಗೇಶ್ವರ ದೇ. ಆವರಣ	೧೨
೪೮	ಸಪ್ತಮಾತೃಕೆ	ಸತ್ತೂರು	ಧಾರವಾಡ	ಕಲ್ಮೇಶ್ವರ ದೇ. ಆವರಣ	೧೧
೪೯	ಸಪ್ತಮಾತೃಕೆ	ಸಂಶಿ	ಕುಂದಗೋಳ	ಶಂಕರಲಿಂಗ ದೇ. ಹತ್ತಿರ	೧೧
೫೦	ಸಪ್ತಮಾತೃಕೆ	ಸಂಗಮೇಶ್ವರ	ಕಲಘಟಗಿ	ಕಲ್ಮೇಶ್ವರ ದೇ. ನವರಂಗ	೧೨
೫೧	ಸಪ್ತಮಾತೃಕೆ	ಸಿದ್ದಾಪೂರ	ಧಾರವಾಡ	ಸಿದ್ದೇಶ್ವರ ದೇ. ಮುಂದಿನ ಗದ್ದೆ	೧೨
೫೨	ಸಪ್ತಮಾತೃಕೆ	ಹಸರಂಬಿ	ಕಲಘಟಗಿ	ಊರ ಪಶ್ಚಿಮ ಹೊಲ	೧೧
೫೩	ಸಪ್ತಮಾತೃಕೆ	ಹಸನಿ	ಕಲಘಟಗಿ	ಕಲ್ಮೇಶ್ವರ ದೇ. ಆವರಣ	೧೧
೫೪	ಸಪ್ತಮಾತೃಕೆ	ಹಳೇಹುಬ್ಬಳ್ಳಿ	ಹುಬ್ಬಳ್ಳಿ	ಬನಶಂಕರಿ ದೇ. ಮಧ್ಯ	೧೨
೫೫	ಸಪ್ತಮಾತೃಕೆ	ಹುಲಿಕೊಪ್ಪ	ಕಲಘಟಗಿ	ಗಳಿಗೆ ಹೊಂಡವ ಬಳಿ	೧೧
೫೬	ಸಪ್ತಮಾತೃಕೆ	ಹೆಬ್ಬಳ್ಳಿ	ಹುಬ್ಬಳ್ಳಿ	ಚಂದ್ರಪರಮೇಶ್ವರಿ ದೇವಾಲಯ	೧೨

ವೈಷ್ಣವ ಶಿಲ್ಪಗಳು

ಕ್ರಸಂ	ಶಿಲ್ಪ	ಗ್ರಾಮ	ತಾಲೂಕು	ಸ್ಥಳ	ಕಾಲ(ಕ್ರಿ.ಶ)
೧	ಕೇಶವ	ಅಳ್ಣಾವರ	ಧಾರವಾಡ	ಕಲ್ಮೇಶ್ವರ ದೇ. ಆವರಣ	೧೨
೨	ಕೇಶವ	ಅಮರಗೋಳ	ಹುಬ್ಬಳ್ಳಿ	ಬನಶಂಕರಿ ದೇವಾಲಯ	೧೨
೩	ನರಸಿಂಹ	ಅಮರಗೋಳ	ಹುಬ್ಬಳ್ಳಿ	ಬನಶಂಕರಿ ದೇ.ನವರಂಗ	೧೨
೪	ವೇಣುಗೋಪಾಲ	ಅರೆ ಕುರಹಟ್ಟಿ	ನವಲಗುಂದ	ಊರಮಧ್ಯ	೧೨

೫	ವಿಷ್ಣು	ಅಹಟ್ಟಿ	ನವಲಗುಂದ	ಊರಮಧ್ಯ	೧೨
೬	ವಿಷ್ಣು	ಅಣ್ಣಿಗೇರಿ	ನವಲಗುಂದ	ದೊಡ್ಡ ಹನುಮಂತ ದೇ.	೧೬
೭	ವಿಷ್ಣು	ಅದರಗುಂಚಿ	ಹುಬ್ಬಳ್ಳಿ	ದೊಡ್ಡಪ್ಪ ದೇ. ಪಕ್ಕ	೧೦
೮	ವಿಷ್ಣು	ಅಮ್ಮಿನಭಾವಿ	ಧಾರವಾಡ	ಕಲ್ಮೇಶ್ವರ ದೇ. ಆವರಣ	೧೧
೯	ವಿಷ್ಣು	ಅಳ್ನಾವರ	ಧಾರವಾಡ	ಕಲ್ಮೇಶ್ವರ ದೇ. ಆವರಣ	೧೧
೧೦	ವಿಷ್ಣು	ಉಗ್ಗಿನಕೇರಿ	ಕಲಘಟಗಿ	ಕಂಪ್ಲಿಯವರ ಓಣಿ	೧೧
೧೧	ಉಗ್ರ ನರಸಿಂಹ	ಉಣಕಲ್	ಹುಬ್ಬಳ್ಳಿ	ಚಂದ್ರಮೌಳೇಶ್ವರ ದೇ.	೧೨
೧೨	ವಿಷ್ಣು	ಕಮಡೊಳ್ಳಿ	ಕುಂದಗೋಳ	ಬಸವಣ್ಣ ದೇ. ಆವರಣ	೧೨
೧೩	ವಿಷ್ಣು	ಕಮಡೊಳ್ಳಿ	ಕುಂದಗೋಳ	ಬನಶಂಕರಿ ದೇ. ಗರ್ಭಗೃಹ	೧೫
೧೪	ರಾಮ,ಲಕ್ಷ್ಮಣ	ಕಮಡೊಳ್ಳಿ	ಕುಂದಗೋಳ	ರಾಮಲಿಂಗೇಶ್ವರ ದೇ. ಗೋಡೆ	೧೨
೧೫	ವಿಷ್ಣು	ಕರಡಿಗುಡ್ಡ	ಧಾರವಾಡ	ಪಾಂಡುರಂಗ ದೇ. ಗರ್ಭಗೃಹ	೧೪
೧೬	ವಿಷ್ಣು	ಕಲಕುಂಡಿ	ಕಲಘಟಗಿ	ಊರಮುಂದೆ	೧೧
೧೭	ವಿಷ್ಣು	ಕಂದಲಿ	ಕಲಘಟಗಿ	ಕಲ್ಮೇಶ್ವರ ದೇ. ಆವರಣ	೧೧
೧೮	ವಿಷ್ಣು	ಕಾಮಧೇನು	ಕಲಘಟಗಿ	ಸ್ವಯಂಭೂ ದೇವಾಲಯ	೧೧
೧೯	ಕೇಶವ	ಕಾಮಧೇನು	ಕಲಘಟಗಿ	ಕಲ್ಮೇಶ್ವರ ದೇವಾಲಯ	೧೨
೨೦	ವಿಷ್ಣು	ಕುಂದಗೋಳ	ಕುಂದಗೋಳ	ಹರಿಹರೇಶ್ವರ ದೇವಾಲಯ	೨೦
೨೧	ವಿಷ್ಣು	ಕುಂಕೂರು	ಕುಂದಗೋಳ	ಊರ ಹೊರಗೆ	೦೯
೨೨	ವಾಸುದೇವ	ಕುಂಕೂರು	ಕುಂದಗೋಳ	ಹನುಮಂತ ದೇ. ಗರ್ಭಗೃಹ	೧೧
೨೩	ಕೇಶವ	ಕುಂದಗೋಳ	ಕುಂದಗೋಳ	ಹನುಮಂತ ದೇವಾಲಯ	೧೧
೨೪	ಅನಂತಶಯನ	ಕುಂಕೂರು	ಕುಂದಗೋಳ	ಅನಂತಶಯನ ದೇ	೧೧
೨೫	ವಿಷ್ಣು	ಕೂಡಲಗಿ	ಕಲಘಟಗಿ	ಊರ ಮಧ್ಯ	೧೩
೨೬	ದತ್ತಾತ್ರೇಯ	ಕೋಳಿವಾಡ	ಹುಬ್ಬಳ್ಳಿ	ಊರ ಮಧ್ಯ	೧೨
೨೭	ವಿಷ್ಣು	ಕೋಟೂರು	ಧಾರವಾಡ	ಊಮ ಮಧ್ಯ	೧೨
೨೮	ವಿಷ್ಣು	ಕೊಂಡಿಕೊಪ್ಪ	ನವಲಗುಂದ	ಕಲ್ಮೇಶ್ವರ ದೇ. ಆವರಣ	೧೧

೨೯	ವಿಷ್ಣು	ಗಂಗಿವಾಳ	ಧಾರವಾಡ	ಮಲ್ಲಿಕಾರ್ಜುನ ದೇ	೧೧
೩೦	ವಿಷ್ಣು	ಗುಡಿಸಾಗರ	ನವಲಗುಂದ	ಊರ ಮಧ್ಯ	೧೨
೩೧	ವಿಷ್ಣು	ಜುಂಜನಬೈಲು	ಕಲಘಟಗಿ	ದುರ್ಗಪ್ಪನವರ ಹೊಲ	೧೧
೩೨	ತ್ರಿವಿಕ್ರಮ	ತಂಬೂರು	ಕಲಘಟಗಿ	ಬಸವೇಶ್ವರ ದೇ. ಆವರಣ	೧೧
೩೩	ವಿಷ್ಣು	ದ್ಯಾವನಕೊಂಡ	ಕಲಘಟಗಿ	ಊರಮಧ್ಯ	೧೨
೩೪	ವಿಷ್ಣು	ಧಾರವಾಡ	ಧಾರವಾಡ	ಎಸ್.ಪಿ.ಆಫೀಸ್ ಹತ್ತಿರ೦ಲ	
೩೫	ಕೇಶವ	ದೇವರ ಹುಬ್ಬಳ್ಳಿ	ಹುಬ್ಬಳ್ಳಿ	ದೇವಾಲಯದ ಗರ್ಭಗೃಹ	೧೨
೩೬	ವಿಷ್ಣು	ನರೇಂದ್ರ	ಧಾರವಾಡ	ಕಲ್ಮೇಶ್ವರ ದೇ. ಬಲಗಡೆ	೧೫
೩೭	ರಾಮ	ನರಗುಂದ	ನವಲಗುಂದ	ಊರಮಧ್ಯ	೧೨
೩೮	ವಿಷ್ಣು	ನವಲಗುಂದ	ನವಲಗುಂದ	ಮುಂಬೈ ಮೂಜಿಯಂ	೧೧
೩೯	ವಿಷ್ಣು	ನಾವಳ್ಳಿ	ನವಲಗುಂದ	ಕಲ್ಮೇಶ್ವರ ದೇ. ಆವರಣ	೧೨
೪೦	ವಿಷ್ಣು	ನಾವಳ್ಳಿ	ನವಲಗುಂದ	ಕಲ್ಮೇಶ್ವರ ದೇವಾಲಯ	೧೧
೪೧	ವಿಷ್ಣು	ನೆಲಹರವಿ	ಕಲಘಟಗಿ	ಊರದ ಎತ್ತರದಲ್ಲಿ	೧೧
೪೨	ವಿಷ್ಣು	ಬುಡರಸಿಂಗಿ	ಹುಬ್ಬಳ್ಳಿ	ಸಿದ್ಧರಾಮೇಶ್ವರ ದೇ	೧೨
೪೩	ವಿಷ್ಣು	ಬಚ್ಚಿವಾಡ	ಕಲಘಟಗಿ	ಊರ ಮಧ್ಯದಲ್ಲಿ	೧೧
೪೪	ನರಸಿಂಹ	ಭದ್ರಾಪೂರ	ನವಲಗುಂದ	ಗ್ರಾಮದ ಮಧ್ಯ	೧೨
೪೫	ವಿಷ್ಣು	ಬ್ಯಾಹಟ್ಟಿ	ಹುಬ್ಬಳ್ಳಿ	ಕಲ್ಮೇಶ್ವರ ದೇ. ಎದುರು	೧೨
೪೬	ಕೇಶವ	ಭೂಕೊಪ್ಪ	ಕುಂದಗೋಳ	ಹನುಮಂತ ದೇವಾಲಯ	೧೧
೪೭	ವಿಷ್ಣು	ಬೋಗೂರು	ಧಾರವಾಡ	ಕಲ್ಮೇಶ್ವರ ದೇ. ಆವರಣ	೧೧
೪೮	ಕೇಶವ	ಮನಗುಂಡಿ	ಧಾರವಾಡ	ಕಲ್ಮೇಶ್ವರ ದೇ. ಬಲಭಾಗ	೧೨
೪೯	ವಿಷ್ಣು	ಮರೇವಾಡ	ಧಾರವಾಡ	ರಾಮಲಿಂಗ ದೇ. ಆವರಣ	೧೩
೫೦	ಕೇಶವ	ಮನಸಾಳಿ	ಕುಂದಗೋಳ	ಹನುಮಂತ ದೇವಾಲಯ	೧೧
೫೧	ನಾರಾಯಣ	ಯರಗುಪ್ಪಿ	ಕುಂದಗೋಳ	ನಾರಾಯಣ ದೇ. ಗರ್ಭಗೃಹ	೧೨
೫೨	ಕೇಶವ	ವನಹಳ್ಳಿ	ಧಾರವಾಡ	ಮಲ್ಲಿಕಾರ್ಜುನ ದೇ. ಆವರಣ	೧೨

೫೩	ಮಾದವ	ಶಲವಡಿ	ನವಲಗುಂದ	ಮಹದೇವ ದೇ. ಆವರಣ	೧೨
೫೪	ವಿಷ್ಣು	ಶಿರೂರು	ಕುಂದಗೋಳ	ಕಲ್ಮೇಶ್ವರ ದೇ. ಆವರಣ	೧೨
೫೫	ವಿಷ್ಣು	ಹಳೇ ಹುಬ್ಬಳ್ಳಿ	ಹುಬ್ಬಳ್ಳಿ	ಜೈನ ಬಸದಿಯ	೧೨
೫೬	ವಿಷ್ಣು	ಹಳೇ ಹುಬ್ಬಳ್ಳಿ	ಹುಬ್ಬಳ್ಳಿ	ಭವಾನಿಶಂಕರ ದೇ. ಆವರಣ	೧೨
೫೭	ವಿಷ್ಣು	ಹಸರಂಬಿ	ಕಲಘಟಗಿ	ಊರ ಪಶ್ಚಿಮ ಭಾಗದಲ್ಲಿ	೧೨
೫೮	ವಿಷ್ಣು	ಹುಣಸೆಕಟ್ಟೆ	ಕಲಘಟಗಿ	ಊರ ಹೊರಗೆ ಹೊಲದಲ್ಲಿ	೧೨
೫೯	ವೆಂಕಟೇಶ್ವರ	ಹೆಬ್ಬಳ್ಳಿ	ಹುಬ್ಬಳ್ಳಿ	ವೆಂಕಟೇಶ್ವರ ದೇವಾಲಯ	೧೧
೬೦	ವೆಂಕಟೇಶ್ವರ	ಹೆಬ್ಬಳ್ಳಿ	ಧಾರವಾಡ	ವೆಂಕಟೇಶ್ವರ ದೇವಾಲಯ	೧೪
೬೧	ಸತ್ಯನಾರಾಯಣ	ಹೆಬ್ಬಳ್ಳಿ	ಧಾರವಾಡ	ಬಸವೇಶ್ವರ ದೇವಾಲಯ	೧೪
೬೨	ಸತ್ಯನಾರಾಯಣ	ಹೆಬ್ಬಳ್ಳಿ	ಹುಬ್ಬಳ್ಳಿ	ಬಸವೇಶ್ವರ ದೇವಾಲಯ	೧೧

ಜೈನ ಶಿಲ್ಪಗಳು


ಕ್ರ.ಸಂ	ಶಿಲ್ಪ	ಗ್ರಾಮ	ತಾಲೂಕು	ಸ್ಥಳ	ಕಾಲ(ಕ್ರಿ.ಶ)
೧	ಪಾರ್ಶ್ವನಾಥ	ಅಣ್ಣಿಗೇರಿ	ನವಲಗುಂದ	ಬಸ್ತಿಕೇರಿ ಓಣಿಯಲ್ಲಿ	೧೨
೨	ಪದ್ಮಾವತಿ	ಅಣ್ಣಿಗೇರಿ	ನವಲಗುಂದ	ಬಸದಿಯ ನ ಬಲಬದಿಗೆ	೧೩
೩	ಸುಪಾರ್ಶ್ವನಾಥ	ಅದರಗುಂಚಿ	ಹುಬ್ಬಳ್ಳಿ	ಮೈಲಾರಲಿಂಗ ದೇವಾಲಯ	೧೨
೪	ಸುಮತಿನಾಥ	ಅಣ್ಣಿಗೇರಿ	ನವಲಗುಂದ	ಪಾರ್ಶ್ವನಾಥ ಜಿನಾಲಯ	೧೪
೫	ಪಾರ್ಶ್ವನಾಥ	ಅಳ್ನಾವರ	ಧಾರವಾಡ	ಸ್ಥಳೀಯ ಬೋಗಾರ ಓಣಿ	೧೩
೬	ನೇಮಿನಾಥ	ಅಮ್ಮಿನಭಾವಿ	ಧಾರವಾಡ	ನೇಮಿನಾಥ ಬಸದಿಯ	೧೨
೭	ಸುಪಾಶ್ವನಾಥ	ಅಮ್ಮಿನಭಾವಿ	ಧಾರವಾಡ	ಪಾರ್ಶ್ವನಾಥ ಬಸದಿಯ	೧೨
೮	ವೃಷಭನಾಥ	ಅಮ್ಮಿನಭಾವಿ	ಧಾರವಾಡ	ಪಾರ್ಶ್ವನಾಥ ಬಸದಿಯ	೧೨
೯	ಮಹಾವೀರ	ಅಮ್ಮಿನಭಾವಿ	ಧಾರವಾಡ	ಪಾರ್ಶ್ವನಾಥ ಬಸದಿಯ	೧೨
೧೦	ಚೌವ್ವೀಸ ತೀರ್ಥಂಕರ	ಅಮ್ಮಿನಬಾವಿ	ಧಾರವಾಡ	ಪಾರ್ಶ್ವನಾಥ ಬಸದಿಯ	೧೨
೧೧	ಪಾರ್ಶ್ವನಾಥ	ಅಗಸನಹಳ್ಳಿ	ಧಾರವಾಡ	ಗದಿಗೆಪ್ಪನವರ ಹಿತ್ತಲದಲ್ಲಿ	೧೨
೧೨	ಚೌವ್ವೀಸ್ ತೀರ್ಥಂಕರ	ಉಪ್ಪಿನ ಬೆಟಗೇರಿ	ಧಾರವಾಡ	ಬಂಡೆಮ್ಮನ ದೇವಾಲಯ	೧೨

೧೩	ತೀರ್ಥಂಕರ	ಉಪ್ಪಿನ ಬೆಟಗೇರಿ	ಧಾರವಾಡ	ಬಂಡೆಮ್ಮನ ದೇವಾಲಯ	೧೨
೧೪	ಚಂದ್ರನಾಥ	ಉಪ್ಪಿನ ಬೆಟಗೇರಿ	ಧಾರವಾಡ	ಬಂಡೆಮ್ಮನ ದೇವಾಲಯ	೧೨
೧೫	ಪಾರ್ಶ್ವನಾಥ	ಉಪ್ಪಿನ ಬೆಟಗೇರಿ	ಧಾರವಾಡ	ಜೈನ ಬ. ಅಂತರಾಳ	೧೨
೧೬	ಚೌವ್ವೀಸ್ ತೀರ್ಥಂಕರ	ಉಪ್ಪಿನ ಬೆಟಗೇರಿ	ಧಾರವಾಡ	ಜೈನ ಬ.ಅಂತರಾಳ	೧೨
೧೭	ಪಾರ್ಶ್ವನಾಥ	ಕಮಡೊಳ್ಳಿ	ಕುಂದಗೋಳ	ರಾಮೇಶ್ವರ ದೇ.	೧೨
೧೮	ನೇಮಿನಾಥ	ಕಲಘಟಗಿ	ಕಲಘಟಗಿ	ದೇವಿಕೊಪ್ಪ ತಾಂಡಾ	೧೨
೧೯	ಶಾಂತಿನಾಥ	ಕಲಘಟಗಿ	ಕಲಘಟಗಿ	ದೊಡ್ಡಬಸ್ತಿಯಲ್ಲಿ	೧೨
೨೦	ಪಾರ್ಶ್ವನಾಥ	ಕಲಘಟಗಿ	ಕಲಘಟಗಿ	ಶಾಂತಿನಾಥ ಬಸದಿಯ	೧೨
೨೧	ತೀರ್ಥಂಕರ	ಕಿತ್ತೂರು	ನವಲಗುಂದ	ಹನುಮಂತ ದೇವಾಲಯ	೧೨
೨೨	ಪಾರ್ಶ್ವನಾಥ	ಕಿರೇಸೂರು	ಹುಬ್ಬಳ್ಳಿ	ಸಿದ್ದೇಶ್ವರ ದೇ. ಆವರಣ	೧೨
೨೩	ಪಾರ್ಶ್ವನಾಥ	ಕುಂದಗೋಳ	ಕುಂದಗೋಳ	ತಲಶಿಲ್ದಾರ ಕಾ. ಹತ್ತಿರ	೧೨
೨೪	ಪಾರ್ಶ್ವನಾಥ	ಕೊಟಬಾಗಿ	ಧಾರವಾಡ	ಜೈನ ಬ.ಗರ್ಭಗೃಹ	೧೨
೨೫	ತೀರ್ಥಂಕರ	ಕೋಳಿವಾಡ	ಹುಬ್ಬಳ್ಳಿ	ಸರ್ಕಾರಿ ವಸ್ತುಸಂಗ್ರಹಾಲಯ	೧೨
೨೬	ಶಾಂತಿನಾಥ	ಗರಗ	ಧಾರವಾಡ	ಜೈನ ಬ. ಗರ್ಭಗೃಹ	೧೧
೨೭	ಪಾರ್ಶ್ವನಾಥ	ಗುಡಿಸಾಗರ	ನವಲಗುಂದ	ಪಾರ್ಶ್ವನಾಥ ಜಿನಾಲಯ	೧೨
೨೮	ಮಹಾವೀರ	ಗುಡಗೇರಿ	ಕುಂದಗೋಳ	ಮಹಾವೀರ ಬಸದಿಯ	೧೧
೨೯	ಪಾರ್ಶ್ವನಾಥ	ಗುಡಿಸಾಗರ	ನವಲಗುಂದ	ಪಾರ್ಶ್ವನಾಥ ಜಿನಾಯ	೧೨
೩೦	ಚೌವ್ವೀಶ್‌ತೀರ್ಥಂಕರ	ಗುಡಗೇರಿ	ಕುಂದಗೋಳ	ಮಹಾವೀರ ಬಸದಿಯ	೧೧
೩೧	ಮಹಾವೀರ	ಗುಡಗೇರಿ	ಕುಂದಗೋಳ	ಮಹಾವೀರ ಬಸದಿಯ	೧೨
೩೨	ಸುಪಾರ್ಶ್ವನಾಥ	ಛಬ್ಬಿ	ಹುಬ್ಬಳ್ಳಿ	ಗ್ರಾಮದ ಮಧ್ಯದ	೧೨
೩೩	ಪಾರ್ಶ್ವನಾಥ	ತಡಕೋಡ	ಧಾರವಾಡ	ಜೈನ ಬ.ಗರ್ಭಗೃಹ	೧೨
೩೪	ಆದಿನಾಥ	ತಡಕೋಡ	ಧಾರವಾಡ	ಜೈನ ಬ.ಗರ್ಭಗೃಹ	೧೨
೩೫	ಆದಿನಾಥ	ತಡಕೋಡ	ಧಾರವಾಡ	ಜೈನ ಬ.ಮುಂಭಾಗ	೧೨
೩೬	ತೀರ್ಥಂಕರ	ತಡಕೋಡ	ಧಾರವಾಡ	ಜೈನ ಬ.ಮುಂಭಾಗ	೧೨

೩೭	ಚೌವ್ವೀಸ್ ತೀರ್ಥಂಕರ	ತಡಕೋಡ	ಧಾರವಾಡ	ಜೈನ ಬ.ಗರ್ಭಗೃಹ	೧೨
೩೮	ತೀರ್ಥಂಕರ	ತುಪ್ಪದಕುಹಟ್ಟಿ	ನವಲಗುಂದ	ಪಂಚಲಿಂಗೇಶ್ವರ ದೇ.	೧೨
೩೯	ನೇಮಿನಾಥ	ದೇವಿಕೊಪ್ಪ	ಕಲಘಟಗಿ	ಶಾಲೆಯ ನಾಗರಕಟ್ಟಿ ಬಳಿ	೧೩
೪೦	ಸುಪಾರ್ಶ್ವನಾಥ	ಧಾರವಾಡ	ಧಾರವಾಡ	ಕೆ.ಆರ್.ಐ ಧಾರವಾಡ	೧೦
೪೧	ತೀರ್ಥಂಕರ	ಧಾರವಾಡ	ಧಾರವಾಡ	ಕೆ.ಆರ್.ಐ ಧಾರವಾಡ	೧೦
೪೨	ಮಹಾವೀರ	ಧಾರವಾಡ	ಧಾರವಾಡ	ಕೆ.ಆರ್.ಐ ಧಾರವಾಡ	೧೨
೪೩	ತೀರ್ಥಂಕರ	ನವಲಗುಂದ	ನವಲಗುಂದ	ದುರ್ಗಾಗುಡಿಯ ಮುಂದೆ	೧೨
೪೪	ತೀರ್ಥಂಕರ	ನಾಗರಹಳ್ಳಿ	ನವಲಗುಂದ	ಹನುಮಂತ ದೇವಾಲಯ	೧೨
೪೫	ತೀರ್ಥಂಕರ	ನಾವಳ್ಳಿ	ನವಲಗುಂದ	ಕಲ್ಮೇಶ್ವರ ದೇ. ಮುಂದೆ	೧೨
೪೬	ತೀರ್ಥಂಕರ	ನುಗ್ಗಿಕೇರಿ	ಧಾರವಾಡ	ಗ್ರಾಮದ ಮಧ್ಯಭಾಗ	೧೨
೪೭	ತೀರ್ಥಂಕರ	ನೂಲ್ವಿ	ಹುಬ್ಬಳ್ಳಿ	ವೀರಭದ್ರೇಶ್ವರ ದೇ	೧೨
೪೮	ತೀರ್ಥಂಕರ	ಪಡೆಸೂರು	ನವಲಗುಂದ	ಆದಿನಾಥ ಜಿನಾಲಯ	೧೨
೪೯	ತೀರ್ಥಂಕರ	ಬಾಗವಾಡ	ಕುಂದಗೋಳ	ಗ್ರಾಮದ ಮಧ್ಯಭಾಗ	೦೯
೫೦	ತೀರ್ಥಂಕರ	ಬ್ಯಾಹಟ್ಟಿ	ಹುಬ್ಬಳ್ಳಿ	ಗ್ರಾಮೇಶ್ವರ ದೇವಾಲಯ	೧೨
೫೧	ಚೌವ್ವೀಸ್ ತೀರ್ಥಂಕರ	ಬುಡರಸಿಂಗಿ	ಹುಬ್ಬಳ್ಳಿ	ಗ್ರಾಮದ ಮಧ್ಯ	೧೨
೫೨	ಪಾರ್ಶ್ವನಾಥ	ಭೂಕೊಪ್ಪ	ಕುಂದಗೋಳ	ಪಾರ್ಶ್ವನಾಥ ಬಸದಿ	೧೧
೫೩	ಪಾರ್ಶ್ವನಾಥ	ಮನಗುಂಡಿ	ಧಾರವಾಡ	ಕಲ್ಮೇಶ್ವರ ದೇ. ಆವರಣ	೧೨
೫೪	ಮಹಾವೀರ	ಮಳಲಿ	ಕುಂದಗೋಳ	ಮಾರುತಿ ದೇ. ಎದುರು	೧೦
೫೫	ಪಾರ್ಶ್ವನಾಥ	ಮಿಶ್ರಿಕೋಟೆ	ಕಲಘಟಗಿ	ಜೈನ ಬ.ಗರ್ಭಗೃಹ	೧೨
೫೬	ಮಹಾವೀರ	ಮಮ್ಮಿಗಟ್ಟಿ	ಧಾರವಾಡ	ಜೈನ ಬ.ಗರ್ಭಗೃಹ	೧೨
೫೭	ಚೌವ್ವೀಸ್ ತೀರ್ಥಂಕರ	ಮುಗುದ	ಧಾರವಾಡ	ಜೈನ ಬ.ಗರ್ಭಗೃಹ	೧೨
೫೮	ಪಾರ್ಶ್ವನಾಥ	ಮುಗುದ	ಧಾರವಾಡ	ಬಸದಿಯ ದ್ವಾರಬಿಂಬ	೧೨
೫೯	ಚೌವ್ವೀಸ್ ತೀರ್ಥಂಕರ	ಮುಗುದ	ಧಾರವಾಡ	ಬಸದಿಯ ದ್ವಾರಬಿಂಬ	೧೨
೬೦	ಪಾರ್ಶ್ವನಾಥ	ಮುಗುದ	ಧಾರವಾಡ	ಜೈನ ಬ. ಗರ್ಭಗೃಹ	೧೨

೬೧	ಪಾರ್ಶ್ವನಾಥ	ಮುತ್ತಗಿ	ಕಲಘಟಗಿ	ಜೈನ ಬ. ಗರ್ಭಗೃಹ	೧೩
೬೨	ನೇಮಿನಾಥ	ಮುತ್ತಗಿ	ಕಲಘಟಗಿ	ಜೈನ ಬ. ಗರ್ಭಗೃಹ	೧೨
೬೩	ನೇಮಿನಾಥ	ಮಂಟೂರು	ಹುಬ್ಬಳ್ಳಿ	ವಲ್ಲಭೇಶ್ವರ ದೇವಾಲಯ	೧೨
೬೪	ತೀರ್ಥಂಕರ	ಶಲವಡಿ	ನವಲಗುಂದ	ವಗ್ಗರ ಓಣಿಯ	೧೨
೬೫	ಚೌವ್ವೀಸ್ ತೀರ್ಥಂಕರ	ಶಿರೂರು	ಕುಂದಗೋಳ	ಅಂಗನವಾಡಿ ಕೇಂದ್ರ	೧೦
೬೬	ಸುಪಾರ್ಶ್ವನಾಥ	ಶಿರೂರು	ಕುಂದಗೋಳ	ಅಂಗನವಾಡಿ ಕೇಂದ್ರ	೧೦
೬೭	ಪಾರ್ಶ್ವನಾಥ	ಸಂಶಿ	ಕುಂದಗೋಳ	ದತ್ತಾತ್ರಯ ದೇ. ಆವರಣ	೧೨
೬೮	ತೀರ್ಥಂಕರ	ಹನುಮಾನಕಟ್ಟ	ನವಲಗುಂದ	ಹನುಮಂತ ದೇವಾಲಯ	೧೨
೬೯	ಚೌವ್ವೀಸ್ ತೀರ್ಥಂಕರ	ಹಳೇ ಹುಬ್ಬಳ್ಳಿ	ಹುಬ್ಬಳ್ಳಿ	ಗ್ರಾಮದ ಮಧ್ಯ	೧೩
೭೦	ಪಾರ್ಶ್ವನಾಥ	ಹಾಳಸೀಗಿಕಟ್ಟಿ	ಕಲಘಟಗಿ	ಜೈನ ಬಸದಿಯ	೧೨
೭೧	ತೀರ್ಥಂಕರ	ಹೆಬ್ಬಳ್ಳಿ	ಧಾರವಾಡ	ಪರಮೇಶ್ವರ ದೇವಾಲಯ	೧೨

ಒಟ್ಟಾರೆ ಈ ದೇವಾಲಯಗಳು ಇರುವುದೇ ಮೂರ್ತಿಶಿಲ್ಪಗಳನ್ನಿಡುವುದಕ್ಕಾಗಿ ಈ ಪ್ರದೇಶದಲ್ಲಿ ಉಣಕಲ್ಲಿನ ಚಂದ್ರಮೌಳೇಶ್ವರ ದೇವಾಲಯದ ಶಿವಲಿಂಗ ಅತೀ ಪ್ರಾಚೀನವಾಗಿದೆ. ಬೌದ್ಧಧರ್ಮದ ಕುರುಹುಗಳು ಕೋಳಿವಾಡ ಪ್ರದೇಶದಲ್ಲಿ ಕಂಡು ಬಂದಿರುವುದರಿಂದ ಇಲ್ಲಿ ಬೌದ್ಧಧರ್ಮ ಇತ್ತೆಂಬುದಕ್ಕೆ ಸಾಕ್ಷಿಯಾಗಿದೆ. ಶೈವಧರ್ಮ, ವೈಷ್ಣವಧರ್ಮ, ಜೈನಧರ್ಮ, ಬೌದ್ಧಧರ್ಮ ಇತ್ತೆಂಬುದಕ್ಕೆ ಈ ಭಾಗದಲ್ಲಿನ ಮೂರ್ತಿಶಿಲ್ಪಗಳೇ ಸಾಕ್ಷಿಗಳಾಗಿವೆ. ಶಾಕ್ತ ಪಂಥಕ್ಕೆ ಉದಾಹರಣೆಯಾಗಿ ಮಹಿಷಾಸುರಮರ್ಧಿನಿ ಶಿಲ್ಪಗಳು ಇಲ್ಲಿ ಕಾಣಸಿಗುತ್ತವೆ. ಈ ಮೂರ್ತಿಶಿಲ್ಪಗಳು ಆಕಾಲಘಟ್ಟದ ಸಾಂಸ್ಕೃತಿಕ ಇತಿಹಾಸವನ್ನು ತಿಳಿಯುವಲ್ಲಿ ಅತೀ ಮಹತ್ವದ ಪಾತ್ರವನ್ನು ವಹಿಸಿವೆ.



- ಬೌದ್ಧ ಶಿಲ್ಪ –೦೧
- ಶೈವ ಶಿಲ್ಪಗಳು ಶಿವಲಿಂಗಗಳು – ೫೧ ಭೈರವ ಶಿಲ್ಪಗಳು – ೪೯

  ಕಾರ್ತಿಕೇಯ – ೧೫ ವೀರಭದ್ರ – ೨೫

  ಗಣಪತಿ – ೩೨ ಸೂರ್ಯ – ೨೦

  ಉಮಾಮಹೇಶ್ವರ – ೨೩
- ಶಾಕ್ತ ಶಿಲ್ಪಗಳು ಮಹಿಷಾಸುರಮರ್ಧಿನಿ – ೩೯ ಗಜಲಕ್ಷ್ಮಿ – ೩೭

  ಸಪ್ತಮಾತೃಕೆ –೫೩
- ವೈಷ್ಣವ ಶಿಲ್ಪಗಳು – ೫೭
- ಜೈನ ಶಿಲ್ಪಗಳು – ೬೮

ಅಡಿ ಟಿಪ್ಪಣಿಗಳು

೧. ಅನಂತರಂಗಾಚಾರ್.ಎನ್., ಭಾರತೀಯ ಶಿಲ್ಪಶಾಸ್ತ್ರದ ಸಂಕ್ಷಿಪ್ತ ಪರಿಚಯ, ಬಾಗಿನ(ಎಸ್.ವಿ. ರಂಗಣ್ಣನವರ ಸ್ಮರಣ ಸಂಚಿಕೆ) ೧೯೫೪, ಪು. ೩೦೮

೨. ಭಟ್‌ಸೂರಿ ಕೆ.ಜಿ., ದಾರಾನಾಥ ದೇವಾಲಯ ಧಾರೇಶ್ವರ, ೧೯೯೬, ಪು. ೧೨

೩. ಶಿವರಾಮ ಕಾರಂತ., ಭಾರತೀಯ ಶಿಲ್ಪ, ೧೯೭೫, ಪು. ೧

೪. ಅಪ್ಪಣ್ಣ ಎನ್.ಹಂಜೆ., ಶಿಗ್ಗಾಂವ ಪ್ರದೇಶದ ಪುರಾತತ್ವ (ಅಪ್ರಕಟಿತ ಪಿಎಚ್.ಡಿ ಪ್ರಬಂಧ), ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ. ೨೦೦೬, ಪು. ೧೫೩

೫. ಶಿವಲೀಲಾ ಲೋಕೇಶ., ಕಮಲಾಪುರ ಒಂದು ಸಾಂಸ್ಕೃತಿಕ ಅಧ್ಯಯನ, (ಅಪ್ರಕಟಿತ ಪಿಎಚ್.ಡಿ ಪ್ರಬಂಧ), ಕನ್ನಡ ವಿಶ್ವವಿದ್ಯಾಲಯ ಹಂಪಿ. ೨೦೦೮, ಪು. ೧೩೨

೬ ರಾಮಚಂದ್ರರಾವ್ ಎಸ್.ಕೆ., ಮೂರ್ತಿಶಿಲ್ಪ ನೆಲೆ-ಹಿನ್ನಲೆ, ೧೯೭೫, ಪು. ೧೧

೭ ಜ್ಞಾನಾನಂದ ಜಿ.(ಸಂ)., ಶಿಲ್ಪಾದರ್ಶ, ೨೦೦೧, ಪು. ೭೦

೮. ಅದೇ., ಪು. ೧೦೦-೧೦೧

೯. ಕರಾಗುಂದ ಟಿ ಪಂಕಜಾಕ್ಷ., ಶಿಲ್ಪಸೌಂದರ್ಯ, ೨೦೦೬, ಪು. ೧೯

೧೦. ರಾಮಚಂದ್ರರಾವ್ ಎಸ್.ಕೆ., ಪೂರ್ವೋಕ್ತ, ಪು. ೬೪

೧೧. ಕರಾಗುಂದ ಟಿ ಪಂಕಜಾಕ್ಷ., ಪೂರ್ವೋಕ್ತ, ಪು. ೪-೬

೧೨. ರಾಮಚಂದ್ರರಾವ್ ಎಸ್.ಕೆ., ಪೂರ್ವೋಕ್ತ, ಪು. ೬೪

೧೩. ಕರಾಗುಂದ ಟಿ ಪಂಕಜಾಕ್ಷ., ಪೂರ್ವೋಕ್ತ, ಪು. ೧೮

೧೪. ರಾಮಚಂದ್ರರಾವ್ ಎಸ್.ಕೆ., ಪೂರ್ವೋಕ್ತ, ಪು. ೭೦

೧೫. ನಾಯಕ ಹಾ.ಮಾ., (ಸಂ), ೧ ಕನ್ನಡ ವಿಷಯ ವಿಶ್ವಕೋಶ, ೨೦೦೫, ಪು. ೯೧-೯೩

೧೬. ವೆಂಕೋಬರಾವ್ ಬಿ., ವಿಗ್ರಹರಾದನೆಯೂ-ವಿಗ್ರಹಗಳು, ಶಿಲ್ಪಕಲಾ ಪ್ರಪಂಚ, ೧೯೫೯, ಪು. ೪೬

೧೭. ರಾಮಚಂದ್ರರಾವ್ ಎಸ್.ಕೆ., ಪೂರ್ವೋಕ್ತ, ಪು. ೬೮

೧೮. ಅದೇ., ಪು. ೬೮

೧೯. ಕರಾಗುಂದ ಟಿ ಪಂಕಜಾಕ್ಷ., ಪೂರ್ವೋಕ್ತ, ಪು. ೩೨

೨೦. ಜ್ಞಾನಾನಂದ ಜಿ.,(ಸಂ), ಶಿಲ್ಪದರ್ಶ, ೨೦೦೧, ಪು. ೪೩

೨೧. ಗೋಪಾಲ್.ಆರ್.,(ಸಂ) ಧಾರವಾಡ ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ, ಜಯಶ್ರೀ ದೇಶಮಾನ್ಯ, ಧಾರವಾಡ ಜಿಲ್ಲೆಯ ಬೌದ್ಧ ಶಿಲ್ಪಗಳು ವಿಶೇಷವಾಗಿ ಕೋಳಿವಾಡ ತಾರಾಭಗವತಿ ಶಿಲ್ಪ., ೨೦೦೮, ಪು. ೧೯೭-೧೮೧

೨೨. ಷಡಕ್ಷರಯ್ಯ ರು.ಮ. ಮತ್ತು ಜಯಮ್ಮ ಬಿ. ಪೂರ್ವೋಕ್ತ, ಪು. ೬೮

೨೩. ಭಟ್‌ಸೂರಿ ಕೆ.ಜಿ., ಪೂರ್ವೋಕ್ತ, ಪು. ೧೩

೨೪. ಸುಂದರ ಅ.(ಸಂ)., ಕರ್ನಾಟಕ ಚರಿತ್ರೆ, ೧, ೧೯೯೭, ಪು. ೩೧೩

೨೫. ಅದೇ., ಪು. ೩೧೪

೨೬. ಕರಾಗುಂದ ಟಿ ಪಂಕಜಾಕ್ಷ., ಪೂರ್ವೋಕ್ತ, ಪು. ೩೩೧

೨೭. ರಾಮಚಂದ್ರರಾವ್ ಎಸ್.ಕೆ., ಪೂರ್ವೋಕ್ತ, ಪು. ೧೧೪-೧೧೫

೨೮. ಸ್ವಾಮಿ ಹರ್ಷಾನಂದ (ಸಂ)., ಕರ್ನಾಟಕ ಚರಿತ್ರೆ, ೧, ೧೯೫೨, ಪು. ೫೯

೨೯. ಕರಾಗುಂದ ಟಿ ಪಂಕಜಾಕ್ಷ., ಪೂರ್ವೋಕ್ತ, ಪು. ೩೩೧

೩೦. ಗೋಪಾಲ್ ಬಿ.ಆರ್.(ಸಂ)., ಧಾರವಾಡ ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ, ಪೋಮಸಿಂಗ ಕೃಷ್ಣಪ್ಪ ಕಾರಭಾರಿ, ಕಾಶೀನಾಥ ಸಿ.ಜಾಧವ. ಹುಬ್ಬಳ್ಳಿ ತಾಲೂಕಿನ ಮೂರ್ತಿಶಿಲ್ಪಗಳು, ೨೦೦೨, ಪು. ೧೪೮

೩೧. ಪೂರ್ಣಿಮಾ ವಿ.ನಾಗಾವಿ., ಕುಂದಗೋಳ ಸುತ್ತಮುತ್ತಲಿನ ಪ್ರದೇಶದ ವಾಸ್ತು ಕಲಾವ್ಯಾಸಂಗ, ಎಂ.ಎ.(ಅಂತಿಮ) ಪತ್ರಿಕೆ, ೧೯೯೮, ಪು. ೨೩

೩೨. ವೀರಯ್ಯ ಕ.ಇಂಡಿ., ಧಾರವಾಡ ತಾಲೂಕಿನ ಹದಿನೈದು ಗ್ರಾಮಗಳ ವಾಸ್ತುಶಿಲ್ಪಕಲೆ:ಒಂದು ಅಧ್ಯಯನ, ಎಂ.ಎ.(ಅಂತಿಮ) ಪತ್ರಿಕೆ, ೨೦೦೧, ಪು. ೩೪

೩೩. ಷಡಕ್ಷರಯ್ಯ ರು.ಮ ಜಯಮ್ಮ.ಬಿ., ಧಾರವಾಡ ಜಿಲ್ಲೆಯ ಐತಿಹಾಸಿಕ ಸ್ಮಾರಕಗಳು ಮತ್ತು ಶಿಲ್ಪಗಳು, ೨೦೦೯, ಪು. ೬೮

೩೪. ರಾಮಚಂದ್ರರಾವ್ ಎಸ್.ಕೆ., ಪೂರ್ವೋಕ್ತ, ಪು. ೧೧೪-೧೧೫

೩೫. ಗೋಪಾಲ್ ಬಿ.ಆರ್.(ಸಂ)., ಪೂರ್ವೋಕ್ತ, ಪು. ೧೪೪

೩೬. ಪೂರ್ಣಿಮಾ ವಿ.ನಾಗಾವಿ., ಪೂರ್ವೋಕ್ತ, ಪು. ೨೮

೩೭. ಯಲ್ಲಣ್ಣ ಕೆ., ನವಲಗುಂದ ತಾಲೂಕಿನ ಶಾಸನಗಳು ಮತ್ತು ದೇವಾಲಯಗಳು, (ಅಪ್ರಕಟಿತ ಎಂ.ಫಿಲ್, ಪ್ರಬಂಧ) ಕನ್ನಡ ವಿಶ್ವವಿದ್ಯಾಲಯ ಹಂಪಿ, ೨೦೦೯,ಪು. ೮೯

೩೮. ವೀರಯ್ಯ ಕ.ಇಂಡಿ., ಪೂರ್ವೋಕ್ತ, ಪು. ೩೮

೩೯. ರಾಮಚಂದ್ರರಾವ್. ಎಸ್.ಕೆ., ಪೂರ್ವೋಕ್ತ, ಪು. ೧೨೪-೧೨೫

೪೦. ಅದೇ., ಪು. ೧೨೪

೪೧. ಸುರೇಶ ಕರಿಬಸಪ್ಪ ಹಾನಗಲ್ಲ., ಹುಬ್ಬಳ್ಳಿ ತಾಲೂಕಿನ ಶಾಸನಗಳು ಮತ್ತು ದೇವಾಲಯಗಳು, (ಅಪ್ರಕಟಿತ ಎಂ.ಫಿಲ್, ಪ್ರಬಂಧ) ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೧೦, ಪು. ೭೫

೪೨. ಷಡಕ್ಷರಯ್ಯ ರು.ಮ. ಜಯಮ್ಮ ಬಿ., ಪೂರ್ವೋಕ್ತ, ಪು. ೭೪-೭೫

೪೩. ಅದೇ., ೭೩

೪೪. ವೀರಯ್ಯ ಕ.ಇಂಡಿ., ಪೂರ್ವೋಕ್ತ, ಪು. ೭೦

೪೫. ವಾಸುದೇವನ್ ಸಿ.ಎಸ್., ಹಂಪಿ ಪರಿಸರದ ಪಂಚಲಿಂಗಗಳು, ವಿಜಯನಗರ ಅಧ್ಯಯನ, ಸಂ, ೧೨, ೨೦೦೭, ಪು. ೧೯೦

೪೬. ರಾಮಚಂದ್ರರಾವ್. ಎಸ್.ಕೆ., ಪೂರ್ವೋಕ್ತ, ಪು. ೧೯೧

೪೭. ಅದೇ., ಪು. ೧೯೦

೪೮. ಅದೇ., ಪು. ೧೯೬-೧೯೭

೪೯. ಅನಂತರಾಮು ಕೆ., ಕವಿ ಬ್ರಹ್ಮಶಿವನ;ಒಂದು ಅಧ್ಯಯನ, ೧೯೯೧, ಪು. ೨೪೭

೫೦. ನೇಗಿನಹಾಳ ಎಂ.ಬಿ., ಶಾಸನಗಳಲ್ಲಿ ವೀರಭದ್ರ ದೇವರು, ೧೯೮೩, ಪು. ೩೮೦-೩೮೫

೫೧. ಗೋಪಾಲ್ ಬಿ.ಆರ್., ಪೂರ್ವೋಕ್ತ, ಪು. ೭೮

೫೨. ಅದೇ., ಪು. ೭೮

೫೩. ಶ್ರೀಧರಮೂರ್ತಿ ಮ., ದೇವತೆಗಳು ಮತ್ತು ಹಬ್ಬಗಳು, ೧೯೮೧, ಪು. ೧೦

೫೪. ಅದೇ., ಪು. ೧೦-೧೧

೫೫. ರಾಮಚಂದ್ರರಾವ್. ಎಸ್.ಕೆ., ಪೂರ್ವೋಕ್ತ, ಪು. ೭೬

೫೬. ಅದೇ., ಪು. ೮೯-೯೭

೫೭ ಕರಾಗುಂದ ಟಿ ಪಂಕಜಾಕ್ಷ., ಪೂರ್ವೋಕ್ತ, ಪು. ೨೭೭-೨೮೦

೫೮. ಸುರೇಶ ಕರಿಬಸಪ್ಪ ಹಾನಗಲ್ಲ., ಪೂರ್ವೋಕ್ತ, ಪು. ೭೮

೫೯. ಯಲ್ಲಣ್ಣ ಕೆ., ಪೂರ್ವೋಕ್ತ, ಪು. ೯೫

೬೦. ಕೃಷ್ಣಾಜಿ ಗು.ನಾಡಗೀರ., ಪೂರ್ವೋಕ್ತ, ಪು. ೧೦೦

೬೧. ಅನಂತರಾಮು ಕೆ., ಪೂರ್ವೋಕ್ತ, ಪು. ೧೯೯

೬೨. ರಾಮಚಂದ್ರರಾವ್ ಎಸ್.ಕೆ., ಪೂರ್ವೋಕ್ತ, ಪು. ೧೭೫-೧೭೬

೬೩. ನರಸಿಂಹಮೂರ್ತಿ ಪಿ.ಎನ್., ದುರ್ಗೆ, ತರಂಗ ವಾರ ಪತ್ರಿಕೆ(೧ನವಂಬರ್ ೨೦೦೧), ಪು. ೪೦

೬೪. ಅದೇ., ಪು. ೪೧

೬೫. ನರಸಿಂಹಮೂರ್ತಿ ಪಿ.ಎನ್., ಪೂರ್ವೋಕ್ತ, ಪು. ೪೦

೬೬ ಅನುಬಂಧ:೧., ಶಾ.ಸಂ., ೧೯

೬೭. ಗೋಪಾಲ್ ಬಿ.ಆರ್., ಪೂರ್ವೋಕ್ತ, ಪು. ೧೭೩

೬೮. ಸುರೇಶ ಸಂ.ಮೇಟಿ., ನವಲಗುಂದ ತಾಲೂಕಿನ ಆಯ್ದ ೧೫ ಹಳ್ಳಿಗಳ ಪುರಾತತ್ವ ಅನ್ವೇಷಣೆ, (ಎಂ.ಎ)ಪತ್ರಿಕೆ. ೨೦೦೨, ಪು. ೬೮

೬೯. ಕೃಷ್ಣಾಜೀ ಗು.ನಾಡಗೀರ., ಪೂರ್ವೋಕ್ತ, ಪು. ೧೨೪

೭೦. ಷಡಕ್ಷರಯ್ಯ ರು.ಮ. ಮತ್ತು ಬಿ. ಜಯಮ್ಮ., ಪೂರ್ವೋಕ್ತ, ಪು. ೯೬

೭೧. ದೇವರಕೊಂಡಾರೆಡ್ಡಿ., ಸಪ್ತಮಾತೃಕೆಯರು, ಹರಿತಿಸಿರಿ(ಹೆಚ್.ವಿ. ವೀರನಾಯಕ ಹರತಿ ನೆನಪಿನ ಸಂಪುಟ), ೧೯೮೭, ಪು. ೮೪

೭೨. ಸುರೇಶ ಕರಿಬಸಪ್ಪ ಹಾನಗಲ್ಲ., ಪೂರ್ವೋಕ್ತ, ಪು. ೮೫

೭೩. ಗೋಪಾಲ್ ಬಿ.ಆರ್., ಪೂರ್ವೋಕ್ತ, ಪು. ೧೭೪

೭೪. ಯಲ್ಲಣ್ಣ ಕೆ., ಪೂರ್ವೋಕ್ತ, ಪು. ೯೨

೭೫. ಷಡಕ್ಷರಯ್ಯ ರು.ಮ. ಮತ್ತು ಜಯಮ್ಮ ಬಿ., ಪೂರ್ವೋಕ್ತ, ಪು. ೯೮

೭೬. ದೇವರಕೊಂಡಾರೆಡ್ಡಿ., ಪೂರ್ವೋಕ್ತ, ಪು. ೮೪

೭೭ ಚನ್ನಕ್ಕ ಎಲಿಗಾರ., ಮಾಸ್ತಿಕಲ್ಲು, ೧೯೭೧, ಪು. ೧೭೪-೧೭೫

೭೮. ರಾಮಚಂದ್ರರಾಚ್., ಪೂರ್ವೋಕ್ತ, ಪು. ೧೨೬-೧೨೭

೭೯. ಷಡಕ್ಷರಯ್ಯ ರು.ಮ., ಶಿಗ್ಗಾವಿಯಲ್ಲಿ ದೊರೆತ ಅಪರೂಪದ ಗಜಲಕ್ಷ್ಮಿಶಿಲ್ಪ, ಕರ್ನಾಟಕ ಭಾರತಿ, ಸಂ.೨೪/೪, ೧೯೯೨, ಪು. ೧೦೪

೮೦. ಸುರೇಶ ಕರಿಬಸಪ್ಪ ಹಾನಗಲ್ಲ., ಪೂರ್ವೋಕ್ತ, ಪು. ೮೨

೮೧. ಸುರೇಶ ಸಂ.ಮೇಟಿ., ಪೂರ್ವೋಕ್ತ, ಪು. ೮೦

೮೨. ಪೂರ್ಣಿಮಾ ವಿ.ನಾಗಾವಿ., ಪೂರ್ವೋಕ್ತ, ಪು. ೫೯

೮೩. ಕೃಷ್ಣಾಜೀ ಗು.ನಾಡಗೀರ., ಪೂರ್ವೋಕ್ತ, ಪು. ೧೧೭

೮೪. ದೇವರಕೊಂಡಾರೆಡ್ಡಿ., ಪೂರ್ವೋಕ್ತ, ಪು. ೯೦-೯೨

೮೫. ವಸಂತಲಕ್ಷ್ಮಿ ಕೆ., ಕರ್ನಾಟಕದ ಸರಸ್ವತಿ ಶಿಲ್ಪಗಳು, ಇತಿಹಾಸ ದರ್ಶನ, ಸಂ. ೫, ೧೯೯೦, ಪು. ೭೪

೮೬. ಶ್ರೀಧರಮೂರ್ತಿ ಮ., ಪೂರ್ವೋಕ್ತ, ಪು. ೩೯

೮೭. ಪಾಡಿಗಾರ ಶ್ರೀನಿವಾಸ., ಬದಾಮಿ ಮತ್ತು ವೈಷ್ಣವಧರ್ಮ, ೧೯೮೯, ಪು. ೧೦೭

೮೮. ಅದೇ., ಪು. ೧೦೭-೧೦೮

೮೯. ಸುಂದರ್ ಅ., ಪೂರ್ವೋಕ್ತ, ಪು. ೩೯೮

೯೦. ರಾಮಚಂದ್ರರಾವ್. ಎಸ್.ಕೆ., ಪೂರ್ವೋಕ್ತ, ಪು. ೧೪೫

೯೧. ಶ್ರೀನಿವಾಸ ಪಿ.ಆರ್., ದಕ್ಷಿಣ ಭಾರತದ ದೇವಾಲಯಗಳು, ೧೯೫೫. ಪು. ೫೮

೯೨. ಮಿರ್ಜಾ ಅಣ್ಣಾರಾಯ., ಜೈನಧರ್ಮ, ೧೯೯೯, ಪು. ೪೭೨-೪೭೯

೯೩. ಸುರೇಶ ಕರಿಬಸಪ್ಪ ಹಾನಗಲ್ಲ., ಪೂರ್ವೋಕ್ತ, ಪು. ೮೯

೯೪. ಕೃಷ್ಣಾಜೀ ಗು.ನಾಡಗೀರ., ಪೂರ್ವೋಕ್ತ, ಪು. ೧೧೭

೯೫. ಗೋಪಾಲ್ ಬಿ.ಆರ್., ಪೂರ್ವೋಕ್ತ, ಪು. ೧೬೫

೯೬. ಯಲ್ಲಣ್ಣ ಕೆ., ಪೂರ್ವೋಕ್ತ, ಪು. ೮೫

೯೭. ಪಾಟೀಲ್ ಭೋಜರಾಜ., ನಾಗರಖಂಡ-೭೦ ಒಂದು ಅಧ್ಯಯನ, ೧೯೯೫,ಪು.೧೮

೯೮. ಭಟ್ಟಾಚಾರ್ಯ ಬಿ.ಸಿ., ಜೈನಾ ಐಕೊನೋಗ್ರಫಿ, ೧೯೭೪, ಪು. ೧೯

೯೯. ಶಾಂತಿರಾಜಶಾಸ್ತ್ರಿ ಎ.(ಸಂ)., ಜೀನಸೇನಾಚಾರ್ಯ-ಗುಣಭದ್ರಾಚಾರ್ಯ ವಿರಚಿತ ಮಹಾಪುರಾಣ, ಸಂ. ೧, ೧೯೮೧, ಪು. ೩೬.

೧೦೦. ಶೆಟ್ಟಿ ಎಸ್.ಡಿ., ಜೈನ ಬಸದಿಗಳು, ೧೯೯೯, ಪು. ೩೬

೧೦೧. ಸುರೇಶ ಕರಿಬಸಪ್ಪ ಹಾನಗಲ್ಲ., ಪೂರ್ವೋಕ್ತ, ಪು. ೯೨

೧೦೨. ಅದೇ., ಪು. ೧೭೧

೧೦೩. ಯಲ್ಲಣ್ಣ ಕೆ., ಪೂರ್ವೋಕ್ತ, ಪು. ೯೬

೧೦೪. ಷಡಕ್ಷರಯ್ಯ ರು.ಮ. ಮತ್ತು ಜಯಮ್ಮ ಬಿ., ಪೂರ್ವೋಕ್ತ, ಪು. ೮೩

□□□

ಅಧ್ಯಾಯ ಏಳು

ಸಮಾರೋಪ

ಸಾವಿರಾರು ವರ್ಷಗಳಿಂದ ಬೆಳೆದು ಬಂದ ಸಂಸ್ಕೃತಿಗೆ ಅಂತ್ಯ ಎಂಬುದಿಲ್ಲ. ಇಂತಹ ಸಂದರ್ಭದಲ್ಲಿ ಪುರಾತತ್ವ ಕುರುಹುಗಳು, ಶಾಸನಗಳು ಇತರ ಕುರುಹುಗಳಿಗಿಂತಲೂ ಸಮಕಾಲೀನ ಸಾಂಸ್ಕೃತಿಕ ಇತಿಹಾಸದ ಮುಖಗಳನ್ನು ಅಧಿಕೃತವಾಗಿ, ಖಚಿತವಾಗಿ, ಪರಿಣಾಮಕಾರಿಯಾಗಿ ಚಿತ್ರಿಸುತ್ತವೆ. ಈ ಹಿನ್ನೆಲೆಯಲ್ಲಿ ಧಾರವಾಡ ಜಿಲ್ಲೆಯ ಪ್ರತಿಯೊಂದು ಗ್ರಾಮಗಳಿಗೆ ಕ್ಷೇತ್ರಕಾರ್ಯವನ್ನು ಕೈಗೊಂಡು ಪ್ರಕಟಿತ ಮತ್ತು ಅಪ್ರಕಟಿತ ಶಾಸನಗಳನ್ನು ಮತ್ತು ಸ್ಮಾರಕಗಳನ್ನು ಒಂದೆಡೆ ಸೆರೆಹಿಡಿದು ಇತಿಹಾಸವನ್ನು ವಸ್ತುನಿಷ್ಠವಾಗಿ ಪುನರ್‌ರಚಿಸುವ ಉದ್ದೇಶದೊಂದಿಗೆ ಈ ಸಂಶೋಧನಾ ಅಧ್ಯಯನವನ್ನು ಆರು ಅಧ್ಯಾಯಗಳಾಗಿ ವಿಭಾಗಿಸಿಕೊಂಡು ಅಧ್ಯಯನ ಮಾಡಲಾಗಿದೆ.

'ಧಾರವಾಡ ಜಿಲ್ಲೆಯ ಶಾಸನಗಳು ಮತ್ತು ದೇವಾಲಯಗಳು' ಶೀರ್ಷಿಕೆ ಅಡಿಯಲ್ಲಿ ಅಧ್ಯಾಯ ಒಂದರಲ್ಲಿ ಅಧ್ಯಯನದ ಉದ್ದೇಶ, ವ್ಯಾಪ್ತಿ, ವಿಧಾನ ಮತ್ತು ಸ್ವರೂಪ ಕುರಿತಿದೆ. ಈ ಅಧ್ಯಾಯದಲ್ಲಿ ಇಲ್ಲಿಯವರೆಗೆ ಧಾರವಾಡ ಜಿಲ್ಲೆಗೆ ಸಂಬಂಧಿಸಿದಂತಹ ಸಾಹಿತ್ಯಿಕ ಮತ್ತು ಪುರಾತತ್ವದ ವಿಷಯಗಳಿಗೆ ಸಂಬಂಧಿಸಿದಂತಹ ಸುಮಾರು ಇಪ್ಪತ್ತೊಂದು ಕೃತಿಗಳನ್ನು, ಹತ್ತು ಎಂ.ಫಿಲ್., ಹನ್ನೆರಡು ಪಿಎಚ್.ಡಿ., ಹಾಗೂ ಇಪ್ಪತ್ತು ಎಂ.ಎ. ಅಂತಿಮ ವರ್ಷದ ಸ್ನಾತಕೋತ್ತರ ಸಂಶೋಧನಾ ಸಂಪ್ರಬಂಧಗಳನ್ನು, ಸಂಶೋಧನಾ ಲೇಖನಗಳ ಪ್ರಮುಖ ಅಂಶಗಳನ್ನು ಒಂದೆಡೆ ಸೆರೆಹಿಡಿಯಲಾಗಿದೆ. ಇವುಗಳಲ್ಲಿರುವ ಶಾಸನಗಳು, ದೇವಾಲಯಗಳು ಮತ್ತು ಮೂರ್ತಿಶಿಲ್ಪಗಳಿಗೆ ಸಂಬಂಧಿಸಿದ ಪ್ರಮುಖ ಆಕರಗಳು ಇತಿಹಾಸ ಪುನರ್‌ರಚನೆಗೆ ಸಹಕಾರಿಯಾಗಿವೆ ಎಂಬುದನ್ನು ಸಾಬೀತು ಪಡಿಸಿವೆ.

ಎರಡನೆಯ ಅಧ್ಯಾಯ ಭೂ ಭೌಗೋಳಿಕ ಹಾಗೂ ಐತಿಹಾಸಿಕ ಹಿನ್ನೆಲೆ. ಶಾಸನಗಳನ್ನು ಹಿನ್ನೆಲೆಯನ್ನಾಧರಿಸಿದೆ. ಈ ಪ್ರದೇಶದ ರಾಜಕೀಯ, ಸಾಮಾಜಿಕ, ಆರ್ಥಿಕ ಹಾಗೂ ಧಾರ್ಮಿಕ ಸ್ಥಿತಿಗಳನ್ನು ಸೆರೆಹಿಡಿಯಲಾಗಿದೆ. ಪ್ರಸ್ತುತ ಈ ಅಧ್ಯಯನ ಪ್ರದೇಶದಲ್ಲಿ ಅನೇಕ ರಾಜಮನೆತನಗಳು ಹಾಗೂ ಮಹಾಮಂಡಳೇಶ್ವರರು ಆಳ್ವಿಕೆಯನ್ನು ಮಾಡಿದ್ದು, ಇವರು ತಮ್ಮದೇ ಆದ ಕೊಡುಗೆಯನ್ನು ನೀಡಿದ್ದಾರೆ. ಅವರಲ್ಲಿ ಬಾದಾಮಿ ಚಾಲುಕ್ಯರು, ರಾಷ್ಟ್ರಕೂಟರು, ಕಲ್ಯಾಣದ ಚಾಲುಕ್ಯರು, ಕಲಚೂರಿಗಳು, ಹೊಯ್ಸಳರು, ಯಾದವರು, ವಿಜಯನಗರ ಅರಸರು ಮಾಂಡಳಿಕ ಅರಸು ಮನೆತನಗಳು ಆಳ್ವಿಕೆಯನ್ನು ಮಾಡಿದ್ದಾರೆ. ಪ್ರಮುಖವಾಗಿ ಕೆಲವೊಮ್ಮೆ ರಾಜರುಗಳ ಆಳ್ವಿಕೆಯಲ್ಲಿ ತಮ್ಮ ಅಧೀನದಲ್ಲಿ ಸಾಮ್ರಾಜ್ಯವನ್ನು ನೋಡಿಕೊಳ್ಳಲು ಮಹಾಮಂಡಳೇಶ್ವರರನ್ನು ನೇಮಕ ಮಾಡಿಕೊಳ್ಳುತ್ತಿದ್ದರು. ಅಂತಹವರಲ್ಲಿ ಕಲ್ಯಾಣದ ಚಾಲುಕ್ಯರ ಮಹಾಮಂಡಳೇಶ್ವರರಾದ ಗೋವೆ ಕದಂಬರರು ಹೆಚ್ಚಿನ ಮಟ್ಟಿಗೆ ಕಾಣಿಸಿಕೊಳ್ಳುತ್ತಾರೆ. ಇವರ ಕಾಲಗಟ್ಟದಲ್ಲೇ ಈ ಪ್ರದೇಶದ ಹೆಚ್ಚಿನ ರಾಜಕೀಯ ಮಾನ್ಯತೆಸಿಕ್ಕಿದ್ದು, ಶಾಸನಗಳಿಂದ ತಿಳಿದು ಬರುತ್ತದೆ.

ಈ ಪ್ರದೇಶದಲ್ಲಿ ಆಳ್ವಿಕೆ ಮಾಡಿದ ಅನೇಕ ರಾಜಮನೆತನಗಳು, ಮಹಾಮಂಡಳೇಶ್ವರರು ತಮ್ಮ ರಾಜ್ಯಾಡಳಿತವನ್ನು ಅನೇಕ ವಿಭಾಗಗಳಾಗಿ ಮತ್ತು ಉಪವಿಭಾಗಗಳಾಗಿ ವಿಂಗಡಿಸಿಕೊಂಡಿದ್ದರು. ಅವುಗಳಲ್ಲಿ ಕೊಂಕಣ-೯೦೦, ಪಲಸಿಗೆ-೧೨೦೦೦ ಪ್ರಮುಖವಾದವುಗಳಾದರೆ, ಕುಂದೂರು-೫೦೦, ಮಾವಳೆ-೫೦೦, ಬೆಳ್ವಲ-೩೦೦ ಉಪವಿಭಾಗಗಳಾಗಿವೆ. ಇವುಗಳಲ್ಲದೇ ಮುಗುದ-೩೦, ತಮ್ಮಿಯೂರು-೧೨, ಉಣಕಲ್-೭೦, ಸಬ್ಬಿ-೭೦, ನವಲಗುಂದ-೪೦, ಪುಲ್ಲಂಬಿ-೭೦ ಹೀಗೆ ಒಟ್ಟು ೫೮ ಆಡಳಿತ ಪ್ರದೇಶಗಳನ್ನು ಗುರುತಿಸಲಾಗಿದೆ. ಹೀಗೆ ಅನೇಕ ವಿಭಾಗ ಮತ್ತು ಉಪವಿಭಾಗಗಳನ್ನಾಗಿ ಮಾಡಿಕೊಂಡಿದ್ದು, ಇವುಗಳನ್ನು ನೋಡಿಕೊಳ್ಳಲು ರಾಣಿಯರು, ಮಹಾಸಾಮಂತರು, ಗಾವುಂಡರು, ದಂಡ ನಾಯಕರು ಆಳ್ವಿಕೆ ನಡೆಸಿದರು. ಇವರು ತಮ್ಮ ಸಹಾಯಕ್ಕಾಗಿ ರಾಜ್ಯಾಧ್ಯಕ್ಷ, ವಿಷಯಾಧಿಕಾರಿ, ಸುಂಕದ ಅಧಿಕಾರಿ, ಮಹಾಪ್ರಧಾನ ಸಂಧಿವಿಗ್ರಹಿಗಳನ್ನು ನೇಮಿಸಿಕೊಳ್ಳುತ್ತಿದ್ದರು.

ಸಾಮಾಜಿಕ ವ್ಯವಸ್ಥೆಯಲ್ಲಿ ಬ್ರಾಹ್ಮಣರಿಗೆ ಹೆಚ್ಚಿನ ಸ್ಥಾನಮಾನವಿದ್ದಿತು. ಇವರು ವೇದ-ಗೋಷ್ಠಿಗಳಲ್ಲಿ ಪಾಲ್ಗೊಳ್ಳುತಿದ್ದು, ಪೌರೋಹಿತ್ಯದಲ್ಲಿ ಪ್ರಾವಿಣ್ಯತೆ ಪಡೆದಿದ್ದರು. ಇವರು ಬ್ರಹ್ಮಪುರಿ, ಅಗ್ರಹಾರಗಳಲ್ಲಿ ವಾಸಿಸುತ್ತಿದ್ದು, ೨೦ಶಾಸನಗಳಲ್ಲಿ ಅಗ್ರಹಾರ ಮತ್ತು ಬ್ರಹ್ಮಪುರಿಗಳಿದ್ದ ಉಲ್ಲೇಖಗಳು ದೊರೆತಿವೆ. ಸಮಾಜದಲ್ಲಿ ದೇವರ ಪ್ರತಿಷ್ಠಾಪನೆ ಹಾಗೂ ಅವುಗಳಿಗೆ ದಾನದತ್ತಿಗಳನ್ನು ನೀಡುತಿದ್ದರಲ್ಲದೇ ಕೆಲವು ಸಂದರ್ಭದಲ್ಲಿ ದಂಡನಾಯಕರಾಗಿ, ಊರೊಡೆಯರಾಗಿ ರಾಜ್ಯದ ಏಳಿಗೆಗಾಗಿ ಶ್ರಮಿಸುತಿದ್ದರು. ಕ್ಷತ್ರಿಯರು, ವೈಶ್ಯರು, ಶೂದ್ರರು ಇದ್ದು, ಇವರುಗಳು ತಮ್ಮ-ತಮ್ಮ ಕರ್ತವ್ಯಗಳನ್ನು ಮಾಡುತ್ತಿದ್ದರು.

ಸಮಾಜದಲ್ಲಿ ಸ್ತ್ರೀಯರಿಗೆ ಉನ್ನತಸ್ಥಾನವಿದ್ದು, ಇವರೂ ರಾಜರಕ್ಷಣೆಯಲ್ಲಿ, ದಂಡನಾಯಕರಾಗಿ ಕೆಲವೊಮ್ಮೆ ಸ್ವತಂತ್ರವಾಗಿ ರಾಜ್ಯಭಾರಮಾಡಿದ್ದುದು ಶಾಸನಗಳಿಂದ ತಿಳಿದು ಬರುತ್ತದೆ. ಉದಾ: ವಿಕ್ರಮಾದಿತ್ಯನ ಹೆಂಡತಿ ಮಲಯವತಿ, ಆತನ ಮಗಳು ಹಾಗೂ ಇಮ್ಮಡಿ ಜಯಕೇಶಿಯ ಮಡದಿಯಾದ ಮೈಳಲದೇವಿಯನ್ನು ಗುರುತಿಸಬಹುದಾಗಿದೆ. ದೇವಾಲಯಗಳಲ್ಲಿ ವಂಶಪಾರಂಪರ್ಯವಾಗಿ ನೃತ್ಯಮಾಡುತಿದ್ದ ಸ್ತ್ರೀಯರು ಉದಾ: ಹುಬ್ಬಳ್ಳಿ ತಾಲೂಕಿನ ಕೋಳಿವಾಡದ ವೈಷ್ಣವ ದೇವಾಲಯದ ಕಂಬದಲ್ಲಿ ದೊರೆತಂತಹ ಶಾಸನದಲ್ಲಿ ತಿರುಮಲ ಬೋವನ ಮಗಳಾದ ಸೂರಿಯ ಮಾಣಿಕೆಯನ್ನು ದಾನಬಿಟ್ಟ ವಿಷಯ ವಿಶೇಷವಾಗಿದೆ. ಇನ್ನು ವೇಶ್ಯಯರು ಇದ್ದು, ಅವರಿಗಾಗಿ ಕೇರಿಗಳಿದ್ದವು. ಅಂದಿನ ಸಮಾಜದಲ್ಲಿ ಆತ್ಮಬಲಿದಾನಗಳೂ ಇದ್ದಿರುವುದನ್ನು ಕಾಣುತ್ತೇವೆ.

ಸಮಾಜದಲ್ಲಿ ಕೃಷಿಯೇ ಪ್ರಮುಖ ಉದ್ಯೋಗವಾಗಿದ್ದು, ಹೆಚ್ಚಿನ ಮಟ್ಟಿಗೆ ಒಣಭೂಮಿಯನ್ನು ಹೊಂದಿದೆ. ಈ ಒಣಭೂಮಿಯಲ್ಲಿ ಕರಿಭೂಮಿ ಮತ್ತು ಹರಳುಮಿಶ್ರಿತ ಭೂಮಿ ಕಂಡು ಬರುತ್ತದೆ. ಮುಖ್ಯವಾಗಿ ಎಲೆ, ಅಡಿಕೆ, ಜೋಳ, ಮೆಣಸಿನಕಾಯಿ, ಭತ್ತ, ಗೋದಿ, ಕಡಲೆ ಇತರೆ ಬೆಳೆಗಳನ್ನು ಬೆಳೆದಿದ್ದರು. ಅವರು ಉಪಯೋಗಿಸುವ ಭೂಮಿಯನ್ನು ಗೇಣು, ಮಾರು, ಕಯ್ಯ, ಕಂಬಗಳಿಂದ ಅಳೆಯುತ್ತಿದ್ದರು. ಅಂದಿನ ವ್ಯಾಪಾರಿ ಪದ್ಧತಿಯಲ್ಲಿ ಮೂವತ್ತಲ್ಕೂರು, ಅರುವತಕ್ಕಲು, ತೆಲ್ಲಿಗರೊಕ್ಕಲು, ಕಂಬಾದರೊಕ್ಕಲು, ಉಗುರಮುನ್ನೂರು ಹೀಗೆ ಸುಮಾರು ೫೮-ಉತ್ಪಾದಕ/ವರ್ತಕರುಗಳಿದ್ದ ಬಗ್ಗೆ

ಶಾಸನದಲ್ಲಿ ಮಾಹಿತಿ ದೊರೆತಿದೆ. ಜೊತೆಗೆ ವಿವಿಧ ರೀತಿಯ ನಾಣ್ಯಗಳ ಬಗ್ಗೆ ಶಾಸನಗಳಲ್ಲಿ ಉಲ್ಲೇಖಗಳಿದ್ದು, ಅವುಗಳಲ್ಲಿ ಗದ್ಯಾಣ, ಪಣ, ಬಹಳ ಪ್ರಮುಖವಾದವುಗಳಾಗಿವೆ. ಈ ಎಲ್ಲಾ ವರ್ತಕ ಸಂಘದವರು ಅನೇಕ ದೇವಾಲಯಗಳ ನಿರ್ಮಾಣಕ್ಕೆ, ಜೀರ್ಣೋದ್ದಾರಕ್ಕೆ, ಇತರೆ ಧಾರ್ಮಿಕ ಕಾರ್ಯಗಳಿಗೆ ಅನೇಕ ದಾನದತ್ತಿಗಳನ್ನು ನೀಡಿದ್ದ ವಿಷಯ ಶಾಸನಗಳಿಂದ ತಿಳಿದುಬರುತ್ತದೆ.

ಈ ಪ್ರದೇಶದಲ್ಲಿ ದೊರೆತಂತಹ ಶಾಸನಗಳನ್ನು ಗಮನಿಸಿದಾಗ ಸುಮಾರು ೧೧೧–ಸ್ಥಳನಾಮಗಳು, ೪೦–ಪಂಡಿತ/ಜೀಯ/ಆಚಾರ್ಯ/ದೇವರ ಉಲ್ಲೇಖಗಳು, ೧೬–ಕೆರೆ ಕಟ್ಟೆಗಳ ಉಲ್ಲೇಖ, ೧೭–ಮಠಗಳು, ೨–ಕೋಟೆಗಳು, ೧೦–ಲಿಪಿಕಾರರ ಉಲ್ಲೇಖಗಳನ್ನು ಈ ಅಧ್ಯಯನದಲ್ಲಿ ದೊರೆತ ಶಾಸನಗಳಿಂದ ತಿಳಿದು ಬರುತ್ತದೆ. ಹಾಗೂ ಅದರ ವಿವರಗಳನ್ನು ಶಾಸನಗಳಲ್ಲಿ ಉಲ್ಲೇಖಿತವಾಗಿರುವ ವಿಷಯಗಳನ್ನು ಗ್ರಾಮ, ತಾಲೂಕು, ಶಾಸನ ದೊರೆತಂತಹ ಸ್ಥಳ, ರಾಜವಂಶ, ಅರಸ, ಕಾಲಮಾನ, ಶಾಸನದಲ್ಲಿ ಉಲ್ಲೇಖಿತವಾಗಿರುವಂತ ಹೆಸರು ಮತ್ತು ಗ್ರಾಮಗಳ ಹೆಸರುಗಳನ್ನು ಅಕಾರಾದಿಯಾಗಿ ಅಧ್ಯಾಯದ ಕೊನೆಯಲ್ಲಿ ನೀಡಲಾಗಿದೆ.

ಪ್ರಸ್ತುತ ಈ ಜಿಲ್ಲೆಯಲ್ಲಿ ೫ ತಾಲೂಕುಗಳಿದ್ದು, ೩೭೮ ಅಧಿಕ ಗ್ರಾಮಗಳು ಕಂಡು ಬರುತ್ತವೆ. ಈ ಎಲ್ಲಾ ಪ್ರದೇಶಗಳು ಭಾರತೀಯ ಕಲೆ, ಸಂಸ್ಕೃತಿಗೆ ಹಾಗೂ ಚರಿತ್ರೆಯನ್ನು ಪುನರ್‌ರಚಿಸುವಲ್ಲಿ ತಮ್ಮದೇ ಕೊಡುಗೆಗಳನ್ನು ನೀಡಿದವುಗಳಾಗಿವೆ. ಪ್ರಸ್ತುತ ಈ ಜಿಲ್ಲೆಯಲ್ಲಿ ೩೮೭ಕ್ಕಿಂತ ಅಧಿಕಶಾಸನಗಳು ದೊರೆತಿವೆ. ಅವುಗಳಲ್ಲಿನ ವೈವಿದ್ಯತೆಯನ್ನು ಕುರಿತು ಮೂರನೇ ಅಧ್ಯಾಯದಲ್ಲಿ ಚರ್ಚಿಸಲಾಗಿದೆ. ಇವುಗಳಲ್ಲಿ ಅತೀ ಹೆಚ್ಚಿನ ಶಾಸನಗಳು ದೇವಾಲಯಗಳಿಗೆ ನೀಡಿರುವ ದಾನಶಾಸನಗಳು ಇರುವಿಕೆಯನ್ನು ನಾವು ಕಾಣುತ್ತೇವೆ. ಇವು ದೇವಾಲಯಗಳ ಸ್ಥಾಪನೆಗೆ, ಜೀರ್ಣೋದ್ದಾರಕ್ಕೆ, ಧೂಪ, ದೀಪ, ನೈವೇದ್ಯಕ್ಕೆ ಕೊಟ್ಟಂತಹ ದಾನಗಳಾಗಿರಬಹುದು. ಈ ದಾನಶಾಸನದಲ್ಲಿ ನೂರಾಒಂದು ಶೈವ ದಾನಶಾಸನಗಳು ದೊರೆತಿದ್ದು ಇವೇ ಅಧಿಕವಾದವುಗಳಾಗಿವೆ. ನಂತರದ ಸ್ಥಾನ ಜೈನ ಬಸದಿಗಳಿದ್ದು ಸುಮಾರು ಇಪ್ಪತ್ತು ದಾನಶಾಸನಗಳಿವೆ. ಹಾಗೂ ಏಳು ವೈಷ್ಣವ ದಾನಶಾಸನಗಳು ಕಂಡು ಬರುತ್ತವೆ. ಸುಮಾರು ಹತ್ತು ಇತರೆ ಸಾಮಾಜಿಕ ಕಾರ್ಯಗಳಿಗಾಗಿ ನೀಡಿದ ದಾನಶಾಸನಗಳು ದೊರೆತಿವೆ. ಇವುಗಳಲ್ಲಿ ಕೆರೆಗಳಿಗೆ, ಪಂಡಿತರಿಗೆ, ಯೋಧರಿಗೆ, ಇತರೆ ವ್ಯಕ್ತಿಗಳಿಗೆ ನೀಡಿದಂತಹ ಶಾಸನಗಳಾಗಿವೆ.

ದಾನಶಾಸನಗಳ ನಂತರ ಈ ಪ್ರದೇಶದಲ್ಲಿ ಅನೇಕ ಸ್ಮಾರಕ ಶಾಸನಗಳು ಕಂಡು ಬರುತ್ತವೆ. ಅವುಗಳಲ್ಲಿ ೪೨ ವೀರಗಲ್ಲು ಶಾಸನಗಳು, ೨ ಮಹಾಸತಿ ಶಾಸನಗಳು, ೬ ನಿಷಿಧಿಗಲ್ಲು ಶಾಸನಗಳು, ೧೩ ಗೋಸಾಸ ಶಾಸನಗಳನ್ನು ಗುರುತಿಸಲಾಗಿದೆ. ಅಲ್ಲದೇ ಕೇವಲ ವ್ಯಕ್ತಿಗಳ ಹೆಸರನ್ನು ಸೂಚಿಸುವ ಸುಮಾರು ೫೯ಶಾಸನಗಳಿವೆ. ಹಾಗೆಯೇ ಸಾಮಾಜಿಕ ಕಾರ್ಯಗಳಿಗಾಗಿ ನೀಡಿದಂತಹ ಶಾಸನಗಳು ಸುಮಾರು ಹತ್ತು ಸಿಗುತ್ತವೆ. ಜೊತೆಗೆ ಇವುಗಳಲ್ಲಿ ೧೧೬ಶಾಸನಗಳು ಕೇಲವ ವ್ಯಕ್ತಿಯ ಹೆಸರುಗಳಿದ್ದು, ಅವುಗಳು ತೃಟಿತವಾಗಿವೆ.

ಅಧ್ಯಾಯ ನಾಲ್ಕು ಶಾಸನಶಿಲ್ಪಗಳ ವೈವಿಧ್ಯತೆ ಪ್ರಸ್ತುತ ಈ ಜಿಲ್ಲೆಯಲ್ಲಿ ದೊರೆತ ಶಾಸನಗಳ ಮೇಲಿನ ಶಿಲ್ಪಗಳನ್ನು ಅಧ್ಯಯನ ಮಾಡಲಾಗಿದೆ. ಇವುಗಳನ್ನು ದಾನಶಾಸನಶಿಲ್ಪಗಳೆಂದು, ಅವುಗಳಲ್ಲಿ

ಶೈವದಾನ ಶಾಸನಶಿಲ್ಪ, ವೈಷ್ಣವ ದಾನಶಾಸನಶಿಲ್ಪ, ಮತ್ತು ಜೈನದಾನ ಶಾಸನಶಿಲ್ಪ ಎಂದು ವರ್ಗೀಕರಿಸಿ ಅಧ್ಯಯನವನ್ನು ಮಾಡಲಾಗಿದೆ. ಇವುಗಳಲ್ಲಿ ಶೈವದಾನ ಶಾಸನಶಿಲ್ಪಗಳೇ ಹೆಚ್ಚಿನ ಮಟ್ಟಿಗೆ ದೊರೆತಿವೆ. ಸಾಮಾನ್ಯವಾಗಿ ಈ ಶಾಸನಶಿಲ್ಪಗಳಲ್ಲಿ ಶಿವಲಿಂಗ, ಯತಿ, ಮಂಟಪ, ಶಿಲ್ಪಗಳಿದ್ದು, ಅವುಗಳಲ್ಲಿ ಎಡ ಭಾಗದಲ್ಲಿ ಸೂರ್ಯ, ಬಲಭಾಗದಲ್ಲಿ ಚಂದ್ರನನ್ನು ಕೆತ್ತಿರುವುದು ಸಾಮಾನ್ಯ ಲಕ್ಷಣಗಳಾಗಿವೆ. ಆದರೆ ಚಿಕ್ಕನೆರ್ತಿಯಲ್ಲಿ ದೊರೆತ ಒಂದು ಶಾಸನಶಿಲ್ಪವು ಎಡ-ಬಲಗಳಲ್ಲಿ ಹಸುಗಳು ತಮ್ಮ ಕರುವಿಗೆ ಹಾಲನ್ನು ಕೊಡುತ್ತಿರುವ ದೃಶ್ಯವನ್ನು ಹಾಗೂ ಮೇಲ್ಭಾಗದಲ್ಲಿ ಸೂರ್ಯ-ಚಂದ್ರರನ್ನು ಕಾಣುತ್ತೇವೆ. ಆದರೆ ಮಧ್ಯದಲ್ಲಿ ಕುಂಡಲ ಅದಕ್ಕೆ ಹಾವು ಸುತ್ತಿಕೊಂಡಂತಿರುವುದು ವಿಶೇಷತೆಯಾಗಿದೆ. ಕುಂದಗೋಳದಲ್ಲಿನ ಶಿಲ್ಪದಲ್ಲಿ ಮಧ್ಯದಲ್ಲಿ ಶಿವಲಿಂಗದ ಪ್ರತಿಯೊಂದು ಭಾಗಗಳು ಸ್ಪಷ್ಟವಾಗಿ ಗೋಚರಿಸುವುದಲ್ಲದೇ, ದೇವಾಲಯದ ತಲಗಳ ವಿನ್ಯಾಸಗಳು ಕಂಡುಬರುತ್ತವೆ.

ಹಾಗೆಯೇ ವೈಷ್ಣವ ದಾನಶಾಸನ ಶಿಲ್ಪಗಳು ಕೇವಲ ನಾಲ್ಕು ದೊರೆತಿವೆ. ಅವುಗಳಲ್ಲಿ ಕುಂದಗೋಳ ತಾಲೂಕಿನ ತೀರ್ಥ ಗ್ರಾಮದಲ್ಲಿ ದೊರೆತಂತಹ ಶಾಸನಶಿಲ್ಪ ಬಹಳ ಅಪರೂಪವಾದುದಾಗಿದೆ. ಮೊದಲನೆಯ ಹಂತದಲ್ಲಿ ಶಂಖ, ಚಕ್ರವನ್ನು ಮಧ್ಯಭಾಗದಲ್ಲಿ ಪದ್ಮವನ್ನು, ಮೇಲ್ಭಾಗದಲ್ಲಿ ಸೂರ್ಯ-ಚಂದ್ರರರನ್ನು ಕಾಣುತ್ತೇವೆ. ಅದೇ ರೀತಿ ಶಾಸನೋಕ್ತ ವಾಮನಮುದ್ರೆಕಲ್ಲು ಕೇವಲ ಹುಬ್ಬಳ್ಳಿ ತಾಲೂಕಿನ ಶಿರಗುಪ್ಪಿಯಲ್ಲಿ ಮಾತ್ರ ದೊರೆತಿದೆ.

ಜೈನ ಶಾಸನೋಕ್ತ ಶಿಲ್ಪಗಳು ಒಟ್ಟು ಈ ವರೆಗೆ ೨೦ ದೊರಕಿವೆ. ಆದರೆ ಇನ್ನುಳಿದ ಶಾಸನಗಳಲ್ಲಿ ಶಿಲ್ಪಗಳು ಕಂಡು ಬರುವುದಿಲ್ಲ. ಮುಖ್ಯವಾಗಿ ಶಿರೂರಿನ ಸುಪಾರ್ಶ್ವನಾಥನ ಹಿಂಭಾಗದಲ್ಲಿ ಐದು ಹೆಡೆಯ ಸರ್ಪವಿದ್ದು, ಯಕ್ಷ-ಯಕ್ಷಿಣಿಯರಿದ್ದು, ಅಭರಣಗಳಿಂದ ಭೂಷಿತರಾಗಿದ್ದಾರೆ. ಆದರೆ ಅಮ್ಮಿನಭಾವಿಯಲ್ಲಿನ ಶಾಸನಶಿಲ್ಪದಲ್ಲಿ ನೇಮಿನಾಥನು ಪದ್ಮಾಸನದಲ್ಲಿ ಕುಳಿತಿದ್ದು, ಹಿಂಭಾಗದಲ್ಲಿ ಪ್ರಭಾಮಂಡಲ, ಪ್ರವಚನವನ್ನು ಕೇಳುತ್ತಿರುವ ಶಿಷ್ಯರಿದ್ದಾರೆ. ಮುತ್ತಗಿಯಲ್ಲಿನ ನೇಮಿನಾಥನ ಮೇಲೆ ಮುಕ್ಕೊಡೆ. ಅಕ್ಕ-ಪಕ್ಕ ಹೂಬಳ್ಳಿಗಳು ಸಿಂಹಪೀಠವಿದೆ. ಗುಂಗುರು ಕೂದಲು, ನಿರಾಭರಣನಾಗಿದ್ದು, ಕಾರ್ಯೋತ್ಸರ್ಗ ಭಂಗಿಯಲ್ಲಿದ್ದಾನೆ. ಹೆಚ್ಚಿನ ಮಟ್ಟಿಗೆ ಈ ಜೈನ ಶಾಸನಶಿಲ್ಪಗಳ ಪಾದಪೀಠದಲ್ಲೇ ಶಾಸನಗಳಿದ್ದುದು ಕಂಡು ಬರುತ್ತವೆ.

